ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು

(ಸಾಮಾಜೋ-ಸಾಂಸ್ಕೃತಿಕ ಅಧ್ಯಯನ)

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ವೀರೇಶಿ, ಎಂ.ಎ., ಬಿಎಡ್

ಮುಖ್ಯ ಇಂಜಿನಿಯರ್‌ರವರ ಕಛೇರಿ, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ

ಆನಂದರಾವ್ ವೃತ್ತ, ಬೆಂಗಳೂರು-೦೯

ಮಾರ್ಗದರ್ಶಕರು:

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ವಿಶೇಷಾಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

ಬೆಂಗಳೂರು

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩ ೨೭೬

ಹೊಸಪೇಟೆ ತಾ. ಬಳ್ಳಾರಿ ಜಿ.

ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು

(ಸಮಾಜೋ-ಸಾಂಸ್ಕೃತಿಕ ಅಧ್ಯಯನ)

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕರು
ವೀರೇಶಿ, ಎಂ.ಎ., ಬಿಎಡ್
ಮುಖ್ಯ ಇಂಜಿನಿಯರ್‌ರವರ ಕಛೇರಿ, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ
ಆನಂದರಾವ್ ವೃತ್ತ, ಬೆಂಗಳೂರು-೦೯

ಮಾರ್ಗದರ್ಶಕರು:
ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ವಿಶೇಷಾಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ - ೫೮೩ ೨೭೬
ಹೊಸಪೇಟೆ ತಾ. ಬಳ್ಳಾರಿ ಜಿ.

ಪ್ರಮಾಣ ಪತ್ರ

ಶ್ರೀ ವೀರೇಶಿ ಅವರು ಸಾದರಪಡಿಸಿದ **'ಬಳ್ಳಾರಿ ತಾಲೂಕಿನ ಸ್ಥಳನಾಮಗಳು'** ಸಮಾಜೋ–ಸಾಂಸ್ಕೃತಿಕ ಅಧ್ಯಯನ ವಿಷಯ ಕುರಿತು ಸಿದ್ಧಪಡಿಸಿದ ಮಹಾಪ್ರಬಂಧ ಮೂಲ ಸಂಶೋಧನಾ ಕೃತಿಯಾಗಿದೆ. ಶ್ರೀ ವೀರೇಶಿ ಅವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ಸಂಶೋಧನೆ ಕೈಗೊಂಡಿದ್ದಾರೆ. ಈ ಪ್ರಬಂಧವು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಪ್ರಕಟಗೊಂಡಿಲ್ಲವೆಂದು ಹೇಳುತ್ತ ಈ ಪ್ರಮಾಣಪತ್ರ ನೀಡಲಾಗಿದೆ.

ದಿನಾಂಕ: ೫.೩.೨೦೧೦

ಸ್ಥಳ: **ಬೆಂಗಳೂರು**

ಮಾರ್ಗದರ್ಶಕರು

(ಮಲ್ಲೇಪುರಂ ಜಿ. ವೆಂಕಟೇಶ)

ದೃಢೀಕರಣ ಪತ್ರ

'ಬಳ್ಳಾರಿ ತಾಲೂಕಿನ ಸ್ಥಳನಾಮಗಳು' (ಸಮಾಜೋ-ಸಾಂಸ್ಕೃತಿಕ ಅಧ್ಯಯನ) ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸಲು ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ವಿಶ್ವವಿದ್ಯಾಲಯದ ಪದವಿ ಪ್ರಕಟಣೆಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ: ೫.೩.೨೦೧೦

ಸ್ಥಳ: **ಬೆಂಗಳೂರು**

ಸಂಶೋಧಕರು

(ವೀರೇಶಿ)

ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು:
(ಸಮಾಜೋ–ಸಾಂಸ್ಕೃತಿಕ ಅಧ್ಯಯನ)

ಪರಿವಿಡಿ

ಅಧ್ಯಾಯ ೧. ಪೂರ್ವಪ್ರಸ್ತಾಪ

ಅಧ್ಯಾಯ ೨. ಸ್ಥಳನಾಮ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ ೩. ಸ್ಥಳನಾಮ ಅಧ್ಯಯನದ ಗ್ರಂಥಸಮೀಕ್ಷೆ

ಅಧ್ಯಾಯ ೪. ಸ್ಥಳನಾಮಗಳ ಸ್ವರೂಪ ಮತ್ತು ವರ್ಗೀಕರಣ

ಅಧ್ಯಾಯ ೫. ಬಳ್ಳಾರಿ ತಾಲ್ಲೂಕಿನ ಸ್ಥಳನಾಮ ಅಧ್ಯಯನ

೫.೧. ಭಾಷಿಕ ನೆಲೆ

೫.೨ ಸಾಂಸ್ಕೃತಿಕ ನೆಲೆ

೫.೩ ಪ್ರಾಕೃತಿಕ ನೆಲೆ

೫.೪ ಸಾಮಾಜಿಕ ನೆಲೆ

೫.೫ ಜಾನಪದೀಯ ನೆಲೆ

ಅಧ್ಯಾಯ ೬. ಸಮಾರೋಪ

೭. ಅನುಬಂಧಗಳು:

ಪರಾಮರ್ಶನ ಗ್ರಂಥಗಳು

ಕನ್ನಡ ಮತ್ತು ಇಂಗ್ಲಿಷ್

ಅಧ್ಯಾಯ - ೧

ಪೂರ್ವಪ್ರಸ್ತಾಪ

ಅಧ್ಯಾಯ – ೧
ಪೂರ್ವಪ್ರಸ್ತಾಪ

೧.೧. ಪೀಠಿಕೆ:

ಸಾಹಿತ್ಯಕ್ಕೆ ಸಂಬಂಧವಾದ ಎಲ್ಲವೂ ಭಾಷೆಯ ಮೂಲಕವೇ ನಡೆಯುವಂತಹದು. ಲೋಕದ ಜೀವಿಗಳಿಗೆಲ್ಲ ಭಾವ, ರಾಗ, ದ್ವೇಷ, ಭಯ ಮೈಥುನಾದಿಗಳು ಸಾಮಾನ್ಯವಾದವುಗಳು ಹಾಗೂ ನಿಸರ್ಗ ಸಹಜ ಗುಣಗಳು. ಆದರೆ ಮಾನವನು ಈ ಜೀವಿಗಳಲ್ಲೆಲ್ಲಾ ಭಿನ್ನವಾಗಿ ನಿಲ್ಲುತ್ತಾನೆ. ಅವನನ್ನು ಇತರೆ ಪ್ರಾಣಿಗಳಿಂದ ಭಿನ್ನವಾಗಿಸುವುದು ಭಾಷೆಯೊಂದೇ. ತನ್ನ ಮನದ ಇಂಗಿತ ಅಥವಾ ಭಾವನೆಗಳನ್ನು ಅಭಿವ್ಯಕ್ತಪಡಿಸುವ ಸಾಮರ್ಥ್ಯ ಅವನಿಗಿದೆ. ಭಾಷೆಯು ಅವನಿಗೆ ಸಮರ್ಥ ಮಾಧ್ಯಮವಾಗಿದೆ. ಇಂಥ ಭಾಷೆಯು ಅವನ ಬದುಕಿನುದ್ದಕ್ಕೂ ಪ್ರಮುಖವಾದುದು. ಅವನ ಈ ಭಾಷೆಯನ್ನು ಕುರಿತಾದಂಥ ವ್ಯವಸ್ಥಿತ ಅಧ್ಯಯನವೇ ಭಾಷಾವಿಜ್ಞಾನ.

ಬಹುಕಾಲದವರೆಗೆ ಭಾಷೆಯ ಬಗೆಗಿನ ಅಧ್ಯಯನವನ್ನು ವಿಜ್ಞಾನ ಎಂದು ಒಪ್ಪಿಕೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ ಭಾಷೆಯ ವಿವಿಧ ಹಂತಗಳಲ್ಲಿ ಅಧ್ಯಯನವು ವ್ಯವಸ್ಥಿತವಾಗಿತ್ತು, ಹೆಚ್ಚು ನಿಖರವಾಗುತ್ತ ನಡೆದಂತೆ ಪ್ರಪಂಚದಾದ್ಯಂತ ಎಲ್ಲೆಡೆ ಭಾಷೆಯ ಬಗೆಗಿನ ಅಧ್ಯಯನಗಳು ಬಹುಶೃತರಿಂದ ಚುರುಕುಗೊಳ್ಳುತ್ತ ನಡೆದಂತೆ ಅದರ ಕುರಿತಾದ ಅಧ್ಯಯನವನ್ನು 'ಭಾಷಾವಿಜ್ಞಾನ' ಎಂದು ಒಪ್ಪಿಕೊಳ್ಳುವಂತಾಯಿತು.

ಸ್ಥಳನಾಮಗಳ ಅಧ್ಯಯನ ಎಂದರೆ ಒಂದರ್ಥದಲ್ಲಿ ಭಾಷೆಯ ಅಧ್ಯಯನವೇ ಆಗಿದೆ. ಸ್ಥಳನಾಮಗಳ ಶೋಧನೆಗೆ ತೊಡಗುವ ಸಂಶೋಧಕನು ತನ್ನ ಜಾಡಿನಲ್ಲಿ ಮುನ್ನಡೆದಂತೆಲ್ಲ ಭಾಷೆಯ ವಿವಿಧ ಮಗ್ಗುಲುಗಳನ್ನು ಸ್ಪರ್ಶಿಸುವ, ಪದರು ಪದರುಗಳನ್ನು ತೆರೆದುನೋಡುವ ಸೂಕ್ಷ್ಮ ವೀಕ್ಷಕನಾಗಿರಬೇಕಾಗುತ್ತದೆ. ಹೀಗಾಗಿ ಸ್ಥಳನಾಮಶಾಸ್ತ್ರ

---

1. Place names supply in full measure linguistic information of a kind that is absent in Ardhaeology and usually ignored or blurred in the historical record. They also supply fairly precise conclusions on the intensity of settlements, linguistic boundaries, origins and relationships, with occasional comments on social and economic conditions.

-F.T. Waim Wright

Methodology in place name studies - Dr. K. Nachimuttu (p-84) cf. perspectives in place names studies - 1987.

(Toponymy) ಮತ್ತು ಭಾಷಾವಿಜ್ಞಾನ (Linguistics) ಒಂದಕ್ಕೊಂದು ಅವಿನಾಭಾವ ಸಂಬಂಧ ಪಡೆದ ವಿಷಯಗಳಾಗಿವೆ.

ಭಾಷಾವಿಜ್ಞಾನದ ದೃಷ್ಟಿಯಿಂದ ಸ್ಥಳನಾಮ ಸಂಶೋಧನೆಗೆ ಎತ್ತರದ ಸ್ಥಾನವಿದೆ.[೨] ಭಾಷಾವಿಜ್ಞಾನವನ್ನೆಂತೋ ಅಂತೆಯೇ ಸ್ಥಳನಾಮಗಳ ಅಧ್ಯಯನದ ವಿಷಯದಲ್ಲಿಯೂ ಅದನ್ನು ಒಂದು ಶಾಸ್ತ್ರ ಎಂದು ಪರಿಗಣಿಸುವಂತಹ ದಿನಗಳು ಹಿಂದೆ ಇರಲಿಲ್ಲ ಎಂಬುದು ವಾಸ್ತವ.

ಸ್ಥಳನಾಮಗಳು ಒಂದು ಅಧ್ಯಯನದ ವಿಷಯವಾಗಲು ಸಾಧ್ಯವೇ ಇಲ್ಲ. ಸ್ಥಳನಾಮಗಳಲ್ಲಿ ಹಾಗೆ ಅಧ್ಯಯನ ಮಾಡಬೇಕಾದುದು, ಅಭ್ಯಾಸಿಸಬೇಕಾದುದು ಏನಿರಲಿಕ್ಕೆ ಸಾಧ್ಯವಿದೆ? ಅವುಗಳೆಲ್ಲ ನಾವು ನೀಡಿದ ಹೆಸರುಗಳು ತಾನೆ? ಎಂಬ ಅಸಡ್ಡೆ ಸ್ಥಳನಾಮಗಳ ಬಗ್ಗೆ ನಮಗಿರಬಹುದಾದ ಅಜ್ಞಾನವನ್ನು ತೋರುವುದಾಗಿದೆ.

ಸ್ಥಳನಾಮಗಳ ಅಧ್ಯಯನವು ಕಾಲ ಗತಿಸಿದಂತೆ ಹಲವು ಪ್ರಭೃತಿಗಳ ಅವಿರತ ಆಲೋಚನೆ, ಚಿಂತನ-ಮಂಥನ, ಸಂಶೋಧನೆಗಳ ಫಲವಾಗಿ 'ಸ್ಥಳನಾಮಶಾಸ್ತ್ರ' ಎಂಬ ಒಪ್ಪಿತಕ್ಕೆ ಒಳಗಾಯಿತು. ಸ್ಥಳನಾಮಗಳು ಯಾವುದೇ ಒಂದು ಭಾಷಿಕ ಅಧ್ಯಯನದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಆಕ್ರಮಿಸಿಕೊಂಡಿವೆ ಎನ್ನುವುದರಲ್ಲಿ ಸಂಶಯವಿಲ್ಲ. ಆದ್ದರಿಂದಲೇ ಅವುಗಳನ್ನು 'Fossil representation of an immemorial past' ಎಂದು ಕರೆಯಲು ಸಾಧ್ಯವಾಗಿರುವುದು.

ಸ್ಥಳನಾಮಗಳು ಮಾನವನ ಕಲ್ಪನಾಶಕ್ತಿಗೆ ಅವಕಾಶವನ್ನೂ, ಭೋಧನೆಯನ್ನೂ ಒದಗಿಸಿ ತಮ್ಮ ಸುತ್ತ ಕಟ್ಟುಕಥೆಗಳ ಹುತ್ತಗಳೇ ಬೆಳೆಯುವಂತೆ ಮಾಡಿವೆ. ಯಾವುದೇ ಸ್ಥಳದ ಹೆಸರನ್ನು ಆಲಿಸಿದೊಡನೆ ಕಲ್ಪನೆ ಗರಿಗೆದರಿ ಅದರ ಬಗ್ಗೆ ನಮನಮಗೆ ತೋಚಿದಂತೆ ಅದು ಸರಿ ಇರಬಹುದು ಇಲ್ಲವೆ ತಪ್ಪಾಗಿರಬಹುದು, ವಿವರಿಸಲು ಅವಸರಿಸುವುದುಂಟು. ಇಂಥ ಧೋರಣೆ ನಿವಾರಣೆಯಾಗಬೇಕಾದರೆ ಆ ಕ್ಷೇತ್ರದಲ್ಲಿ ಕಾರ್ಯವೆಸಗಿದವರ ಗಣನೀಯ ಸಾಧನಗಳನ್ನು, ಸಂಶೋಧಕರ ಕ್ರಮವಾದ ಅಧ್ಯಯನಶೀಲ ಕೃತಿ ಆಕರಗಳನ್ನು ಅವಲೋಕಿಸುವಂತಾಗಬೇಕೆಂಬುದು ಎಲ್ಲರೂ ನಿರೀಕ್ಷಿಸಬೇಕಾದ ಸಂಗತಿಯಾಗಿದೆ.

---

2. Methodology in place name studies - Dr. K. Nachimuttu cf. perspectives in place names studies (p-49)

ಸ್ಥಳನಾಮಗಳು ಎಂದರೆ ಅಧ್ಯಯನದ ಉಪೇಕ್ಷೆಗೊಳಗಾಗಿ ಅಳಿಗಾಲದ ಅಂಚಿನಲ್ಲಿರುವ ಹಲವು ಶಾಸ್ತ್ರಗಳ ಜೀವಚೇತನದ ಪುನಃ ಸೃಷ್ಟಿಯ ಪೂರ್ಣಕುಂಭಗಳೆಂಬುದು ನನ್ನ ಅಧ್ಯಾಯನದ ಅಭಿಪ್ರಾಯ. ಅವುಗಳ ಅಧ್ಯಯನವೆಂದರೆ ಮಾನವ ಜೀವಿಯ ಸರ್ವಾಂಗೀಣ ಹಾಗೂ ಸಮಸ್ತ ಅಧ್ಯಯನವೆಂದೇ ಅರ್ಥೈಸದೆ ವಿಧಿಯಿಲ್ಲ. If properly studied place names can yield a rich dividend of information for the understanding of all the facts of human culture and civilization from ancient time.[2]

ಸ್ಥಳನಾಮಶಾಸ್ತ್ರಕ್ಕೆ ಆಂಗ್ಲ ಭಾಷೆಯಲ್ಲಿ Toponomy ಎಂಬ ಅಭಿದಾನವಿದೆ. ಇದು ಗ್ರೀಕ್ ಮೂಲದಲ್ಲಿ TOPOS + NOMOS ಎಂಬ ಎರಡು ಪದಗಳಿಂದ ಮೂಡಿಬಂದುದಾಗಿದೆ. TOPOS ಎಂದರೆ ಸ್ಥಳ PLACE ಎಂಬ ಅರ್ಥವನ್ನೂ NOMOS ಎಂದರೆ ಕುರಿತಾದ ಅಧ್ಯಯನ A STUDY OF ಎಂಬರ್ಥವನ್ನೂ ನೀಡುತ್ತದೆ. TOPONYMY ಎಂಬುದು TOPONOMY ಎಂಬುದಾಗಿಯೂ ಸಂಬೋಧಿತವಾಗುತ್ತಿರುವುದುಂಟು. ಈ ರೂಪವು ಅದಕ್ಕೆ ದೊರಕಲು ಪ್ರಾಯಶಃ TOPOS + NOMOS ಎಂಬ ಶಬ್ದಗಳಲ್ಲಿನ ಸ್ವರ ಸಾಮರಸ್ಯ ಅಥವಾ ಸ್ವರದ ಅನುರೂಪತೆಯೇ (VOCALIC HARMONY) ಕಾರಣವಾಗಿ ತೋರುತ್ತದೆ.

ಒಂದು ಸ್ಥಳದ ಅಥವಾ ಕ್ಷೇತ್ರದ ಅಧ್ಯಯನ TOPONOMY ಎಂದಂತಾಯಿತು. ತುಂಬಾ ಈಚೆಗಿನ ದಿನಗಳಲ್ಲಿ ಅದು ವಿಜ್ಞಾನವೆಂಬ ಮಹಾವೃಕ್ಷದ ಒಂದು ಬಲವತ್ತರ ಶಾಖೆಯಾಗಿ ಬೆಳೆದು ಸುವ್ಯವಸ್ಥಿತ ಶಾಸ್ತ್ರವಾಗಿ ಹೊಮ್ಮಿಬಂದಿದೆ. ಈ ಕಾರಣವಾಗಿಯೇ ಅದನ್ನು A SCINCE OF PLACENAMES, ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವ ವಿಜ್ಞಾನ ಎಂದು ಪ್ರತಿಪಾದಿಸಬಹುದಾಗಿದೆ. ದೇಶ, ಗ್ರಾಮ, ಊರು ಪದಗಳಿಗೆ ಪರಂಪರಾಗತವಾದ ಸೀಮಿತ ಅರ್ಥವಿದೆ. ಅವುಗಳು ಸಾಮೂದಾಯಿಕ ಮಾನವ ನೆಲೆಗಳ ಅರ್ಥವನ್ನು ತುಂಬಿಕೊಳ್ಳುವುದಿಲ್ಲವಾದ್ದರಿಂದ ನವೀನವಾಗಿ ಚಲಾವಣೆಗೆ ಬಂದಿರುವ ಸ್ಥಳನಾಮ ಎಂಬ ಪದ ತುಂಬಾ ಸೂಕ್ತ ಮತ್ತು ಸಮರ್ಪಕ ಎಂದು ಭಾವಿಸಬಹುದಾಗಿದೆ.

ಅರಿತು ನೋಡಿದಾಗ ಮಾತ್ರ ಸ್ಥಳನಾಮಗಳಿಗೆ ಇರುವ ಮಹತ್ವ ಮನಗಾಣಲು ಸಾಧ್ಯವಾಗುತ್ತದೆ. ಸ್ವಾತಂತ್ರ್ಯಾನಂತರದಲ್ಲಿ ಭಾರತೀಯ ಜೀವನದ ಎಲ್ಲ ಆಯಾಮಗಳಲ್ಲಿ ಹೊಸತನವೊಂದು ಮೂಡಿ ಜನರ ರೀತಿ–ನೀತಿ, ಉಡುಗೆ–ತೊಡುಗೆ, ಭಾಷೆ, ಸಾಹಿತ್ಯ,

---

3. Indian Toponomy - N. M. Nampoothry
   cf. perspectives in plaxe names studies 1987 (p-1)

ಕಲೆ ಮುಂತಾದ ವಿಷಯಗಳಲ್ಲಿ ನವಜೀವನದ ವಿದ್ಯುತ್ಸಂಚಾರವಾದಂತೆ ಬುದ್ಧಿಜೀವಿಗಳು ಜ್ಞಾನದ ಶಾಖೆಗಳನ್ನು ವೈಜ್ಞಾನಿಕ ತಳಹದಿಯ ಮೇಲೆ ವೀಕ್ಷಿಸುವ, ಪರಾಮರ್ಶಿಸುವ, ಕಟ್ಟುವ, ಬೆಳೆಸುವ ಮಹಾಕಾಯಕಕ್ಕೆ ಕೈಹಾಕಿ ಗೆಲುವನ್ನು ಕಂಡರು. ಪರರಾಷ್ಟ್ರಗಳಲ್ಲಿ ಹಲವು ದಶಕಗಳ ಪೂರ್ವದಲ್ಲಿಯೇ ಸ್ಥಳನಾಮ ಶಾಸ್ತ್ರದ ಬೆಳವಣಿಗೆ ಆರಂಭವಾಗಿದ್ದರೂ ನಮ್ಮ ದೇಶದಲ್ಲಿ ಅದರ ಮಹತ್ವವನ್ನು ಅರಿತುಕೊಂಡುದು ಇತ್ತೀಚೆಗೆ ಮಾತ್ರ. As far as India is concerned the progress achieved in the field of toponymical studies has been rather slow. But for a few articles published in some journals, the subject has not enjoyed the serious consideration of Indian scholars.[3]

ವಿಶ್ವವಿದ್ಯಾಲಯಗಳಲ್ಲಿನ ಭಾಷಾವಿಭಾಗಗಳು ಮತ್ತು ಭಾಷಾಶಾಸ್ತ್ರ ವಿಭಾಗಗಳು ಆಯಾ ಭಾಷೆಗಳ ಪ್ರಭೇದಗಳನ್ನು ಗುರುತಿಸಿ ಸವಿವರ ಅಧ್ಯಯನವನ್ನು ಆರಂಭಿಸುವುದರೊಂದಿಗೆ ಸ್ಥಳನಾಮಗಳ ವಿಸ್ತೃತ ಪರಿವೀಕ್ಷಣೆಯ ಯೋಜನೆಯನ್ನು ವಿವಿಧ ಹಂತಗಳಲ್ಲಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ನೆರವು ಮತ್ತು ಸಹಕಾರಗಳೊಂದಿಗೆ ಅತ್ಯಂತ ಜರೂರಾಗಿ ಕೈಗೆತ್ತಿಕೊಳ್ಳಬೇಕಾದುದು ಅವಶ್ಯವಾಗಿದೆ.

ಗಿಡಮರ, ಮನುಷ್ಯ ಎನ್ನುವುದು ಜಾತಿ ವಾಚಕ. ಒಂದೊಂದು ಗಿಡ, ಮರ ಇವುಗಳ ಎತ್ತರ, ಹರವು, ರಚನೆ, ಚಿಗುರು, ಹೂ, ಕಾಯಿ, ಹಣ್ಣು, ಉಪಯೋಗ ಬೇರೆ ಬೇರೆಯಾಗಿರುವುದುಂಟು. ಅದರಂತೆಯೇ ಒಬ್ಬೊಬ್ಬ ಮನುಷ್ಯನ ರೂಪ, ಅಕಾರ, ಗುಣ, ಸ್ವಭಾವ, ವರ್ತನೆ ಇವುಗಳಲ್ಲಿ ಭಿನ್ನತೆ ಇರಲು ಸಾಕು. ಆದ್ದರಿಂದ ವ್ಯಾವಹಾರಿಕ ಅನುಕೂಲತೆ ಮತ್ತು ಗೊಂದಲ ನಿವಾರಣೆಗೆ ಪ್ರತ್ಯೇಕ ಅಸ್ತಿತ್ವವನ್ನು ಗುರುತಿಸಬೇಕಾದುದು ಭಾಷಾಧ್ಯಯನದಲ್ಲಿ ಅನಿವಾರ್ಯವೆನಿಸುತ್ತದೆ.

ನಮ್ಮ ಸಾಮಾಜಿಕ ವ್ಯವಹಾರದಲ್ಲಿ ಒಂದು ವಸ್ತುವನ್ನು ಅಥವಾ ಒಬ್ಬ ವ್ಯಕ್ತಿಯನ್ನು ಮತ್ತೊಂದು ವಸ್ತು ಯಾ ವ್ಯಕ್ತಿಯಿಂದ ಪ್ರತ್ಯೇಕಿಸುವುದೂ ಅನಿವಾರ್ಯವಾಗುತ್ತದೆ. ಈ ಕಾರಣದಿಂದಲೇ ಅಂಕಿತ ನಾಮಗಳು ಅನಿವಾರ್ಯ. 'ಮರ' ಎಂಬುದು ಅಂಕಿತನಾಮ. ಅರ್ಥವಿಸ್ತಾರ ಅಥವಾ ಸ್ಪಷ್ಟತೆಗೆ ತೇಗದ ಮರ, ಆಲದ ಮರ, ಬಸಿರೆ ಮರ, ಬೇವಿನ ಮರ ಮುಂತಾಗಿ ಜಾತಿವಾಚಕಗಳಾಗಿ ಮಾರ್ಪಟ್ಟು ರೂಢನಾಮಗಳಾದವು. ಹಾಗೆಯೇ 'ಮನುಷ್ಯ' ಎಂಬುದು ಜಾತಿ ವಾಚಕ. ಗೊಂದಲ ನಿವಾರಣೆಗೆ ರಾಮ, ಲಕ್ಷ್ಮಣ, ಭರತ ಮುಂತಾಗಿ ಸಂಜ್ಞಾವಾಚಕ ಅಥವಾ ಅಂಕಿತ ನಾಮಗಳಾದವು.

ನಿರ್ದಿಷ್ಟ ಹೆಸರುಗಳುಳ್ಳ ಪದಗಳೇ ಸ್ಥಳನಾಮಗಳು. ಭೌಗೋಳಿಕ ವೈಲಕ್ಷಣ್ಯಗಳನ್ನು ಸೂಚಿಸುವಂತಹ ಎಂಬ ಸಾಮಾನ್ಯಾರ್ಥದಲ್ಲಿ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯವನ್ನು ಸೂಚಿಸುವಂತಹ ಎಂಬ ವಿಶೇಷಾರ್ಥದಲ್ಲಿ ಸ್ಥಳನಾಮಗಳನ್ನು ಅರ್ಥೈಸಬಹುದು. ಸ್ಥಳನಾಮಗಳಲ್ಲಿ ಅನೇಕ ವಿಧಗಳಿವೆ. ಊರುಕೇರಿಗಳ ಹೆಸರು, ಕೆರೆ ಕಾಲುವೆ, ಬೆಟ್ಟಗುಡ್ಡ, ಕಾಡುಮೇಡು, ಬಂಡೆ ಗುಹೆಗಳ ಹೆಸರುಗಳು ಇವುಗಳ ವ್ಯಾಪ್ತಿಯೊಳಗೆ ಬರುತ್ತವೆ.

ಸ್ಥಳಗಳ ವಿಸ್ತೀರ್ಣತೆ ಮತ್ತು ಅಲ್ಲಿ ನೆಲೆ ನಿಂತ ಜನಸಂಖ್ಯೆ ಮೊದಲಾದವುಗಳ ಆಧಾರದಿಂದ ಅವುಗಳನ್ನು ಹಳ್ಳಿ, ಊರು, ಗ್ರಾಮ, ವಾಡ, ಬೇಡ, ಪುರ, ನಗರ, ಪಾಳ್ಯ, ಪಟ್ಟಣ ಮೊದಲಾಗಿ ಕರೆಯಲಾಗುವುದು. ಇದರ ಜೊತೆಯಲ್ಲಿ ಆಯಾ ಸ್ಥಳಕ್ಕೆ ಪ್ರಾಪ್ತವಾದ ವಿಶಿಷ್ಟ ಘಟಕಗಳು ಬೆರೆತು ಅಂಕಿತನಾಮಗಳಾಗುತ್ತವೆ.

ಹೊಲ, ಗದ್ದೆ, ತೋಟ, ಬಾವಿ ಇವುಗಳಿಗೂ ಹೆಸರುಗಳಿರುತ್ತವೆ. ಸಾಮಾನ್ಯವಾಗಿ ಅವುಗಳ ರೂಪರೇಷೆ, ಗಾತ್ರ, ಗುಣ, ವಿಸ್ತಾರ ಅಲ್ಲಿ ಬೆಳೆಯುವ ಬೆಳೆಗಳ ವಿವರಗಳನ್ನು ಅವು ಸೂಚಿಸುತ್ತಿರುತ್ತವೆ. ಕೆಲವೇಳೆ ಅವು ವ್ಯಕ್ತಿನಾಮಗಳನ್ನು ಪಡೆಯಬಹುದಾದರೂ ಭೌಗೋಳಿಕ ಲಕ್ಷಣಗಳನ್ನು ಪ್ರತಿಬಿಂಬಿಸುವ ಹೆಸರುಗಳೇ ಅಧಿಕವೆಂದು ಧಾರಾಳವಾಗಿ ಹೇಳಬಹುದು.

ಬಳ್ಳಾರಿ ಸೀಮೆಯಲ್ಲಿ ನಮ್ಮದೊಂದು ಹೊಲ. ಅದರಲ್ಲಿ ಏನೆಲ್ಲ ಬಿತ್ತಿ ಬೆಳೆಯಬಹುದು. ಅಂಥ ಫಲವತ್ತು ಭೂಮಿ ಅದಾಗಿತ್ತು. ಅದನ್ನು ನಾವು ಬೇರೊಬ್ಬರಿಂದ ಕೊಂಡದ್ದು. ಅದನ್ನು ನಮಗೆ ಮಾಡಿದವರ ಮನೆತನಕ್ಕೆ 'ತೊಗರಿ' ಎಂಬ ಅಡ್ಡಹೆಸರು ಹೊಲದ ದೆಸೆಯಿಂದಾಗಿ ಬಂದುದಾಗಿತ್ತು. ಕಾರಣವಿಷ್ಟೆ. ಆ ಹೊಲ ಅಕ್ಕಡಿ ಕಾಳು ಬೆಳೆಯಲು ಎತ್ತಿದ ಕೈ. ಹೊಲದ ಮಣ್ಣಿನ ಗುಣ ಲಕ್ಷಣವೇ ಅಂಥದ್ದು. ವಿಶೇಷವಾಗಿ ತೊಗರಿ ಬೆಳೆಯಲ್ಲಿ ಅಸಾಮಾನ್ಯವಾದುದಾಗಿತ್ತು. ಭೂಮಿಯ ಗುಣವನ್ನವಲಂಬಿಸಿ ಹೆಸರು ಜನ್ಮತಳೆಯಬಹುದೆಂಬುದಕ್ಕೆ ಇದೊಂದು ದೃಷ್ಟಾಂತ.

ಭೌಗೋಳಿಕ ಲಕ್ಷಣಗಳ ಆಧಾರದಿಂದಲೂ ಹೊಲಗದ್ದೆಗಳಿಗೆ ಹೆಸರು ಬರುವುದುಂಟು ಎನ್ನುವುದಕ್ಕೆ ಇಲ್ಲಿದೆ ಉದಾಹರಣೆ: ಹೊಲಕ್ಕೆ 'ಮಾಳಪ್ಪ ಗುಂಡಿನ ಹೊಲ' ಎಂಬುದಾಗಿ ಬಳ್ಳಾರಿ ಹಾಗೂ ಸುತ್ತಮುತ್ತಲಿನ ಪ್ರದೇಶ ಬರೀ ಕಲ್ಲಿನ ಬೆಟ್ಟ ಗುಡ್ಡಗಳ, ಭೀಮಾಕಾರದ ಹೆಬ್ಬಂಡೆಗಳ ಸುಂದರ ಸೀಮೆ. ಹೊಲದ ಒಂದು ಪಾರ್ಶ್ವಕ್ಕೆ ಕಲ್ಲಿನ ಬೆಟ್ಟ, ಬೆಟ್ಟದ ತಪ್ಪಲಲ್ಲಿ

ಹೊಲದ ಬದಿಯಲ್ಲೇ ಭಾರೀ ಗಾತ್ರದ ಒಂದು ಕಲ್ಲುಗುಂಡು. ಅದರಡಿ ಏನಿಲ್ಲವೆಂದರೂ ಸುಮಾರು ಇಪ್ಪತ್ತು ಜನ ನೆರಳಿನಾಸರೆ ಪಡೆಯಬಹುದು. ಅದಕ್ಕೆ 'ಮಾಳಪ್ಪ ಗುಂಡಿನ ಹೊಲ' ಎಂದು ಅನ್ವರ್ಥನಾಮವಾಗಿ ಪ್ರಚುರತೆ ಪಡೆದಿದೆ.

ಈ ತೆರನಾಗಿ ಹೊಲ ಗದ್ದೆಗಳ ಹೆಸರುಗಳು ಭೂಮಿಯ ರೂಪರೇಷೆ, ಬೆಳೆಯುವ ಫಸಲಿನ ವಿವರ ಕೆಲವೇಳೆ ವ್ಯಕ್ತಿನಾಮ ಪಡೆಯಬಹುದಾಗಿದೆ.

ಹೆಸರುಗಳೇ ಇಲ್ಲದಿದ್ದಾಗ ಸ್ಮರಣ ಸಾಮರ್ಥ್ಯವೂ ಶೂನ್ಯವಾಗಿ ವಿಕಾಸವಾಗಲೀ ಚರಿತ್ರೆಯಾಗಲೀ ಸ್ಥಗಿತಗೊಂಡಿದ್ದಂತೆಯೇ ಲೆಕ್ಕ. ಭಾವಾನುಭವಗಳು ಅಸ್ಪಷ್ಟವಾಗಿದ್ದಾಗ ವಿನೂತನ ಭಾವಾನುಭವಗಳು ಕೊನರುವಂತಿರಲಿಲ್ಲ. ಒಂದು ವಸ್ತುವಿನ ಅಥವಾ ಪ್ರಾಣಿಯ ಸ್ವರೂಪವೊ ಸ್ವಭಾವವೋ ಸಂವೇದನಾಶೀಲ ಮಾನವನ ಭಾವಕೋಶದಲ್ಲಿ ಪ್ರತಿಧ್ವನಿಗೈದ ಪರಿಣಾಮವಾಗಿ ಅವನ ಉಚ್ಚಾರಣಾವಯವಗಳಲ್ಲಿ ಮಾಡಿದ ಉದ್ಗಾರವೇ ಹೆಸರಾಗುತ್ತದೆ. ಅಂದರೆ ಪ್ರಾರಂಭದ ಅಭಿದಾನಗಳಿಗೆ ಮಾನವನ ಅಂತಃಸ್ಫುರಣವೇ ಕಾರಣವೆನ್ನಬಹುದು. ಹೆಸರುಗಳ ಮೂಲಕ ಭಾವಾಲೋಚನೆಗಳಿಗೆ ಮೂರ್ತತ್ವವೊದಗಿ, ವಿವಿಧ ವಸ್ತು ಪ್ರಾಣಿಗಳ ಭೇದ ಪ್ರಭೇಧಗಳು ಅರಿವಾಗಿ, ಕಲ್ಪನಾ ಸಾಮರ್ಥ್ಯ ಉದ್ದೀಪನಗೊಂಡು, ವಿಚಾರಶಕ್ತಿ ಪ್ರಖರಗೊಂಡಾಗ ನಾಮ ನಿರ್ಮಾಣ ಕಾರ್ಯದಲ್ಲಿ ಬುದ್ಧಿಯೂ ಸಮಸಮನಾಗಿ ಅಂತಃಸ್ಫುರಣದೊಡನೆ ಭಾಗಿಯಾಗುತ್ತದೆ. ಆಗ ಒಂದು ಹೆಸರು ಹತ್ತಾಗಿ, ಹಲವಾಗಿ ಅನಂತವಾಗಿ ಬೆಳೆದು ಮನುಷ್ಯನಿಗೂ ವಿಶ್ವಕ್ಕೂ ಸಂಬಂಧವನ್ನು ಕಲ್ಪಿಸುತ್ತದೆ.[5]

ಪ್ರಾಚೀನ ಮಾನವನು ತನ್ನುದರ ಪೋಷಣೆಗೆ ವನ್ಯ ಪ್ರಾಣಿಗಳಂತೆ ಪ್ರಕೃತಿಯನ್ನವಲಂಬಿಸಿ ಏಕತ್ರ ನೆಲೆ ನಿಲ್ಲದೆ ಬದುಕನ್ನು ಅರಸಿಕೊಂಡು ಒಂದೆಡೆಯಿಂದ

---

4. ಸ್ಥಳನಾಮ ವ್ಯಾಸಂಗ – ದೇಜಗೌ. ಸಹ್ಯಾದ್ರಿ ಪ್ರಕಾಶನ ೧೯೯೦ (ಪುಟ–೧೦)
5. Names throw light on the geography, Topography and physical conditions of places, the historical events, National and Tribal immigrations and settlements, the ethnological policy, the constitution of society, the customes, traditions and mode of worship of the inhabitants and several such valuable pieces of information which recorded evidences cannot normally furnish.

   -The scope of place name studies - K. M. George cf. prespectives in place names studies 1987 (p-108)

ಇನ್ನೊಂದೆಡೆಗೆ ಗುಳೆ ಹೊರಡುವ ಅಲೆಮಾರಿಯಾಗಿ ಅದೆಷ್ಟೋ ಶತಮಾನಗಳವರೆಗೆ ಕಾಲವನ್ನು ಸವೆಸಿ ಕಾಲಾನುಕ್ರಮದಲ್ಲಿ ತನ್ನ ಜೀವನಕ್ಕೆ ಹೊಂದಿಕೆಯಾಗುವಂತಹ ಅನುಕೂಲ ಪರಿಸರವೊಂದರಲ್ಲಿ ನೆಲೆನಿಂತನು. ತಾನು ಹೀಗೆ ನೆಲೆಯೂರಿದ ಸ್ಥಳಗಳೇ 'ಹಟ್ಟಿ'ಗಳಾದವು. ಸ್ಥಳನಾಮಗಳಲ್ಲಿ ಹಟ್ಟಿಗಳೇ ಆರಂಭಕಾಲದ ವಸತಿಗಳು ಮತ್ತು ಪ್ರಾಚೀನತಮ ಘಟಕ (PLACE NAME THEME) ಎಂದು ತಿಳಿಯಲಾಗಿದೆ.[೬]

"What is in a name? That which we call a rose, by any other name would smell as sweet" - **Shankespeare.** ಹೆಸರಿನಲ್ಲೇನಿದೆ? ಎಂದು ಅಲಕ್ಷಿಸುವಂತಿಲ್ಲ. ಹೆಸರೇ ಸರ್ವಸ್ವ, ಹೆಸರಿಗಾಗಿ ಬಡಿದಾಡಿ ಪ್ರಾಣ ಬಿಟ್ಟವರು ಎಷ್ಟಿಲ್ಲ ಲೋಕದಲ್ಲಿ! ಗುಲಾಬಿಯನ್ನು ಗುಲಾಬಿ ಎಂದು ಕರೆದಾಗಲೇ ಸೊಬಗು. ಅದನ್ನು ಬೇರೊಂದು ಹೆಸರಿನಿಂದ ಕರೆದರೆ ಸೊಗದೋರಲಾರದು. ನಾವು ಹೆಸರಿಗೆ ಪ್ರಾಶಸ್ತ್ಯ ನೀಡಲು ಹಲವು ಕಾರಣಗಳುಂಟು.[೭]

ಕಣ್ಮನ ತುಂಬುವ ಸುಂದರ ಗುಡ್ಡ, ಬೆಟ್ಟ, ನದಿ ಹಳ್ಳ, ಕೊಳ್ಳ, ಕೆರೆ, ಬಾವಿ, ಕಾಡು, ಕಣಿವೆಗಳಿಂದ ಕಿಕ್ಕಿರಿದ, ಹಲವು ರಾಜಮನೆತನಗಳು ನೂರಾರು ಕಾಲ ವೈಭವದಿಂದ ರಾಜ್ಯಭಾರಗೈದ, ದಕ್ಷಿಣ ಮಹಾ ಸಾಮ್ರಾಜ್ಯ ಎಂಬ ಜಗತ್ಪ್ರಸಿದ್ಧಿಗೆ ಪಾತ್ರವಾದ ವಿಜಯನಗರ ಮಹಾಸಾಮ್ರಾಜ್ಯದ ತವರು ನೆಲವಾಗಿ ಕೋಟೆ, ಕೊತ್ತಳ, ಗುಡಿ, ಗುಂಡಾರಗಳಿಂದ ಸಮೃದ್ಧವಾಗಿದ್ದು ಸ್ಥಳನಾಮ ಶೋಧಕನಿಗೆ ವಿಪುಲ ಸಾಮಗ್ರಿ ಒದಗಿಸುವಂಥ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲೂಕಿನ ಸ್ಥಳನಾಮಗಳ ಬಗ್ಗೆ ಇದುವರೆಗೆ ಯಾರೊಬ್ಬರೂ ವ್ಯವಸ್ಥಿತವಾಗಿ ಕಾರ್ಯವೆಸಗದಿರುವುದು ಸಖೇದಾಶ್ಚರ್ಯಕರ ವಿಷಯವಾಗಿದೆ. ಈಗಾಗಲೇ ಸಾಂಸ್ಕೃತಿಕ ಹಾಗೂ ಐತಿಹಾಸಿಕ ದೃಷ್ಟಿಯಿಂದ ಭಾರೀ ನಷ್ಟವನ್ನು ಅನುಭವಿಸಿರುವ ನಾವು ಈ ಸಮೃದ್ಧನಾಡಿನ ಪರಂಪರಾಗತ ಆಸ್ತಿಯನ್ನು ಮುಂದಿನ ಪೀಳಿಗೆಗೆ ಕಾಲ ಮಸುಳದ ಮುನ್ನ ಪರಿಚಯಿಸಬೇಕೆನ್ನುವ ಹಂಬಲದಿಂದ ಜನ್ಮತಃ ಬಳ್ಳಾರಿ ಜಿಲ್ಲೆಯವನಾದ ನಾನು ಆಯಾ ಸ್ಥಳಗಳ ಸನ್ನಿವೇಶವೇ ಮೊದಲಾದುವನ್ನು ಖುದ್ದಾಗಿ ಮತ್ತೊಮ್ಮೆ ಅರಿತು, ಕಂಡು

---

6. The fundamental purpose of names is to provide a means of identification. This is the function that dictates their formation and keeps them alive.
   F.T. Wain Wright
   Archaeology and place names and History London (1962(p-57)

ಸ್ಥಳನಾಮಗಳ ಭೌಗೋಳಿಕ ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಬಿಂಬಿಸಬಹುದೆಂಬ ಮಹತ್ವಾಕಾಂಕ್ಷೆಯೇ ಈ ಕಾರ್ಯಕ್ಕೆ ನಾನು ಅಡಿಯಿಡಲು ಮುಖ್ಯ ಕಾರಣಗಳಲ್ಲೊಂದಾಗಿದೆ.

ಸ್ಥಳನಾಮಗಳ ಅಧ್ಯಯನಕ್ಕೆ ದೇಶ ವಿದೇಶಗಳಲ್ಲಿ ಈಗೀಗ ಹೆಚ್ಚಿನ ರೀತಿಯ ಪ್ರಾಶಸ್ತ್ಯ ಲಭ್ಯವಾಗಿದೆ. ಅಮೆರಿಕಾ ಮತ್ತು ಇಂಗ್ಲಂಡಿನಲ್ಲಿ ಸ್ಥಳನಾಮದ ಮೇಲಿನ ಅಧ್ಯಯನವು ವ್ಯಾಪಕ ಪ್ರಮಾಣದಲ್ಲಿ ನಡೆದಿದ್ದು ಅನೇಕ ಮಹತ್ವಪೂರ್ಣ ಫಲಿತಾಂಶಗಳು ಕಂಡುಬಂದಿದೆ. ಈಗ ಭಾರತದಲ್ಲಿ ಸ್ಥಳನಾಮಾಧ್ಯಯನಕ್ಕೆ ಹೆಚ್ಚಿನ ಗಮನ ಹರಿಸಲಾಗಿದೆ. ಕರ್ನಾಟಕದಲ್ಲಿ ಈ ಕ್ಷೇತ್ರವು ಒಂದು ಹೊಸ ದಿಗಂತವನ್ನು ತೆರೆದಿದೆ ಎನ್ನಬಹುದು. ಆದರೂ ದೇಶದ ಇತರೆ ಭಾಗಗಳೊಂದಿಗೆ ಹೋಲಿಸಿದರೆ ನಾವು ಕ್ರಮಿಸಬೇಕಾದ ಹಾದಿ ದೀರ್ಘವಾಗಿದೆ. ವಿಳಂಬಿಸದೆ ಮುಂದೆ ಸಾಗುವುದು ನಮ್ಮ ಗುರಿಯಾಗಬೇಕಾಗಿದೆ.

೧:೨ ಸ್ಥಳನಾಮ ಅಧ್ಯಯನದ ಆರಂಭ ಹಾಗೂ ಬೆಳವಣಿಗೆ:

ಜರ್ಮನಿಯ ಗಾಟ್ ಫ್ರೀಡ್ ವಿಲಹೆಲ್ಮ್ ಲೀಬ್ನಿಜ್ ಕ್ರಿ.ಶ. ೧೭೬೮ ರಲ್ಲಿ ಕೆಲವು ಲೇಖನಗಳನ್ನು ಪ್ರಕಟಮಾಡಿ ಸ್ಥಳನಾಮಗಳ ಸಾಂಸ್ಕೃತಿಕ ಮಹತ್ವ ಮತ್ತು ಅವುಗಳ ಅಧ್ಯಯನದ ಅವಶ್ಯಕತೆಯನ್ನು ಕುರಿತು ಪ್ರಸ್ತಾಪಿಸುತ್ತಾ ಸ್ಥಳನಾಮಗಳು ಅರ್ಥಗರ್ಭಿತವಾದವುಗಳೆಂದೂ ಅವುಗಳ ಪ್ರಾಚೀನ ರೂಪಗಳಿಂದ ಅರ್ಥವನ್ನು ನಿರ್ಣಯಿಸಬಹುದೆಂದೂ ಪ್ರಪ್ರಥಮವಾಗಿ ಘೋಷಿಸಿದನು. ಈ ಕೊಡುಗೆಯಿಂದಾಗಿ ಲೀಬ್ನಜನು "ಸ್ಥಳನಾಮ ವಿಜ್ಞಾನದ ಪಿತಾಮಹ"ನೆಂದು ಪ್ರಸಿದ್ಧಿಯಾಗಿದ್ದಾನೆ. ಆ ಹೊತ್ತಿಗಾಗಲೇ ಯುರೋಪಿನ ಗ್ರಾಮಗಳ ಪ್ರಾಚೀನ ನಾಮಗಳಲ್ಲಿ ಹಲವು ಕಣ್ಮರೆಯಾಗಿದ್ದವು. ಇಂತಹ ಸಂದರ್ಭದಲ್ಲಿ ಸ್ಥಳನಾಮ ವಿಜ್ಞಾನದ ಬೆಳವಣಿಗೆ ಭದ್ರ ಬುನಾದಿ ಹಾಕಿದವನೆಂದರೆ ಇಂಗ್ಲಂಡಿನ ಸ್ಕೀಟ್ ಮಹಾಶಯ.

ಐರೋಪ್ಯ ರಾಷ್ಟ್ರಗಳಲ್ಲಿ ಸ್ಥಳನಾಮ ಅಧ್ಯಯನದ ಬಗ್ಗೆ ವಿಶೇಷ ಜಿಜ್ಞಾಸೆ ಮೂಡಿ ಅವುಗಳ ಅಧ್ಯಯನ ವೈಜ್ಞಾನಿಕವಾಗಿ ಪ್ರಾರಂಭಗೊಂಡದ್ದು ೧೯ನೆಯ ಶತಮಾನದ ಉತ್ತರಾರ್ಧದಲ್ಲಿ. ಸು. ೧೮೪೧ರ ನಂತರದಲ್ಲಿ ಸುವ್ಯವಸ್ಥಿತ ಸಂಶೋಧನಾ ಕಾರ್ಯದ ಯುಗವು ಪ್ರಾರಂಭವಾಯಿತು. ೧೮೫೦ರಲ್ಲಿ ಫಾರಸ್ಟೀಮನ್‌ರವರ "Alt Deutsches Namen buch" ಮತ್ತು ಐಸಾಕ್ ಟೇಲರನ "words and places" ಎಂಬ ಗ್ರಂಥಗಳು ಪ್ರಕಟಗೊಂಡವು. ಅವರ ಈ ಗ್ರಂಥಗಳು ಈ ಅವಧಿಯಲ್ಲಿ ಹೆಸರಿಸಲೇಬೇಕಾದ ಮಹತ್ವಪೂರ್ಣ ಕೊಡುಗೆಗಳಾಗಿವೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ೧೯ನೆಯ ಶತಮಾನದಿಂದೀಚೆಗೆ "ನಾಮ ವಿಜ್ಞಾನ' (ONOMASTICS) ವಿಶೇಷವಾಗಿ ಬೆಳೆಯುತ್ತಿದ್ದಂತೆ ವ್ಯಕ್ತಿ ಮತ್ತು ಸ್ಥಳನಾಮಗಳನ್ನು ಕುರಿತಾದ ಅಧ್ಯಯನಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ನಾಮ ವಿಜ್ಞಾನದಲ್ಲಿ 'ವ್ಯಕ್ತಿ ನಾಮ ವಿಜ್ಞಾನ' (ANTHROPONOMY) ಮತ್ತು 'ಸ್ಥಳನಾಮ ವಿಜ್ಞಾನ' (TOPONOMY) ಎಂಬೆರಡು ಪ್ರತ್ಯೇಕವಾದ ಅಧ್ಯಯನ ಕ್ಷೇತ್ರಗಳು ಕಾಣಿಸಿಕೊಂಡವು. ವ್ಯಕ್ತಿ ನಾಮ ವಿಜ್ಞಾನವು 'ಅಂಕಿತನಾಮ', (PROPER NOUNS) 'ಕುಲನಾಮ' (SURNAMES) ಮತ್ತು ಅನ್ವರ್ಥನಾಮ (NICK NAMES)ಗಳನ್ನು ಪ್ರಧಾನವಾಗಿ ಅಭ್ಯಸಿಸುವಂಥ ಶಾಸ್ತ್ರವಾಗಿ ಬೆಳೆದು, ಸ್ಥಳನಾಮ ವಿಜ್ಞಾನವು 'ಪ್ರಾಕೃತಿಕ ನಾಮ' (NATURAL NAMES) ಮತ್ತು 'ಸಾಂಸ್ಕೃತಿಕ ನಾಮ' (CULTURAL NAMES) ಗಳನ್ನು ಅಭ್ಯಸಿಸುವ ಕ್ಷೇತ್ರವಾಗಿ ಬೆಳೆಯಿತು.

೧೮೭೧ ರಿಂದ ೧೮೮೫ರ ವರೆಗಿನ ಕಾಲಾವಧಿಯನ್ನು ಐರೋಪ್ಯ ರಾಷ್ಟ್ರಗಳಲ್ಲಿಯ ಸ್ಥಳನಾಮ ಅಧ್ಯಯನದ ವಿಕಾಸಶೀಲ ಘಟ್ಟ (Evolutionary)ವೆಂದು ಕರೆಯಲಾಗಿದೆ. ಸ್ಥಳನಾಮ ಶಾಸ್ತ್ರದ ಬೆಳವಣಿಗೆ ಹಾಗೂ ಅಭಿವೃದ್ಧಿಗಳ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ ಕಾಲವಾಗಿದೆ. ಜೆ.ಜೆ. ಎಗ್ಲಿ (J.J. Egli) ಎಂಬ ಮಹಾಶಯನು ಈ ಅವಧಿಯಲ್ಲಿಯ ಹಲವು ಸ್ಥಳನಾಮ ಶಾಸ್ತ್ರ ವಿದ್ವಾಂಸರಲ್ಲಿ ಪ್ರಮುಖನಾಗಿದ್ದಾನೆ. ಈ ಕಾಲಾವಧಿಯ ನಂತರದ ದಿನಗಳಲ್ಲಿ ಯೂರೋಪ್ ಮತ್ತು ಇಂಗ್ಲೆಂಡ್‌ಗಳಲ್ಲಿ ಸ್ಥಳನಾಮಗಳನ್ನು ಕುರಿತಾದ ಅಧ್ಯಯನ ಬಹು ಚುರುಕಿನಿಂದ ನಡೆಯಿತು.

ಸ್ಥಳನಾಮ ಸಂಶೋಧನೆ ಮತ್ತು ಅದರ ವೈಜ್ಞಾನಿಕ ಪ್ರಗತಿಗೆ ಪ್ರೋತ್ಸಾಹ ದೊರೆತದ್ದು ಮುಖ್ಯವಾಗಿ ಯೂರೋಪ್ ಹಾಗೂ ಅಮೇರಿಕಾಗಳಲ್ಲಿ ಅನಂತರ ಪ್ರಾಚೀನ ಇತಿಹಾಸದ ಪುನರ್ನಿರ್ಮಾಣವನ್ನು ದೃಷ್ಟಿಯಲ್ಲಿರಿಸಿಕೊಂಡು ಯೂರೋಪಿನ ತಜ್ಞರು ಸಂಶೋಧನೆಯನ್ನು ನಡೆಸಿದರು. ಹಳೆಯ ಚಾರಿತ್ರಿಕ ದಾಖಲೆಗಳು ಪೂರ್ಣವಾಗಿ ದೊರೆಯದಿದ್ದ ಸಂದರ್ಭಗಳಲ್ಲಿ ಅವರು ಭೂಗೋಳ, ಜನಾಂಗ ವಿಜ್ಞಾನಗಳ ಆಧಾರದ ಮೇಲೆ ಸ್ಥಳನಾಮಗಳ ವ್ಯುತ್ಪತ್ತಿ (Etymology)ಯನ್ನು ಸಾಧಿಸಲು ಪ್ರಯತ್ನಗಳನ್ನು ಮಾಡಿದರು. ಆದರೆ ಅಮೇರಿಕೆಯ ಸಂಶೋಧಕರು ಮಾತ್ರ ತಮ್ಮ ದೇಶದ ಇತ್ತೀಚಿನ ಚಾರಿತ್ರಿಕ ದಾಖಲೆಗಳು ಅವರಿಗೆ ಸುಲಭ ಲಭ್ಯವಾಗಿದ್ದುದರಿಂದ ಅವರು ಚಾರಿತ್ರಿಕ ವಿಧಾನಕ್ಕೆ ಶರಣುಹೋದರು. ಹೀಗೆ ಆ

---

7. ದೇಜಗೌ – ಸ್ಥಳನಾಮ ವ್ಯಾಸಂಗ, ೧೯೯೦ ಪು–೩೪ ಸಹ್ಯಾದ್ರಿ ಪ್ರಕಾಶನ

ಎರಡೂ ಖಂಡಗಳಲ್ಲಿ ಕೈಗೊಂಡ ಸ್ಥಳನಾಮ ಸಂಶೋಧನಾ ವಿಧಾನ ಮತ್ತು ಅವುಗಳಿಗೆ ದೊರೆತ ಮಹತ್ವಗಳಲ್ಲಿ ವ್ಯತ್ಯಾಸವನ್ನು ಕಾಣಬಹುದಾಗಿದೆ.

ಇಂಗ್ಲಂಡಿನಲ್ಲಿ ಎಂಟನೆಯ ಶತಮಾನದ BEDE ತನ್ನ ಧಾರ್ಮಿಕ ಇತಿಹಾಸದಲ್ಲಿ ಕೆಲವು ಸ್ಥಳನಾಮಗಳ ವಿವರಣೆಯನ್ನು ಲ್ಯಾಟಿನ್ನಿನಲ್ಲಿ ಕೊಡುತ್ತಾನೆ. ಹತ್ತನೆಯ ಶತಮಾನದ ASSER ತಾನು ರಚಿಸಿದ ಆಲ್ ಫ್ರೆಡ್ ದೊರೆಯ ಜೀವನ ಚರಿತ್ರೆಯಲ್ಲಿ ಕೆಲವು ಸ್ಥಳನಾಮಗಳ ನಿಷ್ಪತ್ತಿಯನ್ನು ಲ್ಯಾಟಿನ್‌ವಲ್ಲಿ ವಿಶದಪಡಿಸುತ್ತ SHEPPY ಎನ್ನುವುದು ಕುರಿಗಳ ದ್ವೀಪವೆಂದು ವಿವರಿಸುತ್ತಾನೆ. ಹನ್ನೆರಡನೆಯ ಶತಮಾನದ ಇತಿಹಾಸಕಾರರಾದ ಹಂಟಿಂಗ್ ಡನ್ನಿನ ಹೆನ್ರಿ, ಮಾಲ್ಮೆಸ್ ಬರಿಯ ವಿಲಿಯಂ ಮುಂತಾದವರು ಸ್ಥಳನಾಮಗಳ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದ್ದಾರೆ.[೭]

ಸ್ಥಳನಾಮಗಳ ಅಧ್ಯಯನದ ಪ್ರಯೋಜನವು ಎಲ್ಲ ಜ್ಞಾನಶಾಖೆಗಳ ವಿದ್ವಾಂಸರಿಗೂ ಮನವರಿಕೆಯಾಗಿ ೧೮೮೫ರ ಹೊತ್ತಿಗೆ ಅದಕ್ಕೆ ಒಂದು ಪೂರ್ಣ ಸ್ವರೂಪವು ಒದಗಿ ಬರುವಂತಾಯಿತು. ಈ ಅವಧಿಯಲ್ಲಿ ಸ್ಥಳನಾಮಗಳ ರೂಪ-ಸ್ವರೂಪಗಳ ಬಗೆಗೆ ತಾಳಲಾದ ಕೆಲವು ನಿರ್ಣಯಗಳನ್ನು ಕೆಳಗಿನಂತೆ ಹೇಳಬಹುದಾಗಿದೆ.

೧. ಅರ್ಥವಿಲ್ಲದ ಸ್ಥಳನಾಮವಿಲ್ಲ.

೨. ಸ್ಥಳನಾಮಗಳಲ್ಲಿ ವಸ್ತುಸ್ಥಿತಿ ಪ್ರತಿಬಿಂಬಿತವಾಗಿರುತ್ತದೆ. ಅವಾಸ್ತವ ಕಲ್ಪನೆಗೆ ಎಡೆಯಿಲ್ಲ.

೩. ಪೌರಾಣಿಕ ಕಥೆಗಳು ಅವುಗಳೊಡನೆ ಬೆರೆತದ್ದು ಮತ್ತು ಸ್ಥಳಪುರಾಣಗಳು ಹುಟ್ಟಿದ್ದು ಕಾಲಾನಂತರದಲ್ಲಿ.

೪. ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಎರಡು ಅಂಶಗಳಿರುತ್ತವೆ. ಮೊದಲನೆಯದು ವಿಶಿಷ್ಟ ಘಟಕವಾದರೆ ಎರಡನೆಯದು ಸಾಮಾನ್ಯ ಘಟಕ.

೫. ಸ್ಥಳನಾಮಗಳ ನಿಜ ಸ್ವರೂಪ ಅರಿಯಲು ಆಯಾ ಕ್ಷೇತ್ರದ ಐತಿಹಾಸಿಕ ದಾಖಲೆ, ಪ್ರಾಚೀನ ರೂಪ, ಧ್ವನಿ ವಿಜ್ಞಾನ, ಉಪಭಾಷೆಯ ವಿಶಿಷ್ಟ ಲಕ್ಷಣಗಳನ್ನು ಗಮನಿಸಬೇಕು.

---

8. ಸ್ಥಳನಾಮ ವ್ಯಾಸಂಗ - ದೇಜಗೌ ೧೯೮೦ (ಪು.೩೨) ಸಹ್ಯಾದ್ರಿ ಪ್ರಕಾಶನ

೬. ದಾಖಲೆಗಳ ಅಭಾವವಿದ್ದಾಗ ಆಯಾಕ್ಷೇತ್ರದ ಸಮಾನ ರೂಪಗಳನ್ನು ಗಣಿಸಬೇಕು.

ಜರ್ಮನಿಯ ಅಡಾಲ್ಫ್ ಬ್ಯಾಕ್ (Adolf Bach) ಫ್ರಾನ್ಸಿನ ದೌಜತ್ (Dauzat) ಎ.ಹೆಚ್. ಸ್ಮಿತ್ (A. H. Smith) ಸರ್. ಎಫ್. ಸ್ಟೆಂಟನ್ (Sir F. Stenton) ಅಲನ್ ಮಾವೆರ್ (Allen Mawer) ಇಂಗ್ಲಂಡಿನ ಎಯ್ಲರ್ಟ್ ಎಕ್ವಾಲ್ (Eilert Ekwall) ಸ್ಟೀವಾರ್ಟ್ (Stewart) ಇ. ಪುಲಗ್ರಾನ್ (E. Pulgran) ಗಾರ್ಡಿನರ್, ಅಮೇರಿಕಾದ ಎಫ್.ಎಲ್. ಉಟ್ಲೇ ((F.L. Utley) ಬೆಲ್ಜಿಯಮ್ಮಿನ ಹೆಚ್. ಡ್ರಾಯ್ (H. Draye) ಇವರುಗಳೆಲ್ಲ ಸ್ಥಳನಾಮಶಾಸ್ತ್ರದ ಬೆಳವಣಿಗೆಗೆ ತಮ್ಮದೇ ಆದ ಮೌಲಿಕ ಕೊಡುಗೆಯನ್ನು ನೀಡಿದ್ದಾರೆ.

ಐರೋಪ್ಯ ರಾಷ್ಟ್ರಗಳಲ್ಲಿ ಸ್ಥಳನಾಮ ವಿಜ್ಞಾನ ಸಂಸ್ಥೆಗಳು ರೂಪುಗೊಂಡು, ಅಸ್ತಿತ್ವ ತಾಳಿ, ಅವುಗಳ ಸ್ವತಂತ್ರವಾಗಿಯೋ ಇಲ್ಲವೆ ಸರಕಾರದ ಸಹಕಾರದಿಂದಲೇ ವಿದ್ವಾಂಸರಿಗೆ ಈ ಕ್ಷೇತ್ರದಲ್ಲಿ ಸಂಶೋಧನಾ ಕಾರ್ಯವನ್ನು ಕೈಗೊಳ್ಳಲು ಸಕಲ ರೀತಿಯಲ್ಲಿ ಪ್ರೋತ್ಸಾಹವನ್ನು ನೀಡಿದುದಲ್ಲದೆ ಸ್ಥಳನಾಮಗಳ ಭೌಗೋಳಿಕ ಅಧ್ಯಯನಕ್ಕೆ ಪ್ರಾಶಸ್ತ್ಯವನ್ನಿತ್ತಿವೆ.

ಯೂರೋಪಿನ ವಿದ್ವಾಂಸರು ಸಂಸ್ಕೃತ ಭಾಷೆಯನ್ನು ಚೆನ್ನಾಗಿ ಅಭ್ಯಸಿಸಿ ಸಮಸ್ತ ಭಾಷೆಗಳ ತುಲನಾತ್ಮಕ ಅಧ್ಯಯನವನ್ನು ಪಾರಿಣಾಮಿಕ ಘಟ್ಟದವರೆಗೆ ಕೊಂಡೊಯ್ದಾಗ ಸ್ಥಳನಾಮಗಳ ಅಧ್ಯಯನಕ್ಕೆ ಪುರಸ್ಕಾರ ದೊರೆತು ಅನಂತರದಲ್ಲಿ ವೈಜ್ಞಾನಿಕ ಸಂಶೋಧನೆ ಆರಂಭಗೊಂಡಿತು.[೮] ಸ್ಥಳನಾಮಗಳ ವ್ಯಾಪಕ ಸಮೀಕ್ಷಾ ಕಾರ್ಯಗಳು ನಡೆದು ವಿಮಲ ಸ್ಥಳನಾಮ ಸಾಮಗ್ರಿಗಳನ್ನು ಸಂಗ್ರಹಿಸಲಾಯಿತು.

ಜರ್ಮನಿಯಲ್ಲಿ ಫಾರಸ್ಟೀಮನ್, ಫ್ರಾನ್ಸಿನಲ್ಲಿ ಲ್ಯಾಂಗ್ಮನ್, ನಾರ್ವೆಯಲ್ಲಿ ರೈ (Rygh) ಮತ್ತು ಸ್ವೀಡನ್‌ನಲ್ಲಿ ನೋರಿನ್ (Noreen) ಆ ಕ್ಷೇತ್ರದಲ್ಲಿ ಆರಂಭದ ಕೃಷಿಯನ್ನು ಮಾಡಿದ ತಜ್ಞರಾಗಿದ್ದಾರೆ. ಸ್ಥಳನಾಮ ಸಂಶೋಧನೆಯಲ್ಲಿ ಹೆಸರುಗಳ ಐತಿಹಾಸಿಕ ವಿಕಾಸಕ್ಕೂ ಭೌಗೋಳಿಕ ಪರಿಸ್ಥಿತಿ ಮತ್ತು ಸನ್ನಿವೇಶಗಳ ವಿವರಣೆಗೂ ಆದ್ಯ ಗಮನ ನೀಡತಕ್ಕದ್ದೆಂದು ಅವರುಗಳು ಸ್ಪಷ್ಟಪಡಿಸಿದರು. ಅವುಗಳ ಅಧ್ಯಯನದಿಂದ ಸಾಂಸ್ಕೃತಿಕ ಲಾಭ ಮಾತ್ರವಲ್ಲದೆ ಹಲವಾರು ಜ್ಞಾನ ಶಾಖೆಗಳಿಗೆ ಪ್ರಯೋಜನವೊದಗುತ್ತದೆಂದೂ ಅವರು ಸೂಚಿಸಿದರು.

ಮುಖ್ಯವಾಗಿ ಜರ್ಮನಿ, ಫ್ರಾನ್ಸ್, ಡೆನ್ಮಾರ್ಕ್ ಮತ್ತು ನಾರ್ವೆಗಳಲ್ಲಿ ಸ್ಥಳನಾಮಗಳ ಅಧ್ಯಯನವು ಎಡೆಬಿಡದೆ ಈಗಲೂ ನಡೆದೇ ಇದೆ.

೧.೩ ಬಳ್ಳಾರಿ ಜಿಲ್ಲೆಯ ಪರಿಚಯ

ಭೌಗೋಳಿಕ ಪರಿಚಯ:

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿ ಪೂರ್ವದ ಕಡೆ ಬಳ್ಳಾರಿ ಜಿಲ್ಲೆ ಇದೆ. ಜಿಲ್ಲೆಯ ದಕ್ಷಿಣಕ್ಕೆ ಚಿತ್ರದುರ್ಗ. ಉತ್ತರಕ್ಕೆ ರಾಯಚೂರು. ಪಶ್ಚಿಮಕ್ಕೆ ಧಾರವಾಡ ಜಿಲ್ಲೆಗಳೂ ಪೂರ್ವಕ್ಕೆ ಆಂಧ್ರಪ್ರದೇಶವೂ ಇದೆ. ಪೂರ್ವ ಪಶ್ಚಿಮವಾಗಿ ೧೬೧ ಕಿ.ಮೀ. ಉದ್ದವಾಗಿಯೂ ಉತ್ತರ ದಕ್ಷಿಣವಾಗಿ ೮೩.೭. ಕಿ.ಮೀ. ಅಗಲವಾಗಿಯೂ, ಜಿಲ್ಲೆಯು ಅಂಟಿಕೊಂಡಿದೆ. ಉತ್ತರ ಅಕ್ಷಾಂಶ ೧೪°-೩೦°- ೧೫೦ ೫೦' ಮತ್ತು ಪೂರ್ವ ರೇಖಾಂಶ ೭೫° ೪೦°-೭೭° ೧೧' ನಡುವೆ ಇದೆ. ಜಿಲ್ಲೆಯನ್ನು ಬಳ್ಳಾರಿ ಮತ್ತು ಹೊಡೆಪೇಟೆ ಎಂದು ಎರಡು ಉಪ ವಿಭಾಗಗಳಾಗಿ ವಿಂಗಡಿಸಿದೆ. ಸಿರುಗುಪ್ಪ, ಬಳ್ಳಾರಿ, ಸಂಡೂರು ಜಿಲ್ಲೆಯ ಹೊಸಪೇಟೆ ಹಗರಿ ಬೊಮ್ಮನಹಳ್ಳಿ, ಹಡಗಲಿ, ೭ ತಾಲ್ಲೂಕುಗಳನ್ನು ಒಳಗೊಂಡಿದ್ದು ಹರಪನಹಳ್ಳಿ ಈ ಹಿಂದೆ ಬಳ್ಳಾರಿ ಜಿಲ್ಲೆಗೆ ಒಳಪಟ್ಟಿದ್ದು ಜಿಲ್ಲೆಗಳ ಪುನರ್ ವಿಂಗಡಣೆಯ ಸಂದರ್ಭದಲ್ಲಿ ದಾವಣಗೆರೆ ಜಿಲ್ಲೆಯ ವ್ಯಾಪ್ತಿಗೆ ಒಳಪಟ್ಟಿದ್ದು ಆ ಪೈಕಿ ಬಳ್ಳಾರಿ ಜಿಲ್ಲೆಯಿಂದ ೭೮ ಗ್ರಾಮಗಳ ಹರಪನಹಳ್ಳಿ ತಾಲ್ಲೂಕು ದಾವಣಗೆರೆಗೆ ಸೇರಿರುತ್ತದೆ. (೧೧) ೧೦ ಪಟ್ಟಣಗಳು ಸುಮಾರು ೬೩೩-೭೮ – ೫೫೫ ಗ್ರಾಮಗಳಿವೆ. ಜಿಲ್ಲೆಯ ವಿಸ್ತೀರ್ಣ-(೯೮೯೮) ಚ.ಕಿ.ಮೀ. ಜನಸಂಖ್ಯೆ ೧೯೭೧ ಜನಗಣತಿಯಂತೆ ಜನಸಂಖ್ಯೆ ೧೧.೨೬೮೬ ಇದೆ. ಇತ್ತೀಚಿನ ೧೯೯೧ರ ಜನಗಣತಿಗೆ ೧೮.೯೬.೭೧೪ ಎಂದು ತಿಳಿದುಬಂದಿದ್ದು ೨೦೦೧ನೇ ಸಾಲಿನ ಜನಸಂಖ್ಯೆಯಲ್ಲಿ ಜಿಲ್ಲೆಯ ಜನಸಂಖ್ಯೆ ೨೬,೨೨,೮೫೪ ಇದೆ.*

ಬಳ್ಳಾರಿ ಜಿಲ್ಲೆಯ ಉತ್ತರದಲ್ಲಿ ತುಂಗಭದ್ರ ನದಿಯಿಂದಲೂ ಪೂರ್ವದಲ್ಲಿ ಆಂಧ್ರಪ್ರದೇಶ ಕರ್ನೂಲು ಅನಂತಪುರ ಜಿಲ್ಲೆಗಳಿಂದಲೂ ಪಶ್ಚಿಮದಲ್ಲಿ ದಾವಣಗೆರೆ-ಹಾವೇರಿ ಜಿಲ್ಲೆಗಳಿಂದಲೂ, ದಕ್ಷಿಣದಲ್ಲಿ ಚಿತ್ರದುರ್ಗ ಜಿಲ್ಲೆಗಳಿಂದ ಆವೃತ್ತವಾಗಿದೆ. ಬಳ್ಳಾರಿ ಮತ್ತು ಸಿರಗುಪ್ಪ ತಾಲೂಕುಗಳಲ್ಲಿ ಮಾತ್ರ ತೆಲುಗಿನ ಮತ್ತು ತೆಲುಗು ಭಾಷೆಯ ಪ್ರಭಾವ ಹೆಚ್ಚಾಗಿತ್ತು. ೧೯೫೦ರ ನಂತರ ತುಂಗಭದ್ರಾ ಜಿಲ್ಲೆಯೆ ಕಾಲುವೆಗಳಲ್ಲಿ ನೀರು ಹರಿದು ಲಕ್ಷಾಂತರ ಎಕರೆ ಪ್ರದೇಶ ಜಲ ಸಮೃದ್ಧಿಯನ್ನು ಪಡೆದ ನಂತರ ಆಂಧ್ರಪ್ರದೇಶ ಕರಾವಳಿ ಜಿಲ್ಲೆಗಳಿಂದ ರೈತರು ತಂಡೋಪತಂಡವಾಗಿ ಆಗಮಿಸಿ ಭೂಮಾಲಿಕರಾಗಿ ನೆಲಸಿದರು. ಈಗ ತೆಲುಗು ಮತ್ತೆ ತೆಲುಗರ ಪ್ರಭಾವವು ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ದಷ್ಟವಾಗಿ ಆವರಿಸಿದೆ. ಈ ಜನರು ಹೆಚ್ಚು ತೆಲುಗು ಭಾಷೆ ಮತ್ತು ಸಂಸ್ಕೃತಿಯ ಅಭಿಮಾನಿಗಳು. ಅವರು ನೆಲೆಸಿದ

ಸ್ಥಳಗಳನ್ನು ಅವರು 'ಕ್ಯಾಂಪ್' ಎಂದು ಕರೆದರು. ನಾನಾ ರೀತಿಯ ವ್ಯಕ್ತಿ ನಾಮಗಳಿಂದಲೂ ದೇವರ ಹೆಸರಿನಿಂದಲೂ ಈ ಕ್ಯಾಂಪ್‌ಗಳು ಅಸ್ತಿತ್ವಕ್ಕೆ ಬಂದಿವೆ.

ಜಿಲ್ಲೆಯ ವಾಯುವ್ಯದಿಂದ ಆಗ್ನೇಯದವರೆಗೂ ಹುಟ್ಟಿರುವ ನದಿಗಳು, ಬೆಟ್ಟಗಳು ಜಿಲ್ಲೆಯನ್ನು ಪೂರ್ವ ಪಶ್ಚಿಮವಾಗಿ ಎರಡು ಮುಖ್ಯ ಭೌಗೋಳಿಕ ವಿಭಾಗಗಳಾಗಿ ವಿಂಗಡಿಸಿದೆ. ಪೂರ್ವಭಾಗ ಬಳ್ಳಾರಿ ಮತ್ತು ಸಿರುಗುಪ್ಪ ತಾಲೂಕುಗಳನ್ನೊಳಗೊಂಡಿದೆ. ಈ ಪ್ರದೇಶ ಸಮತಟ್ಟಾಗಿದ್ದು ಬಹುತೇಕ ಮರಗಿಡಗಳಿಲ್ಲದ ಹತ್ತಿ ಬೆಳೆಯುವ ಕಪ್ಪು ಮಣ್ಣಿನ ಬಯಲು. ಅಲ್ಲಲ್ಲಿ ಕಲ್ಲಿನ ಬೆಟ್ಟಗಳು ಕಂಡುಬರುತ್ತವೆ. ಇನ್ನು ಪಶ್ಚಿಮದಲ್ಲಿ ಕಪ್ಪು ಮಣ್ಣಿನ ಬಯಲುಗಳು ಮತ್ತು ಹೆಚ್ಚಿನ ಭಾಗದಲ್ಲಿ ಮಿಶ್ರಿತ ಮತ್ತು ಕೆಂಪು ಮಣ್ಣಿನ ಪ್ರದೇಶಗಳಿವೆ.

ಹಡಗಲಿ ತಾಲೂಕೊಂದನ್ನು ಬಿಟ್ಟು ಉಳಿದೆಡೆ ಅಲ್ಲಲ್ಲಿ ಕಾಡು ಮತ್ತು ಬೆಟ್ಟ ಗುಡ್ಡಗಳು ಕಂಡುಬರುತ್ತವೆ. ಪಶ್ಚಿಮ ಭಾಗ ಪೂರ್ವಭಾಗಕ್ಕಿಂತ ಹೆಚ್ಚು ಎತ್ತರವಾಗಿದ್ದು ಮಳೆಯೂ ಅಧಿಕ ಸಂಡೂರಿನ ಬೆಟ್ಟದ ಸಾಲು ವಲ್ಲಾಪುರಂ ಬಳಿ ತುಂಗಭದ್ರ ನದಿಯ ದಂಡೆಯಿಂದ ಹರಿದು ಅಗಳಿಯ ಕಡೆಗೆ ಸುಮಾರು ೪೮ ಕಿ.ಮೀ. ದೂರದವರೆಗೆ ಹಬ್ಬಿದೆ.

ಜಿಲ್ಲೆಯಲ್ಲಿ ವರ್ಷದ ಹೆಚ್ಚುಕಾಲ ಒಣಹವೆ ಇರುತ್ತದೆ. ಮಾರ್ಚ್‌ರಿಂದ ಮೇವರೆಗೆ ಬೇಸಿಗೆಯ ತಾಪ ಹೆಚ್ಚು ಜೂನ್‌ಇಂದ ನವೆಂಬರ್ ವರೆಗೆ ಮಳೆಯ ಕಾಲ. ಡಿಸೆಂಬರ್‌ನಿಂದ ಫೆಬ್ರವರಿವರೆಗೆ ಒಣಹವೆ ಇದ್ದು ತಂಪಾಗಿರುತ್ತದೆ. ಕನಿಷ್ಟ ಉಷ್ಣಾಂಶ ೨೯.೭° ಇದ್ದರೆ ಮಧ್ಯಮ ಕನಿಷ್ಟ ಉಷ್ಣಾಂಶ ೧೬.೭° ಸೆ. ಇದ್ದು ಗರಿಷ್ಠ ಉಷ್ಣಾಂಶ ೩೦.೨°ನಿಂದ ೪೧.೫° ಸೆ.ವರೆಗೂ ಇರುತ್ತದೆ. ಜಿಲ್ಲೆಯ ಮಾಸಿಕ ಸರಾಸರಿ ಮಳೆ ೫೧೮ ಮಿ.ಮೀ. ಜಿಲ್ಲೆಯ ಒಟ್ಟು ವಿಸ್ತೀರ್ಣದ ಅರ್ಧದಷ್ಟು ಭಾಗವನ್ನು ವ್ಯವಸಾಯಕ್ಕೆ ರೂಢಿಸಿಕೊಳ್ಳಲಾಗಿದೆ. ಇವರಲ್ಲಿ ಆಹಾರ ಬೆಳೆ ಬೆಳೆಯುವ ಪ್ರದೇಶ ೩.೮೦.೪೭೮ ಹೆಕ್ಟೇರ್‌ಗಳು. ಆಹಾರೇತರ ಬೆಳೆಗಳ ಪ್ರದೇಶ. ೨.೪೦.೬೨೮ ಹೆಕ್ಟೇರುಗಳು. ಭತ್ತ, ಜೋಳ, ರಾಗಿ, ಸಾಸಿವಿ ದ್ವಿದಳ ಧಾನ್ಯಗಳಾದ ಕಬ್ಬು, ತೆಂಗು, ಕಡಲೆಕಾಯಿ, ಹತ್ತಿ, ಬಾಳೆ ಮುಸುಕಿನ ಜೋಳ, ನಿಂಬೆ ಮಾವು ಮೆಣಸಿನಕಾಯಿ, ಈರುಳ್ಳಿ, ಟೊಮೊಟೊ, ಬದನೆ ಬೆಳೆಯಾಗುತ್ತಿದೆ.

೧.೪ ಐತಿಹಾಸಿಕ ಯುಗ:

ಬಳ್ಳಾರಿ ಜಿಲ್ಲೆ ಸಮೃದ್ಧ ಇತಿಹಾಸವನ್ನು ಒಳಗೊಂಡಿರುವ ಅಪರೂಪದ ಜಿಲ್ಲೆಗಳಲ್ಲಿ ಒಂದಾಗಿದೆ. ಇತಿಹಾಸವೆಂದಾಕ್ಷಣ ಚಕ್ರವರ್ತಿಗಳು. ರಾಜಮಹಾರಾಜರುಗಳು ಸಾಮಂತ,

ಅರಸರು, ದಂಡ ನಾಯಕರು, ನಾಯಕ ಮಣಿಗಳು ಮಂಡಲಾಧೀಶ್ವರರು, ಪಾಳಯಪಟ್ಟುಗಳ ಒಡೆಯರಾದ ಪಾಳೆಯಗಾರರು. ಅಗ್ರೇಸರರು ಅಧೀನ ಅರಸರುಗಳು. ಕೋಟೆ ಕೊತ್ತಲುಗಳು, ಯುದ್ಧ ಕಾದಾಡಿ, ಸಂಧಿ, ಸಂಬಂಧ, ಶೌರ್ಯ ಸಾಹಸಿಗಳು, ದಾನ ಬಲಿದಾನ ದತ್ತಿ ಇವೇ ಮೊದಲಾದವು ಕಣ್ಮುಂದೆ ಸುಳಿಯುತ್ತದೆ. ಅವುಗಳ ಇತಿಹಾಸ ಒಂದು ಜನಾಂಗದ ಮತ್ತು ಆ ನಾಡಿನ ಇತಿಹಾಸವಾಗಿದೆ.

ಜಿಲ್ಲೆಯ ಇತಿಹಾಸ ಮೌರ್ಯರ ಕಾಲದಿಂದ ಆರಂಭವಾಗುತ್ತದೆ. ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆಯ ಬಳಿಯ ನಿಟ್ಟೂರಿನಲ್ಲಿ ಇತ್ತೀಚೆಗೆ (೧೯೭೭) ಅಶೋಕನ ಎರಡು ಶಾಸನಗಳು ದೊರೆತಿವೆ. ಶಾತವಾಹನರು ಮೂಲತಃ ಬಳ್ಳಾರಿ ಜಿಲ್ಲೆಗೆ ಸೇರಿದವರೆಂಬುದು ಕೆಲವು ಇತಿಹಾಸಕಾರರ ಅಭಿಪ್ರಾಯವಾಗಿದೆ. ಚಾಲುಕ್ಯರ ಕಾಲದಲ್ಲಿ ಕೆಲವು ಕಾಲ ಹೊಸಪೇಟೆ ತಾಲೂಕಿನ ಅಲ್ಲಿಯ ಪ್ರಾಂತೀಯ ರಾಜಧಾನಿಯಾಗಿಟ್ಟಿತು. ಮುಂದೆ ಈ ಕಾಲದ ಕೊನೆಯಲ್ಲಿ ಪ್ರಸಿದ್ಧವಾಗಿ ಮೆರೆದ ಕಮ್ಮಟ ಅಥವಾ ಕಂಪಿಲಿ ಸಂಸ್ಥಾನದ ರಾಜಧಾನಿ ಇದ್ದುದ್ದು, ಈ ಜಿಲ್ಲೆಯಲ್ಲಿಯೇ. ಮಹಮ್ಮದ್ ಬೀನ್ ತೊಗಲಕ್ ಕಾಲದಲ್ಲಿ ಅಂತಿಮವಾಗಿ ಇದು ಪಾತನಗೊಂಡಿತು. ಮುಂದೆ ಸುಮಾರು ೩೦೦ ವರ್ಷಗಳ ಕಾಲ ಇಡೀ ದಕ್ಷಿಣ ಭಾರತವನ್ನು ಒಳಗೊಂಡು ಅಳಿದ ವಿಜಯನಗರ ಮಹಾಸಾಮ್ರಾಜ್ಯದ ರಾಜಧಾನಿ ಜಿಲ್ಲೆಯ ಹಂಪಿಯಲ್ಲಿ ನೆಲೆಗೊಂಡಿತು. ೧೫೬೫ರ ರಕ್ಕಸತಂಗಡಿ ಕದನದಲ್ಲಿ ವಿಜಯನಗರ ಅರಸರು ಸೋತ ಮೇಲೆ ವಿಜಯನಗರ ಹಾಳು ಹಂಪಿಯಾಯಿತು. ಅನಂತರ ಜಿಲ್ಲೆಯ ಆದಿಲ್‌ಶಾಹೀ ಸುಲ್ತಾನರ ಮತ್ತು ಹಲವು ಪಾಳಯಗಾರರ ಆಳ್ವಿಕೆಗೆ ಒಳಪಟ್ಟಿತು. ತರುವಾಯ ಮರಾಠರು ಮುಗಲರು ಇಲ್ಲಿ ಅಧಿಪತ್ಯ ನಡೆಸಿದರು. ಮೈಸೂರಿನ ಹೈದರ್‌ಅಲಿ ಮತ್ತು ಟಿಪ್ಪು ಸುಲ್ತಾನ್ ಜಿಲ್ಲೆಯನ್ನು ಸಂಪೂರ್ಣವಾಗಿ ತಮ್ಮ ಅಧೀನದಲ್ಲಿಟ್ಟುಕೊಂಡಿದ್ದರು.

ಪ್ರಾಚೀನ ಕಾಲದಲ್ಲಿ ಬಳ್ಳಾರಿ ಜಿಲ್ಲೆಯ ಕೋಗಳಿ, ಬಾಗಳಿ, ಸಂಡೂರು, ಕುರುಗೋಡು ಕುಡಿತಿನಿ, ವೇಲಿಗೇರಿ ಮುಂತಾದ ಜೈನರ ಪವಿತ್ರ ಪುಣ್ಯಕ್ಷೇತ್ರಗಳಾಗಿ ಪ್ರಸಿದ್ಧಿಯಾಗಿವೆ. ಜಿಲ್ಲೆಯ ಇಂದಿನ ಮೊರಿಗೇರಿ ಹಿಂದೆ ಜೈನರ ಪವಿತ್ರ ನೆಲೆಯಾಗಿರಲು ಸಾಕು ಚಂದ್ರಗುಪ್ತ ಮೌರ್ಯನು ಅಲ್ಲಿ ಕಾಲವಾದ್ದರಿಂದ ಆ ಸ್ಥಳಕ್ಕೆ ಮೌರ್ಯಕೇರಿ, ಮೌರ್ಯಗೇರಿ ಮೋರಿಗೇರಿ ಎಂಬ ಹೆಸರು ಬಂದಿರಬಹುದೆಂದು ಊಹಿಸಲು ಸಾಧ್ಯವಾಗುತ್ತದೆ. ಮೊರಿಗೇರಿಯ ಹತ್ತಿರದಲ್ಲಿಯೇ 'ವಡ್ಡಾರಾಧನೆ'ಯ ಕತೃ ಶಿವಕೋಟಾಚಾರ್ಯನ ಕೋಗಳಿ ನಾಡುಂಟು; ಕೋಗಳಿಯನ್ನೇ ಪ್ರಸಿದ್ಧ ಜೈನ ಪುಣ್ಯ ಕ್ಷೇತ್ರಗಳೆಂದು ನಿರ್ಧರಿಸಲು ಹಲವು ಸಾಕ್ಷಾಧಾರಗಳಿಂದ

ಸಾಧ್ಯವಾಗಿದೆ. ಅನೇಕ ಬಸದಿಗಳು ಇಂದಿಗೂ ನಾವು ಅಲ್ಲಿ ಕಾಣಬಹುದಾಗಿದೆ. ನೊಳಂಬರ ಕಾಲದ ಶಿಲಾಶಾಸನ ಜಿಲ್ಲೆಯ ಹಿಂದಿನ ರಾಯದುರ್ಗ ತಾಲೂಕಿನ 'ಕಲುಗೊಡು'ವಿನಲ್ಲಿ ದೊರೆತಿದೆ. ಕಾಲ ಶಕ ವರ್ಷ ೮೯. ಅರಸ ಮಯ್ಯುಮ್ಮರಸ ಅಲ್ಲದೆ ಬಳ್ಳಾರಿ ತಾಲೂಕಿನ 'ಕಲ್ಕಂಭ'ದಲ್ಲಿ ಎರಡು ಶಾಸನಗಳು ಲಭ್ಯವಿವೆ. ಕಾಲ ಕ್ರಿ.ಶ. ೧೦೨೮ ಅರಸ, ನೊಳಂಬ ಪಲ್ಲವ ಜಗದೇಕಮಲ್ಲ. ಮತ್ತೊಂದು ಶಾಸನದ ಕಾಲ ಕ್ರಿ.ಶ. ೧೦೪೯. ಅರಸ ತ್ರೈಲೋಕ್ಯಮಲ್ಲ-ನನ್ನಿ-ನೊಳಂಬಪಲ್ಲವ.

೩.೫ ಆಂಗ್ಲರ ಅವಧಿಯಲ್ಲಿ ಜಿಲ್ಲಾ ಆಡಳಿತ

ಮೇಜರ್ ಮನ್ರೋ ಎಂಬ ಆಂಗ್ಲ ಅಧಿಕಾರಿ ವಿಂಗಡಣೆಗೊಳ್ಳಲಿರುವ ಜಿಲ್ಲೆಗಳ ಮುಖ್ಯ ಉಸ್ತುವಾರಿ ಅಧಿಕಾರಿಯೆಂದು ನೇಮಕಗೊಂಡಿದ್ದ. ಈತನು ಜಿಲ್ಲೆಯನ್ನು ೪ ವಿಭಾಗಗಳಾಗಿ ಮಾಡಿ ತನ್ನ ಮುಖ್ಯ ನೆಲೆಯಾದ ಅನಂತಪುರ ಮತ್ತು ರಾಯದುರ್ಗಗಳನ್ನು ಉಸ್ತುವಾರಿ ತಾನೆ ವಹಿಸಿಕೊಂಡ. ಕ್ರಿ.ಶ. ೧೮೦೮ರಲ್ಲಿ ಬಳ್ಳಾರಿ ಮತ್ತು ಕಡಪಾ ಎಂದು ಬೇರೆ ಬೇರೆ ಆಡಳಿತ ಭಾಗಗಳಿದ್ದವು. ಬಳ್ಳಾರಿ ಭಾಗದಲ್ಲಿ

೧. ಧರ್ಮಾವರಂ

೨. ಪೆನುಗೊಂಡ

೩. ಹಿಂದೂಪುರ

೪. ಮಡಕಶಿರಾ

೫. ಗುತ್ತಿ

೬. ತಾಡಪತ್ರ

೭. ಅನಂತಪುರ

೮. ಬಳ್ಳಾರಿ

೯. ಹೊಸಪೇಟೆ

೧೦. ಕೂಡ್ಲಿಗಿ

೧೧. ಹಡಗಲಿ

೧೨. ಹರಪನಹಳ್ಳಿ

೧೩. ರಾಯದುರ್ಗ

೧೪. ಆಲೂರು

೧೫. ಅದವಾನಿ.

ತಾಲೂಕುಗಳನ್ನು ಒಳಗೊಂಡಿತು. ಕ್ರಿ.ಶ. ೧೯೧೦ ಅಕ್ಟೋಬರ್ ೧ ರಿಂದ ಬಳ್ಳಾರಿ ಜಿಲ್ಲೆಯಲ್ಲಿ ನಿರುಗುಪ್ಪ ಎಂಬ ಹೊಸ ತಾಲೂಕನ್ನು ರಚಿಸಲಾಯಿತು. ಈ ತಾಲೂಕಿಗೆ ಬಳ್ಳಾರಿ ತಾಲೂಕಿನ ೪೬ ಹಳ್ಳಿಗಳು ಅಡವಾನಿ ತಾಲೂಕಿನ ೨೯ ಹಳ್ಳಿಗಳು ಮತ್ತು ಆಲೂರು ತಾಲೂಕಿನ ೨೩ ಹಳ್ಳಿಗಳು ಸೇರ್ಪಡೆಯಾದವು. ಹೀಗಾಗಿ ಜಿಲ್ಲೆಯಲ್ಲಿ ಒಟ್ಟು ೯ ತಾಲೂಕುಗಳಿದ್ದವು. ಅನಂತರ ರಾಯದುರ್ಗ ಮತ್ತು ಕೂಡ್ಲಿಗಿ ತಾಲೂಕುಗಳನ್ನೊಳಗೊಂಡ ರಾಯದುರ್ಗ ವಿಭಾಗವೊಂದನ್ನು ಹೊಸದಾಗಿ ರಚಿಸಲಾಯಿತು. (೧೯೧೦ ಅಕ್ಟೋಬರ್೧)

೧೯೫೩ರ ಮಾರ್ಚ್ ೨೫ ರಂದು ಭಾರತ ಸರಕಾರವು ಆಗಿನ ಮದ್ರಾಸ್ ಪ್ರಾಂತ್ಯದ ಜಿಲ್ಲೆಗಳು ಮತ್ತು ಬಳ್ಳಾರಿ ಜಿಲ್ಲೆಯ ಕೆಲ ಭಾಗಗಳನ್ನೊಳಗೊಂಡ ಪ್ರತ್ಯೇಕ ಆಂಧ್ರಪ್ರದೇಶಕ್ಕೆ ಒಪ್ಪಿಗೆ ನೀಡಿತು.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಿಲ್ಲೆಯ ಅನೇಕ ರಾಷ್ಟ್ರ ಪ್ರೇಮಿಗಳು ಭಾಗವಹಿಸಿ ಸೆರೆವಾಸ ಅನುಭವಿಸಿದ್ದಾರೆ. ಸಂಡೂರು ತಾಲೂಕಿನ ಎತ್ತಿನಟ್ಟಿ ಗ್ರಾಮದ ಸರಳ ನಿಷ್ಠಾವಂತ ನೇತಾರ ಎಂ. ಶರಣಯ್ಯನವರು ಆರು ತಿಂಗಳ ಕಾಲ ಕಾರಾಗೃಹ ಶಿಕ್ಷೆಗೆ ಗುರಿಯಾದರು. ಅದೇ ತಾಲ್ಲೂಕಿನ ಶರಾಫರು ಕೆಲವು ಕಾಲ ಜೈಲುವಾಸ ಅನುಭವಿಸಿದರು. ೧೯೪೨ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಜಿಲ್ಲೆಗಳ ಅನೇಕ ಮಹನೀಯರು ಭಾಗವಹಿಸಿದ್ದರು.

ಅಧ್ಯಾಯ - ೨

ಸ್ಥಳನಾಮ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ – ೨

ಸ್ಥಳನಾಮ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೨.೧. ಪ್ರವೇಶ:

ಸ್ಥಳನಾಮಗಳು ಸಂಸ್ಕೃತಿಯ ಅಧ್ಯಯನದ ಪ್ರಮುಖ ಆಕರಗಳಲ್ಲಿ ಒಂದು. ಒಂದೇ ಹೆಸರಿನ ಒಂದು ಜೀವನ ಕ್ರಮದ ಚರಿತ್ರೆಯಿರುತ್ತದೆಂಬುದನ್ನು ಗಮನಿಸಬೇಕು. ಅಂದರೆ ನೇರವಾಗಿ ಜೀವನ ಕ್ರಮದ ಸಂಗತಿಗಳನ್ನು ಹೇಳುವುದಿಲ್ಲವಾದರೂ ಅದರ ಒಟ್ಟಂದವನ್ನು ಪರೋಕ್ಷ ನೆಲೆಯಲ್ಲಿ ತೆರೆದು ತೋರಿಸುವ ಮೂಲಾಧಾರವಾಗಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತವೆ. ಅದರಲ್ಲಿಯೂ ಸಂಸ್ಕೃತಿಯ ವೈವಿಧ್ಯತೆಗಳನ್ನು ಪ್ರಾದೇಶಿಕವಾಗಿ ಯಥಾಸ್ಥಿತಿಯಲ್ಲಿ ಹೇಳುವ ಅಧ್ಯಯನಕ್ಕೆ ತೊಡಗಿದಾಗ ಸ್ಥಳನಾಮಗಳನ್ನು ಉದಾಸೀನಗೊಳಿಸಲಾಗುತ್ತಿದೆ. ಈ ಬಗೆಯ ಮೂಲಾಧಾರಗಳ ಆಯ್ಕೆಯ ಮಿತಿಯಿಂದ ಸಂಸ್ಕೃತಿಯನ್ನು ಮತ್ತೊಮ್ಮೆ ಪುನಾರಚಿಸುವ ಅಗತ್ಯ ತೋರಿಬರುತ್ತದೆ. ನಮ್ಮ ಅತ್ಯಂತ ನಿಕಟ ಸಂಬಂಧವನ್ನು ಹೊಂದಿದ ಗ್ರಾಮನಾಮ, ಸ್ಥಳನಾಮಗಳಿಂದ ವಿಭಿನ್ನ ಬಗೆಯ ಸಾಂಸ್ಕೃತಿಕ ಚಹರೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಕಾರಣ ಪ್ರಾಮಾಣಿಕ ಸಾಂಸ್ಕೃತಿಕ ಪ್ರಜ್ಞೆಯುಳ್ಳ ವ್ಯಕ್ತಿಗಳು ಹಾಗೂ ಸಮಾಜ ಸ್ಥಳನಾಮಗಳನ್ನು ಆಕರಗಳೆಂದು ಭಾವಿಸುವಲ್ಲಿ ವಾಸ್ತವತೆಯ ತಳಹದಿಯಿಂದ ಸಂಸ್ಕೃತಿಯ ಅಧ್ಯಯನಕ್ಕೆ ತೊಡಗಲು ನಮಗೆ ಸಾಧ್ಯವಾಗುತ್ತದೆ. ಅಲೆಮಾರಿ ಜೀವನದಿಂದ ಆರಂಭವಾದ ಮಾನವರ ಬದುಕು ಕ್ರಮೇಣ ಒಂದೆಡೆ ನೆಲೆ ನಿಲ್ಲುವಂತಾಯಿತು. ಅಲೆಮಾರಿ ಸಮುದಾಯಗಳು ಭೌಗೋಳಿಕ ಪರಿಸರದ ಗಿಡ, ಬಂಡೆಯ ಗೂಡು, ಬೆಟ್ಟದ ಅಂಚಿನಲ್ಲಿ ತಂಗುತ್ತಿದ್ದರು. ತರುವಾಯ ನಾಗರಿಕರಾದರು. ಕೆಲವು ಹಂತಗಳಲ್ಲಿ ಅಲೆಮಾರಿತನವನ್ನೆ ತೊರೆದು ಒಂದೆಡೆ ನೆಲೆಸಲು ಆರಂಭಿಸಿದರು. ಈ ನೆಲೆಸುವಿಕೆಯ ಪ್ರಾಥಮಿಕವಾಗಿ ಒಂದೊಂದು ಗುಂಪಿನ ಮಾದರಿಯಲ್ಲಿತ್ತು. ಮುಂದೆ ಕೆಲವಾರು ಗುಂಪುಗಳು ಒಟ್ಟಿಗೆ ಬದುಕುವುದನ್ನು ಆರಂಭಿಸಿದರು. ಈ ಹಂತವನ್ನು ಸಮುದಾಯಗಳು ನೆಲೆಸುವಿಕೆಯ ಗ್ರಾಮಕಲ್ಪನೆಯ ಪೂರ್ವಸ್ಥಿತಿಯೆಂದು ತಿಳಿಯಬಹುದು. ಆಯಾ ಪ್ರಾದೇಶಿಕ ಮಟ್ಟದಲ್ಲಿ ನೆಲೆಸುವ ಸಮುದಾಯಗಳು ಆರಂಭದಲ್ಲಿ ಪ್ರಾಕೃತಿಕ ಪರಿಸರದ ಚಹರೆಯೊಂದಿಗೆ ತಮ್ಮ ನೆಲೆಗಳಿಗೆ ಹೆಸರುಗಳನ್ನು ಕರೆದುಕೊಂಡರು. ಬೆಟ್ಟ, ಗುಡ್ಡ, ಗಿಡ, ಮರ, ಕಲ್ಲು, ಮಣ್ಣು ಇವುಗಳ ಗಾಢ ಸಂಬಂಧವು ಹೆಸರುಗಳಿಗೆ ಪ್ರೇರೇಪಿಸಿರಬೇಕು. ಹೆಚ್ಚಾಗಿ ಸಮುದಾಯಗಳು

ವಾಸಿಸುತ್ತಿದ್ದುದ್ದು ಬೆಟ್ಟಗಳ ಅಂಚಿನಲ್ಲಿ ದಿನ್ನೆ ಪ್ರದೇಶಗಳಲ್ಲಿ ಮತ್ತು ತಮಗೆ ಅಗತ್ಯವಾಗಿ ಬೇರಾಧಂತಹ ನೀರಿನ ತಾಣಗಳಲ್ಲಿ, ಜಗತ್ತಿನ ಬಹುತೇಕ ಪ್ರಾಚೀನ ನಾಗರಿಕತೆಗಳು ಆರಂಭವಾದದ್ದು ನದಿ ದಂಡೆಯ ಮೇಲೆ ಎಂಬುದನ್ನು ಗಮನಿಸಿದರೆ ಸಮುದಾಯಗಳ ನೆಲೆಸುವಿಕೆಯ ಆಯ್ಕೆಯು ಸ್ಪಷ್ಟವಾಗಿ ಗೋಚರಿಸುತ್ತದೆ. ಅಂತೆಯೇ ಪಶುಪಾಲನೆ ಮತ್ತು ಕುರಿಸಾಕಾಣಿಕೆಯು ಬೆಟ್ಟಗಳಲ್ಲಿ ಬೆಟ್ಟದ ಬುನಾದಿಯಲ್ಲಿ ಅನುಕೂಲಕರವಾಗಿತ್ತು ಆ ವೃತ್ತಿಯೊಂದಿಗೆ ತಮ್ಮ ವಾಸದ ನೆಲೆಗಳನ್ನು ಅಲ್ಲಲ್ಲಿಯೆ ನಿರ್ಮಿಸಿಕೊಂಡರು. ಈ ಕಾರಣದಿಂದಾಗಿ ಪ್ರಕೃತಿಯ ಗಾಢ ಸಂಬಂಧದೊಂದಿಗೆ ತಳುಕು ಹಾಕಿಕೊಂಡು ಮಾನವರು ಆರಂಭಿಕ ಹಂತದಲ್ಲಿ ಪ್ರಕೃತಿನಿಷ್ಠ ಗ್ರಾಮನಾಮಗಳ ಉದಯಕ್ಕೆ ನಾಂದಿಯಾದರು. ಹೀಗೆ ಗ್ರಾಮ ನಾಮಗಳು ಆರಂಭಗೊಂಡವು.

ಪ್ರಕೃತಿನಿಷ್ಠ ಗ್ರಾಮ ಸಮಾಜಗಳು ಎರಡನೇ ಹಂತವು ಭೌಗೋಳಿಕ ಚಹರೆಗಳಿಂದ ಭಿನ್ನವಾಗಿ ಸಮುದಾಯ ನಿಷ್ಠವಾಗಿರುವುದು ತಿಳಿದುಬರುತ್ತದೆ. ಅಂದರೆ ಗ್ರಾಮಗಳಿಗೆ, ಸ್ಥಳಗಳಿಗೆ ಹೆಸರಿಡುವಾಗ ತಮ್ಮ ಜನಾಂಗದ ಅಥವಾ ತಮ್ಮ ಜನಾಂಗದ ವ್ಯಕ್ತಿಗಳ, ಚಾರಿತ್ರಿಕ ವ್ಯಕ್ತಿಗಳ, ಧಾರ್ಮಿಕ ವೃತ್ತಿಗಳ ಹೆಸರುಗಳನ್ನು ಕೊಡಲು ಮುಂದಾದದ್ದು ಗ್ರಾಮನಾಮಗಳ ಇತಿಹಾಸದಿಂದ ತಿಳಿದು ಬರುತ್ತದೆ. ಗ್ರಾಮನಾಮಗಳು ಆರಂಭದಲ್ಲಿ ನಿಸರ್ಗವಾಚಿಯೊಂದಿಗೆ ಹೆಸರುಗಳನ್ನು ಕರೆದುಕೊಂಡು ಕ್ರಮೇಣ ಜನಾಂಗ ವಾಚಿ ವ್ಯಕ್ತಿವಾಚಿಕೆ ಮುಂದಾದವು. ಈ ಮೂರು ಕಾಲಘಟ್ಟದಲ್ಲಿ ಒಂದು ಸ್ಥಳಕ್ಕೆ ಹೆಸರಿಡುವ ಕ್ರಮದಲ್ಲಿ ಅನೇಕ ಬಗೆಯ ಬದಲಾವಣೆಗಳಾದವು. ಈ ಬದಲಾವಣೆಯ ನಡುವಿನ ಅಂತರದಲ್ಲಿ ಸಂಸ್ಕೃತಿಗಳ, ಸಮುದಾಯಗಳ ವಿಕಾಸದ ಹಾದಿಯನ್ನು ಕಂಡುಕೊಳ್ಳಬಹುದು ಒಂದೊಂದು ಗ್ರಾಮ ಒಂದೊಂದು ಸಂಸ್ಕೃತಿಯನ್ನು ತನ್ನಲ್ಲಿ ಅರಗಿಸಿಕೊಂಡಿರುತ್ತದೆ. ಅಂತೆಯೇ ಈ ಗ್ರಾಮಗಳಿಗಿರುವ ಹೆಸರು ಆ ಸಂಸ್ಕೃತಿಯ ಅರಿಯುವಿಕೆಯ ಮೂಲಧಾತುವಾಗಿರುತ್ತದೆ. ಮುಖ್ಯವಾಗಿ ಕನ್ನಡದಲ್ಲಿ ನಡೆದಂತಹ ಸ್ಥಳನಾಮ ಅಧ್ಯಯನಗಳು ಸಾಂಸ್ಕೃತಿಕ ನಿಷ್ಠ ಮಾದರಿಯಲ್ಲಿ ಕಂಡುಬರಲಿಲ್ಲ. ಸ್ಥಳನಾಮಗಳು ಭಾಷಿಕ ಘಟಕಗಳೆಂದು ಅಧ್ಯಯನ ಮಾಡಲಾಯಿತು. ನಾಮಗಳು ಭಾಷಿಕ ಘಟಕಗಳೇ. ಆದರೂ ಒಂದು ಭಾಷೆಯಲ್ಲಿ ಒಂದು ಸಂಸ್ಕೃತಿಯು ಅಡಗಿರುವುದನ್ನು ಹಿಂದಿನ ಅಧ್ಯಾಯಗಳು ಗೌಣಗೊಳಿಸಿದವು. ೧೮ನೇ ಶತಮಾನದಲ್ಲಿ ಪಾಶ್ಚಾತ್ಯರಲ್ಲಿ ಆರಂಭವಾದ ಸ್ಥಳನಾಮ ಅಧ್ಯಯನವು ೧೯ನೇ ಶತಮಾನದ ಪೂರ್ವಾರ್ಧಗಳಲ್ಲಿ ಕನ್ನಡ ನಾಡಿನಲ್ಲಿಯೂ ಆರಂಭವಾಯಿತು. ಮೊದಲು ಪಾಶ್ಚಾತ್ಯ

ವಿದ್ವಾಂಸರು ಸ್ಥಳನಾಮಗಳನ್ನು ಭಾಷಿಕ ಘಟಕಗಳಿಂದಲೇ ವರ್ಣನಾತ್ಮಕ ಮಾದರಿಯಲ್ಲಿ ಪ್ರಯೋಗಕ್ಕೆ ಒಳಪಡಿಸಿದರು. ನಂತರದಲ್ಲಿ ಸಾಮಾಜಿಕ ಸಂಗತಿಗಳ ಕಡೆ ಗಮನ ಹರಿಸಿದರು.

೧೯೪೦ರ ದಶಕದ ತರುವಾಯ ಸ್ಥಳನಾಮಗಳನ್ನು ಅಧ್ಯಯನ ಮಾಡುವ ಶಿಸ್ತು ಬದಲಾವಣೆಯಾಯಿತು. ಶಂಬಾ ಅವರು 'ಎಡೆಗಳು ಹೇಳುವ ಕಂನಾಡ ಕತೆ'ಯ ಮೂಲಕ ಸಂಸ್ಕೃತಿಯ ಶೋಧಕ್ಕೆ ಒಳಪಡುವ ಮಾದರಿಯನ್ನು ಕನ್ನಡ ಅಧ್ಯಯನಕಾರರು ಗಂಭೀರವಾಗಿ ಚರ್ಚೆಗೆ ಎತ್ತಿಕೊಳ್ಳಲಿಲ್ಲವೆಂದು ಹೇಳಬಹುದು. ಭಾಷಾಶಾಸ್ತ್ರದ ನೆಲೆಯಲ್ಲಿ ಈ ಅಧ್ಯಯನ ಮುಂದುವರೆಯಿತು. ಕನ್ನಡ ಸ್ಥಳನಾಮಗಳು ಸಂಶೋಧನೆಯ ವಿಷಯವಾಗಿ ವಿಶ್ವವಿದ್ಯಾಲಯ ಮಟ್ಟಕ್ಕೆ ಬಂದವು. ಆರಂಭದಲ್ಲಿ ತುಳುನಾಡಿನ ಸ್ಥಳನಾಮಗಳ ಮೇಲೆ ಕೆಮ್ತೂರು ರಘುಪಟಿಭಟ್ಟ ಅವರು ಮಹಾ ಪ್ರಬಂಧವನ್ನು ಸಿದ್ಧಪಡಿಸಿದರು. ಇವರು ಭಾಷಿಕ ನೆಲೆಯಲ್ಲಿ ಸ್ಥಳನಾಮಗಳ ರಚನೆ, ಅರ್ಥನಿಷ್ಪತ್ತಿ, ಪೂರ್ವ ಮತ್ತು ಉತ್ತರ ಪದದ ಅರ್ಥ, ವರ್ಗೀಕರಣ, ಭಾಷಿಕ ಅಂಶಗಳ ಅಭಿವ್ಯಕ್ತಿ, ಈ ಮಾದರಿಯಲ್ಲಿ ಸೈದ್ಧಾಂತಿಕ ನೆಲೆಗಳಲ್ಲಿ ಚರ್ಚೆಯನ್ನು ಕೈಗೆತ್ತಿಕೊಂಡಿದ್ದಾರೆ. ಈವರೆಗೆ ಕನ್ನಡದಲ್ಲಿ ಬಂದ ಗ್ರಾಮ, ಸ್ಥಳನಾಮಗಳ ರಚನೆ, ಅರ್ಥನಿಷ್ಪತ್ತಿ, ಪೂರ್ವ ಮತ್ತು ಉತ್ತರ ಪದದ ಅರ್ಥ, ವರ್ಗೀಕರಣ, ಭಾಷಿಕ ಅಂಶಗಳ ಅಭಿವ್ಯಕ್ತಿ. ಈ ಮಾದರಿಯಲ್ಲಿ ಸೈದ್ಧಾಂತಿಕ ನೆಲೆಗಳಲ್ಲಿ ಚರ್ಚಿಸಿದರು. ಬಹುತೇಕ ಈ ಮಾದರಿಯಲ್ಲಿಯೇ ಇಂದಿನವರೆಗೂ ಅಧ್ಯಯನಗಳು ಚಾಲ್ತಿಯಲ್ಲಿವೆ. ಈವರೆಗೆ ಕನ್ನಡದಲ್ಲಿ ಬಂದ ಗ್ರಾಮ, ಸ್ಥಳನಾಮಗಳ ಚರ್ಚೆಯನ್ನು ಗಮನಿಸಿದರೆ ವರ್ಣನಾತ್ಮಕ ಮಾದರಿಯಲ್ಲಿದ್ದು, ಕೊನೆಗೆ ಒಂದು ನಿಷ್ಪತ್ತಿಯ ಕೋಶವನ್ನು ನೀಡಿರುವುದು ತಿಳಿಯುತ್ತದೆ. ಅಲ್ಲಲ್ಲಿ ಪ್ರಾಸ್ತಾವಿಕವೆಂಬಂತೆ ಅವುಗಳ ಚಾರಿತ್ರಿಕ, ಜಾನಪದ ಮತ್ತು ಸಾಮಾಜಿಕ ಅಂಶಗಳನ್ನು ಹೇಳಲಾಗಿದೆ. ಅಲ್ಲದೆ, ಸ್ಥಳನಾಮ ಅಧ್ಯಯನದಲ್ಲಿ ಇನ್ನು ಹೇಳಬಹುದಾದ ಹಲವಾರು ಸೂಕ್ಷ್ಮ ಅಂಶಗಳನ್ನು ಇದರಿಂದ ಹೊರಗಡೆ ಇಟ್ಟಿರುವುದನ್ನು ಇದುವರೆಗಿನ ಅಧ್ಯಯನಗಳ ಮೂಲಕ ಗಮನಿಸಬಹುದು. ಈ ಹಿನ್ನೆಲೆಯೊಂದಿಗೆ ಅಧ್ಯಯನದ ಮುಖ್ಯ ಉದ್ದೇಶಗಳನ್ನು ಈ ರೀತಿಯಲ್ಲಿ ವಿಂಗಡಿಸಬಹುದು.

೨.೨ ಉದ್ದೇಶ:

ಭಾರತದಲ್ಲಿ ಇಂದು ಬಹುಪಾಲು ಸ್ಥಳನಾಮಗಳು ಮೂಲ ರೂಪವನ್ನು ಕಳೆದುಕೊಂಡು ಪಾಠಾಂತರಗಳನ್ನು ಪಡೆದಿವೆ. ಇದಕ್ಕೆ ಕಾರಣವೆಂದರೆ ಅನ್ಯಭಾಷಾ ಮತ್ತು ಸಂಸ್ಕೃತಿಗಳ ಪ್ರಭಾವ. ಅವುಗಳ ಮೂಲ ಸ್ವರೂಪವನ್ನು ನಿರ್ಣಯಿಸಿ ಅವುಗಳಿಗೆ ಒಂದು ಅಚ್ಚ

ಸ್ವರೂಪವನ್ನು ಕೊಡುವುದರಿಂದ ಸಾಮಾಜಿಕ ವ್ಯವಹಾರಗಳಲ್ಲಿ ಇಂದು ನಾವು ಎದುರಿಸುತ್ತಿರುವ ಅನೇಕ ತೊಂದರೆಗಳನ್ನು ಸುಲಭವಾಗಿ ನಿವಾರಿಸಬಹುದಾಗಿದೆ. ಇತಿಹಾಸ ಮತ್ತು ಭಾಷಾಶಾಸ್ತ್ರಗಳ ಅಧ್ಯಯನದಿಂದ ಅವನ ಅಜ್ಞಾತಯುಗದ ಚರಿತ್ರೆಯನ್ನು ತಿಳಿಸಲು ಸಾಧ್ಯವಾಗುತ್ತದೆ. ಪಳಿಯುಳಿಕೆಗಳ ಆಧಾರದಿಂದ ಪ್ರಾಚೀನ ಮಾನವನ ದೈಹಿಕ ರಚನೆ, ಅನ್ನಪಾನಾದಿ ಅನ್ನ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರಕುವಂತೆ ಸ್ಥಳನಾಮಗಳ ಅಧ್ಯಯನದಿಂದ ಅವನ ಸಾಂಸ್ಕೃತಿಕ, ನಾಗರಿಕತೆ, ಅಚಾರ, ನಂಬಿಕೆ, ಭಾಷೆ ಮೊದಲಾದವುಗಳ ಮೇಲೆ ಹೆಚ್ಚಿನ ಬೆಳಕು ಬೀರಲು ಸಾಧ್ಯವಿದೆ. ಈ ದೃಷ್ಟಿಯಿಂದ ಸ್ಥಳನಾಮಾಧ್ಯಯನದ ಅಗತ್ಯತೆ ಮತ್ತು ಮಹತ್ವ ಎಷ್ಟೆಂಬುದನ್ನು ಊಹಿಸಬಹುದು.

'ಬಳ್ಳಾರಿ ತಾಲೂಕಿನ ಸ್ಥಳನಾಮಗಳು' ಎಂಬುದು ಈ ನಿಬಂಧದ ಶೀರ್ಷಿಕೆ. ಕನ್ನಡದಲ್ಲಿ ಸ್ಥಳನಾಮ ಅಧ್ಯಯನಗಳು ೮೦ರ ದಶಕದಿಂದ ವ್ಯಾಪಕವಾಗಿ ನಡೆಯುತ್ತಿವೆ. ವಿಶ್ವವಿದ್ಯಾಲಯಗಳಲ್ಲಿ ತಾಲ್ಲೂಕುವಾರು, ಜಿಲ್ಲಾವಾರು, ಕೆಲವು ಅಧ್ಯಯನಗಳಾಗಿವೆ. ಗುಲ್ಬರ್ಗಾ, ಬಳ್ಳಾರಿ, ಬೀದರ್ ಜಿಲ್ಲೆ ಹಾಗೂ ತುಳುನಾಡಿನ ಸ್ಥಳನಾಮಗಳನ್ನು ಅಧ್ಯಯನ ಮಾಡಿದ ವಿದ್ವಾಂಸರು ಸಾಂದರ್ಭಿಕವಾಗಿ ಕನ್ನಡ ಸ್ಥಳನಾಮಗಳ ಮೇಲೆ ತೆಲುಗು, ಉರ್ದು, ಮರಾಠಿ ಭಾಷೆಗಳ ಪ್ರಭಾವವನ್ನು ಗುರುತಿಸಿದ್ದಾರೆ. ಆದರೆ ಬಳ್ಳಾರಿ ಜಿಲ್ಲೆಯ ಸ್ಥಳ ನಾಮಗಳ ಬಗ್ಗೆ ಸಂಶೋಧನೆ ನಡೆದಿದ್ದು ಅಲ್ಲಿ ಯಾವುದೇ ಒಂದು ತಾಲೂಕಿನ ಸಮಗ್ರವಾದ ಸ್ಥಳನಾಮಗಳನ್ನು ಸಮಾಜೋ ಸಾಂಸ್ಕೃತಿಕ ನೆಲೆಯುಲ್ಲಿ ಅಧ್ಯಯನಗಳು ನಡೆದಿಲ್ಲ. ಇದನ್ನು ಗಮನದಲ್ಲಿಟ್ಟುಕೊಂಡು ಬಳ್ಳಾರಿ ತಾಲೂಕಿನ ಸ್ಥಳನಾಮಗಳ ಅಧ್ಯಯನದ ಕೊರತೆಯನ್ನು ತುಂಬಲು ಹಾಗೂ ಈ ಬಗೆಯ ಚರ್ಚೆಯ ಅವಶ್ಯಕತೆಯನ್ನು ಪ್ರಸ್ತುತಗೊಳಿಸಲು ಪ್ರಸ್ತುತ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಂಧ್ರದ ಗಡಿಭಾಗಕ್ಕೆ ಇರುವ ಬಳ್ಳಾರಿ ತಾಲೂಕಿನಲ್ಲಿ ತೆಲುಗು ಮಾತನಾಡುವ ಪ್ರದೇಶಗಳ ಪ್ರಭಾವ ದಟ್ಟವಾಗಿದ್ದು ಈ ನೆಲೆಯಲ್ಲಿ ದ್ವಿಭಾಷಿಕ ಪರಿಸರದ ಪರಿಚಯ ಮತ್ತು ಸ್ಥೂಲವಾದ ಅಧ್ಯಯನದ ಅಗತ್ಯವನ್ನು ಮನಗಾಣಬಹುದು.

ಬಳ್ಳಾರಿ ತಾಲೂಕಿನ ಸ್ಥಳನಾಮಗಳನ್ನು ಜಾನಪದೀಯ ನೆಲೆಯಲ್ಲಿ, ಭಾಷಿಕ ನೆಲೆಯಲ್ಲಿ ಚಾರಿತ್ರಿಕ, ಸಾಂಸ್ಕೃತಿಕ, ಪ್ರಾಕೃತಿಕ ನೆಲೆಗಳಲ್ಲಿ ಸಂಗತಿಗಳನ್ನು ಹೇಳಲಾಗಿದೆ. ಈ ಎಲ್ಲ ಗ್ರಹಿಕೆಯೊಂದಿಗೆ ಬಳ್ಳಾರಿ ತಾಲೂಕಿನ ಸಮಾಜೋ-ಸಾಂಸ್ಕೃತಿಕ ಅಂಶಗಳನ್ನು ಅನುಲಕ್ಷಿಸಿ ಈ ಅಧ್ಯಯನದಿಂದ ಕೆಲವು ವಿಭಿನ್ನ ನೆಲೆಗಳನ್ನು ಗುರುತಿಸುವುದೆಂದು ತೋರಿಬಂತು.

ಪರಿಣಾಮವಾಗಿ ಅದರ ಒಂದು ಪ್ರಯತ್ನವೇ ಪ್ರಸ್ತುತ ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು ಎಂಬ ನಿಬಂಧ.

೧. ಕನ್ನಡದಲ್ಲಿ ಈವರೆಗೆ ನಡೆದ ಉಪಲಬ್ಧ ಅಧ್ಯಾಯಗಳನ್ನು ಸಮಗ್ರವಾಗಿ ಒಂದೆಡೆ ಸೇರಿಸಿ ಸಮೀಪಿಸುವುದು.

೨. ತಾಲೂಕಿನ ಸ್ಥಳನಾಮಗಳನ್ನು ದೈವವಾಚಿ, ಜಲವಾಚಿ, ಪ್ರಕೃತಿವಾಚಿ, ವ್ಯಕ್ತಿವಾಚಿ, ಶಿಲಾವಾಚಗಳಮತೆ ವಿಂಗಡಿಸಿ, ಚರ್ಚಿಸುವುದು.

೩. ಸ್ಥಳನಾಮಗಳನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ನಿರೂಪಿಸುವುದು.

೪. ಜಾನಪದೀಯ ನೆಲೆಗಳಾದ ಗಾದೆ, ನಿರುಕ್ತಿ, ಹಾಡುಗಳು ಹಾಗೂ ಕಥೆಗಳು ಐತಿಹ್ಯದ ಮೂಲಕ ಸತ್ಯಕ್ಕೆ ಹತ್ತಿರವಾದ ಸ್ಥಳನಾಮಗಳನ್ನು ಪತ್ತೆಹಚ್ಚುವುದು.

೫. ಶಾಸನಗಳು, ಕೈಫಿಯತ್ತುಗಳು ಲಭ್ಯವಿರುವ ಸರಕಾರಿ ದಾಖಲೆಗಳ ಮೂಲಕ ಸ್ಥಳನಾಮಗಳ ಅವಸ್ಥಾಂತರದ ಕುರುಹುಗಳನ್ನು ಗುರುತಿಸುವುದು.

೬. ಸ್ಥಳನಾಮಗಳು ಕೇವಲ ನಿಘಂಟು ಅಧ್ಯಯನಗಳಾಗುವ ಮಿತಿಯಿಂದ ದೂರವಿರಿಸುವುದು.

ಮೇಲಿನ ಅಂಶಗಳು ಈ ಅಧ್ಯಯನದ ಮುಖ್ಯ ಉದ್ದೇಶಗಳಾಗಿವೆ. ಈ ಮುಖ್ಯ ಅಂಶಗಳನ್ನು ಇಟ್ಟುಕೊಂಡು ಅವರ ಅಧ್ಯಯನಗಳಡಿಯಲ್ಲಿ ವಿಸ್ತೃತವಾದ ಚರ್ಚೆಯನ್ನು ಉದಾಹರಣೆಗಳ ಸಮೇತ ಚರ್ಚೆಯನ್ನು ಮಾಡಲಾಗಿದೆ.

೨.೩ ವ್ಯಾಪ್ತಿ:

'ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು' ಎಂಬ ಈ ನಿಬಂಧದಲ್ಲಿ ಜಿಲ್ಲೆಯ ಇತರೆ ತಾಲೂಕುಗಳ ಕೆಲವು ಪ್ರಮುಖ ಸ್ಥಳನಾಮಗಳ ಪರಿಚಯವನ್ನು ಶಾಸನಗಳ ಆಧಾರದ ಮೇಲೆ ಕೈಗೊಂಡಿದ್ದೇನೆ. ಮುಖ್ಯವಾಗಿ ಬಳ್ಳಾರಿ ತಾಲ್ಲೂಕಿನ ೧೦೪ ಸ್ಥಳನಾಮಗಳು ಹಾಗೂ ಹೊಸದಾಗಿ ಊರುಗಳಿಗೆ ಹೊಂದಿಕೊಂಡಿರುವ ಕ್ಯಾಂಪ್‌ಗಳು, ತಂಡಗಳ ಬಗ್ಗೆಯೂ ಚರ್ಚಿಸಿದ್ದೇನೆ. ಕೆಲವೊಮ್ಮೆ ತಾಲೂಕಿನ ಹೊರತಾಗಿ ಜಿಲ್ಲೆ ಹಾಗೂ ಇತರೆ ಕೆಲವು ಜಿಲ್ಲೆಗಳ ಸ್ಥಳನಾಮಗಳ ಸಾಂಸ್ಕೃತಿಕ, ಸಾಮಾಜಿಕ, ಅಂಶಗಳನ್ನು ಗಮನಿಸಲಾಗಿದೆ. ಅಧ್ಯಯನದ ಉದ್ದಕ್ಕೂ ಬಳ್ಳಾರಿ ತಾಲೂಕಿನ ೧೦೪ ಸ್ಥಳನಾಮಗಳನ್ನು ಹಾಗೂ ತಾಂಡಾ ಕ್ಯಾಪ್‌ಗಳನ್ನು ಹಾಗೂ ನಿರ್ವಹಿತ ಸ್ಥಳನಾಮಗಳನ್ನು ಅಧ್ಯಯನದ ವ್ಯಾಪ್ತಿಗೆ ಸೇರಿಸಿಕೊಳ್ಳಲಾಗಿದೆ.

'ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು' ಎಂಬ ಈ ಅಧ್ಯಯನವು ಕ್ಷೇತ್ರಕಾರ್ಯ ಮತ್ತು ಕೆಲವು ಸಾಂದರ್ಭಿಕ ಗ್ರಂಥಗಳ ಅಧ್ಯಯನದಿಂದ ರೂಪಗೊಂಡಿದೆ. ಮುಖ್ಯವಾಗಿ ಕ್ಷೇತ್ರಮಾಹಿತಿ ಹಾಗೂ ಈವರೆಗೆ ಸ್ಥಳನಾಮ ಕ್ಷೇತ್ರದಲ್ಲಿ ನಡೆದ ಅಧ್ಯಯನಗಳ ಆಕರ ಗ್ರಂಥಗಳ ಮೂಲಕವೇ ಈ ನಿಬಂಧಕ್ಕೆ ಅಡಿಪಾಯ.

ಮೂಲತಃ ಅಲೆಮಾರಿ ಜೀವಿಯಾದ ಮಾನವನು ಕ್ರಮೇಣ ತನಗೆ ಸರ್ವವಿಧದಿಂದಲೂ ಅನುಕೂಲವೆಂದು ಕಂಡುಬಂದ ಸ್ಥಳನಾಮಗಳಲ್ಲಿ ನೆಲೆನಿಂತಾಗ ಅವುಗಳಿಗೆ ಅಂಕಿತನಾಮಗಳನ್ನು ನೀಡಿದ್ದಾನೆ. ಇತಿಹಾಸ ಮತ್ತು ಭಾಷಾಶಾಸ್ತ್ರಗಳ ನೆರವಿನಿಂದ ಮಾನವನ ಸೀಮಿತ ಅವಧಿಯವರೆಗಿನ ಚರಿತ್ರೆಯನ್ನು ಅರಿಯಬಹುದಾದರೆ ಸ್ಥಳನಾಮಗಳ ಅಧ್ಯಯನದಿಂದ ಅವನ ಅಜ್ಞಾತ ಯುಗದ ಚರಿತ್ರೆಯನ್ನು ತಿಳಿಯಲು ಸಾಧ್ಯವಾಗಿದೆ. ಪಳೆಯುಳಿಕೆಗಳ ಆಧಾರದಿಂದ ಪ್ರಾಚೀನ ಮಾನವನ (Pithee Anthropuseretus cynonthropus cretus) ದೈಹಿಕ ರಚನೆ, ಅನ್ನಪಾನಾದಿ ಅನ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ದೊರಕುವಂತೆ ಸ್ಥಳನಾಮಗಳ ಅಧ್ಯಯನದಿಂದ ಅವನ ಸಂಸ್ಕೃತಿ, ನಾಗರೀಕತೆ, ಆಚಾರ, ನಂಬಿಕೆ, ಭಾಷೆ ಮೊದಲಾದ ವಿಷಯಗಳ ಮೇಲೆ ಹೆಚ್ಚು ಬೆಳಕು ಬೀರಲು ಸಾಧ್ಯವಿದೆ. ಈ ದೃಷ್ಟಿಯಿಂದ ಸ್ಥಳನಾಮಾಧ್ಯಯನದ ಅಗತ್ಯತೆ ಮತ್ತು ಮಹತ್ವ ಎಷ್ಟೆಂಬುದು ಊಹಿಸಬಹುದಾಗಿದೆ. ಸ್ಥಳನಾಮಗಳನ್ನು ಕುರಿತು ಹೇಳುವ ಮಾತು ಹಲವು ಕಾರಣಗಳಿಂದ ಉಚಿತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ. ಅಲ್ಲಿಯ ಚರಿತ್ರೆ, ದೇವಾಲಯಗಳು, ಶಾಸನಗಳು, ಮಾತೃಭಾಷೆ, ಶಿವ ಶಿಕ್ಷಣಮಟ್ಟ ಸಾಮಾಜಿಕ ಜೀವನ ವಿಧಾನ, ಹಬ್ಬ ಆಚರಣೆಗಳು ಆ ಊರಿನ ವಿಶಿಷ್ಟ ಸಂಸ್ಕೃತಿ ಮುಂತಾದ ವಿವರಣೆಗಳನ್ನು ಸಾಂದರ್ಭಿಕವಾಗಿ ಗಮನಿಸಲಾಗಿದೆ. ಇದರಿಂದಾಗಿ ಗ್ರಾಮನಾಮಗಳ ಭೌಗೋಳಿಕ, ಸಾಂಸ್ಕೃತಿಕ, ಧಾರ್ಮಿಕ, ಜಾನಪದೀಯ ಆಯಾಮಗಳನ್ನು ಕಟ್ಟಿಕೊಡಲು ಸಹಕಾರಿಯಾಗಿವೆ.

ಭಾರತೀಯ ಸ್ಥಳನಾಮಗಳ ಅಧ್ಯಯನ ಒಂದು ಜಟಿಲ ಕಾರ್ಯವಾಗಿದೆ. ಸ್ಥಳಗಳು ಅಂಕಿತವನ್ನು ಹೊಂದುವಾಗ ಹಲ ಭಾಷೆಗಳ ಸಮಿಶ್ರ ಸ್ವರೂಪವನ್ನು ಪಡೆದಿದ್ದು ಸಾಂಸ್ಕೃತಿಕ ಪ್ರಸರಣ ಮತ್ತು ಸಂಪರ್ಕಗಳಿಂದಾಗಿ ಬದಲಾವಣೆಗೊಂಡು ಆಯಾ ಭಾಷೆಗಳ ಹುಟ್ಟಿನೊಂದಿಗೆ ಅವರವರ ಭಾಷೆಯಲ್ಲಿ ರೂಪ ತಳೆದು ಒಂದು ನಿರ್ದಿಷ್ಟ ಸಾಂಸ್ಕೃತಿಕ ಅರ್ಥವನ್ನು ಪಡೆದಿವೆ. ಆದಕಾರಣ ಭಾರತೀಯ ಸ್ಥಳನಾಮಗಳ ಮೇಲೆ ನಡೆದಿರುವ

ಅಧ್ಯಯನಗಳು ಯಾವುದೇ ಭಾಷೆಯ ಪರಿಮಿತ ಪರಧಿಯನ್ನು ಮೀರಿ ಭಾಷೆಯ ಮೂಲ ಸ್ವರೂಪ, ನಾಗರೀಕತೆ, ಸಾಂಸ್ಕೃತಿಕ ವಿಕಾಸ ಮತ್ತು ಜನ ಜೀವನದ ವಿವರಗಳ ಬಗೆಗೆ ವ್ಯಾಪಕ ಅರಿವಿಗೆ ಹಾದಿ ಸುಗಮಗೊಳಿಸುತ್ತೇನೆ.

೨.೪ ಅಧ್ಯಯನದ ಆಧುನಿಕ ವಿಧಾನ ಮತ್ತು ವಿಂಗಡಣೆ:

ಸ್ಥಳನಾಮಗಳ ಅಧ್ಯಯನ ಕಾರ್ಯವು ಪ್ರಾಚೀನ ಕಾಲದಿಂದಲೂ ಒಂದು ನಿಟ್ಟಿನಲ್ಲಿ ಸಾಗುತ್ತಾ ಬಂದಿದೆ. ಅವರವರು ತಮಗೆ ಸರಿಕಂಡ ರೀತಿಯಲ್ಲಿ ಒಂದು ವ್ಯವಸ್ಥೆಗೊಳಪಡಿಸಿ ಅಧ್ಯಯನ ಮಾಡಿದ್ದಾರೆ. ಪ್ರಾಯಶ: ಅವರಿಗೆಲ್ಲಾ ರೂಢಿಗತ ಸಿದ್ದಾಂತ ಎಂಬುದೊಂದು ಇರಲಿಲ್ಲ. ಅದರೆ ಇಂದು ಕಾಣಬರುವ ಅಧ್ಯಯನ ವೈಜ್ಞಾನಿಕ ನೆಲೆಯನ್ನು ಆಧರಿಸಿರುವಂಥದ್ದಾಗಿದೆ. ಹೀಗಾಗಿ ಪ್ರಾಚೀನ ಮತ್ತು ಆಧುನಿಕ ಅಧ್ಯಯನ ಪ್ರಯತ್ನಗಳಲ್ಲಿ ಸಾಕಷ್ಟು ಅಂತರ ಕಂಡು ಬರುತ್ತದೆ. ಇಂದು ಸ್ಥಳನಾಮಗಳ ವಿಶ್ಲೇಷಣೆಯು ಮುಖ್ಯವಾಗಿ ಐತಿಹಾಸಿಕ ಅಂಶಗಳು, ಶಾಸನ ಸಾಮಗ್ರಿ, ಭಾಷಾಶಾಸ್ತ್ರೀಯ ನಿಯಮಗಳು ಮೊದಲಾದವುಗಳನ್ನು ಅವಲಂಬಿಸಿದೆ. ಇಂದಿನ ಅಧ್ಯಯನ ಪದ್ಧತಿ ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಿಗೂ ಅನ್ವಯವಾಗುತ್ತದೆ. ಭಾಷಾ ವಿಜ್ಞಾನದ ಸಾಮಗ್ರಿ, ಐತಿಹಾಸಿಕ ವಿಧಾನ ಮತ್ತು ಭೌಗೋಳಿಕ ಅಧ್ಯಯನಕ್ಕೆ ಪ್ರಾಶಸ್ತ್ಯ ನೀಡಿದ್ದರೂ ಸ್ಥಳನಾಮಗಳ ವರ್ಗೀಕರಣವು ಮಾತ್ರ ಪ್ರಾದೇಶಿಕ ಸಂಸ್ಕೃತಿಯನ್ನನುಸರಿಸಿ ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ಭಿನ್ನವಾಗಿರುತ್ತದೆ. ಆದ್ದರಿಂದ ಸ್ಥಳನಾಮಗಳ ಅಧ್ಯಯನದ ಪದ್ಧತಿ ಮತ್ತು ವರ್ಗೀಕರಣದ ಕೆಲವು ಮೂಲ ತತ್ವಗಳನ್ನು ಅರಿತರೆ ಸಂಶೋಧನೆಗೆ ವೈಜ್ಞಾನಿಕ ಸ್ವರೂಪವು ದೊರೆತು ಪಾರಿಣಾಮಿಕ ಘಟ್ಟ ತಲುಪಲು ಸಹಾಯಕವಾಗಬಲ್ಲದು.

ಜರ್ಮನಿಯ ಗಾಟ್‌ಪ್ರೀಡ್ ವಿಲ್‌ಹೆಲ್ಮ್ ಲಿಬ್ನಿಜನು ೧೭೬೮ ರಲ್ಲಿ ಸ್ಥಳನಾಮ ಅರ್ಥಗರ್ಭಿತವಾದವುಗಳೆಂದು ಅವುಗಳ ಪ್ರಾಚೀನ ರೂಪಗಳಿಂದ ಅರ್ಥ ನಿರ್ಣಯಿಸಬೇಕಾದರೆ ಅಧ್ಯಯನವು ವ್ಯವಸ್ಥಿತ ಕ್ರಮದಲ್ಲಿ ನಡೆಯಬೇಕೆಂದು ಪ್ರಪ್ರಥಮವಾಗಿ ಸಾರಿದರು. ಎಲ್ಲಾ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ವಿಶಿಷ್ಟ ಮತ್ತು ಸಾಮಾನ್ಯ ಎಂಬ ಎರಡು ಘಟಕಗಳಿದ್ದು ಇವೆರಡು ಸೇರಿಕೊಂಡು ಅಯಾ ಸ್ಥಳಕ್ಕೆ ವಿಶೇಷವಾದ ಪ್ರಾಕೃತಿಕ ಇಲ್ಲವೇ ಸಾಂಸ್ಕೃತಿಕ ಹಿನ್ನೆಲೆಯ ಅರ್ಥವನ್ನು ಸೂಚಿಸುತ್ತವೆ. ಸ್ಥಳನಾಮಗಳು ನಾವು ಭಾವಿಸಿದಂತೆ ಯಾವುದೊ ಪೌರಾಣಿಕ ಕಥನ, ವಿನೋದ ಇಲ್ಲವೇ ಅಚಾತುರ್ಯಗಳನ್ನೊಳಗೊಂಡಿರುವುದಿಲ್ಲ. ಇವುಗಳ ಘಟಕಗಳಲ್ಲಿನ ಮೂಲ ಸ್ವರೂಪವನ್ನು

ಅರಿಯಲು ನಾವು ಎರಡು ವಿಧಾನಗಳನ್ನು ಅನುಸರಿಸಬಹುದೆಂದು ೧೮೭೧ ರಲ್ಲಿ ಜೆ.ಜೆ. ಎಗ್ಲಿಯು ಸೂಚಿಸಿದ್ದಾನೆ.

ಅವನ ಪ್ರಾಕಾರ ವಿಧಾನಗಳು ಈ ರೀತಿ ಇವೆ.

೧) ಐತಿಹಾಸಿಕ ದಾಖಲೆಗಳು ಮತ್ತು ಪ್ರಾದೇಶಿಕ ಭಾಷೆ, ಉಪ ಭಾಷೆಗಳ ಸಹಾಯದಿಂದ ಖಚಿತ ಹಾಗೂ ವಿಶ್ವಾಸನೀಯ ಪ್ರಾಚೀನ ಮೂಲ ರೂಪವನ್ನು ಗುರುತಿಸುವುದು.

೨) ಆಯಾ ಸಾಂಸ್ಕೃತಿಕ ವಲಯದ ಇತರೆ ಸಮಾನ ರೂಪವನ್ನು ಪರಿಶೀಲನೆ ಮಾಡಿ ಅದರ ಮೂಲ ಸ್ವರೂಪವನ್ನು ಊಹೆ ಮಾಡುವುದು.

ಇವೆರಡು ಮೂಲ ತತ್ವಗಳನ್ನಾಧರಿಸಿ ಆಯಾ ಪ್ರದೇಶದ ಸಾಂಸ್ಕೃತಿಕ ವೈಶಿಷ್ಟ್ಯಗಳಿಗನುಸಾರವಾಗಿ ನವೀನ ವಿಧಾನಗಳನ್ನು ಈಗೀಗ ಸ್ಥಳನಾಮಾಧ್ಯಯನಕ್ಕೆ ಕಲ್ಪಿಸಿಕೊಳ್ಳಲಾಗುತ್ತದೆ.

ಭಾರತೀಯ ಸ್ಥಳನಾಮಾಧ್ಯಯನಕ್ಕೆ ವಿಶೇಷವಾಗಿ ಸಹಾಕಾರಿಯಾಗಬಲ್ಲ ಐದು ಹಂತಗಳ ವಿಧಾನವನ್ನು ಡಾ: ಕೆ. ನಾಚಿ ಮುತ್ತುರವರು ಸೂಚಿಸಿದ್ದಾರೆ. ಅವು ಇಂತಿವೆ.

೧) ಸ್ಥಳನಾಮಗಳ ನೋಂದಾವಣಿ ಅಥವಾ ಸಂಗ್ರಹ (Registration or collection of the place names)

೨) ಪೂರಕ ಆಧಾರಗಳ ಶೇಖರಣೆ (Documentation)

೩) ಆಯಾ ಸ್ಥಳಗಳನ್ನು ನಿಖರವಾಗಿ ಗುರುತಿಸುವಿಕೆ (Identification)

೪) ಸ್ಥಳನಾಮಗಳ ಅಧ್ಯಯನ ಮತ್ತು ವರ್ಗೀಕರಣ (Interpritation & Classification)

೫) ಪ್ರಕಟಣೆ (Publication)

ಸ್ಥಳನಾಮ ವಿಜ್ಞಾನಿಯು ತಾನು ಅಧ್ಯಯನ ಮಾಡಲು ಉದ್ದೇಶಿಸಿರುವ ನಿರ್ದಿಷ್ಟ ವಲಯದ ಎಲ್ಲಾ ಸ್ಥಳನಾಮಗಳನ್ನು ಹಲವು ಮೂಲಗಳಿಂದ ಮೊದಲು ಸಂಗ್ರಹಿಸಿಕೊಳ್ಳಬೇಕು. ನಕಾಶೆಗಳು, ಚುನಾವಣಾ ವಲಯ ಕೈಪಿಡಿ, ಜಿಲ್ಲಾ ಜನಗಣತಿ ವರದಿ, ಅಂಚೆ ದಾಖಾಲಾತಿ, ತಾಲೂಕು ಕಛೇರಿ ನೋಂದಣಿ ಪುಸ್ತಕ ಮೊದಲಾದ ಪ್ರಕಟಿತ ಸಾಮಾಗ್ರಿ

---

೧. ಪ್ರೊ. ದೇಜಗೌ–ಸ್ಥಳನಾಮ ವ್ಯಾಸಂಗ–೧೯೯೦ (ಪು. ೧೦೧)

೨. prof. G.N. Reddy-Survey of Indian place Names - A case study Endowment lecture, Mysore, (1988)

ಸಹಾಯಕವಾಗಿರುತ್ತವೆ. ಎರಡನೆಯದಾಗಿ ಚಾರಿತ್ರಿಕ ಹಿನ್ನೆಲೆಗೆ ಸಂಬಂಧಪಟ್ಟ ಶಾಸನಗಳು, ಸ್ಮಾರಕಗಳು, ವಂಶಾವಳಿಗಳು, ಕೈಪಿಯತ್ತುಗಳು, ಭೌಗೋಳಿಕ ಸಂಗತಿಯನ್ನರಹುವ ಗ್ರಂಥಗಳು, ಪುರಾಣ, ಪ್ರಬಂಧ ಇತ್ಯಾದಿ ಸಾಮಗ್ರಿಯನ್ನು ಖಚಿತವಾಗಿ ಸಂಗ್ರಹಿಸಿಕೊಳ್ಳಬೇಕು. ಮೂರನೆಯದಾಗಿ, ಆಯಾ ಸ್ಥಳಗಳು ಇರುವ ನೆಲೆಗಳನ್ನು ಖಚಿತವಾಗಿ ಗುರುತಿಸಿಕೊಳ್ಳುವುದು, ಅವುಗಳ ಪ್ರಾಕೃತಿಕ ಹಾಗೂ ಭೌಗೋಳಿಕ ಪರಿಸರವನ್ನು ಭೂಪಟಗಳ ಮುಖೇನ ಅರಿತುಕೊಳ್ಳಬೇಕಾದ್ದು ಅವಶ್ಯಕ. ಸ್ಥಳನಾಮಗಳ ವಿವರವಾದ ಅಧ್ಯಯನ ನಾಲ್ಕನೆಯ ಹಂತದ ಅಧ್ಯಯನ ಪದ್ಧತಿಯಾಗಿದೆ. ಸ್ಥಳನಾಮಾಧ್ಯಯನ ನಿರತನಾದವನು ಸ್ಥಳಗಳ ಪರಿವೀಕ್ಷಣಾ ಕಾರ್ಯವನ್ನು ವಸ್ತು ನಿಷ್ಠವಾಗಿ ಮಾಡದೆ ತೆಗೆದುಕೊಳ್ಳುವ ನಿರ್ಣಯಗಳು ಪ್ರಮಾದಕ್ಕೆ ಅವಕಾಶ ನೀಡುವುದರಿಂದ ಸ್ಥಳ ಪರಿವೀಕ್ಷಣೆ ಅತ್ಯಾವಶ್ಯಕ ಅಂಗವೆಂದು ಭಾವಿಸಬೇಕು. ಸ್ಥಳ ಪರಿವೀಕ್ಷಣಾ ಕಾರ್ಯಕ್ಕೆ ನೆರವಾಗಬಲ್ಲ ಒಂದು ಮಾದರಿ ಪ್ರಶ್ನಾವಳಿ (Questionnaire)ಯನ್ನು ಪ್ರೋ: ದೇ.ಜೆ.ಗೌ ರವರು ಸೂಚಿಸಿದ್ದಾರೆ.[೧] ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ ೨೩ ಅಂಶಗಳ ಒಂದು ಪ್ರಶ್ನಾವಳಿಯನ್ನು ಸಿದ್ಧಪಡಿಸಿದೆ.[೨] ಈ ರೀತಿಯ ಮಾಹಿತಿ ಸಂಗ್ರಹಣದ ಬಳಿಕ ಸ್ಥಳನಾಮಾಭ್ಯಸಿಯು ತಾನು ನಿಗಧಿ ಪಡಿಸಿಕೊಂಡ ಕಾರ್ಯವ್ಯಾಪ್ತಿಯನ್ನು ಅನುಲಕ್ಷಿಸಿ ವಸ್ತುನಿಷ್ಠ ಅಧ್ಯಯನಕ್ಕೆ ಮೊದಲಾಗಬೇಕು. ಸ್ಥಳನಾಮಗಳನ್ನು ಸಾಮಾಜಿಕ, ಭಾಷಾ ವೈಜ್ಞಾನಿಕ, ಐತಿಹಾಸಿಕ, ಸಾಂಸ್ಕೃತಿಕ, ಜನಾಂಗಿಕ, ಜಾನಾಪದೀಯವೇ ಮುಂತಾದ ದೃಷ್ಟಿಕೋನಗಳಿಂದ ಅಭ್ಯಸಿಸುವುದು ಎಲ್ಲೆಡೆ ಕಂಡು ಬರುತ್ತದೆ. ಕೆಲವೊಮ್ಮೆ ಒಂದು ಕಾಲಮಾನದ ಶಾಸನೋಕ್ತ ಸ್ಥಳನಾಮಗಳನ್ನು ಅಥವಾ ಸಾಹಿತ್ಯ ಕೃತಿಗಳಲ್ಲಿ ಕಂಡು ಬರುವ ಸ್ಥಳನಾಮಗಳನ್ನು ಅಧ್ಯಯನಕ್ಕೆ ಆರಿಸಿಕೊಂಡಿರುವುದುಂಟು. ಬಿಡಿಬಿಡಿಯಾದ ಕೆಲವೇ ಸ್ಥಳನಾಮಗಳ ಅಧ್ಯಯನಕ್ಕಿಂತ ಈ ಬಗೆಯ ಅಧ್ಯಯನ ನಿರೀಕ್ಷಿತ ಫಲವನ್ನು ತಂದುಕೊಡಬಲ್ಲದಾಗಿದೆ. ಮೇಲಾಗಿ ಇಂತಹ ಅಧ್ಯಯನಕ್ಕೆ ಕಂಪ್ಯೂಟರ್‌ನ ಸಹಾಯವನ್ನು ಪಡೆದು ಶ್ರಮ ತಗ್ಗಿಸಿಕೊಳ್ಳಬಹುದು.

ವಿದೇಶಗಳಲ್ಲಿ ಸ್ಥಳನಾಮಗಳ ಅಕಾರಾದಿ ಸೂಚನಾ ಪಟ್ಟಿ, ಪ್ರಮುಖ ಸ್ಥಳನಾಮ ಘಟಕ ಸೂಚಿಕೆಗಳು ಇವುಗಳನ್ನು ಕಂಪ್ಯೂಟರಿನ ಸಹಾಯದಿಂದ ವಿಶ್ಲೇಷಿಸಿ ಪ್ರತ್ಯೇಕವಾಗಿ

---

೩. Dr. Srinivas Havanoor-Computer Analysis for the study of place names Studies in Indian place-Names Vol. IX, Mysore (1988)

೪. H.D. Sankalia - Studies in the Historical and cultural geography and Ethnography of Gujarath, Poona Deccan College, 1949 (p-3).

ವಿಂಗಡಿಸಿ ಪ್ರಕಟಿಸಿ ಪಚುರಗೊಳಿಸುತ್ತಿದ್ದಾರೆ. ನಮ್ಮಲ್ಲಿ ಇಂಥ ಕಾರ್ಯ ವಿಧಾನ ಬಳಕೆಗೆ ಬರುವುದು ಅವಶ್ಯವೆನಿಸಿದೆ. ಡಾ. ಶ್ರೀನಿವಾಸ ಹಾವನೂರುರವರು ಸ್ಥಳನಾಮಾಧ್ಯಯನಕ್ಕೆ ಕಂಪ್ಯೂಟರ್ ಬಳಕೆ ಹೇಗೆ ಎಂಬ ಬಗ್ಗೆ ಲೇಖನವೊಂದನ್ನು ಪ್ರಕಟಿಸಿದ್ದಾರೆ.[೩]

ಆಯಾದೇಶ ಮತ್ತು ಪ್ರದೇಶಗಳ ಇತಿಹಾಸ ಮತ್ತು ಸಂಸ್ಕೃತಿಗಳನ್ನು ಅವಲಂಬಿಸಿ ಸ್ಥಳನಾಮಗಳ ವರ್ಗೀಕರಣವನ್ನು ಮಾಡಿಕೊಳ್ಳಲಾಗಿದೆ. ಸಾಂಸ್ಕೃತಿಕ ನಾಮ (Cultural Names) ಮತ್ತು ಪ್ರಾಕೃತಿಕ ನಾಮ (Natural Names) ಎಂಬುದಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ಥಳನಾಮಗಳನ್ನು ವಿಂಗಡಿಸುತ್ತಾರೆ. ಈ ರೀತಿಯ ವಿಶ್ಲೇಷಣಾ ಕ್ರಮ ಸಾಮಾನ್ಯವಾಗಿ ಎಲ್ಲಾ ದೇಶಗಳಿಗೂ ಅನ್ವಯಿಸುತ್ತವೆ. ಬಾಷೆ ಮತ್ತು ಸಂಸ್ಕೃತಿಗಳ ಆಧಾರದ ಮೇಲೆ ಇವುಗಳಲ್ಲಿ ಉಪ ವಿಭಾಗಗಳನ್ನು ಮಾಡಿಕೊಳ್ಳಬಹುದಾಗಿದೆ.

ಭಾರತೀಯ ಸ್ಥಳನಾಮಗಳನ್ನು ಆರು ಬಗೆಯಾಗಿ ವಿಂಗಡಿಸಬಹುದೆಂದು ಶ್ರೀ. ಎಚ್.ಡಿ. ಸಂಕಾಲಿಯವರು ಸೂಚಿಸಿದ್ದಾರೆ. (೧೯೪೯)[೪]

೧) ಭೂತ, ಪ್ರೇತ, ವ್ಯಕ್ತಿತ್ವ, ದೇವತೆ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ

೨) ಆಚರಣೆ, ನಂಬಿಕೆ ಮತ್ತು ಸಂಪ್ರದಾಯ

೩) ಭೂಲಕ್ಷಣ ಸೂಚಕ

೪) ಸಸ್ಯ,ಹಾಗೂ ಪ್ರಾಣಿವಾಚಿಕ

೫) ವಿಶೇಷತೆ ಪಡೆದ ಘಟನೆ, ಸನ್ನಿವೇಶ ಮತ್ತು ಸಂದರ್ಭವಾಚಕ

೬) ಪುನರುಕ್ತೀಕರಣ.

ಸ್ಥಳನಾಮಗಳು ಹೀಗೆ ನಿರ್ದಿಷ್ಟವಾಗಿ ಒಂದೇ ವರ್ಗಕ್ಕೆ ಸಂಬಂಧಪಟ್ಟಿರುತ್ತವೆ ಎಂದೇನೂ ಹೇಳಲಾಗದು. ಕೆಲವು ಸಲ ಎರಡೆರೆಡು ವರ್ಗಗಳಿಗೂ ಸಂಬಂಧಪಟ್ಟಿರಬಹುದಾದ ಪ್ರಮೇಯಗಳುಂಟು. ಶ್ರೀ.ಎಸ್ .ಚಟರ್ಜಿ ಯವರು ಸ್ಥಳನಾಮಗಳನ್ನು ಐದು ಬಗೆಯಾಗಿ ವಿಂಗಡಿಸಿದ್ದಾರೆ. ೧. ಜನಾಂಗ ಅಥವಾ ಜಾತಿ

---

೫. H.D. Sankalia - Studies in the Historical and cultural geography and Ethnography of Gujarath, Poona Deccan College, 1949 (p-59).

೬. Ramachandra Chettiyar - Place Names in Tamilnadu in JOMGA (Journal of Madras geographical Association) XIII, 1939 (p-35)

ವಾಚಕ ೨. ಪ್ರಾಕೃತಿಕ ವೈಲಕ್ಷಣ ಸೂಚಕ ೩. ಧಾರ್ಮಿಕ ೪. ಘಟನಾವಳಿ ಆಧಾರಿತ ೫. ಅನುಕರಣಮೂಲ.

ಸ್ಥಳನಾಮ ಅಧ್ಯಯನದಲ್ಲಿ ಇನ್ನೂ ಕೆಲವಾರು ತತ್ವಗಳನ್ನು ಅನುಸರಿಸಬೇಕಾಗುತ್ತದೆ ಎನ್ನುವುದು ಸಂಕಾಲಿಯರವರ ಅಭಿಪ್ರಾಯವಾಗಿದೆ.[೫] It is worth investigating what the ancient territorial divisions were. How for the natural boundaries such as rivers and mountains were taken into consideration in defining unit like a Taluk, a District or a province

ಭಾರತೀಯ ಸ್ಥಳನಾಮಗಳ ಅಧ್ಯಯನ ಕಾರ್ಯ ಮುಂದುವರೆದಂತೆಲ್ಲಾ ವರ್ಗೀಕರಣ ಮತ್ತು ಅಧ್ಯಯನ ಪದ್ಧತಿಗಳಲ್ಲಿ ನೂತನ ಅವಿಷ್ಕಾರಗಳು ಮೂಡಿಬಂದು ಇದಮಿತ್ಥಂ ಎಂದು ಹೇಳಲಾಗುವುದಿಲ್ಲ. ಆಯಾ ಪ್ರದೇಶದ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ವೈಲಕ್ಷಣಗಳನ್ನವಲಂಭಿಸಿ ಸ್ಥಳನಾಮ ಶಾಸ್ತ್ರಜ್ಞನು ವಿವೇಚನೆಯಿಂದ ಪರಿಷ್ಕಾರ ನೀಡಬೇಕಾಗುತ್ತದೆ.

೨.೫ ಸ್ಥಳನಾಮ ವಿಜ್ಞಾನ ಮತ್ತು ಇತರ ಕ್ಷೇತ್ರಗಳ ಪರಸ್ಪರ ಸಂಬಂಧ:

ಸ್ಥಳನಾಮ ವಿಜ್ಞಾನವು ಇತರ ಅನೇಕ ಕ್ಷೇತ್ರಗಳೊಡನೆ ನೇರ ಸಂಪರ್ಕ ಹೊಂದಿರುವುದರಿಂದ ಸ್ಥಳನಾಮಗಳಿಗೆ ಹೆಸರುಗಳನ್ನು ನೀಡುವಾಗ ಅಲ್ಲಿನ ನಿವಾಸಿಗಳಿಗೆ ಇದ್ದಿರಬಹುದಾದ ಮನೋಭೂಮಿಕೆಯನ್ನು ಕುರಿತು ಚಿಂತಿಸಬೇಕಾದುದು ಸ್ಥಳನಾಮ ಶಾಸ್ತ್ರಜ್ಞನ ಕರ್ತವ್ಯವಾಗುತ್ತದೆ. 'If the place name is natural object the first disciverer is responsible for its name, if it is an artificial one, like human habitation, the person responsible for its existence has something to do with the giving of a name to it.[6]

ಭೌತಿಕ ಲಕ್ಷಣಗಳನ್ನು ಸೂಕ್ಷ್ಮವಾಗಿ ಅಭ್ಯಸಿಸಿ ವರ್ಗೀಕರಿಸಿಕೊಂಡು ಅಲ್ಲಿಯ ನಿವಾಸಿಗಳ ವೃತ್ತಿ, ಆಚಾರ, ವಿಚಾರ, ರೀತಿ-ನೀತಿ, ನಡೆವಳಿಕೆ, ಪರಿಸರ, ಗಿಡಗಾಡು ಮುಂತಾದವುಗಳೆಡೆಗೂ ದೃಷ್ಟಿ ಹರಿಸಬೇಕಾಗುತ್ತದೆ. ಎಲ್ಲ ಸ್ಥಳನಾಮಗಳಲ್ಲಿ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ಘಟಕಗಳು ಸೇರಿಕೊಂಡಿರುತ್ತವೆ. ಆದಕಾರಣ ಮಾನವಿಕ ವಿಜ್ಞಾನ ಕ್ಷೇತ್ರಗಳಾದ ಇತಿಹಾಸ (History), ಪುರಾತತ್ವಶಾಸ್ತ್ರ (Archaeology) ಶಾಸನಶಾಸ್ತ್ರ (Epigraphy) ಮಾನವಕುಲಶಾಸ್ತ್ರ (Cultural Anthropology) ಸಮಾಜಶಾಸ್ತ್ರ (Sociology)

ಸಾಹಿತ್ಯ (Literature) ಭಾಷಾಶಾಸ್ತ್ರ (Linguistics) ಜಾನಪದ (Folklore), ಧರ್ಮ (Religion), ಪುರಾಣ (Mythology), ಮುಂತಾದವು ಸ್ಥಳನಾಮಾಧ್ಯಯನಕ್ಕೆ ಹೆಚ್ಚು ಸಾಮಗ್ರಿಯನ್ನು ನೀಡುತ್ತವೆ. ಸ್ಥಳನಾಮ ವಿಜ್ಞಾನಿಯು ಈ ವಿಷಯಗಳಲ್ಲಿ ಹೆಚ್ಚಿನ ಆಳವಾದ ಪರಿಶ್ರಮ ಹೊಂದಿದಾಗ ಮಾತ್ರ ಅವನ ಸ್ಥಳನಾಮ ವಿವರಣೆಗೆ ಹೆಚ್ಚಿನ ಖಚಿತತೆ ಬರುತ್ತದೆ. ಅಂತೆಯೇ ಪ್ರಾಕೃತಿಕ ವಿಜ್ಞಾನ ಕ್ಷೇತ್ರಗಳಾದ ಭೂಗೋಳ ಪ್ರಾಣಿಶಾಸ್ತ್ರ (Zoology) ಸಸ್ಯಶಾಸ್ತ್ರ (Botany) ಮೊದಲಾದವುಗಳಲ್ಲಿನ ಭೂವಿವರ, ಸಸ್ಯ ಮತ್ತು ಪ್ರಾಣಿಗಳ ವರ್ಗೀಕರಣದ ಅರಿವು ಹೊಂದಿದ್ದರೆ ತಾನು ಗ್ರಹಿಸಿರುವುದನ್ನು ಬೇರೆಯವರಿಗೆ ವಿವರಿಸಲು ಸಮರ್ಥನಾಗುತ್ತಾನೆ. ಈ ಎಲ್ಲ ಕಾರಣಗಳಿಂದಾಗಿ ಸ್ಥಳನಾಮ ವಿಜ್ಞಾನ ಕ್ಷೇತ್ರದ ಬೆಳವಣಿಗೆ ಸಾಂಘಿಕ ಪ್ರಯತ್ನಗಳಿಂದ ಹೆಚ್ಚು ಸುಗಮವಾಗಬಲ್ಲದು.

ಅಧ್ಯಾಯ – ೭

ಸ್ಥಳನಾಮ ಅಧ್ಯಯನದ ಗ್ರಂಥಸಮೀಕ್ಷೆ

ಅಧ್ಯಾಯ – ೩

ಸ್ಥಳನಾಮ ಅಧ್ಯಯನ ಗ್ರಂಥ ಸಮೀಕ್ಷೆ

೩.೧. ಪ್ರವೇಶ:

ಜರ್ಮನಿಯ ಗಾಡ್ ಪ್ರೀಡ್ ಲೀಬ್ನಿಜ್ ಕ್ರಿ.ಶ. ೧೭೬೮ ರಲ್ಲಿ ಕೆಲವು ಲೇಖನಗಳನ್ನು ಪ್ರಕಟ ಮಾಡಿ ಸ್ಥಳನಾಮಗಳ ಸಾಂಸ್ಕೃತಿಕ ಮಹತ್ವ ಮತ್ತು ಅವುಗಳ ಅಧ್ಯಯನದ ಅವಶ್ಯಕತೆಯನ್ನು ಕುರಿತು ಪ್ರಸ್ತಾಪಿಸುತ್ತಾ, ಸ್ಥಳನಾಮಗಳು ಅರ್ಥಗರ್ಭಿತವಾದವುಗಳೆಂದೂ, ಅವುಗಳ ಪ್ರಾಚೀನ ರೂಪದಿಂದ ಅರ್ಥಗಳನ್ನು ನಿರ್ಣಯಿಸಬಹುದೆಂದೂ ಪ್ರಪ್ರಥಮವಾಗಿ ಪ್ರತಿಪಾದಿಸಿದನು. ಈ ಕೊಡುಗೆಯಿಂದಾಗಿ ಲೀಬ್ನಿಜನು "ಸ್ಥಳನಾಮ ವಿಜ್ಞಾನದ ಪಿತಾಮಹ"ನೆಂದು ಪ್ರಸಿದ್ಧಿ ಹೊಂದಿದ್ದಾನೆ. ಈ ಹೊತ್ತಿಗಾಗಲೇ ಯೂರೋಪಿನ ಗ್ರಾಮಗಳ ಪ್ರಾಚೀನ ನಾಮಗಳಲ್ಲಿ ಹಲವು ಕಣ್ಮರೆಯಾಗಿದ್ದವು. ಇಂತಹ ವೇಳೆಯಲ್ಲಿ ಸ್ಥಳನಾಮ ವಿಜ್ಞಾನದ ಬೆಳವಣಿಗೆಗೆ ಭದ್ರ ಬುನಾದಿ ಹಾಕಿದವನೆಂದರೆ ಇಂಗ್ಲೆಂಡಿನ ಸ್ಕೀಟ್ ಮಹಾನುಭಾವ.

೧೯ನೇ ಶತಮಾನದಲ್ಲಿ ಉತ್ತರಾರ್ಧದಲ್ಲಿ ಐರೋಪ್ಯ ರಾಷ್ಟ್ರಗಳಲ್ಲಿ ಸ್ಥಳನಾಮ ಅಧ್ಯಯನದ ಬಗ್ಗೆ ವಿಶೇಷ ಜಿಜ್ಞಾಸೆ ಮೂಡಿ ಅವುಗಳ ಅಧ್ಯಯನದ ಸುವ್ಯವಸ್ಥಿತ ಸಂಶೋಧನಾ ಕಾರ್ಯದ ಯುಗವು ಆರಂಭವಾಯಿತು. ನಾಮ ವಿಜ್ಞಾನದಲ್ಲಿ ವ್ಯಕ್ತಿನಾಮ ವಿಜ್ಞಾನ (Anghro Ponomy) ಮತ್ತು ಸ್ಥಳನಾಮ (Toponomy) ಎಂಬ ಎರಡು ಪ್ರತ್ಯೇಕವಾದ ಅಧ್ಯಯನ ಕ್ಷೇತ್ರಗಳನ್ನು ಕಾಣುತ್ತೇವೆ. ವ್ಯಕ್ತಿನಾಮ ವಿಜ್ಞಾನವು ಅಂಕಿತನಾಮ (Proper Nouns) ಕುಲನಾಮ (Surnames) ಮತ್ತು ಅನ್ವರ್ಥನಾಮ (Nicknames)ಗಳನ್ನು ಪ್ರಧಾನವಾಗಿ ಅಭ್ಯಾಸಿಸುವಂತ ಶಾಸ್ತ್ರವಾಗಿ ಬೆಳೆದು ಸ್ಥಳನಾಮ ವಿಜ್ಞಾನವು ಪ್ರಾಕೃತಿಕ ನಾಮ (Natural Names) ಮತ್ತು ಸಾಂಸ್ಕೃತಿಕ ನಾಮ (Cultural Names)ಗಳನ್ನು ಅಭ್ಯಸಿಸುವ ಕ್ಷೇತ್ರವಾಗಿ ಬೆಳೆಯಿತು.

ಸ್ಥಳನಾಮ ಸಂಶೋಧನೆ ಮತ್ತು ಅದರ ವೈಜ್ಞಾನಿಕ ಪ್ರಗತಿಗೆ ಪ್ರೋತ್ಸಾಹ ದೊರೆತಿದ್ದು ಮುಖ್ಯವಾಗಿ ಯೂರೋಪ್ ಹಾಗೂ ಅಮೇರಿಕಾಗಳಲ್ಲಿ ಅನಂತರ ಪ್ರಾಚೀನ ಇತಿಹಾಸದ

---

1. (ದೇ.ಜ.ಗೌ. ಸ್ಥಳನಾಮ ವ್ಯಾಸಂಗ – 1990 ಪುಟ 34 ಸಹ್ಯಾದ್ರಿ ಪ್ರಕಾಶನ)

ಪುನರ್ ನಿರ್ಮಾಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಯುರೋಪ್‌ನ ತಜ್ಞರು ಸಂಶೋಧನೆಯನ್ನು ನಡೆಸಿದರು. ಇಂಗ್ಲೆಂಡಿನಲ್ಲಿ ೮ನೇ ಶತಮಾನದಲ್ಲಿ BEDE ತನ್ನ ಧಾರ್ಮಿಕ ಇತಿಹಾಸದಲ್ಲಿ ಕೆಲವು ಸ್ಥಳನಾಮಗಳ ವಿವರಣೆಯನ್ನು ಲ್ಯಾಟಿನಿನಲ್ಲಿ ಕೊಡಲಾಗಿದೆ. ೧೦ನೇ ಶತಮಾನದ ASSER ತಾನು ರಚಿಸಿದ ಅಲ್‌ಫ್ರಡ್ ದೊರೆಯ ಜೀವನ ಚರಿತ್ರೆಯಲ್ಲಿ ಕೆಲವು ಸ್ಥಳನಾಮಗಳ ನಿಷ್ಪತ್ತಿಯನ್ನು ಲ್ಯಾಟಿನಿನಲ್ಲಿ ವಿಷದಪಡಿಸುತ್ತಾ SHEPPY ಎನ್ನುವುದು ಕುರಿತಗಳ ದ್ವೀಪವೆಂದು ವಿವರಿಸುತ್ತಾನೆ. ೧೨ನೇ ಶತಮಾನದ ಇತಿಹಾಸಕಾರರಾದ ಹುಟಿಂಗ್ ತನ್ನಿನ್ ಹೆನ್ರಿ, ಮಾರ್ಲೇಸ್ ಬರಿಯ ಮಿಲಿಯಂ ಮುಂತಾದವರು ಸ್ಥಳನಾಮಗಳ ಬಗ್ಗೆ ಆಸಕ್ತಿ ವ್ಯಕ್ತಪಡಿಸಿದ್ದಾರೆ.[೧]

ಸ್ಥಳನಾಮಗಳ ಅಧ್ಯಯನ ಪ್ರಾಚೀನವು ಎಲ್ಲಾ ಜ್ಞಾನ ಶಾಖೆಗಳ ವಿದ್ವಾಂಸರಿಗೂ ಮನವರಿಕೆಯಾಗಿ ೧೮೮೫ರ ಹೊತ್ತಿಗೆ ಅದಕ್ಕೆ ಒಂದು ಪೂರ್ಣ ಸ್ವರೂಪವು ಒದಗಿ ಬರುವಂತಾಯಿತು. ಈ ಅವಧಿಯಲ್ಲಿ ಸ್ಥಳನಾಮಗಳ ರೂಪ–ಸ್ವರೂಪ ಬಗೆಗೆ ತಿಳಿಸಲಾದ ಕೆಲವು ನಿರ್ಣಯಗಳನ್ನು ಈ ರೀತಿ ತಿಳಿಸಲಾಗಿದೆ.

೧. ಅರ್ಥವಿಲ್ಲದ ಸ್ಥಳನಾಮಗಳಿಲ್ಲ.

೨. ಸ್ಥಳನಾಮಗಳಲ್ಲಿ ವಸ್ತುಸ್ಥಿತಿ ಪ್ರತಿಬಿಂಬಿತವಾಗಿರುತ್ತದೆ. ಅವಾಸ್ತವ ಕಲ್ಪನೆಗೆ ಎಡೆಯಿಲ್ಲ.

೩. ಪೌರಾಣಿಕ ಕಥೆಗಳು ಅವುಗಳೊಡನೆ ಬೆರೆತಿದ್ದು ಮತ್ತು ಸ್ಥಳಪುರಾಣಗಳು ಹುಟ್ಟಿದ್ದು ಕಾಲಾಂತರದಲ್ಲಿ.

೪. ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಎರಡು ಅಂಶಗಳಿರುತ್ತವೆ. ಮೊದಲನೆಯದು ವಿಶಿಷ್ಟ ಘಟಕವಾದರೆ, ಎರಡನೆಯದು ಸಾಮಾನ್ಯ ಘಟಕವಾಗಿರುತ್ತದೆ.

೫. ಸ್ಥಳನಾಮಗಳ ನಿಜ ಸ್ವರೂಪ ಅರಿಯಲು ಆಯಾ ಕ್ಷೇತ್ರದ ಐತಿಹಾಸಿಕ ದಾಖಲೆ, ಪ್ರಾಚೀನ ರೂಪ, ಧ್ವನಿವಿಜ್ಞಾನ, ಉಪಭಾಷೆಯ ವಿಶಿಷ್ಟ ಲಕ್ಷಣಗಳನ್ನು ಗಮನಿಸಬೇಕು.

೬. ದಾಖಲೆಗಳ ಅಭಾವವಿದ್ದಾಗ ಆಯಾ ಕ್ಷೇತ್ರದ ಸಮಾನ ರೂಪಗಳನ್ನು ಗಣಿಸಬೇಕು.

ಜರ್ಮನಿಯ ಅಡಾಲ್ಫ್ ಬ್ಯಾರ್ ಫ್ರಾನ್ಸಿನ ಜತ್ ಎ. ಹೆಟ್, ಸ್ಮಿತ್, ಸಾರ್ ಎಫ್ ಸ್ಪೆಂಟನ್, ಅಲನ್ ಮೊವೆರ್, ಇಂಗ್ಲಂಡಿನ ಎಕ್ವಾಲ್ ಸ್ಟೀವಾರ್ಟ್, ಇ. ಪುಲಿ ಗ್ರಾನ್, ಗಾರ್ಡಿನರ್, ಅಮೇರಿಕಾದ ಎಫ್.ಎಲ್. ಉಟ್ಲೇ, ಬೆಲ್ಜಿಯಮ್ಮಿನ ಹೆಟ್ ಡ್ರಾಯ್ ಇವರುಗಳು ಸ್ಥಳನಾಮ ಶಾಸ್ತ್ರದ ಬೆಳವಣಿಗೆಗೆ ತಮ್ಮದೇ ಆದ ಮೌಲಿಕ ಕೊಡುಗೆಯನ್ನು ನೀಡಿದ್ದಾರೆ.

ಐರೋಪ್ಯ ರಾಷ್ಟ್ರಗಳಲ್ಲಿ ಸ್ಥಳನಾಮವಿಜ್ಞಾನ ಸಂಸ್ಥೆಗಳು ರೂಪುಗೊಂಡು, ಅಸ್ತಿತ್ವತಾಳಿ,

ಅವುಗಳು ಸ್ವತಂತ್ರವಾಗಿಯೋ ಇಲ್ಲವೇ ಸರ್ಕಾರದ ಸಹಕಾರದಿಂದಲೋ ವಿದ್ವಾಂಸರಿಗೆ ಈ ಕ್ಷೇತ್ರದಲ್ಲಿ ಸಂಶೋಧನಾ ಕಾರ್ಯವನ್ನು ನಡೆಸಲು ಸಕಲ ರೀತಿಯಲ್ಲಿ ಪ್ರೋತ್ಸಾಹವನ್ನು ನೀಡಿದುದಲ್ಲದೆ ಸ್ಥಳನಾಮಗಳು ಭೌಗೋಳಿಕ ಅಧ್ಯಯನಕ್ಕೆ ಪ್ರಾಶಸ್ತ್ಯವನ್ನಿತ್ತಿವೆ.

ಯೂರೋಪಿನ ವಿದ್ವಾಂಸರು ಸಾಂಸ್ಕೃತಿಕ ಭಾಷೆಯನ್ನು ಚೆನ್ನಾಗಿ ಅಭ್ಯಸಿಸಿ ಸಮಸ್ತ ಭಾಷೆಗಳ ತುಲನಾತ್ಮಕ ಅಧ್ಯಯನವನ್ನು ಪರಿಣಾಮಿಕ ಘಟ್ಟದವರೆಗೆ ಕೊಂಡೊಯ್ದಾಗ ಸ್ಥಳನಾಮ ಅಧ್ಯಯನಕ್ಕೆ ಪುರಸ್ಕಾರ ದೊರೆಯಿತು. ಅನಂತರದಲ್ಲಿ ವೈಜ್ಞಾನಿಕ ಸಂಶೋಧನೆ ಆರಂಭಗೊಂಡಿತು.[೨] ಸ್ಥಳನಾಮಗಳ ವ್ಯಾಪಕ ಸಮೀಕ್ಷೆ ಕಾರ್ಯಗಳು ನಡೆದು ವಿಪುಲ ಸ್ಥಳನಾಮ ಸಾಮಗ್ರಿಗಳನ್ನು ಸಂಗ್ರಹಿಸಲಾಯಿತು.

ಜರ್ಮನಿಯ ಫಾರೆಸ್ಟಿಮನ್, ಫ್ರಾನ್ಸಿನಲ್ಲಿ ಲ್ಯಾಂಗ್ಮನ್, ನಾರ್ವೆಯಲ್ಲಿ ರೈ ಮತ್ತು ಸ್ವೀಡನ್‌ನಲ್ಲಿ ನೋರಿನ್ ಆ ಕ್ಷೇತ್ರದಲ್ಲಿ ಆರಂಭದ ಕೃಷಿಯನ್ನು ಮಾಡಿದ ತಜ್ಞರಾಗಿದ್ದಾರೆ. ಸ್ಥಳನಾಮ ಸಂಶೋಧನೆಯಲ್ಲಿ ಹೆಸರುಗಳ ಐತಿಹಾಸಿಕ ವಿಕಾಸಕ್ಕೂ ಭೌಗೋಳಿಕ ಪರಿಸ್ಥಿತಿ ಮತ್ತು ಸನ್ನಿವೇಶಗಳ ವಿಸ್ತರಣೆಗೂ ಆದ್ಯ ಗಮನ ನೀಡತಕ್ಕದೆಂದು ಅವರುಗಳು ಸ್ಪಷ್ಟಪಡಿಸಿದರು. ಅವುಗಳ ಅಧ್ಯಯನದಿಂದ ಸಾಂಸ್ಕೃತಿಕ ಲಾಭ ಮಾತ್ರವಲ್ಲದೆ ಹಲವಾರು ಜ್ಞಾನ ಶಾಖೆಗಳಿಗೆ ಪ್ರಯೋಜ ಒದಗಿಸಿದಂತಾಗುತ್ತದೆಂದೂ ಅವರು ಸೂಚಿಸಿದರು.

'ಸ್ಥಳನಾಮಶಾಸ್ತ್ರ' ಎಂದು ಕರೆಯಲಿರುವ ನಾಮಾಶಾಸ್ತ್ರಿ ಪ್ರಕಾರದಲ್ಲಿ ಗ್ರಾಮಗಳ ಶಾಸ್ತ್ರ ಹಾಗೂ ಸ್ಥಳನಾಮ ಶಾಸ್ತ್ರ ಎಂಬ ಎರಡು ಕವಲುಗಳಿವೆ. ಸ್ಥಳನಾಮ ನಾಮ ಪ್ರಕಾರದ ಸಮಗ್ರ ರೂಪವಾದರೆ, ಗ್ರಾಮನಾಮವೆಂಬುದು ಅವರ ಸಂಕ್ಷಿಪ್ತ ವ್ಯಾಪ್ತಿಯ ರೂಪ ಹಾಗೆಂದು ಇವೆರಡು ಪ್ರತ್ಯೇಕವೆಂದಾಗಲಿ ಅಥವಾ ಒಂದೇ ಎಂದಾಗಲಿ ಭಾವಿಸುವಂತಿಲ್ಲ. ತಮ್ಮದೇ ಆದ ವಿಶಿಷ್ಟತೆಯಿಂದ ಏಕಕಾಲಕ್ಕೆ ಅಭಿನ್ನವೂ, ಭಿನ್ನವೂ ಆಗಿಬಿಡುವ ಸಾಧ್ಯತೆಯಿದೆ. ಅವೆರಡರ ವಿಸ್ತೃತವಾದ ಅಧ್ಯಯನದ ಮೂಲವೇ ನಾಮಾಧ್ಯಯನದ ಇಡಿಯಾದ ರೂಪವೊಂದರ ಗ್ರಹಿಕೆಯಾಗಲು ಸಾಧ್ಯವಿದೆ.

೩.೨ ವಿದೇಶಿ ಮತ್ತು ಭಾರತೀಯ ಸ್ಥಳನಾಮ ಅಧ್ಯಯನ

ಸ್ಥಳನಾಮಗಳ ನಿಷ್ಪತ್ತಿಯ ಬಗೆಗೆ ಭಾಷಾ ವಿಜ್ಞಾನದ ಸಾಮಗ್ರಿಯನ್ನು ಮತ್ತು ಐತಿಹಾಸಿಕ ವಿಧಾನವನ್ನು ಬೆಳೆಸಿಕೊಂಡು ಇ.ಎಕ್ವಲ್ ಅವರು ಸಿದ್ಧಪಡಿಸಿರುವ ಆಂಗ್ಲ

---

೨. ಸ್ಥಳನಾಮ ವ್ಯಾಸಂಗ – ದೇಜಗೌ, 1990 (ಪು1–32) ಸಹ್ಯಾದ್ರಿ ಪ್ರಕಾಶನ

ಸ್ಥಳನಾಮ ನಿಘಂಟು ಎಲ್ಲಾ ವಿದ್ವಾಂಸರಿಗೂ ಮಾರ್ಗದರ್ಶಕವಾಗಿದೆ. ಸ್ಕಾಟ್ಲೆಂಡಿನಲ್ಲಿ ಕೂಡ ಇದೇ ರೀತಿಯ ಸರ್ವೇಕ್ಷಣಾ ಕಾರ್ಯವನ್ನು ಕೈಗೊಳ್ಳಲಾಗಿದೆ.

ಅಮೇರಿಕಾದಲ್ಲಿ ಸ್ಥಳನಾಮಗಳ ಅಧ್ಯಯನಕ್ಕೆಂದೇ ಒಂದು ಸಂಘವನ್ನು ಸ್ಥಾಪಿಸಲಾಗಿದ್ದು ಅದು ಸ್ಥಳನಾಮಗಳ ಸಂಶೋಧನೆಯನ್ನು ಕೈಗೆತ್ತಿಕೊಂಡು ಅತ್ಯುತ್ತಮ ಕಾರ್ಯವನ್ನು ಮಾಡಿಸಿದೆ. ಸ್ಥಳನಾಮಗಳ ಸಂಶೋಧನಾ ಕಾರ್ಯಗಳಿಗೆ ಮೀಸಲಾದ NAMES ಎಂಬ ಹೆಸರಿನ ತ್ರೈಮಾಸಿಕ ಪತ್ರಿಕೆಯೊಂದನ್ನು ಕೂಡಾ ಪ್ರಕಟಿಸುತ್ತದೆ. ಈಚೆಗಂತೂ ಅಮೇರಿಕಾದಲ್ಲಿ ಸ್ಥಳನಾಮಗಳ ಅಧ್ಯಯನವು ಚುರುಕಿನಿಂದ ನಡೆಯುತ್ತಿದ್ದು ಜಗತ್ತಿನ ವಿದ್ವಾಂಸರೆಲ್ಲರ ಗಮನ ಸೆಳೆಯುತ್ತಿದೆ.

ಅಮೇರಿಕಾ ಸ್ಥಳನಾಮ ಸಂಸ್ಥೆಯ ಕೆಲವು ಪ್ರಮುಖ ಧ್ಯೇಯೋದ್ದೇಶಗಳನ್ನು ತಾಳಿ ಅಸ್ತಿತ್ವಕ್ಕೆ ಬಂದಿದೆ. ಅವುಗಳೆಂದರೆ:

೧. ಮನುಷ್ಯನ ಜೀವನದ ಸರ್ವ ಕ್ಷೇತ್ರಗಳಿಗೆ ಸಂಬಂಧಪಟ್ಟ ಸ್ಥಳನಾಮ ಪ್ರಾಮುಖ್ಯತೆಯನ್ನು ತನ್ನ ದೇಶದ ಜನತೆಯ ಗಮನಕ್ಕೆ ತರುವುದು. ಅಲ್ಲದೆ ಅವುಗಳ ಬಗೆಗೆ ಅವರ ಆಸಕ್ತಿಯನ್ನು ಕೆರಳಿಸುವುದು.

೨. ನಾಮಗಳ ನಿಷ್ಪತ್ತಿ, ಉಚ್ಚಾರಣೆ ಮತ್ತು ತಿದ್ದುಪಡಿಗಳ ಬಗೆಗೆ ಸಾರ್ವಜನಿಕ ಸಂಸ್ಥೆಗಳಿಗೆ ಮತ್ತು ಸರ್ಕಾರಿ ಕಛೇರಿಗಳಿಗೆ ಆಗಾಗ್ಗೆ ಸಲಹೆಗಳನ್ನು ನೀಡುವುದು.

೩. ಸ್ಥಳನಾಮಗಳಿಗೆಂದೇ ಮೀಸಲಾದಂಥ ಪತ್ರಿಕೆಗಳನ್ನು, ಪುಸ್ತಕಗಳನ್ನು ಮುದ್ರಿಸುವುದಲ್ಲದೆ ಇಲ್ಲಾ ಹೆಸರುಗಳ ನಿಘಂಟು ತಯಾರಿಸುವುದು. ಅಂತಹ ಪ್ರಕಟಣೆಗೆ ಸಹಾಯ ಮತ್ತು ಪ್ರೋತ್ಸಾಹಗಳನ್ನು ನೀಡುವುದಾಗಿದೆ.

೩.೨.(೧) ಭಾರತೀಯ ಸ್ಥಳನಾಮ ಅಧ್ಯಯನ

ಸ್ಥಳನಾಮಗಳ ಅಧ್ಯಯನದ ಕಾರ್ಯದಲ್ಲಿ ಜರ್ಮನರು ತುಂಬಾ ಪ್ರಗತಿಯನ್ನು ಸಾಧಿಸಿದ್ದಾರೆ. ಮೆಂಜ್ ಬಾನ್ ಗೀಸನ್ ಮತ್ತು ಸಾರಾಬುಕನ್ ವಿಶ್ವವಿದ್ಯಾಲಯಗಳು ಜರ್ಮನ್ ಸ್ಥಳನಾಮಗಳ ಅಧ್ಯಯನಕ್ಕೆಂದೇ ವಿಶೇಷ ಯೋಜನೆಗಳನ್ನು ಹಮ್ಮಿಕೊಂಡು ಪ್ರಗತಿಯಲ್ಲಿವೆ.

೩.೨(೨) ಪ್ರಾಚೀನ ಉಲ್ಲೇಖಗಳು

ಋಗ್ವೇದದಲ್ಲಿ ಬಳಸಲ್ಪಟ್ಟಿರುವ "ರಾಷ್ಟ್ರ" ಎಂಬ ಪದವು ಸ್ಥಳನಾಮ ವಿಚಾರಗಳಲ್ಲಿ

ಮಹತ್ವದ್ದಾಗಿದೆ. "ರಾಷ್ಟ್ರ ಎಂಬ ಪದಕ್ಕೆ ಸಮಾನಾರ್ಥಕವಾಗಿ ಜನಪದ ಮತ್ತು ವಿಷಯ ಎಂಬ ಪದ ಬ್ರಾಹ್ಮಣಕಗಳ ಕಾಲದಲ್ಲಿ ಬಳಕೆಗೊಂಡಿವೆ. ಗ್ರಾಮಗಳ ಈ ವಿಷಯಗಳ ಉಪವಿಭಾಗಗಳು ಗ್ರಾಮ ಎಂಬ ಪದ ಒಂದೆಡೆ ನೆಲೆನಿಂತ ಜನ ಸಮುದಾಯಕ್ಕೆ ಬಳಸಲಾಗುತ್ತಿತ್ತು. ಸಂ-ಗ್ರಾಮ ಎಂದರೆ ಯುದ್ಧ ಮಾಡಲೆಸಗಲು ಸಿದ್ಧವಾದ ಇಂಥ ಸಮೂಹವೆಂಬ ಅರ್ಥ ಹೊಂದಿದೆ. ಪ್ರತಿ ಜನಪದ ಒಂದು ರಾಷ್ಟ್ರವೆಂದು ಪರಿಗಣಿಸಲ್ಪಟ್ಟು ಅವುಗಳಿಗೆ ಪುರ ರಾಜಧಾನಿಯಾಗಿರುತ್ತಿತ್ತು.

ಪ್ರಾಚೀನ ಭಾರತೀಯರಿಗೆ ಸ್ಥಳನಾಮ ಅಧ್ಯಯನದ ಇಂದಿನ ಶಾಸ್ತ್ರೀಯ ವಿಧಾನಗಳು ತಿಳಿದಿರಲಿಲ್ಲವೆಂದರೂ ಅವರಿಗೆ ಸ್ಥಳನಾಮಗಳ ಮಹತ್ವವೆ ತಿಳಿದಿರಲಿಲ್ಲ ಎಂದು ಅರ್ಥವಲ್ಲ. ನಮ್ಮ ಪ್ರಾಚೀನ ಮಹಾವಿದ್ವಾಂಸರು ಭಾಷೆಯ ಪ್ರತಿಯೊಂದು ಪದಕ್ಕೂ ನಿರುಕ್ತಿ ಹೇಳುವ ಧೋರಣೆ ಹೊಂದಿದ್ದರು. ಉದಾ: ಮಾಸ್ಕ ಮತ್ತು ಪಾಣಿನಿ ಮಹರ್ಷಿಯರನ್ನು ಹೆಸರಿಸಬಹುದು. ಪಾಣಿನಿ ಅನೇಕ ಸ್ಥಳನಾಮಗಳಿಗೆ ನಿರುಕ್ತಿ ನೀಡಿರುತ್ತಾರೆ. ಅವನು ಗ್ರಾಮ ಎಂಬ ಪದವನ್ನು ಒಂದು ಸ್ಥಳೀಯ ಜನಸಂಖ್ಯೆಯನ್ನು ಒಳಗೊಂಡು ಸ್ಥಳನಾಮ ವಾರ್ಗಿಕ ಎಂಬ ಅರ್ಥದಲ್ಲಿ ಬಳಸಿದ್ದಾನೆ. "ವಾಹ್ಲಿಕ" ಮತ್ತು "ಉದೀಚ್ಛ್ಯ" ಎಂಬ ಮುಂತಾದ ಜನಪದಗಳನ್ನು ಹೆಸರಿಸಿದ್ದಾನೆ.

ನಗರ, ಪುರ, ಗ್ರಾಮ, ಬೇಟ, ಪೋಷ, ಕುಲ, ಸೂಡ, ಸ್ಥಳ, ಕರ್ಷ, ತೀರ, ಅಗ್ನಿ, ವಕ್ತ್ಯ, ಪಲದ, ಅರ್ಮ, ವಾಹ, ಹ್ರದ, ಪ್ರಸ್ಥ, ಕಂಥಾ ಮುಂತಾದ ಸ್ಥಳನಾಮಗಳ ಪಾರ್ಗಿಕಗಳನ್ನು ಹೇಳಿದ್ದಾರೆ.

ಪತಂಜಲ ಮಹಾಮುನಿಯು 'ಜನಪದ' 'ದೇಶ' ಮತ್ತು 'ರಾಷ್ಟ್ರ' ಪದಗಳು ಪರ್ಯಾಯವಾಗಿ ಬಳಕೆಯಾಗಿದ್ದರೂ ಅವುಗಳ ಸಂದರ್ಭವನ್ನಾಧರಿಸಿ 'ಜನಪದ'ವೆಂದರೆ A Trible Settlement 'ದೇಶ'ವೆಂದರೆ Country 'ರಾಷ್ಟ್ರ'ವೆಂದರೆ A portion of Land under the juridiction of Sourengnity ಎಂದು ಅರ್ಥೈಸಬಹುದಾಗಿದೆ. 'ಜನಪದ'ವೆಂದರೆ ಒಂದು ನಿರ್ದಿಷ್ಟ ಮಂಡಲಿಗಳ ಅಧೀನ ಪ್ರದೇಶವೆಂಬುದು ಕೌಟಿಲ್ಯನ ಅಭಿಮತವಾಗಿದೆ. ಪ್ರಾಚೀನ ಆರ್ಯವರ್ತದಲ್ಲಿ ಇಂತಹ ೧೬ 'ಜನಪದ'ಗಳಿದ್ದವೆಂದು ಬೌದ್ಧಕಾಲದ ಸಾಹಿತ್ಯ ಎಂದು ತಿಳಿದುಬರುತ್ತದೆ. 'ಪೂಗ'ವೆಂಬ ಇನ್ನೊಂದು ಪದವನ್ನು ಯಜ್ಞವಲ್ಕ್ಯನು ಬಳಸಿದ್ದಾನೆ. 'ಪೂಗ'ವೆಂದರೆ ವಿಭಿನ್ನ ಜಾತಿ ಮತ್ತು ವೃತ್ತಿಗಳ ಜನರು ಒಂದೆಡೆ ನೆಲೆನಿಂತ 'ಗ್ರಾಮ' ಇಲ್ಲಿವೆ. 'ಪಟ್ಟಣ' ಎಂದು ಮಿತಾಪರಿಯಲ್ಲಿ ಸೂಚಿತವಾಗಿದೆ.

ಮುಖ್ಯ ಪಟ್ಟಣ ಮತ್ತು ಅದರ ಬದಲಾವಣೆಗಳು ಕ್ರಮವಾಗಿ 'ಮುಖ್ಯನಗರ'

ಮತ್ತು 'ಶಾಖಾನಗರ'ವೆಂದು ಅಮರಕೋಶದಲ್ಲಿ ಸೂಚಿಸಲಾಗಿದೆ. ಇದರಲ್ಲಿ ಪುರಂ ಪುರಿ ನಗರ, ಪಟ್ಟಣ ಸ್ಥಾನೀಯ ಮತ್ತು ನಿಗಮಗಳನ್ನು ಸಮಾನಾರ್ಥಕವಾಗಿ ಭಾವಿಸಲಾಗಿದೆ. ವೇದ ಮತ್ತು ಬ್ರಾಹ್ಮಣಕೋತ್ತರ ಕಾಲಗಳಲ್ಲಿ 'ರಾಜ್ಯ'ವೆಂಬ ಪದವು ಕಂಡುಬರುತ್ತದೆ.

ಸ್ಥಳನಾಮಗಳ ಇತಿಹಾಸ ಕಂಡುಕೊಳ್ಳಲು ಶಾಸನಗಳು ಅತ್ಯಮೂಲ್ಯ ದಾಖಲೆಗಳಾಗಿವೆ ಎಂಬುದು ಪರಮಸತ್ಯ. ಸರ್ಕಾರಿ ಕಡತಗಳಲ್ಲಿ ಬರ್‍ರೈಯು ಕೈಫಿಯತ್ತುಗಳಲ್ಲಿ, ಗೆಜಟೇರಿಯಗಳಲ್ಲಿ ಜನಗಣತಿಯಲ್ಲಿ ಸ್ಥಳನಾಮಗಳ ಪಟ್ಟಿ ದೊರೆಯುತ್ತವೆ. ಆದರೂ ಅವುಗಳ ನಿಷ್ಪತ್ತಿಯ ಬಗೆಗಿನ ವಿಚಾರ ಕ್ವಚಿತ್ತಾಗಿ ಲಭ್ಯವಿದೆ. ಪಾಶ್ಚಾತ್ಯ ವಿದ್ಯೆಯ ಸಂಪರ್ಕದಿಂದಾಗಿ ನಮ್ಮಲ್ಲಿ ವೈಜ್ಞಾನಿಕ ದೃಷ್ಟಿಯು ಹೆಚ್ಚಿ ಸ್ಥಳನಾಮಗಳ ಬಗ್ಗೆ ಶಾಸನಗಳ ಬಗ್ಗೆ ಸಂಶೋಧನೆಯ ಕಾಳಜಿ ಬೆಳೆದಿದೆ. ಭಾರತದ ಮಟ್ಟಿಗೆ ಹೇಳುವುದಾದರೆ ಸ್ಥಳನಾಮಗಳನ್ನು ಕುರಿತಾದ ಅಧ್ಯಯನ ಬಹು ನಿಧಾನಗತಿಯಲ್ಲಿ ನಡೆಯುತ್ತಿದೆ. ದೇಶದ ಆಯಾ ಭಾಷೆಗಳಲ್ಲಿ ಸ್ಥಳನಾಮಗಳನ್ನು ಕುರಿತಾದ ಕೆಲವಾರು ಲೇಖನಗಳು ಅಲ್ಲಲ್ಲಿ ಪ್ರಕಟಣೆಗೊಂಡಿರುವುದು ವಾಸ್ತವವಾದರೂ ಅವುಗಳೆಡೆಗೆ ಭಾರತೀಯ ವಿದ್ವಾಂಸರು ಅಷ್ಟಾಗಿ ಗಮನಹರಿಸಿಲ್ಲ.

ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಅಲ್ಲಿನ ವಿದ್ವಾಂಸರನೇಕರು ಸ್ಥಳನಾಮಗಳ ಅಧ್ಯಯನದ ವಿಷಯದಲ್ಲಿ ತಾಳಿದ ಅಸ್ಥೆ ಹಾಗೂ ಉತ್ಸಾಹ ನಮ್ಮ ದೇಶದಲ್ಲಿ ಕಾಣಲು ಕಷ್ಟಸಾಧ್ಯವಾದರೂ ಪ್ರಸ್ತುತ ಈ ಕ್ಷೇತ್ರದಲ್ಲಿ ಆಗಿರುವ ಕೃಷಿ ಮುಂದೆ ಈ ಕ್ಷೇತ್ರದಲ್ಲಿ ಕಾರ್ಯವೆಸಗಲು ತೊಡಗುವವರಿಗೆ ಕೊಂಚ ಮಟ್ಟಿಗಾದರೂ ಸಹಾಯಕವಾಗುವುದರಲ್ಲಿ ಸಂಶಯವಿಲ್ಲ. ೧೯೨೬ರಲ್ಲಿ ಡಾ. ಸುನಿಲ್ ಕುಮಾರ್ ಚಟರ್ಜಿಯವರು The Origin and Development of the Bangali Language ಎಂಬ ಮಹತ್ವಪೂರ್ಣ ಕೃತಿಯೊಂದನ್ನು ಪ್ರಕಟಿಸಿದರು. ಭಾರತದಲ್ಲಿ ಸ್ಥಳನಾಮಗಳ ಅಧ್ಯಯನವು ಯಾವ ಸ್ಥಿತಿ ಮತ್ತು ಯಾವ ಹಂತದಲ್ಲಿದೆ ಎಂಬುದನ್ನು ಸವಿವರವಾಗಿ ತೋರಿಸಿಕೊಡುವುದರಲ್ಲಿ ಈ ಕೃತಿಯು ಯಶಸ್ವಿಯಾಗಿದೆ. ಇತ್ತೀಚೆಗೆ ಅಂದರೆ ೧೯೭೨ರಲ್ಲಿ ಅಖಿಲ ಭಾರತ ಮಟ್ಟದ ದ್ರಾವಿಡ ಭಾಷಾ ವಿಜ್ಞಾನದ ದ್ವಿತೀಯ ಮಹಾಸಮ್ಮೇಳನ ನಡೆದು ಅದರಲ್ಲಿ ಶ್ರೀ ಕೆ. ವಿಶ್ವನಾಥ ಶೆಟ್ಟಿ ಎಂಬ ವಿದ್ವಾಂಸರು ಸ್ಥಳನಾಮಗಳ ಅಧ್ಯಯನವು ಭಾರತದಲ್ಲಿ ಅಷ್ಟೇನೂ ಹೇಳಿಕೊಳ್ಳುವಂತಹ ರೀತಿಯಲ್ಲಿ ಪ್ರಗತಿಯು ನಡೆದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತದಲ್ಲಿ ಸ್ಥಳನಾಮಗಳ ಅಧ್ಯಯನಕ್ಕೆ ತ್ರಿವೇಂಡ್ರಂನ Dravidian Linguistic Austums ಎಂಬ ಸಂಸ್ಥೆ ಮುಂದೆ ಬಂದುದಾಗಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶ

ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಅಧ್ಯಯನವನ್ನು ಪ್ರೋತ್ಸಾಹಿಸುವುದಾಗಿದ್ದರೂ ಅದು ವ್ಯವಸ್ಥೆಗೊಳಿಸುವ ಅನೇಕ ಸಮ್ಮೇಳನಗಳಲ್ಲಿ ಸ್ಥಳನಾಮ ಅಧ್ಯಯನ ಮತ್ತು ಚರ್ಚೆಗಳಿಗೆ ಅವಕಾಶ ಕಲ್ಪಿಸಿಕೊಟ್ಟಿದೆ.

ಕೇರಳ ಸ್ಥಳನಾಮಗಳ ವಿಶೇಷ ಅಧ್ಯಯನಕ್ಕಾಗಿ ತ್ರಿವೆಂಡ್ರಂನ ಕೇರಳ ಸಾಹಿತ್ಯ ಅಕಾಡಮಿಯು Kerala Place Names Society ಎಂಬ ಸಂಸ್ಥೆಯನ್ನು ಆರಂಭಿಸಿದೆ. ಭಾರತೀಯ ಶಾಸನ ಮತ್ತು ಪುರಾತತ್ವ ಇಲಾಖೆಯ ಡಾ. ಕೆ.ವಿ. ರಮೇಶ್ ಮತ್ತು ಮಾಧವ ಎನ್. ಕುಟ್ಟಿ ಮುಂತಾದವರ ಶ್ರಮ ಹೆಚ್ಚಿದೆ. ಪ್ರೊ. ದೇ.ಜ.ಗೌಡರ ಮಾರ್ಗದರ್ಶನದಲ್ಲಿ ಮೈಸೂರಿನಲ್ಲಿ ೧೯೭೮ರಲ್ಲಿ Indian Places Names Society ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇತ್ತೀಚೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮೇಘಾಲಯ ಮುಂತಾದ ಕಡೆಗಳಲ್ಲಿ ಇಂಥವೇ ಸಂಸ್ಥೆಗಳನ್ನು ತೆರೆಯಲಾಗಿದೆ. ಈ ಸಂಸ್ಥೆಯು ಅಖಿಲ ಭಾರತ ಮಟ್ಟದ ಸ್ಥಳನಾಮ ಸಮ್ಮೇಳನಗಳನ್ನು ಪ್ರತಿಯೊಂದು ವರ್ಷ ಒಂದೊಂದು ಕಡೆ ನಡೆಸುವುದರ ಮೂಲಕವಾಗಿ ಭಾರತೀಯ ಸ್ಥಳನಾಮ ವಿಜ್ಞಾನಿಗಳು ಒಂದೆಡೆ ಸೇರಿ ಪರಸ್ಪರ ಚರ್ಚಿಸಲು ಅನುವು ಮಾಡಿಕೊಡುತ್ತಲಿದೆ. Studies in Indian Place Names ಈ ಸಂಸ್ಥೆಯಿಂದ ಪ್ರಕಟವಾಗುತ್ತಿರುವ ವಾರ್ಷಿಕ ಸಂಚಿಕೆಯಾಗಿದೆ.

ಬೆಂಗಳೂರಿನ Mythic Society of India ಎಂಬ ಸಂಸ್ಥೆ ತನ್ನ ನಿಯತಕಾಲಿಕದಲ್ಲಿ ಸ್ಥಳನಾಮಗಳನ್ನು ಕುರಿತಾದ ಕೆಲವು ಲೇಖನಗಳನ್ನು ಪ್ರಕಟಿಸಿದೆ. ಮುಂತಾದ ನಿಯತಕಾಲಿಕೆಗಳು ಕೂಡ ಸ್ಥಳನಾಮಗಳಿಗೆ ಸಂಬಂಧಿಸಿದ ನೂರಾರು ಲೇಖನಗಳನ್ನು ಪ್ರಕಟಿಸಿ ಭಾರತದಲ್ಲಿ ಸ್ಥಳನಾಮ ಶಾಸ್ತ್ರಾಧ್ಯಯನದ ಬಗ್ಗೆ ಆಸಕ್ತಿಯನ್ನು ಹುಟ್ಟಿಸುವಲ್ಲಿ ಗಣನೀಯ ಪಾತ್ರವಹಿಸಿದೆ. ಕನ್ನಡದಲ್ಲಿ ಜನಪದ ಅಕಾಡೆಮಿ, ಜಾನಪದ ಜಗತ್ತು, ಜಾನಪದ ಗಂಗೋತ್ರಿ ಹಾಗೂ ಇನ್ನಿತರೆ ಸಾಹಿತ್ಯಿಕ ಪತ್ರಿಕೆಗಳಲ್ಲೂ ಅಲ್ಲಲ್ಲಿ ಕೆಲವಾರು ಲೇಖನಗಳು ಕಂಡುಬಂದಿವೆ.

ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಸ್ಥಳನಾಮಗಳ ಅಧ್ಯಯನ ಕೈಗೊಂಡು ಶ್ಲಾಘನೀಯ ಕಾರ್ಯವನ್ನು ಎಸಗಿದ ಸಂಸ್ಥೆಯೆಂದರೆ ತಿರುಪತಿಯ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ, ತೆಲುಗು ವಿಭಾಗ, ಅಲ್ಲಿ ಆಂಧ್ರ ಪ್ರದೇಶದ ಸ್ಥಳನಾಮಾಧ್ಯಯನಕ್ಕೆ ವಿಶೇಷ ಮಹತ್ವ ನೀಡಿದೆ. ಈ ವಿವಿಯ ಕುರಿತಾದ ಹಲವು ಪ್ರಬಂಧಗಳಿಗೆ ಪಿಎಚ್.ಡಿ. ಮತ್ತು ಎಂ.ಲಿಟ್‌ಗಳನ್ನು ನೀಡಲಾಗಿದೆ. ಈ ವಿಶ್ವವಿದ್ಯಾಲಯದಿಂದ ರಾಯಲ ಸೀಮಾ ವಲಯದ ಐದು ಜಿಲ್ಲೆಗಳಾದ ಅನಂತರಪುರಂ, ಕರ್ನೂಲ್, ಕಡಪಾ, ಚಿತ್ತೂರು ಮತ್ತು

ನಲ್ಲೂರು ಜಿಲ್ಲೆಗಳ ಒಟ್ಟು ೨೦,೨೩೮ ಸ್ಥಳನಾಮಗಳ ಪರಿವೀಕ್ಷಣಾ ಯೋಜನೆಯೊಂದನ್ನು ಹಮ್ಮಿಕೊಂಡಿದೆ. ವಿಜಯವಾಡದ ನಾಗಾರ್ಜುನ ವಿಶ್ವವಿದ್ಯಾಲಯದಲ್ಲಿ ಡಾ॥ ವೈ. ಬಾಲಗಂಗಾಧರ್ ರಾವ್ ಅವರ ಮಾರ್ಗದರ್ಶನದಲ್ಲಿ ಕೆಲವು ಜಿಲ್ಲೆಗಳ ಸ್ಥಳನಾಮಾಧ್ಯಯನಗಳು ನಡೆದಿವೆ. ಹೈದರಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಶ್ರೀ ಈಶ್ವರ ಚರಣ ಮತ್ತು ಶ್ರೀ ವಿ. ಮಾಣಿಕ ಪ್ರಭುಗಳ ನೇತೃತ್ವದಲ್ಲಿ ಸ್ಥಳನಾಮಾಧ್ಯಯನ ನಡೆದಿದೆ. ಕೇರಳ ವಿ.ವಿ.ಯಲ್ಲಿ ಕೇರಳಕ್ಕೆ ಸಂಬಂಧದ ಅರ್ಧಕ್ಕಿಂತ ಹೆಚ್ಚು ಜಿಲ್ಲೆಗಳ ಅಧ್ಯಯನ ಪೂರ್ಣಗೊಂಡಿದೆ. ಸ್ಥಳನಾಮ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಅನೇಕ ಪಿಎಚ್.ಡಿ. ಸಂಶೋಧನಾ ಪ್ರಬಂಧಗಳು ಬಂದಿವೆ. ಪುಣೆಯ ತಿಲಕ ಮಹಾರಾಷ್ಟ್ರ ವಿದ್ಯಾಪೀಠ "ಮಹಾರಾಷ್ಟ್ರದ ಗ್ರಾಮಸೂಚಿ" ಎಂಬ ಪ್ರಾದೇಶಿಕ ಕೋಶ ಪ್ರಕಟಿಸಿದೆ. ಉತ್ತರ ಭಾರತದ ವಿಶ್ವವಿದ್ಯಾಲಯಗಳೂ ಈಚೀಚೆಗೆ ಸ್ಥಳನಾಮಾಧ್ಯಯನದ ಬಗ್ಗೆ ಒಲವನ್ನು ಪ್ರಕಟಿಸುತ್ತಿರುವುದು ಕಂಡುಬರುತ್ತಿದೆ. ಮಹಾರಾಷ್ಟ್ರ ಸರ್ಕಾರವು ೧೯೬೧ರಲ್ಲಿ ತನ್ನ ಪ್ರಾಂತ್ಯದ ಸುಮಾರು ೪೦,೦೦೦ ಗ್ರಾಮಗಳ ಪ್ರಮಾಣಿತ ರೂಪಗಳನ್ನು ಪ್ರಕಟಿಸಿದೆ.

೩.೩(೩) ಕನ್ನಡದಲ್ಲಿ ಪ್ರಾಚೀನ ಉಲ್ಲೇಖಗಳು:

"ವಡ್ಡಾರಾಧನೆ"ಯು ಕನ್ನಡ ಪ್ರಾಚೀನ ಗದ್ಯಗ್ರಂಥ. ಅಲ್ಲಿಯ ಕಥೆಗಳು ಮೇರು ಪರ್ವತದ ದಕ್ಷಿಣ ದಿಗ್ಭಾಗದ 'ಜಂಬೂದ್ವೀಪ'ವನ್ನು ಕುರಿತು ಹೇಳಿ ಅಲ್ಲಿಯ ನಾಡು, ಪುರ ಅದನ್ನಳಿದ ದೊರೆಗಳ ವಿವರಣೆ ನೀಡಿ ಪ್ರಾರಂಭಗೊಳ್ಳುತ್ತದೆ. ಜೈನ ಮುನಿಗಳು 'ಗ್ರಾಮ ನಗರ ಖೇಡ' ಖರ್ವಡ, ಮಡಂಬ ಪತ್ತನ ದೋಣಾ ಮುಖಂಗಳೊಳಾರೈಸಿ ಸಾಗುತ್ತದೆ. ಅಶೋಕನ ಶಾಸನದಲ್ಲಿ ಕಂಡುಬರುವ 'ಇಸಿಲಾ' ಪ್ರಾಚೀನ ಕಾಲದ ಕನ್ನಡ ಸ್ಥಳನಾಮ ಪದವಾಗಿದೆಯೆಂದು ಡಾ. ಡಿ.ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಡುತ್ತಾರೆ. 'ರಾಮನಾಥ ಚರಿತೆ'ಯಲ್ಲಿ ನಂಜುಂಡ ಕವಿಯು ಗ್ರಾಮ, ನಗರ, ಖೇಡ, ಖರ್ವಡ, ದುರ್ಗ, ದ್ರೋಣಮುಖ ಸಂದೇಹದಿಂ ಕಾಮನಾಡುಂಬೊಲದಂತೆ ಕರ್ನಾಟಕ ಭೂಮಿ ಕಣ್ಣೆಸೆದಿರುತಿಹುದು' ಎಂದು ಹೇಳಿದ್ದಾನೆ. 'ಹಲ್ಮಿಡಿ' ಶಾಸನದಲ್ಲಿ 'ಪಲ್ಮಡಿಉಂ ಮೂಳವಳ್ಳಿಉಂ' ಎಂಬ ಗ್ರಾಮಗಳ ಉಲ್ಲೇಖ ಬಂದಿದೆ. ಕನ್ನಡದಲ್ಲಿಯ ಎಲ್ಲ ಸ್ಥಳ ಪುರಾಣಗಳಲ್ಲೂ ಆಯಾ ಸ್ಥಳನಾಮಗಳ ಮಾಹಿತಿ ಲಭ್ಯವಾಗುತ್ತದೆ.

ಸ್ಥಳನಾಮ ಅಧ್ಯಯನವನ್ನು ಉದ್ದೇಶವಾಗಿಟ್ಟುಕೊಂಡು ಕೆಲವೊಂದು ಸಂಸ್ಥೆಗಳು ಇತ್ತೀಚೆಗೆ ಜನ್ಮತಾಳಿವೆ. Place Name Society of Gujarath State, (PSGS) ಎಂಬ

ಸಂಸ್ಥೆ ಶ್ರೀಮತಿ ಹರಿನಾ ಮೆಹ್ತಾರವರ ಅಧ್ಯಕ್ಷತೆಯಲ್ಲಿ ಬರೋಡದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಮಹಾರಾಷ್ಟ್ರ ಸರ್ಕಾರವು ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ತನ್ನ ಪ್ರಾಂತದ ಕೆಲವು ಪ್ರಮುಖ ನಗರಗಳ ಪರಿಷ್ಕೃತ ರೂಪವನ್ನು ಜಾರಿಗೆ ತಂದಿದೆ. ಕೇರಳ ಸರ್ಕಾರವು ತನ್ನ ಪ್ರಾಂತದ ೧೪ ಜಿಲ್ಲೆಗಳನ್ನು ಹೆಸರುಗಳನ್ನು ಪರಿಷ್ಕರಿಸಿ ಭಾರತ ಸರ್ಕಾರದ ರಕ್ಷಣಾ ಖಾತೆಯ ಅನುಮೋದನೆಗಾಗಿ ನಿಲುವಳಿಯನ್ನು ಕಳಿಸಿಕೊಟ್ಟಿದೆ. ಕರ್ನಾಟಕ ಸರ್ಕಾರವು ತನ್ನ ಜಿಲ್ಲೆಗಳ ೧೭೫ ತಾಲ್ಲೂಕುಗಳಿಗೆ ಸೇರಿದ ೨೬,೮೩೦ ಜನವಸತಿಯನ್ನು ಸ್ಥಳನಾಮಗಳನ್ನು ಅಭ್ಯಸಿಸಿ ಪರಿಷ್ಕರಿಸಿ ಪ್ರಾಮಾಣಿಕ ರೂಪಗಳನ್ನು ನೀಡಿದೆ.

ಇತರೆ ಪ್ರಾಂತೀಯ ಸರ್ಕಾರಗಳೂ ತನ್ನ ಪ್ರಾಂತಗಳ ಪ್ರಾಕೃತಿಕ ಸ್ಥಳನಾಮಗಳನ್ನು ಪರಿಷ್ಕರಿಸಲು ಕ್ರಮ ಕೈಗೆತ್ತಿವೆ.

೩.೪ ವೈಯಕ್ತಿಕ ಅಧ್ಯಯನಗಳು

ಭಾರತದಲ್ಲಿ ಸ್ಥಳನಾಮಗಳ ಆಧುನಿಕ ಅಧ್ಯಯನ ಪದ್ಧತಿಯ ಆರಂಭಕ್ಕೆ ಪಾಶ್ಚಾತ್ಯ ವಿದ್ವಾಂಸರ ಸ್ಥಳನಾಮಗಳನ್ನು ಕುರಿತಾದ ವೈಜ್ಞಾನಿಕ ಬರಹಗಳ ಪ್ರೇರಣೆ ಪ್ರಮುಖ ಕಾರಣವಾಗಿದೆ. ಆದರೆ ಇದಕ್ಕೂ ಮೊದಲೇ ನಮ್ಮಲ್ಲಿ ಸ್ಥಳನಾಮಗಳ ವೈಯಕ್ತಿಕ ಅಧ್ಯಯನ ಪ್ರಾರಂಭವಾಗಿತ್ತು. ಸಂಸ್ಕೃತ ಭಾಷೆಯಲ್ಲಿ ಅಪ್ಪಯ್ಯ ದೀಕ್ಷಿತರಿಂದ ರಚಿತವಾದ "ನಾಮ ಸಂಗ್ರಹ ಮಾಲಾ" ಎಂಬ ಗ್ರಂಥವನ್ನು ನೇರವಾಗಿ ಸ್ಥಳನಾಮ ಅಧ್ಯಯನವನ್ನೇ ಗುರಿಯನ್ನಾಗಿರಿಸಿಕೊಂಡು ರಚಿತವಾದ ಅತ್ಯುತ್ತಮ ಗ್ರಂಥವೆಂದು ಬರೆಯಲಾಗಿದೆ.

ಶ್ರೀ ಕೆ.ಪಿ. ಪದ್ಮನಾಭ ಮೆನನ್ನರು ೧೯೦೨ರಲ್ಲಿ Discursive-Notes on Malbar and its Place Names ಎಂಬ ಲೇಖನವನ್ನು Indian Antiquiry ದಲ್ಲಿ ಪ್ರಚುರಪಡಿಸಿದರು. ಸಮಗ್ರ ಕೇರಳ ನಾಡನ್ನೇ ಒಂದು ಘಟಕವನ್ನಾಗಿಸಿಕೊಂಡು ಅಭ್ಯಸಿಸಿದ ಈ ಲೇಖನ ಆಸಕ್ತಪೂರ್ಣವಾಗಿದ್ದು, ಸ್ಥಳನಾಮಗಳನ್ನು ಭಾರತೀಯ ಪುರಾಣ ಕಟ್ಟು ಕಥೆಗಳು, ಮೂಢನಂಬಿಕೆ ಮತ್ತು ಜನಾಂಗದ ಸಂಪ್ರದಾಯದ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ. ೧೯೦೩ರಲ್ಲಿ ರೆವರೆಂಡ್ ಫೆರಾರ್ಡ್ ಹಾನ್‌ರವರಿಂದ ರಚಿತವಾಗಿ ಪ್ರಕಟಣೆಗೊಂಡ Dravidian and Kalorian Place Names ಎಂಬ ಲೇಖನ ಗಮನಾರ್ಹವಾಗಿದೆ. ಹಳೆಯ ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ಸುವ್ಯವಸ್ಥಿತವಾಗಿ ಸ್ಥಳನಾಮಗಳ ಅಧ್ಯಯನವನ್ನು ಕೈಗೊಂಡವರೆಂದರೆ ಸಿ. ಹಯವದನರಾಯರು. ೧೯೧೫ರಲ್ಲಿ ಬರೆದು ಪ್ರಕಟಿಸಿದ ಅವರ Place Names of Mysore ಎಂಬ ಲೇಖನದಲ್ಲಿ ೬೦ಕ್ಕಿಂತ ಹೆಚ್ಚು ವಿಶಿಷ್ಟ ಮತ್ತು ವಾರ್ಗಿಕ

ಘಟಕಗಳನ್ನು ಗುರುತಿಸಿ ಚರ್ಚಿಸಿದ್ದಾರೆ. ಸ್ಥಳನಾಮಗಳ ಅಧ್ಯಯನದಿಂದ ಮಾನವನ ನೆಲೆಗಳ ಮೂಲ ಸ್ಥಾನ ಮತ್ತು ಬೆಳವಣಿಗೆ ಮೇಲಾಗಿ ಅವನ ವಲಸೆಗೆ ಇರಬಹುದಾದ ಕಾರಣಗಳು ಲಭ್ಯವಾಗುವುದಲ್ಲದೆ ಇತಿಹಾಸಕಾರನಿಗೆ ಇವುಗಳ ಪ್ರಧಾನವಾದ ಮಾಹಿತಿ ಮೂಲ ಸಂಗತಿಗಳಾಗುತ್ತವೆ ಎಂಬುದನ್ನು ಅವರು ಲೇಖನದಲ್ಲಿ ಹೇಳಿದ್ದಾರೆ.

ಶ್ರೀ ಕೆ.ಪಿ. ಪದ್ಮನಾಭ ಮೆನನ್‌ರವರು ಪುನಃ ೧೯೩೨ರಲ್ಲಿ Some Place Names of Malbar ಎಂಬ ಲೇಖನದಲ್ಲಿ ಕೇರಳ ಸ್ಥಳನಾಮಗಳ ಅರ್ಥವನ್ನು ವಿವರಿಸಿದ್ದಾರೆ. ಆದರೆ ೧೯೩೧ರಲ್ಲಿ ಶ್ರೀ ವಿ. ರಾಮ ವಿಶರೋಡಿಯವರು Journal of madras Geographical Association ದಲ್ಲಿ ಪ್ರಕಟಿಸಿದ ಲೇಖನವು ತುಂಬಾ ವಿವರವಾಗಿ ಮತ್ತು ಅಚ್ಚುಕಟ್ಟಾಗಿ ಮೂಡಿಬಂದಿದೆ. ತೆಲುಗು ಭಾಷೆಯಲ್ಲಿ ಸ್ಥಳ ನಾಮಗಳ ಅಧ್ಯಯನ ಕಾರ್ಯಕೈಗೆತ್ತಿಗೊಂಡವರಲ್ಲಿ ಡಾ. ಚಿಲಕೂರಿ ನಾರಾಯಣರಾವ್ ಅವರು ೧೯೩೫ರಲ್ಲಿ A Study of Place Names of Ananthpura Dist. ಎಂಬ ಲೇಖನವನ್ನು ಪ್ರಕಟಿಸಿದರು. ಇದರಲ್ಲಿ ತೆಲುಗು ಸ್ಥಳನಾಮಗಳ ಅಧ್ಯಯನದಲ್ಲಿ ಮೊಟ್ಟಮೊದಲು ಹೊರಬಂದ ಪುಸ್ತಕವೆಂದರೆ ೧೯೬೩ರಲ್ಲಿ ಮುಂಬಯಿಯ ಪಾಪ್ಯುಲರ್ ಪ್ರಕಾಶನದವರು ಪ್ರಕಟಿಸಿದ ಸೇವರಿನ್ ಸಿಲ್ವಾರವರ Toponomy of Canara ಆಗಿದೆ. ಇದು ತುಂಬಾ ವೈಜ್ಞಾನಿಕ ಹಾಗೂ ವ್ಯವಸ್ಥಿತವಾಗಿ ಮೂಡಿಬಂದಿದೆ. ತೆಲುಗು ಭಾಷೆಯಲ್ಲಿ ಸ್ಥಳನಾಮ ಅಧ್ಯಯನದ ಕಾರ್ಯ ಕೈಗೆತ್ತಿಕೊಂಡವರಲ್ಲಿ ಮೊದಲಿಗರಾದ ಡಾ. ಚಿಲಕೇರಿ ನರಾಯಣರಾವ್ ಅವರು ೧೯೩೫ರಲ್ಲಿ. A study of Places Names is Ananthapura Districe. ಎಂಬ ಲೇಖನವನ್ನು ಪ್ರಕಟಿಸಿದರು. ಇದರಲ್ಲಿ ತೆಲುಗು ಸ್ಥಳನಾಮಗಳ ಹಲವು ಪ್ರಯತ್ನಗಳ ಮೂಲ ರೂಪಗಳನ್ನು ಸಾಧಿಸಿ ಸೇರಿಸಿದ್ದಾರಲ್ಲದೆ ಅವುಗಳ ಮೇಲೆ ಪ್ರಾಕೃತಿಕ ಹಾಗೂ ಸಂಸ್ಕೃತ ಭಾಷೆಗಳ ಗಾಢ ಪ್ರಭಾವವನ್ನೆ ಮೊದಲ ಬಾರಿಗೆ ಗುರುತಿಸಿ ಚರ್ಚಿಸಿದ್ದಾರೆ. ಸ್ಥಳನಾಮಗಳನ್ನು ೧೯ ಗುಂಪುಗಳನ್ನಾಗಿ ವರ್ಗೀಕರಿಸಿ ಸ್ಥಳನಾಮಾಧ್ಯಯನದಲ್ಲಿ ಆದ್ಯತೆ ನೀಡಬಾರದು. ಐತಿಹಾಸಿಕ ಮತ್ತು ಭಾಷಾ ವೈಜ್ಞಾನಿಕ ವಿಧಾನಗಳಿಗೆ ಹೊರತು ಜನಪದ ನಿರುಕ್ತಿಗಳಲ್ಲ ಎಂಬ ವಾದವನ್ನು ಮಂಡಿಸಿದ್ದಾರೆ.

ರಾವ್ ಬಹದ್ದೂರ್ ರಾಮಚಂದ್ರ ಚೆಟ್ಟಿಯಾರರು ಸ್ಥಳನಾಮಗಳಿಗೆ ಸಂಬಂಧಿಸಿದಂತೆ ಅನೇಕ ಲೇಖನಗಳನ್ನು ಬರೆದಿದ್ದಾರೆ. The roiginal name of mahabalipuram (1936) ಎಂಬ ಲೇಖನವನ್ನು "Qurterly Journal of Mystic Society of India ಪತ್ರಿಕೆಯಲ್ಲಿ ಪ್ರಕಟಿಸುವುದೊದಿಗೆ ಸ್ಥಳನಾಮ ಬಗೆಗಿನ ನಮ್ಮ ಅಧ್ಯಯನವನ್ನಾರಂಭಿಸಿದರು. Place names if sourth canara District (1938) place names is Tamilnadu (1939) Place

names is Salem District ಇವು ಅವರ ಮಹತ್ವಪೂರ್ಣ ಲೇಖನಗಳಾಗಿವೆ. ಇವರ ಗಮನವು ಬಹುತೇಕ ಲೇಖನಗಳಲ್ಲಿ ಸ್ಥಳನಾಮಗಳ ಭೌಗೋಳಿಕ ಅಂಶಗಳಿಗೆ ಕೇಂದ್ರೀಕೃತವಾಗಿರುವುದು ಎದ್ದುತೋರುತ್ತದೆ. ಸ್ಥಳನಾಮಾಧ್ಯಯನ ಏನಿದ್ದರೂ ಭೌಗೋಳಿಕ ಅಂಶಗಳನ್ನು ಆಧಾರಪಟ್ಟಿಕೊಂಡಿರುವಂಥದ್ದು ಐತಿಹಾಸಿಕ ಆಧಾರಗಳು ನಂತರ ಲಕ್ಷಿಸುವಂತಹವುಗಳು ಎಂಬ ಅವರ ದೃಷ್ಟಿಕೋನ ಈ ಮಾತುಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಗಮನಿಸಬಹುದು.

"A student of grography finds much mofr useful naterial is such a study than one engage is any science"[3] ಒಂದು ಸೀಮಿತ ಕ್ಷೇತ್ರಕ್ಕೆ ಒಳಪಡುವ ಸ್ಥಳನಾಮಗಳನ್ನು ಕುರಿತು ಅಧ್ಯಯನ ಮಾಡುವುದರಿಂದ ಅತ್ಯುತ್ತಮ ಫಲಿತಾಂಶ ಹೊರಬರಲು ಸಾಧ್ಯವೆಂಬುದು ಅವರ ಸಲಹೆ ಮೆಚ್ಚುವಂಥದ್ದು ಮತ್ತು ಸ್ವಾಗತಾರ್ಹ.

ಶ್ರೀ ಕೆ. ಅಚ್ಯುತ ಮೆನನ್ನರು ೧೯೩೯ರಲ್ಲಿ ಕೊಚ್ಚಿನ್ ಪ್ರಾಂತ್ಯದ ಸ್ಥಳನಾಮಗಳನ್ನು ಕುರಿತಾದ ಲೇಖನವೊಂದನ್ನು ರಾಮವರ್ಮ ಸಂಶೋಧನಾ ಸಂಸ್ಥೆಯ ಬುಲೆಟಿನ್‌ನಲ್ಲಿ (VIII part-1 (1939) p.58 ಪ್ರಕಟಿಸಿದಲ್ಲದೆ ೧೯೪೩ರಲ್ಲಿ ಕೆಲ ಬದಲಾವಣೆಗಳೊಡನೆ ಈ ಲೇಖನ ಮುಂದುವರಿಸಲ್ಪಟ್ಟು "ಕೊಚ್ಚಿಯಲೆ ಸ್ಥೂಲ್ ನಾಮಗಳ್ (ತಿರಚೂರ್ ೧೯೪೩) ಎಂಬ ಶೀರ್ಷಿಕೆಯಿಂದ ಪುಸ್ತಕ ರೂಪದಲ್ಲಿ ಪ್ರಕಟವಾಯಿತು. ಪ್ರಾಯಶಃ ಭಾರತದಲ್ಲಿ ಸ್ಥಳನಾಮಗಳ ಬಗ್ಗೆ ಪ್ರಕಟಗೊಂಡ ಪ್ರಥಮ ಗ್ರಂಥ ಇದಾಗಿದೆಂದು ಭಾವಿಸಲಾಗಿದೆ. ಆದರೆ ಅವರಿಂದ ಮೊದಲು ಪ್ರಕಟಗೊಂಡ ಲೇಖನವೇ ನಂತರ ಪ್ರಕಟವಾದ ಪುಸ್ತಕಕ್ಕಿಂತ ಹೆಚ್ಚು ವೈಜ್ಞಾನಿಕ ಮತ್ತು ಗಂಭೀರ ಬರವಣಿಗೆಯಿಂದ ಕೂಡಿದ್ದಾಗಿದೆಯೆಂಬುದು ವಾಸ್ತವ. ಶ್ರೀ ಬಿ.ಎಸ್. ಉಪಾಧ್ಯಾಯರವರನ್ನು ಅವರ ವಿಭಿನ್ನ ದೃಷ್ಟಿಕೋನದ ಅಧ್ಯಯನದ ವಿಶೇಷದಿಂದ ಹೆಸರಿಸಬೇಕಾಗುತ್ತದೆ. ಕಾಳಿದಾಸನು ತನ್ನ ಮಹಾಕಾವ್ಯದಿಂದ 'ರಘುವಂಶ'ದಲ್ಲಿ ರಘು ಮಹಾರಾಜನ ವಿಗ್ವಿಜಯವನ್ನು ವಿವರಿಸುವ ಆಧಾರದ ಮೇಲೆ ಭಾರತದ ಪ್ರಾಚೀನ ಕಾಲದ ಗಡಿ ರೇಖೆಗಳನ್ನು ನಿರ್ಧರಿಸುವ ಪ್ರಯತ್ನ ಮಾಡಿದ್ದಾರೆ. ಆಫ್ಘಾನಿಸ್ಥಾನ ಮತ್ತು ಬಲೂಚಿ ಸ್ಥಾನಗಳು ಪ್ರಾಚೀನ ಭಾರತದ ಭಾಗಗಳೇ ಆಗಿವೆಯೆಂದು ನಿರ್ಣಯಿಸಿದ್ದಾರೆ. ಕಾಳಿದಾಸನು ಭಾರತದ ನೈಸರ್ಗಿಕ ಮತ್ತು ಆದರ್ಶಪ್ರಾಯ ಗಡಿಯನ್ನು ಪ್ರಾಮಾಣಿಕವಾಗಿ ಗುರುತಿಸಿದ್ದಾನೆಂಬ ಭಾವನೆಯನ್ನು ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

A Place Names in Tamilnadu J.O. M.G.A. (General of Madras) 1939, Page 32

ಡಾ. ಜಿ.ಎಸ್. ಗಾಯಿ, ಡಾ. ಎ.ಎನ್. ನರಸಿಂಹಯ್ಯ ರಾಹುಲಿ ಸಾಂಕೃತಾಯಿನ, ಡಾ. ಪಿ.ಬಿ. ದೇಸಾಯಿ, ಡಾ. ಶ್ರೀನಿವಾಸ ರಿತ್ತಿ ಮುಂತಾದ ಇತಿಹಾಸಕಾರರು ತಮ್ಮ ಲೇಖನಗಳಲ್ಲಿ ಐತಿಹಾಸಿಕ ಸ್ಥಳನಾಮಗಳಿಗೆ ಸಂಬಂಧಿಸಿದ ಅನೇಕ ಉಲ್ಲೇಖಗಳನ್ನು ನೀಡಿದ್ದಾರೆ. ಭಾರತೀಯ ಸ್ಥಳನಾಮ ಸಂಸ್ಥೆಯ ಮೊದಲನೆಯ ಅಧ್ಯಕ್ಷರಾಗಿದ್ದ ಡಾ. ದೇ.ಜ.ಗೌರವರು ಸ್ಥಳನಾಮಾಧ್ಯಯನ ಕ್ಷೇತ್ರಕ್ಕೆ ಹಲವು ಲೇಖನಗಳು ಮತ್ತು ಪುಸ್ತಕಗಳನ್ನು ನೀಡಿ ಪ್ರಶಂಸಾರ್ಹ ಸೇವೆ ಸಲ್ಲಿಸಿದ್ದಾರೆ. ಡಾ. ಶಂ.ಬಾ. ಜೋಶಿರವರು "Ethnology of place names patti hatti." ಎಂಬ ಲೇಖನವನ್ನು ೧೯೫೨ರಲ್ಲಿ ಪ್ರಕಟಿಸಿದರು. ಡಾ. ಆರ್.ಸಿ. ಹಿರೇಮಠ, ಶ್ರೀ ಎಸ್. ಸಿಲ್ವಾರವವರುಗಳೂ ಸ್ಥಳನಾಮಾಧ್ಯಯನ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿದ್ದಾರೆ. ಡಾ. ಕೆ. ನಾಚಿಮುತ್ತುರವರು Methodology is place Name studies' ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ. ಶ್ರೀ ಕೆ.ಎಸ್. ಸಿಂಗ್‌ರವರಿಂದ Place names and personal names. An Anthropo Historical perspective ಎಂಬ ಗ್ರಂಥರಚನೆಯಾಗಿದೆ. ೧೯೮೭ರಲ್ಲಿ Perspectives is Indian Place Names ಎಂಬ ಕೃತಿ ಪಿ. ರಾಮಚಂದ್ರನ್ ಮತ್ತು ಡಾ. ಕೆ. ನಾಚಿಮುತ್ತು ಅವರಿಂದ ಪ್ರಕಟವಾಗಿದ್ದು ಭಾರತದಲ್ಲಿ ಸದ್ಯ ನಡೆದ ಸ್ಥಳನಾಮಾಧ್ಯಯನಗಳ ಸಮಗ್ರ ಆಲೋಚನೆಯನ್ನೊಳಗೊಂಡಿದ್ದಾಗಿದೆ.

ಈಗ ಸ್ಥಳನಾಮ ಅಧ್ಯಯನಕ್ಕೆ ಸಂಬಂಧಿಸಿದ ಲೇಖನ ಮತ್ತು ಗ್ರಂಥಗಳ ಸಂಖ್ಯೆ ಒಟ್ಟು ೩೬೧ಕ್ಕೂ ಮೀರಿ ಬೆಳೆದಿವೆ, ಆದರೆ ೧೯೭೦ರವರೆಗೆ ಮೂರು ಪುಸ್ತಕಗಳು, ೨೮ ಇಂಗ್ಲಿಷ್ ಲೇಖನಗಳು, ೬ ತೆಲುಗು ಲೇಖನಗಳು ಒಟ್ಟು ೪೫ಕ್ಕೆ ಮೀರಿರಲಿಲ್ಲ.[೪] ಇದರಲ್ಲಿನ ಪ್ರಮುಖ ಅಧ್ಯಯನಗಳನ್ನು ಭಾಷಿಕವಾಗಿ ವರ್ಗೀಕರಿಸಿ ಪರಿಚಯಿಸುವುದಾದಲ್ಲಿ ಅದೊಂದು ಉತ್ತಮ ಕೊಡುಗೆಯಾಗುತ್ತದೆ. ಡಾ. ಕೆ.ಎಂ. ಜಾರ್ಜರವರು ದಕ್ಷಿಣ ಭಾರತದ ಸ್ಥಳನಾಮಗಳ ಬಗೆಗೆ ಸ್ಮರಣೀಯ ಕಾರ್ಯ ಗೈದಿದ್ದಾರೆ.

೩.೫ ಉತ್ತರಭಾರತ:

ಉತ್ತರ ಭಾರತದಲ್ಲಿ ಸ್ಥಳನಾಮಗಳಿಗೆ ಸಂಬಂಧಿಸಿದ ಅಧ್ಯಯನ ವಿಶೇಷವಾಗಿ ಇತಿಹಾಸಕಾರರಿಂದ ಆರಂಭಗೊಂಡುದಾಗಿದೆ. ಈ ದಿಕ್ಕಿನಲ್ಲಿ ಮ್ಯಾಕ್ ಡೋನಲ್ ಮತ್ತು ಎ.ಬಿ. ಕೀತ್‌ರವರ "Vedia Index of Names and Subjects" ಎಂಬ ಕೋಶ ಮತ್ತು ಎಂ.ಆರ್. ಸಿಂಗ್‌ರವರ 'geographical data in early puranas' ಪ್ರಾಚೀನ ಸ್ಥಳನಾಮಗಳ ಮೇಲೆ ಬೆಳಕು ಬೀರಬಲ್ಲವು. ಅಮೀತ್ ರೇ ರವರ Villages Towns and Secular

೪. ONOMA - Vol. XV, Louvain, Belgum - 1970

buildings is Ancient India. ಎ. ಘೋಷ ಅವರ The city in early India ಮುಂತಾದವುಗಳು ಐತಿಹಾಸಿಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವಪೂರ್ಣ ಕೊಡುಗೆಯೆನಿಸಿದೆ.

ಉತ್ತರ ಮತ್ತು ಮಧ್ಯ ಭಾರತದ ಪ್ರಾಂತೀಯ ಸ್ಥಳನಾಮಾಧ್ಯಯನಗಳಿಗೆ ಸಂಬಂಧಿಸಿದ ಮಹತ್ವಪೂರ್ಣ ಕೆಲವು ಗ್ರಂಥ ಹಾಗೂ ಲೇಖನಗಳು ಪರಿಚಿತಗೊಂಡಿವೆ. ಮನಮೋಹನ ಕುಮಾರ ಎಂಬುವವರು ಹರಿಯೂರು ಕುರುಕ್ಷೇತ್ರ ಜಿಲ್ಲೆಯ ಸ್ಥಳನಾಮಗಳನ್ನು ಮತ್ತು ಜಯದೇವ ವಿದ್ಯಾಲಂಕಾರ ಅವರು ಹರಿಯಾಣದ ಕುರುಕ್ಷೇತ್ರ ಜಿಲ್ಲೆಯ ಸ್ಥಳನಾಮಗಳನ್ನು ಮತ್ತು ಜಯದೇವ ವಿದ್ಯಾಶಂಕರ್ ಅವರು ಹರಿಯಾಣದ ಕೆಲವು ಸ್ಥಳನಾಮ ಘಟಕಗಳನ್ನು ಕುರಿತಾದ ಲೇಖನಗಳನ್ನು ಬರೆದಿದ್ದಾರೆ. (Studies is Indian Place names) ಜವಾಹರಲಾಲ ಹಂತೂ ಕಾಶ್ಮೀರಿ ಸ್ಥಳನಾಮಗಳ ಜಾನಪದ ಅಧ್ಯಯನ ಕುರಿತಾದ ಲೇಖನ ಪ್ರಕಟಿಸಿದ್ದಾರೆ. (Studies in Indian place names - 2) ಜಲ್ ಮತ್ತು ಹಖಿಸನ್‌ರವರು (History f punjab Hill States) ಎಂಬ ಗ್ರಂಥ ಪ್ರಕಟಿಸಿದ್ದಾರೆ. ಕಾವುಲ್ ಡಿಯಾಂಬಿಯವರು 'ಶಾಸನ ತಾಮ್ರಲಿಪಿ'ಯಲ್ಲಿನ ಪಂಜಾಬಿನ ಕೆಲವು ಸ್ಥಳನಾಮಗಳನ್ನು ಗುರುತಿಸಿದ್ದಾರೆ. ಬಿ. ಕಾಕತಿಯವರು ಅಸ್ಸಾಮಿನ ಸ್ಥಳನಾಮಗಳನ್ನು ಕುರಿತು ಅಧ್ಯಯನ ಕೈಗೊಂಡು ಏಳನೆಯ ಶತಮಾನದಿಂದ ಹದಿಮೂರನೆಯ ಶತಮಾನದವರೆಗಿನ ಶಾಸನಗಳ ಆಧಾರದ ಮೇಲೆ (Inscriptional evidence) ಕಾರ್ಯಗೈದಿದ್ದಾರೆ.

೩.೬ ದ್ರಾವಿಡ ಭಾಷೆಗಳಲ್ಲಿ ಸ್ಥಳನಾಮ ಅಧ್ಯಯನ:

ರಾಷ್ಟ್ರಮಟ್ಟದ ಸ್ಥಳನಾಮಗಳ ಅಧ್ಯಯನವು ಎಚ್. ಬ್ಲಾಕಮನ್, ಪಿ.ಎಸ್. ವೈಚಿವೇ, ಎಸ್.ಕೆ. ಚಟರ್ಜಿ, ಎಸ್.ಕೆ. ಬೋಸ, ಸಿ. ಹಯವದನರಾವ್, ಸಿ.ಎಂ. ರಾಮಚಂದ್ರ, ಚೆಟ್ಟಿಯಾರ್ ಕೆ. ಅಚ್ಯುತ್ ಮೆನನ್, ವಿ. ರಾಮವಿಶರೋಡಿ, ಆರ್.ಪಿ. ಸೇತು ಪಿಳ್ಳೈ ಮತ್ತು ಹೆಚ್.ಡಿ. ಸಂಕಾಲಿಯಾ ಮುಂತಾದ ಹಲವು ವಿದ್ವಾಂಸರಿಂದ ನಡೆಯಲ್ಪಟ್ಟ ಗಣನೀಯವಾಗಿ ಸ್ಥಳನಾಮ ಶಾಸ್ತ್ರಕ್ಕೆ ಮಾನ್ಯತೆ ದೊರೆಯಲು ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತೀಯ ಭಾಷೆಗಳಾದ ತಮಿಳು, ತೆಲುಗು, ಮಲೆಯಾಳಂ ಮತ್ತು ಕನ್ನಡದಲ್ಲಿ ನಡೆದುಬಂದ ಬಗೆಯನ್ನು ಸ್ಥೂಲವಾಗಿ ನೋಡಬಹುದಾಗಿದೆ.

೩.೭ ತಮಿಳುನಾಡು:

೧೯೩೯ರಲ್ಲಿ ರಾವ್‌ಬಹದ್ದೂರ್ ಸಿ.ಎಂ. ರಾಮಚಂದ್ರ ಚೆಟ್ಟಿಯಾರ್ ಅವರಿಂದ

೧೯೩೯ರಲ್ಲಿ ರಚನೆಗೊಂಡ Place Names in Tamilnadu ಎಂಬ ಲೇಖನ ತಮಿಳಿನಲ್ಲಿ ಸ್ಥಳನಾಮಾಧ್ಯಯನದ ಬಗ್ಗೆ ಹೊರಬಂದ ಪ್ರಥಮ ಲೇಖನವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಶತಮಾನದ ನಲವತ್ತರ ದಶಕದಲ್ಲಿ ಸ್ಥಳನಾಮಶಾಸ್ತ್ರದ ಪುರೋಭಿವೃದ್ಧಿಗೆ ದುಡಿದ ಡಾ. ಆರ್.ಪಿ. ಸೇತು ಪಿಳ್ಳೆರವರ ಹೆಸರು ಅವಿಸ್ಮರಣೆಯವಾದುದಾಗಿದೆ. ಇವರು ಸ್ಥಳನಾಮ ಶಾಸ್ತ್ರದ ಬಗ್ಗೆ ಬರೆದ ಲೇಖನಗಳ ಸಂಕಲನ "Tomilkam urum perum - ೧೯೪೬ರಲ್ಲಿ ಪ್ರಕಟಗೊಂಡಿದೆ.

ದ್ರಾವಿಡ ಭಾಷೆಯ ಸ್ಥಳನಾಮಗಳು 'ಸಂಗಂ ಸಾಹಿತ್ಯದ ಕವಿಗಳು ಮತ್ತು ಸ್ಥಳನಾಮಗಳು' ಎಂಬ ಲೇಖನಗಳೂ ಇವರ ಮಹತ್ವಪೂರ್ಣ ಕೊಡುಗೆಗಳಾಗಿವೆ. ಇವರ ಮಾರ್ಗದರ್ಶನದಲ್ಲಿ ಟಿ.ಎ. ಚೊಕ್ಕಲಿಂಗರವರು "History places of Ancient Tamilnadu' ಎಂಬ ಪ್ರಬಂಧವನ್ನು ರಚಿಸಿ ಎಂಲಿಟ್ ಪದವಿ ಪಡೆದಿದ್ದಾರೆ. ಡಾ. ಎಸ್. ಜ್ಞಾನಿ ಮುತ್ತ, ವಿ.ಐ. ಸುಬ್ರಮಣಿಯಂರವರ ಮಾರ್ಗದರ್ಶನದಲ್ಲಿ ಸ್ಥಳನಾಮಾಧ್ಯಯನ ಗೈದಿದ್ದಾರೆ. "Place names of Trivandrum District" ಇವರ ಪ್ರಥಮಕೃತಿ. ಅನಂತರ ಅವರಿಂದ ರಚಿತವಾದ "Place Names of Kanyakumar, District." ಎಂಬ ಮಹಾಪ್ರಬಂಧಕ್ಕೆ ೧೯೭೨ರಲ್ಲಿ ಕೇರಳ ವಿಶ್ವವಿದ್ಯಾಲಯದ ಪಿ.ಎಚ್.ಡಿ. ಪದವಿ ಲಭ್ಯವಾಗಿದೆ.

ಡಾ. ಸುಬ್ಬುರಾಯಲು ಅವರ ಪ್ರಕಟಿಸಿದ ಮಹಾಪ್ರಬಂಧ "Political geography of the chola country - 1973) ದಲ್ಲಿ ಕ್ರಿ.ಶ. ೮೦೦ ರಿಂದ ಕ್ರಿ.ಶ. ೧೩೦೦ರ ವರೆಗಿನ ಶಾಸನಗಳಲ್ಲಿನ ಸ್ಥಳನಾಮ ಘಟಕಗಳ ಅಧ್ಯಯನ ಕಾಣಬಹುದಾಗಿದೆ. ಇದೇ ತೆರನಾದ ಅಧ್ಯಯನ ಕೆ.ಎನ್. ವೈದ್ಯನಾಥನ್‌ರವರ "The Ancient geography of the Konga Counry" ಕೃತಿಯಲ್ಲಿ ಕಾಣಬಹುದಾಗಿದೆ.

ಪ್ರಾಚೀನ ಸ್ಥಳನಾಮಗಳನ್ನು ಪತ್ತೆ ಮಾಡುವ ಕಠಿಣ ಅಧ್ಯಯನ ಕಾರ್ಯಗಳೂ ಸಾಕಷ್ಟು ಪ್ರಮಾಣದಲ್ಲಿ ನಡೆದಿವೆ. ಮಹಾಬಲಿಪುರಂ ನಂತಹ ಒಂದು ನಿರ್ದಿಷ್ಟ ಸ್ಥಳನಾಮಾಧ್ಯಯನವನ್ನೇ ಸಿ.ಎಂ. ರಾಮಚಂದ್ರ ಬೆಟ್ಟೆಯಾರ್ (೧೯೩೭) ಎಂ. ಭಾಸ್ಕರ್ ತೊಂಡೈಮನ್ (೧೯೬೧) ಎ.ಸಿ. ಷಣ್ಮುಖ ನಯನಾರ (೧೯೬೭) ಎಸ್.ವಿ. ನಟರಾಜನ್ (೧೯೬೭) ಎಸ್. ಸುಬ್ಬಯ್ಯ (೧೯೬೭) ಡಾ. ಎಸ್. ಸುಬ್ಬು ರೆಡ್ಡಿಯಾರ್ (೧೯೭೩) ಎ. ರಾಜೇಂದ್ರನ್ (೧೯೭೩) ತಮಿಳುನಾಡಿನ ಪುಣ್ಯಕ್ಷೇತ್ರಗಳ ಐತಿಹಾಸಿಕ ಮತ್ತು ಧಾರ್ಮಿಕ ಪ್ರಾಮುಖ್ಯತೆಯನ್ನು ಗುರುತಿಸುವ ಪ್ರಯತ್ನ ಹಾಗೂ ಲೇಖಕರು ಮಾಡಿದ್ದಾರೆ. ೧೯೬೩ರಲ್ಲಿ Puliyur Kecikam ರವರು Pukal Perra Perukal ಎಂಬ ಗ್ರಂಥವನ್ನು ಪ್ರಕಟಿಸಿದ್ದಾರೆ.

ಅದರಲ್ಲಿ ತಮಿಳುನಾಡಿನ ಕೆಲವು ಪ್ರಮುಖ ನಗರಗಳ ಅಧ್ಯಯನ ಮಾಡಿದ್ದಾರೆ. ಡಾ. ಸೋಮಾಲೆರವರು ಪ್ರಕಟಿಸಿರುವ ಪುಸ್ತಕ ಮಾಲೆಯಿಂದ ತಮಿಳುನಾಡಿನ ಐದು ಜಿಲ್ಲೆಯ ಪ್ರಮುಖ ನಗರಗಳ ಅಧ್ಯಯನ ಗೊತ್ತಾಗುತ್ತದೆ. ಇದೇ ತೆರನಾದ ಅಧ್ಯಯನ ವಿ.ಎನ್. ಚಿನ್ನ ಪಾಂಡ್ಯನ್‌ರವರ 'Nellar mavttaurum peyarum (1982) ಕೃತಿಯಲ್ಲಿ ಕಂಡುಬರುತ್ತದೆ.

ಶ್ರೀಲಂಕಾದಲ್ಲಿ ತಮಿಳು ಭಾಷೆಯನ್ನಾಡುವ ಜನರು ನೆಲೆಸಿರುವ ಸ್ಥಳನಾಮಗಳನ್ನು ಕುರಿತಂತೆ ಅಧ್ಯಯನ ನಡೆದಿದೆ. ೧೯೧೬ರಲ್ಲಿ ಶ್ರೀ ಎನ್. ಜ್ಞಾನಪ್ರಕಾಶ್‌ರ Sinhalese places names in Jaffna peninsula. 1917. ರಲ್ಲಿ ಬಿ. ಹಾರ್ಸ್‌ಬರ್ಗ್ Place names is Juffna ಕೆ. ಕುಲರತ್ನ 1968 ರಲ್ಲಿ Tamil place names in cyclone ಕೆ. ನಟರಾಜ್ ೧೯೬೮ ರಲ್ಲಿ The name yalappanam ಎಂಬ ಲೇಖನಗಳನ್ನು ಕೊಟ್ಟಿದ್ದಾರೆ. ಇಂಥದೇ ಪ್ರಯತ್ನ ಮಲಯಾಳಂ ಸ್ಥಳನಾಮಗಳನ್ನು ಕುರಿತು ದುರೈರಾಜ ಸಿಂಗ್‌ರವರು ಮಾಡಿದ್ದಾರೆ. ಇವರೆಲ್ಲರ ಕಾರ್ಯ ಸ್ತುತ್ಯಾರ್ಹವಾದದು.

೩.೮ ಆಂಧ್ರಪ್ರದೇಶ:

ತೆಲುಗು ನಾಡಿನಲ್ಲಿ ೧೯೩೦ರಷ್ಟು ಪೂರ್ವದಲ್ಲಿಯೇ ಚಿಲಕೂರಿ ನಾರಾಯಣರಾಯರು ಸ್ಥಳನಾಮಾಧ್ಯಯನದ ಪ್ರಾಮುಖ್ಯತೆಯನ್ನು ಪ್ರಸ್ತುತಪಡಿಸಿದರು. ಸ್ಥಳನಾಮಗಳ ಅಧ್ಯಯನ ಕಾರ್ಯದಲ್ಲಿ ಎದುರಿಸಬೇಕಾಗಿ ಬರುವ ಎಡರು ತೊಡರುಗಳನ್ನು ಮತ್ತು ಅಧ್ಯಯನದ ಉಪಯುಕ್ತತೆಯನ್ನು 'ಆಂಧ್ರ ಭಾಷಾ ಚರಿತ್ರೆ'ಯಲ್ಲಿ ತೋರಿಸಿದ್ದಾರೆ. ಇದೇ ರೀತಿಯ ಕೆಲಸವನ್ನು 'ಆಂಧ್ರಪ್ರದೇಶ ಗ್ರಾಮನಾಮ ಸಂಕೇತಿಕಮುಲು' ಲೇಖನದಲ್ಲಿ ಮಾಡಿದ್ದಾರೆ. ಅವರ ಈ ಲೇಖನ 'ಆಂಧ್ರ ವಿಜ್ಞಾನಮು ಸರ್ವಸ್ವಮು' ಪತ್ರಿಕೆಯಲ್ಲಿ ಪ್ರಕಟಗೊಂಡಿದೆ. ಎಂ.ಎಸ್. ತ್ಯಾಗರಾಜುರವರು "Journal of Andra Historical Research Society"ಯ ಸಂಚಿಕೆಗಳಲ್ಲಿ ಹಲವು ಲೇಖನಗಳು ಕೊಟ್ಟಿದ್ದಾರೆ. ವಿದ್ವಾಂಸರಾದ ಎಂ. ಸೋಮಯಾಜಲು ೧೯೪೫ರ ಅಕ್ಟೋಬರ್‌ನ 'ಭಾರತಿ'ಯಲ್ಲಿ 'ಜನಪದಮುಲು' ಎಂಬ ಲೇಖನವನ್ನು ಶ್ರೀಮತಿ ಎಸ್. ಕೃಷ್ಣಕುಮಾರಿಯವರು ೧೯೫೦ರಲ್ಲಿ ಪೆಬ್ರವರಿಯ 'ಭಾರತಿ'ಯಲ್ಲಿ 'ತೆಲುಗು ಊರ್ಲ ಪೇರ್ಲು' ಎಂಬ ಲೇಖನವನ್ನು ಮತ್ತು ಪ್ರೊ. ಟಿ. ಡೋಣಪ್ಪನವರು ೧೯೬೯ರ ನವೆಂಬರ್‌ನಲ್ಲಿ 'ಪ್ರಜಾಧರ್ಮ'ದಲ್ಲಿ 'ಪಚ್ಚಣಾಲು ಪೇರ್ಲು' ಮತ್ತು 'ಪೂರ್ವೋತ್ತರಲು' ಎಂಬ ಲೇಖನಗಳ ಮೂಲಕ ಸ್ಥಳನಾಮಾಧ್ಯಯನ ಕ್ಷೇತ್ರವನ್ನು ವಿಸ್ತರಿಸಿದ್ದಾರೆ. ಡಾ. ಬಿ. ರಾಧಾಕೃಷ್ಣಮೂರ್ತಿರವರು ೧೯೭೧ರ "Early Telugu inscription ಎಂಬ ಲೇಖನದಲ್ಲಿ ತೆಲುಗು ಸ್ಥಳನಾಮಗಳ ವ್ಯುತ್ಪತ್ತಿಯ ಬಗ್ಗೆ ಚರ್ಚಿಸಿದ್ದಾರೆ. ೧೯೬೪ರಲ್ಲಿ 'A Historical and camparative gramer

of Early Telugu Inscrition' ಎಂಬ ಮಹಾಪ್ರಬಂಧಕ್ಕೆ ಪಿ.ಎಚ್.ಡಿ. ಪದವಿ ಲಭಿಸಿದೆ. ಈ ಪ್ರಬಂಧದಲ್ಲಿ ಸ್ಥಳನಾಮಗಳ ಚರ್ಚೆಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗಿದೆ.

೩.೯ ಕೇರಳ:

ಡಾ. ಗುಂಡರ್ಟರವರು ಪ್ರಕಟಿಸಿದ ಮಲೆಯಾಳಂ ಶಬ್ದಕೋಶದಲ್ಲಿ ಕೇರಳದ ಹಲವು ಸ್ಥಳನಾಮಗಳನ್ನು ಕುರಿತು ಪ್ರಸ್ತಾಪಿಸಿದ್ದಾರೆ. ಇವರ ನಂತರ ಮುವತ್ತು ವರ್ಷಗಳ ತುರುವಾಯ ೧೯೦೨ರಲ್ಲಿ ಕೆ.ಪಿ. ಪದ್ಮನಾಭ ಮೆನನ್ನರು ಕೇರಳ ಪ್ರಾಂತವನ್ನು ಒಂದು ಘಟಕವನ್ನಾಗಿ ಮಾಡಿಕೊಂಡು ಮಲಬಾರಿನ ಸ್ಥಳನಾಮಗಳ ಬಗೆಗೆ ಲೇಖನ ಬರೆದರು. ಪರಶುರಾಮ ಕ್ಷೇತ್ರ, ಕರ್ಮಭೂಮಿ, ಕೇರಳಂ, ಮಲಬಾರ್ ಮತ್ತು ಮಲೆಯಾಳಂ ಈ ಹೆಸರುಗಳು ಅವರಿಂದ ಅಧ್ಯಯನಕ್ಕೊಳಪಟ್ಟವು. ಶ್ರೀ ಮೆನನ್ನರ ಮಾರ್ಗಾನುಸಾರಿಯಾಗಿ ವಿ. ರಾಮದೇಶ ಕೋಡಿರವರು ಮಲಬಾರ್ ಸ್ಥಳನಾಮಗಳ ಬಗ್ಗೆ ಉತ್ತಮ ಕಾರ್ಯವನ್ನು ಮಾಡಿದ್ದಾರೆ. ೧೯೪೪ರಲ್ಲಿ ಟಿ. ಲಕ್ಷ್ಮಣಪಿಳ್ಳೆ ಮತ್ತು ಟಿ.ಕೆ. ಜೋಸೆಫ್‌ರವರು ೧೯೫೬ರಲ್ಲಿ ಕೇರಳ ಸ್ಥಳನಾಮಗಳ ಅಧ್ಯಯನದಲ್ಲಿ ಭೌಗೋಳಿಕತೆಯ ಪ್ರಾಧಾನ್ಯತೆ ಮತ್ತು ತೌಲನಿಕ ಅಧ್ಯಯನದ ಅವಶ್ಯಕತೆಯನ್ನು ಕುರಿತು ಲೇಖನಗಳನ್ನು ಪ್ರಕಟಿಸಿದ್ದಾರೆ. ಪ್ರೊ. ಎಲಂಕುಲಂ ಕುಂಜನ್ ಪಿಳ್ಳೈ, ಪ್ರೊ. ತಿರನಲ್ಲೂರ್ ಕರುಣಾಕರನ್ ಮತ್ತು ಇತರೆ ವಿದ್ವಾಂಸರು ಕೇರಳ ಇತಿಹಾಸದ ಪುನರ್ ನಿರ್ಮಾಣದಲ್ಲಿ ಸ್ಥಳನಾಮಾಧ್ಯಯನದ ಅವಶ್ಯಕತೆಯನ್ನು ಕುರಿತು ಲೇಖನಗಳನ್ನು ಬರೆದಿರುವರು. ಶ್ರೀ ವಿ.ವಿ.ಕೆ. ವಲತ್‌ರವರು ೧೯೬೯ ಮತ್ತು ೧೯೭೮ರಲ್ಲಿ ಕೇರಳದ ಸ್ಥಳನಾಮಗಳನ್ನು ಕುರಿತು ಎರಡು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ೧೯೭೭ರಲ್ಲಿ ಶ್ರೀ ಇಡಮುರುಕುರವರು ಸ್ಥಳ ಪುರಾಣಗಳನ್ನು ಪ್ರಕಟಿಸಿದ್ದಾರೆ. ಡಾ. ವಿ.ಐ. ಸುಬ್ರಮಣಿಯಂರವರ ವಿದ್ವತ್‌ಪೂರ್ಣ ಮಾರ್ಗದರ್ಶನದಲ್ಲಿ ೧೯೬೫ರಲ್ಲಿ ತ್ರಿವೇಂದ್ರಂ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ಕೈಗೊಂಡರು. ೧೯೭೭ರಲ್ಲಿ ಕನ್ಯಾಕುಮಾರಿ ಜಿಲ್ಲೆಯ ಸ್ಥಳನಾಮಗಳನ್ನು ಕುರಿತು ಅಧ್ಯಯನ ಕೈಗೊಂಡರು. ಕ್ರಮವಾಗಿ ಇವು ಎಂ. ಲಿಟ್ ಮತ್ತೆ ಪಿಎಚ್.ಡಿ. ಪದವಿಗಳಿಗೆ ರಚಿತವಾದ ಮಹಾಪ್ರಬಂಧಗಳು.

ಎಪ್ಪತ್ತರ ದಶದಕಲ್ಲಿ ಸ್ಥಳನಾಮಾಧ್ಯಯನವು ಕೇರಳದಲ್ಲಿ ಸಂಶೋಧನೆಯ ಒಂದು ಹೊಸ ಶಾಖೆಯಾಗಿ ಬೆಳೆಯಿತು ಟಿ. ಬಾಲಕೃಷ್ಣನ್ ನಾಯಕ್, ಎನ್.ವಿ. ಕೃಷ್ಣ ವಾರಿಯರ್, ಎನ್.ಆರ್. ಗೋಪಿನಾಥ್ ಪಿಳ್ಳೈ, ಎಂ.ಆರ್. ರಾಘವ ವಾರಿಯರ್, ಎಂ.ಜಿ.ಎಸ್. ನಾರಾಯಣನ್, ಕೇಶವನ್, ಡಾ. ಪುತ್ತುಚೆರಿ ರಾಮಚಂದ್ರನ್ ಮೊದಲಾದ ಮುಖ್ಯರು ಅತ್ಯುತ್ತಮ ಬರಹಗಳನ್ನು ನೀಡಿದ್ದಾರೆ. ಡಾ. ಕೆ.ಎಂ. ಜಾರ್ಜ್‌ರವರ 'Place Name of

Southern India' ಮತ್ತು 'A generic approach to Toponymy' ಬರಹಗಳು ಸ್ಥಳನಾಮ ಕ್ಷೇತ್ರಕ್ಕೆ ನೀಡಿದ ಮೌಲಿಕ ಕೊಡುಗೆಗಳಾಗಿವೆ. ಕೇರಳ ಮತ್ತು ಕ್ಯಾಲಿಕಟ್ ವಿ.ವಿಗಳು ಕ್ವಿಲಾನ್, ಕೊಟ್ಟಾಯಂ, ಪಾಲ್ಘಿಟ್ ಮತ್ತು ಕ್ವಾಲಿಕಟ್ ಜಿಲ್ಲೆಗಳ ಸ್ಥಳನಾಮಗಳ ಮೇಲೆ ಸಂಶೋಧನೆ ಕೈಗೊಳ್ಳಲು ವಿದ್ವಾಂಸರನ್ನು ಪ್ರೋತ್ಸಾಹಿಸಿವೆ. ಕೇರಳ ರಾಜ್ಯದ ಭಾಷೆಯ ಸಂಸ್ಥೆಯು ಕೇರಳ ಸ್ಥಳನಾಮಗಳ ಶಬ್ದಕೋಶದ ರಚನೆಗೆ ಶ್ರಮಿಸಿದೆ, ಪ್ರಾಚೀನ ನಾಡಿನ ಸ್ಥಳನಾಮಗಳು ಮತ್ತು ತಿರುವಾಂಕೂರಿನ ಶಾಸನಗಳಲ್ಲಿ ಉತ್ತಮವಾದ ಸ್ಥಳನಾಮಗಳ ಬಗ್ಗೆಯೂ ಅಧ್ಯಯನವು ನಡೆಯಲ್ಪಟ್ಟಿದೆ.

ಕೇರಳ ಸಾಂಸ್ಕೃತಿಕ ಜೀವನವನ್ನೇ ಬಿಂಬಿಸುವ, ಭೌಗೋಳಿಕ ಹಾಗೂ ನೈಸರ್ಗಿಕ ಸೊಬಗನ್ನು ಪ್ರತಿನಿಧಿಸುವ ಹೇರಳ ಸಂಖ್ಯೆಯ ಸ್ಥಳನಾಮಗಳ ಮಹಾನ್ ಸಂಪತ್ತು, ಇದು ವಿದ್ವಾಂಸರು ಈ ದಿಸೆಯಲ್ಲಿ ಕಾರ್ಯತತ್ಪರರಾದರೆ ಕೇರಳದ ನೈಜ ಸಾಮಾಜಿಕ ಬದುಕಿನ ಇತಿಹಾಸವೂ ತಿಳಿದುಬರಬಲ್ಲವು.

೩.೧೦ ಕರ್ನಾಟಕ ನೆಲೆಯಲ್ಲಿ

ಕರ್ನಾಟಕ ಸ್ಥಳನಾಮಗಳನ್ನು ಕುರಿತು ಬಹು ಪೂರ್ವದಲ್ಲಿಯೇ ಅಧ್ಯಯನ ಆರಂಭಿಸಿದವರೆಂದರೆ ಡಾ. ಶಂ.ಬಾ. ಜೋಷಿಯವರು. ಇವರು ೧೯೩೬ರಲ್ಲಿ ಎಡೆಗಳು ಹೇಳುವ ಕಂನಾಡ ಕಥೆ, ಅನಂತರ ಕನ್ನಡದ ನೆಲೆ ಎಂಬ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಸಿ. ಹಯವದನರಾಯರು ಬರೆದ The Place Names of Mysore ಮತ್ತು ಡಾ. ಆರ್.ಸಿ. ಹಿರೇಮಠ ಅವರು Linguistic Investigation of Some Places in Karnataka ಮಹತ್ವದ ಲೇಖನಗಳಾಗಿವೆ. ಸೇಡಿಯಾಪು ಕೃಷ್ಣಭಟ್ಟರ ಕೆಲವು ದೇಶನಾಮಗಳು ಎಂಬ ಪುಸ್ತಕ ಸ್ಥಳನಾಮಗಳನ್ನು ಕುರಿತು ಚರ್ಚಿಸುವಂಥದ್ದಾಗಿದೆ. ಶ್ರೀ ಶಂಭು ಶರ್ಮಾರವರು ತಮ್ಮ ತುಳುದೇಶ ಭಾಷಾ ವಿಚಾರವು ಎಂಬ ಪುಸ್ತಕವನ್ನು ದಕ್ಷಿಣ ಕನ್ನಡದ ಕೆಲವು ಸ್ಥಳನಾಮಗಳನ್ನು ಕುರಿತು ಬರೆದಿದ್ದಾರೆ. ಪ್ರೊ. ಮರಿಯಪ್ಪ ಭಟ್ಟರು ಬರೆದ ತುಳುನಾಡಿನಲ್ಲಿ ಕೆಲವು ಮನೆಗಳ ಮತ್ತು ಕುಲಗಳ ಹೆಸರು ಎಂಬ ಲೇಖನ ಕನ್ನಡ ಸಂಸ್ಕೃತಿ ಎಂಬ ಅವರದೇ ಪುಸ್ತಕದಲ್ಲಿ ಮೂಡಿಬಂದಿದೆ. ಕೆಮ್ಮೂರ್ತ್ ರಘುಪತಿ ಭಟ್ಟರ ತುಳುನಾಡಿನ ಸ್ಥಳನಾಮಗಳು ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ ಅಲ್ಲದೆ ಇವರು ಕನ್ನಡ ಸ್ಥಳನಾಮಗಳು ಎಂಬ ಕೈಹೊತ್ತಿಗೆಯನ್ನು ಮತ್ತು ತುಳುನಾಡಿನ ಸ್ಥಳನಾಮಗಳು ಎಂಬ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಪಂಜೆಮಂಗೇಶರಾಯರು, ಎಂ. ಗೋವಿಂದ ಪೈ, ಡಾ. ಪಿ. ಗುರುರಾಜ ಭಟ್, ಕೆ. ವೆಂಕಟಾಚಾರ್ಯ, ವಿ. ಶಿವರಾಮಯ್ಯ ಮೊದಲಾದವರೂ ಕೆಲ ಲೇಖನಗಳನ್ನು

ಬರೆದಿರುತ್ತಾರೆ. ಸ್ಥಳನಾಮಗಳ ಹಲವು ಪ್ರತ್ಯಯಗಳು ಮೂಲ ರೂಪಗಳನ್ನು ಸಾಧಿಸಿ ತೋರಿಸಿದ್ದಾರಲ್ಲದೆ ಅವುಗಳ ಮೇಲೆ ಪ್ರಾಕೃತಿಕ ಮತ್ತು ಸಾಂಸ್ಕೃತಿಕ ಭಾಷೆಗಳ ಗಾಢ ಪ್ರಭಾವವನ್ನು ಮೊದಲ ಬಾರಿಗೆ ಗುರುತಿಸಿ ಚರ್ಚಿಸಲಾಗಿದೆ. ಅವರು ಸ್ಥಳನಾಮಗಳನ್ನು ೧೯ ಗುಂಪುಗಳನ್ನಾಗಿ ವರ್ಗೀಕರಿಸಿದ್ದಾರೆ. ಸ್ಥಳನಾಮಾಧ್ಯಯನದಲ್ಲಿ ಆದ್ಯತೆ ನೀಡಬೇಕಾದುದು ಐತಿಹಾಸಿಕ ಮತ್ತು ಭಾಷಿಕ ವೈಜ್ಞಾನಿಕ ವಿಧಾನಗಳಿಗೆ ಹೊರತು ಜಾನಪದ ನಿರುಕ್ತಿಗಳಲ್ಲ ಎಂಬ ಅವರ ಅಭಿಪ್ರಾಯ ಮಹತ್ವಪೂರ್ಣವಾಗಿದೆ.

ದಕ್ಷಿಣ ಭಾರತದ ಇತರೆ ಭಾಷೆಗಳೊಂದಿಗೆ ಹೋಲಿಸಿ ನೋಡಿದಾಗ ಕನ್ನಡದಲ್ಲಿ ಸ್ಥಳನಾಮಗಳ ಮೇಲೆ ನಡೆದ ಅಧ್ಯಯನ ಕಡಿಮೆಯೆಂದು ಹೇಳದೇ ವಿಧಿಯಿಲ್ಲ. ಕೆಲವು ವ್ಯಕ್ತಿಗಳು ತಮ್ಮ ಸ್ವಂತ ಆಸಕ್ತಿಯಿಂದ ವಿಷಯ ಸಂಗ್ರಹಿಸಿ ಗ್ರಂಥಗಳನ್ನು ಹಾಗೂ ಲೇಖನಗಳನ್ನು ವಿರಳವಾಗಿಯಾದರೂ ಬರೆದಿರುವುದ ಕಂಡುಬರುತ್ತದೆ. ಕರ್ನಾಟಕದಲ್ಲಿ ಸರ್ಕಾರವು ಸ್ಥಳನಾಮಗಳ ಅಧ್ಯಯನದ ಬಗ್ಗೆ ನೈಜ ಕಾಳಜಿ ವಹಿಸುವುದು ಅತೀ ತ್ವರಿತವಾಗಿ ನಡೆಯಬೇಕಾಗಿದೆ. ಕರ್ನಾಟಕ ಸಾಂಸ್ಕೃತಿಕ, ಸಾಮಾಜಿಕ, ಜೀವನದ ಸಮೃದ್ಧತೆಯ ಅರಿವನ್ನು ಸ್ಥಳನಾಮಗಳ ಅಧ್ಯಯನದಿಂದ ಮೂಡಿಸುವುದು ಸಾಧ್ಯ ಎಂಬುದನ್ನು ಈಗಾಗಲೆ ಹಲವಾರು ವಿದ್ವಾಂಸರು ಸಾರಿ ಹೇಳಿದ್ದಾರೆ. ಕರ್ನಾಟಕ ಸ್ಥಳನಾಮಗಳು ಶಾಸನಗಳಲ್ಲಿ ಎಫಿಗ್ರಾಫಿಯಾ ಕರ್ನಾಟಕ ಮತ್ತು ಮೈಸೂರು ಗೆಜೆಟೇರಿಯಾಗಳಲ್ಲಿ ಲಭ್ಯವಿದೆ. ಕರ್ನಾಟಕ ಸರ್ಕಾರವು Population of Villages and Towns ಎಂಬ ಹೊತ್ತಿಗೆಯನ್ನು ೧೯೭೧ರಲ್ಲಿ ಪ್ರಕಟಿಸಿದೆ. ಇದರಲ್ಲಿ ಎಲ್ಲಾ ಜಿಲ್ಲೆಗಳ ಸ್ಥಳನಾಮಗಳು ಮಾತ್ರ ಲಭ್ಯ ಹೊರತು ಸ್ಥಳನಾಮಗಳ ಅಧ್ಯಯನ ಕಂಡುಬರುವುದಿಲ್ಲ. ೧೯೮೫ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಕರ್ನಾಟಕದ ಎಲ್ಲಾ ಜಿಲ್ಲೆಗಳ ತಾಲ್ಲೂಕುವಾರು ಊರುಗಳ ಯಾದಿಯ ಹೊತ್ತಿಗೆಯ್ನು ಪ್ರಕಟಿಸಲಾಗಿದೆ. ಕರ್ನಾಟಕದ ಡಾ. ವಿ.ಬಿ. ದೇಸಾಯಿ, ರಂ.ಶ್ರೀ ಮುಗಳಿ, ಡಾ. ಎಂ.ಎಂ. ಕಲ್ಬುರ್ಗಿ, ಎಸ್. ಕುಮಾರಸ್ವಾಮಿ, ಬಿ.ಬಿ. ರಾಜಪುರೋಹಿತ, ಕೆ.ಎಂ. ಬದ್ರಿ, ಎಸ್.ಕೆ. ಹಾವನೂರ, ಮಾಧವ ಎನ್. ಕುಟ್ಟಿ, ಎಸ್. ಕುಮಾರಸ್ವಾಮಿ, ಬಿ.ಬಿ. ರಾಜುರೋಹಿತ, ಕೆ.ಎಂ. ಬದ್ರಿ, ಎಸ್.ಕೆ. ಹಾವನೂರ, ಮಾಧವ ಎನ್. ಕುಟ್ಟಿ, ಮುಂತಾದವರ ಲೇಖನಗಳು ಪ್ರಕಟವಾಗಿವೆ. ಕನ್ನಡದ ಸುಪ್ರಸಿದ್ಧ ಸಂಶೋಧಕರು ಶಾಸನ ತಜ್ಞರು ಆಗಿರುವ ಡಾ. ಎಂ. ಚಿದಾನಂಮೂರ್ತಿಯವರು ವಾಗರ್ಥ ಎಂಬ ತಮ್ಮ ಕೃತಿಯಲ್ಲಿ ಪ್ರಕಟಿಸಿರುವ ನಾಲ್ಕು ಲೇಖನಗಳು ಸ್ಥಳನಾಮ ವ್ಯಾಸಂಗಕ್ಕೆ ನೀಡಿದ ಅಮೂಲ್ಯ ಕಾಣಿಕೆಗಳಾಗಿವೆ. ವಿ. **ಗೋಪಾಲಕೃಷ್ಣ ಅವರ ಕೋಲಾರ ಜಿಲ್ಲೆಯ ಸ್ಥಳನಾಮಗಳು ಪಿಎಚ್.ಡಿ. ಸಂಶೋಧನಾ ಮಹಾಪ್ರಬಂಧ** ಇವರು ೧೯೮೭ರಲ್ಲಿ ಸ್ಥಳನಾಮ ಅಧ್ಯಯನಗಳು ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ.

ವೈಜನಾಥ ಬಂಡೆ ಅವರ ಬೀದರ್ ಜಿಲ್ಲೆಯ ಸ್ಥಳನಾಮಗಳು ಇನ್ನೊಂದು ಪಿಎಚ್‌ಡಿ. ಸಂಶೋಧನಾ ಮಹಾಪ್ರಬಂಧವಾಗಿದೆ. ನಾಡಿನ ಖ್ಯಾತ ವಿದ್ವಾಂಸ, ಭಾಷಾ ವಿಜ್ಞಾನಿ ಹಾಗೂ ಸಂಶೋಧಕರಾದ ಡಾ. ಸಂಗಮೇಶ್ ಸವದತ್ತಿಮಠ ಅವರು 'ಮನೆತನದ ಅಡ್ಡ ಹೆಸರುಗಳು' ಎಂಬ ಲೇಖನದಲ್ಲಿ ಗ್ರಾಮನಾಮಗಳ ಪ್ರಸ್ತಾಪವನ್ನು ಕುರಿತು ಪ್ರಾಸಂಗಿಕವಾದ ವಿವೇಚನೆಯನ್ನು ಮಾಡಿದ್ದಾರೆ. ಅಲ್ಲದೇ ಡಾ. ಎಚ್.ಎಂ. ಮಹೇಶ್ವರಯ್ಯ ಅವರು ಸ್ಥಳನಾಮಗಳನ್ನು ಕುರಿತು ರಚಿಸಿದ ಲೇಖನಗಳು ಹಲವು ಪ್ರಮುಖ ಪತ್ರಿಕೆಗಳಲ್ಲಿ ಹೊರಬಂದಿದೆ. ಡಾ. ಬಿ.ಆರ್. ಹಿರೇಮಠ ಅವರ ಐಹೊಳೆ ಸ್ಥಳನಾಮದ ಬಗೆಗಿನ ಲೇಖನ ಅಧ್ಯಯನ ಯೋಗ್ಯವಾಗಿದೆ. ಈ ವಿದ್ವಾಂಸರು ಸ್ಥಳನಾಮ ಅಧ್ಯಯನ ಕ್ಷೇತ್ರಕ್ಕೆ ತಮ್ಮದೇ ಆದ ಅತ್ಯಮೂಲ್ಯ ಕಾಣಿಕೆಯನ್ನೇ ನೀಡಿದ್ದಾರೆ.

ಪ್ರೊ. ದೇ.ಜ.ಗೌಡರು ಬರೆದ Methology of Place Names Study ಎಂಬ ಲೇಖನ Studies in Indian Place Names ಸಂಚಿಕೆ ೪ರಲ್ಲಿ ಪ್ರಕಟವಾಗಿದೆ. ಕೆ. ಸುಬ್ರಮಣ್ಯ ಭಟ್‌ರವರು ಎಂ.ಫಿಲ್ ಪದವಿಗಾಗಿ A Study of Place Names of Kasaragod Taluk ಎಂಬ ವಿಷಯದ ಮೇಲೆ ಅಧ್ಯಯನ ಮಾಡಿರುತ್ತಾರೆ. ಅವರ Tulu Place Names of Kasaragod Taluk ಎಂಬ ಲೇಖನ ೧೯೮೨ರಲ್ಲಿ ದ್ರಾವಿಡ ಭಾಷಾ ವಿಜ್ಞಾನದ ಅಂತರಾಷ್ಟ್ರೀಯ ಪತ್ರಿಕೆಯ ಸಂಚಿಕೆ ೧೧ರಲ್ಲಿ ಪ್ರಕಟವಾಗಿದೆ. ಡಾ. ಬಿ.ಬಿ. ರಾಜಪುರೋಹಿತರು Studies in Indian Place Names ಪತ್ರಿಕೆಯಲ್ಲಿ Regional Features in Naming Places in Karnataka Distribution of Suffix, Uru in Karnataka Distribution of Halli and Pura Suffixes in Karnataka ಎಂಬ ಲೇಖನ ಪ್ರಕಟಿಸಿದ್ದಾರೆ. ಡಾ. ರಾಮರವರು ಸ್ಥಳನಾಮಗಳ ಬಗ್ಗೆ ಕಾರ್ಯಗೈದಿರುತ್ತಾರೆ. ಅವರ Place Names in Tulunadu (1975) Place Names Uru - in Karnataka (1976) ಪ್ರಬಂಧಗಳು ಕ್ರಮವಾಗಿ ೫ ಮತ್ತು ೬ನೆಯ ದ್ರಾವಿಡ ಭಾಷಾ ವಿಜ್ಞಾನ ಸಮ್ಮೇಳನದಲ್ಲಿ ಮಂಡಿತವಾಗಿದೆ. ಶ್ರೀ ಗುರುಮೂರ್ತಿ ಪೆಂಡೂಕರ್‌ರವರು ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳ ಕೃತಿಯನ್ನು ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿದ್ದು ಬಳ್ಳಾರಿ ಈಗಿನ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿ ಊರುಗಳ ಸ್ಥಳನಾಮಗಳ ಬಗ್ಗೆ ಚರ್ಚಿಸಿರುತ್ತಾರೆ. ಜಾನಪದ ಪರಿಷತ್ ರಾಮನಗರ ಬೆಂಗಳೂರು ವತಿಯಿಂದ ಪ್ರಕಟವಾಗಿರುವ ತ್ರೈಮಾಸಿಕ ನಿಯತಕಾಲಿಕದಲ್ಲಿ ಸ್ಥಳನಾಮಗಳ ಕುರಿತು ನಿರಂತರ ಲೇಖನಗಳು ಪ್ರಕಟಗೊಳ್ಳುತ್ತಿವೆ. ಕರ್ನಾಟಕದಲ್ಲಿ ಎಲ್ಲಾ ಜಿಲ್ಲೆಗಳ ತಾಲ್ಲೂಕುಗಳ ಸ್ಥಳನಾಮ ಅಧ್ಯಯನ ಕಾರ್ಯ ಅತೀ ಜರೂರಾಗಿ ನಡೆಯಬೇಕಾಗಿದೆ.

೩.೧೧ ಸಾಂಘಿಕ ಪ್ರಯತ್ನಗಳು:

ಜಗತ್ತಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಅಲ್ಲಿನ ವಿದ್ವಾಂಸರನೇಕರು ಸ್ಥಳನಾಮಗಳ ಅಧ್ಯಯನ ವಿಷಯದಲ್ಲಿ ತಾಳಿದ್ದ ಅಸ್ಥೆ ಹಾಗೂ ಉತ್ಸಾಹ ನಮ್ಮ ದೇಶದಲ್ಲಿ ಕಾಣಲು ಕಷ್ಟಸಾಧ್ಯವಾದರೂ ಪ್ರಸ್ತುತ ಈ ಕ್ಷೇತ್ರದಲ್ಲಿ ಆಗಿರುವ ಕೃಷಿ ಮುಂದೆ ಈ ಕ್ಷೇತ್ರದಲ್ಲಿ ಕಾರ್ಯವೆಸಗಲು ತೊಡಗುವವರಿಗೆ ಕೊಂಚ ಮಟ್ಟಿಗಾದರೂ ಸಹಾಯವಾಗುವುದರಲ್ಲಿ ಅನುಮಾನವಿಲ್ಲ.

೧೯೨೬ರಲ್ಲಿ ಡಾ. ಸುನೀತ್ ಕುಮಾರ್ ಚಟರ್ಜಿರವರು "The origin and development of the Bangali Language" ಎಂಬ ಮಹತ್ವಪೂರ್ಣ ಕೃತಿಯೊಂದನ್ನು ಪ್ರಕಟಿಸಿದರು. ಭಾರತದಲ್ಲಿ ಸ್ಥಳನಾಮಗಳ ಅಧ್ಯಯನವು ಯಾವ ಸ್ಥಿತಿ ಮತ್ತು ಯಾವ ಹಂತದಲ್ಲಿದೆ ಎಂಬುದನ್ನು ಸವಿವರವಾಗಿ ತೋರಿಸಿಕೊಡುವುದರಲ್ಲಿ ಈ ಕೃತಿ ಸಫಲವಾಗಿದೆ. ೧೯೭೨ರಲ್ಲಿ ಅಖಿಲ ಭಾರತ ಮಟ್ಟದ ದ್ರಾವಿಡ ಭಾಷಾ ವಿಜ್ಞಾನದ ತೃತೀಯ ಮಹಾ ಸಮ್ಮೇಳನ ನಡೆದು ಅದರಲ್ಲಿ ಶ್ರೀ ಕೆ. ವಿಶ್ವನಾಥ ರೆಡ್ಡಿ ಎಂಬ ವಿದ್ವಾಂಸರು ಸ್ಥಳನಾಮಗಳ ಅಧ್ಯಯನವು ಭಾರತದಲ್ಲಿ ಅಷ್ಟೇನೂ ಹೇಳಿಕೊಳ್ಳುವಂತಹ ರೀತಿಯಲ್ಲಿ ನಡೆದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಕೇರಳದ ಸ್ಥಳನಾಮಗಳ ವಿಶೇಷ ಅಧ್ಯಯನಕ್ಕಾಗಿ ತ್ರಿವೇಂಡ್ರಂನ ಕೇರಳ ಸಾಹಿತ್ಯ ಅಕಾಡೆಮಿಯು Kerala Place Names Society ಎಂಬ ಸಂಸ್ಥೆಯನ್ನು ಆರಂಭಿಸಿದೆ. ಭಾರತೀಯ ಶಾಸನ ಮತ್ತು ಪುರಾತತ್ವ ಇಲಾಖೆಯ ಡಾ. ಕೆ.ವಿ. ರಮೇಶ್ ಮತ್ತು ಮಾಧವ ಎಸ್. ಕಟ್ಟಿ ಮುಂತಾದವರು ಪ್ರೊ. ದೇ.ಜ.ಗೌಡರ ಮಾರ್ಗದರ್ಶನದಲ್ಲಿ ಮೈಸೂರಿನಲ್ಲಿ ೧೭೮ರಲ್ಲಿ Indian Place Name Society ಎಂಬ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಇತ್ತೀಚೆಗೆ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಮೇಘಾಲಯ ಮುಂತಾದ ಕಡೆಗಳಲ್ಲೂ ಅಖಿಲ ಭಾರತ ಮಟ್ಟದ ಸ್ಥಳನಾಮ ಸಮ್ಮೇಳಗಳನ್ನು ಪ್ರತಿವರ್ಷ ಒಂದೊಂದು ಕಡೆಗಳಲ್ಲಿ ನಡೆಸುವುದರ ಮೂಲಕ ಭಾರತೀಯ ಸ್ಥಳನಾಮ ವಿಜ್ಞಾನಿಗಳು (Toponomasticians) ಒಂದೆಡೆ ಸೇರಿ ಪರಸ್ಪರ ಚರ್ಚಿಸಲು ಅನುವು ಮಾಡಿಕೊಡಲಿದೆ. 'Studies is Indian Place Names' ಈ ಸಂಸ್ಥೆಯಿಂದ ಪ್ರಕಟವಾಗುತ್ತಿರುವ ವಾರ್ಷಿಕ ಸಂಚಿಕೆಯಾಗಿದೆ.

ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಸ್ಥಳನಾಮ ಅಧ್ಯಯನ ಕೈಗೊಂಡು ಶ್ಲಾಘನೀಯ ಕಾರ್ಯವೆಸಗುವ ಸಂಸ್ಥೆಯೆಂದರೆ ತಿರುಪತಿಯ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ ತೆಲುಗು ವಿಭಾಗ ಆಂಧ್ರಪ್ರದೇಶದ ಸ್ಥಳನಾಮಾಧ್ಯಯನಕ್ಕೆ ವಿಶೇಷ ಮಹತ್ವವನ್ನು ನೀಡಲಾಗಿದೆ.

ಈ ವಿಷಯ ಕುರಿತಾದ ಹಲವು ಪ್ರಬಂಧಗಳಿಗೆ ಪಿಎಚ್.ಡಿ. ಹಾಗೂ ಎಂ.ಲಿಟ್ ಪದವಿಗಳನ್ನು ನೀಡಲಾಗಿದೆ. ವಿಜಯವಾಡದ ನಾಗಾರ್ಜುನ ವಿ.ವಿ.ದಲ್ಲಿ ಡಾ. ವೈ. ಗಂಗಾಧರರಾವ್ ಅವರ ಮಾರ್ಗದರ್ಶನದಲ್ಲಿ ಕೆಲವು ಜಿಲ್ಲೆಗಳ ಸ್ಥಳನಾಮಾಧ್ಯಯನಗಳು ನಡೆದಿವೆ. ಹೈದ್ರಾಬಾದ್‌ನ ಉಸ್ಮಾನಿಯಾ ವಿ.ವಿ. ಶ್ರೀ ಈಶ್ವರ್ ಚರಣ ಮತ್ತು ಪಿ. ಮಾಣಿಕ ಪ್ರಭಂಗಳ ನೇತೃತ್ವದಲ್ಲಿ ಸ್ಥಳನಾಮಾಧ್ಯಯನ ನಡೆದಿದೆ. ಕೇರಳ ವಿ.ವಿ.ಯಲ್ಲಿ ಕೇರಳಕ್ಕೆ ಸಂಬಂಧಿಸಿದ ಅರ್ಧಕ್ಕಿಂತ ಹೆಚ್ಚು ಜಿಲ್ಲೆಗಳ ಅಧ್ಯಯನ ಪೂರ್ಣವಾಗಿದೆ. ಸ್ಥಳನಾಮ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಇಎಚ್.ಡಿ. ಎಂ.ಫಿಲ್ ಸಂಶೋಧನ ಪ್ರಬಂಧಗಳು ಬಂದಿವೆ. ಮುಂಬಯಿ, ವಿ.ವಿ. ಮಹಾರಾಷ್ಟ್ರ ಮತ್ತು ಕರ್ನಾಟಕ ಗಡಿ ಪ್ರದೇಶದ ಸುಮಾರು ೪೦೦೦ ಸ್ಥಳನಾಮಗಳ ಅಧ್ಯಯನ ಬೃಹತ್ ಸಂಶೋಧನಾ ಯೋಜನೆ (majdo Research project)ಯೊಂದನ್ನು ಕೈಗೊಂಡಿದೆ. ಕರ್ನಾಟಕ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ೧೯೮೫ರಲ್ಲಿ 'ಕರ್ನಾಟಕ ಗ್ರಾಮಸೂಚಿ'ಯನ್ನು ಪ್ರಕಟಿಸಿದೆ. ಪುಣೆಯ ತಿಲಕ ಮಹಾರಾಷ್ಟ್ರ ವಿದ್ಯಾಪೀಠ "ಮಹಾರಾಷ್ಟ್ರದ ಗ್ರಾಮಸೂಚಿ" ಎಂಬ ಪ್ರಾದೇಶಿಕ ಕೋಶ ಪ್ರಕಟಿಸಿದ ಉತ್ತರ ಭಾರತದ ವಿ.ವಿ.ಗಳು ಈಚೆಗೆ ಸ್ಥಳನಾಮಾಧ್ಯಯನದ ಬಗ್ಗೆ ಒಲವನ್ನು ಪ್ರಕಟಿಸುತ್ತಿರುವುದು ಕಂಡು ಬಂದಿದೆ. ಮಹಾರಾಷ್ಟ್ರ ಸರ್ಕಾರವು ೧೯೬೧ರಲ್ಲಿ ತನ್ನ ಪ್ರಾಂತ್ಯದ ಸುಮಾರು ೪೦,೦೦೦ ಗ್ರಾಮಗಳ ಪ್ರಮಾಣಿತ ರೂಪಗಳನ್ನು ಪ್ರಕಟಿಸಿದೆ.

ಮಹಾರಾಷ್ಟ್ರ ಸರಕಾರವು ಕೇಂದ್ರ ಸರಕಾರದ ಒಪ್ಪಿಗೆ ಪಡೆದು ತನ್ನ ಪ್ರಾಂತದ ಕೆಲವು ಪ್ರಮುಖ ನಗರಗಳ ಪರಿಷ್ಕೃತ ರೂಪವನ್ನು ಜಾರಿಗೆ ತಂದಿದೆ. ಕೇರಳ ಸರಕಾರವು ತನ್ನ ಪ್ರಾಂತದ ೧೪ ಜಿಲ್ಲೆಗಳ ಹೆಸರುಗಳನ್ನು ಪರಿಷ್ಕರಿಸಿ ಭಾರತ ಸರಕಾರದ ರಕ್ಷಣಾ ಖಾತೆಯ ಮಾನ್ಯತೆಗಾಗಿ ನಿಲುವಳಿಯನ್ನು ಕಳುಹಿಸಿಕೊಟ್ಟಿದೆ. ಕರ್ನಾಟಕ ಸರಕಾರವು ತನ್ನ ೨೦ ಜಿಲ್ಲೆಗಳ ೧೭೫ ತಾಲೂಕುಗಳಿಗೆ ಸೇರಿದ ೨೬,೮೩೦ ಜನವಸತಿಗಳ ಸ್ಥಳನಾಮಗಳನ್ನು ಅಭ್ಯಸಿಸಿ, ಪರಿಷ್ಕರಿಸಿ ಪ್ರಮಾಣವನ್ನು ರೂಪಗಳನ್ನು ಸರಕಾರಕ್ಕೆ ತಿಳಿಸುವುದಕ್ಕಾಗಿ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿಗೆ ಒಂದು ಆದೇಶವನ್ನು ನೀಡಿದೆ. ಇತರೆ ಪ್ರಾಂತೀಯ ಸರಕಾರಗಳೂ ತಮ್ಮ ಪ್ರಾಂತದ ಪ್ರಾಕೃತಿಕ ಸ್ಥಳನಾಮಗಳನ್ನು ಪರಿಷ್ಕರಿಸಲು ಅವು ಕೈಗೊಳ್ಳುತ್ತಿವೆ.

೩.೧೨ ಸ್ಥಳನಾಮ ಅಧ್ಯಯನದ ಸಂಕ್ಷಿಪ್ತ ಪರಿಚಯ:

ಸ್ಥಳನಾಮಗಳ ನಿರ್ದೇಶನ ಹಾಗೂ ಅದರ ಕುರಿತಾಗಿ ನಡೆದ ಅಧ್ಯಯನವೇ ಸ್ಥಳನಾಮಚರಿತ್ರೆ, ಸ್ಥಳನಾಮಶಾಸ್ತ್ರಕ್ಕೆ ಎರಡು ಶತಮಾನಗಳ ಚರಿತ್ರೆಯಿದೆಯೆಂದು ವಿದ್ವಾಂಸರು

ಅಭಿಪ್ರಾಯಪಡುತ್ತಾರೆ. ಆದರೆ ಅದೊಂದು ಶಾಸ್ತ್ರವಾಗಿ ಭದ್ರವಾದ ತಳಹದಿಯನ್ನು ಪಡೆದದ್ದು ಒಂದು ಶತಮಾನದಷ್ಟು ಹಿಂದೆಯೆನ್ನಬಹುದು. ಸ್ಥಳದ ಹೆಸರಿನ ಮೂಲಕ ಒಂದು ಭೌಗೋಳಿಕ ಪರಿಸರದ ಸಂಸ್ಕೃತಿಯನ್ನು ಬಿಂಬಿಸುವ ಈ ಪ್ರಕಾರ ಒಂದು ವಿಜ್ಞಾನವಾಗಿಯೂ ಬೆಳದು ಬಂದಿತು ಪಾಶ್ಚಾತ್ಯರಲ್ಲಿ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಈ ಶಾಸ್ತ್ರದ ವೈಜ್ಞಾನಿಕ ಅಧ್ಯಯನವು ಆರಂಭವಾಯಿತು. ೧೭೬೦ರಲ್ಲಿ ಜರ್ಮನಿಯ ಗಾಟ್‌ಪ್ರೀಡ್ ವಿಲ್ಹೆಲ್ಮ್ ಲೀಬ್ನಿಜ್ ಆಂಗ್ಲ ಸ್ಥಳನಾಮದ ಬಗೆಗೆ ಅಧ್ಯಯನ ನಡೆಸಿದ ಮೊದಲ ವಿದ್ವಾಂಸ. ನಂತರ ಇಂಗ್ಲೇಂಡಿನ ಸ್ಕೀಟ್ ಎಂಬ ಸ್ಥಳನಾಮ ಶಾಸ್ತ್ರಜ್ಞ, ಅದರಂತೆ ಎ.ಎಚ್.ಸ್ಮಿತ್, ಇಕ್ಬಾಲ್, ಗಾರ್ಡಿನರ್, ಆಟ್ಲಿ, ಸ್ಟೂಟಿನ್, ಡೌಜತ್, ಆಡಾಲ್ಫ್ ಬ್ಯಾಚ್, ಮುಂತಾದ ವಿದ್ವಾಂಸರು ಈ ಅದ್ಯಾಯನಕ್ಕೆ ತಾತ್ವಿಕ ಚೌಕಟ್ಟನ್ನು ನೀಡಿದರು. ಜರ್ಮನಿಯ ಫಾರ್‌ಸ್ಟೀಮನ್, ಪ್ರಾನ್ಸಿನ ಲಾಂಗ್ಮನ್ ನಾವೆಯ ರೈ, ಸ್ವೀಡನ್ನಿನ ನೋರಿನ್ ಈ ಕ್ಷೇತ್ರಕ್ಕೆ ತಮ್ಮ ಅಪರವಾದ ಕೊಡಿಗೆಯನ್ನು ಸಲ್ಲಿಸುವ ಮೂಲಕ ಬೆಳೆಸಿದ್ದಾರೆ. ಜರ್ಮನಿಯ ಈ ತಜ್ಞರು ಸ್ಥಳನಾಮಗಳನ್ನು ಐತಿಹಾಸಿಕ ಆಕರಗಳಾಗಿಯೂ, ಭೌಗೋಳಿಕ ಆಕರಗಳಾಗಿಯೂ ಪರಿಗಣಿಸಿ ಅಧ್ಯಯನಕ್ಕೆ ಒಳಪಡಿಸಿದವರು. ಅಲ್ಲದೇ ಸಾಂಸ್ಕೃತಿಕ ಸಾಮಾಜಿಕ ಆಯಾಮಗಳ ಮುಖಾಂತರವೂ ನಾಮಶಾಸ್ತ್ರದ ಪ್ರಸ್ತುತೆಯನ್ನು ಖಚಿತಪಡಿದವರು. ಬೆಲ್ಜಿನಿಯಂ ಲೂವೈನಿನಲ್ಲಿ ೧೯೨೧ ರಲ್ಲಿ ಸ್ಥಾಪನೆಗೊಂಡ ಆಂಗ್ಲ ಸ್ಥಳನಾಮ ಸಂಶೋಧನೆ ಮಂಡಳಿ, ಸ್ಥಳನಾಮ ವಿಜ್ಞಾನದಲ್ಲಿ ಪ್ರಮುಖವಾದ ಮೈಲಿಗಲ್ಲಾಗಿದೆ.

ಸ್ಥಳನಾಮಾಧ್ಯಯನ ಮೊದಲು ಆರಂಭವಾದದ್ದು ಪಾಶ್ಚತ್ಯ ರಾಷ್ಟ್ರದಲ್ಲಿಯೆಂಬುದುದಂತೂ ಖಚಿತ ಸಂಗತಿ. ಭಾರತದಲ್ಲಿಯೂ ಈ ಅಧ್ಯಯನ ಅರಂಭವಾಯಿತು. ಅಧಿಕೃತವಾಗಿ ಅಧ್ಯಯನ ಆರಂಭಕ್ಕೆ ಮುಂಚೆ ದೇಶಿಯ ವಿದ್ವಾಂಸರು ಅಲ್ಲಲ್ಲಿ ದಾಖಲಿಸಿದ ಮಾಹಿತಿಗಳು ಮುಖ್ಯವೆನಿಸುತ್ತವೆ. ಭಾರತದಲ್ಲಿ ಎಸ್.ಡಿ ಸಂಕಲಿಯಾ ಸ್ಥಳನಾಮ ಅಧ್ಯಯನಕ್ಕೆ ಭದ್ರವಾಂತಹ ಬುನಾದಿಯನ್ನು ನಿರ್ಮಿಸಿದರು. ಸ್ಥಳನಾಮ ಪೂರ್ವಾಪರ ಪ್ರತ್ಯಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಿ, ಧಾರ್ಮಿಕ, ಭೌಗೋಳೀಕ, ಸಾಂಸ್ಕೃತಿಕ, ಭಾಷಿಕ ಅಂಶಗಳ ಮೂಲಕ ವಿವರಿಸಬಹುದೆಂದು ಮಾದರಿ ರೂಪಿಸಕೊಟ್ಟರು. ಸಂಕಾಲೀಯ ಅವರು ಈ ಕ್ಷೇತ್ರದಲ್ಲಿ ಸೂಕ್ಮವಾದ ಅಧ್ಯಯನ ಕೈಗೊಂಡು ಮಹತ್ತರವಾದ ರೂಪರೇಷೆಗಳನ್ನು ಮುಂದಿನ ಅಧ್ಯಾಯನಕಾರರಿಗೆ ತೋರಿಸಕೊಟ್ಟರು. ಭಾರತದಲ್ಲಿ ಸ್ಥಳನಾಮ ಅಧ್ಯಯನ ಅತ್ಯಂತ ಪ್ರಗತಿದಾಯಕವಾಗಿ ನಡೆದ್ದು ತಮಿಳುನಾಡು ಮತ್ತು ಆಂಧ್ರಪ್ರದೇಶಗಲ್ಲಿ. ನಾಚಿಮುತ್ತು, ಸೇತುಪಿಳ್ಳೆ, ನಾರಾಯಣರೆಡ್ಡಿ, ಗಂಗಾಧರರಾವ್ ಮುಂತಾದವರು ವಿಶ್ವವಿದ್ಯಾಲಯದಲ್ಲಿ ಸ್ಥಳನಾಮ ಕುರಿತು ಸಂಶೋಧನೆಗಳನ್ನು ಕೈಗೊಂಡು

ಆ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಆಂಧ್ರಪ್ರದೇಶದಲ್ಲಿ ಜಿಲ್ಲಾವಾರು ಗ್ರಾಮನಾಮಗಳ ಅಧ್ಯಯನದಿಂದ ಸಂಶೋಧನಾ ನಿಬಂಧಗಳನ್ನು ರಚಿಸಲಾಗಿದೆ.

ಕನ್ನಡದಲ್ಲಿ ಸ್ಥಳನಾಮಗಳ ಬಗೆಗೆ ಆರಂಭದಲ್ಲಿ ಹೆಚ್ಚಾಗಿ ಅಧ್ಯಯನ ನಡೆಯಲಿಲ್ಲ. ಕಿಟಲ್ ನಿಂಟು ಕೆಲವು ಊರುಗಳ ಹೆಸರುಗಳನ್ನು ಗುರುತಿಸುತ್ತದೆಯೇ ಹೊರತು ಅವುಗಳ ನಿಷ್ಪತ್ತಿಯ ಬಗ್ಗೆ ನಿರ್ಲಿಪ್ತವಾಗಿದೆ. ಹಯವದನರಾಯರು ಮೈಸೂರು ಗೆಝೆಟಿಯರ್‌ನಲ್ಲಿ ಕೆಲವು ನಾಮಗಳನ್ನು ಕುರಿತು ನಡೆಸಿದ ವಿಶ್ಲೇಷಣೆ ಅಧ್ಯಯನಕರರಿಗೆ ಮಾರ್ಗಸೂಚಿಯಾಗಿದೆ. ಮಾಸ್ತಿ ಊರುಹೆಸರುಗಳು) ದೇಜೆಗೌ, ಆರ್.ಸಿ. ಹಿರೇಮಠ ಮುಂತಾದವರು ಕಲವು ಲೇಖನಗಳ ಮೂಲಕ ಸ್ಥಳನಾಮ ಶಾಸ್ತ್ರದ ನಿರ್ದಿಷ್ಟ ಮಾಹಿತಿಯನ್ನು ನೀಡಿದ್ದಾರೆ. ಸ್ಥಳನಾಮಗಳ ಮೇಲೆ ಅತ್ಯಂತ ಮಹತ್ವದ ಕೆಲಸ ಮಾಡಿದ ಶಂಬಾಜೋಷಿಯವರು 'ಎಡೆಗಳು ಹೇಳು ಕಂನಾಡ ಕಥೆ' ಕೃತಿಯ ಹಿನ್ನಲೆಯಲ್ಲಿ ಕನ್ನಡ ಸಂಸ್ಕೃತಿ ಭೌಗೋಳೀಕ ಎಲ್ಲೆಯನ್ನು ಹುಡುಕುತ್ತಾ ಹೊರಟು ಇತಿಹಾಸ, ಪುರಾಣ, ಜಾನಪದ, ಧರ್ಮ, ಜನಾಂಗವನ್ನು ಸ್ಥಳನಾಮಗಳ ಮುಖೇನ ಗುರುತಿಸುವಂತ ಮಹತ್ವದ ಅಧ್ಯಯನ ಮಾಡಿದರು. ಕನ್ನಡ ಸಂಸ್ಕೃತಿಯುನ್ನು ಉತ್ತರ ಭಾರತದಲ್ಲಿಯೂ ಹುಡುಕ ಹೊರಡುವ ಶಂಬಾ ಮೂಲತಃಸ್ಥಳನಾಮಗಳನ್ನೇ ಪ್ರಮುಖ ಆಕರಗಳನ್ನಾಗಿ ಬಳಸುತ್ತಾರೆ. ಸ್ಥಳನಾಮಗಳ ವರ್ಗೀಕರಣ, ಸಾಂಸ್ಕೃತಿಕ ಮಹತ್ವವನ್ನು ಅವರು ಎತ್ತಿ ಹಿಡಿಯುತ್ತಾರೆ. ಅಂತೆಯೇ ಎಂ.ಎಂ.ಕಲ್ಬುರ್ಗಿ, ಎಂ. ಚಿದಾನಂದಮೂರ್ತಿ, ಅರ್.ಸಿ. ಹಿರೇಮಠ, ಹಂಪನಾ, ಎಂ.ಬಿ.ನೇಗಿನಹಾಳ್, ವಿ.ಗೋಪಲಕೃಷ್ಣ, ಕೆಮ್ತೂರು ರಘುಪತಿಭಟ್ಟ, ಪಂಜೆ, ಸೇಡಿಯಾಪು ಕೃಷ್ಣಭಟ್ಟ, ದೇಜೇಗೌ. ಮುಂತಾದ ವಿದ್ವಾಂಸರು ಸ್ಥಳನಾಮ ಕ್ಷೇತ್ರಕ್ಕೆ ತಾತ್ವಿಕ ರೂಪ ರೇಷೆಗಳನ್ನು ನೀಡಿದ್ದಾರೆ.

ಕೆಮ್ತೂರು ರಘುಪತಿಭಟ್ಟರು "ತುಳುನಾಡಿನ ಸ್ಥಳನಾಮಗಳು" ಎಂಬ ಪ್ರಬಂಧವನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಇದು ಕನ್ನಡದ ಸ್ಥಳನಾಮ ಕುರಿತಾದ ಸಂಶೋಧನಾ ನಿಬಂಧವಾಗಿದೆ. ಚಿದಾನಂದಮೂರ್ತಿ, ಎಂ.ಎಂ.ಕಲ್ಬುರ್ಗಿಯವರ ಲೇಖನಗಳು, ಕೃತಿಗಳು, ಅತ್ಯಂತ ಮಹತ್ವವಾದ ಅಂಶಗಳನ್ನು ಈ ಕ್ಷೇತ್ರಕ್ಕೆ ಮಹತ್ತರವಾದ ಬೆಳಕನ್ನು ಚೆಲ್ಲಿವೆ. ಮುಂದೆ ಸ್ಥಳನಾಮ ಅಧ್ಯಯನಕಾರರಿಗೆ ಸೇಡಿಯಾಪು, ಆರ್ಕೆಮಣಿಪಾಲ, ಚಿದಾನಂದಮೂರ್ತಿ, ಎಂ.ಎಂ.ಕಲ್ಬುರ್ಗಿ, ಅರ್.ಸಿ. ಹಿರೇಮಠ ಅವರು ಆ ಕ್ಷೇತ್ರಕ್ಕೆ ಮಾಡಬಹುದಾದ ಕೆಲಸಗಳು ಹಾಗೂ ಅನುಸರಿಸಬಹುದಾದ ವಿಧಾನಗಳನ್ನು ಹೇಳಿದರು. ಮೈಸೂರಿನಲ್ಲಿ ೧೯೭೮ರಲ್ಲಿ (Place names Society of India) ಎಂಬ ಸ್ಥಳನಾಮ

ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ದೇಜಗೌ ಅವರು ಭಾರತದಾದ್ಯಂತ ಸ್ಥಳನಾಮ ಸಂಶೋಧನೆ ಗಮನಹರಿಸಿದರು. ಭೌಗೋಳಿಕ ಹಿನ್ನೆಲೆಯಲ್ಲಿ ಆಯಾ ಪ್ರಾದೇಶಿಕ ವೈಶಿಷ್ಟ್ಯದೊಂದಿಗೆ ಸ್ಥಳನಾಮಗಳ ಕುರಿತು ಈ ಸಂಸ್ಥೆ ಅನೇಕ ಲೇಖನಗಳನ್ನು ಪ್ರಕಟಿಸುತ್ತಿರುವುದು ಗಮನಾರ್ಹವಾಗಿದೆ.

ಕರ್ನಾಟಕದಲ್ಲಿ ಇದೂವರೆಗೆ ಸ್ಥಳನಾಮಗಳ ಮೇಲೆ ನಡೆದಿರುವ ಅಧ್ಯಯನಗಳ ಕುರಿತಾಗಿ ಲಭ್ಯವಾಗಿರುವ ಮಾಹಿತಿಯ ಹಿನ್ನೆಲೆಯಲ್ಲಿ ಸಂಕ್ಷಿಪ್ತ ಪಕ್ಷಿ ನೋಟವನ್ನು ವಿವರಿಸಲಾಗಿದೆ.

೩.೧೩ ಸ್ಥಳನಾಮ ಅಧ್ಯಯನ

ಸ್ಥಳನಾಮ ಸಿದ್ಧಾಂತ ಕುರಿತಾದ ಬರಹಗಳು

೧. ಆರಂಭದಲ್ಲಿ ಸ್ಥಳನಾಮ ಕ್ಷೇತ್ರದ ಪರಿಚಯ, ವಿಧಿ ವಿಧಾನಗಳು, ಆ ಶಾಸ್ತ್ರದ ಪ್ರಸ್ತುತತೆಯ ಬರಹ

೨. ಸಂಸ್ಕೃತಿ ಆಕರಗಳಾಗಿ ಸ್ಥಳನಾಮಗಳು ಉದಾ: ಶಂಬಾಜೋಶಿಯರವರ ಅಧ್ಯಯನಗಳು

೩. ಭಾಷಿಕ ಘಟಕಗಳಾಗಿ ಸ್ಥಳನಾಮಗಳು

* ವರ್ಣನಾತ್ಮಕ ಮಾದರಿ

ನಿಷ್ಪತ್ತಿಗೆ ಹೆಚ್ಚು ಮಹತ್ವ (ಸೇಡಿಯಾಪು, ಗೋವಿಂದ ಪೈ, ಆರ್.ಸಿ ಹಿರೇಮಠ)

* ಕೊಂಚ ಸಾಮಾಜಿಕ ಅಧ್ಯಯನ

ಹೆಸರಿನ ಸಾಮಾಜಿಕ ಹಿನ್ನೆಲೆಗೆ ಮಹತ್ವ

೪. ಮೌಖಿಕ ಆಕರಗಳಾಗಿ ಸ್ಥಳನಾಮಗಳು

* ಐತಿಹ್ಯ
* ಸ್ಥಳಪುರಾಣ
* ಕಥೆ
* ಪವಾಡಗಳು
* ಇತರೆ (ಜಾನಪದ ಅಧ್ಯನಕಾರರು ಈ ನೆಲೆಯಲ್ಲೇ ನಾಮಗಳನ್ನು ನೀಡದವರು)

೫. ಐತಿಹಾಸಿಕ ಆಕರಗಳಾಗಿ ಸ್ಥಳನಾಮಗಳು

* ಪುರಾತತ್ವಕ್ಕೆ ಸಂಬಂಧಿಸಿ (ಇಲ್ಲಿ ನಿಷ್ಪತ್ತಿಗೆ ಮಹತ್ವವಿಲ್ಲ ಬದಲಾಗಿ ನಿರ್ವಸಿತ ಸ್ಥಳನಾಮಗಳಿಗೆ ಹೆಚ್ಚಿನ ಮಹತ್ವವಿರುತ್ತದೆ)

* ಚರಿತ್ರೆಗೆ ಸಂಬಂಧಿಸಿ (ನಿಷ್ಪತ್ತಿಗೆ ಮಹತ್ವವಿಲ್ಲ, ಶಾಸನೋಕ್ತ ಹೆಸರುಗಳಿಗೆ ಮಹತ್ವ)

೬. ಭೌಗೋಳಿಕ ಅಧ್ಯಯನ

(ಸ್ಥಳನಾಮಗಳ ಮೂಲಕ ಈ ಅಧ್ಯಯನ ಭಾರತದಲ್ಲಿ ಅಷ್ಟಾಗಿ ನಡೆಯಲಿಲ್ಲ.)

೭. ಈಚಿನ ಅಧ್ಯಯನಗಳಲ್ಲಿ ಸ್ಥಳನಾಮಗಳ ಆಧುನಿಕ ಸಂದರ್ಭದ ಪ್ರಸ್ತಾಪ (ನಗರ, ಬಿದಿ, ಪೇಟೆಗಳ ಹೆಸರುಗಳ ಅಧ್ಯಯನ, ಇಂಗ್ಲೀಷ್ ಪ್ರಭಾವ ಕುರಿತಾಗಿ)

೮. ಗ್ರಾಮ, ನಿರ್ವಸಿತ, ನಿರ್ವಸಿತ ನಾಮಗಳಿಗೆ ಮಹತ್ವ

ಸಂಶೋಧನ ಅಧ್ಯಯನಗಳು

ಎಂ.ಫಿಲ್ ಅಧ್ಯಯನಗಳು

೧. ಆರಂಭಿಕ ಅಧ್ಯಯನಗಳಲ್ಲಿ ಈ ಕ್ಷೇತ್ರದ ಸಮಗ್ರ ಪರಿಚಯ

೨. ಜಿಲ್ಲೆ, ತಾಲೂಕುವಾರು ಸ್ಥಳನಾಮಗಳ ಅಧ್ಯಯನ

೩. ಸಾಂಸ್ಕೃತಿಕ, ಸಾಮಾಜಿಕ, ಭಾಷಿಕ, ಐತಿಹಾಸಿಕ, ಜಾನಪದೀಯ ಅಂಶಗಳನ್ನು ಸಂಕ್ಷಿಪ್ತವಾಗಿ ಅಧ್ಯಯನ

೪. ಆರಂಭಿಕ ಅಧ್ಯಯನಗಳು

* ವರ್ಣನಾತ್ಮಕ ಭಾಷಿಕ ಅಧ್ಯಯನಕ್ಕೆ ಮಹತ್ವ ನೀಡಿದವು

* ಸ್ಥಳನಾಮ ಸಾಮಾಜಿಕ, ಭಾಷಿಕ ನೆಲೆಯಲ್ಲಿ ಈವರೆಗೆ ಅಧ್ಯಯನ ನಡೆದದು ಕಡಿಮೆ

* ನಿಷ್ಪತ್ತಿಯ ವಿವರಗಳಿಗೆ ಹೆಚ್ಚಿನ ಮಹತ್ವ

* ಸಾಂಸ್ಕೃತಿಕ, ಸಾಮಾಜಿಕ ಮೌಲಿಕ, ಐತಿಹಾಸಿಕ ಅಂಶಗಳನ್ನು ಕೇವಲ ಪ್ರಾಸ್ತಾವಿಕವೆಂಬಂತೆ ನೋಡಲಾಗಿದೆ)

* ಆಧ್ಯಯನದ ಕೊನೆಗೆ ಸ್ಥಳನಾಮ ಸ್ಥಳನಾಮ ನಿಷ್ಪತ್ತಿ ಕೋಶದ ಬಗ್ಗೆ ಒತ್ತಿ ಹೇಳಾಗಿದೆ

೫. ಕ್ಷೇತ್ರಕಾರ್ಯಕ್ಕೆ ಹೆಚ್ಚು ಮಹತ್ವ ನೀಡಲಾಗಿದೆ.

೬. ಭೌಗೋಳಿಕ ವರ್ಗಿಕರಣ ಅಲ್ಲಲ್ಲಿಯೇ ಕೊಡಲಾಗಿದೆ.

೮. ನಿರ್ವಸಿತ, ನಿರ್ವಸಿತ ನಾಮಗಳಿಗೆ ಅಷ್ಟಾಗಿ ಮಹತ್ವ ನೀಡಿರುವುದಿಲ್ಲ.

೯. ಸ್ಥಳನಾಮಗಳ ಆಧುನಿಕ ಸಂದರ್ಭವನ್ನು ಚರ್ಚೆಗೆ ಎತ್ತಿಕೊಳ್ಳಾಗಿದೆ.

೩.೧೪ ಸ್ಥಳನಾಮ ಪದಗಳ ಘಟಕಗಳು

ಸ್ಥಳನಾಮಗಳು ಸಾಮಾನ್ಯವಾಗಿ ಸಂಯುಕ್ತ ಪದಗಳಾಗಿರುತ್ತವೆ. (Compund Words) ಭಾಷಾಶಾಸ್ತ್ರಜ್ಞರು ನಾಮಗಳ ರಚನೆಯನ್ನಾಧಾರಿಸಿ ಪೂರ್ವ ಪದವನ್ನು (Prefix) ಎಂದೂ ಉತ್ತರ ಪದವನ್ನು (Sufix) ಎಂದೂ ಕರೆಯುತ್ತಾರೆ. ಪೂರ್ವಪದ (Prefix) ವಿಶಿಷ್ಟಾರ್ಥಕವಾಗಿದ್ದು, ಉತ್ತರ ಪದ (Sufix) ಸಾಮಾನ್ಯವಾಗಿರುತ್ತದೆ. ಅಯಾ ಸ್ಥಳಕ್ಕೆ ವಿಶಿಷ್ಟವಾದ ಪೂರ್ವ ಪದವನ್ನು ಹೆಚ್ಚು ಖಚಿತ ಅರ್ಥವನ್ನು ಕೊಡುವ (Specific) ಎಂಬ ಶಬ್ದದಿಂದ ಕರೆಯಲಾಗುತ್ತದೆ. ಉತ್ತರ ಪದವು ಅನೇಕ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಇದನ್ನು (Sufix) ಎಂಬ ಸ್ಥೂಲ ಅರ್ಥಕ್ಕೆ ಪ್ರತಿಯಾಗಿ Generic ಎಂಬ ಶಬ್ದದಿಂದ ಕರೆಯಲಾಗಿರುತ್ತದೆ. ಕನ್ನಡದಲ್ಲಿ Specific ಎಂಬುದಕ್ಕೆ "ವಿಶಿಷ್ಟ" ಅಥವಾ "ನಿರ್ದಿಷ್ಟ" ಎಂಬ ಪದವು Generic ಎಂಬುದಕ್ಕೆ "ಸಾಮಾನ್ಯ" ಅಥವಾ "ವಾರ್ಗಿಕ" ಎಂಬ ಪಾರಿಭಾಷಿಕ ಪದಗಳು ಎಂದು ರೂಡಿಯಲ್ಲಿವೆ.[೫]

ಸ್ಥಳನಾಮ ಪದಗಳು ತಮ್ಮ ಬೆಳವಣಿಗೆಯ ಮೂಲದಲ್ಲಿ ಸಾಮಾನ್ಯಾರ್ಥಕವಾದ ಹಳ್ಳಿ, ಪುರ, ಊರು – ಮುಂತಾದ ರೂಪದಲ್ಲಿದ್ದು, ಇವುಗಳ ಸಂಖ್ಯೆ ಮತ್ತು ಅವರ್ತಗಳು ಹೆಚ್ಚಾದಂತೆ ಒಂದು ಸ್ಥಳನಾಮವನ್ನು ಇನ್ನೊಂದರಿಂದ ಪ್ರತ್ಯೇಕಿಸಿ ಹೇಳುವ ಅವಶ್ಯಕತೆ ಕಂಡು ಬಂದು ಸಹಜವಾಗಿಯೇ ಈ ಪದಗಳ ಪೂರ್ವದಲ್ಲಿ ವಿಶಿಷ್ಟಾರ್ಥಕವಾದ ಇನ್ನೊಂದು ಪದವು ಸೇರಿಕೊಂಡು ಪ್ರತ್ಯೇಕ ಅಂಕಿತಗಳು ಪ್ರಾಪ್ತವಾಗಿವೆ.

ಪ್ರಸಾರ ಕ್ರಮದಲ್ಲಿ ವಿಶಿಷ್ಟ ಘಟಕಗಳು ಮುಕ್ತ ಶ್ರೇಣಿಗೆ (Open set category) ಸೇರಿದವುಗಳಾಗಿವೆ. ಅಯಾ ಪ್ರದೇಶದ ಪ್ರಾಕೃತಿಕ ಪರಿಸರ ಮತ್ತು ಸಂಸ್ಕೃತಿಯನ್ನವಲಂಬಿಸಿ ಅಲ್ಲಿಯ ಸ್ಥಳನಾಮಗಳಲ್ಲಿ ಇವು ಅನೇಕ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಕೆಲವು ಸ್ಥಳನಾಮಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶಿಷ್ಟ ಘಟಕಗಳಿರಬಹುದು. ಅಂಥ ಸಂದರ್ಭದಲ್ಲಿ ಅಯಾ ಸ್ಥಳನಾಮದ ಆಂತರಿಕ ರಚನೆಯಲ್ಲಿ ವಾರ್ಗಿಕ ಘಟಕಕ್ಕೆ ಅತೀ ನಿಕಟವಾಗಿರುವ (Immidiate Constituent) ಘಟಕವನ್ನು ಪ್ರಾಥಾಮಿಕ ಘಟಕ (Primery Specific) ಎಂದೂ

---

೫. ಡಾ. ಎಂ. ಚಿದಾನಂದಮೂರ್ತಿ, ವಾಗಾರ್ಥ, ಭಾಷ್ಯಾ ಪ್ರಕಾಶ, ಬೆಂಗಳೂರು – ೧೯೮೧

ನಂತರದ ಘಟಕವನ್ನು ದ್ವಿತೀಯ ವಿಶಿಷ್ಟ ಘಟಕ (Secondary Specific) ಎಂದು ಕರೆಯುತ್ತಾರೆ. "K M George place names of southern India-DLA- Trivendram-1986) ಎರಡಕ್ಕಿಂತ ಹೆಚ್ಚು ವಿಶಿಷ್ಟಗಳಿದ್ದ ಸಂದರ್ಭದಲ್ಲಿ ಇದೇ ಕ್ರಮವನ್ನು ಅನ್ವಯಿಸಬಹುದು. ಒಟ್ಟಾರೆ ವಿಶಿಷ್ಟ ಘಟಕಗಳು ಎಷ್ಟೇ ಇದ್ದರೂ ಅವುಗಳ ಮುಖ್ಯ ಉದ್ದೇಶ ಕೇವಲ ವಿಶೇಷಣದ ಮೂಲಕ ಮುಂದಿನ ಘಟಕವನ್ನು ಇತರ ಸಮಾನ ಘಟಕಗಳಿಂದ ಪ್ರತ್ಯೇಕಿಸುವುದಾಗಿರುತ್ತದೆ.

ಪ್ರಸಾರ ಕ್ರಮದಲ್ಲಿ ವಾರ್ಗಿಕ ಘಟಕಗಳು ಬದ್ಧ ಶ್ರೇಣಿಗೆ (Closed Set Category) ಸೇರಿರುತ್ತವೆ. ಇವುಗಳ ಸಂಖ್ಯೆ ಯಾವುದೇ ಭಾಷೆಯಲ್ಲಿ ಪರಿಮಿತವಾಗಿರುತ್ತವೆ. ಆಯಾ ಸ್ಥಳ ನಾಮದ ತಿರುಳನ್ನು (Core) ಇವು ಸ್ಪಷ್ಟಗೊಳಿಸುತ್ತವೆ.

ಒಂದು ಗುಂಪಿಗೆ ಸೇರಿದ ಅನೇಕ ಭಾಷೆಗಳಲ್ಲಿಯೂ ವಾರ್ಗಿಕಗಳು ಸಮಾನ ಇಲ್ಲವೇ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಬಳಕೆಯಾಗಬಹುದು. ದ್ರಾವಿಡ ಗುಂಪಿನ ತಮಿಳು, ಕನ್ನಡ, ತೆಲುಗು ಮತ್ತು ಮಲೆಯಾಳಂ ಭಾಷೆಯ ಸ್ಥಳನಾಮಗಳಲ್ಲಿ ಕಂಡುಬರುವ ೨೩೬ ವಾರ್ಗಿಕ ಘಟಕಗಳಲ್ಲಿ ೫೩ ಘಟಕಗಳು ಸಮಾನವಾಗಿರುವುದನ್ನು ಕೆ.ಎಂ. ಜಾರ್ಜ್ ತೋರಿಸಿಕೊಟ್ಟಿದ್ದಾರೆ (Comparative Study on South Indian Place Names)

ಸ್ಥಳನಾಮಗಳಲ್ಲಿ ಮೂಲ ಘಟಕ, ಪ್ರಾಥಾಮಿಕ ನಿಕಟತಮ ಘಟಕ, ದ್ವಿತೀಯ ನಿಕಟತಮ ಘಟಕಗಳು ಹೇಗೆ ಸೇರುತ್ತವೆಂಬುದನ್ನು ಬಳ್ಳಾರಿ ಜಿಲ್ಲೆಯ ಉಪ್ಪಾರಹೊಸಹಳ್ಳಿ ಎಂಬ ಸ್ಥಳನಾಮದ ಉದಾಹರಣೆಯಿಂದ ತಿಳಿಯುತ್ತದೆ. ಈ ಸ್ಥಳನಾಮದಲ್ಲಿಯ ಘಟಕಗಳನ್ನು ಅದರ ಆಂತರಿಕ ರಚನೆಯಿಂದ ತಿಳಿದುಕೊಳ್ಳಲು ಸಾಧ್ಯ.

ಆಕೃತಿ–೧

ಉಪ್ಪಾರ–ಹೊಸ–ಹಳ್ಳಿ

ಹಳ್ಳಿ–ವಾರ್ಗಿಕ

ಹೊಸ–ವಿಶಿಷ್ಟ–೧

ಉಪ್ಪಾರ–ವಿಶಿಷ್ಟ–೨

ಆಕೃತಿ–೨

ಉಪ್ಪಾರ ಹೊಸ ಹಳ್ಳಿ

ಹಳ್ಳಿ–ಮೂಲ ಘಟಕ

ಹೊಸ–ಪ್ರಾಥಾಮಿಕ ನಿಕಟ ಘಟಕ

ಉಪ್ಪಾರ– ದ್ವಿತೀಯ ನಿಕಟ ಘಟಕ

ಇವುಗಳು ಅಧೀನಯು ಸಮಾಸ (ಸಂಯುಕ್ತ) ಪದಗಳಾಗಿರದೆ ಸಂಯುಕ್ತಪದ (co-oridinate compound word) ಲಕ್ಷಣ ಹೊಂದಿದ್ದು ಸಂಯುಕ್ತ ಪದಗಳಂತೆ ವ್ಯವಹರಿಸದೆ ಅಂಕಿತನಾಮಗಳಾಗಿಯೇ ಸಲ್ಲುತ್ತವೆ ಎಂದು ಅವುಗಳ ರಚನೆಯನ್ನು ಅಧರಿಸಿ ಹೇಳಬಹುದು.

೩.೧೫ ಸ್ಥಳನಾಮ ಪದಗಳ ಲಕ್ಷಣಗಳು

ವ್ಯಾಕರಣದ ದೃಷ್ಟಿಯಿಂದ ಸ್ಥಳನಾಮ ಪದಗಳಿಗೆ ಕೆಲವು ವಿಶಿಷ್ಟ ಲಕ್ಷಣಗಳಿರುತ್ತವೆಂಬುದನ್ನು ಈ ಕೆಳಗಿನ ಲಕ್ಷಣಗಳಿಂದ ಲಕ್ಷಿಸಬಹುದು.

೧) ಸ್ಥಳನಾಮಗಳನ್ನು ಯಾವುದೇ ಭಾಷೆಯಲ್ಲಿ ಬಳಸಿದರೂ ಇತರೇ ನಾಮರೂಪದಂತೆ ಭಾಷಾಂತರಿಸಲ್ಪಡದೆ ಅವುಗಳ ಅಂಕಿತ ರೂಪವನ್ನೇ ಇಟ್ಟುಕೊಳ್ಳಲಾಗುವುದು. ಎಲ್ಲಾ ಸ್ಥಳನಾಮಗಳು ಅಂಕಿತನಾಮಗಳಾಗಿರುವುದರಿಂದ ಅವುಗಳ ಅರ್ಥ ವಿಶೇಷತೆಯನ್ನು ಸೂಚಿಸಲು ಪ್ರತ್ಯೇಕ ಶಾಬ್ಧಿಕ ಸಂಜ್ಞೆ ಇರುತ್ತವೆ. [ಇಂಗ್ಲಿಷ್ ಭಾಷೆಯಲ್ಲಿ ಅಂಕಿತನಾಮದ ಮಹತ್ವವನ್ನು ಸೂಚಿಸಲು ಸ್ಥಳನಾಮದ ಮೊದಲಕ್ಷರವನ್ನು ಕ್ಯಾಪಿಟಲ್ ಲೆಟರ್‌ನಲ್ಲಿ ಬರೆಯುವ ಪದ್ಧತಿ ಉಂಟು][೬]

೨) ಸ್ಥಳನಾಮಗಳು ಬಿಡಿ ಘಟಕಗಳ ಸಮಾವೇಶ ಪದಗಳಾಗಿರುವುದರಿಂದ ಬಹುವಚನ ಪ್ರತ್ಯಯವನ್ನು ಹೊಂದಲಾರವು. ಉದಾ: ಬೈಲೂರು – ಇಲ್ಲಿ ಬೈಲುಗಳು ಎಂದಾಗಲೀ, ಊರುಗಳು ಎಂದಾಗಲೀ ಅಥವಾ ಬೈಲೂರುಗಳು ಎಂದಾಗಲೀ ಅಗುವುದು ಅಸಾಧ್ಯ.

೩) ಸ್ಥಳನಾಮಗಳಿಗೆ ಸಂಖ್ಯಾವಾಚಕ ವಿಶೇಷಣ ಸೇರುವುದಿಲ್ಲ. ಇತರೇ ನಾಮಪದಗಳಿಗೆ ಸೇರಬಹುದಾಗಿದೆ. ಉದಾ: ೧ ಸಂಡೂರು, ೨ ಕೂಡ್ಲಗಿ ಇತ್ಯಾದಿ ಪ್ರಯೋಗಗಳ ಸಾಂಭವ್ಯತೆ ಇಲ್ಲವೇ ಇಲ್ಲ.

೪) ಊರು, ಹಳ್ಳಿ, ಪುರ ಮುಂತಾದವು ಗುಣವಾಚಕಗಳಾಗಿವೆ. ಇವು ಗುಣನಾಮಗಳಾಗಿರುವುದರಿಂದ ಬಹುವಚನ ಪ್ರತ್ಯಯ ಹಾಗೂ ಸಂಖ್ಯಾವಾಣಿ ವಿಶೇಷಣ ಹೊಂದಬಹುದಾಗಿದೆ. ಆದರೆ ಇವುಗಳು ವಿಶಿಷ್ಟ ಘಟಕಗಳೊಂದಿಗೆ

---

೬. ಇಂಗ್ಲಿಷ್ ಭಾಷೆಯಲ್ಲಿ ಅಂಕಿತನಾಮದ ಮಹತ್ವವನ್ನು ಸೂಚಿಸಲು ಸ್ಥಳನಾಮದ ಮೊದಲಾಕ್ಷರವನ್ನು ಕ್ಯಾಪಿಟನ್ ಲೆಟರ್‌ನಲ್ಲಿ ಬರೆಯುವ ಪದ್ಧತಿ ಉಂಟು.

ಸೇರಿ ಅಂಕಿತಾರ್ಥ ಪಡೆಯುವುದರಿಂದಾಗಿ ನಂತರದಲ್ಲಿ ಇವುಗಳಿಗೆ ವಚನ ಪ್ರತ್ಯಯವಾಗಲೀ, ಮತ್ತು ವಿಶೇಷಣವಾಗಲೀ ಸೇರಲಾಗದು.

೫) ಒಂದು ಭಾಷೆಯಲ್ಲಿನ ಅರ್ಥಪ್ರತೀತಿ, ಶಬ್ದ ಸಂಪತ್ತನ್ನು ಸ್ಥಳನಾಮಗಳು ನಿಯಂತ್ರಿಸುವ ರೂಪಗಳಾಗಿವೆ. ಆಯಾ ಪ್ರದೇಶದ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ವೈಶಿಷ್ಯಗಳು ಅಲ್ಲಿನ ಸ್ಥಳನಾಮಗಳಲ್ಲಿ ಬಳಕೆಗೊಂಡಿರುತ್ತವೆ. ಒಂದು ಬಗೆಯ ಘಟಕ ಅನೇಕ ಪ್ರದೇಶದಲ್ಲಿ ಕಂಡುಬಂದರೂ ಆಯಾ ಪ್ರದೇಶದಲ್ಲಿ ಆ ಪದಕ್ಕೆ ಭಿನ್ನವಾದ ಅರ್ಥವಿರಬಹುದಾಗಿದೆ. ಹೀಗಾಗಿ ಆಯಾ ಘಟಕಗಳ ಅರ್ಥವು ಆ ಮಟ್ಟಿಗೆ ಪರಿಮಿತಗೊಂಡಂತೆಯೇ ಆಗುತ್ತದೆ. ಈ ಕಾರಣವಾಗಿ ಸ್ಥಳನಾಮಗಳನ್ನು ಪ್ರಾದೇಶಿಕವಾಗಿ ಲಕ್ಷಿಸಿ ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

೩.೧೬ ಅಭ್ಯಾಸಿಸಿದ ಗ್ರಂಥಗಳು

೧) ಪ್ರೊ: ದೇ.ಜವರೇಗೌಡರ– ಸ್ಥಳನಾಮ ವ್ಯಾಸಂಗ–೧೯೯೦.

೨) ಪ್ರೊ:ಜಿ.ಎಸ್.ರೆಡ್ಡಿ–ಸರ್ವೆ ಆಪ್ ಇಂಡಿಯಾ ಪ್ಲೇಸ್ ನೇಮ್ಸ–ಎ ಕೇಸ್ ಸ್ಟಡಿ. ಎಂಡೋಮೆಂಟ್ ಉಪನ್ಯಾಸ ಮೈಸೂರು–೧೯೮೮

೩) ಡಾ:ಶ್ರೀನಿವಾಸ ಹಾವನೂರು– ಕಂಪ್ಯೂಟರ್ ಅನಾಲಿಸ್ ಫಾರ್ ದ ಸ್ಟಡಿ ಅಫ್ ಪ್ಲೇಸ್ ನೇಮ್ಸ ಸ್ಟಡೀಸ್ ಇಂಡಿಯನ್ ಪ್ಲೇಸ್ ನೇಮ್ಸ –೧೯೮೮

೪) ಶ್ರೀ ಹೆಚ್.ಡಿ.ಸಂಕಾಲೀಯ– ಸ್ಟಡೀಸ್ ಇನ್ ದ ಹಿಸ್ಟೋರಿಕಲ್ ಅಂಡ್ ಕಲ್ಚರಲ್ ಜಿಯೋಗ್ರಾಪಿಕ್ ಅಫ್ ಗುಜರಾತ್ –೧೯೪೯

೫) ಡಾ: ಎಂ.ಚಿದಾನಂದಮೂರ್ತಿ–ವಾಗರ್ಥ–ಭಾಷ್ಯೊ–ಪ್ರಕಾಶನ–ಬೆಂಗಳೂರು–೧೯೮೧

೬) ಇಂಗ್ಲೀಷ್ ಭಾಷೆಯಲ್ಲಿ ಅಂಕಿತನಾಮದ ಮಹತ್ವವನ್ನು ಸೂಚಿಸಲು ಸ್ಥಳನಾಮದ ಮೊದಲಾಕ್ಷರವನ್ನು ಕ್ಯಾಪಿಟಲ್ ಲೆಟರ್‌ನಲ್ಲಿ ಬರೆಯುವ ಪದ್ಧತಿ ಉಂಟು

೩.೧೭ ಬಳ್ಳಾರಿ ತಾಲೂಕಿನ ಹಳ್ಳಿಗಳ ಊರುಗಳ ಹೆಸರುಗಳು

೧) ಅಮರಾಪುರ
೨) ಅಲ್ಲಿಪುರ
೩) ಅಸೂಂಡಿ
೪) ಹಂದ್ರಾಳು
೫) ಇಬ್ರಾಹಿಂಪುರ
೬) ಏಳುಬೆಂಚೆ
೭) ಒರುವಾಯಿ
೮) ಕಕ್ಕಬೇವಿನಹಳ್ಳಿ
೯) ಕಪ್ಪಗಲ್ಲು
೧೦) ಕಮ್ಮರಚೇಡು

೧೧) ಕರಿಚೇಡು
೧೨) ಕರೇಕಲ್ಲು
೧೩) ಕರೇಕಲ್ಲು ವೀರಾಪುರ
೧೪) ಕಲ್ಲುಕಂಬ
೧೫) ಕಲ್ಲು ಕುಟ್ಟಿಗನಹಾಳ
೧೬) ಕ್ಯಾದಿಗಿಹಾಳ
೧೭) ಕುಂತನಹಳ್ಳಿ
೧೮) ಕುಡುತಿನಿ
೧೯) ಕುರುಗೋಡು
೨೦) ಕರೆಕೇರಿ
೨೧) ಕೊರ್ಲಗುಂದಿ
೨೨) ಕೋಳೂರು
೨೩) ಕೋಳಗಲ್ಲು
೨೪) ಗುಡುದೂರು
೨೫) ಗುತ್ತಿಗನೂರು
೨೬) ಗೆಣಿಕಿಹಾಳ
೨೭) ಗೋಟೂರು
೨೮) ಗೊಲ್ಲ ನಾಗೇನಹಳ್ಳಿ
೨೯) ಗೋಡೆಹಾಳ
೩೦) ಚಾಗನೂರು
೩೧) ಚಾನಾಳು
೩೨) ಚಳ್ಳಗುರ್ಕಿ
೩೩) ಚಂದೂರು
೩೪) ಚಿಟಿಗನಾಳ
೩೫) ಜಾನಿಕುಂಟ
೩೬) ಜಾಲಿಹಾಳ
೩೭) ಜಾಲಿಬೆಂಚಿ
೩೮) ಜೋಳದರಾಶಿ
೩೯) ತಂಬ್ರಹಳ್ಳಿ
೪೦) ತಿಮ್ಮಲಾಪುರ
೪೧) ತೆಗ್ಗಿನಬೂದುಹಾಳ
೪೨) ತೊಲಮಾಮಿಡಿ
೪೩) ದಮ್ಮೂರು
೪೪) ದಮ್ಮೂರು ಕಗ್ಗಲ್ಲು
೪೫) ದಾಸರ ನಾಗೇನಹಳ್ಳಿ
೪೬) ನೆಲ್ಲುಡಿ
೪೭) ಪಟ್ಟಣಸೆರಗು
೪೮) ಪತ್ರ ಬೂದುಹಾಳ
೪೯) ಪರಮದೇವನಹಳ್ಳಿ
೫೦) ಬದನಹಟ್ಟಿ
೫೧) ಬಸರಕೋಡು
೫೨) ಬಳ್ಳಾರಿ
೫೩) ಬಳ್ಳಾರಿ ಗೋನಾಳ
೫೪) ಬಾಣಾಪುರು
೫೫) ಬಿಸಿಲಹಳ್ಳಿ
೫೬) ಬೇವಿನಹಳ್ಳಿ
೫೭) ಬುರ್ರನಾಯಕನಹಳ್ಳಿ
೫೮) ಬೆಣ್ಣಿಕಲ್ಲು
೫೯) ಬೆಳಗಲ್ಲು
೬೦) ಬೊಮ್ಮನಹಾಳ

೬೧) ಬೊಮ್ಮಕುಂಟ

೬೨) ಬ್ಯಾಲಚಿಂತ

೬೩) ಬೈಲೂರು

೬೪) ಭೈರದೇವನಹಳ್ಳಿ

೬೫) ಮಲ್ಲಾಪುರಂ.ಎಸ್

೬೬) ಮುಸ್ತಿಗಟ್ಟಿ

೬೭) ಮುಸುಡಿಪುರ

೬೮) ಮಿಂಚೇರಿ

೬೯) ಮಿನಳ್ಳಿ

೭೦) ಮುಂಡರಗಿ

೭೧) ಮೋಕಾ

೭೨) ಮೋಕಾ ಗೋನಾಳ

೭೩) ಯರಿಂಗಳಗಿ

೭೪) ಯಳಪಿ

೭೫) ಯಳಪಿ ಕಗ್ಗಲು

೭೬) ಯಮ್ಮಿಗನೂರು

೭೭) ಯತ್ತಿನ ಬೂದುಹಾಳ

೭೮) ಯರ್‍ರಗುಡಿ

೭೯) ರಾಯಪುರ

೮೦) ರೂಪಿನಗುಡಿ

೮೧) ಲಕ್ಷ್ಮಿಪುರ

೮೨) ಲಿಂಗದೇವನಹಳ್ಳಿ

೮೩) ವಡ್ಡರಹಟ್ಟಿ

೮೪) ವೀರಾಪುರ.ಹೆಚ್

೮೫) ವಣೆನೂರು

೮೬) ವೇಣಿ ವೀರಾಪುರ

೮೭) ಶ್ರೀವಾರ(ಸಿರವಾರ)

೮೮) ಶಂಕರಬಂಡ

೮೯) ಸಂಗನಕಲ್ಲು

೯೦) ಸಂಜೀವರಾಯನಕೋಟೆ

೯೧) ಸಿದ್ದಮ್ಮನಹಳ್ಳಿ

೯೨) ಸಿಡಿಗಿನಮೊಳೆ

೯೩) ಸಿದ್ಧರಗುಡ್ಡ

೯೪) ಸಿಂಗದೇವನಹಳ್ಳಿ

೯೫) ಸಿಂದಗೇರಿ

೯೬) ಸಿಂದವಾಳ

೯೭) ಸೋಮಲಾಪುರ

೯೮) ಸೋಮಸಮುದ್ರ

೯೯) ಹದ್ದಿನಗುಂಡು

೧೦೦) ಹರಗಿನದೋಣಿ

೧೦೧) ಹಳಗುಂದ/ಹಲಕುಂದಿ

೧೦೨) ಹಂದಿಹಾಳ

೧೦೩) ಹಿರೇ ಹದಳಗಿ

೧೦೪) ಹೊನ್ನಹಳ್ಳಿ

೩.೧೮ ಕರ್ನಾಟಕದಲ್ಲಿ ಸ್ಥಳನಾಮ ಅಧ್ಯಯನದ ಸಂಕ್ಷಿಪ್ತ ಪರಿಚಯ:

ಸ್ಥಳನಾಮಗಳ ನಿರ್ದೇಶನ ಹಾಗೂ ಅದರ ಕುರಿತಾಗಿ ನಡೆದ ಅಧ್ಯಯನವೇ ಸ್ಥಳನಾಮ ಚರಿತ್ರೆ. ಸ್ಥಳನಾಮ ಶಾಸ್ತ್ರಕ್ಕೆ ಎರಡು ಶತಮಾನಗಳ ಚರಿತೆ ಇದೆಯೆಂದು ವಿದಾಂಸರು ಅಭಿಪ್ರಾಯ ಪಡುತ್ತಾರೆ. ಆದರೆ ಅದೊಂದು ಶಾಸ್ತ್ರವಾಗಿ ಭದ್ರವಾದ ತಳಹದಿಯನ್ನು ಪಡೆದದ್ದು ಒಂದು ಶತಮಾನದಷ್ಟು ಹಿಂದೆ ಎನ್ನಬಹುದು. ಸ್ಥಳದ ಹೆಸರಿನ ಮೂಲಕ ಒಂದು ಭೌಗೋಳಿಕ ಪರಿಸರದ ಸಂಸ್ಕೃತಿಯನ್ನು ಬಿಂಬಿಸುವ ಈ ಪ್ರಕಾರ ಒಂದು ವಿಜ್ಞಾನವಾಗಿಯೂ ಬೆಳೆದು ಬಂದಿತು. ಪಾಶ್ಚಾತ್ಯರಲ್ಲಿ ೧೯ ನೇ ಶತಮಾನದ ಉತ್ತರಾರ್ಧದಲ್ಲಿ ಈ ಶಾಸ್ತ್ರದ ಅಧ್ಯಯನ ಆರಂಭವಾಯಿತು. ಭಾರತದಲ್ಲಿ ಎಸ್.ಡಿ. ಸಂಕಾಲಿಯ ಸ್ಥಳನಾಮ ಅಧ್ಯಯನಕ್ಕೆ ಭದ್ರವಾದಂತಹ ಬುನಾದಿಯನ್ನು ನಿರ್ಮಿಸಿದರು. ಸ್ಥಳನಾಮಗಳ ಪೂರ್ವಾಪರ ಪ್ರತ್ಯಯಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಿ ಧಾರ್ಮಿಕ, ಭೌಗೋಳಿಕ, ಸಾಂಸ್ಕೃತಿಕ, ಭಾಷಿಕ ಅಂಶಗಳ ಮೂಲಕ ವಿವರಿಸಬಹುದೆಂದು ಮಾದರಿಯನ್ನು ರೂಪಿಸಿಕೊಟ್ಟರು. ಭಾರತದಲ್ಲಿ ಸ್ಥಳನಾಮ ಅಧ್ಯಯನ ಅತ್ಯಂತ ಪ್ರಗತಿದಾಯಕವಾಗಿ ನಡೆದದ್ದು ತಮಿಳುನಾಡು ಮತ್ತು ಆಂಧ್ರಪ್ರದೇಶದಲ್ಲಿ. ನಾಚಿಮುತ್ತು, ಸೇತುಪಿಳ್ಳೈ, ನಾರರಾಯಣರೆಡ್ಡಿ, ಗಂಗಾಧರರಾವ್ ಮುಂತಾದ ವಿದ್ವಾಂಸರು ವಿಶ್ವ ವಿದ್ಯಾಲಯದಲ್ಲಿ ಸ್ಥಳನಾಮ ಕುರಿತು ಸಂಶೋಧನೆಯನ್ನು ಕೈಗೊಂಡು ಆ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಆಂಧ್ರಪ್ರದೇಶದಲ್ಲಿ ಜಿಲ್ಲಾವಾರು ಗ್ರಾಮನಾಮಗಳ ಅಧ್ಯಯನದಿಂದ ಸಂಶೋಧನಾ ನಿಬಂಧಗಳನ್ನು ರಚಿಸಲಾಯಿತು.

ಕನ್ನಡದಲ್ಲಿ ಸ್ಥಳನಾಮಗಳ ಬಗೆಗೆ ಆರಂಭದಲ್ಲಿ ಹೆಚ್ಚಾಗಿ ಅಧ್ಯಯನ ನಡೆಯಲಿಲ್ಲ. ಕಿಟಲ್ ನಿಘಂಟು ಕೆಲವು ಊರುಗಳ ಹೆಸರುಗಳನ್ನು ಗುರುತಿಸುತ್ತದೆಯೇ ಹೊರತು ಅವುಗಳ ನಿಷ್ಪತ್ತಿಯ ಬಗ್ಗೆ ತಟಸ್ಥವಾಗಿದೆ. ಹಯವದನರಾಯರು ಮೈಸೂರು ಗೆಝೆಟರಿಯಲ್ಲಿ ಕೆಲವು ನಾಮಗಳನ್ನು ಕುರಿತು ನಡೆಸಿರುವ ವಿಶ್ಲೇಷಣೆ ಅಧ್ಯಯನಕಾರರಿಗೆ ಮಾರ್ಗಸೂಚಿಯಾಗಿವೆ. ಮಾಸ್ತಿ(ಊರ ಹೆಸರುಗಳು), ದೇಜಗೌ, ಆರ್.ಸಿ.ಹಿರೇಮಠ ಮುಂತಾದವರು ಕೆಲವು ಲೇಖನಗಳ ಮೂಲಕ ಸ್ಥಳನಾಮ ಶಾಸ್ತ್ರದ ನಿರ್ದಿಷ್ಟ ಮಾಹಿತಿಯನ್ನು ನೀಡಿದರು.

ಸ್ಥಳನಾಮಗಳ ಮೇಲೆ ಅತ್ಯಂತ ಮಹತ್ವದ ಕೆಲಸ ಮಾಡಿದ ಶಂಬಾಜೋಶಿಯವರು "ಎಡೆಗಳು ಹೇಳುವ ಕಂನಾಡ ಕಥೆ" ಕೃತಿಗಳ ಹಿನ್ನೆಲೆಯಲ್ಲಿ ಕನ್ನಡ ಸಂಸ್ಕೃತಿಯ ಭೌಗೋಳಿಕ ಎಲ್ಲೆಯನ್ನು ಹುಡುಕುತ್ತಾ ಹೊರಟು ಇತಿಹಾಸ, ಪುರಾಣ, ಜಾನಪದ, ಧರ್ಮ, ಜನಾಂಗವನ್ನು

ಸ್ಥಳನಾಮಗಳ ಮುಖೇನ ಗುರುತಿಸುವಂಥ ಮಹತ್ವದ ಅಧ್ಯಯನ ಮಾಡಿದರು. ಕನ್ನಡ ಸಂಸ್ಕೃತಿಯನ್ನು ಉತ್ತರ ಭಾರತದಲ್ಲಿಯೂ ಹುಡುಕ ಹೊರಡುವ ಶಂಬ ಮೂಲತ: ಸ್ಥಳನಾಮಗಳಲ್ಲಿ ಪ್ರಮುಖ ಆಕಾರಗಳನ್ನಾಗಿ ಬಳಸುತ್ತಾರೆ. ಸ್ಥಳನಾಮಗಳ ವರ್ಗೀಕರಣ, ಸಾಂಸ್ಕೃತಿಕ ಮಹತ್ವವನ್ನು ಅವರು ಎತ್ತಿಹೇಳಿದರು. ಅಂತೆಯೇ ಎಂ.ಎಂ.ಕಲಬುರ್ಗಿ, ಎಂ.ಚಿದಾನಂದಮೂರ್ತಿ, ಆರ್.ಸಿ. ಹಿರೇಮಠ, ಹಂಪಾನಾ, ಎಂ.ಬಿ.ನೇಗಿನಹಾಳ್, ವಿ.ಗೋಪಾಲಕೃಷ್ಣ, ಕೆಮ್ತೂರು ರಘುಪತಿಭಟ್ಟ, ಪಂಜೆ, ಸೇಡಿಯಾಪು ಕೃಷ್ಣಭಟ್ಟ, ದೇಜಾಗೌ ಮುಂತಾದ ವಿದ್ವಾಂಸರು ಸ್ಥಳನಾಮ ಶಾಸ್ತ್ರಕ್ಕೆ ತಾತ್ವಿಕ ರೂಪರೇಷೆ ನೀಡಿದರು.

ಕೆಮ್ತೂರು ರಘುಪತಿಭಟ್ಟ ಅವರು ತುಳುನಾಡಿನ ಸ್ಥಳನಾಮಗಳು ಎಂಬ ಪ್ರಬಂಧವನ್ನು ಸಿದ್ದಪಡಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದರು. ಇದು ಕನ್ನಡದ ಸ್ಥಳನಾಮ ಕುರಿತಾದ ಸಂಶೋಧನಾ ನಿಬಂಧವಾಗಿದೆ. ಮೈಸೂರಿನಲ್ಲಿ ೧೯೭೮ ರಲ್ಲಿ ಪ್ಲೇಸ್ ನೇಮ್ಸ್ ಸೊಸೈಟಿ ಆಫ್ ಇಂಡಿಯಾ ಎಂಬ ಸ್ಥಳನಾಮ ಸಂಸ್ಥೆಯನ್ನು ಸ್ಥಾಪಿಸಿ ಆ ಮೂಲಕ ದೇಜಗೌ ಅವರು ಭಾರತಾದ್ಯಂತ ಸ್ಥಳನಾಮ ಸಂಶೋಧನೆಗೆ ಗಮನ ಹರಿಸಿದರು. ಭೌಗೋಳಿಕ ಹಿನ್ನೆಲೆಯಲ್ಲಿ ಆಯಾ ಪ್ರಾದೇಶೀಕ ವೈಶಿಷ್ಟ್ಯದೊಂದಿಗೆ ಸ್ಥಳನಾಮಗಳ ಕುರಿತು ಈ ಸಂಸ್ಥೆ ಅನೇಕ ಲೇಖನಗಳನ್ನು ಪ್ರಕಟಿಸುತ್ತಿರುವುದು ಗಮನಾರ್ಹವಾಗಿದೆ. ವಾರ್ಷಿಕ ಅಧಿವೇಶನಗಳನ್ನು ಈ ಸಂಸ್ಥೆ ಏರ್ಪಡಿಸಿ ಸ್ಥಳನಾಮಗಳ ವಿಚಾರಗೋಷ್ಠಿಯನ್ನು ನಡೆಸುತ್ತದೆ.

೩.೧೯ ಎಡೆಗಳು ಹೇಳುವ ಕಂನಾಡ ಕತೆ- ಡಾ. ಶಂ.ಬಾ.ಜೋಶಿ, ೧೯೪೭

ಎಡೆಗಳು ಹೇಳುವ ಕಂನಾಡ ಕತೆ ಶಂ.ಬಾ.ಅವರ ಮಹತ್ವದ ಕೃತಿ. ಸ್ಥಳನಾಮಗಳನ್ನೇ ಪ್ರಧಾನವಾಗಿ ಅಭ್ಯಾಸಿಸಿ ಅವುಗಳಲ್ಲಿ ಅಂತರ್ಗತವಾಗಿರುವ ಅಮೂಲ್ಯವಾದ ಸಾಂಸ್ಕೃತಿ ಸಂಗತಿಗಳನ್ನು ತಿಳಿಯಪಡಿಸುವ ನೆಲೆಯಲ್ಲಿ ಈ ಸಂಶೋಧನೆ ಕ್ರಿಯಾತ್ಮಕವಾಗಿದೆ. ಎಡೆಗಳ ಹೆಸರಿನ ಹಿನ್ನೆಲೆಯಲ್ಲಿ ನಮ್ಮ ನಾಡಿನ ರೂಢಿ, ಸಂಪ್ರದಾಯ ಮತ್ತು ಪೂರ್ವ ಪರಂಪರೆಗಳನ್ನು ಮಾನವ ಸಮಾಜ ವಿಕಾಸ ಶಾಸ್ತ್ರದ ಬೆಂಬಲದಿಂದ ಹೊಂದಿಸಿ ಹೇಳುವುದೇ ಈ ಕೃತಿಯ ವೈಶಿಷ್ಟ್ಯ. ೧೯೪೭ ರ ವೇಳೆಗೆ ಕನ್ನಡದಲ್ಲಿ ಸ್ಥಳನಾಮ ಅಧ್ಯಯನದಿಂದ ಕರ್ನಾಟಕದ ಸಂಸ್ಕೃತಿಯನ್ನು ರೂಪಿಸುವ ಪ್ರಯತ್ನವೊಂದು ನಡೆದಿತ್ತೆನ್ನುವುದು ಮುಖ್ಯವೆನಿಸುತ್ತದೆ. ನಾಡಿನ ಭವ್ಯ ಪರಂಪರೆಯನ್ನು ನಾಡವರೆಗೆ ತಿಳಿಸಿ ಕೊಡುವುದು ಅಂದು ಮೌಲ್ಯವೆನಿಸಿತ್ತು. ಶಂ.ಬಾ. ಈ ಕಾರ್ಯವನ್ನು ಶ್ರದ್ದೆ ಹಾಗೂ ಉತ್ಸಾಹದಿಂದ ಮಾಡಿದರು. ಸ್ಥಳನಾಮಗಳ ಅಧ್ಯಯನ ಈಗಿನಷ್ಟು ವೈಜ್ಞಾನಿಕವಾಗಿ ಅಲ್ಲದಿದ್ದರೂ ದೊರೆಯುವಷ್ಟು ಮಾಹಿತಿಗಳ ಮೂಲಕ ಪ್ರಾಮಾಣಿಕವಾಗಿ ನಡೆದಿತ್ತು.

ಶಂ.ಬಾ. ಅವರು ಸ್ಥಳನಾಮ ವರ್ಗೀಕರಣವನ್ನು ಈ ಕೆಳಗಿನಂತೆ ಮಾಡಿದ್ದಾರೆ.

೧) ಪ್ರಾಣಿಗಳಿಂದ

೨) ಗಿಡಗಳಿಂದ

೩) ದೇಹದ ಅಂಗಾಂಗಳಿಂದ

೪) ಮನೆಗಳಿಂದ

೫) ಗ್ರಹಾದಿಗಳಿಂದ

೬) ಬೇಸಾಯದಿಂದ

೭) ದೇವತಾದಿಗಳಿಂದ

೮) ವ್ಯಕ್ತಿಗಳಿಂದ

೯) ಕಾಲದಿಂದ ಬಂದ ಹೆಸರುಗಳಿಂದ

ಮುಂತಾಗಿ ೨೩ ರೀತಿಯ ವಿಭಜನೆಯನ್ನು ಮಾಡಿದ್ದಾರೆ. ಗ್ರಾಮ, ಊರು, ಪುರ ಎಂಬುವು ಅಷ್ಟು ಪುರಾತನವಲ್ಲವೆನ್ನುವ ಶಂ.ಬಾ. ಅವರು ಮಾನವನು ಪ್ರಾಥಮಿಕ ಸ್ಥಿತಿಯಲ್ಲಿ ಆಹಾರ ಸಂಚಯನಕ್ಕಾಗಿ ಅಲೆಮಾರಿಯಾಗಿದ್ದು ಅವನ ವಸತಿ ಸೂಚಕವಾದ 'ಹಟ್ಟಿ' ಎಂದು ಊಹಿಸುವರು. ಈ ಶಬ್ದವು ದನಗಾರಿಕೆಯ ಬಾಳಿನ ದ್ಯೋತಕವಾಗಿದೆ. ಹಟ್ಟಿಗಳೇ ನಮ್ಮ ನಾಡಿನ ಆರಂಭ ಕಾಲದ ವಸತಿಗಳೆಂದು ಊಹಿಸುವರು. ಹಟ್ಟಿಯ ಮೂಲ ರೂಪ ಪಟ್ಟಿ ಎಂದು ಇದಕ್ಕೆ ತಮಿಳಿನಲ್ಲಿ ಮನೆ, ಹಳ್ಳಿ ಎಂಬ ಅರ್ಥವಿದೆಯೆಂದು ವಾದ ಮಂಡಿಸುತ್ತಾರೆ.

ಸ್ಥಳನಾಮಗಳು ಸಾಮಾಜಿಕ, ಇತಿಹಾಸದಲ್ಲಿ ಮನುಷ್ಯನನ್ನು ತಿಳಿಯುವುದನ್ನು ಹೇಗೆ ಮಹತ್ವದ್ದಾಗಿದೆ ಎಂಬುದನ್ನು ವಿವರಿಸುತ್ತಾರೆ. ಪಟ್ಟಿ, ಪಾಡಿ, ವಾಡ–ಹಟ್ಟಿ ಮೊದಲಾದುವು ಗ್ರಾಮನಾಮದ ರೂಪಗಳು. ಜನಾಂಗದ ವಾಸಸ್ಥಾನ ಸೂಚಕಗಳು ಎಂದು ಶಂ.ಬಾ. ಅಭಿಪ್ರಾಯ ಪಡುತ್ತಾರೆ. ಹೀಗೆ ಕನ್ನಡ ನಾಡಿನಲ್ಲಿ ಸ್ಥಳನಾಮದ ಅಧ್ಯಯನದ ಬುನಾದಿಯನ್ನು ಶಂ.ಬಾ.ಜೋಶಿಯವರು ಆ ಮೂಲಕ ಕನ್ನಡ ಸಂಸ್ಕೃತಿಯನ್ನು ಉತ್ತರ ಭಾರತದಲ್ಲಿಯೂ ಕಂಡುಕೊಳ್ಳುವ ಪ್ರಯತ್ನ ಮಾಡಿದರು. ನಾಮಾಧ್ಯಯನಕ್ಕೆ ಎಡೆಗಳು ಹೇಳುವ ಕಂನಾಡ ಕತೆ ಮೊದಲ ಆಕರ ಗ್ರಂಥವಾಗಿದೆ. ಅದರಂತೆ 'ಕಣ್ಮರೆಯಾದ ಕನ್ನಡ ಮತ್ತು ಕನ್ನಡದ ನೆಲೆ' 'ಮಹಾರಾಷ್ಟ್ರದ ಮೂಲ' 'ಕಂನುಡಿಯ ಹುಟ್ಟು ಹಾಗೂ ಕನ್ನಡ ನುಡಿಯ ಜೀವಾಳ' 'ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ' ಎಂಬ ಕೃತಿಗಳಲ್ಲಿಯೂ ಸ್ಥಳನಾಮದ ಮೂಲಕ

ಕನ್ನಡ ಭಾಷೆ, ಸಂಸ್ಕೃತಿ, ಭೌಗೋಳಿಕ ಎಲ್ಲೆಯನ್ನು ಗುರುತಿಸುವ ಚರ್ಚೆ ಮಾಡಿದ್ದಾರೆ. ಈ ದೃಷ್ಟಿಯಿಂದ ನಾಮಾಧ್ಯಯನಕ್ಕೆ ಜೋಶಿಯವರು ಈ ಎಲ್ಲ ಕೃತಿಗಳು ಬಹು ಮುಖ್ಯ ಆಕರಗಳೆಂದು ಹೇಳಬಹುದು.

೩.೨೦ ಸಂಶೋಧನಾ ತರಂಗ ಸಂಪುಟ ೨–ಡಾ. ಎಂ. ಚಿದಾನಂದಮೂರ್ತಿ ೧೯೭೦

ಹರಿಹರ ಕ್ಷೇತ್ರ ಮತ್ತು ಹರಿಹರ ಕವಿಯ ಕಾಲ ಎಂಬ ಲೇಖನದಲ್ಲಿ ಪ್ರಾಸ್ತಾವಿಕವೆಂಬಂತೆ ಹರಿಹರ ಸ್ಥಳನಾಮದ ಬಗ್ಗೆ ಬರೆದಿದ್ದಾರೆ. ಇದು ದಾವಣಗೆರೆಯ ತುಂಗಭದ್ರೆಯ ದಡದ ಮೇಲಿನ ಹರಿಹರ ನಗರವೇ ಆಗಿದ್ದು, ಹರಿ+ಹರ ಎಂಬುದು ಧರ್ಮ ಸ್ವಾರಸ್ಯದ ಸಂಕೇತ ಎಂದು ಶಾಸನಗಳ ಉಲ್ಲೇಖದಿಂದ ವಿವರಿಸಿದ್ದಾರೆ.

೩.೨೧ ಕೆಲವು ದೇಶನಾಮಗಳು – ಸೋಡಿಯಾಪು ಕೃಷ್ಣಭಟ್ಟ ೧೯೭೫

ಸೋಡಿಯಾಪು ಅವರ ಈ ಕೃತಿ ಶಬ್ದಾರ್ಥ ವಿಶ್ಲೇಷಣೆಗೆ ಸಂಬಂಧಿಸಿದೆ. ನೇರವಾಗಿ ಸ್ಥಳನಾಮ ಅಧ್ಯಯನ ಹೇಳುವುದಿಲ್ಲವಾದರೂ, ತುಳು ಶಬ್ದಾರ್ಥ ಮತ್ತು ಚೇರ, ಕೊಂಕಣ ಹಾಗೂ ಪಾಂಡಿ ಮತ್ತು ಪಾಂಡ್ಯ ಎಂಬ ಎರಡು ಲೇಖನಗಳಲ್ಲಿ ೫ ಶಬ್ದಗಳ ವ್ಯುತ್ಪತ್ತಿ ವಿವೇಚನೆಯನ್ನು ವ್ಯಾಕರಣ, ಭಾಷಾಶಾಸ್ತ್ರ, ಉಪಭಾಷಾ ವಿವೇಚನೆ ಸ್ಥಳನಾಮಗಳನ್ನು ಈ ಪುಸ್ತಕದಲ್ಲಿ ಹೇಳಲಾಗಿದೆ. ಅಳುಪ, ಕೊಂಕ, ಕೋಡಿಯಾಲ, ಪಾಂಡಿಚೇರಿ, ಭೂತಾಳ, ಪಾಂಡ್ಯ ಮೊದಲಾದ ಶಬ್ದಗಳನ್ನು ವಿವರಿಸುವಾಗ ತಮ್ಮ ವಾದಕ್ಕೆ ಸ್ಥಳನಾಮಗಳನ್ನು ಪೂರಕವಾಗಿ ಬಳಸಿಕೊಂಡಿದ್ದಾರೆ.

೩.೨೧ ಶ್ರವಣಬೆಳ್ಗೊಳ – ಡಾ. ಬಿ.ವಿ. ಶಿರೂರು ೧೯೭೬

ಇದು ಪಿಎಚ್.ಡಿ. ನಿಬಂಧ. ಶ್ರವಣಬೆಳಗೊಳದ ನಾಮ ವಿವೇಚನೆ ಎಂಬ ಉಪಧ್ಯಾಯದಲ್ಲಿ ಬೆಳಗೊಳವನ್ನು ಕಟವಪ್ರಗಿರಿ; ಕಟ್ಟಪ್ಪಿನ್ದುರ್ಗ ಕಟ್ಟಪ್ಪು; ರಿಷಿಗಿರಿ; ತೀರ್ಥಗಿರಿ; ಚಂದ್ರಗಿರಿ; ಧವಳ ಸರೋವರ; ಸಿತತಟಾಕ; ಜಿನಗಿರಿ; ಅಭಿನವಪೌದನಾಪುರ ಎಂಬ ಮುಂತಾದ ಹೆಸರುಗಳನ್ನು ಶಾಸನ, ಐತಿಹ್ಯ, ಸಂಸ್ಕೃತೀಕರಣ ಮುಂತಾದ ಆಧಾರಗಳನ್ನು ಒದಗಿಸಿ ತಮ್ಮ ವಾದವನ್ನು ಮುಂದುವರೆಸುತ್ತಾರೆ.

೩.೨೨ ತುಳುನಾಡಿನ ಸ್ಥಳನಾಮಗಳು – ಕೆಮ್ತೂರು ರಘುಪತಿಭಟ್ಟ ೧೯೭೮

ಈ ಕೃತಿಯು ಸ್ಥಳನಾಮ ವಿಜ್ಞಾನದಲ್ಲಿ ಸಂಶೋಧನಾ ಪದವಿಗೆಂದು ಸಿದ್ದಪಡಿಸಿದ ಸಂಶೋಧನಾ ಪೂರ್ವ ಪ್ರಬಂಧ. ಮುಂದೆ ಇದನ್ನೇ ಪಿಎಚ್.ಡಿ. ಸಂಶೋಧನೆಯನ್ನು

ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ೭೦ ರ ದಶಕದ ಅತ್ಯಂತ ಮಹತ್ವದ ಸಂಶೋದನೆ ಇದು. ಕನ್ನಡದಲ್ಲಿ ಮೊದಲ ಸಂಶೋಧನಾ ಕೃತಿಯೂ ಆಗಿದೆ. ಈ ಕೃತಿಯನ್ನು ಭಟ್ಟರು ತುಳು ನಾಡಿಗೆ ಸೀಮಿತಪಡಿಸಿ ಜೊತೆಗೆ ಸಾರ್ವತ್ರಿಕ ಎನ್ನಬಹುದಾದ ಅನೇಕ ನಿಯಮಗಳನ್ನು ವಿಶ್ಲೇಷಿಸಿದ್ದಾರೆ. ೯ ವಿಭಾಗ ಮಾಡಿಕೊಂಡು ಪ್ರವೇಶ ಭಾಗದಲ್ಲಿ ಸ್ಥಳನಾಮದ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಿದ್ದಾರೆ. ಸ್ಥಳನಾಮ ಸ್ವರೂಪದಲ್ಲಿ ವಾರ್ಗಿಕ, ನಿರ್ದಿಷ್ಟಗಳ ಸ್ಥಾನ ಮತ್ತು ಸ್ಥಳನಾಮಗಳ ವರ್ಗಿಕರಣವನ್ನು ಹೇಳುತ್ತಾ ಸ್ವಾಭಾವಿಕ ಸ್ಥಳನಾಮಗಳು ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಸ್ಥಳನಾಮಗಳೆಂದು ವರ್ಗೀಕರಿಸುತ್ತಾರೆ. ಜೊತೆಗೆ ಸಂಸ್ಕೃತೀಕರಣ, ಹೆಸರಿನ ಬದಲಾವಣೆ ಮುಂತಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಂಡು ತುಳುನಾಡಿನ ಒಟ್ಟು ಸ್ಥಳನಾಮ ಘಟಕಗಳನ್ನು ೩ ನೇ ವಿಭಾಗದಲ್ಲಿ ಪಟ್ಟಿ ಮಾಡಿದ್ದಾರೆ. ಜಲವಾಚಕ ಸ್ಥಳನಾಮಗಳು ಎಂಬಲ್ಲಿ ಭಟ್ಟರು ತುಳು ನಾಡಿನ ನಿರ್ದಿಷ್ಟ ವಾರ್ಗಿಕ ಭಾಗಗಳಿಂದ ಹೇಗೆ ಜಲವಾಚಿ ಮತ್ತು ಸಂಬಂಧ ವಾಚಿಗಳಾಗುತ್ತವೆಂದು ಹೇಳಿದ್ದಾರೆ. ಭೂಸ್ಥಿತಿವಾಚಕ ಸ್ಥಳನಾಮಗಳೊಂದಿಗೆ ತುಳುನಾಡಿನ ಭೌಗೋಳಿಕ ವೈಶಿಷ್ಟ್ಯವನ್ನು ಹೇಳಿದ್ದಾರೆ.. ಇತರ ಸ್ಥಳವಾಚಕಗಳಲ್ಲಿ ಶಿಲಾವಾಚಿ– ಸಸ್ಯವಾಚಿ– ಕ್ಷೇತ್ರವಾಚಕ–ದಿಗ್ವಾಚಕ–ಸಾಂಸ್ಕೃತಿಕ ಎಂದು ಪರಿಚಯಿಸಿದ್ದಾರೆ. ಕೊನೆಯಲ್ಲಿ ತುಳು ಶಬ್ದದ ಕುರಿತಾದ ದೀರ್ಘ ಚರ್ಚೆ, ಪ್ರತಿ ನಾಮಕರಣ ಈ ವರೆಗೆ ನಡೆದ ತುಳುನಾಡಿನ ನಾಮಾಧ್ಯಯನಗಳ ವಿವಿಧ ಮಜಲುಗಳನ್ನು ತಿಳಿಸುವಲ್ಲಿ ಸಫಲರಾಗಿದ್ದಾರೆ. ಇಂದಿಗೂ ಪ್ರಸ್ತುತವೆನಿಸುವ ಇವರ ತಾತ್ವಿಕ ನಿಲುವುಗಳು ಸಂಶೋಧನಾ ವಿಧಿ ವಿಧಾನಗಳಲ್ಲಿ ವರ್ಣನಾತ್ಮಕತೆಯನ್ನು ಬಿಂಬಿಸುತ್ತವೆ. ಸಾಂಸ್ಕೃತಿಕ ಅಂಶಗಳನ್ನು ಹೇಳುತ್ತಲೇ ಅನೇಕ ಹೊಸ ಸಾಧ್ಯತೆಗಳ ಕಡೆ ಈ ಕೃತಿ ಸುಳಿವನ್ನು ನೀಡುತ್ತದೆ.

೩.೨೩ ವಾಗಾರ್ಥ – ಡಾ. ಎಂ. ಚಿದಾನಂದಮೂರ್ತಿ ೧೯೮೧

ಸ್ಥಳನಾಮ ಅಧ್ಯಯನ ಕ್ಷೇತ್ರಕ್ಕೆ ಮುಖ್ಯವಾದ ಆಕರ ಗ್ರಂಥವಿದು. ಇಲ್ಲಿ ಸ್ಥಳನಾಮಕ್ಕೆ ಸಂಬಂಧಿಸಿದ ೫ ಲೇಖನಗಳಿವೆ. ಕರ್ನಾಟಕದ ಸ್ಥಳನಾಮಗಳು ಎಂಬಲ್ಲಿ ಅಧ್ಯಯನದ ಇತಿಹಾಸ, ವಾರ್ಗಿಕ, ನಿರ್ದಿಷ್ಟಗಳ ವೈಜ್ಞಾನಿಕ ವರ್ಗಿಕರಣ, ಸ್ಥಳನಾಮಗಳ ಸಾಮಾಜಿಕ– ಸಾಂಸ್ಕೃತಿಕ, ಭಾಷಿಕ ಮಹತ್ವ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ. ವರ, ವಾರ ಎಂದು ಕೊನೆಯಾಗುವ ಊರ ಹೆಸರುಗಳು ಎಂಬಲ್ಲಿ ಶಾಸನಾಧಾರಗಳಿಂದ ಉದಹರಿಸುತ್ತಾ ಪುರದಿಂದ ವರ, ವಾರ ಬಂದಿದೆಯೆನ್ನುತ್ತಾರೆ. ಆದರೆ ಕಲ್ಬುರ್ಗಿಯವರು ಪುರದಿಂದ ವರ, ವಾರ ಬಂದಿದ್ದನ್ನು ತಳ್ಳಿ ಹಾಕುತ್ತಾರೆ. ಊರುಗಳಿಗೆ ಎರಡೆರಡು ಹೆಸರುಗಳು ಎಂಬ ಲೇಖನದಲ್ಲಿ ಲಂಬಾಣಿಗಳ ವಾಸದ ನೆಲೆಗಳಿಗೆ ೨ ಹೆಸರು ಇರುವುದನ್ನು ಸವಿವರವಾಗಿ ಹೇಳುತ್ತಾರೆ. ಬ್ರಾಹ್ಮಣರಿಗೆ ದಾನವಾಗಿ ಕೊಟ್ಟ ಊರ ಹೆಸರುಗಳ

ಸೂಚಕಾಂಶಗಳು ಎಂಬಲ್ಲಿ ಬ್ರಾಹ್ಮಣ; ಅಗ್ರಹಾರ: ಮಂಗಲ: ಆಲ: ಬೊಮ್ಮ; ಶ್ರೋತ್ರಿಯ: ಮಹಾಜನ: ಹಾರೋ ಮುಂತಾದ ಪದಗಳು ಪದಾದಿ ಅಥವಾ ಪದಾಂತ್ಯದಲ್ಲಿದ್ದರೆ ಅವು ಬ್ರಾಹ್ಮಣರಿಗೆ ದಾನವಾಗಿ ನೀಡಿದ ಊರುಗಳು ಎಂದಿದ್ದಾರೆ. ದೇಕಬ್ಬೆ ಶಾಸನದ ಸ್ಥಳನಾಮಗಳನ್ನು ಕುರಿತು ಎಂಬ ಲೇಖನದಲ್ಲಿ ಕೆಲವು ಶಾಸನೋಕ್ತ ಐತಿಹಾಸಿಕ ಪ್ರಸಿದ್ಧ ನಾಡುಗಳ ಉಲ್ಲೇಖವಿದೆ.

ವಾಗಾರ್ಥ ಉತ್ತಮ ಆಕರ ಗ್ರಂಥ ಎಂಬುದಲ್ಲಿ ಸಂದೇಹವಿಲ್ಲ. ಈ ಕೃತಿಯ ೫ ಲೇಖನಗಳು ಸ್ಥಳನಾಮ ವಿಜ್ಞಾನದ ಪ್ರತಿಯೊಂದು ಅಂಶವನ್ನು ಸಂಕ್ಷಿಪ್ತದಲ್ಲಿ ವಿವರಿಸುತ್ತದೆ. ಈ ದೃಷ್ಟಿಯಿಂದ ಇದೊಂದು ದಾರಿದೀಪ ಕೃತಿಯೆಂದರೆ ತಪ್ಪೇನಿಲ್ಲ.

೩.೨೪ ಆಸ್ವಾದ – ಪ್ರೊ. ಎಂ.ವಿ. ಸೀತಾರಾಮಯ್ಯ ಅಭಿನಂದನಾಗ್ರಂಥ ೧೯೮೩

ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಜಲಸೂಚಕ ಅಂಶಗಳು ಎಂಬಲ್ಲಿ ಕೋಲಾರದ ೪೦೦೦ ಸ್ಥಳನಾಮಗಳಲ್ಲಿ ಸುಮಾರು ೪೦೦ ಜಲಸೂಚಿನಾಮಗಳನ್ನು ಗುರುತಿಸಿದ್ದಾರೆ. ಕನ್ನಡದ ಜೊತೆಯಲ್ಲಿ ಚರುವು: ಚರ್ಲ ಮುಂತಾದ ತೆಲುಗಿನ ಜಲಸೂಚಿ ಅಂಶಗಳನ್ನು ಪಟ್ಟಿಮಾಡುವ ಮೂಲಕ ದ್ವಿಭಾಷಿಕ ಪರಿಸರದ ಪ್ರಭಾವವನ್ನು ತಿಳಿಯಬಹುದು. ವಿ.ಗೋಪಾಲಕೃಷ್ಣರವರು ತಮ್ಮ ಸಂಶೋಧನಾ ನಿಬಂಧದಲ್ಲಿಯೂ ಈ ಬಗೆಯ ತಾರ್ಕಿಕ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

೩.೨೫ ಮಲೆನಾಡ ಜಾನಪದ – ಸಂ. ಎಚ್.ಜಿ. ಲಕ್ಕಪ್ಪಗೌಡ ೧೯೮೩

ಇದರಲ್ಲಿ ಎಸ್. ಕುಮಾರಸ್ವಾಮಿಯವರು ಸ್ಥಳನಾಮಗಳು ಎಂಬ ಲೇಖನವಿದ್ದು ೨೦ ನೇ ಶತಮಾನದಲ್ಲಿ ನಾಮಾಧ್ಯಯನದ ಪ್ರಸ್ತುತತೆಯನ್ನು ಹೇಳುತ್ತಾ ಸಂಸ್ಕೃತಿಯನ್ನು ನಿರ್ವಚಿಸಲು ನಾಮಗಳ ಮಹತ್ವ ಏನು ಎಂಬುದನ್ನು, ವಾರ್ಗಿಕಗಳ ಪಟ್ಟಿ ಹಾಗೂ ಅವುಗಳ ಪ್ರಾಚೀನತೆಯ ಮೂಲಕ ವಿವರಿಸಿದ್ದಾರೆ. ಹೆಸರಿನ ಬದಲಾವಣೆ ದೇಸೀಯತೆ ಎಂದು ಹೇಳುತ್ತಲೇ ಜಾನಪದರು ಒಂದು ಗ್ರಾಮನಾಮವನ್ನು ತಮ್ಮ ಹಾಡು, ಗಾದೆಗಳ ಮೂಲಕ ಯಾವ ರೀತಿಯಾಗಿ ಬಳಸಿಕೊಂಡು ಪರಂಪರೆಯನ್ನು ಹೊತ್ತು ಸಾಗುತ್ತಾರೆಂಬುದನ್ನು ವಿವರಿಸಿದ್ದಾರೆ.

೩.೨೬ ಕರ್ನಾಟಕ ಗ್ರಾಮಸೂಚಿ ೧೯೮೫

ಇದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೊರತಂದಿರುವ ಅಪರೂಪದ ಕೃತಿಯಾಗಿದೆ. ಇಲ್ಲಿ ಕರ್ನಾಟಕ ರಾಜ್ಯ ಗ್ರಾಮಗಳ ಜಿಲ್ಲಾ ಹಾಗೂ

ತಾಲ್ಲೂಕುವಾರು ವರ್ಣಾನುಕ್ರಮ ಪಟ್ಟಿಯು ಇಲ್ಲಿದೆ. ಇದು ಮುಖ್ಯವಾಗಿ ಸಂಶೋಧಕರಿಗೆ, ಆಸಕ್ತರಿಗೆ ಒಂದೆಡೆ ಗ್ರಾಮ ನಾಮಗಳು ದೊರೆಯುತ್ತದೆ. ಇದೊಂದು ಸಾಧ್ಯ ಕೆಲಸವಾದರೂ ಅಚ್ಚುಕಟ್ಟಾಗಿ ಜೋಡಿಸಿಕೊಟ್ಟಿದ್ದಾರೆ. ಬೇಚರಾಕ್ ಗ್ರಾಮಗಳನ್ನು ಇಲ್ಲಿ ಸೇರಿಲಾಗಿಲ್ಲ. ಹಾಗೂ ಪ್ರಾಚೀನ ನಾಮಗಳನ್ನು ಉಲ್ಲೇಖಿಸಿಲ್ಲ. ೧೯೮೫ ರಿಂದ ಈಚೆಗೆ ನಿರ್ಮಾಣವಾದ ಗ್ರಾಮನಾಮಗಳ ಪಟ್ಟಿ ಇಲ್ಲಿ ಸೇರಿಸಿಲ್ಲ. ಕಾರಣ ಈ ಕೃತಿಯು ಮತ್ತೊಂದು ಮುದ್ರಣವಾಗುವ ಅವಶ್ಯಕತೆ ಇದೆ. ಇದೊಂದು ಅತ್ಯುಪಯುಕ್ತ ಗ್ರಂಥ.

೩.೨೭ ಸ್ಥಳನಾಮ ಅಧ್ಯಯನಗಳು – ವಿ.ಗೋಪಾಲಕೃಷ್ಣ ೧೯೮೭

ಈ ಕೃತಿಯಲ್ಲಿ ೮ ಲೇಖನಗಳಿದ್ದು ಸ್ಥಳನಾಮ ಅಧ್ಯಯನ ಸಮಸ್ಯೆಗಳು ಹಾಗೂ ನಿವಾರಣೆ ಎಂಬಲ್ಲಿ ಅಧ್ಯಯನದ ರೀತಿ, ಸ್ಥಳನಾಮ ಆಕರಗಳ ಶೇಖರಣೆ ಮುಂತಾದುವುದರ ಬಗ್ಗೆ ಚರ್ಚಿಸುತ್ತಾ ಕೋಲಾರದ ಸ್ಥಳನಾಮಗಳ ಸಮೀಕ್ಷೆಯನ್ನು ಮಾಡಿ ಸ್ಥಳನಾಮಗಳ ವರ್ಗೀಕರಣ ಮಾಡುದ್ದಾರೆ. ಪುನರ್ ನಾಮಕರಣದಲ್ಲಿ ಸಂಸ್ಕೃತದ ಪ್ರಭಾವ ಇತ್ಯಾದಿ ವಿಷಯವಿದೆ. ಕೋಲಾರ ಜಿಲ್ಲೆಯ ಸ್ಥಳನಾಮಗಳು ಕೆಲವು ಸ್ವಾರಸ್ಯ ಎಂಬಲ್ಲಿ ತೆಲುಗಿನ ಪ್ರಭಾವ, ಐತಿಹ್ಯದ ಮಾದರಿ ಮುಂತಾದ ವಿಷಯಗಳಿವೆ. ಕೋಲಾರ ಜಿಲ್ಲೆಯ ಸ್ಥಳನಾಮಗಳಲ್ಲಿ ಜಲಸೂಚಿ ಅಂಶಗಳೆಂಬುದನ್ನು ಒಳಗೊಂಡ ಉತ್ತಮ ಲೇಖನವಿದ್ದು ಕೋಲಾರ ಸ್ಥಳನಾಮಗಳಲ್ಲಿ ಜನಾಂಗೀಯ ಅಂಶಗಳನ್ನು ಸವಿವರವಾಗಿ ತೆಲುಗು-ಕನ್ನಡದ ಸಮುದಾಯದಿಂದ ಗುರುತಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಸ್ಥಳನಾಮಗಳ ಅವಲೋಕನವನ್ನು ಮಾಡಿದ್ದಾರೆ. ಇದೊಂದು ಉತ್ತಮ ಆಕರ ಗ್ರಂಥವಾಗಿದೆ.

೩.೨೮ ಕನ್ನಡ ನಾಮವಿಜ್ಞಾನ – ಡಾ. ಎಂ.ಎಂ. ಕಲ್ಬುರ್ಗಿ ೧೯೮೯

ಕನ್ನಡದ ನಾಮಾಧ್ಯಯನ ಕ್ಷೇತ್ರಕ್ಕೆ ಎಂ.ಎಂ. ಕಲ್ಬುರ್ಗಿಯವರ ಈ ಕೃತಿ ವೈಜ್ಞಾನಿಕವಾಗಿ ಮೂಡಿ ಬಂದಿದೆ. ಅಧ್ಯಯನದ ಇತಿಹಾಸವನ್ನು ಹೇಳುತ್ತಾ ಈ ಕ್ಷೇತ್ರಕ್ಕೆ ಕಾಲಿಡುವವರಿಗೆ ಶಾಸನ, ಕೈಫಿಯತ್ತು, ಸ್ಥಳಪುರಾಣಗಳು, ಭೌಗೋಳಿಕ ಪರಿಸರ, ಜಾನಪದ ಪರಂಪರೆಯ ಜ್ಞಾನ ಬಹು ಮುಖ್ಯವೆಂದು ಹೇಳಿದ್ದಾರೆ. ಸ್ಥಳನಾಮಗಳ ನಿಷ್ಪತ್ತಿಯನ್ನು ಪಾಮರ ನಿಷ್ಪತ್ತಿ, ಪಂಡಿತ ನಿಷ್ಪತ್ತಿ, ನಿಜ ನಿಷ್ಪತ್ತಿ ಎಂದು ೩ ಬಗೆಯಲ್ಲಿ ವಿಂಗಡಿಸಿಕೊಂಡಲ್ಲಿ ಪ್ರಾಮಾಣಿಕ ಅಧ್ಯಯನ ಸಾಧ್ಯವೆಂದು ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ. ಗ್ರಾಮದ ಸೃಷ್ಟಿ ರಚನೆಯು ಅಲೆಮಾರಿ ಮಾನವನಿಂದ ಇಂದಿನ ನಾಗರೀಕನವರೆಗೆ ಬೆಳೆದ ಬಗೆಯನ್ನು ಗುರುತಿಸಿ ಸೃಷ್ಟಿ ಘಟ್ಟ ಮೊದಲ ಹಂತ, ಇದನ್ನು ದಾಟಿದ ರಚನೆಯ ಘಟ್ಟಕ್ಕೆ ಗ್ರಾಮ ರೂಪ ದೊರೆತು, ಈ ರಚನೆಯ ಕಾಲಾವಧಿಯಲ್ಲಿ ನಾಮಕರಣ ಪದ್ಧತಿ ಆರಂಭವಾಯಿತು. ನಾಮದ ರಾಚನಿಕ ಸ್ವರೂಪದಲ್ಲಿ, ನಾಮದ ಅರ್ಥ ಸ್ವರೂಪ, ವಾರ್ಗಿಕಗಳ ಅರ್ಥ

ಸ್ವರೂಪ, ಅವುಗಳ ವೈಜ್ಞಾನಿಕ ವರ್ಗೀಕರಣ, ನಾಮ ವ್ಯತ್ಯಾಸ, ರೂಪಾಂತರ, ಭಾಷಾಂತರ, ನಾಮಾಂತರ, ಸಂಸ್ಕೃತೀಕರಣ ಮುಂತಾದ ವಿಷಯಗಳನ್ನು ಬಹು ಖಚಿತವಾಗಿ ನಿರೂಪಿಸಿದ್ದಾರೆ.

ನಾಮವಿಜ್ಞಾನ ಕೃತಿಯು ಸಂಶೋಧಕರಿಗೆ ಅನೇಕ ಹೊಸ ಹೊಳಹುಗಳ ಕಡೆಗೆ ಗಮನ ಹರಿಸುತ್ತದೆ. ಇಂತಹ ಎಳೆಗಳಿಂದ ಮುಂದಿನ ಅಧ್ಯಾಯಕ್ಕೆ ಹೆದ್ದಾರಿಯನ್ನು ನಿರ್ಮಿಸಲು ಪ್ರೇರೇಪಿಸುತ್ತದೆ ಜೊತೆಗೆ ವ್ಯಕ್ತಿನಾಮ ಅಧ್ಯಯನವನ್ನು ಈ ಕೃತಿ ಒಳಗೊಂಡಿದೆ. ಹೆಚ್ಚು ವರ್ಣನಾತ್ಮಕ, ವ್ಯಾಕರಣಾತ್ಮಕ ಮಾದರಿಯಿಂದ ದೂರವಿದ್ದು ಸ್ಥಳನಾಮಗಳ ಸಮಗ್ರ ಕೋಶ ಅಗತ್ಯವೆಂಬುದನ್ನು ತಿಳಿಸಿದ್ದಾರೆ. ಹಾಗೆಯೇ ಜನಾಂಗಿಕ ಸ್ಥಳನಾಮಗಳನ್ನು ಹೇಳುವಾಗ ಮುಂಡರು: ಕೋಲರು: ಅಂಧರು: ಕಾತರು ಎಂಬಂತಹ ಸಮುದಾಯಗಳು ನಾಡಿನಲ್ಲಿ ಇದ್ದರೂ ಇವರ ಹೆಸರಿಂದಲೇ ಮುಂಡರಗಿ, ಹಂದ್ರಾಳ, ಕಾತರಕಿ ಹೆಸರುಗಳು ಬಂದಿವೆಯೆಂದು ಅಭಿಪ್ರಾಯಪಡುತ್ತಾರೆ. ಏನೇ ಆದರೂ ಕನ್ನಡಕ್ಕೆ ಇದೊಂದು ಅಗತ್ಯವಾಗಿ ಮತ್ತು ಅವಶ್ಯಕವಾಗಿ ಬೇಕಾಗುವ ಕೃತಿಯಾಗಿದೆ.

೩.೨೯ ಜಾನಪದಸಿರಿ – ಡಾ. ಬಸವರಾಜ ಪೋಲೀಸ ಪಾಟೀಲ ೧೯೯೦

ಇದರಲ್ಲಿ ಸ್ಥಳೀಯ ಐತಿಹ್ಯಗಳು ಎಂಬ ಸಂಪ್ರಬಂಧವಿದೆ. ಸ್ಥಳೀಯ ಐತಿಹ್ಯಗಳು ಹೆಚ್ಚಾಗಿ ಗುಪ್ತನಿಧಿ, ಬಲಿ, ದೆವ್ವ, ದೈವ ಮುಂತಾದುವುಗಳ ಪ್ರಸ್ತಾಪಿಸುತ್ತವೆ. ಅಂತೆಯೇ ಕೆಲವು ಸ್ಥಳನಾಮ ಕುರಿತು ಹೇಳುತ್ತವೆಯೆಂದು ಚರ್ಚಿಸಿದ್ದಾರೆ.

೩.೩೦ ಬೀದರ್ ಜಿಲ್ಲೆಯ ಸ್ಥಳನಾಮಗಳು – ಭಂಡೆ ವೈಜನಾಥ ೧೯೯೦ (ಅ.ಪ್ರ)

ಇದು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ ಪಿಎಚ್.ಡಿ. ಸಂಶೋಧನಾ ನಿಬಂಧ. ೧೬ ಅಧ್ಯಾಯಗಳಲ್ಲಿ ವಿಸ್ತರಿಸಿಕೊಂಡ ಈ ನಿಬಂಧಗಳಲ್ಲಿ ೩ ಭಾಗಗಳನ್ನು ಮಾಡಿಕೊಂಡು ಸ್ಥಳನಾಮದ ವಿಜ್ಞಾನ ಇತಿಹಾಸ: ಸ್ವರೂಪ ವಿವೇಚನೆ: ಬೀದರ್ ಜಿಲ್ಲೆಯ ಪರಿಚಯ: ಸ್ಥಳನಾಮ ದಾಖಲಾತಿ ಮತ್ತು ನೊಂದಾವಣಿ: ಸ್ಥಳನಾಮಗಳ ಭಾಷಿಕ ಹಿನ್ನೆಲೆ: ಇದರಲ್ಲಿ ಪದಧ್ವನಿಮಾ ವ್ಯವಸ್ಥೆ: ಸಂಧಿ ಮತ್ತು ಆಕೃತಿ ಧ್ವನಿಮಾ ವ್ಯವಸ್ಥೆ: ಧ್ವನಿ ವ್ಯತ್ಯಯಗಳು: ಆಕೃತಿಮಾ ವ್ಯವಸ್ಥೆ ಹಾಗೂ ಆವರ್ತನೆ: ಸ್ಥಳನಾಮ ಪ್ರಕ್ರಿಯೆಗಳು ಒಳಗೊಂಡಿದ್ದು ಭಾಗ–೨ ರಲ್ಲಿ ಸ್ಥಳನಾಮಗಳ ಸಂಸ್ಕೃತಿಗಳ ಅಧ್ಯಯನ ಮತ್ತು ವರ್ಗೀಕರಣ ಜಾನಪದದಲ್ಲಿ ಸ್ಥಳನಾಮಗಳು: ಸ್ಥಳನಾಮ ಪ್ರಕಟಣೆ: ಉಪಸಂಹಾರವನ್ನು ಒಳಗೊಂಡಿದೆ.

ಈ ಕೃತಿಯು ಬೀದರ್ ಜಿಲ್ಲೆಯ ಸ್ಥಳನಾಮಗಳ ಬಗ್ಗೆ ನೇರವಾಗಿ ಪ್ರವೇಶಿಸದೆ, ಅನಗತ್ಯವಾದ ಇತಿಹಾಸ, ಭೌಗೋಳಿಕ ಪರಿಚಯ, ಭಾಷಾ ವಿಜ್ಞಾನದ ಸಿದ್ಧಾಂತಗಳ ಪರಿಚಯ, ಬೀದರಿನ ಉಪಭಾಷಿಯ ವಿಶ್ಲೇಷಣೆ ಮುಂತಾಗಿ ಸಂಬಂಧವೇ ಇಲ್ಲದೆ

ವಿಷಯಗಳನ್ನು ಪ್ರಸ್ತಾಪಿಸುತ್ತವೆ. ಇದು ಸಂಪೂರ್ಣ ವರ್ಣನಾತ್ಮಕ ಮಾದರಿಯನ್ನು ಅನುಸರಿಸಿದೆ. ಜೊತೆಗೆ ಸ್ಥಳನಾಮದ ನಿಷ್ಪತ್ತಿಯ ಕಡೆಗೆ ಗಮನ ಹರಿಸಿಲ್ಲ. ಸುಮಾರು ೫೦೦ ಪುಟಕ್ಕೆ ಮೀರಿ ವ್ಯಾಪಿಸಿದ ಈ ನಿಬಂಧ ಸ್ಥಳನಾಮ ಅಧ್ಯಯನಕ್ಕೆ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ನೆರವಾಗಬಲ್ಲ ಕೆಲವು ಅಂಶಗಳನ್ನು ನಿರ್ಲಕ್ಷಿಸುವಂತಿಲ್ಲ.

೩.೩೧ ಸ್ಥಳನಾಮ ವ್ಯಾಸಂಗ: ದೇಜಗೌ–೧೯೯೦

ಸ್ಥಳನಾಮಗಳಿಗೆ ಸಂಬಂಧಿಸಿದ ೧೦ ಲೇಖನಗಳು ಈ ಕೃತಿಯಲ್ಲಿವೆ.ಸ್ಥಳನಾಮಗಳ ಉಗಮ, ಸ್ಥಳನಾಮ ವಿಜ್ಞಾನದ ವ್ಯಾಪ್ತಿ, ಪ್ರಭಾವ, ಇತಿಹಾಸ, ಸಂಶೋಧನಾ ವಿಧಾನ, ವರ್ಗಿಕರಣ, ಸ್ಥಳನಾಮಗಳ ಜಾಯಮಾನ ಹಾಗೂ ಬದಲಾವಣೆ, ಕ್ಷೇತ್ರಕಾರ್ಯ, ಗ್ರಾಮನಾಮ ಜಾನಪದ ಹಾಗೂ ಮೈಸೂರು ನಗರದ ಬೀದಿಯ ಹೆಸರುಗಳು ಮುಂತಾದವನ್ನು ವೈಜ್ಞಾನಿಕವಾಗಿ ಸ್ಥಳನಾಮ ವಿಜ್ಞಾನಿಗಳಾದ ದೇಜಗೌ ವಿವರಿಸಿದ್ದಾರೆ. ಸ್ಥಳನಾಮ ಸಂಶೋಧಕರಿಗೆ ಈ ಕೃತಿಯು ಸಂಶೋಧನೆಯ ವಿಧಿ ವಿಧಾನಗಳನ್ನು ಹೇಳಿಕೊಡುತ್ತದೆ. ಪ್ರಶ್ನಾವಳಿಯು ಈ ಪುಸ್ತಕದಲ್ಲಿರುವುದು ವಿಶೇಷ. ಪುಸ್ತಕದ ಕೊನೆಯಲ್ಲಿ ಅನುಬಂಧವನ್ನು ನೀಡಿದ್ದು ಇಲ್ಲಿ ಕೊಡವರ ಕುಟುಂಬದ ನಾಮಗಳು, ರಾಷ್ಟ್ರಿಯ ಸ್ಥಳನಾಮ ನಿಘಂಟಿನ ಅಗತ್ಯತೆ, ಹೆಸರು ಬದಲಾವಣೆಗೊಂದು ಟಿಪ್ಪಣಿ ಎಂಬ ಲೇಖನಗಳು ನಾಮಾಧ್ಯಾಯನ ಹಾಗೂ ಆ ಶಾಸ್ತ್ರದ ತಾತ್ವಿಕ ಅಂಶಗಳಿಂದ ಚರ್ಚಿಸಿದ್ದಾರೆ. ಇದು ಸ್ಥಳನಾಮ ಸಂಶೋಧನೆಯಲ್ಲಿ ಅತ್ಯಂತ ಮಹತ್ವದ ಮಾರ್ಗದರ್ಶಿ ಕೃತಿಯಾಗಿದೆ.

೩.೩೨ ಸ್ಥಳನಾಮ ಐತಿಹ್ಯಗಳು – ಡಾ. ಎಂ. ಬೈರೇಗೌಡ ೧೯೯೧

ಈ ಲೇಖನದಲ್ಲಿ ಬೈರೇಗೌಡ ಅವರು ಆನೆಕಲ್ಲು, ಕನಕಪುರ, ರಾಮನಗರ ತಾಲ್ಲುಕುಗಳಲ್ಲಿ ಕ್ಷೇತ್ರ ಕಾರ್ಯ ಕೈಗೊಂಡು ಅಲ್ಲಿನ ಸ್ಥಳನಾಮಗಳನ್ನು ವಿಶ್ಲೇಷಿಸಿದ್ದಾರೆ. ಬೂದೊಟ್ಟಿ ಮೌನೇಶ್ವರ: ತಣಿಗೇಸೋಣೆ: ಬಟ್ಟಲಗುಂಡೇಶ್ವರ: ಕೊಂಬಿನಕಲ್ಲು: ಮುಂತಾದ ನಿರ್ವಸಿತ ಸ್ಥಳನಾಮಗಳನ್ನು ಮಾತ್ರ ಆಯ್ದ ಆ ಹೆಸರಿನ ಐತಿಹ್ಯ, ಪುರಾಣ, ನಂಬಿಕೆ, ನಿಷ್ಪತ್ತಿ ಮುಂತಾದುವುಗಳನ್ನು ಕ್ಷೇತ್ರ ಮಾಹಿತಿಯಿಂದ ವಿಷದಪಡಿಸಿದ್ದಾರೆ.

೩.೩೩ ಜನಪ್ರಿಯ ೩೦೦ ಸ್ಥಳನಾಮಗಳು – ಬೆ.ಗೊ. ರಮೇಶ ೧೯೯೪

ಈ ಕೃತಿಯಲ್ಲಿ ಬೆ.ಗೊ.ರಮೇಶ್ ಅವರು ಕರ್ನಾಟಕದ ಜಿಲ್ಲಾ ಕೇಂದ್ರಗಳು ಹಾಗೂ ಐತಿಹಾಸಿಕ, ಪ್ರಮುಖ ಪುಣ್ಯ ಕ್ಷೇತ್ರಗಳ ಸ್ಥಳನಾಮಗಳನ್ನು ವಿವರಿಸಿದ್ದಾರೆ. ಈ ಸ್ಥಳನಾಮಗಳ ಐತಿಹಾಸಿಕ ಮಹತ್ವ, ನಿಷ್ಪತ್ತಿ, ಪುರಾಣಗಳ ವ್ಯಾಖ್ಯಾನ, ಜಾನಪದ ಐತಿಹ್ಯ, ಮೌಖಿಕ ಪರಂಪರೆಯ ನಿರುಕ್ತಿ ಹೀಗೆ ವೈವಿಧ್ಯದ ವಿಷಯಗಳನ್ನು ಸಂಗ್ರಹಿಸಿ ಹೇಳಿದ್ದಾರೆ.

೩.೩೪ ಕನ್ನಡ ಸಾಹಿತ್ಯ ಸಂಬಂಧ – ಡಾ. ವಿ.ಜಿ.ಪೂಜಾರ ೧೯೯೫

ಈ ಕೃತಿಯಲ್ಲಿ ಗುಲ್ಬರ್ಗ ತಾಲ್ಲೂಕಿನ ಸ್ಥಳನಾಮಗಳು: ಭಾಷಿಕ ಸಾಂಸ್ಕೃತಿಕ ಅಧ್ಯಯನ ಎಂಬ ಒಂದು ಲೇಖನವಿದೆ. ಭೌಗೋಳಿಕ-ಭಾಷಿಕ, ಸಾಂಸ್ಕೃತಿಕ ಮಹತ್ವವನ್ನು ಸ್ಥಳನಾಮಗಳ ಮೂಲಕ ಗುರುತಿಸುತ್ತಾ ಮುಸ್ಲಿಂ ಆಡಳಿತ ಪ್ರಭಾವದಿಂದ ಗುಲ್ಬರ್ಗ ತಾಲ್ಲೂಕಿನ ಸ್ಥಳನಾಮಗಳ ಮೇಲಾದ ಉರ್ದುವಿನ ಪ್ರಭಾವವನ್ನು ಆಬಾದ್-ಗಾಂವ್-ಖೇಡ- ಎಂಬ ವಾರ್ಗಿಕಗಳು; ಫಿರೋಜ್; ಸುಲ್ತಾನ; ಅಹ್ಮದ್ ಮುಂತಾದ ವ್ಯಕ್ತ್ಯಾಂಶದ ನಿರ್ದಿಷ್ಟಗಳಿಂದ ಗುರುತಿಸುತ್ತಾರೆ. ಈ ತಾಲ್ಲೂಕಿನ ಬಯಲು ಭೂಪರಿಸರ, ಸಂಸ್ಕೃತಿ ಸ್ಥಳನಾಮಗಳ ಮೇಲೆ ಉಂಟು ಮಾಡಿದ ಪ್ರಭಾವವನ್ನು ಗುರುತಿಸಿದ್ದಾರೆ. ಹೈದ್ರಾಬಾದ್, ಕರ್ನಾಟಕ ನಾಮಾಧ್ಯಯನಕ್ಕೆ ಸಹಾಯಕ ಸಂಪ್ರಬಂಧವಿದು.

೩.೩೫ ಕೈಫಿಯತ್ತುಗಳಲ್ಲಿ ನಿರೂಪಿತವಾದ ಸ್ಥಳನಾಮಗಳ ಅಧ್ಯಯನ-ಜಗದೀಶ ಮಠದ ೧೯೯೫- ಎಂಫಿಲ್ (ಅ.ಪ್ರ)

ಕೈಫಿಯತ್ತುಗಳ ಮೂಲಕ ಸ್ಥಳನಾಮ ಅಧ್ಯಯನ ಮಾಡಿದ ಮೊದಲ ನಿಬಂಧವಿದು. ಸಾಧ್ಯವಾದಷ್ಟು ಈ ಅಧ್ಯಯನ ತಾತ್ವಿಕವಾಗಿ ಮಂಡಿಸಲ್ಪಟ್ಟಿದೆ. ಐತಿಹ್ಯ, ವಿವರಣೆ, ವ್ಯಕ್ತಿ, ಸ್ಥಳ, ಘಟನಾಪ್ರಧಾನ ಸ್ಥಳನಾಮಗಳು ಅವುಗಳ ವರ್ಗೀಕರಣ, ಪ್ರತಿ ನಾಮ, ಸಾಮಾಜಿಕತೆ ಹಾಗೂ ಸ್ಥಳನಾಮ ಕುರಿತಾದ ಕೈಫಿಯತ್ತಿನ ಪಠ್ಯಗಳನ್ನು ನಿರೂಪಿಸಲಾಗಿದೆ.

೩.೩೬ ಮಾರ್ಗ-೨ ಡಾ. ಎಂ.ಎಂ.ಕಲ್ಬುರ್ಗಿ ೧೯೯೫

ಈ ಲೇಖನ ಸಂಪುಟದಲ್ಲಿ ಚಿತ್ರದುರ್ಗದ ಪ್ರಾಚೀನ ಹೆಸರು: ಬನವಾಸಿ ಸ್ಥಳನಾಮ ವಿವೇಚನೆ: ಊರ ಹೆಸರುಗಳ ಕೊನೆಯ-ವರ,ವಾರ: ಧಾರವಾಡ ಗ್ರಾಮ ನಾಮ ವಿವೇಚನೆ: ಎಂಬ ವಿಷಯಗಳನ್ನು ಕಲ್ಬುರ್ಗಿಯವರು ಚರ್ಚೆಗೆ ಕೈಗೆತ್ತಿಕೊಂಡಿದ್ದಾರೆ. ಈ ಲೇಖನಗಳು ಬಿಡಿಯಾಗಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಪ್ರಾಚೀನ ನಿಷ್ಪತ್ತಿಯ ನಿರ್ಧಾರ ಈ ೪ ಸಂಪ್ರಬಂಧಗಳಲ್ಲಿ ಬರೆಯಲಾಗಿದೆ.

೩.೩೭ ಜಾನಪದ ಜಗತ್ತು - ಸಂ. ಪ್ರೊ. ಡಿ.ಲಿಂಗಯ್ಯ ಮತ್ತು ಡಾ. ಚಕ್ಕೆರೆ ಶಿವಶಂಕರ ೧೯೯೬ (ಸ್ಥಳನಾಮ ಅಧ್ಯಯನ ವಿಶೇಷ ಸಂಚಿಕೆ)

ಈ ಪುಸ್ತಕದಲ್ಲಿ ೧೬ ಲೇಖನಗಳಿವೆ. ವಿವಿಧ ಲೇಖಕರಿಂದ ಬರೆಯಲ್ಪಟ್ಟ ಸ್ಥಳನಾಮಕ್ಕೆ ಸಂಬಂಧಿಸಿದ ಈ ಪ್ರಬಂಧಗಳು ಹೆಚ್ಚಾಗಿ ಜಾನಪದ ಹಿನ್ನೆಲೆಯಲ್ಲಿವೆ. ಕರ್ನಾಟಕದ ವಿವಿಧ ಪ್ರದೇಶಕ್ಕೆ ವ್ಯಾಪಿಸಿಕೊಂಡ ಇಲ್ಲಿನ ಲೇಖನಗಳು ಸ್ಥಳನಾಮ ಅಧ್ಯಯನಗಳು ನಡೆದುಬಂದ ದಾರಿ, ಕನ್ನಡನಾಡಿನಲ್ಲಿ ಅದರ ಬೆಳವಣಿಗೆ, ಅಧ್ಯಯನದ ರೂಪರೇಷೆಗಳು,

ಸಮಸ್ಯೆ ನಿವಾರಣೆಗಳು; ಪ್ರಯೋಜನ-ಮಹತ್ವ; ಕನ್ನಡ ಗ್ರಾಮನಾಮಗಳ ಮೇಲೆ ತೆಲುಗು ಮರಾಠಿ ಮುಂತಾದ ಅನ್ಯ ಭಾಷೆಯ ಪ್ರಭಾವ, ಭಾಷಾ ವೈಜ್ಞಾನಿಕ ಚರ್ಚೆ, ನಮ್ಮ ನಾಡಿನ ಮೂಲ ಸೆಲೆಯಾದ ಜಾನಪದದ ನೆಲೆಯಲ್ಲಿ ಸ್ಥಳನಾಮಗಳಿಗೆ ಅಂಟಿಕೊಂಡ ಪುರಾಣ, ಐತಿಹ್ಯ, ಕಾವ್ಯ ಲಾವಣಿ ಮತ್ತವುಗಳ ಸೊಗಸು, ಶಿಷ್ಟ ಜನರಿಂದಾದ ಸಂಸ್ಕೃತೀಕರಣದ ಛಾಯೆಗಳು, ಜಾನಪದ ನಿಷ್ಪತ್ತಿಗೆ ಹಿಂದಿರುಗುವ ಗ್ರಾಮೀಣ ಜನತೆಯ ಪರಂಪರೆಯ ನಿಷ್ಠೆ, ಒಂದೊಂದು ಊರು ಕತೆಯಿಂದಲೇ ಆರಂಭವಾಗಿವ ಬಗೆ, ಒಂದು ಊರಿನ ಹೆಸರು ಹೇಗೆ ಬಂತು ಎಂಬುದಕ್ಕೆ ಜಾನಪದರು ಒಂದು ಸಂಪೂರ್ಣ ಲಾವಣಿಯನ್ನು ಕಟ್ಟಿ ಹಾಡುವ ರೀತಿ, ಹೈದ್ರಾಬಾದ್ ಕರ್ನಾಟಕದಂಥ ಗಡಿ ಪ್ರದೇಶದಲ್ಲಿ ಸ್ಥಳನಾಮಗಳ ಮೇಲಾದ ತೆಲುಗು ಮತ್ತು ಉರ್ದುವಿನ ಪ್ರಭಾವದಿಂದ ಕನ್ನಡ ಗ್ರಾಮನಾಮಗಳ ಮೇಲಾದ ವಿಶಿಷ್ಟ ಪ್ರಭಾವ, ಪ್ರೇರಣೆ, ಭಾಷಿಕ ಕ್ರಿಯೆಗಳು ಮುಂತಾದ ಬಗೆಗೆ ಇಲ್ಲಿನ ಲೇಖನಗಳು ವಿಶೇಷ ಮಾಹಿತಿಯನ್ನು ನೀಡುತ್ತವೆ. ವಿವಿಧ ಆಯಾಮಗಳಲ್ಲಿ ಬರೆಯಲ್ಪಟ್ಟ ಈ ವಿಶೇಷ ಲೇಖನಗಳು ತುಂಬಾ ಮಹತ್ವವನ್ನು ಪಡೆದಿವೆ.

೩.೩೮ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು - ಡಾ ಕೆ.ಎಂ. ವೀರಭದ್ರಶರ್ಮ ೧೯೯೬

ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳ ಅಧ್ಯಯನ ಮಾಡಿದ ಅಪ್ರಕಟಿತ ಕೃತಿ ಇದು. ನಿಬಂಧದಲ್ಲಿ ೧೦ ಅಧ್ಯಯನಗಳಿವೆ. ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಸರದ ಸ್ವರೂಪವನ್ನು ಮತ್ತು ಆ ಜಿಲ್ಲೆಯನ್ನಾಳಿದ ವಿವಿಧ ರಾಜ ವಂಶಗಳನ್ನು ಹೇಳಿದ್ದಾರೆ. ನಂತರ ಗ್ರಾಮನಾಮಗಳನ್ನು ಭೌಗೋಳಿಕ, ಸಾಂಸ್ಕೃತಿಕ, ಜನಾಂಗಿಕ ಎಂದು ವರ್ಗೀಕರಿಸಿದ್ದಾರೆ. ಸ್ಥಳನಾಮಗಳ ಹಿನ್ನೆಲೆಯಲ್ಲಿ ಬೌದ್ಧ, ಜೈನ, ವೈಷ್ಣವ, ಶೈವ ಮುಂತಾಗಿ ತರ್ಕಬದ್ಧವಾದ ವಿಚಾರಗಳನ್ನು ಮಂಡಿಸುವ ಮೂಲಕ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಹೇಳಿದ್ದಾರೆ. ಕೃತಿಯು ಸ್ಥಳನಾಮಗಳ ಶಬ್ದಕೋಶವನ್ನು ಒಳಗೊಂಡಿದೆ. ಸ್ಥಳನಾಮಗಳ ದಾಖಲಾತಿಗಳಿಗಾಗಿ ಶಾಸನ ಮತ್ತಿತರ ಹಳೆಯ ದಾಖಲೆಗಳನ್ನು ದೀರ್ಘವಾಗಿ ನೀಡಲಾಗಿದೆ. ಭಾಷಿಕ ಹಿನ್ನೆಲೆಯಲ್ಲಿ ಸ್ಥಳನಾಮವನ್ನು ನೋಡುವಾಗ ಬಳ್ಳಾರಿಯ ಉಪಭಾಷೆಯನ್ನು ಚರ್ಚಿಸಿ ತೆಲುಗಿನ ಪ್ರಭಾವವನ್ನು ಕೆಲವು ಕಡೆ ಗಮನಿಸಿದ್ದಾರೆ. ಧ್ವನಿಮ, ಅಕೃತಿಮ ಮಟ್ಟದಲ್ಲಿ ನಾಮದ ಮಹತ್ವ ಮತ್ತು ಸ್ಥಳನಾಮಗಳಿಂದ ಸಂಧಿ ಪರಿಶೀಲನೆ ಮಾಡಲಾಗಿದೆ. ಕೊನೆಯಲ್ಲಿ ಬಳ್ಳಾರಿ ಜಿಲ್ಲೆಯ ಕೆಲವು ವಿಶಿಷ್ಟ ಸ್ಥಳನಾಮ ಅವುಗಳ ಕೊಡುಗೆ ಹಾಗೂ ಮಹತ್ವಗಳನ್ನು ಕೃತಿ ಪರಿಚಯಿಸುತ್ತದೆ.

ಈ ನಿಬಂಧದಲ್ಲಿ ವಾರ್ಗಿಕಗಳನ್ನು ಹೆಚ್ಚಾಗಿ ಗಮನಿಸಿಲ್ಲ. ಭಾಷಿಕ ಅಧ್ಯಯನದಲ್ಲಿ

ಹೆಚ್ಚು ಬಳ್ಳಾರಿಯ ಉಪಭಾಷೆಯ ಬಗೆಗೆ ವಿವರಿಸುವ ಮೂಲಕ ನೇರವಾಗಿ ಗ್ರಾಮನಾಮಗಳಿಗೆ ತಳುಕು ಹಾಕುವುದಿಲ್ಲ. ಹೈದ್ರಾಬಾದ್ ಕರ್ನಾಟಕ ಸ್ಥಳನಾಮ ಅಧ್ಯಯನಕಾರರಿಗೆ ಉಪಯುಕ್ತವಾದ ನಿಬಂಧವಿದು.

೩.೩೯ ಶ್ರೀರಂಗಪಟ್ಟಣ ತಾಲೂಕಿನ ಕೆಲವು ಸ್ಥಳನಾಮಗಳು

ಪ್ರೊ. ಡಿ. ಲಿಂಗಯ್ಯ: ಮಂಡ್ಯ ಜಿಲ್ಲೆಯನ್ನು ನೈಸ್ ಶಿಲಾ ಪ್ರದೇಶವೆಂದು ಭೂಗರ್ಭ ಶಾಸ್ತ್ರಜ್ಞರು ಗುರುತಿಸಿದ್ದು, ಇಡೀ ಪ್ರದೇಶ ಶಿಲಾ ಪದರದ ಮೇಲೆ ನಿಂತಿದೆಯಂತೆ. 'ಮಂಡ್ಯ' ಹೆಸರಿನ ಬಗೆಗೆ ಹಲವು ಸ್ಥಳ ಪುರಾಣಗಳು. ಜನಪದ ಐತಿಹ್ಯಗಳು ಹುಟ್ಟಿಕೊಂಡಿವೆ. ಅವುಗಳಲ್ಲಿ ಹುರುಳಿಲ್ಲ. ಮಂಡ್ಯ ಜಿಲ್ಲೆಯ ೭ ತಾಲೂಕುಗಳಿವೆ. ಅವುಗಳಲ್ಲಿ ಶ್ರೀರಂಗಪಟ್ಟಣವೂ ಒಂದು. ಈ ಲೇಖನದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ವಿವಿಧ ಹಳ್ಳಿಗಳ ಪರಿಚಯ, ಕೊಪ್ಪಲುಗಳು ಪುರಗಳು, ಕೆರೆಗಳು, ಕುಪ್ಪೆಗಳು, ಗಾಲಗಳ ಕುರಿತು ಚರ್ಚಿಸಿದ್ದಾರೆ. ಟಿಪ್ಪುಸುಲ್ತಾನ ಕಟ್ಟಿಸಿದ ಜಮ್ಮು ಮಸೀದಿ, ದೆಡ್ಡಮಿನಾರುಗಳ ಬಗೆಗೆ ಪರಿಚಯಿಸಿದ್ದಾರೆ. ತಲ್ಲೂಕಿನಲ್ಲಿ ಬರುವ 'ಮಾರಸಿಮಗನಹಳ್ಳಿ' ಎಂತಹ ವ್ಯಕ್ತಿ ಮಾತಿನ ಸ್ಥಳನಾಮ 'ಆಲದಳ್ಳಿ' ಬನ್ನಳ್ಳಿ ಕೊಡಿಯಾಲ ಎಂತಹ ಸಸ್ಯವಾಚಿ, ಹಂಗಾಹಳ್ಳಿಯಂತಹ ಹಳೆ ಶಿಲಾಯುಗದ ಪ್ರದೇಶಗಳು 'ಬಗ್ಗಿಪುರ'ದಂತಹ ಜಾತಿವಾಚಕ, ಗೊಬ್ಬರಗಾಲದಂತಹ 'ಭುವಾಚಕ, ಹುಂಜನಕೆರೆ' ಪ್ರಾಣಿವಾಚಕಗಳ ಕುರಿತು ಚರ್ಚಿಸಿದ್ದಾರೆ. ಈ ದೇವಾಲಯದಲ್ಲಿ ಗಂಭೀರವಾದ ಅಧ್ಯಯನ ನಡೆಸಲು ಅವಕಾಶವಿದ್ದು ಈ ದಿಸೆಯಲ್ಲಿ ಇನ್ನೊಂದು ಸಾಧಾರಣ ಪ್ರಯತ್ನವೆಂದು ತಿಳಿಸಿದ್ದಾರೆ.

೩.೪೦ ಗೌರಿಬಿದನೂರಿನ ಸುತ್ತಿನ ಸ್ಥಳನಾಮಗಳು: ಡಾ. ರಂಗಾರೆಡ್ಡಿ ಕೋಡಿರಾಂಪುರ

ಒಂದು ಊರಿನ ಒಂದು ಪಟ್ಟಣದ ಇತಿಹಾಸವನ್ನು ತಿಳಿಯಲು ಶಾಸನಗಳು, ಕತೆಗಳು ಹೇಗೆ ಸಹಾಯಕ್ಕೆ ಬರುತ್ತವೋ ಹಾಗೆಯೇ ಆ ಊರಿನ ಅಥವಾ ಪಟ್ಟಣದ ಹೆಸರುಗಳು ಸಹಾಯಕ್ಕೆ ಬರುತ್ತವೆಂಬ ಅಂಶವನ್ನು ಈ ಲೇಖನದಲ್ಲಿ ಚರ್ಚಿಸಿದ್ದಾರೆ. ಸ್ಥಳನಾಮಗಳಲ್ಲಿ ನೈಸರ್ಗಿಕ ಅಂಶಗಳು ಸಾಮಾಜಿಕ ಅಂಶಗಳು, ಐತಿಹಾಸಿಕ ಅಂಶಗಳು, ಪುರಾಣ ಜನಪದ ಕತೆಗಳು ಅಡಕವಾಗಿದ್ದು, ಗೌರಿಬಿದನೂರಿನ ಕೆಲವು ಪ್ರಮುಖ ಊರುಗಳ ಕುರಿತು ಗಂಭೀರವಾದ ಚರ್ಚೆಯನ್ನು ಮಾಡುವಲ್ಲಿ ಯಶಸ್ಸು ಹೊಂದಿದ್ದಾರೆ. ಆದರೆ ಈ ಲೇಖನದಲ್ಲಿ ಕೇವಲ ಮೂರು ಅಥವಾ ನಾಲ್ಕು ಊರಿನ ಹೆಸರುಗಳ ಬಗ್ಗೆ ಮಾತ್ರ ಮಾಹಿತಿ ಲಭ್ಯವಿದೆ. ಸ್ಥಳನಾಮಗಳ ಮಹತ್ವ ಒಂದು ಊರಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಎಂಥ ಸ್ಥಾನ ಪಡೆಯುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವ ಚಿಕ್ಕ ಪ್ರಯತ್ನವಾಗಿದೆ.

೩.೪೧ ಹಾಸನ ಜಿಲ್ಲೆಯ ಸ್ಥಳನಾಮಗಳು: ಡಾ। ರಾಜೇಗೌಡ ಹೊಸಹಳ್ಳಿ

ಹಾಸನ ಜಿಲ್ಲೆಯ ಪ್ರಮುಖವಾದ ಊರುಗಳ ಸ್ಥಳನಾಮಗಳನ್ನು ಜನಪದೀಯ ಹಾಗೂ ಐತಿಹ್ಯಗಳಲ್ಲಿ ಲಭ್ಯವಿರುವ ಮಾಹಿತಿಯನ್ನು ಸಹ ಕ್ರೋಢೀಕರಿಸಿದ್ದು ಹಾಸನದ ಕುರಿತು ಯಾವುದೇ ನಿರ್ದಿಷ್ಟ ನಾಮ ನಿಷ್ಪತೀಯ ಬಗ್ಗೆ ಎಲ್ಲಾ ಸನಿಸಿಕೆಗಳು ಕೇವಲ ಕಾಲ್ಪನಿಕವಾಗಿವೆ ಎಂದು ತಿಳಿಸುತ್ತ, ಸಕಲೇಶ್ವರ, ದುದ್ದ, ರಾಮನಾಥಪುರ, ಬಾಣಾವರ ಮುಂತಾದ ಸ್ಥಳನಾಮಗಳ ಬಗ್ಗೆ ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನ ನಡೆಸಲು ಸಹಕಾರಿಯಾದ ಲೇಖನಗಳಾಗಿವೆ.

೩.೪೨ ಬೇಲೂರಿನ ಸುತ್ತಿನ ಕೆಲವು ಸ್ಥಳನಾಮಗಳು – ಡಾ॥ ವೈ.ವಿ. ಭಾನುಮತಿ

ಬೇಲೂರು ಭಾಗದ ಸ್ಥಳನಾಮಗಳಿಗೆ ಸಂಬಂಧಿಸಿದ ಕಥೆಗಳ ಅಧ್ಯಯನದಿಂದ ಇತಿಹಾಸದಲ್ಲಿ ದಾಖಲಾದ ಹೊಯ್ಸಳ ರಾಜರಿಗೆ ಸೇರಿದ ಕೆಲವೊಂದು ಅಂಶಗಳನ್ನು ತಿಳಿಯಲು ಸಾಧ್ಯವಿದೆ. ರಾಮಾನುಜಾಚಾರ್ಯರ ಕಾಲದಲ್ಲಿ ಕಂಡುಬಂದ ಸಾಮಾಜಿಕ ಸ್ಥಿತ್ಯಂತರದ ಹೊಳಹುಗಳು ಸ್ಥಳಗಳ ಮೇಲೆ ಪರೋಕ್ಷವಾಗಿ ಪ್ರಭಾವ ಬೀರುವುದನ್ನು ಗುರುತಿಸಬಹುದು. ಮರೆಯಾಗಿ ಹೋಗಿರುವ ಐತಿಹಾಸಿಕ ಸಂಗತಿಗಳನ್ನು ಜನಪದರು ಯಾವ ರೀತಿ ತುಂಬಿಕೊಡಲು ಯತ್ನಿಸಿದರೆಂಬುದನ್ನು ಗಮನಿಸಬಹುದು. ಇವೆಲ್ಲಕ್ಕೂ ಪೂರಕವಾಗಿ ಒಂದು ಕಾಲದ ಜೀವನ ಮೌಲ್ಯಗಳು ಆಲೋಚನಾ ವಿಧಾನಗಳು ಸ್ಥಳಕತೆಗಳಲ್ಲಿ ಬೆರೆತಿರುವುದನ್ನು ಗುರುತಿಸಲು ಈ ಲೇಖನ ಪೂರಕವಾಗುವಲ್ಲಿ ಸಂಶಯವಿಲ್ಲ.

೩.೪೩ ಧಾರವಾಡ: ಗ್ರಾಮನಾಮ ವಿವೇಚನೆ: ಡಾ. ಎಂ.ಎಂ. ಕಲ್ಬುರ್ಗಿ

ಧಾರವಾಡದ ಮೂಲ ರೂಪವನ್ನು ಧಾರವಾಡ ವ್ಯಕ್ತಿನಾಮದಿಂದ ಸಾಧಿಸುವುದು ಪಾಮರ ನಿಷ್ಪತ್ತಿ ತಂತುಪುರ, ಧಾರಾನಗರಿ, ಧಾರವಾಡಗಳಿಂದ ಸಾಧಿಸುವುದು ಪಂಡಿತ ನಿಷ್ಪತ್ತಿ. ಬಹುಶಃ ಧಾರವಾಡ ಇಲ್ಲವೆ ದಾಹರವಾಡವೆಂಬುದೇ ನಿಜನಿಷ್ಪತ್ತಿ. ಇದು ಈ ಊರ ಹೆಸರಿನ ಮೊದಲ ಘಟ್ಟ. ಇದರ ಮುಂದಿನ ದಾರವಾಡ, ಬ್ರಿಟೀಷರ ಆಗಮನದಲ್ಲಿ ಕಾಣಿಸಿಕೊಂಡು ಧಾರವಾರ್ ಎಂಬುದು ಜೀವ ಘಟ್ಟವೆಂದು ವಿಭಾಗಿಸುವ ಮೂಲಕ ಶಾಸನಗಳ ನೆರವು ಹಾಗೂ ಜನಪದ ನಿರುಕ್ತಿ, ಐತಿಹ್ಯಗಳ ನೆಲೆಯಲ್ಲಿ ಅಧ್ಯಯನಕ್ಕೆ ಸಹಕಾರಿಯಾಗಿರುವ ಲೇಖನವಾಗಿದೆ.

೩.೪೪ ಹೈದ್ರಾಬಾದ್ ಕರ್ನಾಟಕ ಸ್ಥಳನಾಮಗಳು: ಡಾ॥ ಸಂಗಮೇಶ ಸವದತ್ತಿ ಮಠ:

ಪ್ರಪಂಚ ಸ್ಥಳನಾಮ ಅಧ್ಯಯನಕ್ಕೆ ಸುಮಾರು ೨೨೦ ವರ್ಷಗಳ ಇತಿಹಾಸವಿದೆ.

ಕರ್ನಾಟಕದಲ್ಲಿ ಸ್ಥಳನಾಮ ಕುರಿತಾದ ಅತೀ ಪ್ರಾಚೀನ ಉಲ್ಲೇಖ ಹಲ್ಮಿಡಿ ಶಾಸನದಲ್ಲಿ ಅನಂತರ ಕದಂಬ ಮಾರ್ಗದಲ್ಲಿ ದೊರೆಯುತ್ತವೆ. ಹೈ, ಕರ್ನಾಟಕದ ವಿಶಿಷ್ಟ ಸ್ಥಳನಾಮಗಳ ಪಟ್ಟಿಯು ಮುಂದಿನ ಅಧ್ಯಯನಕ್ಕೆ ರಹದಾರಿಯಾಗುವಲ್ಲಿ ಸಹಾಯವಾಗಿದೆ.

೩.೪೫ ರಾಯಚೂರು ಜಿಲ್ಲೆಯ ಸ್ಥಳನಾಮಗಳು: ಡಾ॥ ಚನ್ನಣ್ಣ ವಾಲೀಕಾರ:

ದೋ ಅಬ್ ಪ್ರದೇಶವೆಂದು (ಕೃಷ್ಣಾ ತುಂಗಭದ್ರಾ ನದಿಗಳಿಂದ ಕೂಡಿದ) ಹೆಸರಾದ ರಾಯಚೂರು ಜಿಲ್ಲೆಯ ಇತಿಹಾಸ ಹಿಂದಿನಿಂದ ಇಂದಿನವರೆಗೆ ಹಲವು ಬಗೆಯ ವೈಶಿಷ್ಟ್ಯಗಳಿಂದ ಕೂಡಿದ್ದು ಈ ಜಿಲ್ಲೆಯಲ್ಲಿ ಬರುವ ಒಂಭತ್ತು ತಾಲ್ಲೂಕುಗಳು (ಅ ವಿಭಜಿತ ರಾಯಚೂರು ಜಿಲ್ಲೆಗೆ ಸಂಬಂಧಿಸಿದ ಕೆಲ ಹಳ್ಳಿಗಳ ಸ್ಥಳನಾಮಗಳ ಕುರಿತು ಚರ್ಚಿಸಲಾಗಿದೆ. ದೇವಸೂಗೂರು ಕಲ್ಮಟ, ಗಾಣದಾಳು, ಲಿಂಗಸೂಗೂರು, ಮನ್ಕಿ, ಮಟ್ಟಿ, ಕಲ್ಲೂರು, ಮಸರಕಲ್ಲ, ಗಬ್ಬೂರು, ಸ್ಥಳನಾಮಗಳ ವಾಲಿಕಾರ ವಿಷಯ ಪ್ರಸ್ಥಾಪಿಸಿದ್ದಾರೆ. ಒಟ್ಟಾರೆಯಾಗಿ ರಾಯಚೂರು ಜಿಲ್ಲೆಯ ಸ್ಥಳನಾಮಗಳ ಕುರಿತು ಈ ವಿಷಯದ ಮೇಲೆ ಮಹಾಪ್ರಬಂಧ ಬರೆಯುವವರಿಗೆ ಈ ಲೇಖನ ಒಂದು ಕಿಡಿ ಬೆಳಕು ತೋರ್ಬೆಳಗಾಗುವಲ್ಲಿ ಸಹಕಾರಿಯಾಗುತ್ತದೆ.

೩.೪೬ ಸ್ಥಳನಾಮಗಳನ್ನು ಕುರಿತಾಗಿ ಬಂದಿರುವ ಬಿಡಿ ಬಿಡಿ ಲೇಖನಗಳ ವಿವರ

೧. ಸ್ಥಳನಾಮಾಧ್ಯಯನ ಹೇಗೆ? ಎತ್ತ-ಡಾ॥ ಅರ್ಕೆ ಮಣಿಪಾಲ

೨. ಸ್ಥಳನಾಮ ಅಧ್ಯಯನ, ಸಮಸ್ಯೆಗಳು ಹಾಗೂ ನಿವಾರಣೆ – ಡಾ. ವಿ. ಗೋಪಾಲಕೃಷ್ಣ

೩. ಸ್ಥಳನಾಮಗಳ ಮಹತ್ವ: ಡಾ. ವಳಗರಹಳ್ಳಿ ವಿಶ್ವನಾಥ

೪. ಸ್ಥಳನಾಮಗಳಲ್ಲಿ ಜನಪದ ನಿರುಕ್ತಿಗಳು: ಡಾ. ರಘುಪತಿ ಕೆಮ್ತೂರು

೫. ಸ್ಥಳನಾಮಗಳ ಈಚಿನ ಪ್ರವೃತ್ತಿಗಳು: ಡಾ. ಎಚ್.ಎಂ. ಮಹೇಶ್ವರಯ್ಯ

೬. ಊರಿನ ಹೆಸರಿನ ಕಥೆಗಳು: ಡಾ. ವಿ.ಕೆ. ರಾಜಶೇಖರ್

೭. ನಮ್ಮ ಸುತ್ತಿನ ಕೆಲವು ಸ್ಥಳನಾಮಗಳು: ಡಾ. ಕುರುವ ಬಸವರಾಜ್

೮. ಊರಿನ ಹೆಸರಿನ ಲಾವಣಿ: ಶ್ರೀ ನಿಂಗನಗೌಡ ಬಸವನಗೌಡ ಮುಂಡರಗಿ

೯. ನಮ್ಮೂರಿನ ಮನೆತನದ ಹೆಸರುಗಳು: ಶ್ರೀ ಗುರುಮೂರ್ತಿ ಪೆಂಡಕೂರು

೧೦. ಮುದ್ದೇಬಿಹಾಳದ ಆಳಬುಕ್ಕ ಕಲ್ಲು: ಡಾ. ಅರವಿಂದ ಮಾಲಗತ್ತಿ

೧೧. ಗುಲಬರ್ಗಾ ತಾಲೂಕಿನ ಸ್ಥಳನಾಮಾಧ್ಯಯನ ಡಾ. ವ್ಹಿ.ಜಿ. ಪೂಜಾರ.

೧೨. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಐತಿಹ್ಯಗಳು: ಗಣನಾಥ ಎಕ್ಕಾರು

೧೩. ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು: ಶ್ರೀ ತಾಳ್ತಜೆ ವಸಂತಕುಮಾರ್

೧೪. ತುಳುನಾಡಿನ ಸ್ಥಳನಾಮಗಳು ನರ್ಕಳ ಮಾರಪ್ಪ ಶೆಟ್ಟಿ

೧೫. ಸ್ಥಳನಾಮಗಳ ಬಗ್ಗೆ ದಿವಂಗತ ವರ್ಕಳ ಮಾರಪ್ಪ ಶೆಟ್ಟರ ಕೊಡುಗೆ: ನಾಡೋಜ, ಎಲ್. ಎಲ್. ನಾಗೇಗೌಡ

೧೬. ಕರ್ನಾಟಕದ ನಗರವೊಂದರ ಮನೆಗಳ ನಾಮರಕಣ ವಿಧಾನ: ಡಾ. ಎಚ್.ಎಂ. ಮಹೇಶ್ವರಯ್ಯ

೧೭. ವ್ಯಕ್ತಿನಾಮಗಳು: ಡಾ. ಕೆ.ಜಿ. ಗುರುಮೂರ್ತಿ

೧೮. ಅಡ್ಡ ಹೆಸರುಗಳು: ಡಾ. ಎಂ.ಎಂ. ಕಲಬುರ್ಗಿ

೧೯. ಹಳ್ಳಿಮನೆ: (ಭೌತಿಕ ಮತ್ತು ಸಾಂಸ್ಕೃತಿಕ ಆಯಾಮಗಳ ಅಧ್ಯಯನ) ಡಾ. ಟಿ. ಗೋವಿಂದರಾಜು

೨೦. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು ಶ್ರೀ ಗುರುಮೂರ್ತಿ ಪೆಂಡಕೂರು

A Glossary of place name elements is tulu and Kannada: Ragupathi Karnataka-1989.

ತುಳುನಾಡನ್ನು ಗಮನದಲ್ಲಿಟ್ಟುಕೊಂಡು ರಚಿಸಿದ ಗ್ರಾಮನಾಮಗಳ ಗ್ಲೋಸರಿಯಿದು. ಈ ತೆರನಾದ ಕೃತಿಗಳು ಕನ್ನಡ ನಾಮಾಧ್ಯಯನ ಕ್ಷೇತ್ರಕ್ಕೆ ತೀರ ಅಗತ್ಯ. ಸುಮಾರು ಒಂದು ಸಾವಿರ ಗ್ರಾಮ ನಾಮಗಳನ್ನು ಆಧರಿಸಿ, ಅವುಗಳ ವರ್ಗೀಕರಣವನ್ನು ನಿಷ್ಪತ್ತಿಯ ಮೂಲಕ ವಿವಿಧ ಅರ್ಥ, ಪ್ರಾದೇಶಿಕ, ವೈಶಿಷ್ಟ್ಯ, ಬಳಕೆಯ ವಿಧಾನ, ಕನ್ನಡ ಪರಿಸರದ ಸ್ಥಳನಾಮಗಳಿಗೆ ಅಂತಹ ವಾರ್ಗಿಕ ಮತ್ತು ನಿರ್ದಿಷ್ಟಗಳ ಅಳವಡಿಕೆ. ಪ್ರಯೋಜನ ಹೀಗೆ ಹಲವಾರು ಉಪಾಯಗಳು ಇಲ್ಲಿ ಪ್ರಸ್ತಾಪಿಸಿದ್ದಾರೆ. ಜೊತೆಗೆ ಕೃತಿಯ ಆರಂಭದಲ್ಲಿ ಉಪಯುಕ್ತವಾದ ಗ್ರಂಥಸೂಚಿಯನ್ನು ನೀಡಿದ್ದಾರೆ. ಭಾಷಾವಿಜ್ಞಾನ, ನಾಮವಿಜ್ಞಾನ, ಇತರ ಭಾಷೆಯ ಗ್ರಂಥಗಳನ್ನು ಪಟ್ಟಿ ಮಾಡಿದ್ದಾರೆ. ಈ ಬಗೆಯ ನಿಷ್ಪತ್ತಿ ಕುರಿತಾದ ಕೃತಿಗಳು ಆಯಾ ಪ್ರಾದೇಶಿಕವಾರು ರಚನೆಯಾಗುವ ಅಗತ್ಯವಿದೆ. ಅಂತಹ ಒಂದು ಮಾರ್ಗವನ್ನು ಕೆಮ್ತೂರು ಅವರು ತೋರಿಸಿದ್ದಾರೆ.

೩.೪೭ ಸ್ಥಳನಾಮಗಳು – ಡಾ. ವಿಶ್ವನಾಥ – ೧೯೯೬

ಇವರಲ್ಲಿ ಏಳು ಸಂಪ್ರಬಂಧಗಳಿವೆ. ಸ್ಥಳನಾಮ ಸ್ವರೂಪ. ವರ್ಗೀಕರಣ, ಅಧ್ಯಯನದ ಇತಿಹಾಸ, ಪ್ರಯೋಜನೆ ನಾಮಗಳ ಐತಿಹಾಸಿಕ ಸಾಮಾಜಿಕ, ಸಾಂಸ್ಕೃತಿಕ, ಜಾನಪದೀಯ

ಅಂಶಗಳನ್ನು ವಿವರಿಸಿದ್ದಾರೆ. ಇಲ್ಲಿ ಹಿಂದೂ ಧರ್ಮದಲ್ಲಿ ಬರುವ ಸ್ಥಳನಾಮ ಎಂದು ವಿವರಿಸುವಾಗ ಶೈವರಿಗೆ ಸಂಬಂಧಿಸಿದ ಎಡುತಡಿ ಸೊನ್ನಲಿಗೆ ಎಂಬ ಊರುಗಳ ಉದಾಹರಣೆ ನೀಡುತ್ತಾರೆ. ಅಕ್ಕಮಹಾದೇವಿಯಿಂದ ಉಡುತಡಿ ಸಿದ್ಧರಾಮನಿಂದ ಸೊನ್ನಲಿಗೆ ಬಂದಿದೆಯೆ? ಒಪ್ಪಲು ಕಷ್ಟವಾಗುತ್ತದೆ. ಅದರಂತೆ ಬೌದ್ಧರಿಗೆ ಸಂಬಂಧಿಸಿದ ಬೂದಿಹಾಳು, ಬೂದಿಪಡಗ, ಸಿಖ್ಖರಿಗೆ ಸಿಕಂದರ ಬಾದ್ ಎಂಬ ಉದಾಹರಣೆಗಳು ಸಮಂಜಸವಲ್ಲ. ಈ ಎಲ್ಲ ಅಂಶಗಳು ಅವರ ಸಂಶೋಧನ ಕೃತಿ (ಸಂಕಲೇಶಪುರ ಪರಿಸರದ ಸ್ಥಳನಾಮಗಳು)ಯಲ್ಲಿ ಮುಂದುವರೆದಿದೆ. ಕೊನೆಯಲ್ಲಿ ಕೆಲವು ಜಿಲ್ಲಾ ಕೇಂದ್ರಗಳ ಸ್ಥಳನಾಮಗಳ ನಿಷ್ಪತ್ತಿಯನ್ನು ಕೊಟ್ಟಿದ್ದಾರೆ.

೩.೪೮ ಚಂದ್ರಕೊಡೆ: ಹಂಪ ನಾಗರಾಜಯ್ಯ – ೧೯೯೭

ಶಾಸನಗಳಲ್ಲಿ ಜೈನ ತೀರ್ಥಗಳು ಎಂಬ ಲೇಖನದಲ್ಲಿ 'ತೀರ್ಥ' ಎಂಬ ವರ್ಗೀಕವನ್ನು ಮುಖ್ಯ ಕ್ಷೇತ್ರಗಳಿಗೆ ಸೇರಿಸುವ ಪ್ರವೃತ್ತಿ ಹಾಗೂ ಜೈನರಲ್ಲಿ 'ತೀರ್ಥರ ಮಹತ್ವ': ಶಾಸನೋಕ್ತಿ ಮೂವತ್ತು ಮೂರು ತೀರ್ಥಗಳು ಮತ್ತು ಅವುಗಳ ವಿವರಣೆ ತುಂಬಾ ಸೊಗಸಾಗಿ ತಿಳಿಸಿದ್ದಾರೆ. ಈ ಪುಸ್ತಕದಲ್ಲಿ 'ಸ್ಥಳನಾಮಗಳಿಗೆ ಊರ ಹೆಸರುಗಳು ಜೈನ ಪಳಯುಳಿಕೆ ಎಂಬ ಲೇಖನದಲ್ಲಿ ಕರ್ನಾಟಕದಲ್ಲಿ ಜೈನರಿಗೆ ಸಂಬಂಧಿಸಿದ ಶಾಸನೋಕ್ತಿ ಸ್ಥಳನಾಮಗಳನ್ನು ಹೇಳಿದ್ದಾರೆ. ಶ್ರವಣನಹಳ್ಳಿ ಮಲಕ್ಕೊಡೆಹಳ್ಳಿ, ಬನ್ತಿಹಳ್ಳಿ, ಜಿನಹಳ್ಳಿ, ಸವಣದತ್ತಿ (ಸವದತ್ತಿ) ಮುಂತಾದ ಉದಾ. ನೀಡಿದ್ದಾರೆ. ಇದು ಬದಲಾಗಿರುವ ಸ್ಥಳನಾಮಗಳ ಮೂಲ ನಿವೃತ್ತಿಯನ್ನು ಹಂ.ಪ.ನಾರವರು ತಿಳಿಸಿದ್ದಾರೆ. 'ಶಾಸನಗಳಲ್ಲಿ ಬಸದಿಗಳು' ಎಂಬ ಲೇಖನದಲ್ಲಿ ಜೈನರ ಬಸದಿಗಳು, ಆಚಾರ್ಯರು, ಕುಲಗುರುಗಳು, ತೀರ್ಥಂಕರ ವ್ಯಕ್ತಿಗಳು ಸ್ತ್ರೀಯರು ಮುಂತಾದವರಿಂದ ನಾಮ ನಿರ್ದೇಶನಗೊಂಡಿರುವುದನ್ನು ಸವಿವರವಾಗಿ ಶಾಸನಗಳ ಮೂಲಕ ವಿವರಿಸಿದ್ದಾರೆ. ಈ ಮೂರು ಲೇಖನಗಳು ಜೈನರ ಸ್ಥಳನಾಮಗಳ ಅಧ್ಯಯನದಲ್ಲಿ ಬಹು ಮುಖ್ಯ ಆಕರಗಳೆಂದು ತಿಳಿಯಬಹುದು.

೩.೪೯ ನೇಗಿಹಾಳ ಪ್ರಬಂಧಗಳು: ಎಂ.ಬಿ. ನೇಗಿನಹಾಳ – ೧೯೯೯

ಈವರೆಗೆ ಕನ್ನಡದಲ್ಲಿ ನಾಮಾಧ್ಯಯನಕ್ಕೆ ಕಾಲಿಟ್ಟವರ ಬಗ್ಗೆ ವಿವರಿಸುತ್ತಾ, ಕರ್ನಾಟಕ ಸಾಂಸ್ಕೃತಿಕ ಸ್ಥಳನಾಮ, ವ್ಯಕ್ತಿನಾಮಗಳ ಮಹತ್ವವನ್ನು ಹೇಳಿದ್ದಾರೆ. ಈ ಕೃತಿಯಲ್ಲಿ 'ಸ್ಥಳವಾಚಕ' – ವರ ಮತ್ತು ವಾರ ಹಾಗೂ ಕರ್ನಾಟಕ ಸ್ಥಳನಾಮ, ವ್ಯಕ್ತಿನಾಮಗಳ ಅಧ್ಯಯನ ಎಂಬ ೭ ಸಂಪ್ರಬಂಧಗಳಿವೆ. ಪ್ರಾಕೃತ–ಸಾಂಸ್ಕೃತದಿಂದ ಕನ್ನಡ ಸ್ಥಳನಾಮಗಳ ಮೇಲೆ ಆದ ಪ್ರಭಾವವನ್ನು ತಿಳಿಸಿದ್ದಾರೆ. ಯಾವುದೇ ವಿಶೇಷ ಹೊಳಹುಗಳನ್ನು ನೀಡಿಲ್ಲ. ಆದರೂ ಶಾಸನಗಳು ಆಧರಿಸಿದ ಇಂಥಾ ಅಧ್ಯಯನ ಅಗತ್ಯ.

೩.೫೦ ಸ್ಥಳನಾಮಗಳು–ಪರಿವರ್ತನೆ ಮತ್ತು ಪ್ರಭಾವ: (ಸಂ) ಕೆ.ವಿ. ನಾರಾಯಣ:

ಈ ಪುಸ್ತಕದಲ್ಲಿ ಊರ ಹೆಸರುಗಳು ಬದಲಾಗುವ ಐಕ್ಯತೆಯನ್ನು ಗಮನಿಸುವ ಗುರಿಯನ್ನು ಹೊಂದಲಾಗಿದೆ. ಬದಲಾವಣೆಗೆ ಹಲವು ಕಾರಣಗಳಿರಬಹುದು. ಆದರೆ ಅನ್ಯಭಾಷಿಕ ಸಮುದಾಯಗಳ ಸಂಪರ್ಕದಿಂದ ಈ ಬದಲಾವಣೆಗಳು ಹೇಗೆ ನಡೆಯುತ್ತವೆಂದು ಗುರುತಿಸುವ ಸೀಮಿತ ಉದ್ದೇಶದಿಂದ ಇಲ್ಲಿನ ಪ್ರಬಂಧಗಳು ವಿಷಯಗಳನ್ನು ನಿಗದಿಪಡಿಸಿದಂತಿದೆ. ಆರು ಬಿಡಿ ಬಿಡಿ ಲೇಖನಗಳಿದ್ದು ಆರ್ಯ–ಸಂಸ್ಕೃತ, ಮರಾಠಿ, ಅನ್ಯದ್ರಾವಿಡ ಭಾಷೆಗಳು, ಉರ್ದು ಮತ್ತು ಇಂಗ್ಲೀಷ್ ಭಾಷೆಗಳ ಭಾಷಿಕರ ಸಂಪರ್ಕ ಚರಿತ್ರೆಯ ವಿವಿಧ ಹಂತಗಳಲ್ಲಿ ಬೆಳೆದಿದೆ. ಈ ಸಂಪರ್ಕಗಳ ಪರಿಣಾಮವನ್ನು ಸ್ಥಳನಾಮಾಂತರಗಳಿಗೆ ಪ್ರಯತ್ನಿಸಿವೆ. ಇವರಲ್ಲಿ ಎಂ.ಬಿ. ನೇಗಿನಹಾಳರವರ ಮರಾಠಿ ಪ್ರಭಾವ, ವಿ. ಗೋಪಾಲಕೃಷ್ಣರವರ ಆರ್ಯ ಸಂಸ್ಕೃತ ಪ್ರಭಾವಗಳು, ಕೆ.ಎಂ. ವೀರಭದ್ರ ಶರ್ಮರ ಇಸ್ಲಾಂ ಉರ್ದು ಪ್ರಭಾವಗಳು ಎಸ್.ಎನ್. ಅಂಗಡಿರವರ ಕನ್ನಡದ ದ್ರಾವಿಡ ಭಾಷಾ ಪ್ರಭಾವಗಳು. ಡಿ. ಪಾಂಡುರಂಗಬಾಬುರವರ ಆಂಗ್ಲ ಆಡಳಿತ / ಇಂಗ್ಲಿಶ್ ಪ್ರಭಾವಗಳು ಎಸ್.ಎಸ್. ಅಂಗಡಿಯವರ ಕರ್ನಾಟಕದ ಸ್ಥಳನಾಮ ಅಧ್ಯಯನಗಳು ಹೆಚ್ಚಿನ ಸಂಶೋಧನೆ ಮಾಡುವವರಿಗೆ ಅನುಕೂಲವಾದ ಅಂಶಗಳಿಗೆ ಒತ್ತನ್ನು ನೀಡಲಾಗಿದೆ.

೩.೫೧ ಕನ್ನಡ ಪರಚಿಂತನೆ ಮತ್ತು ಪರಂಪರೆ: ಡಾ. ಕಾ.ವೆಂ. ಶ್ರೀನಿವಾಸ ಮೂರ್ತಿ– ೨೦೦೦

ಇದು ಪಿಎಚ್.ಡಿ. ನಿಬಂಧ. ಎರಡನೆಯ ಅಧ್ಯಯನದ ಕವಿರಾಜಮಾರ್ಗ ಮತ್ತು ನಾಡು ನುಡಿ ಬೊಗಸೆಯಲ್ಲಿ ಸಾಂಸ್ಕೃತಿಕ ನೆಲೆಗಳನ್ನು ಹುಡುಕಲು ಸ್ಥಳನಾಮಗಳ ಮಹತ್ವವನ್ನು ಹೇಳಿದ್ದಾರೆ. ಪ್ರಾಚೀನ ಸಂಸ್ಕೃತಿಯ ಪಳೆಯುಳಿಕೆಗಾಗಿ ಹಾಗೂ ಕನ್ನಡದ ಭೌಗೋಳಿಕ ವಿಸ್ತಾರದ ಅರಿವಿಗೆ ಇವುಗಳ ಅಗತ್ಯವನ್ನು ಕಾ.ವೆಂ. ಶ್ರೀ ಹೇಳಿದ್ದಾರೆ.

೩.೫೨ ಶತಮಾನದ ಲಲಿತ ಪ್ರಬಂಧ – ಸು. ಗುರುಲಿಂಗ ಕಾಪಸೆ – ೨೦೦೧

ಇದು ಲಲಿತ ಪ್ರಬಂಧ ಸಂಪುಟವಾದರೂ ಸ್ಥಳಗಳ ಹೆಸರುಗಳು ಎಂಬ ಒಂದು ಲೇಖನದಲ್ಲಿ ಎಂ. ರಾಮರಾವ್ ಅವರು ಒಂದು ಹಳ್ಳಿಯ, ನಗರದ ಚರಿತ್ರೆಯನ್ನು ತಿಳಿಯಲು ನಮಗಿರುವ ಸುಲಭವಾದ ಸಾಧನಗಳಲ್ಲಿ ಊರಿನ ಹೆಸರೂ ಒಂದು. ಇತಿಹಾಸ ಭಾಷಾಶಾಸ್ತ್ರದ ದೃಷ್ಠಿಯಿಂದಲೂ ಮಹತ್ವದಾಗಿದೆ. ಭೌಗೋಳಿಕ, ಜಾನಪದದ ಹಿನ್ನೆಲೆಯಲ್ಲಿಯೂ ನಮ್ಮ ರಸವತ್ತಾದ ಭಾಷೆಯ ಮೂಲಕ ಕಥೆಯ ಮೂಲಕ (ಮಾದರಿಯಲ್ಲಿ) ಇಲ್ಲಿ ಹೇಳಿದ್ದಾರೆ.

೩.೫೩ ಕರ್ನಾಟಕ ಶಾಸನೋಕ್ತ ಸ್ಥಳನಾಮಗಳು: ಭಾಷಾಭಿವೃದ್ಧಿ ವಿಭಾಗ – ಹಂಪಿ – ಕನ್ನಡ ವಿ.ವಿ. (ಅ.ಪ್ರ)

ಕರ್ನಾಟಕದ ಎಲ್ಲ ಜಿಲ್ಲೆಗಳ ಶಾಸನಗಳನ್ನು ಪರಿಶೀಲಿಸಿ ಅದರಲ್ಲಿ ಉಕ್ತವಾದ ಸ್ಥಳನಾಮಗಳನ್ನು ಅಕಾರಾದಿಯಾಗಿ ನೀಡುವ ಮಹತ್ತರವಾದ ಮೊದಲನಯದು ಇವರಿಗೆ ಕನ್ನಡದಲ್ಲಿ ಇಂಥದೊಂದು ಕೃತಿ ಇರಲಿಲ್ಲ. ಅಂತಹ ಕೊರತೆಯನ್ನು ನೀಗಿಸಿ, ಗ್ರಾಮನಾಮಾಧ್ಯಯನಕಾರರಿಗೆ ಇತಿಹಾಸ, ಪುರಾತತ್ವಜ್ಞರಿಗೆ ಅತ್ಯುಪಯುಕ್ತ ಗ್ರಂಥವಾಗುವಲ್ಲಿ ಸಂದೇಹವಿಲ್ಲ.

೩.೫೪ ಮಾರ್ಗ: ಡಾ. ಎಂ.ಎಂ. ಕಲಬುರ್ಗಿ

ಕೆ, ಗೆ, ಕಿ, ಗಿ ಎಂಬ ಒಂದು ಲೇಖನವಿದೆ. ಊರು ಹೆಸರಿನ ಕೊನೆಯ ಗ್ರಾಮ ಎಂಬುದು ಗಾ, ಗೆ, ಗಿ ಆಗಿದೆ. 'ಕೆಯ್' ಮತ್ತು 'ಇಕ್ಕೆ' ಎಂಬಿವೂ ಕೆ ಕಿ ಗೇ ಗಿ ಆಗಿವೆಯೆಂದು ಹೇಳಬಹುದು. ಗ್ರಾಮ ಎಂಬುದು ಸಾಂಸ್ಕೃತಿಕ ಪದ. ಕೆಯ್, ಇಕ್ಕೆ ಎಂಬುವು ಸಾಂಸ್ಕೃತಿಕ ಪದ. ಕೆಯ್ ಮತ್ತು ಇಕ್ಕೆ ಎಂಬುವು ದ್ರಾವಿಡ ಪದಗಳು. ಸಾಂಸ್ಕೃತಿಕ ಮೂಲದ ಊರುಗಳು ಇತ್ತೀಚಿನವು. ದ್ರಾವಿಡ ಮೂಲದ ಊರುಗಳು ಹಳೆಯವು ಎಂಬ ಅಭಿಪ್ರಾಯವನ್ನು ಈ ಲೇಖನದಲ್ಲಿ ಮಾಡಿದ್ದಾರೆ. ಇಲ್ಲಿ ಈವರೆಗೆ ಪತ್ರಿಕೆಗಳಲ್ಲಿ ಬಂದಿರುವ ಬಿಡಿ ಬಿಡಿಯಾದ ಲೇಖನಗಳನ್ನು ನೀಡಲಾಗಿದೆ. ಆದರೆ ಅವಲೋಕನಕ್ಕೆ ಒಳಪಡಿಸಿದಂತೆಲ್ಲ ಮುಖ್ಯವಾಗಿ ಇವೆಲ್ಲ ೭೦ ದಶಕದಿಂದ ಬರೆಯಲ್ಪಟ್ಟವುಗಳಾಗಿವೆ. ಸ್ಥಳನಾಮ ಶಾಸ್ತ್ರ ಕನ್ನಡ ನಾಡಿನಲ್ಲಿ ಆರಂಭವಾದ ಸಮಯದಲ್ಲಿ ಬಹುತೇಕ ಲೇಖನಗಳು ಆ ಶಾಸ್ತ್ರದ ಪರಿಚಯವಾಗುವ ನಿಟ್ಟಿನಲ್ಲಿ ಅದರ ಸಿದ್ಧಾಂತದ ರೂಪು-ರೇಶೆಗಳನ್ನು ಅಧ್ಯಯನ ವಿಧಿ ವಿಧಾನಗಳ ರೀತಿಯಲ್ಲಿ ಬರೆಯಲಾಯಿತು. ಹಾಗೆ ೮೦ರ ದಶಕದಲ್ಲಿ ಸ್ಥಳನಾಮಾಧ್ಯಯನದ ಸಾಧ್ಯತೆ ಸಾಧನೆಗಳ ವಿಶ್ಲೇಷಣೆಯ ಜೊತೆಗೆ ಆಯಾ ಪ್ರದೇಶಿಕ ಗ್ರಾಮನಾಮಗಳ ಅಧ್ಯಯನ ಆರಂಭವಾಯಿತು. ಈ ಹಿನ್ನೆಲೆಯಲ್ಲಿ ಜಾನಪದ, ಭಾಷಾಶಾಸ್ತ್ರ ಚರಿತ್ರೆ ಮುಂದಾದ ಆಂಶಗಳಿಂದ ಸ್ಥಳನಾಮಗಳನ್ನು ನೋಡಲಾಯಿತು. ಮೈಸೂರಿನಲ್ಲಿ ಆರಂಬವಾದ ಸ್ಥಳನಾಮ ಅಧ್ಯಯನ ಸಂಸ್ಥೆಯಿಂದ ಅಧಿಕೃತವಾಗಿ ನಾಮಾಧ್ಯಯನ ಕ್ಷೇತ್ರ ಅನೇಕ ಕಮ್ಮಟಗಳ ಮೂಲಕ ಹಾಗೂ ಕ್ರಿಯಾಶೀಲ ಅಧ್ಯಯನದ ಮೂಲಕ ಸ್ಥಳನಾಮಗಳಿಗೆ ಸಂಬಂಧಿಸಿದ ಕರ್ನಾಟಕ ಮಾತ್ರವಲ್ಲದೆ ಭಾರತದ್ಯಂತ ಅನೇಕ ಲೇಖನಗಳನ್ನು ಬರೆಯಿಸಿ ಪ್ರಕಟಿಸಿತು. ಈ ಎಲ್ಲ ಲೇಖನಗಳು ಆಯಾ ಭೌಗೋಳಿಕ, ಸಾಂಸ್ಕೃತಿಕ, ಜಾನಪದೀಯ ಹಾಗೂ ಭಾಷಾಶಾಸ್ತ್ರದ ನೆಲೆಯಲ್ಲಿ ವಿವಿಧ ದೃಷ್ಟಿಕೋನಗಳಿಂದ ಬರೆಯಲ್ಪಟ್ಟಿವೆ. ವಿವರ ಹೀಗಿವೆ.

೩.೫೫ ಸ್ಥಳನಾಮ ಕ್ಷೇತ್ರದಲ್ಲಿ ಹೊರಬರುತ್ತಿರುವ ಪತ್ರಿಕೆ, ಲೇಖನ ಹಾಗೂ ಪುಸ್ತಕಗಳ ಮಾಹಿತಿ

೩.೫೬ ಸಾಧನೆ: (ಪತ್ರಿಕೆ: ಬೆಂಗಳೂರು, ವಿ.ವಿ.)

೧. ಉಡುಪಿ ತಾಲೂಕಿನ ಸ್ಥಳನಾಮಗಳು: ಕೆಲವು ಪರಿಶೀಲನೆಗಳು. ಕೆಮ್ತೂರು ರಘುಪತಿ ಭಟ್ಟ Vol..14, ನಂ. ೩. ಜೂನ್-ಸೆಪ್ಟೆಂಬರ್-೧೯೮೫.

೨. ಊರ ಹೆಸರುಗಳ ಕೊನೆಯ ವರ, ವಾರ – ಎಂ.ಎಂ. ಕಲಬುರ್ಗಿ Vol. 9, No. 1, Jan-March 1980

೩. ಎರಡು ಹೆಸರುಗಳು: ಚಿತ್ರದುರ್ಗ ಮತ್ತು ಮುಕ್ತಾಯಕ್ಕ – ಎಂ. ಚಿದಾನಂದಮೂರ್ತಿ, Vol. 14, No. 2, April-June 1985.

೪. ಕರ್ನಾಟಕ ನಾಮಶಾಸ್ತ್ರ ಒಂದು ಸ್ಥೂಲ ಪರಿಚಯ, ರಘುಪತಿ ಕೆಮ್ತೂರು ಭಟ್ಟ; ಅನು: ರೇಣುಕಾ ಅರ್ಕೆ Vol. II, No. 3, July-Sept. 1982.

೫. ಕೆಲವು ವಸ್ತ್ರನಾಮ ವಿಶೇಷಗಳು: ಹಂಪನಾ Vol-1; No. 1, Jan-March 1972.

೬. ಚಿತ್ರದುರ್ಗದ ಪ್ರಾಚೀನ ಹೆಸರಿನ ಪ್ರಥಮ ಅಕ್ಷರ 'ಜ' ಅಲ್ಲ 'ಚ' – ಬಿ. ರಾಜಶೇಖರಪ್ಪ vol.-13, No. 4: Oct-Dec 1984.

೭. ತುಳುನಾಡಿನ 'ಕಾರ್' ಊರುಗಳ ಒಂದು ಸ್ಥಳನಾಮಾಧ್ಯಯನ – ಕೆಮ್ತೂರು ರಘುಪತಿಭಟ್ಟ

೮. –ಪುರ > ವರ – ವಾರ ಎಂಬುದೇ ಸರಿ – ಎಂ. ಚಿದಾನಂದಮೂರ್ತಿ

೧೦. ಬನವಾಸಿ – ಸ್ಥಳನಾಮ ವಿವೇಚನೆ – ಎಂ. ಚಿದಾನಂದಮೂರ್ತಿ

೧೧. ಬೆಂಗಳೂರು ಜಿಲ್ಲೆಯ ಹಲವು ಸ್ಥಳನಾಮಾಂತ್ಯಗಳ ವೈಶಿಷ್ಟ್ಯ – ಕೆ. ಆರ್. ಮೋಹನ್

೧೨. ವರ–ವಾರ ಎಂದು ಕೊನೆಯಾಗುವ ಊರ ಹೆಸರುಗಳು – ಎಂ. ಚಿದಾನಂದಮೂರ್ತಿ

೧೩. ಶ್ರವಣಬೆಳಗೊಳಕ್ಕೆ ಮೂಲ ಹಳೆಯ ಬೆಳ್ಗೊಳ – ಎಂ. ಚಿದಾನಂದಮೂರ್ತಿ

೧೪. ಸ್ಥಳನಾಮಗಳಲ್ಲಿ ಧ್ವನಿ ಬದಲಾವಣೆ – ಆರ್.ಎಂ. ಕರ್ಜಗಿ

೧೫. ಸ್ಥಳನಾಮ ರೂಪುರೇಷೆ – ಕೆಮ್ತೂರು ರಘುಪತಿಭಟ್ಟ

೧೬. ಸ್ಥಳನಾಮಾಧ್ಯಯನ ಸಮಸ್ಯೆ ಹಾಗೂ ನಿವಾರಣೆ – ವಿ. ಗೋಪಾಲಕೃಷ್ಣ

೧೭. ಹಿಂದಿನ ನೆಲವತ್ತಿಯೇ ಈಗಿನ ನ್ಯಾಮತಿ – ಎಚ್. ದೇವೀರಪ್ಪ

೩.೫೭ ಕರ್ನಾಟಕ ಭಾರತಿ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ)

೧. ಒರೆಗಲ್ಲು–ಕೇಸಿ–ಕೇರಿ–ಎಂ.ಎಂ. ಕಲಬುರ್ಗಿ
ಸಂ–೧೧, ಸಂ–೨–೧೯೭೭

೨. ಕರ್ನಾಟಕ ಗ್ರಾಮವೊಂದರ ಹಾಗೂ ಅದರ ಸುತ್ತಮುತ್ತಲಿನ ಸ್ಥಳನಾಮಗಳು–ಎಚ್.ಎಂ. ಮಹೇಶ್ವರಯ್ಯ
ಸಂ–೭, ಸಂ–೧–೧೯೮೬

೩. ಕರ್ನಾಟಕದ ಅಗ್ರಹಾರಗಳು – ಎಸ್.ಎಲ್. ಶಾಂತಕುಮಾರಿ
ಸಂ–೪, ಸಂ.೨–೧೯೭೧

೪. ತಮ್ಮ ಕೊನೆಯಲ್ಲಿರುವ ಹೆಸರುಗಳು–ಎಂ.ಚಿದಾನಂದಮೂರ್ತಿ
ಸಂ–೨, ಸಂ–೨–೧೯೭೧

೫. ಮನೆತನದ ಅಡ್ಡ ಹೆಸರುಗಳು – ಸಂಗಮೇಶ ಸವದತ್ತಿಮಠ
ಸಂ–೫, ಸಂ–೪, ಮೇ–೧೯೭೩

೬. ಮಲೆಯಾಳಿ ಸ್ಥಳನಾಮಗಳಲ್ಲಿ ತುಳುಭಾಷೆಯ ಪ್ರಭಾವ – ಎಂ. ರಾಮ
ಸಂ–೨೨, ಸಂ–೩, ಜೂನ್–೧೯೯೦

೭. ಮನೆಗಳ ಹೆಸರುಗಳು – ಎಂ. ರಾಮರಾವ್
ಸಂ.–೪೩, ಸಂ–೩–೧೯೬೧

೮. ಸ್ಥಳನಾಮಗಳಲ್ಲಿ ದೇಶ್ಶೀಕರಣದ ಪ್ರಕ್ರಿಯೆ–ಆರ್ಕೆ ಮಣಿಪಾಲ
ಸಂ–೨೧, ಸಂ–೩, ೪–೧೯೬೩

೯. ಸ್ಥಳನಾಮ ಸ್ವರೂಪ: ಒಂದು ಸ್ಥೂಲ ವಿವೇಚನೆ–ಕೆಮ್ತೂರು ರಘುಪತಿಭಟ್ಟ
ಸಂ–೧೦, ೨೦–೨, ೧೯೭೭

೩.೫೮ ಜೀವನ

೧. ಊರಹೆಸರುಗಳು – ಮಾಸ್ತಿ – ೧೯೫೦

೩.೫೯ ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ

೧. ಕರ್ನಾಟಕದ ೧೦ನೇ ಶತಮಾನದ ಕೆಲವು ಸ್ಥಳನಾಮಗಳು–ಡಾ. ದೇವರಕೊಂಡಾರೆಡ್ಡಿ–೧೯೭೮

೨. ತೌಳವ ಪ್ರಾದೇಶಿಕ ನಾಮಗಳು–ಕೆ. ವೆಂಕಟರಾಮಾಚಾರ್ಯ–೧೯೬೬

೩. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ವಿಶೇಷ ಸ್ಥಳಗಳು–ಪಿ. ಶಿವರಾಮಯ್ಯ–೧೯೨೭, ಸಂ–೧೨:ಸಂ–೨–೧೯೨೭

೩.೬೦ ರುಜುವಾತು

೧. ಸ್ಥಳನಾಮಾಧ್ಯಯನ–ಸಾಧ್ಯತೆ ಮತ್ತು ಸಾಧನೆ – ಆರ್ಕೆ ಮಣಿಪಾಲ, ಸಂ–೧೯, ಜುಲೈ–ಸೆಪ್ಟೆಂಬರ್–೧೯೮೮

೩.೬೧ ಜೀವನ

೧. ಊರ ಹೆಸರುಗಳು–ಪಿ.ಕೆ. ರಾಜಶೇಖರ–೧೯೫೦

೩.೬೨ ಸಾಕ್ಷಿ

೧. ಒಂದು ವಿಲಕ್ಷಣ ಊರಿನ ಹೆಸರಿನಲ್ಲಿ ಒಂದು ಅಪೂರ್ವ ಕನ್ನಡ ಪದ–ಎಂ. ಚಿದಾನಂದಮೂರ್ತಿ–ವಸಂತ ಸಂಚಿಕೆ–ಏಪ್ರಿಲ್–೧೯೭೩

೩.೬೩ ಶೂದ್ರ

೧. ಶಂಬಾ ಅವರ ಸಾಂಸ್ಕೃತಿಕ ಅಧ್ಯಯನ ಒಂದು ಪರಿಚಯ–ಡಾ. ರಾಜೇಂದ್ರಚೆನ್ನಿ ಜೂನ್–ಜುಲೈ–೧೯೮೬

೩.೬೪ ಕಲಾದರ್ಶನ

೧. ಕಾರ್ಕಳ ಹೆಸರು ಹೇಗೆ ಬಂದಿತು–ಕೆಮ್ತೂರು ರಘುಪತಿಭಟ್ಟ–೧೯೭೭

೩.೬೫ ಪ್ರಭಾತ

೧. ಮಂಗಳೂರು–ಈ ಹೆಸರು ಹೇಗಾಯಿತು–ನರ್ಕಳ ಮಾರಪ್ಪಶೆಟ್ಟಿ–೧೯೬೯

೩.೬೬ ಸ್ವದೇಶಾಭಿಮಾನ

೧. ಸ್ಥಳನಾಮ–ಪಂಜೆಮಂಗೇಶರಾಯ–೧೯೩೧

೩.೬೭ ಕಲಾಗಂಗಾ

೧. ಗುಲಬರ್ಗಾ ತಾಲ್ಲೂಕಿನ ಸ್ಥಳನಾಮಗಳು: ಭಾಷಿಕ, ಸಾಂಸ್ಕೃತಿಕ ಅಧ್ಯಯನ– ವ್ಹಿ.ಜಿ. ಪೂಜಾರ–ಗುಲಬರ್ಗಾ ವಿಸ್ವವಿದ್ಯಾಲಯ–ಜೂನ್–ಡಿಸೆಂಬರ್–೧೯೯೦

೩.೬೮ ಮಾನವಿಕ ಕರ್ನಾಟಕ

೧. ಕುಕ್ಕೆ ಸ್ಥಳನಾಮ ರೂಪ ನಿಷ್ಪತ್ತಿ–ಕೆಮ್ತೂರು ರಘುಪತಿಭಟ್ಟ–೧೯೭೭

೨. ಬೆ (ಮೆ)ಳ್ ಊರುಗಳು ಅಧ್ಯಯನ – ಕೆಮ್ತೂರು ರಘುಪತಿಭಟ್ಟ–೧೯೭೭

೩.೬೯ ಸತ್ಯಶುದ್ಧನಾಯಕ

೧. ಗ್ರಾಮ: ಅಗ್ರಹಾರ: ಮಂಗಲ ಇತ್ಯಾದಿ – ಎಂ.ಎನ್. ಪ್ರಭಾಕರ

೨. ಪ್ರಾಚೀನ ಹಂಪೆ ಒಂದು ಪರಿಚಯ – ಎಸ್.ಎಂ. ನಾಗಭೂಷಣ ಸಂ–೩: ಸಂ–೩,೪–ಮಾರ್ಚ್–ಆಗಸ್ಟ್–೧೯೯೩

೩. ಬೆಂಗಳೂರಿನ ಅಗ್ರಹಾರಗಳು: ಒಂದು ಸ್ಥೂಲ ಅಧ್ಯಯನ–ಆಲ್ಲ ಚಿರಂಜೀವಿ ಸಂ–೫:ಸಂ–೧: ಸೆಪ್ಟೆಂಬರ್–ನವೆಂಬರ್–೧೯೯೪

3.70 Studies in Indian Place names, Volume 1 - 1980

1. A note on the etymolgy of the generic morpheme - Vara' found in place names - M. Chidanandamurthy
2. A few interesting place names of Tulunadu - R. K. Manipal
3. Renaming the places : A study of petterns - V. Gopalakrishna
4. Regional features in naming places in Karnataka - B.B. Rajpurohit
5. Studies in ancient geography in Karnataka - G.S. Gai
6. Some street names of Mysore City - D. Javaregouda
7. Some observations on India Place names - K.V. Ramesh

Volume 2 - 1981

1. Distribution of suffix - Uru in Karnataka - B.B. Rajpurohit
2. Epigraphical and the study of Indian place and personal names K.V. Ramesh
3. Names of village donated to brehmanas - M. Chidanandamurthy
4. Numerical territorial divisions in Karnataka - Madhav N. katty
5. Place names and Folklore : A brief note - Javaharalal Handoo
6. Studies in ancient geography of Karnataka - II - G.S. Gai
7. Some stray throughts on nick names - D. javaregowda

Volume 3 - 1982

1. A note on name change - D. Javaregowda
2. Balligave : A toponym - H.R. Raghunath Bhat
3. Identification of the name of a Kadamba King - P.N. Narasimhamurthy
4. Names of some dynasties and rules of Karnataka - Madhava N. Katty
5. Origin of certain place names of Karnataka - K. Abhishankar
6. On some place and temple names - K.V. Ramesh
7. Some interesting place names in Karnataka - K.M. Bhadri
8. Some important place names in Karnataka - Venkatesha
9. Some place names of Bijapur and Gulburga area - Jayant Kulli
10. Tirumaladevi pattana, present Hospet near Hampi - C.T.M. Kotrariah

11. The Telugu suffix 'Manchi' in place names - D.C. Reddy
12. Vijayanagara influence on tamilnadu place names - P. Shanmugam

Volume 4 - 1984

1. A Distributuion of 'Halli' and 'Pura' suffix in Karnataka - B.B. Rajpurohit
2. Methodology of place names study - D. javaregowda
3. 'Sivalli'-A place name - P. Ramabhat
4. Studies in ancient geography of Karnataka - III - G.S. Gai
5. Some interesting surnames from North Karnataka, K.M. Bhadri
6. The origin of the place names Mantralaya - Venkatesha

Volume 5 - 1984

1. A Study of some place names in Karnataka - B.N. Chandraiah
2. Note on naming of Chaluvindala Village - C.T.M. Kotraiah
3. Phonology of place names - S. Jayaprakash
4. Some place names in Hassan District - Racha Patel
5. Studies in ancient geography of Karnataka - IV - G.S. Gai
6. The term Muliga - Madhava N. Katty

Volume 6 - 1984

1. A Katavapregini - A Sociological study - M.B. Rajamani
2. Some interesting names and terms in the memorial Epigraphs from Kallaputtige - P.N. Narasimhamurthy

Volume 7 - 1986

1. A Sociological Study of agrahara place names - R. Indira
2. A Case for the national dictionary of place names - D. Javaregowda
3. Identification of place names mentioned in the Avruna inscriptions - H.R. Raghunathabhat

Volume 8 - 1986

1. Buddhist place names of Andhra - A.V.D. Sharma
2. Place names in Folklore - D. Javaregowda
3. Place names and Chronology in Andhra Pradesh - P.V. Parabrahma Shastry
4. Study of a few personal and place names in Andhra - G.A. Padmanabha Shastri
5. Study of place and personal names of North Kanara - M.d. Sampath

Volume 9 - 1987

1. Computer analysis for the study of place names - S.K. Havanur
2. Hampi - Vijayanagara - names through history - C.T.M. Kotraiah
3. The suffix - Angadi - P.N. Narasimhamurthy
4. The local rulars and the place names - A.V. Narasimhamurthy

Volume 10 - 1989

1. Place names in inscriptions of Kalachuris - T.S. Ravishankar
2. Place names in Tulu folk literature - Susheela P. Upadhya
3. Some tulu place names in Sumadhva Vijaya - P. Ramabhat
4. Village names with names of castes and tribes in Ananthapuram district - M. Govindaswamy Naidu

Volume 11 - 1989

1. Chalukya an onamastic study - Vijayanatha Bhande
2. Chikkamangalur - study of place name - P.N. Narasimhamurthy
3. Identification of two place names mentioned in banavasi Kadamba inscriptions - H.R. Raghunath Bhat
4. Place names as part of cast names - a.V. Narasimhamurthy
5. 'Raravi' an interesting place name - N.N. Swamy
6. The title 'Rajan' and its extended forms - K.V. Ramesh

Volume 12 - 1981

1. Nanjanagudu, i.e. Garalapuri - D.M. nagaraju
2. Need for a national methodology for the study of Indian place names - K.V. Ramesh
3. Place names and personal names ij Ramayana - Vishwanath Kaire
4. Study of some place names of Karnataka - P.N. Narasimhamurthy
5. Some deity based place names in Athani taluk - Ananth Kulkarni

Volume 13 - 1992

1. Administrative nomenclature - A Study - C.s. Vasudevan
2. Note on the place name Barakuru - C.T.M. Kotraiah
3. Place name prefixes 'Hosa' and 'Hale' in Karnataka - A.V. Narasimhamurthy
4. Place name with 'puram' suffix in the Vijayanagara period - . Shanmugham

5. Royal seats of the Satavahanas - H.s. Thosar
6. Some more deity based village from Athani taluk - Ananth Kulkarni
7. Yelandur - A Place name - D.M. Nagaraju

Volume 21 - 2001

1. Advanidurga and Rayadurga simas - D.M. Nagaraju
2. Parada and Pete place names - A.V. Narasimhamurthy

ಕನ್ನಡ ಸ್ಥಳನಾಮ ಅಧ್ಯಯನಗಳ ವಿಷಯಾವಲೋಕನ' ಅಧ್ಯಾಯದಲ್ಲಿ ಅವಲೋಕಿಸಿದ ಒಟ್ಟು ಕೃತಿಗಳನ್ನಿಟ್ಟುಕೊಂಡು ಅಧ್ಯಾಯದ ಆರಂಭದಲ್ಲಿ ಒಂದು ನಕ್ಷೆಯನ್ನು ನೀಡಲಾಗಿದೆ. ಪ್ರಸ್ತುತ ನಿಬಂಧದಲ್ಲಿ ಈ ಎಲ್ಲ ಅಂಶಗಳನ್ನು ಒಳಗೊಳ್ಳುವಂತೆ ಮಾಡಲಾಗಿದೆ. ಅಲ್ಲದೆ ಈವರೆಗಿನ ಅಧ್ಯಯನಗಳಲ್ಲಿ ಸಂಕ್ಷೇಪವಾಗಿ ಅಥವಾ ಕೆಲವು ಎಳೆಗಳನ್ನು ಮಾತ್ರ ಹೇಳಲಾದ ವಿಷಯಗಳನ್ನು ಇಲ್ಲಿ ಸಮಗ್ರವಾಗಿ ನೋಡಲಾಗಿದೆ. ಮೌಖಿಕ ಪರಂಪರೆಯ ಮೂಲಕ ಸ್ಥಳನಾಮಗಳನ್ನು ಐತಿಹ್ಯ, ಪುರಾಣಗಳಿಂದ ಮಾತ್ರ ನೋಡಲಾಗಿತ್ತು. ಆದರೆ ಈ ಪ್ರಬಂಧದಲ್ಲಿ ಗಾದೆ, ಒಗಟು, ಒಡಪು, ಹಾಡು, ರಂಗಭೂಮಿ, ಕಥೆ ಮುಂತಾದ ಪ್ರಕಾರಗಳಿಂದ ಸ್ಥಳನಾಮಗಳ ಅಧ್ಯಯನದ ಸಾಧ್ಯತೆಗಳನ್ನು ತೋರಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಚಾರಿತ್ರಿಕ ಅಧ್ಯಯನಕ್ಕೆ ಕೇವಲ ಶಾಸನೋಕ್ತ ಸ್ಥಳನಾಮಗಳನ್ನು ಪ್ರಸ್ತಾಪಿಸಲಾಗುತ್ತಿತ್ತು. ಇಲ್ಲಿ ಚರಿತ್ರೆ ಮತ್ತು ಸ್ಥಳನಾಮಗಳನ್ನು ಒಂದು ಸಂಸ್ಕೃತಿಯ ರೂಪಿಕೆಗಳನ್ನಾಗಿ ಸ್ವೀಕರಿಸಿ, ಆ ಮೂಲಕ ಶಾಸನೋಕ್ತ ಸ್ಥಳನಾಮಗಳಲ್ಲಿ ಕಾಲಾಂತರದಲ್ಲಾದ ಭಾಷಿಕ ಅವಸ್ಥಾಂತರಗಳನ್ನು ಭಾಷೆಯ ಚಾರಿತ್ರಿಕ ಬೆಳವಣಿಗೆಯೆಂದು ಗುರುತಿಸಿಕೊಂಡು ಬರೆಯಲಾಗಿದೆ. ಅಲ್ಲದೇ ಈವರೆಗೆ ಗಮನಹರಿಸದೇ ಇದ್ದ ಮಾಸ್ತಿ, ವೀರಗಲ್ಲುಗಳ ಮೂಲಕ ಸಂಸ್ಕೃತಿಯ ಅಧ್ಯಯನದಲ್ಲಿ ಸ್ಥಳನಾಮಗಳ ಮಹತ್ವವನ್ನು ಚರ್ಚಿಸಲಾಗಿದೆ. ಸಾಮಾಜಿಕ ಅಂಶಗಳನ್ನು ಜನಾಂಗಗಳ ಮೂಲಕ ಗುರುತಿಸಿ ಸಂಕ್ಷೇಪಿಸಲಾದ ಹಿಂದಿನ ಅಧ್ಯಯನಗಳ ಜಾಡನ್ನೇ ಹಿಡಿದು ಪ್ರಸ್ತುತ ಸ್ಥಳನಾಮಗಳ ಸಾಮಾಜಿಕ ಅಧ್ಯಯನದಲ್ಲಿ ಇದರ ವ್ಯಾಪ್ತಿಯನ್ನು ವೃತ್ತಿಪರ ಹಾಗೂ ವಿಸ್ತೃತವಾಗಿ ಆಯಾ ಜಾತಿಗಳ ಹೆಸರಿನ ಸ್ಥಳಗಳು, ಅವುಗಳ ಸಾಮಾಜಿಕ ರಚನೆ, ಬದ್ಧತೆಗಳು ಮನೆಗಳ ಮಾದರಿ, ವಾರ್ಗಿಕಗಳ ಮೂಲಕ ಜನಾಂಗಿಕ ಸ್ಥಳಗಳನ್ನು ಗುರುತಿಸುವ ಬಗೆ, ಸಂಸ್ಕೃತೀಕರಣ, ಪ್ರತಿನಾಮಕರಣಗಳು ಆಧುನಿಕವಾಗಿ ಕಂಡುಕೊಂಡ ಮಾರ್ಗಗಳು ಹಾಗೂ ಜನತೆ ಸ್ವೀಕರಿಸಿದ ಬಗೆಯನ್ನು ಚರ್ಚಿಸುವುದರೊಂದಿಗೆ, ಸ್ಥಳನಾಮಗಳ ಬಳಕೆಯ ವಲಯಗಳನ್ನು ಜಾತಿ ಮತ್ತು ವರ್ಗದ ನೆಲೆಯಲ್ಲಿ ಉಚ್ಚಾರಣಾ ಸಂದರ್ಭದೊಂದಿಗೆ ಚರ್ಚಿಸಲಾಗಿದೆ.

ಮುಖ್ಯವಾಗಿ ಈವರೆಗೆ ನಿಷ್ಪತ್ತಿಯೇ ಅತ್ಯಂತ ಮುಖ್ಯವೆಂದು ಹೇಳಲಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಸ್ಥಳನಾಮ ನಿಷ್ಪತ್ತಿಯ ಕೋಶವನ್ನು ನೀಡಲಾಗಿಲ್ಲ. ಸ್ಥಳನಾಮಗಳ ವಾರ್ಗಿಕಗಳ ಪಟ್ಟಿ, ವರ್ಗೀಕರಣ, ಭಾಷಿಕ ಅಧ್ಯಯನದಲ್ಲಿ ಅಲ್ಲಲ್ಲಿ ನಿಷ್ಪತ್ತಿಯ ವಿವರಗಳು ಬಂದಿವೆ. ಪುನರಾವೃತ್ತಿಯಾಗಬಾರದೆಂಬ ಕಾರಣದಿಂದ ನಿಷ್ಪತ್ತಿಯನ್ನು ಬಿಡಲಾಗಿದೆ.

ಹೀಗೆ ಹಿಂದಿನ ಸಂಶೋಧನಾಧ್ಯಯನಗಳ ಕೆಲವು ಮಾದರಿಗಳನ್ನು ಅನುಸರಿಸಿ, ಕೆಲವು ಹೊಸ ಪ್ರಯೋಗವನ್ನು ಈ ನಿಬಂಧದಲ್ಲಿ ಮಾಡಲಾಗಿದೆ. ಈ ದೃಷ್ಟಿಯಿಂದ ಇಲ್ಲಿನ ವಿಷಯಾವಲೋಕನವನ್ನು ಮಹತ್ವದ ಅಂಶವೆಂದು ತಿಳಿಯಲಾಗಿದೆ.

ಅಭ್ಯಸಿಸಿದ ಗ್ರಂಥಗಳು

೧. ಸ್ಥಳನಾಮ ಅಧ್ಯಹನಗಳು: ಗೋಪಾಲಕೃಷ್ಣ ವಿ. (ವಿದ್ಯಾಗಿರಿ ಪ್ರಕಾಶನ ಕೋಲಾರ ೧೯೮೪)

೨. ಕೋಲಾರ ಜಿಲ್ಲೆಯ ಸ್ಥಳನಾಮಗಳು: ಗೋಪಾಲಕೃಷ್ಣ ವಿ. (ಸಮಾಜೋ-ಭಾಷಿಕ ಅಧ್ಯಯನ)

೩. ಹೆಸರಲ್ಲೇನಿದೆ ೧೯೮೯: ಡಾ. ಕೆಮ್ತೂರು, ರಘುಪತಿ ಭಟ್

೪. ಸ್ಥಳನಾಮಗಳು ೧೯೯೬: ಡಾ. ವಿಶ್ವನಾಥ

೫. ಸಂಶೋಧನಾ ಲೇಖನಗಳು: ಡಾ. ಎಂ.ಬಿ. ನೇಗಿನಹಾಳ

೬. ಸ್ಥಳನಾಮ ಕುರಿತ ಲೇಖನ: ಡಾ. ಕೆ.ವಿ. ನಾರಾಯಣ

೭. ಸ್ಥಳನಾಮಗಳ ಅಧ್ಯಯನ: ಜಾನಪದ ಪರಿಷತ್ ಪ್ರಕಟಣೆ (ವಿಶೇಷ ಸಂಚಿಕೆ)

೮. ಜಾನಪದ ಜಗತ್ತು: ಜಾನಪದ ಪರಿಷತ್ ಪ್ರಕಟಣೆ

೯. ಕನ್ನಡ ಕಾವಲು ಮತ್ತು ಗಡಿ ಸಲಹಾಸಮಿತಿ ಪತ್ರ ದಿ. ೧೫.೬.೮೬

ಅಧ್ಯಾಯ - ೪

ಸ್ಥಳನಾಮಗಳ ಸ್ವರೂಪ ಮತ್ತು ವರ್ಗೀಕರಣ

ಅಧ್ಯಾಯ – ೪

೪.೧ ಸ್ಥಳನಾಮಗಳ ಸ್ವರೂಪ ವಿವೇಚನೆ

ನಾವು ಆಡುವ ಭಾಷೆ ಒಂದು ವ್ಯವಸ್ಥೆಗೆ ಒಳಪಟ್ಟಿರುತ್ತದೆ. ಇಂಥ ವ್ಯವಸ್ಥೆಯನ್ನು ನಾವು ವ್ಯಾಕರಣವೆನ್ನುತ್ತೇವೆ. ಭಾಷೆ ಮೊದಲು, ನಂತರ ವ್ಯಾಕರಣ. ಭಾಷೆಯ ಆರಂಭದಲ್ಲಿ ವ್ಯಾಕರಣ ಕಲ್ಪನೆಯೇ ಇರಲ್ಲಿಲ್ಲವೆನ್ನಬಹುದು. ವ್ಯಾಕರಣದ ವಿವಿಧ ಪ್ರಕಾರಗಳೆಲ್ಲವೂ ಕಾಲ ಕ್ರಮೇಣ ರೂಪುಗೊಂಡವುಗಳಾಗಿವೆ. ಒಂದು ವಸ್ತು, ವಿಷಯವನ್ನು ಪ್ರತ್ಯೇಕವಾಗಿ ಸೂಚಿಸುವ ಪದ ಸಂಜ್ಞಾವಾಚಕವೆನಿಸಿವೆ. ಸಂಜ್ಞಾವಾಚಕಗಳ, ಸಂಖ್ಯೆ ಸಾವಿರಾರು. ಈ ಸಂಜ್ಞಾವಾಚಕಗಳ ಅರ್ಥ ಸೀಮಿತವಾಗಿರುತ್ತದೆ. 'ಹಣ್ಣು' ಎಂಬ ಶಬ್ದದ ಅರ್ಥ ಕನ್ನಡಿಗನಿಗೆ ಮಾತ್ರ ತಿಳಿಯಬಲ್ಲದು. ಅನ್ಯರಿಗೆ ಇದು ಅರ್ಥರಹಿತವಾಗಿರುತ್ತದೆ. ಒಂದು ವಸ್ತು, ವ್ಯಕ್ತಿ, ಸ್ಥಳ ಅಥವಾ ಪ್ರಾಣಿ ಪಶು ಪಕ್ಷಿಗಳ ಹೆಸರನ್ನು ಸೂಚಿಸುವ ಪದಕ್ಕೆ 'ನಾಮಪದ' ಎನ್ನುತ್ತೇವೆ. ಅಂಕಿತನಾಮ, ರೂಢನಾಮ, ಅನ್ವರ್ಥನಾಮಗಳೆಂಬ ಪ್ರಭೇದಗಳಿವೆ. ಒಂದು ಅಂಕಿತನಾಮವನ್ನು ಪಡೆದ ವ್ಯಕ್ತಿ, ಸ್ಥಳ, ವಸ್ತುಗಳು ಹೇರಳ ಸಂಖ್ಯೆಯಲ್ಲಿದ್ದರೆ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸುವ ಅವಶ್ಯಕತೆ ತಲೆದೋರಿ ಅಂಕಿತನಾಮ ರೂಢಿನಾಮವಾಗಿಬಿಡುತ್ತದೆ. ಒಂದು ವಸ್ತುವನ್ನು ಇನ್ನೊಂದರಿಂದ ಒಂದು ಸ್ಥಳವನ್ನು ಎನ್ನೊಂದು ಸ್ಥಳದಿಂದ ಪ್ರತ್ಯೇಕಿಸಲು ಅಭಿದಾನ ಪ್ರಾಯಶ: ಬಹುಮುಖ್ಯವಾದುದು. ಸಚಿಜ್ಞಾವಾಚಕಗಳ ಬಳಕೆಯಲ್ಲಿ ಸೌಲಭ್ಯದ ಪ್ರಜ್ಞೆ ಇದೆ. ಆದರೆ ಇವು ಅಮೂರ್ತವಾಗಿದ್ದು, ಒಂದು ಸಂಜ್ಞೆಯೊಂದಿಗೆ ಇನ್ನೊಂದು ಸಂಜ್ಞೆಯನ್ನು ಸಂಯೋಜಿಸಿಕೊಂಡು ಗೊಂದಲಕ್ಕೆ ಕಾರಣವಾಗಬಹುದು. ಮೇಲಾಗಿ ಕೇವಲ ಸಂಜ್ಞೆಗಳ ಮೂಲಕ ವ್ಯವಹಾರ ಕಷ್ಟಸಾಧ್ಯ. ಆದ್ದರಿಂದ ಗೊಂದಲದ ನಿವಾರಣೆಗೆ ಸ್ಥಳ, ವ್ಯಕ್ತಿ, ವಸ್ತುಗಳಿಗೆ ಹೆಸರುಗಳನ್ನು ಅವಶ್ಯಕವಾಗಿ ನೀಡಬೇಕಾಗುತ್ತದೆ. ಹೆಸರುಗಳು ಹುಟ್ಟಿಕೊಳ್ಳಲು ಇದು ಅನಿವಾರ್ಯಕಾರಣವಾಗಿದೆ. ಕೇವಲ ಒಂದನ್ನು ಇನ್ನೊಂದದರಿಂದ ಪ್ರತ್ಯೇಕಿಸಿ ಹೇಳುವುದು ಪರಮಧ್ಯೇಯವೇನಲ್ಲ. ನಾಮಕರಣಗೊಂಡ ವ್ಯಕ್ತಿ, ವಸ್ತು, ಸ್ಥಳಗಳ ಆಬಿರುಚಿ, ಮನೋಧರ್ಮ, ಪರಿಸರ ಮೊದಲಾದ ಗುಣ ಸ್ವರೂಪಾದಿ ವೈಶಿಷ್ಟ್ಯಗಳನ್ನು ಆ ಹೆಸರುಗಳು ಧರಿಸಿರುತವೆ.ಎಂಬುದು ಪ್ರಮುಖ ಸಂಗತಿ. ವ್ಯಕ್ತಿಗಳಿಗೆ ಅಥವಾ ವಸ್ತುಗಳಿಗೆ ನಾವು ನೀಡುವ ಹೆಸರುಗಳು ಸಂಸ್ಕೃತಿ, ಅಭಿಲಾಷೆ, ಕಾಲ, ಆಶೋತ್ತರಗಳನ್ನು ವಸ್ತುವಿನ ಗುಣಮಟ್ಟ, ಸ್ವರೂಪ, ಶ್ರೇಷ್ಠತೆಗಳನ್ನು ಬಿಂಬಿಸಬಲ್ಲದು. ಒಂದು ಸಾಂಸ್ಕೃತಿಕ ಪರಂಪರೆ ಮತ್ತು ನಮ್ಮ ಧ್ಯೇಯ ಧೋರಣೆಗಳನ್ನು ತಿಳಿಸಿಕೊಡಬಲ್ಲದು. ಸ್ಥಳನಾಮಗಳೂ ಕೂಡಾ

ಹೀಗೆಯೇ ಜನ್ಮ ತಳೆದವುಗಳಾಗಿವೆ. ಸ್ಥಳನಾಮಗಳಲ್ಲಿ ಆಯಾ ಪ್ರದೇಶದ ಸಾಂಸ್ಕೃತಿಕ, ಭೌಗೋಳಿಕ ಇಲ್ಲವೇ ಇತರೆ ವೈಶಿಷ್ಟ್ಯವೆನಿಸಬಲ್ಲ ಲಕ್ಷಣಗಳು ಕೂಡಿಕೊಂಡಿರುತ್ತವೆ. ಸ್ಥಳ ನಾಮ ಅಧ್ಯಯನ ಕೈಗೊಂಡವನು ಸ್ಥಳಗಳ ಹೆಸರಿನಲ್ಲಿ ಅಡಕವಾಗಿರುವ ಆ ಪ್ರದೇಶದ ವೈಶಿಷ್ಟಗಳ ವಿವರಗಳನ್ನು ತಿಳಿಯಬೇಕಾಗಿತ್ತದೆ. ಈ ಸ್ಥಳ ವಿವರವು Topography ಸ್ಥಳನಾಮಗಳ ಹುಟ್ಟಿನ ಮೇರೆಯಲ್ಲಿನ ರಹಸ್ಯವಾಗಿದೆ. ಭಾಷಾ ವಿಜ್ಞಾನದ ಅರ್ಥಾತ್ಮಕ ಮತ್ತು ರಚನಾತ್ಮಕ ಲಕ್ಷಣಗಳಿಂದ ಇವುಗಳ ಸ್ವರೂಪವನ್ನು ಅರಿಯಬಹುದು.

೪.೨ ಸ್ಥಳನಾಮಗಳ ವ್ಯಾಕರಣಾಧಾರಿತ ವಿಂಗಡಣೆ:

ಇಂಗ್ಲೀಷಿನಲ್ಲಿ ಎಲ್ಲ ಪದಗಳನ್ನು ವ್ಯಾಕರಣಾತ್ಮಕವಾಗಿ Parts of speech ಎಂದು ಎಂಟು ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಸ್ಥಳನಾಮಗಳು ಇವುಗಳಲ್ಲಿ ನಾಮಪದ (Noun) ವೆಂಬ ಗುಂಪಿಗೆ ಸೇರುತ್ತವೆ. ನಾಮಪದಗಳಲ್ಲಿ (Common noun) (ರೂಢನಾಮ) (Proper noun) ಅಂಕಿತನಾಮ (Denominative Noun) ಅನ್ವರ್ಥನಾಮ (Abstract Noun) ಭಾವವನ್ನು ಮತ್ತು (Cpllective Noun) ಸಂಘನಾಮ ಎಂದು ಐದು ಉಪ ವಿಭಾಗಗಳಿವೆ. ಅವುಗಳಲ್ಲಿ ಸ್ಥಳನಾಮಗಳನ್ನು ಅಂಕಿತನಾಮ (Proper Noun) ಎಂಬ ವಿಭಾಗದಲ್ಲಿ ಸೇರಿಸಲಾಗುತ್ತದೆ. ಆಧುನಿಕ ಭಾಷಾ ವಿಜ್ಞಾನಿಗಳು ಯಾವ ವ್ಯಾಕರಣವು ಭಾಷೆಯ ವಿವರಣೆಗೆ ವಿಧಾಯಕವಾಗಿ ನಿಲ್ಲಲಾರವೆಂದು ಕಂಡುಕೊಂಡಿದ್ದಾರೆ. ಅದ್ದರಿಂದ ಪಾರಂಪರಿಕ ವರ್ಗೀಕರಣಕ್ಕಿಂತ ಪದಗಳನ್ನು ಅವುಗಳ ರಚನಾತ್ಮಕ ದೃಷ್ಠಿಯಿಂದ (Structural View) ವಿಭಾಗಿಸುತ್ತಾರೆ. ಪದಗಳು ಭಾಷೆಯಲ್ಲಿ ವ್ಯವಹರಿಸುವುದನ್ನು ಕುರಿತು ಅವುಗಳ ರಚನಾತ್ಮಕ ಸ್ವರೂಪವನ್ನು ಕುರಿತು ಅಧ್ಯಯನ ಮಾಡಲು ಅಕೃತಿಮಾಶಾಸ್ತ್ರ (Morphology) ಎಂಬ ಪ್ರತ್ಯೇಕವಾದ ಒಂದ ಶಾಖೆಯೇ ಇದೆ. ಸ್ಥಳನಾಮಗಳು ಭಾಷಿಕ ರೂಪ ಹೊಂದಿದವುಗಳು. ಅವುಗಳ ಅಧ್ಯಯನಕ್ಕೆ ಭಾಷಾಶಾಸ್ತ್ರೀಯ ವಿಧಾನವು ಯೋಗ್ಯವಾದುದಾಗಿದೆ.

ಭಾರತೀಯ ವ್ಯಾಕರಣಕಾರರು ಪದಗಳ ಅರ್ಥವನ್ನನುಸರಿಸಿ ಅವುಗಳನ್ನು ಒಂದೊಂದು ಗುಂಪುಗಳನ್ನಾಗಿ ಮಾಡಿಕೊಂಡಿರುವರು. ಪಾಣಿನಿಯು ತನ್ನ ೪೦೦೦ ಸೂತ್ರಗಳ ಬೃಹತ್ 'ಅಷ್ಟಾಧ್ಯಾಯೀ'ಯಲ್ಲಿ ನಾಮಗಳನ್ನು 'ಗಣಪಾಠ'ದಲ್ಲಿ ಸೇರಿಸಿರುವನು. ಚಂದ್ರಗೋಮಿಯು (ಕ್ರಿ.ಶ. ಸು. ೪೭೦) ನಾಮಗಳನ್ನು ಪಾಣಿನಿಯ ಮಾರ್ಗದಲ್ಲಿಯೇ ತನ್ನ 'ಚಂದ್ರ ವ್ಯಾಕರಣ'ದ 'ಗಣಪಾಠ'ದಲ್ಲಿ ಸೇರಿಸಿದ್ದಾನೆ.

ಸಂಸ್ಕೃತ ವೈಯಾಕರಣಿಗಳು ಪದಗಳೆಲ್ಲವನ್ನೂ ಜಾತಿ, ಧರ್ಮ, ಕ್ರಿಯೆ ಮತ್ತು ಗುಣ ಎಂದು ನಾಲ್ಕು ಬಗೆಯಾಗಿ ಕಂಡಿದ್ದಾರೆ. ಆನಂತರದ ವ್ಯಾಕರಣಗಳಲ್ಲಿ

ನಾಮಪದಗಳನ್ನು ರೂಢ, ಅನ್ವರ್ಥ ಮತ್ತು ಅಂಕಿತನಾಮಗಳೆಂಬ ಮೂರು ಪ್ರಧಾನ ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಸ್ಥಳನಾಮಗಳು ಇದರಲ್ಲಿ ಅಂಕಿತನಾಮಗಳ ವರ್ಗಕ್ಕೆ ಸೇರುತ್ತವೆ.

ಅಮರಸಿಂಹನು ಭಾರತದ ಪ್ರಾಚೀನ ಕೋಶಕಾರನಾಗಿದ್ದಾನೆ. ಅವನು ತನ್ನ 'ನಾಮ ಲಿಂಗಾನುಶಾಸನ' (ಅಮರಕೋಶ)ದಲ್ಲಿ ನಾಮಪದಗಳನ್ನು 'ಸ್ವರ್ಗಭೌಮಪಾತಾಲೀಯ'ವಾಗಿ ವಿಂಗಡಿಸಿರುವನು. ಪೌರಾಣಿಕ ಸ್ಥಳನಾಮಗಳನ್ನು ಆಯಾ ಲೋಕದಲ್ಲಿ ಸೇರಿಸಿ, ಭೂಲೋಕದಲ್ಲಿರುವ ಸ್ಥಳನಾಮಗಳನ್ನು ಭೌಮವರ್ಗದ ಪುರೋವರ್ಗದಲ್ಲಿ ಸೇರಿಸಿದ್ದಾನೆ. ಹೇಮಚಂದ್ರನು ತನ್ನ 'ದೇಶೀಯ ನಾಮಮಾಲಾ'ದಲ್ಲಿ ಸ್ಥಳನಾಮಗಳನ್ನು ದೇಶಾನುಕ್ರಮದಲ್ಲಿ ವಿಂಗಡಿಸಿಕೊಂಡಿದ್ದಾನೆ. ಕನ್ನಡ ಕೋಶಕಾರರಲ್ಲಿ ಪ್ರಮುಖವನಾಗಿರುವ ನಾಗವರ್ಮನು ತನ್ನ 'ಅಭಿದಾನ ವಸ್ತುಕೋಶ'ದಲ್ಲಿ ಸಂಸ್ಕೃತ ವ್ಯಾಕರಣಗಳ ವಿಂಗಡಣಾ ಪದ್ಧತಿಯನ್ನನುಸರಿಸಿದ್ದಾನೆ. ಕನ್ನಡದ ಪ್ರಸಿದ್ಧ ವೈಯಾಕರಣಿಯಾದ ಕೇಶಿರಾಜನು 'ಕ್ರಿಯೆಯಂ ನುಡಿಯದುದು, ವಿಭಕ್ತಿಯನಿಲ್ಲದುದರ್ಥ ಮುಳ್ಳುದಂತದು ಲಿಂಗಂ' ಕ್ರಿಯಾರ್ಥವಲ್ಲದ ಅರ್ಥಯುಕ್ತ ಘಟಕವನ್ನು ಲಿಂಗವೆಂದು ಹೇಳಿ ಆ ಲಿಂಗಗಳು 'ಕೃತ್ತದ್ಧಿತ ಸಮಾಸ ನಾಮಸ್ಥಿತಿಯಿಂ' ನಾಲ್ಕು ವಿಧಗಳು ಎಂದು ವಿಂಗಡಿಸಿದ್ದಾನೆ. ನಾಮಪದಗಳು 'ರೂಢಾನ್ವರ್ಥಾಂಕಿತಮೆಂದಾನಾಮಮರಿಗೆ ಮೂರು ಎಂಬ ಅವನ ಅಭಿಪ್ರಾಯವೂ ಗಮನಿಸುವಂಥದಾಗಿದೆ. ಕೇಶಿರಾಜನ ವಿಂಗಡಣೆಯ ರೀತ್ಯಾ ಸ್ಥಳನಾಮಗಳನ್ನು ನಾಮಸ್ಥಿತಿಗೆ ಸೇರಿಸಬಹುದಾಗಿದೆ. ಸ್ಥಳನಾಮಗಳು ಸಹಜನಾಮ (Simple Noun)ವಾಗಿರದೆ ಸಾಧಿತನಾಮ (Derived Noun)ವಾಗಿದ್ದರೆ ಕೃತ್ತದ್ಧಿತ ಸಮಾಸಗಳಲ್ಲಿ ಯಾವುದಾದರೂ ಒಂದು ಬಗೆಯ ವಿಶಿಷ್ಟ ಘಟಕದ ನಾಮವಾಗಿ ಸ್ಥಳನಿರ್ದೇಶಕ ವಾರ್ಗಿಕವನ್ನು ಪಡೆಯುತ್ತದೆ.

ದ್ರಾವಿಡ ಪರಂಪರೆಯಲ್ಲಿ ನಾಮಪದಗಳ ವಿಂಗಡಿಸಿ ಸಂಸ್ಕೃತದಲ್ಲಿ ಇರುವುದಕ್ಕಿಂತ ಭಿನ್ನವಾಗಿ ಕಂಡುಬರುತ್ತದೆ. ತಮಿಳಿನ 'ತೋಲ್ಕಾಪ್ಪಿಯಮ್'ದಲ್ಲಿ ತಮಿಳುನಾಡಿನ ಪ್ರದೇಶವನ್ನು ಕುರಿತು (Hilly Tract) ಮುಲ್ಲೈ (Silver Tract) ಮುರುದಮ್ (Arable Tract) ನೆಯ್ದಲ್ (Littoral Tract) ಎಂಬ ನಾಲ್ಕು ಬಗೆಯಾಗಿ ವಿಂಗಡಿಸಲಾಗಿದೆ. ಸ್ಥಳನಾಮಗಳು ಕ್ರಮವಾಗಿ ಈ ನಾಲ್ಕು ಭಾಗಗಳಲ್ಲಿ ಕುರುಚ್ಚಿ, ಪಾಡಿ, ಊರ್, ಪಾಕ್ಕಮ್ ಎಂಬ ವಾರ್ಗಿಕಗಳಿಂದ ಅಂತ್ಯಗೊಳ್ಳುತ್ತವೆ. ಇವುಗಳಿಗೆ ಅನೇಕ ಉದಾಹರಣೆಗಳನ್ನು ವಿದ್ವಾಂಸರು ತೋರಿಸಿದ್ದಾರೆ. ದ್ರಾವಿಡ ಭಾಷಾವರ್ಗದ ನಾಮಪದಗಳನ್ನು ವಿದ್ವಾಂಸರು ವ್ಯವಸ್ಥಿತಕ್ರಮದಲ್ಲಿ ವಿಂಗಡಿಸುವ ಪ್ರಯತ್ನ ಮಾಡಿರುವರು. ದ್ರಾವಿಡ ಸ್ಥಳನಾಮಗಳ ಸಾಮಗ್ರಿ ವಿಪುಲತೆಯಿಂದ ಕೂಡಿದ್ದು

ಇದರ ನೆರವಿನಿಂದ ಮೂಲದ್ರಾವಿಡ ಭಾಷೆಯ ಸ್ಥಳನಾಮ ವ್ಯವಸ್ಥೆಯನ್ನರಿಯಲು ಅವಕಾಶ ಉಂಟು. ಆರ್ಯ ಭಾಷೆಗಳಲ್ಲಿರುವಂತೆ ದ್ರಾವಿಡ ಭಾಷೆಯಲ್ಲಿ ಕಾಲ್ಪನಿಕ ಇಲ್ಲವೆ ಅಲಂಕಾರಿಕ ನಾಮಪ್ರಕೃತಿಗಳಿಲ್ಲ. ಅರ್ಥಪೂರ್ಣ ಹಾಗೂ ವೈಚಾರಿಕ ನಾಮವ್ಯವಸ್ಥೆ ಇದೆ.

ಸ್ಥಳನಾಮಗಳು ವಿನಾಕಾರಣವಾಗಿ ಹುಟ್ಟಿಕೊಂಡಿರುವುದಿಲ್ಲ. ಚಾರಿತ್ರಿಕ ವ್ಯಕ್ತಿ, ಚಾರಿತ್ರಿಕ ಮಹತ್ವ ಘಟನೆ ದೈವ ಇವುಗಳ ಸ್ಮರಣೆಗಾಗಿಯೇ ಇಲ್ಲವೇ ಭೌಗೋಳಿಕ ಸಾಂಸ್ಕೃತಿಕ ವೈಶಿಷ್ಟಗಳ ಅಭಿವ್ಯಕ್ತಿ ರೂಪವಾಗಿಯೇ ಹುಟ್ಟಿಕೊಂಡಿರಬಹುದು. ಸ್ಥಳನಾಮ ಸಂಶೋಧಕನು ಸ್ಥಳನಾಮಗಳ ಮೂಲವನ್ನು ಪತ್ತೆ ಮಾಡುವುದರ ಜೊತೆಗೆ ಅಲ್ಲಿನ ನಿವಾಸಿಗಳ ಮೂಲವನ್ನು ಸಾಂಸ್ಕೃತಿಕ ಬದುಕನ್ನು ಅರಿತು ನಿಸರ್ಗದೊಂದಿಗಿನ ಅವನ ಸಂಬಂಧವನ್ನು ಗುರುತಿಸಬೇಕಾಗುತ್ತದೆ. ಸ್ಥಳನಾಮ ಸ್ವರೂಪ ಮೇಲ್ನೋಟಕ್ಕೆ ಸಂಕೀರ್ಣವಾಗಿ ತೋರಬಹುದು. ಇವು ಒಂದು ರಚನಾತ್ಮಕ ಸ್ವರೂಪವನ್ನು ಪಡೆದಿವೆ. ಸ್ಥಳನಾಮಗಳಲ್ಲಿ ಕೆಲವು ಸಲ ಮೂಲ ದ್ರಾವಿಡ ಪದಗಳು ಪ್ರಾಚೀನ ಪದಗಳೂ ಗೋಚರಿಸಿ ವರ್ತಮಾನದಲ್ಲಿ ಅರ್ಥರಹಿತವಾಗಿದ್ದಿರಬಹುದಾದ ಸಾಧ್ಯತೆಗಳಿವೆ. ಈ ವೈಶಿಷ್ಟ ವಾಚಕಗಳು ಸ್ಥಳನಾಮಗಳ ಪ್ರಮುಖ ಘಟಕಗಳಾಗಿರುತ್ತವೆ. ಅದ್ದರಿಂದ ಸ್ಥಳನಾಮಗಳ ಅಚಾತುರ್ಯದಲ್ಲಿ ಮಿಳಿತಗೊಂಡಿರುವ ಘಟಕಗಳನ್ನು ಅರ್ಥಾತ್ಮ ಮತ್ತು ರಚನಾತ್ಮಕ ದೃಷ್ಟಿಯಿಂದ ವಿವರಿಸಬೇಕಾಗುತ್ತದೆ.

೪.೩ ಸ್ಥಳನಾಮ ಪದಗಳ ಘಟಕಗಳು:

ಸ್ಥಳನಾಮಗಳು ಸಾಮಾನ್ಯವಾಗಿ ಸಂಯುಕ್ತ ಪದಗಳಾಗಿರುತ್ತವೆ. (Compund Words) ಭಾಷಾಶಾಸ್ತ್ರಜ್ಞರು ನಾಮಗಳ ರಚನೆಯನ್ನಾಧಾರಿಸಿ ಪೂರ್ವ ಪದವನ್ನು (Prefix) ಎಂದೂ ಉತ್ತರ ಪದವನ್ನು (Sufix) ಎಂದೂ ಕರೆಯುತ್ತಾರೆ. ಪೂರ್ವಪದ (Prefix) ವಿಶಿಷ್ಟಾರ್ಥಕವಾಗಿದ್ದು, ಉತ್ತರ ಪದ (Sufix) ಸಾಮಾನ್ಯವಾಗಿರುತ್ತದೆ. ಅಯಾ ಸ್ಥಳಕ್ಕೆ ವಿಶಿಷ್ಟವಾದ ಪೂರ್ವ ಪದವನ್ನು ಹೆಚ್ಚು ಖಚಿತ ಅರ್ಥವನ್ನು ಕೊಡುವ (Specific) ಎಂಬ ಶಬ್ದದಿಂದ ಕರೆಯಲಾಗುತ್ತದೆ. ಉತ್ತರ ಪದವು ಅನೇಕ ಸ್ಥಳನಾಮಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತದೆ. ಇದನ್ನು (Sufix) ಎಂಬ ಸ್ಥೂಲ ಅರ್ಥಕ್ಕೆ ಪ್ರತಿಯಾಗಿ Generic ಎಂಬ ಶಬ್ದದಿಂದ ಕರೆಯಲಾಗಿರುತ್ತದೆ. ಕನ್ನಡದಲ್ಲಿ Specific ಎಂಬುದಕ್ಕೆ " ವಿಶಿಷ್ಟ" ಅಥವಾ " ನಿರ್ದಿಷ್ಟ" ಎಂಬ ಪದವು Generic ಎಂಬುದಕ್ಕೆ "ಸಾಮಾನ್ಯ" ಅಥವಾ "ವಾರ್ಗಿಕ" ಎಂಬ ಪಾರಿಭಾಷಿಕ ಪದಗಳು ಎಂದು ರೂಢಿಯಲ್ಲಿವೆ.[೧]

ಸ್ಥಳನಾಮ ಪದಗಳು ತಮ್ಮ ಬೆಳವಣಿಗೆಯ ಮೂಲದಲ್ಲಿ ಸಾಮಾನ್ಯಾರ್ಥಕವಾದ

ಹಳ್ಳಿ, ಪುರ, ಊರು – ಮುಂತಾದ ರೂಪದಲ್ಲಿದ್ದು, ಇವುಗಳ ಸಂಖ್ಯೆ ಮತ್ತು ಅವರ್ತಗಳು ಹೆಚ್ಚಾದಂತೆ ಒಂದು ಸ್ಥಳನಾಮವನ್ನು ಇನ್ನೊಂದರಿಂದ ಪ್ರತ್ಯೇಕಿಸಿ ಹೇಳುವ ಅವಶ್ಯಕತೆ ಕಂಡು ಬಂದು ಸಹಜವಾಗಿಯೇ ಈ ಪದಗಳ ಪೂರ್ವದಲ್ಲಿ ವಿಶಿಷ್ಟಾರ್ಥಕವಾದ ಇನ್ನೊಂದು ಪದವು ಸೇರಿಕೊಂಡು ಪ್ರತ್ಯೇಕ ಅಂಕಿತಗಳು ಪ್ರಾಪ್ತವಾಗಿವೆ.

ಪ್ರಸಾರ ಕ್ರಮದಲ್ಲಿ ವಿಶಿಷ್ಟ ಘಟಕಗಳು ಮುಕ್ತ ಶ್ರೇಣಿಗೆ (Open set category) ಸೇರಿದವುಗಳಾಗಿವೆ. ಅಯಾ ಪ್ರದೇಶದ ಪ್ರಾಕೃತಿಕ ಪರಿಸರ ಮತ್ತು ಸಂಸ್ಕೃತಿಯನ್ನವಲಂಬಿಸಿ ಅಲ್ಲಿಯ ಸ್ಥಳನಾಮಗಳಲ್ಲಿ ಇವು ಅನೇಕ ಸಂಖ್ಯೆಯಲ್ಲಿ ಕಂಡು ಬರುತ್ತವೆ. ಕೆಲವು ಸ್ಥಳನಾಮಗಳಲ್ಲಿ ಒಂದಕ್ಕಿಂತ ಹೆಚ್ಚು ವಿಶಿಷ್ಟ ಘಟಕಗಳಿರಬಹುದು. ಅಂಥ ಸಂದರ್ಭದಲ್ಲಿ ಅಯಾ ಸ್ಥಳನಾಮದ ಆಂತರಿಕ ರಚನೆಯಲ್ಲಿ ವಾರ್ಗಿಕ ಘಟಕಕ್ಕೆ ಅತೀ ನಿಕಟವಾಗಿರುವ (Immidiate Constituent) ಘಟಕವನ್ನು ಪ್ರಾಥಾಮಿಕ ಘಟಕ (Primery Specific) ಎಂದೂ ನಂತರದ ಘಟಕವನ್ನು ದ್ವಿತೀಯ ವಿಶಿಷ್ಟ ಘಟಕ (Secondary Specific) ಎಂದು ಕರೆಯುತ್ತಾರೆ. "K M George place names of southern India-DLA-Trivendram-1986) ಎರಡಕ್ಕಿಂತ ಹೆಚ್ಚು ವಿಶಿಷ್ಟಗಳಿದ್ದ ಸಂದರ್ಭದಲ್ಲಿ ಇದೇ ಕ್ರಮವನ್ನು ಅನ್ವಯಿಸಬಹುದು. ಒಟ್ಟಾರೆ ವಿಶಿಷ್ಟ ಘಟಕಗಳು ಎಷ್ಟೇ ಇದ್ದರೂ ಅವುಗಳ ಮುಖ್ಯ ಉದ್ದೇಶ ಕೇವಲ ವಿಶೇಷಣದ ಮೂಲಕ ಮುಂದಿನ ಘಟಕವನ್ನು ಇತರ ಸಮಾನ ಘಟಕಗಳಿಂದ ಪ್ರತ್ಯೇಕಿಸುವುದಾಗಿರುತ್ತದೆ.


ಪ್ರಸಾರ ಕ್ರಮದಲ್ಲಿ ವಾರ್ಗಿಕ ಘಟಕಗಳು ಬದ್ಧ ಶ್ರೇಣಿಗೆ (Closed Set Category) ಸೇರಿರುತ್ತವೆ. ಇವುಗಳ ಸಂಖ್ಯೆ ಯಾವುದೇ ಭಾಷೆಯಲ್ಲಿ ಪರಿಮಿತವಾಗಿರುತ್ತವೆ. ಆಯಾ ಸ್ಥಳ ನಾಮದ ತಿರುಳನ್ನು (Core) ಇವು ಸ್ಪಷ್ಟಗೊಳಿಸುತ್ತವೆ.

ಒಂದು ಗುಂಪಿಗೆ ಸೇರಿದ ಅನೇಕ ಭಾಷೆಗಳಲ್ಲಿಯೂ ವಾರ್ಗಿಕಗಳು ಸಮಾನ ಇಲ್ಲವೇ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ಬಳಕೆಯಾಗಬಹುದು. ದ್ರಾವಿಡ ಗುಂಪಿನ ತಮಿಳು, ಕನ್ನಡ, ತೆಲುಗು ಮತ್ತು ಮಲೆಯಾಳಂ ಭಾಷೆಯ ಸ್ಥಳನಾಮಗಳಲ್ಲಿ ಕಂಡುಬರುವ ೨೩೬ ವಾರ್ಗಿಕ ಘಟಕಗಳಲ್ಲಿ ೫೩ ಘಟಕಗಳು ಸಮಾನವಾಗಿರುವುದನ್ನು ಕೆ.ಎಂ. ಜಾರ್ಜ್ ತೋರಿಸಿಕೊಟ್ಟಿದ್ದಾರೆ (Comparative Study on South Indian Place Names)

ಸ್ಥಳನಾಮಗಳಲ್ಲಿ ಮೂಲ ಘಟಕ, ಪ್ರಾಥಾಮಿಕ ನಿಕಟತಮ ಘಟಕ, ದ್ವಿತೀಯ ನಿಕಟತಮ ಘಟಕಗಳು ಹೇಗೆ ಸೇರುತ್ತವೆಂಬುದನ್ನು ಬಳ್ಳಾರಿ ಜಿಲ್ಲೆಯ ಉಪ್ಪಾರಹೊಸಹಳ್ಳಿ ಎಂಬ ಸ್ಥಳನಾಮದ ಉದಾಹರಣೆಯಿಂದ ತಳಿಯುತ್ತದೆ. ಈ ಸ್ಥಳನಾಮದಲ್ಲಿಯ ಘಟಕಗಳನ್ನು


ಅದರ ಆಂತರಿಕ ರಚನೆಯಿಂದ ತಿಳಿದುಕೊಳ್ಳಲು ಸಾಧ್ಯ. ಕೆಳಗಿನ ಎರಡು ಆಕೃತಿಗಳ ಮುಖಾಂತರ ಯಾವುದು ಮೂಲಘಟಕ, ಯಾವುದು ಪ್ರಾಥಮಿಕ ಘಟಕ ಮತ್ತು ಯಾವುದು ದ್ವಿತೀಯ ಘಟಕ ಎನ್ನುವುದನ್ನು ಸ್ಪಷ್ಟವಾಗಿ ತೋರಿಸಲಾಗಿದೆ.

ಆಕೃತಿ–೧



ಹಳ್ಳಿ–ವಾರ್ಗಿಕ
ಹೊಸ–ವಿಶಿಷ್ಟ–೧
ಉಪ್ಪಾರ–ವಿಶಿಷ್ಟ–೨

ಆಕೃತಿ–೨



೦ – ಮೂಲ ಘಟಕ
೧ – ಪ್ರಾಥಾಮಿಕ ನಿಕಟ ಘಟಕ
೨ – ದ್ವಿತೀಯ ನಿಕಟ ಘಟಕ

ಇವುಗಳು ಅಧೀನಯುತ ಸಮಾಸ (ಸಂಯುಕ್ತ) ಪದಗಳಾಗಿರದೆ ಸಂಯುಕ್ತಪದ (co-oridinate compound word) ಲಕ್ಷ ಣ ಹೊಂದಿದು ಸಂಯುಕ್ತ ಪದಗಳಂತೆ ವ್ಯವಹರಿಸದೆ ಅಂಕಿತನಾಮಗಳಾಗಿಯೇ ಸಲ್ಲುತ್ತವೆ ಎಂದು ಅವುಗಳ ರಚನೆಯನ್ನು ಅಧರಿಸಿ ಹೇಳಬಹುದು.

೪.೪ ಸ್ಥಳನಾಮ ಪದಗಳ ಲಕ್ಷಣಗಳು:

ವ್ಯಾಕರಣದ ದೃಷ್ಟಿಯಿಂದ ಸ್ಥಳನಾಮ ಪದಗಳಿಗೆ ಕೆಲವು ವಿಶಿಷ್ಟ ಲಕ್ಷಣಗಳಿರುತ್ತವೆಂಬುದನ್ನು ಈ ಕೆಳಗಿನ ಲಕ್ಷಣಗಳಿಂದ ಲಕ್ಷಿಸಬಹುದು.

೧) ಸ್ಥಳನಾಮಗಳನ್ನು ಯಾವುದೇ ಭಾಷೆಯಲ್ಲಿ ಬಳಸಿದರೂ ಇತರೇ ನಾಮರೂಪದಂತೆ ಭಾಷಾಂತರಿಸಲ್ಪಡದೆ ಅವುಗಳ ಅಂಕಿತ ರೂಪವನ್ನೇ ಇಟ್ಟಿಕೊಳ್ಳಲಾಗುವುದು. ಎಲ್ಲಾ ಸ್ಥಳನಾಮಗಳು ಅಂಕಿತನಾಮಗಳಾಗಿರುವುದರಿಂದ ಅವುಗಳ ಅರ್ಥ ವಿಶೇಷತೆಯನ್ನು ಸೂಚಿಸಲು ಪ್ರತ್ಯೇಕ ಶಾಬ್ದಿಕ ಸಂಜ್ಞೆ ಇರುತ್ತವೆ. [ಇಂಗ್ಲಿಷ್ ಭಾಷೆಯಲ್ಲಿ ಅಂಕಿತನಾಮದ ಮಹತ್ವವನ್ನು ಸೂಚಿಸಲು ಸ್ಥಳನಾಮದ ಮೊದಲಕ್ಷರವನ್ನು ಕ್ಯಾಪಿಟಲ್ ಲೆಟರ್‌ನಲ್ಲಿ ಬರೆಯುವ ಪದ್ಧತಿ ಉಂಟು](೬)

೨) ಸ್ಥಳನಾಮಗಳು ಬಿಡಿ ಘಟಕಗಳ ಸಮಾವೇಶ ಪದಗಳಾಗಿರುವುದರಿಂದ ಬಹುವಚನ ಪ್ರತ್ಯಯವನ್ನು ಹೊಂದಲಾರವು. ಉದಾ: ಬೈಲೂರು – ಇಲ್ಲಿ ಬೈಲುಗಳು ಎಂದಾಗಲೀ,

ಊರುಗಳು ಎಂದಾಗಲೀ ಅಥವಾ ಬೈಲೂರುಗಳು ಎಂದಾಗಲೀ ಅಗುವುದು ಅಸಂಭವ.

೩) ಸ್ಥಳನಾಮಗಳಿಗೆ ಸಂಖ್ಯಾವಾಚಕ ವಿಶೇಷಣ ಸೇರುವುದಿಲ್ಲ. ಇತರೇ ನಾಮಪದಗಳಿಗೆ ಸೇರಬಹುದಾಗಿದೆ. ಉದಾ: ೧ ಸಂಡೂರು, ೨ ಕೂಡ್ಲಗಿ ಇತ್ಯಾದಿ ಪ್ರಯೋಗಗಳ ಸಾಂಭವ್ಯತೆ ಇಲ್ಲವೇ ಇಲ್ಲ.

೪) ಊರು, ಹಳ್ಳಿ, ಪುರ ಮುಂತಾದವು ಗುಣವಾಚಕಗಳಾಗಿವೆ. ಇವು ಗುಣನಾಮಗಳಾಗಿರುವುದರಿಂದ ಬಹುವಚನ ಪ್ರತ್ಯಯ ಹಾಗೂ ಸಂಖ್ಯಾವಾಣಿ ವಿಶೇಷಣ ಹೊಂದಬಹುದಾಗಿದೆ. ಆದರೆ ಇವುಗಳು ವಿಶಿಷ್ಟ ಘಟಕಗಳೊಂದಿಗೆ ಸೇರಿ ಅಂಕಿತಾರ್ಥ ಪಡೆಯುವುದರಿಂದಾಗಿ ನಂತರದಲ್ಲಿ ಇವುಗಳಿಗೆ ವಚನ ಪ್ರತ್ಯಯವಾಗಲೀ, ಮತ್ತು ವಿಶೇಷಣವಾಗಲೀ ಸೇರಲಾಗದು.

೫) ವಾಕ್ಯಮಟ್ಟದಲ್ಲಿ ಗೋಚರಿಸುವ ಷಷ್ಠಿ, ಸಪ್ತಮೀ ಮುಂತಾದ ವಿಭಕ್ತಿ ಪ್ರತ್ಯಯಗಳು ಕೆಲವು ಸ್ಥಳನಾಮಗಳಲ್ಲಿ ಲೋಪಹೊಂದುತ್ತವೆ. ಕೆಲವು ಸ್ಥಳನಾಮಗಳಲ್ಲಿ ಯಥಾಸ್ಥಿತಿ ಉಳಿದುಕೊಳ್ಳಬಹುದು. ಉದಾ: ೧. ವಿಭಕ್ತಿ ಲೋಪಕ್ಕೆ: ಸಾಸ್ವಹಳ್ಳಿ, ಮೈಸೂರು, ಕುಂಚೂರು ಇತ್ಯಾದಿ. ೨. ಪ್ರತ್ಯಯಾಗಮಕ್ಕೆ: ದಾಸನಹಳ್ಳಿ, ಹನುಮನಹಳ್ಳಿ, ರಾಮನಮಲೆ ಇತ್ಯಾದಿ.

೬) ಒಂದು ಭಾಷೆಯಲ್ಲಿನ ಅರ್ಥಪ್ರತೀತಿ, ಶಬ್ದ ಸಂಪತ್ತನ್ನು ಸ್ಥಳನಾಮಗಳು ನಿಯಂತ್ರಿಸುವ ರೂಪಗಳಾಗಿವೆ. ಆಯಾ ಪ್ರದೇಶದ ಸಾಂಸ್ಕೃತಿಕ ಮತ್ತು ಪ್ರಾಕೃತಿಕ ವೈಶಿಷ್ಟ್ಯಗಳು ಅಲ್ಲಿನ ಸ್ಥಳನಾಮಗಳಲ್ಲಿ ಬಳಕೆಗೊಂಡಿರುತ್ತವೆ. ಒಂದು ಬಗೆಯ ಘಟಕ ಅನೇಕ ಪ್ರದೇಶದಲ್ಲಿ ಕಂಡುಬಂದರೂ ಆಯಾ ಪ್ರದೇಶದಲ್ಲಿ ಆ ಪದಕ್ಕೆ ಭಿನ್ನವಾದ ಅರ್ಥವಿರಬಹುದಾಗಿದೆ. ಹೀಗಾಗಿ ಆಯಾ ಘಟಕಗಳ ಅರ್ಥವು ಆ ಮಟ್ಟಿಗೆ ಪರಿಮಿತಗೊಂಡಂತೆಯೇ ಆಗುತ್ತದೆ. ಈ ಕಾರಣವಾಗಿ ಸ್ಥಳನಾಮಗಳನ್ನು ಪ್ರಾದೇಶಿಕವಾಗಿ ಲಕ್ಷಿಸಿ ಅಧ್ಯಯನ ಮಾಡುವುದು ಅವಶ್ಯವಾಗಿದೆ.

೪.೫ ಸ್ಥಳನಾಮ ಘಟಕಗಳ ಆವರ್ತನೆ:

ಸ್ಥಳನಾಮದಲ್ಲಿ ವಿಶಿಷ್ಠ ಘಟಕ ಯಾವುದೆ ಮತ್ತು ವಾರ್ಗಿಕ ಘಟಕ ಯಾವುದು ಎಂದು ನಿರ್ಧರಿಸಬೇಕಾದರೆ ಅವುಗಳ ಆವರ್ತನೆಯ ಪ್ರಮಾಣವನ್ನು ಅನುಲಕ್ಷಿಸಬೇಕಾಗುತ್ತದೆ. ಅವರ್ತನಾ ಪ್ರಮಾಣವು ಸಾಮಾನ್ಯವಾಗಿ ವಿಶಿಷ್ಟ ಘಟಕಗಳಿಗೆ ತುಂಬಾ ಕಡಿಮೆಯಿರುತ್ತದೆ. ವಾರ್ಗಿಕ ಘಟಕಗಳಿಗೆ ಆವರ್ತನಾ ಪ್ರಮಾಣ ಹೆಚ್ಚಾಗಿರುತ್ತದೆ. ಆದರೆ, ವಿಶಿಷ್ಟ ಘಟಕಗಳಿಗೆ

ಈ ಆವರ್ತನಾ ಪ್ರಮಾನವು ಹೆಚ್ಚಾಗಿರಬಾರದೆಂಬ ನಿಯಮವೇನೂ ಇಲ್ಲ. ಅದ್ದರಿಂದ ವಾರ್ಗಿಕ ಬರುವ ಕಡೆಗಳಲ್ಲಿ ವಿಶಿಷ್ಟವೂ, ವಿಶಿಷ್ಟ ಬರುವ ಕಡೆಗಳಲ್ಲಿ ವಾರ್ಗಿಕವೆನಿಸಬಹುದಾದ ಘಟಕಗಳು ಆವರ್ತನೆಯನ್ನು ಪಡೆಯಬಹುದಾಗಿದೆ. ಈ ಸಂದರ್ಭಗಳಲ್ಲಿ ವಿಶಿಷ್ಟ ಘಟಕಗಳನ್ನು ವಾರ್ಗಿಕ ಎಂತಾಗಿಯೂ ಕರೆಯಬಹುದಾಗಿದೆ. ಕೆಲವೊಮ್ಮೆ ತಮ್ಮ ಸ್ಥಾನಬಲದ ವ್ಯತ್ಯಾಸದ ಕಾರಣವಾಗಿ ಇವುಗಳು ಅರ್ಥದಲ್ಲೂ ವ್ಯತ್ಯಾಸವನ್ನುಂಟುಮಾಡಬಹುದಾಗಿದೆ. ವಾರ್ಗಿಕಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿದ್ದು ಅವುಗಳ ಆವರ್ತನಾ ಪ್ರಮಾಣ ಹೆಚ್ಚಾಗಿರುತ್ತದೆ. ಆದ್ದರಿಂದ ಅವುಗಳನ್ನು ಸುಲಭದಲ್ಲಿ ಗುರುತಿಸಲು ಶಕ್ಯವಾಗುತ್ತದೆ. ಕೆಲಸ ಸ್ಥಳನಾಮಗಳಲ್ಲಿ ವಾರ್ಗಿಕ ಘಟಕವು ಇಲ್ಲದಿರಬಹುದು. ಇದೇ ಪ್ರಕಾರವಾಗಿ ಕೆಲವು ಸ್ಥಳನಾಮಗಳಲ್ಲಿ ಅಲ್ಲಿನ ವಾರ್ಗಿಕವು ಅಂಕಿತಾರ್ಥವನ್ನು ಕೊಡುವಂತಿದ್ದರೆ ಅದನ್ನೇ ವಿಶಿಷ್ಟ ಘಟಕವೆಂದು ನಿರ್ಣಯಿಸಬೇಕಾಗಿ ಬರುತ್ತದೆ. ಕೆಳಗಿನ ಉದಾಹರಣೆಗಳ ಮೂಲಕ ಇದನ್ನು ಸ್ಪಷ್ಟಪಡಿಸಬಹುದು.

೧. ವಿಶಿಷ್ಟ ಮತ್ತು ವಾರ್ಗಿಕ ಘಟಕಗಳ ನಿಯತ ಆವರ್ತನೆ:

ಉದಾ: ಲಿಂಗನಹಳ್ಳಿ, ಕಾಯಕದಹಳ್ಳಿ, ಸೋಮಲಾಪುರ, ಚಿಂತ್ರಪಲ್ಲಿ,

೨. ಅನಿಯತ ಆವರ್ತನೆ:

೧. ಆನೇಕಲ್-ಕಲ್ಲುಗುಡಿ, ಬೆಣಕಲ್ಲು - ಕಲ್ಲಹಳ್ಳಿ, ಕಂದಗಲು ಕಲ್ಲುಕಂಬ ಇತ್ಯಾದಿ.

೩. ಕೇವಲ ವಿಶಿಷ್ಟ ಘಟಕದ ಆವರ್ತನೆ:

ಉದಾ: ಬಿಂಬ, ತೆಲಗಿ, ವಡ್ಡು, ಇಟ್ಟಿಗಿ, ಹಂಪಿ ಇತ್ಯಾದಿ.

೪. ಕೇವಲ ವಾರ್ಗಿಕಗಳ ಆವರ್ತನೆ:

ಉದಾ: ಪುರ, ಕೋಟೆ ಇತ್ಯಾದಿ.

ಈ ಬಗೆಯ ಆವರ್ತನೆಗಳು ಕರ್ನಾಟಕದ ಎಲ್ಲ ಪ್ರದೇಶಗಳಲ್ಲಿಯೂ ಸಾಮಾನ್ಯವಾಗಿ ಕಂಡುಬರುತ್ತವೆ. ಆಯಾ ಜಿಲ್ಲೆಯ ಉಪಭಾಷೆ, ಸಂಪರ್ಕಭಾಷೆ, ವ್ಯಾವಹರಿಕತೆ, ಸನ್ನಿವೇಶ, ಸಂದರ್ಭಗಳಿಗನುಸರಿಸಿ ಇನ್ನೂ ಹೆಚ್ಚಿನ ಆವರ್ತನಾ ವೈವಿಧ್ಯತೆ ಕಂಡುಬರಲು ಸಾಧ್ಯವಿದೆ.

೪.೬ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳ ಭಾಷಾಸ್ವರೂಪ:

ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳ ಅಧ್ಯಯನದಿಂದ ಇಂದು ನಾವು ಕಾಣುವ ಅಲ್ಲಿಯ ಸಂಸ್ಕೃತಿ ಹಾಗೂ ಭಾಷಾಸ್ವರೂಪಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ ಮಾತ್ರವಲ್ಲದೆ ತನ್ಮೂಲಕ ಪ್ರಾಚೀನ ಕಾಲದ ಭಾಷೆಯ ಸ್ವರೂಪವನ್ನು ಸಹ ಅರಿಯಲು ಸಾಧ್ಯವಾಗುವುದು.

ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು ಮಧ್ಯ ಮತ್ತು ದಕ್ಷಿಣ ದ್ರಾವಿಡ ಗುಂಪುಗಳಿಗೆ ಮಾತ್ರ ಸಂಬಂಧಪಟ್ಟಿವೆ. ಜಿಲ್ಲೆಯ ಸ್ಥಳನಾಮಗಳಲ್ಲಿ ಕೆಲವು ದ್ರಾವಿಡ ಸ್ಥಳನಾಮ ಘಟಕಗಳು ತೆಲುಗು ಭಾಷೆಗೆ ನಿಕಟತೆ ಹೊಂದಿವೆ. ಇದಕ್ಕೆ ಮೂಲಕಾರಣ ತೆಲುಗು ನೆಲೆಯ ಸಂಪರ್ಕ ಭಾಷೆಯಾಗಿರುವುದೇ ಆಗಿದೆ. ಇಲ್ಲಿನ ಘಟಕಗಳು ಸದ್ಯದ ತೆಲುಗಿಗೆ ಹತ್ತಿರವಾಗಿರುವಂತೆ ತೋರುತ್ತದೆ. ತೆಲುಗು ಭಾಷೆಯು ಕ್ರಿ.ಪೂ. ೧೨೦೦ಕ್ಕಿಂತಲೂ ಮೊದಲು ಮೂಲದ್ರಾವಿಡದಿಂದ ಬೇರ್ಪಟ್ಟಿತೆಂದು ಭಾಷಾಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಹಟ್ಟಿಕಾರರಾದ ಕನ್ನಡಿಗರೇ ಆಂಧ್ರರೆನಿಸಿದರೆಂದು ಶಂ.ಬಾ. ಜೋಶಿಯವರು ಅಭಿಪ್ರಾಯಪಟ್ಟಿರುವರು. ಶಾತವಾಹನರು ಮೂಲತಃ ಬಳ್ಳಾರಿ ಪ್ರದೇಶದವರೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟರೆ ಇನ್ನೂ ಕೆಲವರು ಇವರ ಮೂಲ ಆಂಧ್ರನಾಡು ಎಂದೂ ಅಭಿಪ್ರಾಯ ಸೂಚಿಸಿದ್ದಾರೆ. 'ಸಾತವಾಹನಿಹಾರ' ಎಂದು ಬಳ್ಳಾರಿ ಸುತ್ತಣ ಪ್ರದೇಶಕ್ಕೆ ಕರೆಯಲಾಗುತ್ತಿತ್ತೆಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು ಬಳ್ಳಾರಿಯ ಈ ಪ್ರದೇಶದಲ್ಲಿ ಹಿಂದೆ ನಿಕಟ ಸಂಪರ್ಕ ಪಡೆದಿದ್ದವೆಂದು ಕಲ್ಪಿಸಬಹುದಾಗಿದೆ. ವಿಜಯನಗರದ ಅರಸ ಕೃಷ್ಣದೇವರಾಯನ ಆಳ್ವಿಕೆಯು ಬಳ್ಳಾರಿ ಜಿಲ್ಲೆಯಲ್ಲಾಗಿದ್ದರೂ ಅವನನ್ನು ಕರ್ನಾಟಕಾಂಧ್ರ ಸಾರ್ವಭೌಮನೆಂದು ಕೊಂಡಾಡಲಾಗಿದೆ. ಇವನ ಕಾಲದಲ್ಲೂ ಸಹ ಈ ಭಾಗದಲ್ಲಿ ತೆಲುಗು ಭಾಷೆ ಹೆಚ್ಚಾಗಿ ಪ್ರಚಲಿತದಲ್ಲಿದ್ದಿರಬೇಕೆಂದು ತೋರುತ್ತದೆ. ಕನ್ನಡ ಮತ್ತು ತೆಲುಗು ಭಾಷೆಗಳ ಲಿಪಿಯು ಕೆಲ ಶತಮಾನಗಳ ಹಿಂದೆ ಒಂದೇ ಆಗಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಕನ್ನಡ ಭಾಷೆಯು ಇತ್ತೀಚೆಗೆ ದಕ್ಷಿಣ ದ್ರಾವಿಡ ಗುಂಪಿನೆಡೆಗೆ ಭಿನ್ನವಾಗಿ ನಿಂತಿರುವಂತೆನಿಸುವುದು. ಬಳ್ಳಾರಿ ಜಿಲ್ಲೆಯ ಬಲಕುಂದೆ, ಚಳ್ಳಗುರ್ತಿ, ಗಜ್ಜಿಗಿನಹಾಳ, ಚಿಂತಪಲ್ಲಿ, ಜಾನಿಕುಂಟ, ಮೋತಲಘಟ್ಟ, ಬ್ಯಾಲಚಿಂತ, ಬೊಬ್ಬಕುಂಟ, ಯರ್ರಗುಡಿ, ರಾರಾವಿ, ಶಂಕರಬಂಡ ಮೊದಲಾದ ಸ್ಥಳನಾಮಗಳೆಲ್ಲ ಪ್ರಾಚೀನ ಕನ್ನಡ ಮತ್ತು ತೆಲುಗು ಭಾಷೆಗಳು ನಿಕಟ ಸಂಪರ್ಕವನ್ನು ಹೊಂದಿದ್ದವೆಂದು ತೋರಿಸುತ್ತವೆ.

ಬಳ್ಳಾರಿ ಜಿಲ್ಲೆಯ ಕೆಲವು ಸ್ಥಳನಾಮಗಳಲ್ಲಿ ಕಂಡುಬರುವ ಕೆಲವು ವಾರ್ಗಿಕಗಳಿಂದ ಇಲ್ಲಿನ ಕನ್ನಡವು ಕೆಲ ಶತಮಾನಗಳವರೆಗಾದರೂ ತುಳು ಭಾಷೆಯೊಂದಿಗೆ ಸಂಪರ್ಕ ಹೊಂದಿರುವುದನ್ನು ಹೇಳುತ್ತವೆ. ಉದಾಹರಣೆಗೆ ತುಳುವಿನ 'ಕುಂಜಿ'ಗೆ ಸಮಾನವಾಗಿರುವ 'ಕುಂದ' 'ಅಂಜೆ'ಗೆ ಸಮಾನವಾದ 'ಅಂಜಿ' (ನಿಲುವಂಜಿ) ಕುದುರೆ (ನೆಲ್ಲುಕುದುರು) ಕುರುವ (ಕುರುವಳ್ಳಿ) ವಾರ್ಗಿಕಗಳನ್ನು ನೋಡಬಹುದು. ತುಳು, ತೆಲುಗು ಭಾಷೆಯ ನಂತರದಲ್ಲಿ ಮೂಲದ್ರಾವಿಡ ಭಾಷೆಯಿಂದ ಸಿಡಿದ (ಕ್ರಿ.ಪೂ. ೧೦೦೦) ಪ್ರಥಮ ದಕ್ಷಿಣ ದ್ರಾವಿಡ ಭಾಷೆಯಾಗಿದೆ. ಸದ್ಯ ಈ ಭಾಷೆಯನ್ನು ಅರಬ್ಬೀ ಸಮುದ್ರದ ಕರಾವಳಿ ಪ್ರದೇಶದಲ್ಲಿ

ಕಾಣಬಹುದಾದರೂ ಕಾಲದ ಯಾವುದೋ ಒಂದು ಹಂತದಲ್ಲಿ ಇದು ಬಳ್ಳಾರಿ ಜಿಲ್ಲೆಯ ಪ್ರದೇಶದ ಕನ್ನಡದೊಂದಿಗೆ ಬೆರೆತು ಬಳಕೆಯಾಗುತ್ತಿದ್ದಿರಬೇಕು. ಕರಾವಳಿ ಜಿಲ್ಲೆಯಾದ ಮಂಗಳೂರು ಬ್ರಿಟಿಷರ ಆಡಳಿತಾವಧಿಯಲ್ಲಿ ಮದ್ರಾಸ್ ಪ್ರಾಂತ್ಯಕ್ಕೆ ಒಳಪಟ್ಟಿದ್ದಿತು. ಬಳ್ಳಾರಿ ಜಿಲ್ಲೆಯೂ ಸಹ ಆ ಅವಧಿಯಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿತ್ತು ಎಂಬ ಸಂಗತಿಯನ್ನು ನೆನಪು ಮಾಡಿಕೊಳ್ಳಬಹುದು. ಒಂದೇ ಆಡಳಿತದ ಅಡಿಯಲ್ಲಿನ ಈ ಪ್ರದೇಶಗಳ ಭಾಷೆ ಪರಸ್ಪರ ಸಂಪರ್ಕಕ್ಕೆ ಬಂದಿರುವ ಸಾಧ್ಯತೆಗಳು ಇತ್ತೀಚಿನ ಕಾಲಾವಧಿಯಲ್ಲಿ ಹೆಚ್ಚುಗೊಂಡಿತೆಂದು ಭಾವಿಸಲು ಅವಕಾಶವಿದೆ.

ದ್ರಾವಿಡ ವರ್ಗದ ಭಾಷಾ ಸಾಹಿತ್ಯದಲ್ಲಿ ಜೇಷ್ಠತೆಯನ್ನು ಪಡೆದಿರುವ ತಮಿಳು ಭಾಷೆ ಮತ್ತು ಸ್ಥಳನಾಮಗಳೊಡನೆ ಇಲ್ಲಿಯ ಸ್ಥಳನಾಮಗಳು ಕಿಂಚಿತ್ ಸಂಬಂಧವನ್ನು ನಿರ್ದೇಶಿಸುತ್ತವೆ. ಮೈಲಾರ<ಮಯೂರ, ಕೂಡ್ಲಿಗಿ<ಕೂಡಲಗಿ, ಅಣಜಿ, ಅಣಜಿಗೇರಿ ಮೊದಲಾದ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯ ಕನ್ನಡ ಅಲ್ಪಕಾಲಾವಧಿವರೆಗಾದರೂ ತಮಿಳು ಭಾಷೆಯೊಡನೆ ಸಂಬಂಧ ಪಡೆದಿರಬೇಕೆಂಬುದನ್ನು ತೋರಿಸುತ್ತವೆ.

ಕನ್ನಡ ಭಾಷೆಯು ಮೂಲ ದಕ್ಷಿಣ ದ್ರಾವಿಡ ಭಾಷೆಯಿಂದ ಕ್ರಿ.ಪೂ. ೩೦೦ಕ್ಕಿಂತ ಮುಂಚೆ ಬೇರ್ಪಟ್ಟಿತೆಂದು ಭಾಷಾಶಾಸ್ತ್ರಜ್ಞರು ನಿರ್ಧರಿಸಿದ್ದಾರೆ. ಈ ಅವಧಿಯ ಭಾಷೆಯ ಬಗೆಗೆ ಹೆಚ್ಚಿನ ವಿವರ ತಿಳಿದುಬಂದಿಲ್ಲ. ದ್ರಾವಿಡ ವರ್ಗದ ಭಾಷೆಗಳ ಸಂಪರ್ಕವನ್ನು ಕಳಚಿ ಕನ್ನಡ ಪ್ರಕೃತ ಭಾಷೆಯ ಪ್ರಭಾವಕ್ಕೆ ಒಳಪಟ್ಟಿರಬೇಕೆಂದು ತೋಚುತ್ತದೆ. ಉದಾ: ಇಟ್ಟಿಗಿ, ಇಟ್ಟಗಿನಾಳ, ಇಟ್ಟಗುಡಿ, ಬೊಮ್ಮಗಟ್ಟ, ಬೊಮ್ಮಲಾಪುರ, ಯಕ್ಕೆಗುಂಡಿ (<ಯಕ್ಷ) ಈ ಸ್ಥಳನಾಮಗಳು ಮೇಲಿನ ಸಂಗತಿಯ ಸ್ಪಷ್ಟನೆ ನಿಡುತ್ತವೆ. ಹತ್ತನೆಯ ಶತಮಾನದ ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯಂ' ಸದ್ಯ ಉಪಲಬ್ಧ ಆದಿಕಾವ್ಯ. ಕ್ರಿ.ಶ. ೪೫೦ರ ಹಲ್ಮಿಡಿ ಶಾಸನವೇ ಅತಿ ಪ್ರಾಚೀನ ಉಪಲಬ್ಧ ಶಾಸನ. ಕನ್ನಡವು ಕ್ರಿಸ್ತಪೂರ್ವ ಕಾಲದಲ್ಲಿಯೇ ಪ್ರಭಾವಶಾಲಿ ಸಮೃದ್ಧ ಭಾಷೆಯಾಗಿದ್ದಿತೆಂಬುದು ವಿದ್ವಾಂಸರಭಿಮತವಾಗಿದೆ. ರಾಮಾಯಣ, ಮಹಾಭಾರತ, ಪಾಣಿಯ ಅಷ್ಟಾಧ್ಯಾಯ ಮತ್ತು ಆಕ್ಸಿರಿಂಕಸ್‌ದಲ್ಲಿ ದೊರೆತ ಪೈಪರಸ್ ಪ್ರಹಸನಗಳು ಕನ್ನಡದ ಪ್ರಾಚೀನತೆಗೆ ಒದಗಿ ಬರುವ ಬಲವಾದ ಆಧಾರಗಳಾಗಿವೆ.

ಬಳ್ಳಾರಿ ಜಿಲ್ಲೆಯ ಬಹುತೇಕ ಸ್ಥಳನಾಮಗಳು ದ್ರಾವಿಡ ಭಾಷಾವರ್ಗಕ್ಕೆ ಸಂಬಂಧಿಸಿದ್ದು ಉಳಿದಂತೆ ಪ್ರಕೃತ ಮತ್ತು ತೆಲುಗು ಭಾಷೆಗೆ ಸಂಬಂಧಿಸಿವೆ. ಸ್ಥಳನಾಮಗಳ ಪ್ರಾಕೃತ ಮತ್ತು ತೆಲುಗು ರೂಪಗಳನ್ನು ಗುರುತಿಸುವಲ್ಲಿ ಹೆಚ್ಚಿನ ಪರಿಶ್ರಮದ ಅವಶ್ಯಕತೆಯೇನೂ ಕಂಡುಬರುವುದಿಲ್ಲ.

೪.೭ ಜನಸಂಚಾರ ಹಾಗೂ ಸ್ಥಳನಾಮಾಭಿವ್ಯಕ್ತಿಗಳು:

ಬಳ್ಳಾರಿ ಜಿಲ್ಲೆಯಲ್ಲಿ ಕುರುಬರು, ಗೊಲ್ಲರು, ವಡ್ಡರು, ಕಲ್ಲುಕುಟಿಗರು, ಕಂಚುಗಾರರು, ದಾಸರು, ಉಪ್ಪಾರರು, ದೊಂಬರು, ಕಮ್ಮಾರರು, ಅಗಸರು, ತೆಲ್ಲಿಗರು ಮುಂತಾದ ಹಲವು ಜಾತಿ ಜನಾಂಗ ಕುಲ ಕಸುಬಿನ ಜನರು ವಾಸವಾಗಿದ್ದು ಇವರಿಗೆ ಸಂಬಂಧಿಸಿದ ವೃತ್ತಿವಾಚಕ ಸ್ಥಳನಾಮಗಳು ಇಲ್ಲಿ ಕಂಡುಬರುತ್ತವೆ. ಅಲೆಮಾರಿಯಾಗಿ ಒಂದು ಸ್ಥಳದಿಂದ ಮತ್ತೊಂದೆಡೆಗೆ ಸಂಚರಿಸುತ್ತಿದ್ದ ಪ್ರಾಚೀನ ಮಾನವನು ಕ್ರಮೇಣ ಕಾಲ ಗತಿಸಿದಂತೆ ಒಂದೆಡೆಯಲ್ಲಿ ನೆಲೆಸಿ ಒಂದೊಂದು ವೃತ್ತಿಯನ್ನು ಕೈಗೊಂಡು ಜೀವಿಸಲಾರಂಭಿಸಿದುದನ್ನು ಈ ಸ್ಥಳನಾಮಗಳು ತಿಳಿಸುತ್ತವೆ. ಈ ವರ್ಗಗಳ ಜನರು ಕರ್ನಾಟಕದ ಬೇರೆಡೆಗಳಲ್ಲೂ, ಕರ್ನಾಟಕದ ಹೊರಭಾಗದಲ್ಲೂ ಕಂಡುಬರುತ್ತಾರೆ. ದ್ರಾವಿಡ ಜನಾಂಗದ ಕುರುಂಬನ್ ವರ್ಗವು ನೀಲಗಿರಿ ಬೆಟ್ಟಗಳಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿ ಕಂಡುಬರುವರು. ಇವರದು ಪ್ರಮುಖವಾಗಿ ಹುಲ್ಲುಗಾವಲು ಜೀವನ. ಇವರಲ್ಲೆ ಕೆಲವರು ತಮ್ಮ ಮೂಲ ನೆಲೆಗಳಿಂದ ಕರ್ನಾಟಕದೊಳಕ್ಕೆ ಪ್ರವೇಶ ಮಾಡಿದರು. ಕರ್ನಾಟಕದಲ್ಲಿ ಇವರನ್ನು ಕುರುಬರು ಎಂದು ಕರೆಯುತ್ತೇವೆ. ಇದೇ ಕುರುಬರ ಒಂದು ಗುಂಪು ಆಂಧ್ರ ಮತ್ತು ಕರ್ನಾಟಕದ ಗಡಿ ಭಾಗಗಳಲ್ಲಿ ಸಂಚರಿಸುತ್ತಿದ್ದು ಬಳ್ಳಾರಿ ಜಿಲ್ಲೆಯನ್ನು ಪ್ರವೇಶ ಮಾಡಿದೆ. ಇಂದಿಗೂ ಬಳ್ಳಾರಿ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಕುರುಬರ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಇವರ ಮೂಲವೃತ್ತಿ ಕುರಿಗಳನ್ನು ಸಾಕುವುದಾಗಿದ್ದರೂ ದನಕರುಗಳ ಸಾಕಾಣಿಕೆಯನ್ನೂ, ಬೇಸಾಯ ವೃತ್ತಿಯನ್ನೂ ಅವಲಂಬಿಸಿಕೊಂಡಿದ್ದಾರೆ. ಈ ಜನರ ಸಂಚಾರ ಮಾರ್ಗವನ್ನು ನಿರ್ದೇಶಿಸುವ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿ ಉಪಲಬ್ಧವಿಲ್ಲ. ಗೊಲ್ಲನಾಗೇನಹಳ್ಳಿ, ಗೊಲ್ಲರಹಟ್ಟಿ ಎಂಬ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿವೆ. ಈ ಸ್ಥಳನಾಮಗಳು ಗೊಲ್ಲರ, ಕಾಡುಗೊಲ್ಲರ ಮೂಲನೆಲೆಗಳನ್ನು ಕುರಿತು ನಿರ್ದೇಶಿಸುತ್ತವೆ. ಜಿಲ್ಲೆಯಲ್ಲಿನ ಈ ಜನಗಳ ಪ್ರಮುಖ ವೃತ್ತಿ ದನಕರುಗಳ ಸಾಕಾಣಿಕೆ. ಈ ಜನರಲ್ಲಿ ಬಹು ಪಾಲಿನವರು ತೆಲುಗು ಭಾಷಿಕರಾಗಿರುವುದೊಂದು ವಿಶೇಷ. ಇವರು ಆಂಧ್ರಪ್ರದೇಶದ ಭಾಗದಿಂದ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿದ್ದಾರೆ. ಇವರ ದೈವ ಗೋಪಾಲಕನಾದ ಗೊಲ್ಲಕೃಷ್ಣ. ಉತ್ತರ ಭಾರತದ ಕಡೆಯಿಂದ ಸಂಚರಿಸುತ್ತ ಒರಿಸ್ಸ, ಆಂಧ್ರ ಭಾಗಕ್ಕೆ ಬಂದ ಇವರು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರವೇಶ ಪಡೆದಿದ್ದಾರೆ.

ಕಲ್ಲುಕುಟಿಗರು, ವಡ್ಡರು, ಉಪ್ಪಾರರು ಬಳ್ಳಾರಿ ಜಿಲ್ಲೆಯಲ್ಲಿದ್ದು ಅವರಿಗೆ ತಮ್ಮತಮ್ಮದೇ ಆದ ಪ್ರತ್ಯೇಕ ನೆಲೆಗಳಿವೆ. ಇವರ ವೃತ್ತಿವಾಚಕ ಶಬ್ದಗಳಿಂದಲೇ ಇವರ ನೆಲೆಗಳು ಸ್ಥಾಪಿತವಾಗಿವೆ. ಕಲ್ಲುಕುಟಿಗರು ಮತ್ತು ವಡ್ಡರದು ಶೇಕಡಾ ೯೯ರಷ್ಟು ತೆಲುಗು ಭಾಷೆಯಾಗಿದೆ. ಇವರು

ಆಂಧ್ರಪ್ರದೇಶದತ್ತಣಿಂದ ಬಳ್ಳಾರಿ ಜಿಲ್ಲೆಗೆ ಬಂದವರಾಗಿದ್ದಾರೆ. ಇಲ್ಲಿನ ಜನರು ಇಂದೂ ಕೂಡಾ ಇವರನು ಆಂಧ್ರ (ಕಡಪ) ವಡ್ಡರು ಎಂತಲೇ ಸಂಬೋಧಿಸುತ್ತಾರೆ. ಇದು ಪರಂಪರಾಗತವಾಗಿ ಶತಮಾನಗಳಿಂದಲೂ ನಡೆದುಕೊಂಡು ಬಂದಿರುವ ಸಾಮಾಜಿಕ ವ್ಯವಹಾರವಾಗಿ ಇಲ್ಲಿ ಕಂಡುಬರುತ್ತದೆ. ಕಮ್ಮಾರರಲ್ಲಿ ಕನ್ನಡಿನ ಮೂಲದವರು ಮತ್ತು ಆಂಧ್ರ ಮೂಲದವರೆಂದು ಎರಡು ಬಗೆಗಳನ್ನು ಕಾಣಬಹುದು. ಉಪ್ಪಾರ ಜನಾಂಗವು ಕೂಡಾ ಆಂಧ್ರದ ಕರಾವಳಿ ಪ್ರದೇಶದಿಂದ ಜಿಲ್ಲೆಯೊಳಗೆ ಪ್ರವೇಶ ಪಡೆದಿರಬೇಕೆಂದು ತೋರುತ್ತದೆ. ಬಹುಶಃ ಉಪ್ಪಾರರಿಗೇ ವಿಶಿಷ್ಟವಾದ ಪ್ರತ್ಯೇಕ ವಾಸದ ನೆಲೆಗಳು ಕರ್ನಾಟಕದಲ್ಲಿ ಕಂಡುಬಂದಿರುವುದು ಅಪರೂಪವಾಗಿದೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಉಪ್ಪಾರ ವೃತ್ತಿವಾಚಕ ಸ್ಥಳನಾಮವು ಕಂಡುಬರುತ್ತದೆ. ಇವರ ಮುಖ್ಯ ಉದ್ಯೋಗ ಒಮ್ಮೆ ಉಪ್ಪನ್ನು ತಯಾರಿಸುವುದಾಗಿದ್ದರೂ ಈಗ ಇವರು ಉಳಿದವರಂತೆ ಸಾಮಾನ್ಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೆಚ್ಚಾಗಿ ವ್ಯವಸಾಯದ ಮೇಲೆ ಅವಲಂಬಿತರಾಗಿದ್ದಾರೆ.

ಪುರಾಣಗಳ ರೀತ್ಯ ಮೊದಲು ವಿಂಧ್ಯಾಪರ್ವತವನ್ನು ಅತಿಕ್ರಮಿಸಿ ದಕ್ಷಿಣದೆಡೆಗೆ ಆರ್ಯವ್ಯಕ್ತಿಯಾದ ಅಗಸ್ತ್ಯಮಹರ್ಷಿಯು ಪ್ರವೇಶಿಸಿದನೆಂದು ಭಾವಿಸಲಾಗಿದೆ. ಈತನು ತನ್ನ ಅಸಂಖ್ಯ ಶಿಷ್ಯರ ಸಮೂಹದೊಂದಿಗೆ ಇತ್ತ ಬಂದು ನೆಲಸಿದನೆಂದು ಹೇಳಲಾಗುತ್ತದೆ. ಅಗಸ್ತ್ಯಮುನಿಗೆ ಸಂಬಂಧಿಸಿದ ಸ್ಥಳಗಳು ತಮಿಳುನಾಡು ಮತ್ತಿತರೆಡೆಗಳಲ್ಲಿ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ತುಂಗಭದ್ರಾ ನದೀತೀರದ ತಮಿಳುನಾಡು ಮತ್ತಿತರೆಡೆಗಳಲ್ಲಿ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ತುಂಗಭದ್ರಾ ನದೀತೀರದ ನಿಟ್ಟೂರು ಮುಂತಾದ ಪ್ರದೇಶದಲ್ಲಿನ ಪ್ರಾಚ್ಯವಸ್ತು ಸಂಶೋಧನಾ ಕಾರ್ಯದಲ್ಲಿ ಕಂಡುಬಂದಿರುವ ಯಜ್ಞಕುಂಡ, ಹವಿಸ್ಸಿನ ಪಾತ್ರೆ ಮುಂತಾದವುಗಳಿಂದ ಆರ್ಯರು ಉತ್ತರದಿಂದ ದಕ್ಷಿಣದ ಈ ಪ್ರದೇಶಕ್ಕೆ ಬಂದು ಎಲಸಿರಬಹುದೆಂದು ಭಾವಿಸಲು ಸಾಧ್ಯವಾಗಿದೆ. ಅನಂತರದಲ್ಲಿ ಸಂಸ್ಕೃತ–ಪ್ರಾಕೃತ ಭಾಷೆಯನ್ನು ಬಳಸುತ್ತಿದ್ದ ಬೌದ್ಧರು ಪ್ರಾಯಶಃ ಆಂಧ್ರಪ್ರದೇಶದ ಕಡೆಯಿಂದ ಇಲ್ಲಿಗೆ ಬಂದಿರಬಹುದೆಂದು ತೋರುತ್ತದೆ. ಕೊನೆಯ ಹಂತವಾಗಿ ಪ್ರಾಕೃತ ಭಾಷಿಕ ಜನರಾದ ಜೈನರು ಉಜ್ಜೈನಿಯಿಂದ ಶ್ರವಣಬೆಳಗೊಳ, ಮೂಡಬದಿರೆ, ಕೋಗಳಿ(ಬಳ್ಳಾರಿ), ಮೋರಿಗೆರೆ (ಬಳ್ಳಾರಿ) ಉಜ್ಜನಿ (ಬಳ್ಳಾರಿ)ಯ ಕಡೆಗೆ ಬಂದು ನೆಲೆಸಿರಬಹುದೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಬೌದ್ಧರಿಗೆ ಸಂಬಂಧಿಸಿದಂತಿರುವ ಬುಧನೂರು<ಬುದ್ಧನೂರು ಮತ್ತು ದಮ್ಮೂರು<ದಮ್ಮರ, ಅಲ್ಲದೆ ಜೈನರಿಗೆ ಸಂಬಂಧಿಸದಿ ಕೆವಗಳಿ>ಕೋಗಳಿ, ಉಜ್ಜನಿ ಎಂಬ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿ ಕಾಣಬರುತ್ತವೆ.

ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿದ ಜನಾಂಗಗಳಲ್ಲಿ ಲಮ್ಮಾಣಿಗಳು ಪ್ರಮುಖರಾಗಿ ಕಾಣುತ್ತಾರೆ. ಗುಜರಾತಿನ ಕಡೆಯಿಂದ ಯಾವುದೋ ಕಾರಣದಿಂದಾಗಿ ಭಿನ್ನಭಿನ್ನ ದಿಕ್ಕುಗಳಿಗೆ ವಲಸೆ ಹೋಗಿ ಭಾರತದ ೨೨ ರಾಜ್ಯಗಳಲ್ಲಿ, ೨೩ನೆಯದಾಗಿ ಅಸ್ತಿತ್ವ ಪಡೆದ ಗೋವಾ ಹಾಗೂ ಕೇಂದ್ರ ಶಾಸಿತ ಪ್ರದೇಶ ತ್ರಿಪುರಾದಲ್ಲೂ ಕಂಡುಬರುತ್ತಾರೆ. ಭಾರತದಲ್ಲಿ ಒಟ್ಟು ಲಮ್ಮಾಣಿಗಳ ಸಂಖ್ಯೆ ೧೫ ಮಿಲಿಯನ್ ಎಂಬ ಅಂದಾಜಿದೆ. ಇವರಲ್ಲಿ ಸುಮಾರು ೨೩ ಉಪ ಗುಂಪುಗಳಿವೆ. ಅದರಲ್ಲಿ ಪ್ರಮುಖವಾದವುಗಳೆಂದರೆ ಬಂಜಾರ, ಲಂಬಾಡ ಮತ್ತು ಸುಗಾಲಿ. ಇವರು ಆಂಧ್ರಪ್ರದೇಶ, ಕೇರಳ ಕರ್ನಾಟಕ ಮತ್ತು ತಮಿಳುನಾಡಿನ ಎಲ್ಲೆಡೆಗಳಲ್ಲಿ ಕಂಡುಬರುತ್ತಾರೆ. ಇವರು ತಮ್ಮನ್ನು "ಗೋರ" ಎಂದೂ ಲಮ್ಮಾಣೀತರರನ್ನು 'ಕೋರ' ಎಂದೂ ಕರೆಯುತ್ತಾರೆ. ಲಮ್ಮಾಣಿ ಗಂಡಸರು 'ಗೋರಮಾಟಿ' ಮತ್ತು ಹೆಂಗಸರು 'ತಾಂಡ್ರಿ' ಎಂದು ಕರೆಯಲ್ಪಡುವರು. ಇವರ ಭಾಷೆ 'ಗೋರಬೋಲಿ' ಆಗಿದೆ. ಇವರು ಲಮ್ಮಾಣೀತರರಾದ ಕೋರರೊಂದಿಗೆ ವಾಸವಾಗಿರಲು ಬಯಸದೆ ಬೆಟ್ಟಗುಡ್ಡಗಳಂಥ ಎತ್ತರವಾದ ಗಿಡಮರಗಳಿಂದ ಸುತ್ತುವರಿದ ಅರಣ್ಯದಂಥ ಪ್ರದೇಶದಲ್ಲಿ ಪ್ರತ್ಯೇಕ ತಾಂಡೆಗಳನ್ನು ಕಟ್ಟಿಕೊಂಡಿರುತ್ತಾರೆ. ತಾಂಡೆ ಎನ್ನುವುದು ಇಂಡೋ ಯೂರೋಪಿಯನ್ ಗುಂಪಿಗೆ ಸಂಬಂಧಿಸಿದ ಶಬ್ದವಾಗಿರಬೇಕೆಂಬುದು ಎಚ್.ಎಸ್. ಬ್ರಹ್ಮಾನಂದ ಅವರ ಅಭಿಪ್ರಾಯ. ಸಂಸ್ಕೃತದ ತಂಡು, ತಾಂಡವ, ತಂಡುಲ, ಇಂಗ್ಲೀಷಿನ Tandem ಇದರ ಜ್ಞಾತಿ ಪದಗಳಿದ್ದು ಒಬ್ಬ ನಾಯಕನೊಟ್ಟಿಗೆ ಸಂಚರಿಸುವ ಸ್ವಾವಲಂಬಿ ಚರಗುಂಪು ಎಂದು ಅರ್ಥೈಸಲಾಗಿದೆ. ತಾಂಡೆ ಮೂಲದಲ್ಲಿ ಪ್ರಾಕೃತ ಸ್ಥಾನ(ತಾಣ) ಪದದಿಂದ ನಿಷ್ಪನ್ನಗೊಂಡಿರಬೇಕು. ಲಮ್ಮಾಣ ಬಂಜಾರ ಪದ 'ಲವಣ ವಾಣಿಜ್ಯಕಾರ' ಎಂಬ ಪದದ ಪ್ರಾಕೃತ ರೂಪವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಲಮ್ಮಾಣಿಗಳ ಉಲ್ಲೇಖ ದಂಡಿಯ ದಶಕುಮಾರ ಚರಿತೆ (ಭಾಗ-೧, ಅಧ್ಯಾಯ-೪, ಪುಷ್ಪೋದ್ಭವ ಪ್ರಕರಣ)ದಲ್ಲಿ (ಕ್ರಿ.ಶ. ೬ನೆಯ ಶತಮಾನ) ಫಿರೋಜ್‌ಶಾಹ ಬಹಮನಿ (ಕ್ರಿ.ಶ. ೧೪೧೭) ಕ್ಯೂಂಬಲೆಜ್ (ಕ್ರಿ.ಶ. ೧೮೧೩) ಮುಂತಾದವರಲ್ಲಿ ಉಲ್ಲೇಖವಾಗಿರುವುದನ್ನು ಗುರುತಿಸಲಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿನ ತಾಂಡಗಳಿಂದ ಈ ಜನರು ಉತ್ತರದ ಗುಜರಾತ, ರಾಜಸ್ಥಾನ ಕಡೆಯಿಂದ ದಕ್ಷಿಣದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದ ಕಡೆಗೆ ಸಂಚರಿಸಿ ಆಂಧ್ರದಲ್ಲಿ ಅಧಿಕವಾಗಿ ಕಂಡುಬರುವ ಇವರು ಅಲ್ಲಿಂದ ಬಳ್ಳಾರಿ ಜಿಲ್ಲೆಯ ಪ್ರದೇಶದ ಕಡಗೆ ಮುಂದುವರಿದರೆಂಬುದು ತಿಳಿದುಬರುತ್ತದೆ. ಅನಂತರದಲ್ಲಿ ಇವರು ದಕ್ಷಿಣದ ಕೇರಳ ಮತ್ತು ತಮಿಳುನಾಡಿನವರೆಗೂ ವ್ಯಾಪಿಸಿಕೊಂಡಿರಬೇಕೆಂದು ಭಾವಿಸಲವಕಾಶವಿದೆ.

೪.೮ ಸ್ಥಳನಾಮ ದಾಖಲೆಗಳು ಮತ್ತು ನೋಂದಾವಣಿ

೪.೮(೧) ಐತಿಹಾಸಿಕ ದಾಖಲಾತಿಗಳು:

ಬಳ್ಳಾರಿ ಜಿಲ್ಲೆಯಲ್ಲಿ ಆಳಿದ ಅರಸರು, ಪಾಳೆಗಾರರು ತಮ್ಮ ಆಡಳಿತಾವಾದಿಯಲ್ಲಿ ಅನೇಕ ಗ್ರಾಮಗಳಲ್ಲಿ ನಡೆಸಿದ ನೂರಾರು ಶಿಲಾಶಾಸನಗಳಲ್ಲಿ ಬರುವ ಗ್ರಾಮನಾಮಗಳಿಗೆ ಬಲವಾದ ಐತಿಹಾಸಿಕ ದಾಖಲೆಗಳಿವೆ. ಅಲ್ಲಿ ಉಕ್ತವಾಗಿರುವ ಸ್ಥಳನಾಮಗಳಿಂದ ಅವುಗಳ ಪೂರ್ವ ಸ್ವರೂಪ, ಅರ್ಥ ಮತ್ತು ಬೆಳವಣಿಗೆಯನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಹೀಗಾಗಿ ಶಾಸನೋಕ್ತ ಸ್ಥಳನಾಮಗಳ ಪಟ್ಟಿಯನ್ನು ಕೆಳಕಂಡಂತೆ ತೋರಿಸಲಾಗಿದೆ.

ಕ್ರ ಸಂ.	ಶಾಸನೋಕ್ತ ಸ್ಥಳನಾಮಗಳು	ಶಾಸನ	ಆಳ್ವಿಕೆ
೧	೨	೩	೪
	ಬಳ್ಳಾರಿ ತಾಲೂಕು		
1.	ಬಿಹನಪಟ್ಟ>ಕಲ್ಕಂಬ	ಕಲ್ಕಂಬ ಕ್ರಿಶ 1028	ನೊಳಂಬ ಪಲ್ಲವ ಜಗದೇಶಮಲ್ಲ
2.	ಅರಕೆರೆ>ಸೋಮಲಾಪುರ	ಸೋಮಲಾಪುರ ಕ್ರಿಶ 1030	ನೊಳಂಬ ಸಾಮಂತ ಕನಕರಸ
3.	ಕರುಂಗೋಡು>ಕುರುಗೋಡು	ಕುರುಗೋಡು ಕಾಲ ನಮೂದಿಸಿಲ್ಲ	ಚಾಳುಕ್ಯ ಅರಸ ಸತ್ಯಾಶ್ರಯ (ನಿರ್ದಿಷ್ಟ ಹೆಸರಿಲ್ಲ)
4.	ಕಾರ್ತಿಕೆಯ ತಪೋವನ ಕೊಟ್ಟತೊಣಿ>ಕುಡುತಿನಿ	ಕುಡುತಿನಿ ಕ್ರಿಶ 947	ರಾಷ್ಟ್ರಕೂಟ ದೊರೆ ಅಕಾಲವರ್ಷದೇವ (ಕೃಷ್ಣ -111)
5.	ಕೊಳ್ಗಲ್ಲು>ಕೊಳಗಲ್ಲು	ಕೊಳಗಲ್ಲು ಕ್ರಿಶ 984	ರಾಷ್ಟ್ರಕೂಟ ದೊರೆ ಅಕಾಲವರ್ಷದೇವ
6.	ಕೊಟ್ಟತೊಣಿ>ಕುಡುತಿನಿ	ಕುಡುತಿನಿ ಕ್ರಿಶ 976	ಚಾಳುಕ್ಯ ದೊರೆಅಹವಮಲ್ಲದೇವ (ತೈಲ-11)
7.	ಒರ್ವಾಯಿ>ಒರುವಾಯಿ	ಒರುವಾಯಿ ಕ್ರಿಶ 1036	ಚಾಳುಕ್ಯ ದೊರೆ ಜಗದೇಕಮಲ್ಲದೇವ
8.	ಕಪ್ಪಗಲ್ಲು>ಕಪ್ಪಗಲ್ಲು	ಸಿರಿವಾರ ಕ್ರಿಶ 1044	ಚಾಳುಕ್ಯದೊರೆ ತ್ರೈಲೋಕ್ಯಮಲ್ಲ ಅಹಮಲ್ಲದೇವ (ಸೋಮೇಶ್ವರ-1)
9.	ದೊಣ್ಣವಟ್ಟಿ>ಹಾವಿನಹಾಳು-ವೀರಾಪುರ	ಹಾವಿನಹಾಳು ವೀರಾಪುರ ಕ್ರಿಶ907	ಚಾಳುಕ್ಯದೊರೆ ತ್ರೈಲೋಕ್ಯಮಲ್ಲ ಅಹಮಲ್ಲದೇವ
10.	ಬಲ್ಲಕುಂದೆ>ಬಲಕುಂದೆ	ಸಿಂದಗೇರಿ ಕಾಲನಮೂದಿಸಿಲ್ಲ	ತ್ರೈಲೋಕ್ಯಮಲ್ಲ (ಸೋಮೇಶ್ವರ-1) – ಸದರ –
11.	ತೆಕ್ಕೆಕಲ್ಲು>ತೆಕ್ಕಲಕೋಟೆ	ಸಿರುಗುಪ್ಪ	
12.	(ಭತ್ತಗ್ರಾಮ) ಸಿರುಗುಪ್ಪೆ ಸಿರುಗುಪ್ಪೆ	ಸಿರುಗುಪ್ಪ ಕಾಲ ನಮೂದಿಲ್ಲ	ಚಾಳುಕ್ಯ ದೊರೆ ತ್ರಿಭುವನಮಲ್ಲದೇವ
13.	ಕೊರೆಗನೂರು>ಕಾರಿಗನೂರು	ಸಿರುಗುಪ್ಪ	"
14.	ಕೊಟ್ಟತ್ತಣಿ>ಕುಡುತಿನಿ	ಕುಡುತಿನಿ ಕ್ರಿ.ಶ. 1098	ಚಾಳುಕ್ಯದೊರೆ ತ್ರಿಭುವನಮಲ್ಲದೇವ
15.	ಕೊಳೂರು>ಕೋಳೂರು	ಕುಡುತಿನಿ ಕ್ರಿ.ಶ. 1099	"
16.	ಕೊಳ್ಗಲ>ಕೊಳಗಲ್ಲು		
17.	ದಂಮರ>ದಮ್ಮೂರು	ದಮ್ಮೂರು ಕ್ರಿಶ 1106-07	"
16.	ಕುರಂಗೋಡು>ಕುರುಗೋಡು	ಕುಡುತಿನಿ ಕ್ರಿಶ 1120	ಶಾಸನ ಹಾಳಾಗಿರುವುದರಿಂದ ತಿಳಿದು ಬಂದಿಲ್ಲ

19. ಸಿಂದಮೊಳಲು>ಸಿಂದವಾಳ	ಸಿಂದವಾಳ ಕ್ರಿಶ1130	ಚಾಲುಕ್ಯ ದೊರೆ ಭೂಲೋಕಮಲ್ಲದೇವ
20. ಬಳ್ಳಾರೆ>ಬಳ್ಳಾರಿ	ಬೈಲೂರು ಕ್ರಿಶ 1131	ತ್ರಿಭುವನಮಲ್ಲದೇವ (ಸೋಮೇಶ್ವರ–111)
21. ದೋಣಿಯಬೀಡು>ಬೈಲೂರು		"
22. ಸಿಂದಗೆರೆ>ಸಿಂದಿಗೇರಿ	ಸಿಂದಗೇರಿ ಕ್ರಿಶ 1141	ಚಾಲುಕ್ಯದೊರೆ ಜಗದೇಕಮಲ್ಲ ದೇವ–11
23. ಸಿಂದಂಗೆರೆ	ಸಿಂದಿಗೇರಿ ಕ್ರಿ.ಶ. 1141	ಜಗದೇಕಮಲ್ಲದೇವ (11)
23. ಬಳ್ಳಾರೆ>ಬಳ್ಳಾರಿ	ಕೊಳೂರು ಕ್ರಿ.ಶ. 1147	ಜಗದೇಕಮಲ್ಲದೇವ
24. ಬಯನಹಟಿ>ಬಾದನಹಟ್ಟಿ	ಕುಡುತಿನಿ ಕ್ರಿಶ 1148	"
25. ಮಹಾವಿನಹಾಳು>ಹಾವಿನಹಾಳು	ಕುರುಗೋಡು ಕ್ರಿ.ಶ. 1176	ಕಳಚೂರ್ಯದೊರೆ ಕುಂತಳದೇಶ ಚಕ್ರವರ್ತಿ ರಾಯಮುರಾರಿ ನೋವಿದೇವ
26. ಯೋರುವಾಯ>ಬರುವಾಯಿ	ಬರುವಾಯಿ ಕ್ರಿ.ಶ. 1195	ಇಮ್ಮಡಿರಾಚಮಲ್ಲದೇವ
27. ಕಂಪಿಲೆ>ಕಂಪ್ಲಿ	ಒರುವಾಯಿ	ಹೊಯ್ಸಳದೊರೆ ವೀರಬಲ್ಲಾಳ (11)
28. ಯಳಪೆ>ಯಳಿಪಿ	ಯಳ್ಪಿ ಕ್ರಿಸ. 1510	ಕೃಷ್ಣರಾಯ ಮಹಾರಾಯ
29. ಮಲುಕಣ>ಮೋಕ	ಮೋಕ ಕ್ರಿ.ಶ. 1510	ಕೃಷ್ಣರಾಯ ಮಹಾರಾಯ
30. ಹೊಸಊರು>ಹೊಸಪೇಟೆ	ಮೂಡ್ಲಪುರ ಕ್ರಿ.ಶ. 1513	"
31. ದೊಂಡವಟೆ>ದೊಣ್ಣವಟ್ಟಿ> ಹಾವಿನಹಾಳು ವೀರಾಪುರ	ಮೂಡ್ಲಪುರ ಕ್ರಿ.ಶ. 1513 ಹಾವಿನಹಾಳು ವೀರಾಪುರ ಕ್ರಿ.ಶ. 1529	"
32. ಕುಡುತಣಿ>ಕೊಟ್ಟತ್ತೊಣಿ> ಕುಡುತಿನಿ	ಕುಡುತಿಸಿ ಕ್ರಿಸ. 1532	ಅಚ್ಯುತದೇವ ಮಹಾರಾಯ
33. ಬೆಟಿಕನಹಾಳ>ಬೆಟಗನಹಾಳ	ಬೆಟಿಕಿನಹಾಳ ಕಾಲ ನಮೂದಿಸಿಲ್ಲ–	ಸದರ – ಕಾಲ ನಮೂದಾಗಿಲ್ಲ.
28. ಚೆನಕುಂಟ	1543	ವಿಜಯನಗರ
29. ತಡಗ್ರಾಮ	967	ವಿಜಯನಗರ
30. ಬಿಳಿಕುಂಟೆ	1210	ವಿಜಯನಗರ
31. ಬೀಯನಹಟ್ಟಿ	1173	ವಿಜಯನಗರ
32. ಬೆಗಲ್ಲು	1563	ವಿಜಯನಗರ
33. ಮಣಿವೂರ	1173	ಸ್ಕಂದರಾಜ
34. ರೂಪಲಗುಡಿ	1036	ಚಾಲುಕ್ಯ
35. ಲಿಂಗದೇವನಹಳ್ಳಿ	1036	ಚಲುಕ್ಯ
36. ಶ್ರೀಪುರ	1173	ಸಿಂಧೂವಂಶ
37. ಸೂಗೂರು	1173	ಸಿಂಧೂವಂಶ
38. ಸೋಮಸಮುದ್ರ	1556	ವಿಜಯನಗರ
39. ಹಟ್ಟಣ	1130	ವಿಜಯನಗರ
40. ಹಗರಿ	1563	ವಿಜಯನಗರ
41. ಹಾಲಹನ್ನಸಿ	971	ವಿಜಯನಗರ
42. ಹಾಹೆಕಲ್ಲು	1173	ವಿಜಯನಗರ
43. ಹಜೇಹಾಳ್	1512	ವಿಜಯನಗರ
44. ಹೊಲವೇರಿ	1173	ವಿಜಯನಗರ
45. ಹೊಸಕುತ್ತುನೂರು	1149	ಚಾಲುಕ್ಯ

ಹರಪನಹಳ್ಳಿ ತಾಲ್ಲೂಕು:

1.	ಕದಂಬಗೆರೆ > ಕಡಬಗೆರೆ	ಕಡಬಗೆರೆ ಕ್ರಿಶ. 922	ರಾಷ್ಟ್ರಕೂಟದೊರೆ ನಿತ್ಯವರ್ಷ ಇಂದ್ರಬಲ್ಲಹ (III)
2.	ಪಾಡುಗಲ್ಲು>ಕದಂಬಗೆರೆ>ಕಡಬಗೆರೆ	ಕಡಬಗೆರೆ ನಮೂದಿಸಿಲ್ಲ	"
3.	ಕೋಗಳೆ>ಕೋಗಳಿ	ಬಾಗಳಿ ನಮೂದಿಸಿಲ್ಲ	ರಾಷ್ಟ್ರಕೂಟದೊರೆ ಇಂದ್ರವಲ್ಲಭ
4.	ಬಾಳುಗುಳಿ>ಬಾಗಳಿ	ಬಾಗಳಿ	"
5.	ಶ್ರೀಮಣ್ಣಿಯಪಳಿ>ಸಿರಸ್ತಹಳ್ಳಿ>ಚಿರಸ್ತಹಳ್ಳಿ	ಸಿರಸ್ತಹಳ್ಳಿ ಕ್ರಿಶ.931–32	ರಾಷ್ಟ್ರಕೂಟದೊರೆ ಗೋವಿಂದ ವಲ್ಲಭ (ಗೋವಿಂದ)
6.	ಒಡ್ಡವಡಂಗಿಲ>ಹಡಗಲೆ	ಬಾಗಳಿ ಕ್ರಿಶ. 944	ರಾಷ್ಟ್ರಕೂಟದೊರೆ ಕನ್ನರದೇವ ಕೃಷ್ಣ (III)
7.	ಬಾಳ್ಗುಳಿ>ಬಾಗಳಿ	ಬಾಗಳಿ ಕ್ರಿಶ. 956	"
8.	ಮಿಂಚುಂಗೆರೆ>ಮಿಂಚೇರಿ	ಬಾಗಳಿ ಕ್ರಿಸ. 972	ರಾಷ್ಟ್ರಕೂಟದೊರೆ ಖೊಟ್ಟಿಗದೇವ
9.	ಕಂಪುಲಿ>ಕಂಪ್ಲಿ	ಬಾಗಳಿ ಕ್ರಿಸ. 1018	ಚಾಳುಕ್ಯದೊರೆ ಜಗದೇಕಮಲ್ಲ ಜಯಸಿಂಘದೇವ (II)
10.	ನೀರ್ಗುಂದ>ನೀಲಗುಂದ	ಬಾಗಳಿ ಕ್ರಿಶ. 1018	"
11.	ನೆಲ್ಲಿಧಿಗೆರೆ>ನೆಲ್ಕುದಿರೆ	ಹಿರೇಮೇಗಳಗೇರಿ	"
12.	ತಲವಾಗಿಲ>ತಲವಾಗಲು	ತಲವಾಗಲು ಕ್ರಿಶ. 1093	ನಮೂದಿಸಿಲ್ಲ
13.	ತಲವಗೆ>ತಲವಾಗಲು	ತಲವಾಗಲು ಕ್ರಿಶ. 1093	"
14.	ಗಂಚಿಕೆರೆ>ಕಂಚಿಕೇರಿ	ಕಂಚಿಕೆರೆ ಕ್ರಿಶ. 1039	ನೊಳಂಬಸಾಮಂತ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿದೇವ
15.	ಪೊಸವಡಂಗಿಲೆ>ಹಿರೇಹಡಗಲಿ	ಶಿವಪಾದ ಕ್ರಿಶ. 1041–42	ಚಾಳುಕ್ಯದೊರೆ ಜಗದೇಕಮಲ್ಲ
16.	ಬನದಭಳಾರಿ>ಬಳ್ಳಾರಿ	ಸತ್ತೂರು	ಚಾಳುಕ್ಯದೊರೆ ತ್ರೈಲೋಕ್ಯಮಲ್ಲದೇವ ಸೋಮೇಶ್ವರ–I
17.	ಸಿರವೆಡೆ>ಶಿರಸ್ತಹಳ್ಳಿ>ಚಿರಸ್ತಹಳ್ಳಿ	ಶಿರಸ್ತಹಳ್ಳಿ ಕ್ರಿಸ. 1050	"
18.	ಹೊಸಗೆರೆ>ಪುನಬಗಟ್ಟ	ಪುನಬಗಟ್ಟ ಕ್ರಿಶ. 1052	"
19.	ಹುಳಿಬೆಯಘಟ್ಟ>ಪುನಬಗಟ್ಟ	ಪುನಬಗಟ್ಟ ಕ್ರಿಸ. 1054	ನೊಳಂಬ ಬ್ರಹ್ಮಾದಿರಾಜ
20.	ಬೇಹೂರ>ನಂದಿಬೇವೂರು	ನಂದಿಬೇವೂರು ಕ್ರಿಸ. 1054	ಚಾಳುಕ್ಯದೊರೆ ತ್ರೈಲೋಕ್ಯಮಲ್ಲದೇವ
21.	ವೇಗಣಗೆರೆ>ಹಿರೇಮೇಗಳಗೇರಿ	ಹಿರೇಮೇಗಳಗೇರಿ ಕ್ರಿಶ. 1059	"
22.	ಅರಸಿಕೆರೆ>ಅರಸೀಕೆರೆ	ಗುಡಿಹಳ್ಳಿ ಕ್ರಿಶ. 1065	"
23.	ಮುತ್ತರ್ಗೆ>ಮುತ್ತಿಗಿ	"	"
24.	ನೀರುಗುಂದ>ನೀಲಗುಂದ	ಬಾಗಳಿ ಕ್ರಿಶ. 1079	ತ್ರಿಭುವನಮಲ್ಲದೇವ
25.	ಕುರುವರ್ತ್ತಿ>ಕುರುವತ್ತಿ	ಕುರುವತಿ ಕ್ರಿಶ. 1099	ಚಾಳುಕ್ಯದೊರೆ ತ್ರಿಭುವನಮಲ್ಲದೇವ
26.	ಕಂಚಮೆಯಗೆರೆ>ಕಂಚಿಕೇರಿ	ಬಾಗಳಿ ಕ್ರಿಶ. 1108	"
27.	ಎರಂಬಾಳು>ಎಂಬಾಳು	ಎಂಬಾಳು ಕ್ರಿಸ. 1122	"
28.	ರಾವಘಟ್ಟ>ರಾಮಘಟ್ಟ	ರಾಮಘಟ್ಟ ಕ್ರಿಶ. 1122	"
29.	ದುಗ್ಗತಿ>ದುಗ್ಗಾವತಿ	ದುಗ್ಗಾವತಿ ಕ್ರಿಶ. 1126	ಚಾಳುಕ್ಯದೊರೆ ತ್ರಿಭುವನಮಲ್ಲದೇವ

30. ಕೊಂಚಾಪುರ>ಕುಂಚೂರು	ಕುಂಚೂರು ಕಾಲ ಅಳಿಸಿಹೋಗಿದೆ	ಚಾಳುಕ್ಯದೊರೆ ತ್ರಿಭುವನಮಲ್ಲದೇವ
31. ಮೊಸಳೆಮಡು>ರಾಗಿಮಸಲ್ವಾಡ	ರಾಗಿಮಸಲ್ವಾಡ ಕ್ರಿ.ಶ.1127	ಚಾಳುಕ್ಯದೊರೆ ಭೂಲೋಕಮಲ್ಲದೇವ
32. ಬಗರ>ಬಾಡ	ಬಾಡ (ಕೊಂಪೆ) ಕ್ರಿ.ಶ. 1144	ಚಾಳುಕ್ಯದೊರೆ ಜಗದೇಕಮಲ್ಲದೇವ (ii)
33. ಕಲ್ಲಕೆರೆ>ಚಟ್ನಹಳ್ಳಿ(?)	ಚಟ್ನಹಳ್ಳಿ ಕ್ರಿ.ಶ. 1146	"
34. ಕೂಚಿಗೋಳ>ಶ್ರೀನಿವಾಸಪುರ	ಶ್ರೀನಿವಾಸಪುರ ಕ್ರಿ.ಸ. 1147	"
35. ಆಲಂಬೂರು>ಆಲಬೂರು	ಆಲಬೂರು ಕ್ರಿ.ಶ. 1147	"
36. ಸೋಗೆ>ಸೋಗಿ	"	"
37. ಬಾಗುಳಿ>ಬಾಗಳಿ	"	"
38. ಬೆಣ್ಣಿಗನೂರು>ಬೆಣ್ಣಿಹಳ್ಳಿ	ಬೆಣ್ಣಿಹಳ್ಳಿ ಕ್ರಿ.ಶ. 1149	ಜಗದೇಕಮಲ್ಲ ವೀರಾಪಾಂಡ್ಯದೇವ
39. ಹೂಲೆ>ಹುಲಿಕಟ್ಟೆ	"	"
40. ಬಾಗುಳಿ>ಬಾಗಳಿ	ಬಾಗಳಿ ಕಾಲನಮೂದಿಸಿಲ್ಲ	ಚಾಳುಕ್ಯದೊರೆ ಜಗದೇಕಮಲ್ಲದೇವ
41. ಮೈಯಿಂದೂರು>ಮೈದೂರು	ಬಾಡ-ಬೆಣ್ಣಿಹಳ್ಳಿ ಕ್ರಿ.ಶ. 1173	"
42. ಜೇಕಟೇರ>ಚಿಗಟೇರಿ	"	"
43. ಮೊಸಳೆವಾಡ>ಮನ್ನೇರಮಸಲವಾಡ	ಮನ್ನೇರುಮಸಲವಾಡ ಕ್ರಿ.ಶ. 1183	"
44. ಬೆ(ಂ)ಣ್ಣೆಯೂರು>ಬೆಣ್ಣಿಹಳ್ಳಿ	ಕುರುವತ್ತಿ ಕ್ರಿ.ಶ. 1194	ಹೊಯ್ಸಳದೊರೆ ವೀರಬಲ್ಲಾಳ (ii)
45. ಮಾಚಿಯಹಳ್ಳಿ>ಮಾಚಿಹಳ್ಳಿ	ನೀಲಗುಂದ ಕ್ರಿ.ಶ. 1224	ಹೊಯ್ಸಳದೊರೆ ನರಸಿಂಹದೇವ (ii)
46. ಕೊಂಚೂರು>ಕುಂಚೂರು	ಕುಂಚೂರು ಕ್ರಿ.ಶ. 1279	ಯಾದವದೊರೆ ರಾಮಚಂದ್ರದೇವ
47. ಚಟನಹಳಿ>ಚಟ್ನಹಳ್ಳಿ	ಚಟ್ನಹಳ್ಳಿ ಕ್ರಿ.ಶ. 1524	ಕೃಷ್ಣರಾಯ ಮಹಾರಾಯ

ಹಡಗಲಿ ತಾಲೂಕು:

1. ಬೆಣ್ಣೆವೂರು>ಕತ್ತೆಬೆನ್ನೂರು	ಕತ್ತೆಬೆನ್ನೂರು ಕ್ರಿ.ಶ.1205	ಚಾಳುಕ್ಯದೊರೆ ಜಗದೇಕಮಲ್ಲ ದೇವ ಜಯಸಿಂಹ
2. ಸೋಗೆ>ಸೋಗಿ	ಸೋಗಿ ಕ್ರಿ.ಶ. 1038	ಚಾಳುಕ್ಯದೊರೆ ಜಗದೇಕಮಲ್ಲ ದೇವ (ಉದಯಾದಿತ್ಯ)
3. ಮೋರಿಂಗೆರೆ>ಮೋರಿಗೇರಿ	ಮೋರಿಗೇರಿ ಕ್ರಿ.ಶ. 1045	ಚಾಳುಕ್ಯದೊರೆ ತ್ರೈಲೋಕ್ಯಮಲ್ಲ ಅಹಮಲ್ಲದೇವ
4. ಆರ್ಮ್ಮೆಳೆ>ಅಮ್ಮೆಳೆ>ಅಂಬಳಿ		
5. ಪೊಳಲ್ಗುಂದೆ>ಹೊಳಗುಂದಿ		
6. ನೆಲ್ಲಿಕುದಿರು>ನೆಲ್ಕುದುರೆ		
7. ತೊಣಂಕಲಿ>ತಳಕಲ್ಲು	ತಳಕಲ್ಲು ಕ್ರಿ.ಶ. 1052-53	"
8. ಬಸಿಕೋಡು>ಬಸರುಕೋಡು?	ಕುರುವತ್ತಿ ಕ್ರಿ.ಶ. 1104	"
9. ಮಾಂಗೊಳ>ಮಾಗೊಳ>ಮಾಗಳ		"
10. ಗಂಡರಾದಿತ್ಯನ ಪೊಳಲು>ಹೊಳಲು		
11. ಕುತ್ತಂಗಿ>ಉತ್ತಂಗಿ	ಉತ್ತಂಗಿ ಕ್ರಿ.ಶ. 1150	ಜಗದೇಕಮಲ್ಲ ವೀರಪಾಂಡ್ಯದೇವ
12. ಕೋಗಿಳಿ>ಕೋಗಳಿ	ಕೋಗಳಿ ಕ್ರಿ.ಶ. 1275	ರಾಮನಾಥದೇವ
13. ಹೆರಡ>ಹ್ಯಾಂಡ	ಹ್ಯಾಂಡ ಕ್ರಿ.ಶ. 1263	ಯಾದವದೊರೆ ಮಹಾದೇವರಾಯ

14. ಗುಂಗುರಾಚಂದ>ಗುಂಗುರಗಟ್ಟಿ ಕೋಯಿಲರಗಟ್ಟಿ>ಮೈಲಾರ(?)	ಮೈಲಾರ ಕ್ರಿ.ಶ. 1282	ಯಾದವದೊರೆ ವೀರ-ರಾಮಚಂದ್ರ

ಹೊಸಪೇಟೆ ತಾಲೂಕು:

1. ಹಂಪದೇವಹಳ್ಳಿ>ಹಂಪದೇವನಹಳ್ಳಿ	ಹಂಪದೇವನಹಳ್ಳಿ ಕ್ರಿ.ಶ. 1511	ಕೃಷ್ಣರಾಯ ಮಹಾರಾಯ
2. ಹೊಸಊರು>ಹೊಸಪೇಟೆ	ಮುದ್ದಾಪುರ ಕ್ರಿ.ಶ. 1513	"
3. ಕಂನಕಿಯಕಟೆ>ಕನ್ನಕಟ್ಟೆ	ಹಂಪಿ ಕ್ರಿ.ಶ. 1513	"
4. ಮೆಟರೆ>ಮೆಟ್ರಿ		
5. ನಾಗಲದೇವಿಪುರ>ನಾಗಲಾಪುರ> ನಾಗೇನಹಳ್ಳಿ	ನಾಗೇನಹಳ್ಳಿ ಕ್ರಿ.ಶ. 1516	ಕೃಷ್ಣದೇವಮಹಾರಾಯ
6. ಕುರಿಯಕುಪ್ಪೆ>ಕುರೇಕುಪ್ಪೆ	ಕುರೇಕುಪ್ಪೆ ಕ್ರಿ.ಶ. 1523	ಕೃಷ್ಣರಾಯಮಹಾರಾಯ
7. ತಿರುಮಲದೇವಿ-ಅಮ್ಮನಪಟ್ಟಣ> ಹೊಸಪೇಟೆ<ತಿರುಮಲಾದೇವಿಪಟ್ಟಣ	ಹೊಸಪೇಟೆ ಕ್ರಿ.ಶ. 1531	ಅಚ್ಯುತದೇವಮಹಾರಾಯ
8. ಚಂನಹಟಿ>ಚಿಲನಟ್ಟಿ	ಹಂಪಿ ಕ್ರಿ.ಶ. 1534	"
9. ಚೋರಮನೂರು>ಚೋರನೂರು		

ಕೂಡ್ಲಿಗಿ ತಾಲೂಕು:

1. ಮೂಳ್ತಗೆ>ಮುತ್ತಗೆ>ಮುತ್ತಿಗಿ ಶ್ರೀಮದರಹಟ>ಹಾರಕನಾಳು ನಿಲ್ಲಜಿಗೆ>ನಿಲುವಂಜಿ	ಹಾರಕನಾಳ ಕ್ರಿ.ಶ. 1066	ಚಾಳುಕ್ಯದೊರೆ ತ್ರೈಲೋಕ್ಯಮಲ್ಲದೇವ
2. ಅಮ್ಮರಳೆ>ಅಂಬಳಿ	ಅಂಬಳಿ ಕ್ರಿ.ಶ. 1083	"
3. ಹನಸೆ>ಡನ್ನಿ	ಹನ್ನಿ ಕ್ರಿ.ಶ. 111	ಚಾಳುಕ್ಯದೊರೆ ತ್ರಿಭುವನಮಲ್ಲದೇವ
4. ಯಳಿಹ>ಹ್ಯಾಳ್ಯ	ಹ್ಯಾಳ್ಯ ಕ್ರಿ.ಶ. 1154	ಚಾಳುಕ್ಯದೊರೆ ತ್ರಿಭುವನಮಲ್ಲದೇವ
5. ಮಾವಿನಮಾಗೆ>ಮಾವಿನಮಗ್ಗಿ	ಕೊಟ್ಟೂರು ಕ್ರಿ.ಶ. 1221	ಹೊಯ್ಸಳದೊರೆ ವೀರನರಸಿಂಹ
6. ಬೆಂಣಿಕಲ್ಲು>ಬೆಣಕಲ್	ಬೆಣಕಲ್ಲು ಕ್ರಿ.ಶ. 1226	ಹೊಯ್ಸಳದೊರೆ ವೀರನರಸಿಂಹ
7. ಮಾನಿಲ>ಮಾಲ್ವಿ		
8. ಹೂಲಕುಂಟ>ಹುಲಕುಂಟೆ	ಹುಲಿಕುಂಟೆ ಕ್ರಿ.ಶ. 1556	ಸದಾಶಿವರಾಯ

ಸಂಡೂರು ತಾಲೂಕು:

1. ಕೆರೆಯಪಳ್ಳಿ>ತಾರಾನಗರ(?)	ಕುಮಾರಸ್ವಾಮಿ ಬೆಟ್ಟ, ಸಂಡೂರು ಕ್ರಿ.ಶ. 1206	ಹೊಯ್ಸಳದೊಗೆ ವೀರಬಲ್ಲಾಳ(II)

ಸಿರುಗುಪ್ಪ ತಾಲ್ಲೂಕು:

1. ಸಿರಿಗುಪ್ಪೆ>ಸಿರಿಗುಂಪೆ	ಸಿರುಗುಪ್ಪ ಕಾಲ ಸ್ಪಷ್ಟವಾಗಿಲ್ಲ	ಚಾಳುಕ್ಯದೊರೆ ತ್ರಿಭುವನಮಲ್ಲದೇವ

೪.೮(೨) ಸಮಕಾಲೀನ ದಾಖಲೆಗಳು:

ಬಳ್ಳಾರಿ ಜಿಲ್ಲೆಯ ಒಟ್ಟು ಎಂಟು ತಾಲೂಕುಗಳಲ್ಲಿ ಬಳ್ಳಾರಿ ತಾಲೂಕು ಮತ್ತು ಸಿರಗುಪ್ಪ ತಾಲೂಕುಗಳ ಕೆಲವು ಗ್ರಾಮಗಳು ನೆರೆಯ ಆಂಧ್ರಪ್ರದೇಶದ ಗಡಿಭಾಗದಲ್ಲಿವೆ. ಈ ಗ್ರಾಮಗಳ ದಿನಬಳಕೆಯ ವ್ಯಾವಹಾರಿಕ ಭಾಷೆಯಲ್ಲೇನೂ ದ್ವಿಭಾಷಿಕತೆ ಕಂಡುಬರುವುದಿಲ್ಲ. ಕನ್ನಡ ಭಾಷೆಯ ಪರಿಶುದ್ಧತೆಯನ್ನು ಅನಪೇಕ್ಷಿತವಾಗಿಯೆಂಬಂತೆ ಇಲ್ಲಿಯ ಜನ

ಉಳಿಸಿಕೊಂಡಿದ್ದಾರೆ. ಈ ಮಾತು ಸಿರುಗುಪ್ಪ ತಾಲೂಕಿನ ಗಡಿಭಾಗದ ಗ್ರಾಮಗಳಿಗೆ ಅಕ್ಷರಶಃ ಅನ್ವಯವಾಗುತ್ತದೆ. ಆದರೆ ಬಳ್ಳಾರಿ ತಾಲೂಕಿನ ಗಡಿಭಾಗದ ಗ್ರಾಮಗಳ ಜನರಿಗೆ ತೆಲುಗು ಭಾಷೆಯ ಪರಿಚಯವಿದೆಯಷ್ಟೇ ಹೊರತು, ಆ ಭಾಷೆಯನ್ನು ಅವರು ನಿತ್ಯಜೀವನದಲ್ಲಿ ಬಳಸಲಾರರು. ತೆಲುಗನ್ನು ಸ್ವಲ್ಪಮಟ್ಟಿಗೆ ಅರ್ಥಮಾಡಿಕೊಳ್ಳುವವರೇ ಹೊರತು ಅಷ್ಟಾಗಿ ಮಾತಾಡಲೂ ಬಾರದು. ವಾಸ್ತವತೆ ಹೀಗಿರುವುದರಿಂದ ದ್ವಿಭಾಷಾ ವಲಯದಲ್ಲಿದ್ದರೂ ಇಲ್ಲಿಯ ಸ್ಥಳನಾಮಗಳ ನಿಶ್ಚಿತರೂಪಗಳನ್ನು ಅರಿಯಲು ತೊಂದರೆಯಾಗದು. ಕೆಲವು ಸ್ಥಳನಾಮಗಳಲ್ಲಿ ತೆಲುಗು ಭಾಷೆಯ ಶಬ್ದಗಳು (ಘಟಕಗಳು) ಕಾಣಿಸಿಕೊಂಡಿವೆ. ಇವುಗಳ ಸಂಖ್ಯೆಯೂ ಅಷ್ಟೊಂದು ಹೆಚ್ಚಾಗಿಲ್ಲ. ಸ್ಥಳನಾಮಗಳು ದಾಖಲಾತಿಗಳಲ್ಲಿ ಭಿನ್ನ ಭಿನ್ನವಾಗಿರುವ ಉದಾಹರಣೆಗಳೂ ವಿರಳವೆಂದೇ ಹೇಳಬೇಕು. ಇನ್ನು ಸ್ಥಳನಾಮಗಳ ಉಚ್ಚಾರಣೆ ಸಾರ್ವತ್ರಿಕವಾಗಿ ಒಂದೇ ರೀತಿಯಲ್ಲಿ ಕಂಡುಬರುತ್ತದೆ. ಅದಾಗ್ಯೂ ಅಧ್ಯಯನದ ದೃಷ್ಟಿಯಿಂದ ನಿಖರತೆಗಾಗಿ ಕೆಲವು ದಾಖಲೆಗಳನ್ನು ಪರಿಶೀಲಿಸಲಾಗಿದೆ. ಜಿಲ್ಲೆಯ ಸ್ಥಳನಾಮಗಳ ಒಟ್ಟು ಸಂಖ್ಯೆಯಲ್ಲೂ ಅಷ್ಟಾಗಿ ಗೊಂದಲವಿಲ್ಲ. ದಾಖಲಾತಿಯಾದ ಸ್ಥಳವು ಯಾವ ಪರಿಸರದಲ್ಲಿದೆಯೆಂಬುದನ್ನು ತಿಳಿಯಲು ಸುಲಬಸಾಧ್ಯವಿದೆಯಾದರೂ ಭೂಪಟಗಳಿಂದ ವರ್ತಮಾನ ದಾಖಲೆಗಳನ್ನು ಬಳಸಿಕೊಂಡಿದೆ. ಇನ್ನುಳಿದ ಆರು ತಾಲೂಕುಗಳನ್ನು ಅನ್ವಯಿಸಿಕೊಂಡು ಹೇಳುವುದಾದರೆ ಒಟ್ಟು ಜಿಲ್ಲೆಯ ಎಲ್ಲ ಸ್ಥಳನಾಮಗಳ ಪೂರ್ಣಗ್ರಹಿಕೆಗೆ ಐದು ವಿವಿಧ ಮೂಲಗಳಿಂದ ವರ್ತಮಾನ ದಾಖಲಾತಿಗಳನ್ನು ಸಂಗ್ರಹಿಸಲಾಗಿದ್ದು ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

೧. ಕಂದಾಯ ಇಲಾಖೆಯ ಗ್ರಾಮಗಳ ಪಟ್ಟಿ

೨. ಜನಗಣತಿ ವರದಿಯಲ್ಲಿ ಅಂಕಿಅಂಶ ಮತ್ತು ಸ್ಥಳನಾಮಗಳ ಪಟ್ಟಿ

೩. ಚುನಾವಣಾ ಕ್ಷೇತ್ರಗಳಲ್ಲಿಯ ಸ್ಥಳನಾಮಗಳ ಪಟ್ಟಿ

೪. ಲೋಕೋಪಯೋಗಿ ಇಲಾಖೆಯ ರಸ್ತೆಸೂಚಕ ನಕಾಶ

೫. ಜನಬಳಕೆಯ ಮೌಖಿಕ ಸ್ಥಳನಾಮ ಉಚ್ಛಾರಗಳು.

೪.೮(೩) ಕಂದಾಯ ಇಲಾಖೆಯ ದಾಖಲೆಗಳು (Record of Revenue Department)

ಬಳ್ಳಾರಿ ಜಿಲ್ಲೆಯ ೧೯೬೬ ಜನವರಿ ೩೧ರ ಅವಧಿಯವರೆಗೆ ಬೆಂಗಳೂರು ಕಂದಾಯ ವಿಭಾಗಕ್ಕೊಳಪಟ್ಟಿತ್ತು. ಇದರ ನಂತರದಲ್ಲಿ ಬೆಂಗಳೂರು ವಿಭಾಗದಿಂದ ಗುಲ್ಬರ್ಗಾ ವಿಭಾಗಕ್ಕೆ ಸೇರಿಸಲ್ಪಟ್ಟಿತು. ಜಿಲ್ಲೆಯನ್ನು ಆಡಳಿತಾತ್ಮಕ ಅನುಕೂಲದ ದೃಷ್ಟಿಯಿಂದ ಬಳ್ಳಾರಿ ಉಪವಿಭಾಗ

ಮತ್ತು ಹೊಸಪೇಟೆ ಉಪವಿಭಾಗಗಳನ್ನಾಗಿ ಮಾಡಲಾಯಿತು. ಇದರ ಮೇರೆಗೆ ಬಳ್ಳಾರಿ ಉಪವಿಭಾಗದಲ್ಲಿ ಮೂರು ತಾಲೂಕುಗಳು ಸೇರ್ಪಡೆಯಾಗಿವೆ. ೧. ಬಳ್ಳಾರಿ, ೨. ಸಿರುಗುಪ್ಪೆ ಮತ್ತು ೩. ಸಂಡೂರು. ಬಳ್ಳಾರಿ ತಾಲೂಕಿನಲ್ಲಿ ಬಳ್ಳಾರಿ, ರೂಪನಗುಡಿ, ಮೋಕಾ, ಕೊಳೂರು ಮತ್ತು ಕುರುಗೋಡು ಹೋಬಳಿಗಳು ಒಟ್ಟು ೧೦೪ ಹಳ್ಳಿಗಳು, ಸಿರುಗುಪ್ಪ ತಲೂಕಿನಲ್ಲಿ ಸಿರುಗುಪ್ಪ ಹಚ್ಚೊಳ್ಳಿ, ತೆಕ್ಕಲಕೋಟೆ ಮತ್ತು ಕರೂರು ಹೋಬಳಿಗಳು ಒಟ್ಟು ೮೬ ಹಳ್ಳಿಗಳು, ಸಂಡೂರು ತಾಲುಖಿನಲ್ಲಿ ಸಂಡೂರು, ಚೋರನೂರು ಮತ್ತು ತೋರಣಗಲ್ಲು ಹೋಬಳಿಗಳು ಒಟ್ಟು ೮೫ ಹಳ್ಳಿಗಳು ಬರುತ್ತವೆ. ಹೊಸಪೇಟೆ ಉಪವಿಭಾಗದಲ್ಲಿ ಐದು ತಾಲೂಕುಗಳು ಸೇರ್ಪಡೆಯಾಗಿದ್ದು ಅವು ೧. ಹೊಸಪೇಟೆ, ೨. ಹಗರಿಬೊಮ್ಮನಹಳ್ಳಿ, ೩. ಕೂಡ್ಲಿಗಿ, ೪. ಹಡಗಲಿ, ೫. ಹರಪನಹಳ್ಳಿ.

ಹೊಸಪೇಟೆ ತಾಲೂಕಿನಲ್ಲಿ ಹೊಸಪೇಟೆ, ಮರಿಯಮ್ಮನಹಳ್ಳಿ, ಕಾಮಲಾಪುರ, ಕಂಪ್ಲಿ ಹೋಬಳಿಗಳಿದ್ದು, ಒಟ್ಟು ೭೮ ಹಳ್ಳಿಗಳಿವೆ. ಹಗರಿಬೊಮ್ಮನಹಳ್ಳಿ ತಲೂಕಿನಲ್ಲಿ ಮಲ್ಲಾಪುರ, ಹಂಪಸಾಗರ ಹೋಬಳಿಗಳಿದ್ದು ೩೧ ಹಳ್ಳಿಗಳು ಬರುತ್ತವೆ. ಕೂಡ್ಲಿಗಿ ತಾಲೂಕಿನಲ್ಲಿ ಕೂಡ್ಲಿಗಿ, ಕೊಟ್ಟೂರು, ಹೊಸಹಳ್ಳಿ ಮತ್ತು ಗುಡೇಕೋಟೆ ಹೋಬಳಿಗಳಿದ್ದು ಒಟ್ಟು ೯೮ ಹಳ್ಳಿಗಳಿವೆ. ಹಡಗಲಿ ತಾಲೂಕಿನಲ್ಲಿ ಹಿರೇಗಡಗಲಿ, ಹಡಗಲಿ, ಇಟ್ಟಿಗಿ ಹೋಬಳಿಗಳಿದ್ದು ಒಟ್ಟು ೭೬ ಹಳ್ಳಿಗಳಿವೆ. ಜಿಲ್ಲೆಯಲ್ಲಿ ಹೀಗೆ ಒಟ್ಟಾರೆ ಮೂವತ್ತು ಹೋಬಳಿಗಳಲ್ಲಿ ೬೨೮ ಹಳ್ಳಿಗಳು ಬರುತ್ತವೆ.

೪.೮(೪) ಜನಗಣತಿ ವರದಿಯ ದಾಖಲೆಗಳು: (Record of Census Report)

ಕೇಂದ್ರ ಸರಕಾರದ ಒಂದು ವ್ಯವಸ್ಥಿತ ಆಡಳಿತ ಶಾಖೆಯಿಂದ ಭಾರತದಲ್ಲಿ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ಕಾರ್ಯ ನಡೆಯುತ್ತದೆ. ತಾನು ಕೈಗೊಂಡ ಜನಗಣತಿಯ ಅಂಶಗಳನ್ನು ಅದು ಪ್ರಕಟಣೆ ಮಾಡುತ್ತದೆ. ಕ್ರಿ.ಶ. ೧೮೭೧ರಿಂದ ಜನಗಣತಿ ಪ್ರಾರಂಭವಾಗಿದ್ದು ಇದುತನಕ ಹದಿಮೂರು ಜನಗಣತಿ ವರದಿಗಳು ಪ್ರಕಟಗೊಂಡಿವೆ. ಭಾಷಾವಾರು ಪ್ರಾಂತ ರಚನೆಯ ನಂತರದಲ್ಲಿ ನಾಲ್ಕು ಬಾರಿಜನಗಣತಿ ಕಾರ್ಯ ನಡೆದಿದ್ದು ಈ ನಾಲ್ಕೂ ಜನಗಣತಿ ವರದಿಗಳಲ್ಲಿ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು ಹೋಬಳಿವಾರ ಕ್ರಮದಲ್ಲಿ ದಾಖಲಾಗಿವೆ. ಈ ವರದಿಗಳಲ್ಲಿ ಉಲ್ಲೇಖಗೊಂಡಿರುವ ಜಿಲ್ಲೆಯ ಜನಸಂಖ್ಯೆಯ ಅಂಕಿ ಅಂಶಗಳನ್ನು ಈ ಮುಂದೆ ಕಾಣಿಸಲಾಗಿದೆ.

೧೯೬೧ ರಿಂದ ೧೯೯೧ರವರೆಗಿನ ಬಳ್ಳಾರಿ ಜಿಲ್ಲೆಯ ಜನಗಣತಿ (ತಾಲೂಕಾವಾರು) ಅಂಕಿಅಂಶಗಳು

ಜನಗಣತಿ ವರ್ಷ	ಸಿರುಗುಪ್ಪ	ಬಳ್ಳಾರಿ	ಹೊಸಪೇಟೆ	ಸಂಡೂರು	ಹ.ಬೊ.ಹಳ್ಳಿ	ಹಡಗಲಿ	ಕೂಡ್ಲಿಗಿ	ಹರಪನಹಳ್ಳಿ
೧೯೬೧	೮೫,೭೪೭	೨,೦೨,೮೩೭	೧,೫೩,೭೧೩	೬೭,೫೯೫	೨೮,೫೫೯	೧,೧೦,೩೩೪	೧,೨೮,೭೦೫	೧,೩೫,೯೭೧
೧೯೭೧	೧,೧೦,೧೦೩	೨,೬೫,೨೯೪	೧,೮೭,೮೩೦	೯೨,೯೦೪	೩೫,೯೩೩	೧,೨೭,೪೫೨	೧,೪೫,೭೧೪	೧,೫೭,೪೫೬
೧೯೮೧	೧,೪೮,೯೨೯	೩,೮೬,೦೧೪	೨,೬೪,೦೭೧	೧,೨೬,೬೫೮	೯೮,೮೧೪	೧,೧೫,೪೫೯	೧,೮೩,೬೦೧	೧,೬೫,೬೭೯
೧೯೯೧	೧,೮೮,೫೫೦	೪,೯೫,೨೮೧	೩,೧೨,೭೮೮	೧,೫೬,೧೮೮	೧,೩೪,೬೮೭	೧,೪೬,೭೭೮	೨,೩೩,೪೦೫	೨,೧೯,೦೩೭

೪.೮(೫) ಚುನಾವಣಾ ಕ್ಷೇತ್ರಗಳ ಸ್ಥಳನಾಮಪಟ್ಟಿ: (List of villages in the Electoral Constituencies)

ಸಾರ್ವತ್ರಿಕ ಚುನಾವಣೆಗಳ ಅಂಕಿಅಂಶಗಳನ್ನು ಸ್ಥಳನಾಮಾಧ್ಯಯನದಲ್ಲಿ ಬಳಸಿಕೊಳ್ಳುವುದು ತುಂಬಾ ಉಪಯುಕ್ತವಾಗುತ್ತದೆ. ಇತ್ತೀಚಿನ ೧೯೮೯ರಲ್ಲಿ ನಡೆದ ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆಯ ಅಂಕಿಅಂಶಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇದರ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು ಒಂಭತ್ತು ವಿಧಾನಸಭಾ ಚುನಾವಣಾ ಕ್ಷೇತ್ರಗಳಿವೆ. ಇಲ್ಲಿನ ಸ್ಥಳನಾಮಗಳು ಮತಗಟಗ್ಟೆಗಳ ಅನುಕ್ರಮದಲ್ಲಿ ದಾಖಲೆಗೊಂಡಿವೆ. ಸಿರುಗುಪ್ಪ ಕ್ಷೇತ್ರದಲ್ಲಿ–೭೦, ಬಳ್ಳಾರಿ ಕ್ಷೇತ್ರದಲ್ಲಿ ೮೫, ಕುರುಗೋಡು ಕ್ಷೇತ್ರದಲ್ಲಿ ೪೬, ಹೊಸಪೇಟೆ ಕ್ಷೇತ್ರದಲ್ಲಿ ೭೦, ಸಂಡೂರು ಕ್ಷೇತ್ರದಲ್ಲಿ ೭೦, ಕೂಡ್ಲಿಗಿ ಕ್ಷೇತ್ರದಲ್ಲಿ ೭೨, ಕೊಟ್ಟೂರು ಕ್ಷೇತ್ರದಲ್ಲಿ ೭೦, ಹರಪನಹಳ್ಳಿ ಕ್ಷೇತ್ರದಲ್ಲಿ ೭೫, ಹಡಗಲಿ ಕ್ಷೇತ್ರದಲ್ಲಿ ೭೦ ಗ್ರಾಮಗಳು ಉಲ್ಲೇಖಗೊಂಡಿವೆ. ಇದರಲ್ಲಿ ಕ್ಯಾಂಪು, ತಾಂಡೆಗಳು ಮುಂತಾದ ವಸತಿಗಳನ್ನು ಹೊರತುಪಡಿಸಿ ಒಟ್ಟು ೬೨೮ ಸ್ಥಳನಾಮಗಳನ್ನು ಕಾಣುತ್ತೇವೆ. ನಿರ್ವಸಿತ ಗ್ರಾಮಗಳನ್ನು 'ಬೇಚರಾಕ್' ಎಂದು ಕಾಣಿಸಲಾಗಿದೆ. ಉಳಿದ ವಿಷಯಗಳು ಸ್ಥಳನಾಮಾಧ್ಯಯನಕ್ಕೆ ಹೆಚ್ಚಿನ ಉಪಯುಕ್ತತೆಯಿಲ್ಲ

ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳನ್ನು ಮತ್ತು ಅವು ಸ್ಥಿತವಾಗಿರುವ ಭೌಗೋಳಿಕ ಪರಿಸರಗಳನ್ನು ಗುರುತಿಸುವುದಕ್ಕಾಗಿ ಕೆಳಗಿನ ಆಕರವನ್ನು ಬಳಸಿಕೊಳ್ಳಲಾಗಿದೆ.

೪.೮(೬) ಲೋಕೋಪಯೋಗಿ ಇಲಾಖೆಯ ನಕ್ಷೆ: (Road Map of P.W.D. Department)

ಬಳ್ಳಾರಿ ಜಿಲ್ಲೆಯ ಲೋಕೋಪಯೋಗಿ ಇಲಾಖೆಯು ಒಂದು ಪ್ರತ್ಯೇಕ ವಿಭಾಗವಾಗಿದ್ದು ಇದರಲ್ಲಿ ತಾಲೂಕುವಾರು ಉಪವಿಭಾಗಗಳಿವೆ. ಆಯಾ ಉಪವಿಭಾಗದಲ್ಲಿ ರೂಪಿಸಲಾದ ರಸ್ತೆಗಳನ್ನು ಸೂಚಿಸುವಂಥ ಪ್ರತ್ಯೇಕ ನಕಾಶೆಗಳನ್ನು ಇವುಗಳು ಸಿದ್ಧಪಡಿಸಿದ್ದು ಈ ಒಂಭತ್ತು ನಕಾಶೆಗಳಲ್ಲಿ ಕಾಣಿಸಲಾದ ಒಟ್ಟು ಸ್ಥಳನಾಮಗಳ ಸಂಖ್ಯೆ ಈ ನಕಾಶೆಗಳು ಕ್ಷೇತ್ರಕಾರ್ಯಕ್ಕಾಗಿ ರಸ್ತೆಗಳನ್ನು ಆಯ್ದುಕೊಳ್ಳುವುದಕ್ಕೆ ಹೆಚ್ಚು ಉಪಯುಕ್ತವಾಗಿವೆ. ಕೆಲವು ದಾಖಲಾತಿಗಳಲ್ಲಿ ಕಾಣದ ಹೆಚ್ಚಿನ ಸ್ಥಳನಾಮಗಳು ಮತ್ತು ಅವುಗಳ ಸ್ಥಾನಗಳನ್ನು ಇವು ತೋರಿಸುತ್ತವೆ.

೪.೮(೭) ಬಳ್ಳಾರಿ ಜಿಲ್ಲೆಯ ಸ್ಥಳನಾಮ ಘಟಕಗಳ ಸಂಕ್ಷಿಪ್ತ ಶಬ್ದಕೋಶ

ಅ

ಅಕ್ಕ — ವ್ಯಕ್ತಿ ಸಂಬಂಧಿ (ಸ್ತ್ರೀ) ವಾಚಕ, ಹಿರಿಯ ಸೋದರಿ
ಉದಾ: ಅಕ್ಕತಂಗೇರಹಾಳ

ಅಂಕ — ಪ್ರಸಿದ್ಧ (ಒಂದು ಸ್ಥಳಸೂಚಕ) ಸಂ.ಕ.ನಿ
ಉದಾ: ಅಂಕಮ್ಮನಹಳ್ಳಿ-(ಅಂಕ+ಅಮ್ಮನ+ಹಳ್ಳಿ)
ಒಬ್ಬ ಪ್ರಸಿದ್ಧ ಅಮ್ಮನ (ದೇವತೆಯ) ಬಗೆಗಿನ ಸ್ಥಳ.

ಅಗಸ — (ವ್ಯಕ್ತಿವಾಚಕ) ಮಡಿವಾಳ ಸಂ.ಕ.ನಿ.
ಉದಾ: ಅಗಸನೂರು (ಅಗಸನ+ಊರು)

ಅಗ್ರಹಾರ — (ವಾಸದನೆಲೆ) ಬ್ರಾಹ್ಮಣರು ವಾಸಿಸುವ ನೆಲೆ, ಆಗರ ಎಂದೂ ಶಬ್ದವುಂಟು. ಸ್ಥಳ ಎಂಬರ್ಥವಿದೆ.
ಉದಾ: ಅಗ್ರಹಾರ-ಇದಕ್ಕೆ ಸಾಕಷ್ಟು ಉದಾಹರಣೆಗಳಿವೆ.

ಅಡವಿ — (ಸಸ್ಯವಾಚಕ) ಕಾಡು, ಅರಣ್ಯ
ಉದಾ: ಅಡವಿಹಳ್ಳಿ, ಅಡವಿ ಮಲ್ಲನಕೆರೆ

ಅಣ — (ಶಿಲಾವಾಚಕ) ಎತ್ತರವಾದ ಭಾಗ, ಏರಿ (ಡಿ.ಇ.ಡಿ ೯೬)
ಉದಾ: ಅಣಜಿ, ಅಣಜಿಗೇರಿ, ಅಣಿ ಎಂದುದರ ಇನ್ನೊಂದು ರೂಪ-ಆಣಿ ಎಂದರೆ ಜಲಶಯದ ಅಣಿಕಟ್ಟು, ಬೆಟ್ಟದ ತಪ್ಪಲು (ಸಂ.ಕ.ನಿ.)

ಅಣಿ — ಸಜ್ಜಾಗು, ರಜಿಸು,

	ಉದಾ: ಒತ್ತುಮುರುವಣಿ
ಅಂದ್ರ	(ವ್ಯಕ್ತಿ ಯಾ ವಸ್ತು ಸೂಚಕ) ತೆಲುಗು–ಅಂದರು. ಡಿ.ಇ.ಡಿ ನಂ.೧) ಬಹುಸಂಖ್ಯೆಯ ಜನ ಎಲ್ಲರೂ ಉದಾ: ಅಂದ್ರಾಳು (ಅಂದರು+ಅಳು)
ಅನಂತ	(ವ್ಯಕ್ತಿವಾಚಕ ಪುರುಷ) ಆರಾಧ್ಯದೈವದ ಹೆಸರಾಗಿರಲೂಬಹುದು. ಉದಾ: ಅನಂತಹಳ್ಳಿ, ಅನಂತಶಯನಗುಡಿ
ಅಪ್ಪ	(ವ್ಯಕ್ತಿ ವಾಚಕ) ತಂದೆ ಉದಾ: ಅಪ್ಪೇನಹಳ್ಳಿ, ಅಪ್ಪಲಪುರ (ಅಪ್ಪ+ನ (ಪ್ರತ್ಯಯ)+ಹಳ್ಳಿ) ಅಪ್ಪ+ನ?–ಪುರ
ಅಬ್ಬಿ	ಅಬ್ಧಿ(ಸಂ) – ಸಮುದ್ರ ಉದಾ: ಮಕರಬ್ಬಿ, ಬೀರಬ್ಬಿ
ಅಂಬ್ಲಿ	ಅಂಬಲ? – ಹಳ್ಳಿಗಳ ನ್ಯಾಯ ಪಂಚಾಯ್ತಿ ಸ್ಥಳ, ಚಾವಡಿ, ಅಂಬಲಿ–(ಸಂ.ಕ.ನಿ) ಉದಾ: ಅಂಬ್ಲಿ
ಅಮರ ಗ್ರಾಮ	(ಧಾರ್ಮಿಕ ಭಾವವಾಚಿ (ಅಮರ–ಡಿಇಡಿ ೧೯೩೪) ಇನಾಮಾಗಿ ಕೊಟ್ಟ (ಸಂ.ಕ.ನಿ) ಉದಾ: ಅಮರಾವತಿ, ಅಮರಾಪುರ
ಅಮ್ಮ	(–ವ್ಯಕ್ತಿಯಾ ದೇವತ ಸಂಬಂಧಿ ವಾಚಕ) (ಡಿಇಡಿ ನಂ. ೧೫೪) ಗ್ರಾಮದೇವತೆ ಉದಾ: ಅಮ್ಮನಕೇರಿ
ಅಯ್ಯ	–(ವ್ಯಕ್ತಿ ವಾಚಕ) ಒಡೆಯ, ತಂದೆ, ಗುರು (ಡಿಇಡಿ ೧೬೩) ಲಿಂಗಾಯತರ ಧಾರ್ಮಿಕ ಗುರು ಉದಾ: ಅಯ್ಯನಹಳ್ಳಿ.
ಅರಳಿ	(ವೃಕ್ಷವಾಚಕ) ಅಶ್ವತ್ಥವೃಕ್ಷ ಉದಾ: ಅರಳಿಹಳ್ಳಿ, ಅರಳಿಗನೂರು.
ಅರಸಿ	(ಅರಸನ ಹೆಂಡತಿ, ರಾಣಿ) ಉದಾ: ಅರಸಿಕೆರೆ
ಅರಸ	ರಾಜ, ಅಧಿಪತಿ

	ಉದಾ: ಅರಸನಹಾಳು (ಅರಸನಹಾಳು ಪಾಳು ಪಾಳ್ಯ)
ಅಲ್ಲಿ	(ಪುಷ್ಪವಾಚಿ) ನೀರಿನಲ್ಲಿ ಬೆಳೆವ ಕಮಲದ ಜಾತಿಯ ಹೂವು. (ಡಿಇಡಿ ೨೧೭)
	ಉದಾ: ಅಲ್ಲಿಪುರ–ಕಮಲಪುರ ಎಂಬಂತೆ.
ಅಲ	ಕಷ್ಟ, ತೊಂದರೆ, ನೋವು, ದುಃಖ (ಕ.ತೆ.ತ ಡಿಇಡಿ ೨೦೦)
	ಉದಾ: ಅಲಗಿಲವಾಡ
ಅಲ(ಳಿ)	ಚೇಳು, ತುಂಬಿ, ಭ್ರಮರ
	ಉದಾ: ನೋವಲ(ಳಿ)
ಅಲಬು ಸಸ್ಯ	ತೊಳೆ, ಸ್ವಚ್ಛಗೊಳಿಸು, ಚಿಕ್ಕದಾಗಿ ಬೆಳೆಯುವ ಯಾವುದೇ ಅನುಪಯುಕ್ತ (ಡಿಇಡಿ ೨೦೭, ೨೦೮)
	ಉದಾ: ಅಲಬನೂರು
ಅಸು	ಅವಸರ, ಬೇಗನೆ (ಅಸುಂಬು–ಡಿಇಡಿ ೩೯) ಚಲಿಸು, ತಲ್ಲಣ
	ಉದಾ: ಅಸುಂಡಿ

ಆ

ಆನಂದ	(ಭಾವನಾಮ) ಸಂತೋಷ, ಖುಷಿ (ವ್ಯಕ್ತಿವಾಚಕ)
	ಉದಾ: ಆನಂದದೇವನಹಳ್ಳಿ
ಆನೆ	ಗಜ, ಹಸ್ತಿ, ದಂತಿ (ಪ್ರಾಣಿವಾಚಕ)
	ಉದಾ: ಆನೇಕಲ್
ಆಲ	ಆಲದಮರ (ಸಸ್ಯವಾಚಕ) ಡಿಇಡಿ–೩೨೪
	ಉದಾ: ಆಲದಗೇರಿ, ಆಲದಹಳ್ಳಿ
ಆವು	(ಪ್ರಾಣಿವಾಚಕ) ಹಸು, (ಡಿಇಡಿ–೨೮೩) (ಸಂ.ಕ.ನಿ)
	ಉದಾ: ಆವಿನಮಡುಗು
ಆಳ್	ಆಳು, ಮನುಷ್ಯ, ಸೇವಕ, ವಯಸ್ಕ (ಡಿಇಡಿ ೩೪೨)
	ಉದಾ: ಆಂದ್ರಾಳ

ಇ

ಇಟ್ಟ	(ಪುರುಷ–ವ್ಯಕ್ತಿವಾಚಿ)–ಬಹುಶಃ ವಿಠಲ ಶಬ್ದದ ಅಪಭ್ರಂಶ
	ಉದಾ: ಇಟ್ಟಿಗಿ, ಇಟ್ಟಗುಡಿ, ಇಟ್ಟಗಿಹಾಳ
ಇಮದ	ಅಹಮದ ಎಂಬುದರ ಸಮೆದ ರೂಪ

ಉದಾ: ಇಮದಪುರ

ಇಬ್ರಾಹಿಂ (ವ್ಯಕ್ತಿವಾಚಕ)

ಉದಾ: ಇಬ್ರಾಹಿಮಪುರ

ಈ

ಈಶ್ವರ ಶಿವ

ಉದಾ: ಪೃಥೇಶ್ವರ

ಉ

ಉಡಿ ಮಡಿಲು, ಮೊಳಕೆ

ಉದಾ: ನೆಲ್ಲುಡಿ

ಉಂಡಿ<ಉಂಡೆ ದುಂಡನೆಯ ಆಕಾರದ

ಉದಾ: ಹಕ್ಕುಂಡಿ (ಹಕ್ಕೆ+ಉಂಡಿ)

ಉತ ಶ್ರೇಷ್ಠ, ಮೇಲಾದ, ಉತ್ತಮ

ಉದಾ: ಉಜ್ಜಿನಿ (ಉತ+ಜಿನ-ಉಜ್ಜಿನ)

(ಶ್ರೇಷ್ಠವಾದ ಜೈನಧರ್ಮ ಎಂಬರ್ಥ ಸೂಚಿಸುವ)

ಉದ (ಬಹುಶಃ ಉದಕ ಆಗಿರಬೇಕು) ನೀರು, ಜಲ

ಉದಾ: ಉದಗೊಳ (ಉದ+ಕ+ಕೊಳ=ಉದಕೊಳ>ಉದಗೊಳ?)

ಉದಕಗೊಳ ಎಂಬುದು ಕಾಲಕಳೆದಂತೆ ಉದಗೊಳ ಆಗಿರಬಹುದು.

ಉಪ್ಪಾರ ಉಪ್ಪು ತಯಾರಿಸುವವನು (ಉಪ್ಪು+ಕಾರ)

ಉದಾ: ಉಪ್ಪಾರ ಹೊಳಹಳ್ಳಿ, ಉಪ್ಪಾರಗಟ್ಟ, ಉಪ್ಪಾರಹಳ್ಳಿ

ಉಬ್ಬಲಿ ಕೆಸರು (ಸಂ.ಕ.ನಿ)

ಉದಾ: ಉಬ್ಬಲಗುಂಡಿ

ಉರ ಅವಸರ, ವೇಗ (ಉರ-ವಣಿಗೆ, ಉರ-ವಣಿ) (ಡಿಇಡಿ ೫೫೯) ಎದೆ (ಸಂ.ಕ.ನಿ)

ಉದಾ: ಉರದಿ ಹಳ್ಳಿ (ಎದೆಗಾರಿಕೆಯ?)

ಉಳು ಒಂದು ನೆಲೆಯ ಒಳಪ್ರದೇಶ (ಡಿಇಡಿ ೬೦೦)

ಉದಾ: ಉಳುವತ್ತಿ

ಊ

ಊರು ಮಾನವ ವಸತಿ ಪ್ರದೇಶಗಳಿಗಿರುವ ತುಂಬಾ ಪರಿಚಿತ ಶಬ್ದ-ಹಳ್ಳಿ (ಡಿಇಡಿ ೬೪೩)

ಉದಾ: ಕರೂರು, ಬೈಲೂರು, ದಮ್ಮೂರು, ಕೊಟ್ಟೂರು, ಚೋರನೂರು, ಕೂಡ್ಲೂರು

ಊಳ ಗಟ್ಟಿಯಾಗಿ ಕೂಗು, ಊಳಿಡು, ನಾಯಿನರಿಗಳ ಕೂಗು ಡಿಇಡಿ – ೬೪೭

ಉದಾ: ಊಳೂರು

ಎ

ಎಡು ಎಡೆ, ಸ್ಥಾನ

ಉದಾ: ಕುದುರೆಡು(ವು)

ಎಮ್ಮಿ (ಪ್ರಾಣಿವಾಚಕ) ಎಮ್ಮೆ

ಉದಾ: ಎಮ್ಮಿಹಟ್ಟಿ

ಎಸ್ಯ ಸುಂದರ, ಶೋಭಾಯಮಾನ (ಡಿಇಡಿ ೬೬೫)

ಉದಾ: ಎಸ್ಯಾಪುರ

ಏಳು (ಸಂಖ್ಯಾವಾಚಕ) ಏಳರ ಸಂಖ್ಯೆ

ಉದಾ: ಏಳುಬೆಂಚೆ

ಏಣಿ ತುದಿ, ಕೊನೆ, ಎಲ್ಲೆ (ಡಿಇಡಿ ೭೫೧)

ಉದಾ: ಏಣಿಗಿ

ಒತ್ತು ಆಕ್ರಮಿಸು, ಮುತ್ತು, ನದಿಯತೀರ

ಉದಾ: ಒತ್ತು ವತ್ತುಮುರುವಣಿ

ಒರು (ತೆಲುಗು-ಬರ-ಬಾವಿಯ ಕಟ್ಟಡದಲ್ಲಿ ಬಳಕೆಗೊಂಡಿರುವ ಸುಟ್ಟ ಹೆಂಚಿನ ವರ್ತುಳ, ಬಾವಿಗೆ ಬಳಸಿ ಕೊಳವೆ)

ಡಿಇಡಿ-೬೨೧ ಈ ಸ್ಥಳನಾಮವರ್ಗಿಕ ಬಳ್ಳಾರಿ ಜಿಲ್ಲೆಯ ತೆಲುಗು ದ್ವಿಭಾಷಾವಲಯದಲ್ಲಿ ಮಾತ್ರ ಲಭ್ಯ;

ಒಂದೇ ಒಂದು ಸ್ಥಳನಾಮ ಉದಾ: ಒರುವಾಯ

ಓಜಿ<ಓಜೆ ಶ್ರೇಣಿ, ಸಾಲು, ಕ್ರಮ, ರೀತಿ, ವಶ, ಅಧೀನ

ಉದಾ: ದರೋಜಿ<ದರೋಜಿ

ಓವ (ದೈವವಾಚಿ) ತ್ರಿಮೂರ್ತಿಗಳಲ್ಲಿ ಒಬ್ಬನಾದ ಈಶ್ವರನ ಒಂದು ನಾಮ. ಉದಾ: ಓಬಳಾಪುರ

ಕ

ಕಕ್ಕು (ಕರಕು, ಕರ್ಕು, ಕಕ್ಕು, ಡಿಇಡಿ ೧೦೬೧) ಒರಟಾದ, ಒಂದೇ ಸಮನಲ್ಲದ, ಗರಗಸದ ಹಲ್ಲುಗಳ ಭಾಗ

ಉದಾ: ಕಕ್ಕುಪ್ಪಿ, (ಕಕ್ಕು+ಕುಪ್ಪಿ=ಕುಪ್ಪೆಗಿಡ)

ಬಹುಶಃ ಈ ಸ್ಥಳಗಳಲ್ಲಿ ಗರಗಸದಿಂದ ಕುಪ್ಪೆಗಿಡ ಮತ್ತು ಬೇವಿನ ಗಿಡಗಳನ್ನು ವಿಶೇಷವಾಗಿ ಕತ್ತರಿಸುತ್ತಿದ್ದಿರಬೇಕು.

ಕರ್ಚು (ಕಚ್ಚು) ತೊಳೆ, (ಡಿಇಡಿ ೧೧೫೪) ಸುಂದರ (ಡಿಇಡಿ-೯೨೦)

ತೆಲುಗು ಕರಚು-ಕಲಿ, ಅಭ್ಯಾಸಮಾಡು-ಸಂಸ್ಕೃತದ ಕಲಾದಿಂದ ಬಂದುದು (ಡಿಇಡಿ ೧೦೯೦) ಸ್ನಾನ (ಡಿ.ಇ.ಡಿ) ೧೨೩೩

ಉದಾ: ಕರ್ಚಿಗನೂರು

ಕಲಿಯುವವ ಊರು, ಅಭ್ಯಾಸ ಮಾಡುವ ಜನರ ಊರು, ಸುಂದರ ಊರು, ಪರಿಶುದ್ಧ, ನಿಷ್ಕಲ್ಮಷ ಊರು

ಇರಬಹುದು. ಸೂಕ್ಷ್ಮಬುದ್ಧಿಯ ಜನರ ಊರು ಆಗಿರಬಹುದು.

ಕಂಚಿ ಈಳೆಜಾತಿಗೆ ಸೇರಿದ ಹಣ್ಣಿನಮರ (ಸಂ.ಕ.ನಿ) (ವೃಕ್ಷವಾಚಕ)

ಉದಾ: ಕಂಚಿಕೇರಿ

ಕಟ್ಟೆ(ಕಟ್ಟು) ಅಣೆಕಟ್ಟೆ, ಕುಳಿತುಕೊಳ್ಳಲು ನಿರ್ಮಿಸಿದ ಕಲ್ಲಿನ ಜಾಗ, (ಡಿಇಡಿ ೯೬೧)

ಉದಾ: ಕನ್ನನಾಯಕನಕಟ್ಟೆ, ತೊಗರಿಕಟ್ಟೆ, ಹುಲಕಟ್ಟೆ, ಕಟ್ಟೆಬೆನ್ನೂರು

ಕಡಬ (ಐತಿಹಾಸಿಕ) ಕದಂಬ ವಂಶಕ್ಕೆ ಸಂಬಂಧಿಸಿದ್ದು.

ಉದಾ: ಕಡಬಗೇರಿ ಕದಂಬಗೇರಿ

ಕಡ್ಡಿ ಸಿಗುರು, ಹುಲ್ಲುಕಡ್ಡಿ (ಸಂ.ಕ.ನಿ)

ಉದಾ: ಕಡ್ಡಿರಾಂಪುರ (ಹುಲ್ಲುಕಡ್ಡಿ ವಿಶೇಷವಾಗಿ ಬೆಳೆವ ಸ್ಥಳ)

ಕಡೆ ಕೊನೆ, ಅಂತ್ಯದ ಆ ಭಾಗದ ಕೊನೆಯಲ್ಲಿರುವ ಸ್ಥಳ. ಗಡಿಪ್ರದೇಶ

ಉದಾ: ಕಡೆಗೊಳ್ಳ

ಕಣವಿ (ಕಣಿವೆ) ಗುಡ್ಡಬೆಟ್ಟದ ಕೆಳಗಿನ ತಪ್ಪಲುಪ್ರದೇಶ

ಉದಾ: ಕಣವಿಹಳ್ಳಿ, ಕಣಿವೆತಿಮ್ಮಾಪುರ

ಕಣ್ಣಿ ಹಗ್ಗ, ಪ್ರಾಣಿಗಳ ಕುತ್ತಿಗೆಗೆ ಕಟ್ಟುವ ಹಗ್ಗ (ಡಿಇಡಿ ೯೯೫)
ಉದಾ: ಕಣ್ಣಿಹಳ್ಳಿ, ಕಣ್ಣೀಹಳ್ಳಿ

ಕಂದ (ದೈವವಾಚಿ) ಸ್ಕಂದ, ಷಣ್ಮುಖ (ಸಂ.ಕ.ನಿ)
ಉದಾ: ಕಂದಗಲ್ಲು
ಷಣ್ಮುಖಸ್ವಾಮಿ ಇಲ್ಲಿ ಆರಾಧನೆಗೊಳ್ಳುತ್ತಿದ್ದಿರಬಹುದು.

ಕನ್ನ (ವ್ಯಕ್ತಿನಾಮ)
ಉದಾ: ಕನ್ನನಾಯಕನಕಟ್ಟೆ ಕನ್ನಾಕಟ್ಟೆ, ಕನ್ನನಾಯಕನಹಳ್ಳಿ

ಕನಕ ಚಿನ್ನ, ಹೊನ್ನು, ಒಂದು ಬಗೆಯ ಹೂವಿನ ಗಿಡ (ಸಂ.ಕ.ನಿ)
ಉದಾ: ಕನಕಪುರ
(ವ್ಯಕ್ತಿವಾಚಕವಾಗಿರಲೂಬಹುದು)

ಕಪ್ಪು ಕರ್ರನೆಯ, ಕಪ್ಪುಬಣ್ಣದ
ಉದಾ: ಕಪ್ಪಗಲ್ಲು (ಶಿಲಾವಾಚಿ ಸ್ಥಳನಾಮ)
ಕಪ್ಪುಬಣ್ಣದ ಕಲ್ಲು ವಿಶೇಷವಾಗಿ ಇರುವ ಪ್ರದೇಶ

ಕಂಬಟ (ಕಮ್ಮಟ) ಟಂಕಸಾಲೆ, ಟಕಸಾಲಿಗ (ಡಿಇಡಿ ೧೦೩೫)
ನಾಣ್ಯಗಳನ್ನು ತಯಾರಿಸುವವರ ನೆಲೆ.

ಕಮಲ (ವ್ಯಕ್ತಿವಾಚಕ–ಸ್ತ್ರೀ?)ಪುಷ್ಪವಾಚಕ
ಉದಾ: ಕಮಲಾಪುರ

ಕಮ್ಮಾರ (ವೃತ್ತಿವಾಚಕ)–ಕುಲುಮೆಗಾರ
ಉದಾ: ಕಮ್ಮಾರಚೇಡು

ಕಲ್ಲು–(ಕಲ್) (ಅಂಕಿತನಾಮಗಳಿಗೆ ಸಾಮಾನ್ಯವಾಗಿ ಸೇರ್ಪಡೆಗೊಳ್ಳುವ ಒಂದು ರೂಪ)
ಉದಾ: ಕರೇಕಲ್, ಕಪ್ಪಗಲ್, ಬೆಳಗಲ್, ಬನ್ನಿಕಲ್, ಬೆಣಕಲ್

ಕಳ್ವಿ ಕಳವೆ ಭತ್ತ, ನೆಲ್ಲು
ಉದಾ: ಕಳ್ವಿ<ಕಳವೆ

ಕಾಡು ಅರಣ್ಯ ಎಂಬುದಕ್ಕೆ ಬಳಸಲಾಗುವ ಅತಿ ಪರಿಚಿತ ಪರ್ಯಾಯವಾಚಿ
ಉದಾ: ಕಾಡತ್ತಿ (ಕಾಡು+ಅತ್ತಿ)

ಕಾರ್ತಿಕ (ದೈವವಾಚಿ) ಷಣ್ಮುಖ, ಸ್ಕಂದ
ಉದಾ: ಕಾರ್ತಿಕೇಶ್ವರ

(ಜಿಲ್ಲೆಯ ಸಂಡೂರು ತಾಲೂಕಿನ ಬೆಟ್ಟದ ಮೇಲೆ ಕಾರ್ತಿಕೇಶ್ವರ ದೇಗುಲವಿದ್ದು ಅದು ತುಂಬಾ ಪ್ರಾಚೀನ ಕಾಲದ್ದಾಗಿದೆ)

ಕ್ಯಾದಿಗಿ (ಸಸ್ಯವಾಚಿ) ಕೇದಗೆ

ಉದಾ: ಕ್ಯಾದಿಗಿಹಾಳ

ಕಾಯಕ ದುಡಿಮೆ, ಕಸುಬು (ಸಂ.ಕ.ನಿ)

ಉದಾ: ಕಾಯಕದ ಹಳ್ಳಿ

ಕಾರ್ ಮಳೆಯ ನೀರಿನಿಂದ ತೆಗೆಯುವ ಫಸಲು (ಸಂ.ಕ.ನಿ)

ಉದಾ: ಕಾರಿಗನೂರು

ಈ ಸ್ಥಳದಲ್ಲಿ ಪ್ರಾಕೃತಿಕ ಜಲಸಂಪನ್ಮೂಲಗಳಾದ ನದಿ, ಹೊಳಗಳಾಗಲೀ

ಕೃತಕ ಜಲಸಂಪನ್ಮೂಲಗಳಾಗಲೀ

ಇಲ್ಲದೆ ಮಳೆಯಾಧಾರದ ಮೇಲೆ ಫಸಲು ತೆಗೆಯುತ್ತಿದ್ದಿರಬೇಕು.

ಕ್ಯಾಸರ (ಕಾಸಾರ) ಕೆರೆ, ಕೊಳ, ಸರೋವರ, ತಾಮ್ರಹಿತ್ತಾಳೆಯ ಪಾತ್ರೆ ಮಾಡುವವನು.

ಉದಾ: ಕ್ಯಾಸರ ಕೇರಿ (ಕ್ಯಾಸರ+ಕೆರೆ ಕೇರಿ)

ಕಾಳೆ (ಕಾಳಿ) ಹೆಣ್ಣುದೇವತೆ, (ಮೃತ್ಯುದೇವತೆ-(ಸಂ.ಕ.ನಿ) ಚಾಮುಂಡಿ, ಮಹಾಕಾಳಿ ಮುಂತಾಗಿ

ಉದಾ: ಕಾಳಾಪುರ

ಕಿತ್ತ ಚಿಕ್ಕ, ಎಳೆಯ ಪ್ರಾಯದ (ಸಂ.ಕ.ನಿ)

ಪ್ರಮುಖವಲ್ಲದ, ಕನಿಷ್ಟ (ಡಿಇಡಿ ೧೩೨೬)

ಉದಾ: ಕಿತ್ತನೂರು

ಕುಂಚ (ಶಿಲಾವಾಚಕ) ಮೂಲದ್ರಾವಿಡ 'ಕುನ್ರ' ಪದದ ಪರ್ಯಾಯ ರೂಪ. ಕೊಂಚ, ಗುಂಡ, ಗುಂಜ, ಗುಂಜಿ ಇತರೆ

ರೂಪಗಳು ತುಳುಭಾಷೆಯಲ್ಲಿ ಎತ್ತರದ ಪ್ರದೇಶ, ಗಿಡಮರಗಳಿಂದಾವೃತವಾದ ಬೆಟ್ಟ ಎಂಬರ್ಥ (ತುಳುನಾಡಿನ

ಸ್ಥಳನಾಮಕೋಶ-ಪು. ೨೮) ರಘುಪತಿಕೆಮ್ತೂರು) ಕುಂಚು ಎಂಬ ಶಬ್ದಕ್ಕೆ ತಗ್ಗು, ಇಳಿಜಾರು ಎಂಬರ್ಥವಿದೆ

(ಡಿಇಡಿ ೧೪೭೨) ಎತ್ತರದ ಸ್ಥಳವಿದ್ದಲ್ಲಿ ಇಳಿಜಾರು ಇರಲೇಬೇಕು.

ಬಳ್ಳಾರಿಜಿಲ್ಲೆಯ ಕುಂಚೂರು ಸ್ಥಳದ ಹತ್ತಿರವೇ

ಬೆಟ್ಟ ಇರುವುದರಿಂದ ಇಲ್ಲಿ ಬೆಟ್ಟಗುಡ್ಡ ಪ್ರದೇಶ ಎಂದೇ ಅರ್ಥೈಸಬಹುದಾಗಿದೆ.
ಉದಾ: ಕುಂಚೂರು (ಕುಂಚ+ಊರು–ಕುಂಚೂರು)

ಕುಂಟ ಕುಂಟೆ–ತಗ್ಗು, ಸರೋವರ, ಆಳದಲ್ಲಿ ನೀರು ನಿಂತ ಸ್ಥಳ. (ಡಿಇಡಿ ೧೩೮೯) ಕುಂಡ ತೆಲುಗು, ತಮಿಳಿನಲ್ಲೂ ಕುಂಟ, ಕುಂದು ಕಂಡುಬರುತ್ತದೆ.
ಉದಾ: ಬೊಬ್ಬನಕುಂಟ, ಹುಲಕುಂಟ
ತೆಲುಗು ಭಾಷಾಪ್ರಭಾವದಿಂದಾಗಿ ಕುಂಟೆ ಎಂಬುದು ಕುಂಟ ಎಂಬುದಾಗಿ ಉಚ್ಚರಿತ.

ಕುಡು ಕೊಡು, ಕೊಡುವಿಕೆ
ಉದಾ: ಕುಡುತಿನಿ<ಕೊಟ್ಟಿತೊಣಿ (ಶಾಸನೋಕ್ತ ಸ್ಥಳನಾಮ)
ಮೂಲದ್ರಾವಿಸ ರೂಪ. ಕೊಟ್ಟಿ>ಕೊಟ್ಟು>ಕುಡು?

ಕುಂತ ಚಿಕ್ಕ ಪ್ರಾಣಿ, ಬೆಟ್ಟ, ಗುಡ್ಡ, ಕುಂದ–ನೋಡಿ
ಉದಾ: ಕುಂತನಹಳ್ಳಿ (ಬೆಟ್ಟದಹಳ್ಳಿ?)

ಕುಂದ ಬೆಟ್ಟ, ಗುಡ್ಡ, ಕುಂಚ, ಕುಂತ ಎಂಬ ಘಟಕಗಳಿಗಿಂತ ಕುಂದ ಎಂಬ ಘಟಕಗಳ ಸ್ಥಳನಾಮ ಜಿಲ್ಲೆಯಲ್ಲಿ ಹೆಚ್ಚು
ಕಾಣಸಿಗುತ್ತವೆ.
ಉದಾ: ನೀಲಗುಂದ, ಬಲಕುಂದ

ಕುದುರೆ (ಜಲಸಂಬಂಧಿ) ನೀರಿನಿಂದಾವೃತಗೊಂಡ ಮಣ್ಣಿನ ದಿಬ್ಬ, ಚಿಕ್ಕ ದ್ವೀಪ, ತಮಿಳು–ಕುರೈ, ಕನ್ನಡದಲ್ಲಿ ಕುರುವ,
ಕುರವ, ಕುರ್ವ ಎಂಬ ರೂಪಗಳೂ ಇವೆ. (ಡಿಇಡಿ ೧೫೪೫) ತಗ್ಗುಪ್ರದೇಶ, ತೊರೆಯ ಪಾತ್ರ ಎಂಬರ್ಥದ ಕುದರು
ಎಂಬ ಶಬ್ದದಿಂದ ಕುದುರು ಬಂದಿರಬೇಕು.
ಉದಾ: ನೆಲ್ಲುಕುದುರು<ನೆಲ್ಕುದ್ರಿ (ಶಾಸನೋಕ್ತ ಸ್ಥಳನಾಮ) ಕುದುರೆಡವು

ಕುಪ್ಪಿ ಕುಪ್ಪ, ಕುಪ್ಪೆ ಎಂಬುದರ ಇನ್ನೊಂದು ರೂಪ–ಚಿಕ್ಕಗುಡ್ಡ, ದಿಬ್ಬ, (ಡಿಇಡಿ–೧೪೪೦) ಶಿಲಾವಾಚಕ
ಕನ್ನಡ–ಕುಪ್ಪೆ, ಗುಪೆ, ಕುಪ್ಪು, ಕೊಪ್ಪರ್
ತಮಿಳು–ಕುಪ್ಪಮ್, ಕುಪ್ಪಲ್, ತೆಲುಗು–ಕುಪ್ಪ, ಗುಪ್ಪು
ಉದಾ: ಕುರೇಕುಪ್ಪೆ, ಕುಪ್ಪಿನಕೆರೆ, ಕಕ್ಕುಪ್ಪಿ

ಕುಮತಿ ಕುಪ್ಪಟೆ, ಕುಂಪಣಿ, ಕುಮ್ಮಟ, ಕುಮ್ಮಟ ಸಮಾನಾರ್ಥಕ ಶಬ್ದರೂಪಗಳು. (ಡಿಇಡಿ-೧೪೫೯) ಅಕ್ಕಸಾಲಿಗ ತನ್ನ ಕೆಲಸಕ್ಕೆ ಹಾಕಿಕೊಂಡ ಬೆಂಕಿಯ ಮಡಕೆ.

ಉದಾ: ಕುಮತಿ

ಕುರ್ ಗುಡ್ಡಗಾಡು ಪ್ರದೇಶದ ಹಳ್ಳಿ

ಕುರುಂಬ-ಗುಡ್ಡಗಾಡುಗಳಲ್ಲಿ ವಾಸಿಸುವ ಜನಾಂಗ (ಡಿಇಡಿ ೧೫೩೦)

ಇತರೆ ರೂಪಗಳು; ಕುರಿ, ಕುರೆ

ಉದಾ: ಕುರಿಗನೂರು, ಕುರ್ವಳ್ಳಿ, ಕುರಕುಪ್ಪೆ ಕುರೆಕುಪ್ಪೆ

ಕುರುವ (ಜಲಸಂಬಂಧಿ)

ಉದಾ: ಕುರುವಳ್ಳಿ ಕುಪ್ಪಳ್ಳಿ, ಕುರುವತ್ತಿ-ನೋಡಿ: ಕುದುರು ಕೂಡಲ್ ನೀರಿನ ಹರಿವುಗಳು ಕೂಡುವ ಸ್ಥಳ-ಜಂಗಮ (ಜಲವಾಚ) ಕೂಡು+ಅಲ್=ಕೂಡಲ್ ಸಂಸ್ಕೃತ-ಜಲಸಂಗಮ; ಇತರೆ ರೂಪಗಳು-ಕೂಡ್ಲು, ಕೂಡ್ಲಿ, ಕೂಡ್ಲ

ಉದಾ: ಕೂಡ್ಲೂರು, ಕೂಡ್ಲಿಗಿ

ಕೃಷ್ಣ (ದೈವವಾಚಿ-ವ್ಯಕ್ತಿವಾಚಿ)

ಉದಾ: ಕೃಷ್ಣನಗರ, ಕೃಷ್ಣಾಪುರ

ಕೆಂಚ (ವ್ಯಕ್ತಿಸಂಬಂಧಿ)-ಕೆಂಪುವರ್ಣದ

ಉದಾ: ಕೆಂಚನಬಂಡಿ, ಕೆಂಚನಗುಡ್ಡ

ಕೆರೆ ಬೇಸಾಯಕ್ಕೆ ನೀರು ನಿಲ್ಲಿಸುವ ತಗ್ಗುಪ್ರದೇಶ. (ವಿವರಕ್ಕೆ ಡಿಇಡಿ ೧೬೪೮)

ಉದಾ: ಕೆರೆಕೇರಿ, ಚಿಕ್ಕಕೆರೆಯಾಗಿನಹಳ್ಳಿ, ಗದ್ದಿಕೆರೆ, ಹಿರೆಕೆರೆಯಾಗಿನಹಳ್ಳಿ ಕೆಲವೆಡೆ 'ಕೆರಿ' ಪ್ರಯೋಗವೂ ಆಗುವುದುಂಟು

(ಧ್ವನಿವ್ಯತ್ಯಯ)

ಕೇರಿ ಬೀದಿ, ರಸ್ತೆ, ಪಟ್ಟಣ, ಹಳ್ಳಿ, ಕೊಂಪೆ (ಡಿಇಡಿ - ೧೬೬೯)

ಉದಾ: ಕಡಬಗೇರಿ, ಕ್ಯಾಸರಕೇರಿ, ಗುಂಡ್ಲುವಡ್ಡಿಗೇರಿ, ಸಿಂಬಳಗೇರಿ, ಮೋರಗೇರಿ, ಲೋಕಿಕೇರಿ

ಕೆಸರು ರಾಡಿ, ಅರಬು (ಸಂ.ಕ.ನಿ) ಕಿಸುರ್, ಕಿಸುರ್ರ್, ಕೆಸರು-ಸಹಿಸಲಸಾಧ್ಯವಾದ ಅಥವಾ ಒಪ್ಪಲಾಗದ ಸ್ಥಿತಿ (ಡಿಇಡಿ ೧೭೬೯)

ಉದಾ: ಕೆಸರಕೊಂಡಿ (ಡ)

ಕೃಷ್ಣ (ದೈವವಾಚಿ-ವ್ಯಕ್ತಿವಾಚಿ)

	ಉದಾ: ಕೃಷ್ಣನಗರ, ಕೃಷ್ಣಾಪುರ
ಕೆರೆ	ಬೇಸಾಯಕ್ಕೆ ನೀರು ನಿಲ್ಲಿಸುವ ತಗ್ಗುಪ್ರದೇಶ. (ವಿವರಕ್ಕೆ ಡಿಇಡಿ ೧೬೪೮)
	ಉದಾ: ಕೆರೆಕೇರಿ, ಚಿಕ್ಕಕೆರೆಯಾಗಿನಹಳ್ಳಿ, ಗದ್ದಿಕೆರೆ, ಹಿರೆಕೆರೆಯಾಗಿನಹಳ್ಳಿ
	ಕೆಲವೆಡೆ 'ಕೆರಿ' ಪ್ರಯೋಗವೂ ಆಗುವುದುಂಟು (ಧ್ವನಿವ್ಯತ್ಯಯ)
ಕೇರಿ	ಬೀದಿ, ರಸ್ತೆ, ಪಟ್ಟಣ, ಹಳ್ಳಿ, ಕೊಂಪೆ, (ಡಿಇಡಿ–೧೬೬೯)
	ಉದಾ: ಕಡಬಗೇರಿ, ಕ್ಯಾಸರಕೇರಿ, ಗುಂಡ್ಲವಡ್ಡಿಗೇರಿ, ಸಿಂಬಳಗೇರಿ, ಮೋರಗೇರಿ, ಲೋಕಿಕೇರಿ
ಕೆಸರು	ರಾಡಿ, ಅರಲು (ಸಂ.ಕ.ನಿ) ಕಿಸುರ್ ಕಿಸುರ್ರ್, ಕೆಸರು–ಸಹಿಸಲಸಾಧ್ಯವಾದ ಅಥವಾ ಒಪ್ಪಲಾಗದ ಸ್ಥಿತಿ (ಡಿಇಡಿ ೧೨೬೯)
	ಉದಾ: ಕೆಸರಕೊಂಡಿ(ಡ)
ಕೈರ	ಕಯ್ರ–ಕಗ್ಗಲಿಪುರ, ಖದಿರವೃಕ್ಷ, ಕಾಚು (ಸಂ.ಕ.ನಿ)
	ಉದಾ: ಕೈರಹಟ್ಟಿ (ಕೈರಕಟ್ಟಿ)
ಕೊಂಗ	ಕೊಂಗು ನಾಡಿನಿಂದ ಬಂದವನು, (ಚೇರ ಅಥವಾ ಕೇರಳ–ಕೊಯಮತ್ತೂರು ಪ್ರದೇಶದ ಕಡೆಯ)
	ಉದಾ: ಕೊಂಗನ ಹೊಸೂರು
ಕೊಟಗಿ	ಕೊಟಗೆ, ಕೊಟ್ಟಗೆ, ಕೊಟ್ಟಿಗೆ ಇತರೆ ರೂಪಗಳು ದನಗಳ ಹಕ್ಕೆ (ಡಿಇಡಿ ೧೭೧೩)
	ಉದಾ: ಕೊಟಗಿಹಾಳ
ಕೊಟ್ಟ	ಕೊಡಚಿಗಿಡ (ಡಿಇಡಿ ೧೭೨೩) (ವೃಕ್ಷವಾಚಿ)
	ಕೊಟ್ಟವ್ವೆ (ವೃಕ್ಷಬಳಿವಾಚಿ)–ಒಂದು ದೈವ
	ಬನ್ನಿಮರ–ಬನ್ನಿಮಾಂಕಾಳಿ
	ಬೇವಿನಮರ–ಸುಂಕ್ಲಮ್ಮ, ದುರ್ಗಮ್ಮ
	ಕೊಡಜಿಮರ–ಕೊಟ್ಟಮ್ಮ, ಕೊಟ್ಟವ್ವೆ?
	ಉದಾ: ಕೊಟ್ಟೂರು ಕೊಟ್ಟೂರು ಒಂದು ಸ್ಥಳ, ಭವನ, ಮಹಲು, ದೊಡ್ಡಮನೆ ಭೂತಗಳ ನೆಲೆ ಎಂಬರ್ಥವೂ ಗೋಚರ (ಡಿಇಡಿ ೭೬)
	ಉದಾ: ಕೆಟ್ಟೂರು
ಕೊಟ್ಟಲ	ಕೊತ್ತಲ, ಕೊತ್ತಳ

ಉದಾ: ಕೊತ್ತಲಚಿಂತ (ಕೊತ್ತಲ=ಆಶ್ರಯ, ಚಿಂತ=ಹುಣಿಸೆಮರ–ತೆಲುಗು)
ಆಶ್ರಯ, ಕಲ್ಲುಗುಹೆ (ಡಿಇಡಿ ೧೭೩೯)

ಹೊಂಡ ಗುಂಡ್ಡ (ಡಿಇಡಿ–೧೫೪೮) ಕುಂಚ=ಗುಡ್ಡ (ನೋಡಿ–ಕುಂಚ)
ಉದಾ: ಕೊಂಚನಾಯಕನಹಳ್ಳಿ

ಕೊಂಬ ಬೆಟ್ಟದಶಾಖೆ–ಕೊಮೆ, ಕುಚಿ, ಕಬೆ (ಡಿಇಡಿ ೧೭೫೯)
ಉದಾ: ಕೊಂಬಳಿ

ಕೊಂಬಿ ಕೊಂಬೆ, ಶಾಖೆ (ವೃಕ್ಷವಾಚಿ) ಕೊಂಬು
ಉದಾ: ಕೊಂಬಹಳ್ಳಿ

ಕೊಮರ<ಕುಮಾರ ಸ್ಕಂದ (ದೈವವಾಚಿ)
ಉದಾ: ಕೊಮರನಹಳ್ಳಿ ಕುಮಾರನಹಳ್ಳಿ

ಕೊರ್ಲ ಕೊಂಬೆ, ಕೊರ್ಲೆ–ಒಂದು ಬಗೆಯ ಹುಲ್ಲಿನಂಥ ಸಸ್ಯ.
ತೆಲುಗು–ಕೊರ್ರ, ತಮಿಳು–ಕುರಲ್–ಧಾನ್ಯದ ಸಸ್ಯ
(ಡಿಇಡಿ–೧೭೯೭) (ವಿವರಕ್ಕೆ ನೋಡಿ)
ಉದಾ: ಕೊರ್ಲಗುಂಡಿ

ಕೊಳ ಜಲಾಶಯ, ಕೆರೆ, ಸರೋವರ ಕೊಳಹೆ, ಕೊಣ ಇತರೆ ರೂಪಗಳು
ತೆಲುಗು–ಕೊಲನು, ಕೊಲಾಕು, ಕೊಲಾಕುವು, ತುಳು–ಕುಳ, ಸಂಸ್ಕೃತದ 'ಕೂಲ'
ಶಬ್ದದಿಂದ ಬಂದವುಗಳು
(ಡಿಇಡಿ ೧೫೧೮)
ಉದಾ: ಕೊಳಗಲ್ಲು, ಬನ್ನಿಗೊಳ

ಕೊಳಚಿ ಬಗ್ಗಡವಾದ ನೀರು, ರಾಡಿ (ಜಲವಾಚಕ)
ಉದಾ: ಹಿರೇಕೊಳಚಿ

ಕೋ (ಕೋಡ್–ಕೋಟ್) ಸೂತ್ರೀಕರಣ, ಸೂತ್ರಿಕರಿಸು, ಒಟ್ಟುಗೂಡು, ಒಂದುಗೂಡು,
ಗುಚ್ಚ ಗೊಂಚಲು
ತೆಲುಗು–ಕೋವ, ತಮಿಳು–ಕೋರ್ (ವಿವರಕ್ಕೆ ಡಿಇಡಿ ೧೮೮೯)
ಉದಾ: ಕೋಗಳಿ ಕೋಗ್ಳಿ ಕೋಗಳಿ–(ಕೋ+ಕಳ್+ಗಳ್–ಕೋಗಳ+ಇ)
ಕೋ+ಗಲ್–ಕೋಗಲ್ (ಳ್)+ಇ–ಕೋಗಳಿ

ಕೋಟಿ (ಐತಿಹಾಸಿಕ) ಸಂಸ್ಕೃತದ 'ಕೊಟ್ಟಾಹ'ದಿಂದ ಬಂದುದು. ಅನೇಕ ಸ್ಥಳಗಳಲ್ಲಿ

ಇದರ ಅವಶೇಷಗಳನ್ನು ಕಾಣಬಹುದು

ತಮಿಳು–ಕೋಟ್ಟೈ, ಕೋಟು, ಮಲಯಾಳಂ–ಕೋಟ್ಟ, ತೆಲುಗು–ಕೋಟ, ಸಂಸ್ಕೃತ–ಕೊಟ, ಕೊಟ್ಟ–ಕೊಟ್ಟಾರ(ಡಿಇಡಿ ೧೮೩೧)

ಕೋಡಿ (ಜಲಸಂಬಂಧಿ) ನೀರಿನ ಅಂಚಿನ ಭೂಪ್ರದೇಶ (ಟಿಎನ್‌ಎಸ್ ೧೩೪–೭)

ಕೆರೆಯಿಂದ ಹೆಚ್ಚಿನ ನೀರು ಹೊರಬಿಡುವ ಮಾರ್ಗ (ಡಿಇಡಿ ೧೮೨೨)

ಉದಾ: ಕೋಡಿಹಳ್ಳಿ, ಕೋಡಾಳ

ಕೋರೆ ಹರಿತವಾದ, ಕತ್ತರಿಸು, ಮೈಮೇಲೆ ಗೀಚುವುದು

'ಗೋರು'–ಸಮಾನರೂಪ

ತೆಲುಗು–ಕೋರ, ತಮಿಳು–ಕೋರ್ರೈ (ವಿವರಕ್ಕೆ ನೋಡಿ ಡಿಇಡಿ ೧೮೬೯)

ಉದಾ: ಕೋರೆ

ಕೋಯ್ ಕತ್ತರಿಸು, ವಿಭಾಗಿಸು, ಕೀಳು

ತೆಲುಗು–ಕೋಯು, ತಮಿಳು–ಕೊಯ್, ಕನ್ನಡ–ಕುಯ್–ಬೆಳೆ, ಕೀಳು ಕೊಯರ್ (ವಿವರಕ್ಕೆ ನೋಡಿ ಡಿಇಡಿ ೧೭೬೩)

ಉದಾ: ಕೋಯೀರಗಟ್ಟಿ

ಕೋಳ ಸುಳ್ಳುಗಾರಿಕೆ, ಅಪವಾದ, ದೂರು, ಚಾಡಿ, ನಿಂದೆ, ಕೊಂಚೆಯ, ಕೊಂಚೆ, ಕೊಂಡೆಗ (ಡಿಇಡಿ–೧೮೬೫)

ಉದಾ: ಕೋಳೂರು–(ಕೋಳ್+ಊರು)

ಗ

ಗಂಗ ವ್ಯಕ್ತಿವಾಚಿ–ಪುರುಷ ಅಥವಾ ಸ್ತ್ರೀ ಗಂಗ–ಗಂಗೆ, ಗಂಗಿ

ಉದಾ: ಗಂಗಲಾಪುರ

ಗರ್ಗ ಸಾಮಾನ್ಯ ಹುಲ್ಲು, ಗರಗದ ಸೊಪ್ಪ (ಕಿಟ್ಟೆಲ್ ಕೋಶ)

ಉದಾ: ಗರ್ಗ

ಗಜ ಆನೆ, ಹಸ್ತಿ, ದಂತಿ

ಉದಾ: ಗಜಪುರ

ಗಜ್ಜಿ (ಸಸ್ಯವಾಚಿ) ಬದನೆ (ಕಿಟ್ಟೆಲ್) ಬದನೆಹಾಳು)

ಉದಾ: ಗಜ್ಜಿಗಿನಹಾಳು

ಗಟ್ಟ ಪರ್ವತಾವಳಿ, ಬೆಟ್ಟಸಾಲು (ಸಂ.ಕ.ನಿ)

ಉದಾ: ಸಿದ್ಧರಗಡ್ಡೆ>ಸಿಗರಗಡ್ಡೆ

ಗಡ ಸಣ್ಣಕೋಟೆ, ದುರ್ಗ

ಉದಾ: ರಾಮಗಡ

ಗದ್ದಿ ಗದ್ದೆ–ಭತ್ತ ಬೆಳೆಯುವ ಜಮೀನು

ಉದಾ: ಗದ್ದಿಕೆರೆ

ಗಾದಿ ಹಾಸಿಗೆ, ಅಧಿಕಾರಸ್ಥಾನ, ಗದ್ದುಗೆ (ಸಂ.ಕ.ನಿ)

ಉದಾ: ಗಾದಿಗನೂರು (ಗಾದಿಗನ+ಊರು)

ಗುರ್ಕಿ ಅಧಿಕಾರಸ್ಥಾನದಲ್ಲಿರುವವನ ಊರು

ಉದಾ: ಚಳ್ಳಗುರ್ಕಿ

ಗುಡಿ ದೇವಾಲಯ, ಮಂಡಲ, ವೃತ್ತ, ಗುಂಪು (ಸಂ.ಕ.ನಿ)

ಉದಾ: ಗುಡಿಕೋಟೆ, ಗುಡಿಹಳ್ಳಿ, ಗುಡಿ ಓಬಳಾಪುರ

ಗುಂಡಿ (ಜಲವಾಚ) ಹಳ್ಳ, ಗುಳಿ ತೆಲುಗಿನ 'ಕುಂಟ'ದಿಂದ ಬಂದುದು.

ಉದಾ: ಹದ್ದಿನಗುಂಡು, ಚಿರಲಗುಂಡಿ, ತವಲಗುಂಡಿ, ಯಕ್ಕೆಗುಂಡಿ

ಗುಂಡು ಬಂಡೆ, ಗುಂಡುಕಲ್ಲು, ಗುಂಪು, ದುಂಡಾದ

ಉದಾ: ಗುಂಡು ಮುಣುಗು, ಗುಂಡಿನಹೊಳೆ

ಗುಡ್ಡ ಹುಡುಗ, ಶಿಷ್ಯ, ಚಿಕ್ಕಬೆಟ್ಟ

ಉದಾ: ಗುಡ್ಡದೂರು, ಕೆಂಚನಗುಡ್ಡ, ಅಮರದೇವರಗುಡ್ಡ

ಗುತ್ತಿ ಗಡ್ಡೆ, ದಿಬ್ಬ, ಎತ್ತರವಾದ ಭೂಮಿ, ಪೊದರು, ಗೊನೆ

ಉದಾ: ಗುತ್ತಿನೂರು

ಗುಪ್ಪೆ ಕುಪ್ಪೆ, ರಾಶಿ (ಗುಂಪೆ)

ಉದಾ: ಸಿರಿಗುಪ್ಪೆ>ಸಿರಿಗುಂಪೆ (ಸಿರಿಯ+ಕುಪ್ಪೆ)

ಬೂದುಗುಂಪೆ

ಗುಬ್ಬಿ ಗುಬ್ಬಚ್ಚಿ, ಚಿಕ್ಕದು, ಒಂದು ಜಾತಿಯ ಸಣ್ಣಪಕ್ಷಿ

ಉದಾ: ಗುಬ್ಬಿಹಾಳು

ಗುಳ ಸಣ್ಣ, ಚಿಕ್ಕ, (ಸಂ.ಕ.ನಿ)

ಉದಾ: ಗುಳದಹಾಳ=ಚಿಕ್ಕಹಳ್ಳಿ

ಗನಣಿ<ಹೆಣಿಸಂಗಾತಿ, ಸ್ನೇಹ, ಒಟ್ಟುಗೂಡು, ಕೆಳೆ, ಗೆಳೆ, ಗೆಣೆ, ಗಿಣಿ–ಇತರೆ ರೂಪಗಳು

ಉದಾ: ಗೆನಣಿಹಾಳ

ಗೆರೆ — ಗೀಟು (ಕೆರೆ) ಜಲಮೂಲ, ಜಲಾಶಯ, ಸೀಮೆ

ಉದಾ: ತೊಣಸೀಗೆರೆ, ಸಿರಿಗೆರೆ, ಮೋರಿಂಗೆರೆ (ಶಾಸನೋಕ್ತ ಸ್ಥಳನಾಮ)

ಗೊನೆ — ಹೂವು, ಹಣ್ಣು ಮುಂತಾದವುಗಳ ಗೊಂಚಲು

ಉದಾ: ಗೊನೆಹಾಳು

ಗೊಲ್ಲ — ಗೋವಳ, ಗೋಪಾಲಕ, ದನಕರುಗಳನ್ನು ಸಾಕಿ ಅದರ ಉತ್ಪನ್ನಗಳಿಂದ ಜೀವಿಸುವವನು.

ಉದಾ: ಗೊಲ್ಲನಾಗೇನಹಳ್ಳಿ, ಗೊಲ್ಲರಹಟ್ಟಿ

ಗೊಸ — (ಕೊಸರು) ಅನುಮಾನಿಸು, ಭಯ

ಉದಾ: ಗೊಸ ಬಾಳು<ಕೊಸಬಾಳು<ಕೊಸರುಬಾಳು

ಗೋಟು — ಒಂದು ಭಾಗ, ಒಂದು ಪ್ರದೇಶ, ಒಂದು ಮೂಲೆ, ಒಂದು ದಿಕ್ಕು (ಕಿಟ್ಟೆಲಕೋಶ)

ಉದಾ: ಗೋಟಾಳು

ಗೋಡೆ — ಭತ್ತಿ, ಕುಡ್ಯ (ಸಂ.ಕ.ನಿ)

ತೆಲಗು–ಗೋಡ ಸಂಸ್ಕೃತದ 'ಕುಡ್ಯ' ದಿಂದ ಬಂದುದು ಗೋಡೆ.

ಉದಾ: ಗೋಡೆಹಾಳು

ಗೌರಿ — (ವ್ಯಕ್ತಿ ಅಥವಾ ದೈವವಾಚಕ)

ಉದಾ: ಗೌರೀಪುರ

ಗಂಡ — ಶೂರ, ವೀರ, ಪತಿ, ಒಡೆಯ

ಉದಾ: ಗಂಡರಾದಿತ್ಯನ ಪೊಳಲ್ (ಶಾಸನೋಕ್ತ ಸ್ಥಳನಾಮ)

ಗಂಡಬೊಮ್ಮನಹಳ್ಳಿ

ಚ

ಚಗ — ಚಾಗ, ಚೇಗ, ಜೀಗ, ಜೆಗ್ಗ, ಜೇಗಿ ಇತರೆ ರೂಪಗಳು

ಬೇಗನೆ, ತಕ್ಷಣ, (ಡಿಇಡಿ ೨೦೬೧)

ಉದಾ: ಚಗನೂರು

ಚಟ್ಟ — ಚಟಕ್ಕನೆ, ತಡಮಾಡದೆ, ಒಂದೇಸಲಕ್ಕೆ (ಒಮ್ಮಿಂದೊಮ್ಮೆ)

ತಮಿಳು–ಚಟಕ್–ಎನಲ್, ತೆಲಗು–ಚಟ್ಟನ

ತಟ್ನ–'ತಟಕ್ಕನೆ' ದಿಂದ ಬಂದುದು (ಡಿಇಡಿ–೧೯೬೨)

ಉದಾ: ಚಟ್ನಹಳ್ಳಿ

ಚಂದ ಅಂದ, ಸೊಗಳು, ಯೋಗ್ಯ, ಹೋಲಿಕೆ, ಸೌಖ್ಯ, ಕ್ಷೇಮ, ಚಂದ್ರ
(ಸಂ.ಕ.ನಿ) (ಆಲಂಕಾರಿಕ ಅಥವಾ ವ್ಯಕ್ತಿವಾಚ)
ಉದಾ: ಚಂದೂರು

ಚನ ಚಾನ,ಚಾಣು, ಚೇಣ–ಇತರೆ ರೂಪಗಳು–ಉಳಿ
ತೆಲಗು–ಸೇನಮು, ತುಳು–ಚೇಣು
A small ehisel = ಸಣ್ಣ ಉಳಿ (ಡಿಇಡಿ–೨೦೧೮)
ಉದಾ: ಚಾನಾಳು<ಚನಹಾಳು

ಚನಕ ಚಾನ, ಚಾಣ, ಚೇಶ–ಇತರೆರೂಪಗಳು
ಚಾನಗಿಕ– ಚಾಣದಿಂದ ಕೆಲಸ ಮಾಡುವವ
ಉದಾ: ಚಾನಕ<ಚಾಣಕ+ಊರು ಚಾನಕನೂರು<ಚಾಣಕನೂರು

ಚಪ್ಪರ ಚಾವಣ, ಹಂದರ, ಗುಡಿಸಲು
ಉದಾ: ಚಪ್ಪರದಹಳ್ಳಿ

ಚಿಕ್ಕ ಸಣ್ಣ, ಕಿರಿಯ (ಅಳತೆ, ಪ್ರಮಾಣ)
ಉದಾ: ಚಿಕ್ಕಬಳ್ಳಾರಿ, ಚಿಕ್ಕಅನಂತಪುರ, ಚಿಕ್ಕಸೋಬತಿ, ಚಿಕ್ಕಕೆರೆಯಾಗಿನಹಳ್ಳಿ

ಚಿಗ ಚಿಕ್ಕ, ಸಣ್ಣ, ಸ್ವಲ್ಪ
ತಮಿಳು–ಚಿಕ್ಕ, ಮಲಯಾಳಂ–ಚಿಕ್ಕ, ಚಿಗ
ತೆಲಗು–ಚಿಕಿಚಿಕಿ, ಪ್ರಾಕೃತ–ಚಿಕ್ಕ (ಡಿಇಡಿ ೨೦೫೭)
ಉದಾ: ಚಿಗಟೇರಿ–ಚಿಕ್ಕಟೇರ (ಶಾಸನೋಕ್ತ ಸ್ಥಳನಾಮ)

ಚಿಟಿ ಶಬ್ದ, ಚಿಟಗುಡು, ಚಿಟಚಿಟಿ
ತೆಲಗು–ಚಿಟಚಿಟ, ತುಳು–ಚಿಟಚಿಟ (ಇಡಿಇ ೨೦೭೦)
ಉದಾ: ಚಿಟಿಗನಹಾಳು

ಚಿಂತ ಹುಣಿಸೆಮರ ತಮಿಳು–ಚಿಂತಮ್, ತೆಲಗು–ಚಿಂತ
ಸಂಸ್ಕೃತದ 'ಚಿಂಕಾ' ದಿಂದ ಬಂದುದು, ಡಿಇಡಿ (೨೦೮೦)
ಉದಾ: ಚಿಂತಪಲ್ಲಿ>ಚಿಂತ್ರಪಲ್ಲಿ

ಚಿತ್ತ ಗುರಿ, ಉದ್ದೇಶ (ಸಂ.ಕ.ನಿ)
ಉದಾ: ಚಿತ್ತವಾಡಗಿ (ಚಿರ+ವಾಡ+ಗಿ)

ಚಿರ ಚೆಲುವಾದ, ಅಂದವಾದ, ಬಹುಕಾಲದ
ಉದಾ: ಚಿರಸ್ತಹಳ್ಳಿ (ಚಿರ+ಹಸ್ತ+ಹಳ್ಳಿ)

ಚಿರ(ಲ) ಮೈಮೇಲೆ ಚುಕ್ಕೆಗಳಿರುವ ಒಂದು ಜಾತಿಯ ಕಾಡುಮೃಗ
ಉದಾ: ಚಿರಕಗುಂಡಿ<ಚಿರ್ತಗೊಂಡ

ಚಿಲಕ ಚಿಲುಕ, ಬಾಗಿಲಿನ ಚಿಲಕ (ಡಿಇಡಿ ೨೧೧೯)
ತೆಲಗು–ಚಿಲುಕ ಕನ್ನಡ–ಗಿಳಿ
ಉದಾ: ಚಿಲಕನಹಟ್ಟಿ>ಚಿಲಕ್ನಟ್ಟಿ

ಚೋರ ಕಳ್ಳ, ಕಳವು ಮಾಡುವವನು (ವ್ಯಕ್ತಿವಾಚಿ)
ಉದಾ: ಚೋರನೂರು

ಚೌಡ (ವ್ಯಕ್ತಿಯ ಹೆಸರು) ಶಕ್ತಿದೇವತೆ–ಚೌಡಿ, ಚಾಮುಂಡಿ
ಉದಾ: ಚೌಡಾಪುರ (ಚಾಮುಂಡಿ>ಚಾವುಂಡಿ>ಚವುಡಿ>ಚೌಡಿ

ಜ

ಜಂಬು (ದೈವವಾಚಿ) (ನೇರಿಳಮರ–ಆದರ ಹಣ್ಣು)
ಉದಾ; ಜಂಬುನಾಥನಹಳ್ಳಿ

ಜರ ಆವಸರ, ಬೇಗನೆ, ಒಮ್ಮೆಂದೋಮ್ಮೆ
(ಜರಜರ, ಜರ್‍ರನೆ)–ಎಳೆದಾಟದ ಶಬ್ದ, ಡಿಇಡಿ(೧೯೪೩,೨೫೨೧)
ಉದಾ; ಜರ್ಮಲ<ಜರಮಲೆ
ಜಾನ . ಜಾಲಿ (ವೃಕ್ಷವಚಿ) ಜಾಲಯಮರ
ಉದ; ಜಾನಿಕುಂಟ < ಜಾಲಿಕುಂಟ, ಜಾಲಿಬೆಂಚಿ, ಜಲಿಹಾಳ

ಜಾಲಿ (ವೃಕ್ಷವಾಚಿ) ಜಾಲಿಯಮರ
ಉದಾ; ಜಾಲಬೆಂಚಿ, ಜಾಲಿಹಾಳ, ಜಾಲಿಕುಂಟಿ
ಬಳ್ಳಾರಿಜಿಲ್ಲೆಯ ಭಾಗದಲ್ಲಿ ಜಾಲಿಮರ ವಿಶೇಷವಾಗಿಬೆಳೆಯುತ್ತದೆ.
'ಬಳ್ಳಾರಿ ಜಾಲಿ' ಎಂದೇ ಪ್ರಸಿದ್ಧಿ ಇದೆ.
ಜಾಗಟ<ಜಿಗಟ ಅಂಟುತನ, ಮೆತ್ತಿಕೊಳ್ಳುವಿದೆ
ಉದಾ; ಜಾಗಟಗೆರೆ<ಜಿಗಟಗೆರೆ

ಜಿನಿಗ (ಧಾರ್ಮಿಕ) ಜೈನಿಗ=ಜೈನಮತದ
ಉದಾ; ಜಿನಿಗನಹಳ್ಳಿ<ಜೈನಿಗನಹಳ್ಳಿ

ಜೀರು ಜೀರು, ಅಂಚು, ಕಿರಚು, ಕೂಗಿಕೊಳ್ಳು (ಡಿಇಡಿ ೧೩೨೩)

ಜೋಗ ನಾವೆ, ದೋಣಿ, ಧ್ಯಾನ, ತಪಸ್ಸು
ಉದಾ: ಜೋಗ
ಜೋಗ, ಜವುಗು–ಧೈರ್ಯ ಕಳೆದುಕೊಳ್ಳು, ಸಡಿಲ, ನಡುಕ (ಡಿಇಡಿ ೧೯೮೩)

ಜೋಡಿ ಜಿಟೆ, ಮೊತ್ತ, ಗುಂಪು, ಸಹವಾಸ, ಒಡನಾಟ
ಉದಾ: ಜೋಡಿಕರಿನಾಯಕನಹಳ್ಳಿ

ಜೋಯಿಸ ಜ್ಯೋತಿಷಿ, ಗ್ರಹಗತಿಗಳನ್ನು ಹೇಳುವವ
ಉದಾ: ಜೋಯಿಸ ಲಿಂಗಾಪುರ

ಜೋಳ ಒಂದು ಬಗೆಯ ಧ್ಯಾನ, ಅನ್ನದ ಹಂಗು
ಉದಾ: ಜೋಳದ ರಾಶಿ, ಜೋಳದ ಕೂಡ್ಲಿಗಿ
ಅತಿಹೆಚ್ಚು ಜೋಳ ಬೆಳೆವ ಸ್ಥಳಗಳಿದ್ದಿರಬೇಕು ಇಲ್ಲವೆ ಅಂದಿನ ಅಳರಸರಿಗೆ ಕಪ್ಪವಾಗಿ ಇಲ್ಲಿಂದ ಜೋಳಕೊಡುತ್ತಿರಬಹುದು.

ಜಾಕು ಸಡಿಲಮಣ್ಣಿನ ನೆಲ, ಸನ್ನದ್ಧವಿಲ್ಲದ, ಸಡಿಲ, ನಡುಕದ
ಜವುಗು, ಜೋಗು, ಕವಳು, ಜವುಳು–ಇತರೆ ರೂಪಗಳು
ಉದಾ: ಜಾಕು (ಈ ಸ್ಥಳದ ನೆಲ ಜವುಳಾಗಿರುವುದೇ ಕಾರಣ)

ಡ

ಡಣಾಯಕ (ವ್ಯಕ್ತಿವಾಚಿ)<ಡೊಣಿನಾಯಕ<ದೊಣಿನಾಯಕ
ಡೊಣಿ, ದೊಣಿ–ಕಲ್ಲಿನಲ್ಲಿರುವ ಪ್ರಾಕೃತಿಕ ಸರೋವರ
ತೆಲಗು–ದೊನ–ಗುಡ್ಡದ ಮೇಲಿನ ಕೊಳ, ಸರೋವರ (ಡಿಇಡಿ ೨೨೩೯)
ಉದಾ: ಡಣಾಯಕನಕೆರೆ

ತ

ತಲ ತಾಳೆಮರ, ಕಾಡು, ಅರಣ್ಯ
ಉದಾ: ಮರುತಲ

ತನಲ<ಚಲ್ಲ (ತೆಲಗು–ಮೊಸರು, ಮಜ್ಜಿಗೆ)
ಉದಾ: ತನಲ (<ಚಲ್ಲ) ಕೂಡ್ಲೂರು (ಡಿಇಡಿ ೧೯೯೨)

ತವಲ (ತೆಲುಗು–ತವುಲು)–ಸಂಪರ್ಕ ಬರುವುದು, ಹಿಂಬಾಲಿಸು, ಸಂಪರ್ಕ, ಅಸಕ್ತಿ, ಬಯಕೆ, ಬೆಟ್ಟ(ಡಿಇಡಿ ೨೪೩೪)

ಉದಾ: ತವಲಗುಂಡಿ

ತಾಮ್ರ ಒಂದು ಬಗೆಯ ಲೋಹ (ಲೋಹವಾಚಿ)

ಉದಾ: ತಂಬ್ರಳ್ಳಿ<ತಾಮ್ರಹಳ್ಳಿ

ತಾಳ ತಾಳಿಯಮರ(ವೃಕ್ಷವಾಚಿ)

ತಾಳ್-ಸಹನೆ, ತಾಳಿಕೆ, ಹೊಂದು, ಪಡೆ (ಡಿಇಡಿ ೨೬೦೫)

ತಿಪ್ಪ (ವ್ಯಕ್ತಿವಾಚಕ)

ಉದಾ: ತಿಪ್ಪನಮರಡಿ, ತಿಪ್ಪೇನಹಳ್ಳಿ

ತಿಮ್ಮ (ದೈವವಾಚಿ)

ತುಮತಿ (ತುಮಕಿ, ತುಮರಿ, ತುಂಬರ---ಇತರೆ ರೂಪಗಳು) (ಸಂಸ್ಕೃತದತು ಬರಿಮೂಲ)

(ವೃಕವಾಚಕ)-ಕಾಡುಮಾವಿನಮರ

ಉದಾ: ತುಮತಿ<ತುಮರಿ?

ತುಂಬ ದುಂಬಿ

ಉದಾ: ತುಂಬಿನಕೆರೆ. ತುಂಬು?-ತುಂಬಿದ-ತುಂಬಿದಕೆರೆ?

ತೂಲ್ ಹೋಗು, ಮುಂದುವರಿ, ಚಲಿಸು ಹಿಂಬಾಲಿಸು (ತೂಳು, ತೂಳ್ದು-ತೆಗೆ,

ತೂಳ್ ಚದುರಿಸು) (ಡಿಇಡಿ ೨೭೯೨)

ಉದಾ: ತೂಲಹಳ್ಳಿ<ತೂಳಳ್ಳಿ

ತೆಕ್ಕೆ ತೆಕ್ಕೆಬೀಳು ಅಪಿಕೋ, ತೆಕ್ಕೈಸು (ಸಮೂಹ-ಸಂ.ಕ.ನಿ)

ಉದಾ: ತೆಕ್ಕಕಲ್ಲು (ಶಾಸನೋಕ್ತ ಸ್ಥಳನಾಮ)

ತೆಕ್ಕಲಕೋಟೆ<ತೆಕ್ಕ೧ಕಲ್ಲು+ಕೋಟೆ<ತೆಕ್ಕಕಲ್ಲು)

ದರ ಕುಳಿ, ಹಳ್ಳ, ಭಯ, ಅತರಿಕ, ಬೆಲೆ

ಉದಾ: ದರೋಜಿ

ದಸಮ ದಶಮ, ಹತ್ತನೆಯ

ಉದಾ: ದಸ್ಮಾಪುರ

ದಾನ ಕೊಡುಗೆ, ಕೊಡುವಿಕೆ, ಚತುರೋಪಾಯಗಳಲ್ಲಿ ಒಂದು.

ಉದಾ: ದಾನಾಪುರ

ದಾಸ ಆಳು, ಸೇವಕ, ದಾಸಪಂಥದವನು, ಹರಿಬಕ್ತ

	ಉದಾ: ದಾಸರಹಳ್ಳಿ, ದಾಸಪುರ, ದಾಸನಹಳ್ಳಿ ದಾಸರನಾಗೇನಹಳ್ಳಿ
ದುಗ್ಗ	ದುಗ್ಗ, ದುರ್ಗಿ (ದೈವವಾಚಕ) ಶಕ್ತಿದೇವತೆ
	ಉದಾ: ದುಗ್ಗಾವತಿ<ದುರ್ಗಾವತಿ
ದೇವ	ಪರಮಾತ್ಮ, ಸುರ, ಅರಸ, ರಾಜ
	ಉದಾ: ದೇವಗಿರಿ, ದೇವಲಾಪುರ, ದೇವಸಮುದ್ರ, ದೇವರಬೂದೇನಹಳ್ಳಿ, ದೇವಗೊಂಡನಹಳ್ಳಿ
ದೇಸ	ದೇಶ, ನಾಡು, ಸೀಮೆ, ಸ್ಥಳ
	ಉದಾ: ದೇಸನೂರು
ದೊಂಬ	ಗಣೆಯಮೇಲೆ ಅಡುವವನು, ಕೊಲ್ಲಟಿಗ, ಡೊಂಬರು
	ಉದಾ: ದೊಂಬರಹಳ್ಳಿ
ದೋಣಿ	ನಾವೆ, ತೆಪ್ಪ, ಹರಿನಾಳಿಗೆ, ಅಗಲಬಾಯಿಯ ಪಾತ್ರೆ
	ಉದಾ: ದೋಣಿಮೇಲೆ, ಹರಗಿನದೋಣಿ
ದೌಲತ್	ಐಶ್ವರ್ಯ, ಸಂಪತ್ತು, ಅಧಿಕಾರದ ದರ್ಪ, ಠೀವಿ
	ಉದಾ: ದೌಲತಪುರ
ಧರ್ಮ	ನಿಯಮ, ನ್ಯಾಯ, ಕರ್ತವ್ಯ, ನಡುವಳಿಕೆ, ಅಹಿಂಸೆ
	ಉದಾ: ಧರ್ಮಪುರ
ತೆಗ್ಗು	ಹಳ್ಳ, ಕುಳಿ (ತಗ್ಗು)
	ಉದಾ: ತೆಗ್ಗಿನಬೂದಿಹಾಳ
ತಿಲ	ಎಳ್ಳು ತೈಲ–ತೈಲಿಗ, ತೆಲ್ಲಿಗ–ತಿಲದಿಂದ ಎಣ್ಣೆ ಮಾಡುವವ, ತೆಲ್ಲಿಗರಿರುವ ಸ್ಥಳ–ತೆಲ್ಲಗಿ>ತೆಲಗಿ
ತೆಲಗು	ತೆಲಗುಭಾಷೆ (ತೆಲುಗ, ತೆಲಗ, ತೆಲುಂಗ–ತೆಲಗು ಭಾಷೆ ಮಾತಾಡುವವನು)–ಡಿಇಡಿ–೨೮೨೦
	ಉದಾ: ತೆಲಗುಬಾಳು
ತೊಗರಿ	ದ್ವಿದಳಧ್ಯಾನಗಳಲ್ಲಿ ಒಂದು
	ಉದಾ: ತೊಗರಿಕಟ್ಟೆ
ತೊಂಡೆ	ಊಸರಹಳ್ಳಿ, ಒಂದು ಜಾತಿಯಬಳ್ಳಿ ಅದರ ಹಣ್ಣು
	ಉದಾ: ತೊಂಡೆಹಾಳು

ತೋಣಸಿ ತೊಣಚಿ, ನಾಯಿ, ದನ ಮುಂತಾದವುಗಳ ಚರ್ಮಕ್ಕೆ ಹತ್ತುವ ಒಂದು ಜಾತಿಯ ನೊಣ, ತೊನಸಿ,

ಉದಾ: ತೋಣಸಿಗೆರೆ

ತೊಲ ಒಂದು ರೂಪಾಯಿ ತೂಕ

ಉದಾ: ತೊಲಮಾಮಿಡಿ

(ಮಾವಿನ ಮಿಡಿಕಾಯಿ ಒಂದು ತೊಲದಷ್ಟೆ ಬಿಡುವ ಮರಗಳು ಇದ್ದಿರಬಹುದು)

ತೋರಣ ಮಾಲೆ ಅಲಂಕಾರಕ್ಕಾಗಿ ಬಾಗಿಲಿಗೆ ಕಟ್ಟುವ ಚಿಗುರು, ಮಣಿ ಮುಂತಾದವುಗಳ ಮಾಲೆ,

ಉದಾ: ತೋರಣಗಲ್ಲು

ತೌಡು ಅಕ್ಕಿ ಮೊದಲಾದ ಕಾಳು ಕುಟ್ಟಿದಾಗ ದೊರೆಯುವ ಕಸ, ತವುಡು

ಉದಾ: ತೌಡೂರು

ದ

ದಮ್ಮ ಧರ್ಮ,

ಉದಾ: ದಮ್ಮೂರು (ದಮ್ಮ+ಊರು)

ಧೂಪ ಸಾಂಬ್ರಾಣಿ ಮೊದಲಾದ ಸುವಾಸನೆಯ ವಸ್ತುಗಳನ್ನು ಕೆಂಡದ ಮೇಲೆ ಮೇಲೆ ಹಾಕಿದಾಗ ಹೊರಡುವ ಹೊಗೆ.

ಉದಾ: ಧೂಪದಹಳ್ಳಿ

ನ

ನಡವಿ ನಡವೆ ಮನೆಯ ಮುಂಬಾಗಿಲಿಗೆ ಹೊಂದಿಕೊಂಡಿರುವ ಒಳಭಾಗ.

ಉದಾ: ನಡವಿ

ನಡುಕು ಕಂಪಿಸು, ಹೆದರು,

ಉದಾ: ಮೂಕನಡುಕು

ನಂದಿ ಆನಂದ, ಸಂತೋಷ, ಒಂದು ಜಾತಿಯಮರ, ವೃಷಭ

ಉದಾ: ನಂದಿಬೇವಾರು, ನಂದಿಹಳ್ಳಿ

ನಾಗರ ನಗರಕ್ಕೆ ಸಂಬಂಧಪಟ್ಟ, ನಾಗರಹಾವು

ಉದಾ: ನಾಗರಕಟ್ಟೆ, ನಾಗರಹಾಳು

ನಾಗ ಒಂದು ಜಾತಿಯ ಹಾವು (ಪ್ರಾಣಿವಾಚಕ ಹಾಗೂ ವ್ಯಕ್ತಿವಾಚಕ, ಸ್ತ್ರೀ:ಪುರುಷ)

ಉದಾ: ನಾಗೇನಹಳ್ಳಿ, ನಾಗಲಾಪುರ, ನಾಗೇನಹಳ್ಳಿ

ನಾಗತಿ (ಐತಿಹಾಸಿಕ) ಪಾಳೆಯಗಾರನ ಪತ್ನಿ, ಒಡೆಯನ ಹೆಂಡತಿ, ರಾಣಿ,

ಉದಾ: ನಾಗತಿಬಸಾಪುರ

ತಮಿಳು–'ನಾಟಿ' (ಡಿಇಡಿ ೩೦೧೨)

ನಾಡು ದೇಶ, ರಾಜ್ಯ, ಪ್ರಾಂತ್ಯ (ಡಿಇಡಿ–೩೦೧೨)

ಉದಾ: ನಾಡಂಗ (ನಾಡು+ಅಂಗ)

ನಾರಾಯಣ (ವ್ಯಕ್ತಿ ಯಾ ದೈವವಾಚಿ)

ಉದಾ: ನಾರಾಯಣಪುರ

ನಿಚ್ಚ ನಿರಂತರ, ಒಂದೇಸಮ, ನಿತ್ಯ

ಉದಾ: ನಿಚ್ಚಾಪುರ, ನಿಚ್ಚವ್ವನಹಳ್ಳಿ

ನಿಟ್ಟು ಇಳುಕಲು, ಇಳಿಜಾರು, ದಿಕ್ಕು, ರಾಶಿ

ಉದಾ: ನಿಟ್ಟೂರು, ನಿಟ್ಟೂರು ಬಸಾಪುರ

ನಿಡು ಉದ್ದವಾದ, ಎತ್ತರವಾದ, ಲಂಬವಾದ, ದೊಡ್ಡ

ಉದಾ: ನಿಡುಗುರ್ತಿ

ನಿಂಬ ಕಹಿಬೇವು, ಬೇವಿನಮರ

ಉದಾ: ನಿಂಬಾಪುರ, ನಿಂಬಲಗೆರೆ

ನಿಲು ತಂಗು, ತಡೆ, ಸ್ಥಿರವಾಗಿರು, ಸೈರಿಸು

ಉದಾ: ನಿಲುವಂಜಿ

ನೀಲ ನೀಲಬಣ್ಣ, ರತ್ನಗಳಲ್ಲಿ ಒಮದು, ನವನಿಧಿಯಲ್ಲಿ ಒಂದು.

ಉದಾ: ನೀಲಗುಂದ, ನೀಲಗುಂದಿ<ನೀರ್ಗ್ಗುಂದ(ಶಾಸನೋಕ್ತ ಸ್ಥಳನಾಮ)

ನೆಲ್ ಬತ್ತ

ಉದಾ: ನೆಲ್ಲುಗ್ಗಿಡಿ, ನೆಲ್ಲುಕುದುರೆ, ನೆಲ್ಲುಡಿ

ನೋವು ಶೂಲೆ, ಬೇನೆ, ವ್ಯಥೆ, ಆಳಲು

ಉದಾ: ನೋವಲಿ<ನೋವಳಿ?

ಪ

ಪಟ್ಟಣ<ಪಟ್ಟ ನಗರ, ಹಳ್ಳಿ, ವಾಸದನೆಲೆ (ಡಿಇಡಿ ೩೮೯೯) ಸಂಸ್ಕೃತದ 'ಪಟ್ಟಣ' ದಿಂದ

	ಬಂದುದು.
	ಉದಾ: ಪಟ್ಟಣ ಸೆರಗು
ಪತ್ರ	ಎಲೆ, ಗರಿ,ಪಕ್ಷಿ
	ಉದಾ: ಪತ್ರ ಭೂದಿಹಾಳ
ಪರಮ	ಅತ್ಯಂತ ಶ್ರೇಷ್ಠ
	ಉದಾ: ಪರಮದೇವನಹಳ್ಳಿ ಪಾಪಿನಾಯಕ (ವ್ಯಕ್ತಿವಾಚಿಕ)
	ಉದಾ: ಪಾಪಿನಾಯಕನಹಳ್ಳಿ
ಪಾಲ್(ಉ)	ಹಾಲು, ಕ್ಷೀರ
	ಉದಾ: ಪಾಲಯ್ಯನ ಕೋಟೆ (ಪಾಲ್–ಅಯ್ಯನ–ಕೋಟೆ)
ಪಿಂಜರ	ಬಂಗಾರ, ಅಸ್ತಿಪಂಜರ, ಪಂಜರ
	<ಪಿಂಜಾರ–(ಜನಾಂಗವಾಚಿ) ಮುಸ್ಲಿಮರ ಒಂದು ಬಣ.
	ಉದಾ: ಪಿಂಜರ ಹೆಗ್ಡಾಳ<ಪಿಂಜಾರ ಹೆಗ್ಡಾಳ
ಪೂಜಾರ	ಅರ್ಚಕ, ಪೂಜೆ ಮಾಡುವವನು
	ಉದಾ: ಪೂಜಾರಹಳ್ಳಿ
ಪೃಥ	ಪೃಥೆ–ಭೂಮಿ, ಧರೆ
	ಉದಾ: ಪೃಧೇಶ್ವರ<ಪೃಧವೇಶ್ವರ
ಪುನಬ	<ಹುಣಿಬ–ಹುಣಿಸೆ (ವೃಕವಾಚ)
	(ನ<ಣ) (ಹ<ಪ)
	ಉದಾ: ಪುನಬಗಟ್ಟಿ<ಹುಣಬಗಟ್ಟ
ಪೋತ(ಲ)	ಹೋತ, ಕೋಣ, ಗಂಡುಪ್ರಾಣಿ, ಗಂಡುಪಕ್ಷಿ (ಡಿಇಡಿ ೩೭೪೭)
	ತಮಿಳು–ಪೋತ್ತು, ತೆಲಗು–ಪೋತು.
	ಕೊಡನು–ಪೋತು
	ಉದಾ: ಪೋತಲಗಟ್ಟಿ
ಮೊಪ್ಪ	ಬೊಪ್ಪ–ಸ್ವಾಮಿ, ಒಡೆಯ, ತಂದೆ
	ಉದಾ: ಮೊಪ್ಪನಹಾಳು

ಬ

ಬಂಕ	ಮನೆಯ ಮುಂದಿನ ಜಗಲಿ

ಬಳ್ಳಾರಿ ಜಿಲ್ಲೆಯಲ್ಲಿ ಸಾಮಾನ್ಯವಾಗಿ ಎಲ್ಲೆಡೆ ಬಂಕ (ಜಗಲಿ)ಗಳುಳ್ಳ ಮನೆಗಳನ್ನು ಕಾಣಬಹುದು. ವಿಶೇಷವಾಗಿ ದೊಡ್ಡ ದೊಡ್ಡ ಜಗಲಿಗಳಿರುವ ಮನೆಗಳಿರುವ ವಸತಿ ಸ್ಥಾನಗಳನ್ನೂ ಕಾಣಬಹುದಾಗಿದೆ.

ಬಣವಿ –ಮೆದೆ, ರಾಶಿ
ಉದಾ: ಬಣವಿಕಲ್ಲು

ಬದನ –ಬದನೆ (ಸಸ್ಯವಾಚಿ)
ಉದಾ: ಬದನಹಟ್ಟಿ

ಬಂಡಿ –ಬಂಡೆ–ದೊಡ್ಡಕಲ್ಲು, ಶಿಲೆ
ಉದಾ: ಶಂಕರಬಂಡಿ

ಬಸವ –ಗೂಳಿ, ನಂದಿ
ಉದಾ: ಬಸಾಪುರ< ಬಸವಾಪುರ

ಬಳರಿ –ಒಂದು ಕ್ಷುದ್ರ ದೇವತೆಯ ಹೆಸರು
ಉದಾ: ಬಳ್ಳಾರಿ, ಬಳರಿ, ಬಳ್ಳಾರಿ, ಗೋನಾಳ, ಚಿಕ್ಕ ಬಳ್ಳಾರಿ

ಬಾಣ –ಕಣಿ, ಗೋರಂಟಗಿಡ, ಒಬ್ಬ ರಾಕ್ಷಸ ಹೆಸರು (ಸಂ ಕ ನಿ)
ತಮಿಳು–ವಾನವ್–ಅಕಾಶ, ಮೋಡ, ಮಳೆ
ತೆಲುಗು–ವಾನ– ಮಳೆ–ಮಲೆಯಾಲಂ–ವಾನಮ್–ಆಗಸ, ಸ್ವರ್ಗ
ಕನ್ನಡ–ಬಾನ್– ಬಾನ, ಬಾಣ–ಅಕಾಶ (ಡಿಇಡಿ– ೪೪೧೦)
ಉದಾ: ಬಾಣಾಪುರ.

ಬ್ಯಾಲ –ಬೇಲ, ಬೆಳವಲ (ವೃಕ್ಷವಾಚಿ)
ಉದಾ: ಬ್ಯಾಲಹುಣಸಿ, ಬ್ಯಾಲಚಿಂತ

ಬೀಸು –ಎಸೆ, ಒಗೆ, ಉದ್ದು, ಲಂಬ, ನೀಳ
ಉದಾ: ಬೀಸಳ್ಳಿ

ಬುಕ್ಕ (ವ್ಯಾಕ್ತಿವಾಚಿ) –ಬುಕ್ಕರಾಯ
ಉದಾ: ಬುಕ್ಕಸಾಗರ

ಬೂದಿ ಬಸ್ಮ–ವಿಭೂತಿ
ಉದಾ: ಬೂದುಗುಪ್ಪ, ಬುದಿಗುಂಪೆ

ಬೆಣ(ಚು ಹೋಪುಳ್ಳ ಕಲ್ಲು ಬಿಳಿಯ ಬಣ್ಣದ ಕಲ್ಲು

ಉದಾ: ಬೆಣಕಲ್ಲು< ಬೆಣಚುಕಲ್ಲು

ಬೆಣ್ಣೆ –ಬೆಣ್ಣೆ

ಉದಾ: ಬೆಣ್ಣಕಲ್ಲು, ಬಿಣ್ಣಿಹಳ್ಳಿ, (ಶಾಸನೋಕ್ತ ಸ್ಥಳನಾಮ)

ಬೆಳು –ಬಿಳುಪಾದ, ಶುಭ್ರವಾದ

ಉದಾ: ಬೆಳಗಲ್ಲು

ಬೇವು –ಒಂದು ಜಾತಿಯ ಮರ

ಉದಾ: ಬೇವೂರು, ಬೇವಿನಹಳ್ಳಿ, ಬೇವಿನ ವಡ್ಡಗೇರಿ, ಕಕ್ಕಬೇವಿನಹಳ್ಳಿ

ಬೈಲು –ಬಯಲು ಪ್ರದೇಶ

ಉದಾ: ಬೈಲೂರು, ಬಯಲೂರು, ಬೈಲಕುಂದಿ

ಬೊಮ್ಮ –ಸ್ವಾಮಿ, ಒಡೆಯ, ತಂದೆ, ತಾತ

ಬ್ರಹ್ಮ, ದೈವ, ವಿಧಿ

ಉದಾ: ಬೊಮ್ಮಲಾಪುರ, ಬೊಮ್ಮನಹಾಳು, ಬೊಮ್ಮನಹಳ್ಳಿ

ಬೊಮ್ಮನಹಾಳು, ಬೊಮ್ಮಗಟ್ಟ

ಬೈರ –ಭೈರವ, ಶಿವ, ಭಿಕರ

ಉದಾ: ಭೈರಾಪುರ

ಮಕರ –ಮೊಸಳಿ (ಪ್ರಾಣಿವಾಚಿ)

ಉದಾ; ಮಕರಬ್ಬಿ

ಮನ್ನೆ –ಮನ್ನೆಯ ಗೌರವಕ್ಕೆ ಪಾತ್ರರಾದವನು. ಮನ್ಯ, ನಯಕ, ಮುಖಂಡ

ಉದಾ: ಮನ್ನೇರು ಮಸಲವಡ<ಮಾನ್ಯರ ಮಸಲವಾಡ ಮರಿಯಮ್ಮ

(ವ್ಯಕ್ತಿವಾಚಕ– ಸ್ತ್ರೀ)

ಉದಾ; ಮರಿಯಮ್ಮನಹಳ್ಳಿ

ಮಲಪ ಮಲ್ಲಪ–(ದೈವವಾಚಿ) ಮಲ್ಲಿಕಾರ್ಜುನ

ಉದಾ; ಮಲಪನಗುಡಿ, ಮಲ್ಲಾಪುರ,

ಮಲ್ಲ (ವ್ಯಕ್ತಿವಾಚಿ ಹೆಸರು)

ಉದಾ: ಮಲ್ಲನಾಯಕನಹಳ್ಳಿ

ಮಾಟ –ಕೆಲಸ, ಅಚ್ಚುಕಟ್ಟು, ಒರಣ, ಕಣ್ಕಟ್ಟು

ಉದಾ: ಮಾಟೂರು

ಮಿಂಚು –ದಾಟು,ವೇಗವಾಗಿ ಚಲಿಸು, ಹೊಳಪು, ಶ್ರೇಷ್ಠವಾಗು
ಉದಾ: ಮಿಂಚೇರಿ (ಮಿಂಚು+ಏರಿ)

ಮಿಟ್ಟೆ –ದಿಣ್ಣೆ,ಎತ್ತರವಾದದು
ಉದಾ: ಮಿಟ್ಟೆಸೂಗೂರು

ಮಿಡಿ –ಹೀಚು, ಕಸುಗಾಯಿ
ಉದಾ: ತೋಲಮಾಮಿಡಿ

ಮೀನ್ –(ಪ್ರಾಣಿವಾಚಿ) ಮಿನು
ಉದಾ: ಮೂನಾಕೇರಿ, ಮೀನಹಳ್ಳಿ

ಮುಂಡ –ನಾಶಮಾಡು, ಮುಂಡು–ಮುದ್ದು, ಪ್ರೀತಿ
ಉದಾ: ಮುಂಡರಗಿ

ಮುತ್ತು –ಆಕ್ರಮಣ, ಮುತ್ತಿಗೆ, ಮುತ್ತುಗೆ, ಚುಂಬನ
ಉದಾ: ಮುತುಕೂರು, ಮುತ್ತಿಗೆ, ಮುದ್ದಾಪುರ

ಮುಸುಡಿ –ಒಂದು ಬಗೆಯ ಆಯುಧ, ಮುಖ, ಮೋರೆ
ಉದಾ: ಮುಸುಡಿಪುರ

ಮುಸ್ತ <ಮುಸ್ತೆ– ಒಂದು ಜಾತಿಯ ಗಿಡ
ಉದಾ: ಮುಸ್ತಗಟ್ಟೆ< ಮುಸೆಗಟ್ಟ

ಮೋಕ –ಮೊಕ್ಷ, ಬಿಡುಗಡೆ, ಸ್ವಾತಂತ್ರ್ಯ, ಮೋಕು –ತುದಿ, ಶಿಖರ
ಉದಾ: ಮೋಕಾ, ಮೋಕಾ ಗೋನಾಳ

ಮಗ್ಗಿ –(ಮಗಿ)– ಮಣ್ಣಿನ ಚಿಕ್ಕ ಪಾತ್ರೆ
ಉದಾ: ಕುಡುತಿನಿ ಮಗ್ಗಿ

ಮಂಗ –ಕೋತಿ, ಕಪಿ
ಉದಾ: ಮಂಗಾಪುರ

ಯತ್ತು –ಎತ್ತು (ಧ್ವನಿವ್ಯತ್ಯಯ)– ವೃಷಭ
ಉದಾ: ಯತ್ತಿನಬೂದಿಹಾಳು

ಯರ್ರ –ಎರ್ರ– ಏಳೆದಾಡು, ಜಗ್ಗಾಡು, (ಡಿಇಡಿ ೪೨೭)
ಉದಾ: ಯರ್ರಲಿಂಗನಹಳ್ಳಿ, ಯರ್ರಗುಡಿ

ಯರಿ <ಏರಿ, ಯುದ್ಧಮಾಡು, ಮೊನಚಾದ ಸಾಧನದಿಂದ ತಿವಿ

ಉದಾ: ಯರಿಂಗಳಗಿ, ಎರಿಂಗಳಿಗಿ

ಯಮ್ಮಿ –ಎಮ್ಮಿ=ಎಮ್ಮೆ

ಉದಾ: ಯಮ್ಮಿಗನೂರು

ಯಳ – ಯಲ< ಎಲ=ಎಲೆ (ಡಿಇಡಿ ೪೭೩)

ಉದಾ:ಯಳಪಿ< ಎಲಪಿ

(ಎಲ+ಅಪ್=ಎಲಪ್> ಯಳಪಿ

ರಾವಿ –ಆಲದಪುರ (ವೃಕ್ಷವಾಚಿ)– ಅರಳಿಪುರ (ಡಿಇಡಿ ೧೬೮, ತೆಲುಗು ಶಬ್ದ)

ಉದಾ: ರಾವಿಹಾಳು, ರಾರಾವಿ.

ಲಕ್ಷ್ಮಿ –(ವ್ಯಕ್ತಿ ಹಾಗೂ ದೈವವಾಚಿ)

ಉದಾ: ಲಕ್ಷ್ಮಿಪುರ

ಲಿಂಗ –ಶಿವನ ಒಂದು ಪ್ರತೀಕ

ಉದಾ: ಲಿಂಗದಹಳ್ಳಿ, ಲಿಂಗದೇವನಹಳ್ಳಿ

ವಡ್ಡ –ಕಲ್ಲುಕುಟಿಗ, ಒರಟು ಸ್ವಭಾವದ

ಉದಾ: ವಡ್ಡರಹಟ್ಟಿ, ವಡ್ಡರಹಳ್ಳಿ

ವಡ್ಡು –ಅಡ್ಡಗಟ್ಟೆ, ಮಡಿ, ಪಾತಿ

ಉದಾ: ವಡ್ಡು

ವರದ –ವರವನ್ನು ದಯಪಾಲಿಸುವ, ಅನುಗ್ರಹಿಸುವ (ದೈವವಾಚಿ)

ಉದಾ: ವರದಾಪುರ

ವಾಯಿ –ಬಾವಿ

ಉದಾ:ಒರುವಾಯಿ

ವಾರ –ರಾಶಿ, ಒಟ್ಟಲು, ಗುಂಪು, ಸಮೂಹ

ಉದಾ: ಶ್ರೀವಾರ> ಸಿರವಾರ>ಸಿರಿವಾರ

ವೀರ –ಸೂರ, ಕಲಿ, ಬಲಿಷ್ಠ

ಉದಾ: ವೀರಾಪುರ, ವೇಣಿ ವೀರಾಪುರ

ವೆಂಕಟ _ವ್ಯಕ್ತಿವಾಚಿ ಹಾಗೂ ದೈವವಾಚಿ

ಉದಾ: ವೆಂಕಟಾಪುರ

ವೇಣಿ –(ತಮಿಳು ಶಬ್ದ)– ಬಿಳಿ, ಪರಿಶುದ್ದ, ನಿಷ್ಕ್ಮಲಶ,(ಡಿಇಡಿ ೪೫೭೫)

ಉದಾ: ವಣೆನೂರು

ತಮಿಳು–ವೆಣ್–ಣಿಯೇ–ವೆಣ್ಣಿಯ್–(ಬೆಣ್ಣಿ)– (ಊರು)

ವೇಣಿ–ನದಿ, ಪ್ರವಾಹ.

ಉದಾ: ವೇಣಿವೀರಾಪುರ

ಶಂಕರ –(ವ್ಯಕ್ತಿ ಹಾಗು ದೈವವಾಚಿ)

ಉದಾ: ಶಂಕರಬಂಡ, ಶಂಕರಪುರ

ಶ್ರೀ –ಸಿರಿ, ಧನ, ಸಂಪತ್ತು

ಉದಾ: ಶ್ರೀವಾರ>ಸಿರಿವಾರ> ಸಿರವಾರ

ಸಂಕ –ಸೇತುವೆ, ಪೂಲು

ಉದಾ: ಸಂಕಲಾಪುರ

ಸಂಗ –ಸಂಗಮ, ಸೇರಿಕೆ, ಮೈತ್ರಿ, ಸಂಘ

ಉದಾ: ಸಂಗನಕಲ್ಲು

ಸಂಜೀವ _(ವ್ಯಕ್ತಿವಾಚಕ)– ಪ್ರಾದೇಶಿಕ ಮುಖ್ಯಸ್ಥ

ಉದಾ: ಸಂಜೀವರಾಯನಕೋಟೆ

ಸಮುದ್ರ –(ಜಲವಾಚಕ) ಕಡಲು, ಸಾಗರ

ಉದಾ: ಸೋಮುಸಮುದ್ರ, ದೇವಸಮುದ್ರ, ಅಂಕ ಸಮುದ್ರ

ಸಾಗರ –ಜಲಶಯ

ಉದಾ: ರಾಮಸಾಗರ, ಬುಕ್ಕಸಾಗರ, ಹಳಸಾಗರ

ಸಿಂಗ –(ದೈವವಾಚಿ)–ಶೃಂಗ, ಬೆಟ್ಟದ ತುದಿ

ಉದಾ: ಸಿಂಗನಾಥನಹಳ್ಳಿ, ಸಿಂಗ್ರಹಳ್ಳಿ

ಸಿಂಧ –ಆಳರಸರ ವಂಶ

ಉದಾ: ಸಿಂಧಗೇರಿ. ಸಿಂಧವಾಳ

ಸಿಡಿ –ಕೊಕ್ಕೆ, ಗ್ರಾಮದೇವತೆಗೆ ಮಾಡುವ ಒಂದು ವಿದದ ಶೆವೆ

ಉದಾ: ಸಿಡಿಗಿನಮೊಳ

ಸಿದ್ಧ ಸಿದ್ದಿಯನ್ನು ಪಡೆದವನು

ಉದಾ: ಸಿದ್ದರಗಡ್ಡೆ, ಸಿದ್ದಾಪುರ, ಸಿದ್ದರಗುಡ್ಡ, ಸಿದ್ಧಾಪುರ

ಸಿದ್ದಮ್ಮ –(ವ್ಯಕ್ತಿವಾಚಕ ಪದ)

ಉದಾ: ಸಿದ್ದಮ್ಮನಹಳ್ಳಿ

ಸಿರಿ –ಸಿರ–ಮಸ್ತಕ, ತಲೆ

ಉದಾ: ಸಿರಿಗೇರಿ, ಸಿರುಗುಂಪೆ

ಸೂಗ ದಿಗ್ಭ್ರಮೆ, ಕಂಗಾಲು, ಸೂಗರಿಸು,

ಉದಾ: ಸೂಗೂರು,ಮಿಟ್ಟೆ ಸೂಗೂರು, ಬೇವಿನಮರದ ಸೂಗೂರು

ಸೆರಗು –ಅಂಚು, ತಂದಿ, ಆಶ್ರಯ

ಉದಾ: ಪಟ್ಟಣಸೆರಗು

ಸೊನ್ನ –ಸ್ವರ್ಣ, ಚಿನ್ನ

ಉದಾ: ಸೊನ್ನ

ಸೋಮ –ಚಂದ್ರ, ನೀರು, ಶಿವ, ಅಮೃತ, ಸುಧೆ

ಉದಾ: ಸೋಮ ಸಮುದ್ರ, ಸೋಮೇನಹಳ್ಳಿ ಸೋಮಲಾಪುರ

ಹಗಲ್ –ಹಗಲ್–ರಂಧ, ತೂತು, ಹುಗಿಲ್–ಸೀಳಿರುವುದು. ತುಂಡಾಗಿರುವುದು

ಉದಾ: ಹಗಲೂರು<ಹುಗಲೂರು

ಹಗಲೂರು ಹೊಸಳ್ಳಿ< ಹಗಲೂರು ಹೊಸಳ್ಳಿ

ಹಗರಿ –ನೀರಿನ ಹರಿವು, ತೊರೆ, ಚಿಕ್ಕ ನದಿ

ಉದಾ: ಹಗರಿಬೊಮ್ಮನಹಳ್ಳಿ, ಹಗರಿ ಗಜಾಪುರ, ಹಗರಿ ಕ್ಯಾದಿಗಿಹಳ್ಳಿ, ಹಗರಿ

ಹಟ್ಟಿ ಚಿಕ್ಕ ಹಳ್ಳಿ, ಕೊಟ್ಟಿಗೆ, ಬೀಡು, ಒಂದು ಗುಂಪಿನವರು ವಾಸಿಸುವ ಸ್ಥಳ

ಉದಾ: ವಡ್ಡರಹಟ್ಟಿ, ಬದನಹಟ್ಟಿ, ಎತ್ತಿನಟ್ಟಿ, ಎಮ್ಮೆಹಟ್ಟಿ,

ಬಯಲುತುಂಬರ ಹಟ್ಟಿ, ಬನ್ನಿಹಟ್ಟಿ, ಗೊಲ್ಲರಹಟ್ಟಿ.

ಹಡಗಲಿ <ಹಡಗಲಿ=ಒಂದು ಬಗೆಯ ಬುಟ್ಟಿ

ಉದಾ: ಹೂವಿನ ಹಡಗಲಿ<ಹೂವಿನ ಹಡಗಲಿ

ಹಿರೇಹಡಗಲಿ<ಹಿರೇಹಡಲಿಗೆ.

ಹಂದಿ ಒಂದು ಜಾತಿಯ ಪ್ರಾಣಿ

ಉದಾ: ಹಂದಿಗನೂರು, ಹಂದಿಹಾಳ.

ಹದಳ, ಹದುಳ<ಪದುಳ–ಕ್ಷೇಮ, ಸಂತೋಷ ಉದಾ: ಹಿರೇಹದಳಗಿ.

ಹದ್ದು ಗಡಿ, ಸೀಮೆ, ಒಂದು ಜಾತಿಯ ಪಕ್ಷಿ

ಉದಾ: ಹದ್ದಿನಗುಂಡು

ಹನ್ಸಿ — <ಹನಸಿ<ಹನಸು=ಹೇಳಿಕೆ, ವೇದೋಕ್ತಿ
ಉದಾ: ಹನ್ಸಿ.

ಹನುಮ — ಹನುಮಂತ, ಆಂಜನೇಯ (ವ್ಯಕ್ತಿ ಹಾಗೂ ದೈವವಾಚಕ)
ಉದಾ: ಹನುಮನಹಳ್ಳಿ, ಹನುಮಗುಂಡನಹಳ್ಳಿ.

ಹಂಪ — (ದೈವವಾಚಕ) ಸ್ಥಳೀಯ ಆರಾಧ್ಯದೈವ–(ಪಾರ್ವತೀ ದೇವಿ)
ಉದಾ: ಹಂಪಾಪುರ, ಹಂಪಾಪಟ್ಣ, ಹಂಪದೇವನಹಳ್ಳಿ, ಹಂಪಸಾಗರ, ಹಂಪಿ.

ಹರ — ಶಿವ, ನಾಶಮಾಡುವ
ಉದಾ: ಹರವಡಿ, ಹರಪನಹಳ್ಳಿ, ಹರಬಾವಿ, ಹರಕನಹಳ್ಳಿ

ಹರಗು — ಹರಡು, ಚೆಲ್ಲು, ಕುಂಟೆಯಿಂದ ಹರತೆ ಹೊಡೆ
ಉದಾ: ಹರಗಿನದೋಣಿ

ಹರವಿ — ಮಣ್ಣಿನಬಾನಿ,
ಉದಾ: ಹರವಿ.

ಹಲು — <ಹಳು–ಕಾಡು, ಅರಣ್ಯ, ಎಲ್ಲೇ, ಮೇರೆ
ಉದಾ: ಹಲುವಾಗಲು<ಹಳುವಾಗಲು

ಹಳ — (<ಹಳ್ಳ?) ನೇಗಿಲು, ಹಲ
ಉದಾ: ಹಳಸಾಗರ (<ಹಳ್ಳಸಾಗರ?), ಹಳಕುಂದಿ

ಹಳೇ — ಹಳೆಯ, ಪುರಾತನ,
ಉದಾ: ಹಳೇಕೋಟೆ

ಹಳ್ಳಿ — ವಾಸದ ನೆಲೆ, ಚಿಕ್ಕೂರು, ಗ್ರಾಮ, ಪಳ್ಳಿ
ಉದಾ: ಮಣಿಹಳ್ಳಿ, ಮತ್ತಿಹಳ್ಳಿ, ಚಪ್ಪರದಹಳ್ಳಿ, ಹಳ್ಳಿಕೇರಿ
ಸಿದ್ದಮ್ಮನಹಳ್ಳಿ, ನಾಗೇನಹಳ್ಳಿ, ತಿಪ್ಪೇನಹಳ್ಳಿ.

ಹಾವು — ಉರಗ, ಸರ್ಪ,
ಉದಾ: ಹಾವಿನಹಾಳು

ಹಾಳು — ಪಾಳ್–ಹಾಳುಬಿದ್ದಸ್ಥಳ, ಬೀಳು
ಪಾಳ್>ಹಾಳ್, ಪಾಳ್ಯ>ಪಾಳು>ಹಾಳು (?)>ಹಾಳ
ಪಾಳ್ಯ–ಗುಂಪು, ಬಣ.
ಉದಾ: ಜಾಲಿಹಾಳ–ಹಾಳೂರು, ಹಾಳು ಮುರವಳ್ಳಿ, ತೊಂಡೆಹಾಳು,

ಬೂದುಹಾಳು, ಕೋಟೆಹಾಳು, ಕಲ್ಲುಕುಟಿಗನ ಹಾಳ, ಬೊಮ್ಮನಹಾಳ, ಬೊಮ್ಮನಹಾಳು.

ಹ್ಯಾರ — ಹೇರ್<ಪೇರ್–ವಿಶಾಲವಾದ, ದೊಡ್ಡ
ಉದಾ: ಹ್ಯಾರಡ<ಹೇರಡ<ಪೇರಡ, ಪೇರ್+ ಅಡಿ (?)

ಹ್ಯಾಳ್ಯ — <ಪಾಳ್ಯ<ಪಾಳಯ=ಗುಂಪು,ಬಣ
ಉದಾ: ಹ್ಯಾಳ್ಯ.

ಹಿಕ್ಕಿ — ಹಿಕ್ಕಿ–ಪ್ರಾಣಿಗಳ ಹಿಕ್ಕೆ, ಪಿಳ್ಕಿ
ಉದಾ: ಹಿಕ್ಕಿ ಮೇಗೇರಿ

ಹಿರೇ — <ಹಿರಿಯ=ದೊಡ್ಡ, ಶ್ರೇಷ್ಠ
ಉದಾ: ಹಿರೇಹಡಗಲಿ, ಹಿರೇಮೇಗಳಗೇರಿ, ಹಿರೇಗೊಂಡನಹಳ್ಳಿ, ಹಿರೇಕಲ್ಲು, ಹಿರೇಹಾಳು, ಹಿರೇವಡ್ಡರಹಳ್ಳಿ.

ಹುಡತ — <ಹುಡದ<ಹುಡದಿ=ಗಲಾಟೆ, ಹದ್ದಲ
ಉದಾ: ಹುಡುನೂರು ಹುಡದನೂರು ಹುಡದಿನೂರು

ಹುಣಸಿ — ಪುಣಿಸೆ–ಹುಣಸೆಮರ ಮತ್ತು ಅದರ ಹಣ್ಣು
ಉದಾ: ಬ್ಯಾಲಹುಣಸಿ, ಹುಣಸೀಕಟ್ಟೆ

ಹುಡಂ — <ಹುಡೆ<ಹೂಡೆ= ಕೋಟೆಯ ಅಗ್ರಭಾಗ, ಬುರುಜು (ಐತಿಹಾಸಿಕ)
ಉದಾ: ಹುಡೆಂ

ಹುರುಳಿ — (ಸಸ್ಯವಾಚಿ)–ಒಂದುಬಗೆಯ ದ್ವಿದಳಧಾನ್ಯ
ಉದಾ: ಹುರುಳಿಹಾಳ.

ಹುಲಿ — (ಪ್ರಾಣಿವಾಚಕ) ಪುಲಿ, ಒಂದುಬಗೆಯ ಕ್ರೂರಪ್ರಾಣಿ.
ಉದಾ: ಹುಲಿಕುಂಟೆ, ಹುಲಿಕೇರಿ, ಹುಲಿಕಟ್ಟೆ.

ಹೆಗ್ಗಡ — ಪೆಗ್ಗಡೆ–ನಾಯಕ ಹೆಗ್ಗಡೆ
ಉದಾ: ಹೆಗ್ಗಡಾಳ ಹೆಗ್ಗಡಹಾಳ

ಹೊನ್ನು — <ಹೊನ್<ಪೊನ್–ಚಿನ್ನ, ಬಂಗಾರ, ಒಂದು ಬಗೆಯಲೋಹ
ಉದಾ: ಹೊನ್ನಹಳ್ಳಿ, ಹೊನ್ನರಳ್ಳಿ.

ಹೊಸ — ಪೊಸ–(ಕಾಲವಾಚಕ) ಹೊಸತಾದ, ಇತ್ತೀಚಿನ
ಉದಾ: ಹೊಲಹಳ್ಳಿ, ಹೊಸಕೇರಿ, ಹೊಸಪೇಟೆ, ಹೊಸಕೋಟೆ, ಹೊಸೂರು.

ಹೊಳಿ (ಜಲವಾಚಿಕ) ನದಿ.

ಉದಾ: ಹೊಳಗುಂದಿ<ಹೊಳಿಗುಂದಿ

ಹೊಳಲು ಪೊಳಲ್– ಗ್ರಾಮ, ಪಟ್ಟಣ, ವಸತಿಯ ನೆಲೆ

ಉದಾ: ಹೊಳಲು< ಗಂಡರಾದಿತ್ಯನ ಪೊಳಲ್(ಶಾಸನೋಕ್ತ ಸ್ಥಳನಾಮ)

(ಈ ಮೇಲ್ಕಂಡ ಬಳ್ಳಾರಿ ಜಿಲ್ಲೆಯ ಕೆಲವು ಪ್ರಮುಖ ಊರುಗಳ ಹೆಸರುಗಳನ್ನು ಜಿಲ್ಲಾವಾರು ಮಾಹಿತಿಗಾಗಿ ವಿವರಿಸಿದೆ.)

ಅಧ್ಯಾಯ – ೫

ಬಳ್ಳಾರಿ ತಾಲ್ಲೂಕಿನ ಸ್ಥಳನಾಮ ಅಧ್ಯಯನ

೧. ಭಾಷಿಕ ನೆಲೆ

೨. ಸಾಂಸ್ಕೃತಿಕ ನೆಲೆ

೩. ಪ್ರಾಕೃತಿಕ ನೆಲೆ

೪. ಸಾಮಾಜಿಕ ನೆಲೆ

೫. ಜಾನಪದೀಯ ನೆಲೆ

ಅಧ್ಯಾಯ – ೫

೫.೧ ಭಾಷಿಕ ನೆಲೆ

ಬಳ್ಳಾರಿ ಕನ್ನಡ ಉಪಭಾಷೆ:

ಪರಸ್ಪರ ಅರಿವಿನ ಪ್ರಮಾಣ (Mutual Intelligibility) ಕಡಿಮೆ ಇರುವುದರ ಆಧಾರದ ಮೇಲೆ ಪ್ರಮುಖವಾಗಿ ಕನ್ನಡದಲ್ಲಿ ನಾವು ಈಗ ಮೈಸೂರು ಉಪಭಾಷೆ, ಧಾರವಾಡ ಉಪಭಾಷೆ, ಕರಾವಳಿ (ಮಂಗಳೂರು, ಕಾರವಾರ) ಉಪಭಾಷೆ ಎಂದು ಉಪಭಾಷಾ ವರ್ಗೀಕರಣ ಮಾಡುತ್ತೇವೆ. ಅಂದರೆ ಇಷ್ಟೇ ಉಪಭಾಷೆಗಳು ಎಂದಲ್ಲ. ಮಂಡ್ಯ ಉಪಭಾಷೆ, ಬೀದರ್ ಉಪಭಾಷೆ, ಬಿಜಾಪುರ ಭಾಷೆ ಮತ್ತು ಕಲಬುರ್ಗಿ ಉಪಭಾಷೆ ಎಂತಲೂ ಗುರುತಿಸುತ್ತೇವೆ. ಹಾಗೆಯೇ ಇನ್ನು ಕೆಲವು ಉಪಭಾಷೆಗಳನ್ನು ಅವುಗಳ ಸ್ವರಭಾರದಲ್ಲಿಯ (Intonation) ಅಂತರ, ಒತ್ತು (Stress) ಕೊಡುವುದರಲ್ಲಿಯ ಅಂತರ, ಸ್ವರ ವಿಧಾನ (Tone feauture) ಹಾಗೂ ಶಬ್ದ, ವಾಕ್ಯಗಳ ಉಚ್ಚಾರಣಾ ಕಾಲಾವಧಿಗಳಲ್ಲಿಯ ಅಂತರಗಳಿಂದಾಗಿ ಪರಸ್ಪರ ಕಲಿಯಲು ಸಾಧ್ಯವಾಗದೇ ಹೋಗಬಹುದು. ಅಂಥವುಗಳಲ್ಲಿ ಪ್ರಮುಖವಾಗಿ ತೇಲಿಬರುವ ಸೂಕ್ಷ್ಮ ಅಧ್ಯಯನಕ್ಕೆ ಒಳಪಡಬಲ್ಲ ಸಾಮರ್ಥ್ಯ ಪಡೆದಿರುವಂಥಹುದು ಬಳ್ಳಾರಿ ಜಿಲ್ಲೆಯ ಬಳ್ಳಾರಿ ಹೊಸಪೇಟೆ, ಸೊಂಡೂರು, ಸಿರುಗುಪ್ಪ ತಾಲ್ಲೂಕಗಳಲ್ಲಿ ಕಂಡು ಬರುವ ಭಾಷೆ. ಈ ಭಾಷೆಯೇ ಬಳ್ಳಾರಿ ಕನ್ನಡ (Kannda Language of Kannada Dist.) ಅಥವಾ ಬಳ್ಳಾರಿ ಉಪಭಾಷೆ (Dialect of Ballary Dist.) ಎಂದು ಹೇಳಬಹುದು.

ಭೂಪಟದಲ್ಲಿ (Map) ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕದ ಹೃದಯ ಭಾಗದಲ್ಲಿ ಗುರುತಿಸುತ್ತೇವೆ. ಇಲ್ಲಿ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ, ಸೊಂಡೂರು ಜಿಲ್ಲೆಯ ಒಂದು ಭಾಗದ ತಾಲ್ಲೂಕುಗಳಾದರೆ ಉಳಿದ ೩ ತಾಲ್ಲೂಕುಗಳು ಕೂಡ್ಲಿಗಿ, ಹಗರಿಬೊಮ್ಮನ ಹಳ್ಳಿ ಮತ್ತು ಹಡಗಲಿ ಮತ್ತೊಂದು ಭಾಗದವುಗಳು. ಜಿಲ್ಲೆಯ ಭಾಷಾ ಪರಿವೀಕ್ಷಣೆಯ ಅನುಕೂಲತೆಯ ದೃಷ್ಟಯಿಂದ ಮೊದಲನೆಯ ೩ ತಾಲ್ಲೂಕುಗಳನ್ನು ಉನ್ನತ ಭಾಗದ ತಾಲ್ಲೂಕುಗಳೆಂದು ವಿಂಗಡಿಸಿಕೊಳ್ಳುವುದು ಸೂಕ್ತವೆಂದು ತೋರುತ್ತದೆ.

ಬಳ್ಳಾರಿ ಜಿಲ್ಲೆಯ ಪೂರ್ವಕ್ಕೆ ನೆರೆಯ ರಾಜ್ಯ ಆಂಧ್ರ ಪ್ರದೇಶದ ಗುಂತಕಲ್ ಜಿಲ್ಲೆಯಿಂದಲೂ, ಪಶ್ಚಿಮಕ್ಕೆ ಧಾರವಾಡ ಜಿಲ್ಲೆಯಿಂದಲೂ ಉತ್ತರಕ್ಕೆ ರಾಯಚೂರು ಜಿಲ್ಲೆಯಿಂದಲೂ ಮತ್ತು ದಕ್ಷಿಣಕ್ಕೆ ಚಿತ್ರದುರ್ಗ ಜಿಲ್ಲೆಯಿಂದಲೂ ಆವೃತವಾಗಿದೆ. ಉನ್ನತ ಭಾಗದ ತಾಲ್ಲೂಕುಗಳಾದ ಸಿರಗುಪ್ಪ, ಬಳ್ಳಾರಿ, ಹೊಸಪೇಟೆ ಮತ್ತು ಸೊಂಡೂರುಗಳಲ್ಲಿ

ಕ್ರಮವಾಗಿ ೮೬+೧೦೪+೭೮+೮೫ ಒಟ್ಟಾರೆ ೩೫೩ ಗ್ರಾಮಗಳಿದ್ದು ಅವನತ ಭಾಗದ ಹಗರಿಬೊಮ್ಮನಳ್ಳಿಯಲ್ಲಿ ಹಡಗಲಿ ಮತ್ತು ಕೂಡ್ಲಿಗಿ ತಾಲ್ಲೂಕುಗಳಲ್ಲಿ ಕ್ರಮವಾಗಿ ೩೧+೭೬+೯೮ ಒಟ್ಟು ೨೦೫ ಗ್ರಾಮಗಳಿವೆ. ಜಿಲ್ಲೆಯ ೨ ಭಾಗದ ಗ್ರಾಮಗಳ ಸಂಖ್ಯೆ ೩೫೩+೨೦೫ = ೫೫೮ ಇದ್ದು ಶೇ. ೭೩.೬೪ರಷ್ಟು ಜನ ಕನ್ನಡ ಭಾಷೆಯನ್ನಾಡುತ್ತಾರೆ.

ಜಿಲ್ಲೆಯ ಉನ್ನತ ಭಾಗದ ತಾಲ್ಲೂಕುಗಳ ಭಾಷೆಯಲ್ಲಿ ಕಂಡು ಬರುವ ಕೆಲ ವೈಶಿಷ್ಟ್ಯಗಳು ಅವನತ ಭಾಗದ ತಾಲ್ಲುಕುಗಳ ಭಾಷೆಯಲ್ಲಿ ಕಂಡು ಬರದ ಕಾರಣ ಬಳ್ಳಾರಿ ಕನ್ನಡೆಂದರೇನೆ ಉನ್ನತ ಭಾಗದ ಸಿರಗುಪ್ಪ, ಬಳ್ಳಾರಿ,ಹೊಸಪೇಟೆ ಮತ್ತು ಸೊಂಡೂರು ತಾಲ್ಲೂಕುಗಳ ಜನರಾಡುವ ಭಾಷೆಯೆಂದೇ ಅರ್ಥೈಸಬೇಕಾಗುತ್ತದೆ. ಹಾಗೆಂದ ಮಾತ್ರಕ್ಕೆ ಉಳಿದ ನಾಲ್ಕು ತಾಲ್ಲೂಕುಗಳ ಭಾಷೆಯೇನೂ ಉಪೇಕ್ಷಿಸವಂತಹುದಲ್ಲ. ಈ ತಾಲ್ಲೂಕುಗಳ ಭಾಷೆಯ ಮೇಲೂ ಬೇರೆ ಬೇರೆ ಉಪಭಾಷೆಗಳ ಪ್ರಭಾವವು ಎಷ್ಟರಮಟ್ಟಿಗೆ ಉಂಟಾಗಿದೆ ಎಂಬುದನ್ನು ನೋಡಬೇಕಾಗುತ್ತದೆ.

ಉನ್ನತ ಭಾಗದ ನಾಲ್ಕು ತಾಲ್ಲೂಕುಗಳಲ್ಲಿ ಎಲ್ಲಾ ಗ್ರಾಮಗಳಲ್ಲು ಏಕರೀತಿಯ ಕನ್ನಡ ಉಪ ಭಾಷೆಯನ್ನೇ ಕಾಣುತ್ತೇವೆ. ಈ ಜನರು ಆಡುವ ಭಾಷೆಯ ಶೇ. ೭೫ ರಷ್ಟು ಶಬ್ದಗಳು ಮೈಸೂರು ಉಪಭಾಷೆಯನ್ನಾಡುವ ಜನರ ಉಚ್ಚಾರಣೆಯಂತೆ ಆನೆ, ಕುದುರೆ, ಎಮ್ಮೆ,ಮದುವೆ, ಮಳೆ, ಮನೆ, ತಲೆ, ಮಡಿಕೆ, ಕುಂಟೆ, ಬದನೆ ಗೆರೆ ಎಂದು 'ಎ' ಕಾರಾಂತವಾಗಿ ಉಚ್ಚರಿತವಾಗುತ್ತಿವೆ. ಈ ತಾಲ್ಲೂಕುಗಳು ಶೈಕ್ಷಣಿಕವಾಗಿ ಹಿಂದುಳಿದವುಗಳಾಗಿದ್ದರೂ ಈ ಜನರ ಭಾಷೆಯ ಗ್ರಂಥಿಕ ಭಾಷೆಗೆ ಹತ್ತಿರವಾಗಿ ಕಾಣುತ್ತದೆ.

ಬಳ್ಳಾರಿ ಉಪಭಾಷೆಯಲ್ಲಿನ 'ಎ' ಕಾರಂತ ಶಬ್ದಗಳು ಅಮ್ಮ, ತಾತಾ, ಶಾನೆ ಎಂಬ ರೂಪಗಳು ಅಲ್ಲದೆ ವೋಯ್ತೈತೆ, ಕಾಯ್ತೈತೆ ಎಂಬ ಶಬ್ದಗಳು ಮೈಸೂರು ಉಪಭಾಷೆಗೆ ಹತ್ತಿರವಾಗಿ ಕಂಡು ಬರುವುದರಿಂದ ಜಿಲ್ಲೆಯ ಕನ್ನಡ ಭಾಷೆಯ ಹಿಂದೆ ಬೇರೊಂದು ರೀತಿಯದಾಗಿದ್ದು, ಯಾವುದೋ ಬಲವಾದ ಕಾರಣ ಹಾಗೂ ಪ್ರಭಾವದಿಂದ ಪ್ರಸ್ತುತ ರೂಪ ತಾಳಿದೆ ಎನ್ನಿಸುತ್ತದೆ. ಅಂಥ ಕಾರಣಗಳೇನು ಎಂಬುದನ್ನರಿಯುವ ಪ್ರಯತ್ನದಲ್ಲಿ ಕೆಲವು ಐತಿಹಾಸಿಕ ಅನುಮಾನಗಳನ್ನು ಮಾಡಬಹುದಾಗಿದೆ.

ಈ ಉಪಭಾಷೆಯನ್ನು ಆಡುವ ಜನರು ಹೊಸಪೇಟೆಯಿಂದ ಅನತಿ ದೂರದಲ್ಲಿಯೇ ಜಗತ್ಪ್ರಸಿದ್ಧ ಹಂಪಿ ಇದೆ. ಹಿಂದೆ ಈ ಸ್ಥಳ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದು ತಿಳಿದ ಸಂಗತಿಯಾಗಿದೆ. ಶ್ರೀಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿ ಶ್ರೀರಂಗಪಟ್ಟಣ ಮುಂತಾದ ಭಾಗಗಳಿಂದ ವಿಜಯನಗರಕ್ಕೆ, ವಿಜಯನಗರದಿಂದ ಶ್ರೀರಂಗಪಟ್ಟಣದ ಕಡೆಗೂ

ವ್ಯವಹಾರ ಮತ್ತು ಒಡನಾಟಗಳು ಹೆಚ್ಚುತ್ತಾ ಬಂದು ಮೈಸೂರು ಕಡೆಯ ಭಾಷೆ ವಿಜಯನಗರದ ಭಾಷೆಯ ಮೇಲೆ ತನ್ನ ಪ್ರಭಾವ ಬೀರಿದ ಕಾರಣವಾಗಿ ಅಲ್ಲಿಯ ಭಾಷೆಯ ವಿಷಯಗಳು, ಶಬ್ದಗಳು, ವಿಜಯನಗರದ ಜನರ ಭಾಷೆಯಲ್ಲಿ ಬೆರೆತು ಹೋಗಿರಬೇಕು ಎಂದು ಕಂಡು ಬರುತ್ತದೆ.

ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುವ ಭಾಷೆಯನ್ನು ಮೈಸೂರು, ಧಾರವಾಡ, ಕಲಬುರ್ಗಿ, ಮಂಗಳೂರು ಇನ್ನಿತರ ಉಪಭಾಷೆಗಳಿಗೆ ಹೋಲಿಸಿ ನೋಡಿದಾಗ ಶಬ್ದಕೋಶದ ದೃಷ್ಟಿಯಿಂದ ಹೆಚ್ಚು ಸಾಮ್ಯವು ಕಂಡು ಬರುತ್ತಿದ್ದರೂ ಶೃತಿ, ತಾನ, ಒತ್ತು, ಸ್ವರ ವಿಧಾನಗಳ ವಿಶೇಷತೆಯಿಂದಾಗಿ ಈ ಭಾಷೆಯು ಕರ್ಣ ಸುಭಗರಾಗಾತ್ಮಕತೆ ಪಡೆದುಕೊಂಡು ತನ್ನತನದಿಂದ ಮೆರೆದಿದೆ. ಮೇಲಾಗಿ ತನ್ನ ಲಾಲಿತ್ಯ ಪೂರ್ಣತೆಯಿಂದಾಗಿ ಮಹತ್ವವನ್ನು ಪಡೆದುಕೊಂಡಿದೆ. ಈ ಭಾಷೆಗೆ ಹಲವು ಅಪರೂಪದ ಶಬ್ದರೂಪ (Morpheme)ಗಳನ್ನು ನಾವು ಗಮನಿಸಬಹುದಾಗಿದೆ. ವಿಜಯನಗರದಿಂದ ಹೊರಟ ಈ ಉಪಭಾಷೆ ಸೀಮಾ ರೇಖೆಗಳು ಜಿಲ್ಲೆಯ ಎತ್ತರಕ್ಕಿರುವ ರಾಯಚೂರು ಜಿಲ್ಲೆಯ (ಈಗಿನ ಕೊಪ್ಪಳ ಜಿಲ್ಲೆಯ) ಗಂಗಾವತಿ, ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನವರೆಗೂ ಹರಡಿಕೊಂಡಿದೆ. ಇಂಥಾ ಸೀಮಾರೇಖಾ ಸಮುದಾಯದಿಂದ ಸುತ್ತುವರಿಯಲ್ಪಟ್ಟ ಸಿರುಗುಪ್ಪ, ಬಳ್ಳಾರಿ, ಹೊಸಪೇಟೆ, ಸೊಂಡೂರು,ಗಂಗಾವತಿ, ಸಿಂಧನೂರು ತಾಲ್ಲೂಕುಗಳ ಪ್ರವೇಶವನ್ನು ಉಪಭಾಷಾ ಕ್ಷೇತ್ರ (Dialect Area) ಎಂದು ಕರೆಯಬಹುದು. ಈ ಸೀಮಾ ರೇಖೆಗಳು ಬಳ್ಳಾರಿ ಜಿಲ್ಲೆಯ ಅವನತ ಭಾಗದ ತಾಲ್ಲೂಕುಗಳಾದ

ಯಲ್ಲಾಪುರ, ಹಡಗಲಿ ಮತ್ತು ಕೂಡ್ಲಿಗಿ ಈಗಿನ ದಾವಣೆಗರೆ ಜಿಲ್ಲೆಯ (ಹರಪನಹಳ್ಳಿ) ವರೆಗೂ ಸಮಾನಾಂತರವಾಗಿ ಹರಡಬೇಕಾಗಿತ್ತು. ಆದರೆ ಹಾಗಾಗಿಲ್ಲದ ಕಾರಣವೇನೆಂದರೆ, ನೈಸರ್ಗಿಕ ಅಡಚಣೆಗಳಾದ ಸೊಂಡೂರಿನ ದಟ್ಟವಾದ ಅರಣ್ಯಪ್ರದೇಶ, ಅವುಗಳಿಗೆ ತಡೆಯನ್ನು ಉಂಟು ಮಾಡಿರುವುದನ್ನು ಗಮನಿಸಬಹುದಾಗಿದೆ. ಸೊಂಡೂರಿನ ಈ ಮಹಾ ಬೆಟ್ಟಗಳು ವಾಯುವ್ಯ-ಆಗ್ನೇಯ ಮಾರ್ಗವಾಗಿ ಹಬ್ಬಿನಂತಿವೆ. ಈ ಹೇಳಿಕೆಗೆ ಕೆಳಗಿನ ಮಾತುಗಳು ಪುಷ್ಟಿ ನೀಡಬಲ್ಲವು. The Bellary District consists of two widely differing natural division of Eastern and Western Separated by the Sandoor Hills which run write a cross the District from North West to South East

ಬಳ್ಳಾರಿ ತಾಲ್ಲೂಕಿನ ಉಪಭಾಷೆಯಲ್ಲಿ ಶಬ್ದ ರೂಪದ ಮತ್ತು ವಾಕ್ಯ ರಚನಾಘಟ್ಟದಲ್ಲಿ ವಿಶಿಷ್ಟತೆಗಳು ಕಂಡು ಬರುವಂತೆ ಜನರ ಆಡು ಭಾಷೆಯ ವಿಶೇಷ ಪದ

ಸಮುಚ್ಚಯಗಳಲ್ಲಿಯೂ ವೈಶಿಷ್ಟ್ಯತೆಗಳು ಗೋಚರಿಸುತ್ತವೆ. ಈ ವೈಶಿಷ್ಟ್ಯತೆಯನ್ನು ಲೋಕದ ಮೂಲಕ ವಿಶ್ಲೇಷಿಸಲು ಸಾಧ್ಯವಾಗುತ್ತದೆ. ಮಾತು ಮಾತುಗಳ ಮಧ್ಯೆ ತಡೆ ಉಂಟಾಗುತ್ತಿದ್ದು ಭಾವೋದ್ರೇಕ, ಉದ್ವೇಗಗಳಿಗೆ ತಕ್ಕಂತ ಶಬ್ದಗಳಲ್ಲಿ ತುಂಬಿಕೊಳ್ಳುವ ಶ್ರೀತಿ ರಾಗಗಳ ರೀತಿ ಅವರ್ಣನೀಯವಾದುದು. ಭಾಷೆಯ ಒಟ್ಟು ರೂಪ ರೇಷೆಯನ್ನು ರೂಪಿಸುವ ಪ್ರಯತ್ನ ಮಾತ್ರ ಇಲ್ಲೂ ಚರ್ಚಿಸಲಾಗಿದೆ.

ಸ್ಥಳನಾಮ ಅಧ್ಯಯನಕ್ಕೆ, ಭಾಷೆಯ ಅಧ್ಯಯನಕ್ಕೆ ನಿಕಟ ಸಂಬಂಧವಿದೆ. ಸ್ಥಳನಾಮಗಳ ಶೋಧನೆಗೆ ತೊಡಗಿದ ಸಂಶೋಧಕರಿಗೆ ವಿವಿಧ ಮಗ್ಗಲುಗಳನ್ನು ಸ್ಪರ್ಶಿಸಿ, ಪದರು ಪದರುಗಳ ತೆರೆದು ನೋಡಿದಂತೆ ಕೆಲವು ಸೂಕ್ಷ್ಮ ಒಳನೋಟಗಳ ಮೂಲಕ ಮಹತ್ವದ ಮಾಹಿತಿಯು ದೊರೆಯುತ್ತದೆ. ಹೀಗಾಗಿ ಸ್ಥಳನಾಮ ಶಾಸ್ತ್ರ ಮತ್ತು ಭಾಷಾಶಾಸ್ತ್ರ ಒಂದಕ್ಕೊಂದು ಅವಿನಾಭಾವ ಸಂಬಂಧ ಪಡೆದ ವಿಷಯಗಳಾಗಿವೆ. "ಭಾಷಾ ವಿಜ್ಞಾನದ ದೃಷ್ಟಿಯಿಂದ ಸ್ಥಳನಾಮ ಸಂಶೋಧನೆಗೆ ಎತ್ತರದ ಸ್ಥಾನವಿದೆ."

ಸ್ಥಳನಾಮಗಳು ಭಾಷಿಕ ಘಟಕಗಳೇ. ಆದ್ದರಿಂದ ಭಾಷಾ ವಿಜ್ಞಾನಿಗಳು ಸ್ಥಳನಾಮೇತರ ಘಟಕಗಳನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ಹೇಗೆ ಪರಿಶೀಲಿಸುತ್ತಾರೋ ಅದೇ ರೀತಿಯಲ್ಲಿ ಸ್ಥಳನಾಮಗಳನ್ನು ಪರಿಶೀಲಿಸುತ್ತಾರೆ. ಭಾಷೆಯ ವಿಕಾಸ, ಸಜಾತೀಯ ಭಾಷೆಗಳೊಡನೆ ಅವುಗಳ ಸಂಬಂಧ, ಅನ್ಯ ಭಾಷೆಯ ಪ್ರಭಾವ, ಪ್ರಾಂತೀಯ ಭಾಷಾ ಲಕ್ಷಣ ಹಾಗೂ ಇದರ ಸೋದರ ಭಾಷೆಗಳೊಂದಿಗೆ ಬೆಳೆಸಿಕೊಂಡ ಸಾಮ್ಯ, ಭಿನ್ನತೆ ಮುಂತಾದ ಲಕ್ಷಣಗಳನ್ನು ವಿಂಗಡಿಸಲು ಪೂರಕವಾಗಿ ಆಕರಗಳಾಗಿ ನಾಮಗಳು ಸಹಾಯಕವಾಗುತ್ತವೆ. ದ್ವಿಭಾಷಿಕ ವಲಯದಲ್ಲಿನ ಭಾಷಿಕ ಚಹರೆಗಳನ್ನು ವರ್ಗನಾತ್ಮಕ, ಚಾರಿತ್ರಿಕ, ಸಾಮಾಜಿಕ, ತುಲನಾತ್ಮಕ ಪದ್ಧತಿಗಳ ಮೂಲಕ ಸ್ಥಳ ಸಂಶೋಧನೆ ಮುಖೇನ ಧ್ವನಿಮಾ ರಚನೆ (Phonology) ಆಕೃತಿಮಾ ವಿಜ್ಞಾನ, ನಿಘಂಟು ರಚನೆ, ಲಿಪಿ ವಿಜ್ಞಾನ, ಶಬ್ದಾರ್ಥ ವಿವರಣೆ ಮೊದಲಾದ ಭಾಷಾ ಶಾಸ್ತ್ರಗಳ ರಚನೆಗೆ ಸ್ಥಳನಾಮ, ಗ್ರಾಮನಾಮ ಸಹಾಯಕವಾಗಬಲ್ಲವು.

ಸ್ಥಳನಾಮಗಳನ್ನು ಸಾಮಾನ್ಯವಾಗಿ ಭಾಷಿಕ ನೆಲೆಯಲ್ಲಿ ಅಧ್ಯಯನ ಮಾಡುವಾಗ ವಿವರಣಾತ್ಮಕವಾಗಿ ನೋಡಲಾಗಿದೆ. ಸಂಧಿ-ಸಮಾಸ, ಆಕೃತಿಮಾ-ಧ್ವನಿಮಾ ಮುಂತಾದ ನಿಯಮಗಳಿಂದ ಹೆಸರುಗಳನ್ನು ಪ್ರಸ್ತುತಪಡಿಸಿದ ಪರಂಪರೆಯು ಮುಂದುವರೆದಿದೆ.

"ವಿವರಣಾತ್ಮಕ ಭಾಷಾ ವಿಜ್ಞಾನವೇ ನಿಜವಾಗಿ ಇಂದಿಗೂ ಭಾಷಾ ವಿಜ್ಞಾಣದ ಬೆನ್ನೆಲುಬು. ಸಾತ್ವಿಕ ದೃಷ್ಟಿಯಿಂದ ಇದನ್ನು ಸಾಮಾನ್ಯ ಭಾಷಾ ವಿಜ್ಞಾನದ ಗುಂಪಿಗೆ ಸೇರಿಸಿದ್ದರೂ, ಎಲ್ಲಾ ಭಾಷಾ ವಿಜ್ಞಾನ ವಿವೇಚನೆಗಳಿಗೂ ಇದೇ ಜೀವಾಳ. ಇದನ್ನುಳಿದು

ಭಾಷಾ ವಿಶ್ಲೇಷಣೆ ಮಾಡುವುದು ಅಸಾಧ್ಯವಾದ ಮಾತಾಗುತ್ತದೆ. ಏಕೆಂದರೆ ಭಾಷಾ ವಿಶ್ಲೇಷಣೆಯಲ್ಲಿ ಕ್ರಾಂತಿಕಾರಿ ಬದಲಾವಣೆಗಳು ತಂದಿರುವ ರೂಪಾಂತರ ವ್ಯಾಕರಣವನ್ನಾಗಲಿ, ಸಾಮಾಜಿಕ ಭಾಷಾ ವಿಜ್ಞಾನ ಮಾದರಿಗಳಾಗಲೀ ಅವು ಎಷ್ಟೇ ನಮ್ಮ ತಂತ್ರಗಳನ್ನು ಮೈಗೋಡಿಸಿಕೊಂಡಿದ್ದರೂ ಅವುಗಳ ವಿಶ್ಲೇಷಣೆಗೆ ಮೂಲ ದ್ರವ್ಯ ಸಾಧಿತವಾಗುವುದು. ವರ್ಣನಾತ್ಮಕ ಭಾಷಾ ವಿಜ್ಞಾನದಿಂದಲೇ (ಡಾ॥ ಸೋಮಶೇಖರಗೌಡ-ಭಾಷಾ ರಚನೆ ಬಳಕೆ: ಪುಟ-೦೭) ಎಂಬ ಮಾತನ್ನು ಒಪ್ಪಬಹುದಾಗಿದೆ. ಆದರೂ ಇಂದು ಸಾಮಾಜಿಕ ಮನಸ್ಥಿತಿಯ ಮೂಲಕ ವರ್ಣನಾತ್ಮಕ ಮಾದರಿಯ ಅಗತ್ಯತೆಯನ್ನು ಕಂಡುಕೊಳ್ಳಬೇಕಾಗಿದೆ. ಕಾರಣ ಇಲ್ಲಿ ವಿವರಣಾತ್ಮಕ ಮಾದರಿ ಹಾಗೂ ಸಾಮಾಜಿಕ ಪ್ರಸ್ತುತತೆಯ ಜೊತೆಗೆ ಜಾನಪದೀಯ ನೆಲೆಯಲ್ಲಿ ಸ್ಥಳನಾಮಗಳನ್ನು ಭಾಷಿಕ ನೆಲೆಯಲ್ಲಿ ವಿಶ್ಲೇಷಿಸುವ ಗಂಭೀರವಾದ ಪ್ರಯತ್ನವನ್ನು ಮಾಡಲಾಗಿದೆ.

೫.೨ ಸ್ಥಳನಾಮಗಳು – ವಾರ್ಗಿಕಗಳ ಪಟ್ಟಿ :

ಕರ್ನಾಟಕದ ಗಡಿ ಪ್ರದೇಶಗಳಲ್ಲಿ ಬರುವ ಸಿರಿಗುಪ್ಪ, ಬಳ್ಳಾರಿ ತಾಲ್ಲೂಕುಗಳ ಒಟ್ಟು ಸ್ಥಳನಾಮಗಳ ಉತ್ತರ ಪದದಲ್ಲಿ ಕಂಡು ಬರುವ ವಾರ್ಗಿಕ ರಚನೆಗಳು ಹಾಗೂ ಅವುಗಳ ಸಂಕ್ಷಿಪ್ತ ವಿವರಗಳನ್ನು ಇಲ್ಲಿ ಕೊಡಲಾಗಿದೆ.

೧) **ಊರು:** ಇದು ಅಚ್ಚ ದ್ರಾವಿಡ ಪದ. ವಾಸ ಸ್ಥಳವನ್ನು ಸೂಚಿಸುತ್ತದೆ. ನಾಡು, ಗ್ರಾಮ, ಸಣ್ಣ ಪಟ್ಟಣ, ತೊಡೆ, ನೇಡು(ಸಿ.ಅ.ಪು-೬೮)

– ಊರು ಕೊನೆಯಲ್ಲಿ ಬರುವ ಕೆಲವು ಹೆಸರುಗಳಾದರೂ ಮೂಲತ: ಪುದಿಂದ ಕೊನೆಯಾಗುತ್ತವೆ ಎಂಬುದಕ್ಕೆ

ಶಾಸನಾಧಾರಗಳಿವೆ.(ವಾಗಾರ್ಥ – ೧೫)

– ಜನ ವಾಸಮಾಡುವ ಸ್ಥಳ (An inhabited place: a village: a town. a city) (ಕ.ಕ.ಇ.ನಿ-೧೧೬)

ಉದಾ: ಗುಡದೂರು, ಬೈಲೂರು, ಅಲ್ಲೀಪುರ,ಓಬಳಾಪುರ, ದಮ್ಮೂರು ಇಬ್ರಾಹಿಂಪುರ, ವೀರಾಪುರ, ಅಮರಾಪುರ

೨) ಏರಿ: ಜಲವಾಚಕದ ಕೆರೆಕಟ್ಟೆಯನ್ನು ಹೇಳುವ ಪದ, ಮಣ್ಣಿನ ಸಾಲು ದಂಡೆ(ಸಿ.ಅ.ಪು-೭೬)

ಉದಾ: ಮಿಂಚು + ಏರಿ = ಮಿಂಚೇರಿ (ಬಳ್ಳಾರಿ)

ಕರಿ + ಕೇರಿ = ಕರಿಕೇರಿ

ಸಿಂದ + ಗೇರಿ = ಸಿಂದಗೇರಿ

೩) **ಕಲ್ಲು:** ನಿಸರ್ಗವಾಚಿ ಪದ – ಬಂಡೆ, ಶಿಲೆ (ಕ.ರ.ಕೋ.ಪು–೪೬)

ಈ ಪದ ಕಲ್ ಎಂಬ ವ್ಯಂಜನಾತ್ಯ ಪದವಾಗಿಂಯೂ ಕ>ಗ ಬದಲಾವಣೆಯಿಂದಾಗಿ ಗಲ್, ಗಲ್ಲು ಎಂದು ಬಳಕೆಯಾಗಿವೆ.

ದ್ರಾವಿಡ ಭಾಷೆಯಾದ ತಮಿಳು, ತೆಲುಗು, ಮಲೆಯಾಳಂ, ಕನ್ನಡದಲ್ಲಿ ಇದಕ್ಕೆ ಶಿಲೆ ಎಂದೇ ಅರ್ಥಗಳಿವೆ. ಕಲ್ಲು ಶಿಲಾವಾಚ

ಸ್ಥಳನಾಮ ಉದಾ: ಸಂಗನಕಲ್ಲು, ಕಪ್ಪಗಲ್ಲು, ಬೆಳಗಲ್ಲು, ಕರೇಕಲ್ಲು, ಕಲ್ಲುಕಂಬ, ಕೊಳಗಲ್ಲು, ಕಗ್ಗಲ್ಲು, ಬೆಣ್ಣೆಕಲ್ಲು, ಶಂಕರಬಂಡ.

೪) **ಕ್ಯಾಂಪು:** ಇದು ಇಂಗ್ಲೀಷ್ ಪದ. ನೆಲೆಯೂರಿಕೆ, ಒಂದು ಕಡೆ ಗುಂಪಾಗಿ ನೆಲೆಸುವುದು. ಆಂದ್ರದಿಂದ ವಲಸೆ ಬಂದ ಅನೇಕ ಸಮುದಾಯಗಳು ಕರ್ನಾಟಕದ ಗಡಿಬಾಗದಲ್ಲಿ ಕ್ಯಾಂಪುಗಳನ್ನು ನಿರ್ಮಿಸಿಕೊಂಡು ಅವುಗಳಿಗೆ ವ್ಯಕ್ತಿ, ದೈವಕ್ಕೆ ಸಂಬಂಧಿಸಿದಮತೆ ಹೆಸರುಗಳನ್ನು ನೀಡಿದ್ದಾರೆ.

೫.೩ ವ್ಯಕ್ತಿವಾಚಿ ಹೆಸರಿನ ಕ್ಯಾಂಪ್:

ಉದಾ: ನಾಗರಾಜ್ ಕ್ಯಾಂಪ್

ಮಾರುತಿ ಕ್ಯಾಂಪ್

ಶಾಂತಿನಗರ ಕ್ಯಾಪ್

ಶಂಕರಸಿಂಗ್ ಕ್ಯಾಂಪ್

ಜಡೆ ತಾತ ಕ್ಯಾಂಪ್

ರಂಗಪ್ಪ ಕ್ಯಾಂಪ್

ಜೋಗಸೇಠ್ ಕ್ಯಾಂಪ್

ಮಂಗಮ್ಮ ಕ್ಯಾಂಪ್

ಕೃಷ್ಣ ನಗರ ಕ್ಯಾಂಪ್

ಸಪ್ತಗಿರಿ ಕ್ಯಾಂಪ್

ಗಂಗಾಭವಾನಿ ಕ್ಯಾಂಪ್

ರಾಜು ಕ್ಯಾಂಪ್

ಅಲ್ಲಂಸುಮಂಗಳ ಕ್ಯಾಂಪ್.

೫.೪ ದೈವವಾಚಿ ಹೆಸರಿನ ಕ್ಯಾಂಪ್‌ಗಳು :

ಉದಾ: ಜಡೆತಾತ ಕ್ಯಾಂಪ್

ಗೋಪಾಲಪುರ ಕ್ಯಾಂಪ್

ದುರ್ಗ ಕ್ಯಾಂಪ್

ಬಾಲಾಜಿನಗರ ಕ್ಯಾಂಪ್

ವಿಘ್ನೇಶ್ವರ ಕ್ಯಾಂಪ್

ಕೊಳಗಮ್ಮ ಕ್ಯಾಂಪ್

೫.೫ ಸ್ಥಳೀಯ ಗ್ರಾಮದ ಹೆಸರಿನ ಕ್ಯಾಂಪ್‌ಗಳು:

ಉದಾ: ಹರಗಿನಡೋಣಿ ಕ್ಯಾಂಪ್

ಸೊದ್ದಮ್ಮಳ್ಳಿ ಕ್ಯಾಂಪ್

ಕೊಟ್ಟಾಲ ಕ್ಯಾಂಪ್

ಕ್ಯಾದಿಗಿಹಾಳ್‌ಕ್ಯಾಂಪ್

ಕೋಲೂರು ಕ್ಯಾಂಪ್

ಹಿರೇಹಡಗಲಿ ಕ್ಯಾಂಪ್

ಯರಂಗಳಿ ಕ್ಯಾಂಪ್

ಬೊಬ್ಬಕುಂಟಾ ಕ್ಯಾಂಪ್

ಸಿರುವಾರಂ ಕ್ಯಾಂಪ್.

ಕುಂದೆ: ಭೌಗೋಳಿಕ ಲಕ್ಷಣಗಳನ್ನು ಸೂಚಿಸುವ ಪದ. ಕಲ್ಲಿನಿಂದ ಮಾಡಿದ ಕಂಬ, ಚಿಕ್ಕ ಬೆಟ್ಟ(ಸಿ.ಅ.ಪು-೧೨೬) ಇದು ಕುಂದ, ಕುಂದಿ ಎಂದು ಬಳಕೆಯಾಗುತ್ತದೆ. ಕುಂದಿ ತಗ್ಗುಭೂಮಿ ಬಾಗಿದ ನೆಲ(ಸಿ.ಅ.ಪು-೧೨೬). ಕುಂದೆ ಎಂದು ವಾರ್ಗಿಕವಿರುವ ಬಳ್ಳಾರಿ ತಾಲ್ಲೂಕಿನ ಬಹುತೇಕ ಊರುಗಳಲ್ಲಿ ಬೆಟ್ಟಗಳಿವೆ.

ಕ>ಗ: ಬದಲಾವಣೆಯಿಂದ ಗುಂದ, ಗುಂದಿ-ಗೋಂದಿ-ಗುಂದೆ ಎಂಬ ಪದಗಳು ಸ್ಥಳನಾಮಗಳಲ್ಲಿ ಬಳಕೆಗೊಂಡಿವೆ.

ಉದಾ: ಕೊರ್ಲಗುಂದಿ, ಹಲಕುಂದಿ.

ಕುಂಟೆ: ಜಲವಾಚಿ ಪದ. ನೀರಕುಣಿ, ಕೊಳ (ಸಿ.ಅ.ಪು-೧೨೫). ಚಿಕ್ಕ ಕೆರೆ, ವಕ್ರಾಣಿ,ಬಯಲು ಭೂಮಿಯಲ್ಲಿ ಹೆಚ್ಚಾಗಿ ಕುಂಟೆಗಳು ಕಂಡು ಬರುತ್ತವೆ.

ಕ>ಗ ಬದಲಾವಣೆಯಿಂದ ಗುಂಟೆ, ಗುಂಟಿ ಎಂದು ಬಳಕೆಯಾಗುತ್ತವೆ.

ಉದಾ: ಬೊಬ್ಬಕುಂಟೆ, ಜಾನೆಕುಂಟೆ, ಚರಕುಂಟೆ, ಹಗರಿ.

ಕುರ್ಕಿ: ವಾಸಸ್ಥಳವಾಚಿ. ಕುರ್ಕಿ-ಕುರ್ಕೆ-ಕುಕ್ಕಿ-ಕುರುಚಿ

ಕ>ಗ ಬದಲಾವಣೆಯಿಂದ ಗರಿಕೆ-ಗುರ್ಕಿ-ಗುರ್ಕೆ ಎಂದು ಬಳಕೆಯಲ್ಲಿವೆ.

ಉದಾ: ಚಳ್ಳಗುರ್ಕಿ.

ಕೋಟೆ: ನಿರ್ಮಾಣವಾಚಿ. ಸೇನೆಯ ರಕ್ಷಣೆಗೆ ಕಟ್ಟಿದ ಪ್ರಕಾರ. ಬಲವಾದ ಗೋಡೆಯ ಆವರಣ. ದುರ್ಗ,ಗಡ,ಕಿಲ್ಲೆ (ಸಿ.ಅ.ಪು-೧೪೧)

ಕ>ಗ ಪರವರ್ತನೆಯಿಂದ ಗೋಟೆ-ಗೋಟ ಎಂದು ಬಳಕೆಯಲ್ಲಿವೆ.

ಉದಾ: ಸಂಜೀವರಾಯನ ಕೋಟೆ, ಗೋಟೂರು.

ಗದ್ದೆ: ಕ್ಷೇತ್ರವಾಚಕ. ಭತ್ತ ಬೆಳೆಯುವ ನೆಲ, ಹೊಲ (ಸಿ.ಅ.ಪು-೧೫೩)

ಉದಾ: ಸಿದ್ದರ ವೈಶಿಷ್ಟ್ಯತೆಗಳುಗಟ್ಟೆ, ಸಿದ್ದರ ಗದ್ದೆ.

ಗುಡಿ: ನಿರ್ಮಾಣವಾಚಿ. ಸಂಸ್ಕೃತದ ಕುಟಿ ಪದದ ತದ್ಭವ, ಗುಡಿಸಲು, ಮಂಟಪ, ಧ್ವಜ, ಬಾವುಟ, ದೇವಸ್ಥಾನ, ಮಂಡಲ (ಸಿ.ಅ.ಪು-೧೬೭)

ಉದಾ: ಯರ್ರಗುಡಿ, ರೂಪನಗುಡಿ, ಮಲವನಗುಡಿ.

ಗುಂಡು: ಶಿಲಾವಾಚಿ, ವರ್ತುಲ-ಗೋಳಾಕಾರ-ದಪ್ಪವಾಗಿರುವ ಕಲ್ಲು- ದೊಡ್ಡಕಲ್ಲು-ಗುಂಪು ಸಮೂಹ (ಕ.ನಿ. ಸಂ.- ೩.೨೫೨೧)

ಉದಾ: ಹದ್ದಿನಗುಂಡು

ಚೇಡು: ಜಲವಾಚಿ, ಜಲಾಶಯ, ಕೆರೆ

ಉದಾ: ಕಮ್ಮರಚೇಡು

ಚೇರಿ: ವಾಸ್ತವ್ಯವಾಚಿ-ತಮಿಳಿನ "ಚೇರಿ" ಪದ ಕನ್ನಡ "ಕೇರಿ" ಪದ ಮೂಲತ: ಒಂದೇ ಶಬ್ಧಗಳು ಕನ್ನಡದ ಕೇರಿಗೆ ಇರುವುದಕ್ಕಿಂತ ಹೆಚ್ಚು ಅರ್ಥಗಳು ತಮಿಳಿನ ಚೇರಿಗೆ

ಇವೆ – ಚೇರಿ ಎಂಬುದಕ್ಕೆ ಬೀದಿ, ಮನೆಗಳ ಗುಂಪು, ಹಳ್ಳಿ ಇತ್ಯಾದಿ ಅರ್ಥಗಳು ತಮಿಳು ಕೋಶಗಳಲ್ಲಿದೆ(ಕೆಲವು ದೇಶನಾಮಗಳು – ಪು–೩೭)

ಉದಾ: ಮಿಂಚೇರಿ ಪ್ರಮಾಣವನ್ನು ಒಂದು ಪಟ್ಟಿಯ ಮೂಲಕ ಗುರುತಿಸಬಹುದು.

ದೋಣಿ: ಜಲವಾಚಿ – ಬಂಡೆಯ ಮೇಲಿನ ನೀರಗುಳಿ. ಸ್ವಾಭಾವಿಕ ಕೊಳ, ಕೆರೆ (ನಿ.ಅ.ಪು – ೨೧೧) ಇದು ಸಂಸ್ಕಾರ "ದೋಣಿ" ಯ ತದ್ಭವ ರೂಪ.

ಉದಾ: ಅರಗಿನ ದೋಣಿ

ತಾಂಡ: ವಾಸ್ತವ್ಯವಾಚಿ. ಲಂಬಾಣಿ ಸಮುದಾಯದ ವಾಸದ ನೆಲೆ. ಲಂಬಾಣಿ ಜನರು ಪ್ರತ್ಯೇಕ ಗುಂಪುಗಳಲ್ಲಿ ವಾಸಿಸುತ್ತಾರೆ. ಅವರ ನೆಲೆಗಳಿಗೆ ತಾಂಡಾ – ತಾಂಡೋ ಎಂದು ಕರೆದುಕೊಂಡಿದ್ದಾರೆ. ಹೆಚ್ಚಿಗೆ ಗ್ರಾಮದ ಪಕ್ಕದಲ್ಲಿ ನಿರ್ಮಿಸಿಕೊಂಡು ಆ ಗ್ರಾಮದ ಹೆಸರಿನ ಮುಂದೆ 'ತಾಂಡ' ಎಂದು ಕರೆದದ್ದೆ ಕಂಡು ಬರುತ್ತದೆ.

ಉದಾ: ಹೊನ್ನಳ್ಳಿ ತಾಂಡ

ಬೆಳಗೆಲ್ಲಿ ತಾಂಡ

ಜಾನೆಕುಂಟೆ ತಾಂಡ

ಕೃಷ್ಣಾಪುರ ತಾಂಡ

ಹರಗಿನದೋಣಿ ತಾಂಡ

ಪಟ್ಟಣ: ವಾಸ್ತವ್ಯವಾಚಿ(ಪತ್ತನ) ಸಣ್ಣನಗರ, ಪುರ (ನಿ.ಅ.ಪು.೩೧೧)

ಉದಾ: ಪಟ್ಟಣ ಸೆರಗು

ಬಂಡೆ: ಶಿಲಾಬಾಲೆ, ಅರೆಕೆಲ್ಲ ಶಿಲೆ(ನಿ.ಅ.ಪು. ೩೭೫)

ಉದಾ: ಶಂಕರಬಂಡೆ

ವಡ್ಡರಬಂಡೆ

ಬಂದಹಟ್ಟಿ

ವಡ್ಡರಹಟ್ಟಿ(ವಡ್ಡಟ್ಟಿ)

ಬೆಂಚಿ; ಜಲವಾಚಿ, ಬೆಂಬೆ– ಸಣ್ಣಹೊಂಡ (ವಾಗರ್ಥ – ಪು ೧೭)

ಸಣ್ಣ ಸರೋವರ – ಗುಮ್ಮಿ– ನೀರಹೊಂಡ– ಕುಂಟೆ (ನಿ.ಅ.ಪು. ೩೯೦)

ಉದಾ: ಏಳುಬೆಂಬೆ, ಜಾಲಿ ಬೆಂಬೆ

ಮಂಡಿ: ಮೊಣಕಾಲು, ಅಂಗಡಿ, ಗೋದಾಮು, ಮಳಿಗೆ ಬಾಗಿದ (ನಿ.ಅ.ಪು.೪೧೭)

ಬಾರಿ ಪ್ರಮಾಣದ ವ್ಯಾಪಾರ ನಡೆಯುವ ಸ್ಥಳ– ಸಗತು

ವ್ಯಾಪಾರದ ಅಂಗಡಿ – ಒಂದು ಊರಿನ ಹೆಸರು ' ಮಂಡಿಕಲ್' (ಕ.ನಿ.ಸಂ. ೭.೬೮೨೩)

ಉದಾ: ತೊಲ ಮಾಮಿಡಿ(ತೊಲಮಂಡಿ)

ಮೊಳ: ಇದು ಬಹುಶ: ಮಾಳ ಇದ್ದಿರಬೇಕು. 'ಮಾಳ' ಗುಡಿಸಲು, ಉದ್ದಿನ ಅಗಾರ, ಬಂಡಿಯ ನಿಲ್ದಾಣ (ನಿ.ಅ.ಪು.೪೨೪). ಬಯಲು ಎಂಬ ಅರ್ಥವೂ ಇದೆ (ಗೋಮಾಳ).

ಉದಾ: ನಿಡಿಗಿನ ಮೊಳ(ಮಾಳ)

ರಾಶಿ: ರಾನಿ (ದ್ರ): ಗುಪ್ಪೆ, ಸಮೂಹ, ನಕ್ಷತ್ರಗಳ ಒಂದು ಮನೆ (ನಿ.ಕ.ಪು. – ೪೫೬) ರಾನಿ – ಕುಪ್ಪ (ತೆಲಗು)

ಉದಾ: ಜೋಳದರಾಶಿ

ವರ/ದಾರ: 'ಪುರ'

ಉದಾ: ಶ್ರೀವಾರ

ಸಿರಿವಾರ

ವೇಣಿ: ವಾಣಿ, ವೇಣಿ, ಓಣಿ, ವಾಣಿ ಇವು ಜಲವಾಚಿಗಳು, ನದಿ, ದೊಡ್ಡಳ (ಸ್ಥಳ ನಾಮ ಅಧ್ಯಯನಗಳು ಪು.೩೭)

ಉದಾ: ವಣೆನೂರು

ವೇಣಿವೀರಾಪುರ

ಸಮುದ್ರ: ಜಲವಾಚಿ, ಸಂಸ್ಕೃತದ ಕಡಲು, ಸಾಗರ, ಮುದ್ರೆಯೊತ್ತಿದ(ನಿ.ಅ.ಪು.–೫೧೦) ತೆಲಗಿನಲ್ಲಿ 'ಸಮುದ್ರಂ' ಎಂದು 'ಮ' ಕಾರಾಂತ್ಯವಾಗಿ ಬಳಕೆಯಾಗುತ್ತದೆ. ಬಯಲು ಪರಿಸರದಲ್ಲಿ ಸಮುದ್ರವಿಲ್ಲದಿದ್ದರೂ ಈ ಬಗೆ ನಾಮ ನಿರ್ದೇಶನವಿದೆ. ಇದು ಸಂಸ್ಕೃತ ಭಾಷೆಯ ಪ್ರಭಾವವಿರಬಹುದು.

ಉದಾ: ಸೋಮಸಮುದ್ರ

ಸೆರಗು: ತೀರದ, ಕೊನೆಯ ಅಂಚಿನ ಎಂಬ ಅರ್ಥಗಳಿವೆ.

ಉದಾ: ಪಟ್ಟಣ ಸೆರಗು.

ಕಟ್ಟೆ: ಕೊಟ್ಟಿಗೆ, ದನದ ದೊಡ್ಡಿ, ಗೋಶಾಲೆ, ಸಂತೆ(ನಿ.ಅ.ಪು.–೫೪೧), ಸ್ಥಳನಾಮಗಳ ಬಳಕೆಯಲ್ಲಿ ಹ>ವ:ಹ>ನ ಪರಿವರ್ತನೆಯಿಂದ ವಟ್ಟೆ–ನಟ್ಟೆ ಎಂದು ರೂಪ ಬರುತ್ತದೆ.

ಉದಾ: ಬಾದನಹಟ್ಟೆ

ವಡ್ಡರಹಟ್ಟೆ(ವಡ್ಡಟ್ಟೆ)

ಹಳ್ಳಿ: ವಾಸ್ತವ್ಯವಾಚಿ ಪಲ್ಲೀ(ಸಂಸ್ಕೃತ) – (ಪಲ್ಲಿ –ಅಳಿ–ಳಿ ತೆಲುಗು ಪ್ರಭಾವದ ಪ್ರದೇಶದಲ್ಲಿ ವಗಾರ್ಥ–ಪು.೧೬)

ಉದಾ: ಬೇವಿನಹಳ್ಳಿ

ಗೊಲ್ಲನಾಗೇನಹಳ್ಳಿ

ಪರಮದೇವನಹಳ್ಳಿ

ಬಿಸಿಲಹಳ್ಳಿ

ಕಕ್ಕಬೇವನಹಳ್ಳಿ

ಸಿದ್ದಮ್ಮನಹಳ್ಳಿ

ತಾಂಬ್ರಹಳ್ಳಿ

ಕುಂತನಹಳ್ಳಿ

ಬಳ್ಳಾರಿ ಗೊನೆಹಳ್ಳಿ(ಬಳ್ಳಾರಿ ಗೋನಾಳು)

ಬೈರದೇವನಹಳ್ಳಿ

ಮಿನಳ್ಳಿ

ಲಿಂಗದೇವನಹಳ್ಳಿ

ಹೊನ್ನಹಳ್ಳಿ

ಉಪ್ಪಾರ ಹೊರಳ್ಳಿ, ಕುರುವಳ್ಳಿ.

ಹಾಳ್: ವಾಸ್ತವವಾಚಿ – ಭೂಮಿ, ಗದ್ದೆ, ದತ್ತಿ, ಹಾನಿ, ಕೆಟ್ಟ, ಬಂಬರು(ನಿ.ಅ.ಪು. ೫೪೯)

ಉದಾ: ಗೋಡೆಹಾಳು/ಚನಹಾಳು/ಕ್ಯಾದಿಗೆಹಾಳು/ಬೆಡಿಗನಹಾಳು/ಬೊಮ್ಮನಾಳು/ ಜಾಲಿಹಾಳು/ಇಟ್ಟಗಿಹಾಳು/ಕುಡದ್ರೆಹಾಳು/ಗಜ್ಜಿಗನಾಹಾಳು ಪ್ರಮಾಣವನ್ನು ಒಂದು ಪಟ್ಟಿಯ ಮೂಲಕ ಗುರು

೫.೬ ಸ್ಥಳನಾಮ ವಾರ್ಗೀಕರಣಗಳ ಪ್ರಸರಣ:

ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳಲ್ಲಿ ಬಳಕೆಯಾಗಿರುವ ೩೪ ಬಗೆಯ ವಾರ್ಗೀಕಗಳಲ್ಲಿ ಅವು ವಿಸ್ತರಿಸಿಕೊಂಡಿರುವ ಪ್ರಸರಣವನ್ನು ಒಂದು ಪಟ್ಟಿ ಮೂಲಕ ಗುರುತಿಸಬಹುದು.

ವಾರ್ಗೀಕಗಳ ಪಟ್ಟಿ

೧) ಊರು/ಪುರ	೨) ಏರಿ
೩) ಕಣಿವೆ	೪) ಕಟ್ಟು
೫) ಕಲ್ಲು	೫) ಕುಂದೆ
೭) ಕುಂಟೆ	೮) ಕುಪ್ಪೆ
೯) ಕೆರೆ	೧೦) ಕೇರಿ
೧೧) ಕೊಂಡಿ	೧೧) ಕೋಟೆ
೧೩) ಗುಡ್ಡ	೧೪) ಗದ್ದೆ
೧೫) ಗುಂಡು	೧೬) ಗುಮ್ಮ
೧೭) ಡೋಣೆ	೧೮) ತೋಟ
೧೯) ದಿನ್ನೆ	೨೦) ದೊಡ್ಡಿ
೨೧) ಬಾವಿ	೨೨) ಬೀಡು
೨೩) ಬೆಂಚೆ	೨೪) ಬೆಟ್ಟ
೨೫) ಮಂಡಿ	೨೬) ಮೊಳ
೨೭) ಸೆರಗು	೨೮) ಹಟ್ಟಿ
೨೯) ಹಳ್ಳಿ	೩೦) ಹಾಳ್
೩೧) ಹ್ಯಾಟಿ	೩೨) ಹೊಳಲು
೩೩) ರಾಶಿ	೩೪) ಬಂಡೆ

೫.೭ ಪ್ರತಿಕರಣ ಸ್ಥಳನಾಮಗಳು:

ಒಂದೇ ಹೆಸರಿನ ಗ್ರಾಮನಾಮ ಸ್ಥಳನಾಮಗಳು ಬೇರೆ ಬೇರೆ ಕಡೆಗಳಲ್ಲಿ ಕಂಡು ಬರುತ್ತದೆ. ಇದಕ್ಕೆ ಆಯಾ ಭೌಗೋಳಿಕ ಪರಿಸರ ಸಮಕಾಲೀನ ಘಟನೆಗಳು ಆಡಳಿತದ ಪ್ರಭಾವ ಮುಂತಾದವು ಕಾರಣವಾಗಿರುತ್ತದೆ. ಮುಖ್ಯವಾಗಿ ಮೌಖಿಕ ಪರಂಪರೆಯ

ವಕ್ತಾರರಾದ ಗ್ರಾಮೀಣ ಸಮುದಾಯಗಳ ನಾಮನಿರ್ದೇಶನ ನಿಯಮ. ಅವರು ನಂಬಿಕೊಂಡ ಆಚರಣೆಗಳು, ಸಂಪ್ರದಾಯಗಳು, ದೈವ ಮುಂತಾದವು ಸ್ಥಳ ನಾಮ ನಿರ್ದೇಶನವು ಏಕರೀತಿಯಾಗಿ ನಡೆಯಲು ಕಾರಣವಾಗಿರುತ್ತದೆ. ಪ್ರಕೃತಿಯನ್ನು ಸ್ಥಳನಾಮದೊಂದಿಗೆ ಆರೋಪಿಸುವ ಜನಪದರು ಹೆಚ್ಚಾಗಿ ಪ್ರಕೃತಿಯ ಚಹರೆಗಳನ್ನು ಪುರಾಣ, ಐತಿಹ್ಯಗಳ ಮೂಲಕ ಹೇಳುತ್ತಾರೆ. ಈ ಹೇಳುವಿಕೆ ಬಹುತೇಕ ಎಲ್ಲ ಕಡೆ ಕೆಲವೊಂದು ಬದಲಾವಣೆಗಳಿಂದ ಏಕ ಮಾದರಿಯಲ್ಲಿರುವುದು ಕಂಡು ಬರುತ್ತದೆ. ಇದರಿಂದಾಗಿ ಪ್ರತಿಕರಣ ಸ್ಥಳನಾಮ ಹುಟ್ಟಿಕೊಳ್ಳುತ್ತವೆ.

ಉದಾ:	ಕಗ್ಗಲ್ಲು(ಬಳ್ಳಾರಿ)	–	ಕಗ್ಗಲು (ಆದವಾನಿ)
	ಕಮ್ಮರಚೇಡು(ಬಳ್ಳಾರಿ)	–	ಕಮ್ಮರಚೇಡು(ಆಲೂರು)
	ಬೆಳಗಲ್ಲು(ಬಳ್ಳಾರಿ)	–	ಬೆಳಗಲ್ಲು (ಆಲೂರು)
	ಶಂಕರಬಂಡೆ(ಬಳ್ಳಾರಿ)	–	ಶಂಕರಬಂಡೆ(ಆಲೂರು)

ಉದಾ–೧೧

ಅಂಬೇಡ್ಕರ್ ನಗರ(ಬಳ್ಳಾರಿ)	–	ಅಂಬೇಡ್ಕರ್ ನಗರ(ಅದೋನಿ)
ಇಂದಿರಾನಗರ(ಬಳ್ಳಾರಿ)	–	ಇಂದಿರಾನಗರ(ಅದೋನಿ)
ಗಾಂಧಿನಗರ(ಬಳ್ಳಾರಿ)	–	ಗಾಂಧಿನಗರ(ಆಲೂರು)
ಪಟೇಲನಗರ(ಬಳ್ಳಾರಿ)	–	ಪಟೇಲನಗರ(ಆಲೂರು)
ಬಾಪೂಜಿನಗರ(ಬಳ್ಳಾರಿ)	–	ಬಾಪೂಜಿನಗರ(ಆಲೂರು)
ವಿವೇಕಾನಂದನಗರ(ಬಳ್ಳಾರಿ)	–	ವಿವೇಕಾನಂದನಗರ(ಆದೋನಿ)

೫.೮ ಸಾಪೇಕ್ಷ ಸ್ಥಳನಾಮ:

ಸ್ಥಳನಾಮಗಳಲ್ಲಿ ನಿರ್ದಿಷ್ಟ ಭಾಗದಲ್ಲಿ ಕಂಡುಬರುವ ಸಣ್ಣ, ದೊಡ್ಡ, ಚಿಕ್ಕ, ಹಿರಿಯ, ಹೊಸ ಹಳೆಯ ಕುಣಿ, ಎತ್ತರ ವಿಶೇಷಣಗಳು ಹಾಗೂ ವಿವಿಧ ಹ್ರಸ್ವೀಕರಣಗಳಿಂದ ಅನಿರ್ದಿಷ್ಟದ ಸಂಖ್ಯೆಯು ವರ್ಧಿಸುತ್ತದೆ. ಸಾಮಾನ್ಯವಾಗಿ ಒಂದೇ ಭೌಗೋಳಿಕ ಪರಿಸರದ ಜೋಡಿಹೆಸರುಗಳು ಇವು ಆಗಿರುತ್ತಿದ್ದವು. ಇವುಗಳನ್ನು ಸಾಪೇಕ್ಷ ಗ್ರಾಮನಾಮಗಳೆಂದು ಕರೆಯುತ್ತಾರೆ. ಬಳ್ಳಾರಿ ತಾಲ್ಲೂಕಿಗೆ ಸಂಬಂಧಿಸಿದ ಸಾಪೇಕ್ಷಸ್ಥಳನಾಮಗಳ ವಿವರ ಈ ಕೆಳಗಿನಂತಿದೆ.

ಉದಾ: ತಗ್ಗಿನ ಬೂದಿಹಾಳು

ಎತ್ತಿನ ಬೂದಿಹಾಳು

೫.೯ ಬಣ್ಣವನ್ನು ಸೂಚಿಸುವ ವಿಶೇಷಣಗಳು:

ಕಪ್ಪುಗಲ್ಲು,

ಬೆಣ್ಣಿಕಲ್ಲು,

ಬೆಳಗಲ್ಲು,

ಕರಿಚೇಳು,

ಕರೇಕಲ್ಲು,

ತಾಮ್ರಳ್ಳಿ,

ಹೊನ್ನಳ್ಳಿ,

ಯರ್ರಗುಡಿ,

ಎಂಬಲ್ಲಿ ಆಯಾ ಭೌಗೋಳಿಕ ಪರಿಸರದ ಕಲ್ಲು, ಕ್ಷೇತ್ರವರ್ಣ, ನೀರಿನ ಬಣ್ಣ ಮುಂತಾದವುಗಳನ್ನು ವಿಶ್ಲೇಷಿಸುತ್ತವೆ. ಕಪ್ಪು, ಬಿಳಿ, ಹಸಿರು, ಮೊದಲಾದ ಬಣ್ಣಗಳ ಸೂಚಕ ಗ್ರಾಮನಾಮಗಳು ಬಳ್ಳಾರಿ ತಾಲ್ಲೂಕಿನಲ್ಲಿ ಹೆಚ್ಚಾಗಿ ಲಭ್ಯವಿರುತ್ತವೆ.

೫.೧೦ ಸ್ವರಾಂತ–ವ್ಯಂಜನಾಂತ ಸ್ಥಳನಾಮಗಳು

ಸ್ಥಳನಾಮಗಳು ಬರಹ– ಬಳಕೆ ಅಥವಾ ಉಚ್ಚಾರಣೆಯಲ್ಲಿ ಸ್ವರಾಂತವಾಗಿಯೂ, ವ್ಯಂಜನಾಂತವಾಗಿಯೂ ಬಳಕೆಯಾಗುತ್ತದೆ. ಸ್ವರಾಂತ್ಯದ ಎಲ್ಲಾ ಸ್ಥಳನಾಮಗಳು ವ್ಯಂಜನಾಂತ್ಯವಾಗಲಾರವು.

ಉದಾ: ಕೊರ್ಲಗುಂದಿ

ಜೋಳದರಾಶಿ

ಯರ್ರಗುಡಿ

ಶಂಕರಬಂಡೆ

ಹರಗಿನಡೋಣಿ

ಹೊಸ್ಸಳ್ಳಿ

ಕನ್ನಡ ಸ್ಥಳನಾಮಗಳು ಸಾಮಾನ್ಯವಾಗಿ ಸ್ವರಾಂತ್ಯವಾಗಿರುತ್ತವೆ. ವಾರ್ಗಿಕದಲ್ಲಿ ಇ, ಎ, –ಕರಾಂತ್ಯವಾಗುವ ರಚನೆಯಿಂದ ವ್ಯಂಜನಾಂತ್ಯವಾಗುವುದು ಇಲ್ಲವೆಂದೇ ಹೇಳಬಹುದು. ಇದಕ್ಕೆ ಕನ್ನಡದ ದನಿ ಮತ್ತು ಪದ ರಚನೆಯ ನಿಯಮಗಳು ಕಾರಣವಾಗಿವೆ.

೫.೧೧ ಮಹಾಪ್ರಾಣಗಳು– ಸ್ಥಳನಾಮಗಳು

ಕನ್ನಡದಲ್ಲಿ ಸ್ಥಳನಾಮಗಳು ಮಹಾಪ್ರಾಣದಿಂದ ಆರಂಭವಾಗುವುದು ತುಂಬಾ ಕಡಿಮೆ. ಅಂತಹ ಕೆಲವು ಗ್ರಾಮನಾಮಗಳು ಗಡಿಭಾಗದಲ್ಲಿ ದೊರೆಯುತ್ತವೆ.

ಢಣಾಪುರ – ಭೈರಾಪುರ

ಬಟ್ಟರಹಳ್ಳಿ – ಬೈರದೇವನಹಳ್ಳಿ

ಮೇಲಿನ ಸ್ಥಳನಾಮಗಳಲ್ಲಿ ಪೂರ್ವಪದದ ಡಣಾ, ಭೈರ, ಭಟ್ಟ ಎಂಬ ರಚನೆಗಳು ಸಂಸ್ಕೃತ ಮೂಲದ ಆಕೃತಿಮಗಳು ಬಹುಶ: ಈ ಕಾರಣದಿಂದ ಇವು ಮಹಾಪ್ರಾಣ ರೂಪಗಳಾಗಿ ಬಳಕೆಯಾಗಿರಬೇಕು. ಅಲ್ಲದೇ ಕನ್ನಡದ ಪರಿಸರದಲ್ಲಿ ಈ ಗ್ರಾಮನಾಮಗಳು ಬರಹ ರೂಪದಲ್ಲಿ ಮಹಾಪ್ರಾಣಗಳಾಗಿಯೇ ಬಳಕೆಯಾಗುತ್ತವೆ. ಆಡುನುಡಿಯ ಬಳಕೆಯಲ್ಲಿ ಈ ಗ್ರಾಮನಾಮಗಳು.

ಡಣಾಪುರ,

ಬಟ್ಟರಹಳ್ಳಿ,

ಬೈರಾಪುರ,

ಬೈರದೇವನಹಳ್ಳಿ.

೫.೧೨ ಹ್ರಸ್ವೀಕರಣ –ಸ್ಥಳನಾಮಗಳು:

ಆಂಗ್ಲರ ಆಗಮನದ ನಂತರ ಇಂಗ್ಲೀಷ್ ಭಾಷೆಯ ಪ್ರಭಾವದಿಂದ ದೇಸೀಯ ಸ್ಥಳನಾಮಗಳ ಹ್ರಸ್ವೀಕರಣ ಕ್ರಿಯೆಗೆ ತೀವ್ರವಾಗಿ ಒಳಪಟ್ಟವು. ಉದ್ದುದ್ದನೆಯ ಹೆಸರುಗಳಿಗೆ ಇಂಗ್ಲೀಷ್ ವರ್ಣಮಾಲೆಯ ಅಕ್ಷರಗಳನ್ನಿಟ್ಟುಕೊಂಡು ಸಂಕ್ಷಿಪ್ತಗೊಳಿಸುವ ರೂಢಿಯು ಆರಂಭವಾಯಿತು. ಸ್ಥಳನಾಮಗಳಲ್ಲಿ ಹ್ರಸ್ವೀಕರಣ ಪ್ರಕ್ರಿಯೆಯು ನಡೆಯುವು. ಸೌಲಭ್ಯಕ್ಕಾಗಿ ಮಾತ್ರ. ಇದು ತೀರಾ ಇತ್ತೀಚಿನ ಬೆಳವಣಿಗೆ.

ಉದಾ:

ವಿಸ್ತೃತ ಗ್ರಾಮದ ಹೆಸರುಗಳು		ಹ್ರಸ್ವೀಕೃತ ಹೆಸರು
ಅಕ್ಕತಂಗೇರ ಹಾಳ್	–	ಎ.ಕೆ. ಹಾಳ್
ಎತ್ತಿನ ಬೂದಿಹಾಳ್	–	ವೈ. ಬೂದಿಹಾಳ್
ಕಲ್ಲು ಕುಟ್ಟಿಗನಹಾಳ್	–	ಕೆ.ಕೆ.ಹಾಳ್
ಕಾರೆಕಲ್ಲು ವೀರಾಪುರ	–	ಕೆ. ವೀರಾಪುರ

ಕಾರ್ಕರ್ಲತೋಟ	–	ಕೆ.ಕೆ.ತೋಟ
ಗುಗ್ಗರಹಟ್ಟಿ	–	ಜಿ.ಜಿ. ಹಟ್ಟಿ
ತೆಗ್ಗಿನ ಬೂದಿಹಾಳು	–	ಟಿ. ಬೂದಿಹಾಳು
ಪರಮದೇವನಹಳ್ಳಿ	–	ಪಿ.ಡಿ. ಹಳ್ಳಿ
ಬಳ್ಳಾರಿ ಗೋನಾಳು	–	ಬಿ. ಗೋನಾಳು
ಮೋಕಾ ಗೋನಾಳು	–	ಎಂ. ಗೋನಾಳು
ಯಳಪಿ ಕಗ್ಗಲ್ಲು	–	ವೈ ಕಗ್ಗಲ್ಲು
ವೇಣಿ ವೀರಾಪುರ	–	ವಿ. ವೀರಾಪುರ
ದಮ್ಮೂರು ಕಗ್ಗಲ್ಲು	–	ಡಿ. ಕಗ್ಗಲ್ಲು
ಗೊಲ್ಲನಾಗೇನಹಳ್ಳಿ	–	ಜಿ. ನಾಗೇನಹಳ್ಳಿ
ದಾಸರನಾಗೇನಹಳ್ಳಿ	–	ಡಿ. ನಾಗೇನಹಳ್ಳಿ
ಸಂಜೀವರಾಯನಕೋಟೆ	–	ಎಸ್.ಆರ್.ಕೋಟೆ
ಕೆಂಚಗಾರ ಬೆಳಗಲ್ಲು	–	ಕೆ. ಬೆಳಗಲ್ಲು
ಕೋಟಿಹಾಳ ಸೂಗೂರು	–	ಕೆ. ಸೂಗೂರು
ಹಾವಿನಾಳ್ ವೀರಾಪುರ	–	ಹೆಚ್. ವೀರಾಪುರ

ಎಂದು ಇಂಗ್ಲೀಷ್ ವರ್ಣಮಾಲೆಯ ಮೂಲಕ ಆಧುನಿಕ ಜನರು ತಮ್ಮ ಸೌಲಭ್ಯಕ್ಕೆ ತಕ್ಕಂತೆ ಹ್ರಸ್ವೀಕರಣಗೊಳಿಸಿಕೊಂಡಿದ್ದಾರೆ. ಈ ಕ್ರಿಯೆಯು ಅಲ್ಲಿ ವಾಸಿಸುವ ಜನತೆಯೇ ಸೃಷ್ಟಿಸಿಕೊಂಡಿದ್ದಾಗಿರುತ್ತದೆ. ಇತ್ತೀಚಿಗೆ ಕನ್ನಡ ವರ್ಣಮಾಲೆಯಿಂದಲೇ ಹ್ರಸ್ವೀಕರಣಗೊಳಿಸಿಕೊಂಡಿರುವುದು ಕೆಲವು ಬಸ್ಸುಗಳ ನಾಮಫಲಕದಲ್ಲಿ ಕಾಣಬಹುದು.

ಹಗರಿಬೊಮ್ಮನಹಳ್ಳಿ	–	ಹ.ಬೋ.ಹಳ್ಳಿ,
ಹೊಳೆನರಸೀಪುರ	–	ಹೊ.ನ.ಪುರ
ಚಾಮರಾಜನಗರ	–	ಚಾ.ರಾ. ನಗರ.

ಮೇಲಿನ ಮಾದರಿಯ ಆಧುನಿಕತೆಯ ಪ್ರಭಾವದಿಂದ ಜಾರಿಗೆ ಬರುತ್ತಲಿವೆ. ಪ್ರಸ್ತುತ ಈ ಮಾದರಿ ನಾಮಫಲಕಗಳೂ(ಸಾರಿಗೆ ಸಂಸ್ಥೆಯಲ್ಲಿ) ಬರಹದಲ್ಲಿ, ನಡೆಯುತ್ತಿವೆ ಹಾಗೂ ಸರ್ಕಾರಿ ಕಡತಗಳ ನಿರ್ವಹಣೆಯ ಟಿಪ್ಪಣಿ ಹಾಳೆಯಲ್ಲಿ ಸಂಕ್ಷಿಪ್ತ ಅಕ್ಷರಗಳಲ್ಲಿ ನಮೂದಿಸುವುದುಂಟು. ಹ್ರಸ್ವೀಕರಣದ ಮತ್ತೊಂದು ಮಾದರಿಯನ್ನು ಗುರುತಿಸಬಹುದು. ಇಲ್ಲಿ ಯಾವುದೇ ಉದ್ದೇಶಪೂರ್ವಕ ಹ್ರಸ್ವೀಗೊಳಿಸುವ ಕ್ರಿಯೆನಡೆಯುವುದಿಲ್ಲ. ಗ್ರಾಮೀಣರು

ಆಡುನುಡಿಯಲ್ಲಿ ತಮ್ಮ ನೆಲೆಗಳನ್ನು ಸಂಕ್ಷಿಪ್ತವಾಗಿಯೇ ಉಚ್ಚರಿಸುತ್ತಾರೆ. ಶಿಷ್ಟ ಉಚ್ಚಾರಣೆಯಲ್ಲಿಯೂ ಇದೇ ಕಂಡುಬರುತ್ತದೆ.

ಬೇವಿನಹಳ್ಳಿ	–	ಬೆ/ನ/ಳ್ಳಿ
ಕಕ್ಕಬೇವಿನಹಳ್ಳಿ	–	ಕ/ಕ್ಕ/ವ/ನ/ಹ/ಳ್ಳಿ
ಬಿಸಿಲಹಳ್ಳಿ	–	ಬಿ/ಸ್ನ/ಳ್ಳಿ
ಅಮರಾಪುರ	–	ಅಂ/ಬ್ರಾ/ಪ್ರ
ಇಬ್ರಾಹಿಂಪುರ	–	ಇ/ಬ್ರಾಂ/ಪ್ರ/
ಯರೆ ಇಂಗಳಗೆ	–	ಯೆ/ರೆಂ/ಗ್ಳಿ
ಗೊಡೆಹಾಳು	–	ಗ್ವಾ/ಡ್ಯಾ/ಳು
ಕಮ್ಮಾರಚೇಡು	–	ಕಂ/ರ್ಚೇ/ಡು
ಕಲ್ಲುಕುಟ್ಟಿಗನಹಾಳ್	–	ಕಲ್/ಕುಟ್ನ/ನಾಳ್
ಸೋಮಸಮುದ್ರ	–	ಸ್ವಾಂ/ಸಂ/ದ್ರ
ಉದೆಗೊಳಂ	–	ಉ/ಡ್ಗೊ/ಳ

ಈ ಹ್ರಸ್ವೀಕರಣ ಕ್ರಿಯೆ ಕನ್ನಡ ಪದರಚನೆಯಲ್ಲಿ ಸ್ಥಾನ ಪಡೆಯುವ ಅಕ್ಷರ ರಚನೆಯ ಮಾದರಿಯೂ ಆಗಿದೆ. ಈ ಕ್ರಿಯೆಗೆ ಉದ್ದೇಶಿತ ಕಾರಣಗಳಿಲ್ಲ. ಆಡುನುಡಿಯಲ್ಲಿ ಇದು ಸಾಮಾನ್ಯವೇ ಆಗಿದೆ ಎನ್ನಬಹುದು.

೫.೧೩. ಸ್ಥಳನಾಮ ಬರಹ ಮತ್ತು ಬಳಕೆ:

ಕೆಲವು ಗ್ರಾಮ ಸ್ಥಳನಾಮಗಳಿಗೆ ಎರಡು ಮೂರು ಬಗೆಯ ಉಚ್ಚಾರ ಹಾಗೂ ಬರಹ ಬಳಕೆಯಲ್ಲಿರುವುದು ಕಂಡು ಭಾರತದಲ್ಲಿ ಆಂಗ್ಲರ ಆಡಳಿತ ಪ್ರಭಾವ ಹೊಂದಿದ ನಂತರ ಅವರು ದೇಶಿಯ ಹೆಸರುಗಳನ್ನು ತಮ್ಮ ಭಾಷಾ ರಚನೆಗೆ ಅನುಗುಣವಾಗಿ ಕರೆದುಕೊಂಡರು. ಅಲ್ಲದೇ ಸ್ಥಳೀಯ ಸ್ಥಳನಾಮ ರೂಪಗಳನ್ನು ಇಲ್ಲಿನ ಉಚ್ಚರಣೆಗೆ ತಕ್ಕಂತೆ ತಮ್ಮ ಭಾಷೆಯಲ್ಲಿ ಕರೆದುಕೊಂಡರು. ಈ ಅವಧಿಯಲ್ಲಿ ಸ್ಥಳನಾಮಗಳ ಬರಹ ಮತ್ತು ಬಳಕೆಯಲ್ಲಿ ವಿವಿಧ ಸ್ಥಿತ್ಯಾಂತರಗಳು ಉಂಟಾಗಿವೆ. ಕರ್ನಾಟಕದ ಕೆಲವು ಊರುಗಳ ಒಂದು ಮಾದರಿಯನ್ನು ಇಲ್ಲಿ ನೀಡಲಾಗಿದೆ.

(ಅ)			(ಬ)		
ದೇಸಿ ರಚನೆಗಳು			**ಇಂಗ್ಲೀಷ್ ಪ್ರಭಾವಿತ ರಚನೆಗಳು**		
ಕೊಡಗು	–	Kodagu	Coorg	–	ಕೂರ್ಗ್
ಧಾರವಾಡ	–	Dharwad	Dharwar	–	ಧಾರ್‌ವಾರ್
ಬಳ್ಳಾರಿ	–	Ballary	Bellary	–	ಬೆಲ್ಲಾರಿ
ಹೊಸಪೇಟೆ	–	Hospet	Hospet	–	ಹಾಸ್‌ಪೇಟ್
ಮಂಗಳೂರು	–	Mangaluru	Mangalore	–	ಮ್ಯಾಂಗ್ಲೂರ್

ಮೇಲಿನ ಪಟ್ಟಿಯಲ್ಲಿನ 'ಅ' ಮಾದರಿಯ ರಚನೆಗಳು ದೇಸಿಯ ರಚನೆಗಳು ಅವುಗಳ ಮುಂದೆ ಬರೆದಿರುವಂತೆ ಇಂಗ್ಲೀಷಿನಲ್ಲಿಯೂ ಅವುಗಳ ಸ್ವರೂಪಕ್ಕೆ ತಕ್ಕಂತೆ ಬರೆಯಬಹುದಾದ ರಚನೆಗಳು. 'ಬಿ' ಪಟ್ಟಿ ಯಲ್ಲಿ ಆಂಗ್ಲರು ಬಂದ ತರುವಾಯ ಬದಲಾದ ಹೆಸರುಗಳು. ಇವು ಅವರ ಭಾಷೆಯ ಸ್ವರೂಪ ಪದ, ಧ್ವನಿ, ಉಚ್ಚಾರಣೆಯ ನಿಯಮವನ್ನು ಅನುಸರಿಸಿ ಬರೆದಂಥಹ ರಚನೆಗಳಾಗಿವೆ. ಆದರೆ ದೇಸೀಯ ನೆಲೆಯಲ್ಲಿ ಈ ಸ್ಥಳನಾಮಗಳ ಬರಹ ಮತ್ತು ಬಳಕೆಯಲ್ಲಿ ಇಂದಿಗೂ ಧನ್ಯತೆಯನ್ನು ಪಡೆದುಕೊಂಡಿವೆ. ಕನ್ನಡಮಾತೃ ಭಾಷಕರು ಮೇಲಿನ ಊರ ಹೆಸರುಗಳನ್ನು ಕನ್ನಡದಲ್ಲಿ ಬರೆಯುವಾಗ (ಅ) ಪಟ್ಟಿಯಲ್ಲಿರುವಂತೆ ಬಳಸುತ್ತಾರೆ. ಅವರು ಇಂಗ್ಲೀಷಿನಲ್ಲಿ ಬರೆಯುವಾಗ (ಬ) ಪಟ್ಟಿಯಲ್ಲಿರುವಂತೆ ಬರೆಯುತ್ತಾರೆ. ಉಚ್ಚಾರಣೆಯ ಸಂದರ್ಭದಲ್ಲಿ ಅಕ್ಷರಸ್ಥರೂ ಕೂಡ (ಅ) ಪಟ್ಟಿಯಲ್ಲಿರುವಂತೆ ಉಚ್ಚರಿಸುತ್ತಾರೆ. ಬರಹದಲ್ಲಿ ಮಾತ್ರ (ಬ) ಪಟ್ಟಿಯಲ್ಲಿರುವಂತೆ ಬರೆಯುತ್ತಾರೆ.

Adhoni	–	ಅದೋನಿ
Bellary	–	ಬಳ್ಳಾರಿ
Bangalore	–	ಬ್ಯಾಂಗಳೂರು
Sedam	–	ಸೇಡಂ
Belgaum	–	ಬೆಲಗಾಂ
Koppal	–	ಕೊಪ್ಪಲ್

ಎಂಬ ಸ್ಥಳಗಳನ್ನು ಇಂಗ್ಲೀಷಿನ ಪ್ರಭಾವದಂತೆಯೇ ಉಚ್ಚರಿಸುವುದು ಕಂಡು ಬರುತ್ತದೆ. ಆದರೆ ಸ್ಥಳೀಯ ವ್ಯಕ್ತಿಗಳಿಗೆ ಆಯಾ ಸ್ಥಳನಾಮಗಳ ಮೂಲ ಅರಿವು ಇರುತ್ತದೆ. ಕಾರಣ ಅವರ ಉಚ್ಚರಣೆ ಮತ್ತು ಬರಹ ಭಿನ್ನವಾಗಿರುತ್ತದೆ. ಅನ್ಯಪರಿಸರದ ವ್ಯಕ್ತಿಗಳಲ್ಲಿ ಉಚ್ಚಾರಣೆ

ಮತ್ತು ಬರಹ ಏಕರೀತಿಯಾಗಿರುತ್ತದೆಂಬುದನ್ನು ಗಮನಿಸಬೇಕು. ದೇಶೀಯ ನಾಮಗಳನ್ನು ಆಂಗ್ಲರು ಒಂದೊಮ್ಮೆ ಸರಿಯಾಗಿ ಗ್ರಹಿಸಿಯೇ ಬರಹದ ರೂಪಕ್ಕೆ ತಂದಿದ್ದಾರೆಂದು ತಿಳಿಯಬಹುದು. ಇಂಗ್ಲೀಷಿನ – Can (ಕ್ಯಾನ್) Dan (ಬ್ಯಾನ್) ನಲ್ಲಿ ಬಳಕೆಯಾಗಿರುವ ಆ ಸ್ವರದ ಉಚ್ಚಾರಣೆಗೆ ಅನುಗುಣವಾಗಿ ಬೆಂಗಳೂರು ಕನ್ನಡದ ವ್ಯವಹಾರಿಕ ಉಚ್ಚಾರದ ಬ್ಯಾಂಗಳೂರು ಎಂಬುದಕ್ಕೆ ಸಂವಾಧಿಯಾಗಿ ಬ್ಯಾಂಗಲೂರ್ ಎಂದು ಬಳಕೆಯಾಗಿದೆ. ಆದರೆ ಹಿಂದಿಭಾಷೆಯಲ್ಲಿ "ಬಂಗ್ಲೋರ್" ಎಂದೇ ಕೇಳಿಬರುತ್ತದೆ. ಇಲ್ಲಿ ಕ್ಯಾನ್, ಬ್ಯಾನ್, ಮಾದರಿಯ ಉಚ್ಚಾರಕ್ಕೆ ಬಳಕೆಯಾಗಿರುವ 'ಎ' ಜಾರು ಸ್ವರವನ್ನು ಬರಹದ ಮೂಲಕ ಮಧ್ಯೆ ಅಗೋಳ 'ಅ' ಸ್ವರವನ್ನಾಗಿ ಹಿಂದಿ ಭಾಷಿಕರು ಗ್ರಹಿಸಿದ್ದಾರೆ.

ಅದರಂತೆ 'ಬಳ್ಳಾರಿ' ಎಂಬ ಸ್ಥಳನಾಮವನ್ನು ವಿವರಿಸಬಹುದು. ಆಂಗ್ಲರು ಗ್ರಹಿಸಿದ ಬಳ್ಳಾರಿ ಎಂಬುದು ದೇಶೀ ರಚನೆಯಲ್ಲಿ ಶಾಸನೋಕ್ತ "ಬೆಳ್ಳಾರೆ" ಎಂಬ ಆಕೃತಿಮಾಕ್ಕೆ ಸಂವಾದಿಯಾಗಿ ಕಂಡು ಬರುತ್ತದೆ. ಬಹುಶ: ಇಂಗ್ಲೀಷಿಗೆ ಸ್ಥಳನಾಮಗಳನ್ನು ಅಳವಡಿಸುವಾಗ ಇಂತಹ ಮೂಲ ನಿಷ್ಪತ್ತಿಯನ್ನು ನೋಡಲಿಕ್ಕೆ ಸಾಧ್ಯವಿದೆಯೆಂದು ಹೇಳಬಹುದು. ಸ್ಥಳನಾಮಗಳು ಭಾಷಿಕ ಘಟಕಗಳಾಗಿ ಬಂದ ಶಿಷ್ಟವೆನ್ನಬಹುದಾದ ರೂಪವನ್ನು ಬಹುತೇಕ ಇಂದು ಪಡೆದುಕೊಂಡಿವೆ. ಸಾಮಾನ್ಯ ಜನರಿಂದ ಗ್ರಾಮಕ್ಕೆ ಹೆಸರು ನಿರ್ದೇಶನವಾಗಿದ್ದರೂ ಅದು ಆಡುನುಡಿಯ ರೂಪದಿಂದ ಶಿಷ್ಟರೂಪಕ್ಕೆ ತಿರುಗಿರುವುದು ಕಂಡು ಬರುತ್ತದೆ. ಈ ಶಿಷ್ಟರೂಪವನ್ನೇ ಬರಹದ ರಚನೆಯನ್ನಾಗಿ ಇಂದು ಸ್ವೀಕರಿಸಿಕೊಳ್ಳಲಾಗಿದೆ. ಅದರಂತೆ ಈ ಬರಹದ ರೂಪಗಳನ್ನು ಅಕ್ಷರಸ್ಥ, ಅನಕ್ಷರಸ್ಥ ಸಮುದಾಯಗಳು ಉಚ್ಚರಿಸುವ ವಿಧಾನ ಭಿನ್ನವಾಗಿರುತ್ತದೆ. ಬಳಕೆಯ ಸಂದರ್ಭದಲ್ಲಿ ಅಕ್ಷರಸ್ಥ ಹಾಗೂ ಅನಕ್ಷರಸ್ಥ ಸಮುದಾಯಗಳ ನಡುವೆ ತೀರಾ ಭಿನ್ನತೆ ಇರುವುದಿಲ್ಲ. ಆದರೂ ಅಕ್ಷರಸ್ಥರು ಕೊಂಚ ಶಿಷ್ಟರೂಪವನ್ನು ಬಳಕೆಯಲ್ಲಿ ಉಳಿಸಿಕೊಂಡಿರುತ್ತಾರೆ. ಸ್ಥಳನಾಮಗಳ ಬಳಕೆಯ ವಲಯಗಳನ್ನು ಸೂಕ್ಷ್ಮವಾಗಿ ನೋಡಿದರೆ ಜಾತಿ/ವರ್ಗದ ನೆಲೆಯಲ್ಲಿಯೂ ಅನೇಕ ಭಾಷಿಕ ವ್ಯತ್ಯಾಸಗಳಿಂದ ಬಳಸಲ್ಪಡುವುದನ್ನು ಗುರುತಿಸಬಹುದು. ಪ್ರಸ್ತುತ ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳ ಶಿಷ್ಟರೂಪ (ಬರಹ) ಮತ್ತು ಆಡುನುಡಿಯ ರೂಪ(ಬಳಕೆ)ಗಳ ಪಟ್ಟಿಯನ್ನು ನೀಡಲಾಗಿದೆ.

ಸ್ಥಳನಾಮಗಳು ಪರಿವರ್ತನೆ ಮತ್ತು ಪ್ರಭಾವ ಪುಟ ೪೮

ಬರಹ(ಶಿಷ್ಟರೂಪ)	ಬಳಕೆ(ಅಕ್ಷರಸ್ಥರು)	ಬಳಕೆ (ಅನಕ್ಷರಸ್ಥರು)
ಅಮರಾಪುರ	ಅಂಬ್ರಾಪುರ	ಅಂಬ್ರಾಪ್ರ
ಇಬ್ರಾಹಿಂಪುರ	ಇಬ್ರಾಹಿಂಪುರ	ಇಂಬ್ರಾಂಪ್ರ
ಕಕ್ಕಬೇವಿನಹಳ್ಳಿ	ಕಕ್ಕಬೇವಿನಹಳ್ಳಿ	ಕಕ್ಕವನಹಳ್ಳಿ
ಬೇವಿನಹಳ್ಳಿ	ಬೇವಿನಹಳ್ಳಿ	ಬೇನಳ್ಳಿ
ಕಮ್ಮರಚೇಡು	ಕಮ್ಮರಚೇಡು	ಕಂಬ್ರೆಚೇಡ್
ಗೋಡೆಹಾಳ್	ಗೋಡೆ ಅಳ್	ಗ್ವಾಡ್ಯಾಳು
ಜೋಳದರಾಶಿ	ಜೋಳದರಾಸಿ	ಜ್ವಾಳದರಾಸಿ
ದಮ್ಮೂರು	ದಮ್ಮೂರು	ದೊಮ್ಮೂರು
ಮೋಕ	ಮೋಕ	ಮಾಕೆ
ಯರೆಇಂಗಳಗಿ	ಯರಂಗಿಳಿಗಿ	ಯೆರೆಂಗ್ಳಿ
ವೀರಾಪುರ	ವೀರಾಪುರ	ಇರಾಪ್ರಾ
ಸಿದ್ದನಗದ್ದೆ	ಶ್ರೀಧರಗಡ್ಡೆ	ಸಿಗರಗಡ್ಡೆ
ಹರಗಿನದೋಣಿ	ಹರಗಿನದೋಣ	ಅರಗಿನಡೋಣಿ
ಹಂದರಹಾಳ್	ಹಂದ್ರಾಳ್	ಅಂದ್ರಾಳು
ಕಲ್ಲುಕುಟ್ಟಿಗನಹಾಳು	ಕಲ್ಲುಕುಟ್ಟಿಗನಹಾಳ್	ಕಲ್ಕುಕುಟ್ನಾಳು
ಪರಮದೇವನಹಳ್ಳಿ	ಪರಮದೇವನಹಳ್ಳಿ	ಪರ್ಮದೇನಳ್ಳಿ
ಮುಸುಡಿಪುರ	ಮಸುದಿಪುರ	ಮಸಿದಿಪುರ
ಸೋಮಸಮುದ್ರ	ಸೋಮಸಮುದ್ರ	ಸ್ವಾಂಸಂದ್ರ
ಕುಡುದ್ರಹಾಳ	ಕುಡುದ್ರಾಳ್	ಕುಡುದ್ರಾಳ್

ಅಕ್ಷರಸ್ಥರು ಶಿಷ್ಟ ರೂಪದಂತೆ ಉಚ್ಚರಿಸಲು ಪಯತ್ನಿಸುತ್ತಿರುವುದು ಕಂಡು ಬರುತ್ತದೆ. ಅನಕ್ಷರಸ್ಥ ಸಮುದಾಯ ದೇಸೀರೂಪದ ಶುದ್ಧ ಆಡುನುಡಿಯನ್ನು ಸ್ಥಳನಾಮಗಳ ಉಚ್ಚಾರಣೆಗೆ ಬಳಸುವುದು ಕಂಡು. ಉದ್ದುದ್ದನೆಯ ಸ್ಥಳನಾಮ ರಚನೆಗಳನ್ನು ಅಕ್ಷರಸ್ಥ ಸಮುದಾಯಗಳು ಹ್ರಸ್ವೀಕರಣಗೊಳಿಸಿಕೊಂಡಿವೆ. ಇಂಗ್ಲೀಷ್ ಭಾಷೆಯ ಪ್ರಭಾವಕ್ಕೆ ಈ ಸಮುದಾಯ ಒಳಗಾಗಿರುವುದು ಇದರಿಂದ ತಿಳಿದು ಬರುತ್ತದೆ. ಅಕ್ಷರಸ್ಥ ಸಮುದಾಯವು ಉದ್ದುದ್ದನೆಯ ರಚನೆಗಳನ್ನು ಹಾಗಯೇ ಬಳಸುತ್ತಿರುವುದು ಕಂಡು ಬರುತ್ತದೆ. ಆಧುನಿಕತೆಯ ಭಾಷಿಕ.

ರಾಜಕೀಯ ಮುಂತಾದ ಕೆಲವು ಕಾರಣಗಳ ಪ್ರೇರಣೆ ಒತ್ತಡಗಳಿಗೆ ಒಳಗಾಗಿಲ್ಲವೆಂಬುದನ್ನು ಈ ಮೂಲಕ ಗುರುತಿಸಬಹುದು. ಯಾವುದೇ ಬೌಗೋಳಿಕ ಪರಿಸರದಲ್ಲಿ ಈ ರೀತಿಯ ಚಿತ್ರಣದೊರೆಯುವುದು ಸಹಜವಾಗಿರುತ್ತದೆ.

೫.೧೪ ಬಳ್ಳಾರಿ ತಾಲ್ಲೂಕಿನ ಗಡಿಪ್ರದೇಶದ ಸ್ಥಳನಾಮಗಳು

ಕೊತ್ತಲ ಚಿಂತ,

ಕೊರ್ಲಗುಂಡಿ

ಬೊಬ್ಬಕುಂಟ

ತೋಲಮಾಮಿಡಿ

ಮುಸ್ತಗಟ್ಟ

ಯರ್ರಗುಡಿ

ಕರೇಕಲ್ಲು ವೀರಾಪುರ

ಸ್ಥಳನಾಮ ವಾರ್ಗಿಕದಲ್ಲಿ ದ್ರಾವಿಡ ಮೂಲಪದವು ತಮಿಳು, ತೆಲಗು, ಮಲೆಯಾಳಂ ಕನ್ನಡದಲ್ಲಿ ವಿವಿಧ ರೀತಿಯಲ್ಲಿ ಕೊಂಚ ಬದಲಾವಣೆಯೊಂದಿಗೆ ಬಳಕೆಯಾಗುತ್ತದೆ. ಅದರಂತೆ ಕೆಲವು ಕನ್ನಡ ವಾರ್ಗಿಕ ರೂಪಗಳು ತೆಲುಗಿನಲ್ಲಿ ಆ ಭಾಷಿಕ ಪರಿಸರಕ್ಕೆ ತಕ್ಕಂತೆ ಬದಲಾಗಿವೆ. ತೆಲುಗು ಮಾತೃಭಾಷಿಕರು ಗಡಿಭಾಗದಲ್ಲಿ ಅದಕ್ಕಿರುವ ಮೂಲರೂಪವನ್ನು ಅ ಮತ್ತು ಮ ಕಾರಂತ್ಯವನ್ನಾಗಿ ಉಚ್ಚರಿಸಿ ಬರೆದು ತೆಲುಗೀಕರಣಗೊಳಿಸಿರುವುದು ತಿಳಿಯುತ್ತದೆ.

ಕನ್ನಡ	**ತೆಲುಗು**
ಕುಂದೆ	ಕುಂದ
ಕುಂಟೆ	ಕುಂಟ
ಕೆರೆ	ಕೆರ
ಕಣಿವೆ	ಕಣವ
ಕಟ್ಟೆ	ಕಟ್ಟ
ಕುಪ್ಪೆ	ಕುಪ್ಪ
ಕೋಟೆ	ಕೋಟ

ಗುಡ್ಡ	ಗುಡ್ಡಂ
ಗೇರಿ	ಗೇರಾ
ಡೋಣೆ	ದೋಣ
ದಿನ್ನೆ	ದಿನ್ನ
ದುರ್ಗ	ದುರ್ಗಂ
ನಗರ	ನಗರಂ
ಪುರ	ಪುರಂ
ಬಂಡೆ	ಬಂಡ
ಹಾಳು	ಪಾಡು
ಹ್ಯಾಟಿ	ಹ್ಯಾಟ

ದುರ್ಗ, ನಗರ, ಪುರ ಎಂಬ ಸಂಸ್ಕೃತದ ಪದಗಳು ತೆಲುಗಿನಲ್ಲಿ – ಮ ಕಾರಾಂತ್ಯಗೊಂಡುದು ತಿಳಿಯುತ್ತದೆ.

ಬಳ್ಳಾರಿ ಜಿಲ್ಲೆಯು ಗಡಿ ಜಿಲ್ಲೆಯಾಗಿದ್ದು ಸ್ಥಳನಾಮಗಳ ಭಾಷಿಕ ಅಧ್ಯಯನ ಮಹತ್ವಪಡೆದಿದೆ. ಭೌಗೋಳಿಕ ಗಡಿಯನ್ನು ಅನುಲಕ್ಷಿಸಿದ ಈ ಪ್ರದೇಶದಲ್ಲಿ ಒಟ್ಟು ಸ್ಥಳನಾಮಗಳು ನಿರ್ದೇಶನಗೊಂಡಿರುವುದು ಕನ್ನಡ ಭಾಷೆಯ ಮೂಲಕವೇ. ಆಧುನಿಕತೆಯ ಅಂದರೆ ಭಾಷಾವಾರು ಪ್ರಾಂತ್ಯದ ರಚನೋತ್ತರ ಕಾಲದಲ್ಲಾದ ಭಾಷಿಕ ಪ್ರೇರಣೆಯಿಂದ ಆದಂತಹ ಸ್ಥಿತ್ಯಾಂತರಗಳು ತೆಲುಗಿನ ಪ್ರಭಾವವನ್ನು ಹೇಳುತ್ತವೆ. ಬಳ್ಳಾರಿ ಜಿಲ್ಲೆಯ ಗಡಿಯಲ್ಲಿ ಭಾಷಿಕ (ತೆಲುಗು) ಪ್ರೇರಣೆಗಳಿದ್ದರೂ ರಾಜಕೀಯ(ತೆಲುಗು) ಒತ್ತಡಗಳಿಲ್ಲ ಕಾರಣ ಅಷ್ಟಾಗಿ ಕನ್ನಡ ಹೆಸರುಗಳ ಮೇಲೆ ತೆಲುಗು ಪ್ರಭಾವ ಬೀರಿಲ್ಲ.

೫.೨ ಸಾಂಸ್ಕೃತಿಕ ನೆಲೆ

ಜಗತ್ತಿನ ಒಟ್ಟು ಜನ ಸಮುದಾಯವು ಒಂದೇ ಆದರೂ ಒಂದು ಸೀಮಿತ ಭೌಗೋಳಿಕ ಆವರಣದಲ್ಲಿ ವಾಸಿಸುವ ಜನಗಳ ಜೀವನ ವಿಧಾನದಿಂದ ಮತ್ತೊಂದು ಸೀಮಿತ ಆವರಣದಲ್ಲಿ ವಾಸಿಸುವ ಜನಗಳ ಜೀವನ ವಿಧಾನವು ಬೇರೆ ಬೇರೆ ಬಗೆಯಲ್ಲಿರುತ್ತವೆ. ಪ್ರಾಚೀನ ಕಾಲದಿಂದಲೂ ಭಾರತವು ಒಂದು ಪ್ರತ್ಯೇಕವಾಗಿ ಒಂದು ಭೌಗೋಳಿಕ ಕ್ಷೇತ್ರವಾಗಿದೆ. ಇಲ್ಲಿ ವಿವಿಧ ರೀತಿಯ ಜನಾಂಗಗಳು ನೆಲೆಸಿವೆ. ಅವುಗಳೆಲ್ಲ ತಮ್ಮದೇ ಆದ ಜೀವನ ರೀತಿ– ನೀತಿ, ವಿಧಿ– ವಿಧಾನಗಳುಂಟು, ಒಂದು ಜನಾಂಗದಲ್ಲಿ ಸಂಸ್ಕೃತಿ ಎಂಬುದು ಒಡ ಮೂಡಿ ಬರಲು ಅದು ಬಲು ದೀರ್ಘ ಕಾಲಾವಧಿಯನ್ನು ದಾಟಿ ಬರಬೇಕಾಗುತ್ತದೆ. ನಾವು ಏನಾಗಿದ್ದೇವೆ ಮತ್ತು ನಾವು ಹೇಗೆ ಬದುಕನ್ನು ಸಾಗಿಸಿದ್ದೇವೆ ಎಂಬುದೇ ಸಂಸ್ಕೃತಿಗಿರುವ ಸ್ಥೂಲವಾದ ವ್ಯಾಖ್ಯೆ. ಒಂದು ಸಮಾಜದ ಅಥವಾ ಒಂದು ಗುಂಪಿನಲ್ಲಿ ಕಂಡು ಬರುವ ಜೀವನದ ವಿಧಾನ ಎನ್ನುವುದೇ ಅಯಾ ಕ್ಷೇತ್ರದ ಸಂಸ್ಕೃತಿಯಾಗಿರುತ್ತದೆ. ಬದುಕನ್ನು ಬೆಳೆಸಿಕೊಳ್ಳುವುದು ಮತ್ತು ಉತ್ತಮಿಕೆಯನ್ನು ವೃದ್ಧಿಗೊಳಿಸಿಕೊಳ್ಳಬೇಕೆಂಬ ಹಂಬಲ ಮಾನವನ ಸಹಜ ಮನೋವೃತ್ತಿಯಾಗಿದೆ. ಈ ದಿಸೆಯಲ್ಲಿ ಅವನ ಸಂಸ್ಕೃತಿಯನ್ನೇ 'ಸಂಸ್ಕೃತಿ' ಎಂದು ಕರೆಯಬಹುದು. ಇಂಥಹ ಪ್ರಯತ್ನಗಳು ಭಾರತದಲ್ಲಿ ಸಹಾಸ್ರಾರು ವರ್ಷಗಳಿಂದ ನಡೆಯುತ್ತಲೆ ಬಂದಿದೆ. ಇದನ್ನೇ ನಾವು "ಭಾರತೀಯ ಸಂಸ್ಕೃತಿ" ಎನ್ನುತ್ತೇವೆ. ಆಚಾರ– ವಿಚಾರ, ನಡೆ–ನುಡಿ, ರೀತಿ–ರಿವಾಜು, ವೇಷ–ಭಾಷೆ, ಮೊದಲಾದವುಗಳಿಂದ ಪ್ರಾಂತಿಯವಾಗಿ ಭಾರತೀಯ ಸಂಸ್ಕೃತಿಯಲ್ಲಿ ಅನೇಕ ವೈವಿಧ್ಯತೆಗಳು ಕಂಡು ಬರುತ್ತವೆ. ಇದರಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟಂತೆ ವೈಶಿಷ್ಟಗಳು ಕರ್ನಾಟಕ ಸಂಸ್ಕೃತಿ ಎಂದು ಕರೆಯುತ್ತೇವೆ. ವ್ಯಕ್ತಿಗಳ ಜೀವನ ಕ್ರಮದಿಂದ ಅವನ ಸಂಸ್ಕೃತಿಯನ್ನು ಅಳೆಯಲು ಸಾಧ್ಯವಿದೆ. ಇಲ್ಲಿನ ಮಾನವನ ಭಾಷಿಕ ಅಭಿವ್ಯಕ್ತಿಯ ಸಂಕೇತಗಳಾಗಿವೆ. ಅವುಗಳ ಅಧ್ಯಯನದಿಂದ ಜನಗಳ ಮನೋಭಾವನೆ, ವ್ಯಕ್ತಿತ್ವದ ಪರಿ, ದುಖ: –ದುಮ್ಮಾನ, ಸುಖ–ಸೌಕರ್ಯ, ರಾಜಕೀಯ ಮತ್ತು ಸಾಮಾಜಿಕ ವಿಕಸನ ಮೊದಲಾದವುಗಳನ್ನು ಅರಿಯಲು ಸಾಧ್ಯವಾಗುತ್ತದೆ. ಪ್ರಾಕೃತಿಕ ಸ್ಥಳನಾಮಗಳು ಸ್ಥಳೀಯ ಭಾಷೆ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದವುಗಳಾಗಿದ್ದು ಅವುಗಳ ಸಂಖ್ಯೆ ಕಡಿಮೆ ಪ್ರಮಾಣದಲ್ಲಿರುತ್ತದೆ. ಇವುಗಳ ಪ್ರಾಚೀನ ಕಾಲಕ್ಕೆ ಸಂಬಂದ ಪಡೆದವುಗಳಾಗಿದ್ದು ಅಯಾ ಕಾಲ ಪರಿಮಿತ ಅವಧಿಯಲ್ಲಿ ಅಸ್ತಿತ್ವ ಪಡೆದವುಗಳಾಗಿವೆ. ಆದರೆ ಸಾಂಸ್ಕೃತಿಕ ಸ್ಥಳನಾಮಗಳು ವಿವಿಧ ಭಾಷೆ ಮತ್ತು ವಿವಿಧ ಸಂಸ್ಕೃತಿಗಳಿಗೆ ಸಂಬಂದಪಟ್ಟವುಗಳಾಗಿದ್ದು ಅಧಿಕ ಸಂಖ್ಯೆಯಲ್ಲಿ ಕಾಣಬರುತ್ತವೆ. ಬಳ್ಳಾರಿ ಜಿಲ್ಲೆಯು ಕರ್ನಾಟಕಾಂದ್ರ ಗಡಿ

ಪ್ರದೇಶದಲ್ಲಿರುವುದರಿಂದ ಇಲ್ಲಿನ ಸ್ಥಳನಾಮಗಳು ಕರ್ನಾಟಕ ಸಂಸ್ಕೃತಿಯನ್ನಲ್ಲದೆ ಆಂದ್ರ ಸಂಸ್ಕೃತಿಯ ಬಗೆಗೂ ಕೆಲವಂಶಗಳನ್ನು ತಿಳಿಸುತ್ತದೆ. ಇಲ್ಲಿನ ಪ್ರಾಕೃತಿಕ ಸ್ಥಳನಾಮಗಳನ್ನು ಸ್ಥಳೀಯ ಭಾಷೆಯಲ್ಲಿ ತಿಳಿಸಿದರೆ ಸಾಂಸ್ಕೃತಿಕ ಸ್ಥಳನಾಮಗಳು ಬಿನ್ನ ಸಂಸ್ಕೃತಿಯನ್ನು ಭಿನ್ನ ಭಾಷೆಯಲ್ಲಿ ತಿಳಿಸುತ್ತವೆ. ಇವುಗಳನ್ನು ಕೆಳಗಿನಂತೆ ವಿಭಾಗಿಸಿ ನೋಡಬಹುದಾಗಿದೆ.

೧. ಪೌರಾಣಿಕ

೨. ಧಾರ್ಮಿಕ

೩. ಐತಿಹಾಸಿಕ

೪. ಆಡಳಿತಾತ್ಮಕ

೫. ಸಾಮಾಜಿಕ

೫.೨(೧) ಪೌರಾಣಿಕ ಸ್ಥಳನಾಮಗಳು:

ನಮ್ಮ ಸನಾತನ ಪುರಾಣಗಳು, ಪುರಾಣ ಕಾವ್ಯಗಳು ಇಲ್ಲಿಯ ಜನತೆಯ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟು ಮಾಡಿವೆ. ಒಂದು ರೀತಿಯಲ್ಲಿ ಇವುಗಳು ಭಾರತೀಯ ಸಂಸ್ಕೃತಿಯ ನಿಯಂತ್ರಕಗಳಾಗಿ ಮಹತ್ವಪೂರ್ಣ ಪಾತ್ರವನ್ನು ವಹಿಸಿವೆ. ರಾಮಯಾಣ ಮತ್ತು ಮಹಾಭಾರತ ಕಾವ್ಯಗಳು ರಾಜ ಮಹಾರಾಜರುಗಳ ಕಥೆಯನ್ನು ಅರುಹುತ್ತಿದ್ದರೂ ಪರಂಪರಾಗತ ಭಾರತೀಯ ನಂಬಿಕೆಯಂತೆ ಅವು ನಮಗೆ ಪುರಾಣ ಕಾವ್ಯಗಳೇ ಆಗಿವೆ. ಇವುಗಳ ಆಧಾರದ ಮೇಲೆ ಹದಿನೆಂಟು ಮಹಾಪುರಾಣಗಳು ಮತ್ತು ಹದಿನೆಂಟು ರಚಿತವಾಗಿವೆ. ಇವುಗಳಲ್ಲಿ ಕೆಲವು ಮಾತ್ರ ಉಪಲಬ್ದವಾಗಿವೆ. ಇನ್ನುಳಿದ ಹೆಸರುಗಳಲ್ಲಿ ಮಾತ್ರ ಅಸ್ತಿತ್ವ ಹೊಂದಿವೆ. ಬಳ್ಳಾರಿ ಜಿಲ್ಲೆಯ ಕೆಲವು ಸ್ಥಳನಾಮಗಳನ್ನು ಪರಿಶೀಲಿಸಿದಾಗ ಪ್ರಾಚೀನ ಕಾಲದಿಂದಲೂ ಪುರಾಣ ಕಾವ್ಯಗಳು ತಮ್ಮ ಪ್ರಭಾವವನ್ನು ಇವುಗಳ ಮೇಲೆ ಉಂಟು ಮಾಡಿರುವುದು ತಿಳಿದು ಬರುತ್ತದೆ. ಸ್ಕಂದ ಪುರಾಣ ಮುಂತಾದ ಇತರೆ ಪುರಾಣಗಳ ಪ್ರಭಾವದಿಂದಲೂ ಕೆಲವು ಸ್ಥಳನಾಮಗಳು ಅಸ್ತಿತ್ವಕ್ಕೆ ಬಂದಿವೆ.

೫.೨(೨) ರಾಮಾಯಣ

ವಾಲ್ಮೀಕಿ ರಾಮಾಯಣದಲ್ಲಿ ರಾಮನು ಪಿತೃಭಕ್ತಿ, ಪ್ರಜಾ ವಾತ್ಸಲ್ಯಕ್ಕೆ ಸೀತೆಯು ಪಾತಿವ್ರತ್ಯಕ್ಕು, ಹನುಮಂತನು ಸ್ವಾಮಿ ಭಕ್ತಿಗೂ ಪ್ರತಿನಿಧಿಯಾಗಿ ಕಾಣುತ್ತಾರೆ. ಈ ವ್ಯಕ್ತಿಯ ಆದರ್ಶವು ಭಾರತೀಯರ ಮನಸ್ಸನ್ನು ಗೆದ್ದಿರುವುದರಿಂದ ಜನರಿಗೆ ಇವರ ಹೆಸರುಗಳ ವಿಚಿತ್ರವೂ ಉಪಾಸನಾ ಯೋಗ್ಯವೂ ಆಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಹೆಸರುಗಳು ವ್ಯಕ್ತಿನಾಮಗಳಾಗಿಯೂ ಒಳಗೊಂಡಿರುವುದು ಗಮನಿಸಲಾಗಿದೆ.

ಸಂಸ್ಕೃತಿಯಲ್ಲಿ 'ದೇವರ' ಪಾತ್ರ ಅನನ್ಯವಾದುದು. ಜೀವನದ ಹಲವಾರು ಸಂಗತಿಗಳಲ್ಲಿ ದೈವದ ಅಸ್ತಿತ್ವವನ್ನು ಕಂಡುಕೊಳ್ಳುವುದು ನಮ್ಮ ಸಂಸ್ಕೃತಿಯ ಪರಂಪರೆಯಾಗಿ ಮುಂದುವರೆಯುತ್ತದೆ. ಹಾಗೆಯೇ ಗ್ರಾಮ, ಊರುಗಳ ಹೆಸರುಗಳಿಗೂ ದೇವರ ನಾಮಗಳನ್ನು ಆರೋಪಿಸುವುದು ವಾಡಿಕೆಯಿದೆ. ಸಂಪ್ರದಾಯಗಳು ತಾವು ನಂಬಿದ ಕುಲದೈವ, ಮನೆದೈವ, ಗ್ರಾಮದೇವತೆ. ಪ್ರಾದೇಶಿಕ ದೇವತೆ ಹೀಗೆ ಹಲವಾರು ದೇವರುಗಳ ಹೆಸರುಗಳನ್ನು ನಮ್ಮ ನೆಲೆಗಳಿಗೆ ಇಟ್ಟುಕೊಂಡರೆ ಶುಭವೆಂದು ನಂಬುತ್ತಾರೆ. ಆ ಮೂಲಕ ನಮ್ಮ ಸಂಸ್ಕೃತಿಯ ಒಂದು ಭಾಗವೆಂದು ದೇವರನ್ನೇ ಸ್ವೀಕರಿಸಿದ್ದಿದೆ.

ಅಮರಾಪುರ: ಇಂದ್ರದೇವನ ವಾಸಸ್ಥಾನವೆಂದು ನಂಬಲಾಗಿದೆ.

ಪರಮದೇವನಹಳ್ಳಿ: ಈಶ್ವರ ದೇವಾಲಯ ಇರುವುದರಿಂದ ಈ ಹೆಸರು ಬಂದಿದೆ.

ಭೈರದೇವನಹಳ್ಳಿ: ಈ ನೆಲೆಗಳು 'ನಾಥ' ಸಂಪ್ರದಾಯದ ಸ್ಥಳಗಳೆಂದು ತಿಳಿಯುತ್ತದೆ.

ಶಂಕರ ಬಂಡೆ: ಶಿವನ ದೇವಾಲಯಗಳಿರುವ ಊರುಗಳು. ಇಲ್ಲಿನ ಒಂದು ಬೆಟ್ಟದಲ್ಲಿ 'ಶಂಕರ' ಎಂಬ ರೂಪ ತಪಸ್ಸು ಮಾಡಿದನೆಂದೂ ಸ್ಥಳೀಯರ ಅಭಿಪ್ರಾಯ.

ಲಿಂಗದೇವನಹಳ್ಳಿ:

೫.೨(೩) ಶ್ರೀಧರ ಗಡ್ಡೆ: ನಿದ್ದರಗಡ್ಡೆ

ಹೀಗೆ ಹಲವಾರು ದೇವರ ಪುರಾಣ ಪುರುಷರ, ಸಾಧು ಸಜ್ಜನರ, ತಪಸ್ವಿಗಳು ಮುಂತಾದವರು ನಮ್ಮ ಸಾಂಸ್ಕೃತಿಯಲ್ಲಿ ಜೀವನದ ಅವಿಭಾಜ್ಯ ಭಾಗವಾಗಿ, ಆ ಮೂಲಕ ಸ್ಥಳಗಳಲ್ಲಿ ಅವರ ಹೆಸರುಗಳನ್ನು ಇಡುವ ಮೂಲಕ ಸದಾ ಸ್ಮರಿಸುವ ಪರಿಪಾಠವನ್ನು ಹೊಂದಿರುವ ಅಂಶವು ತಿಳಿಯುತ್ತದೆ. ಕೆಲವು ಸ್ಥಳನಾಮಗಳ ಆಕೃತಿಯಿಂದ ಅದು ವ್ಯಕ್ತಿಯೋ ಅಥವಾ ದೈವವೋ ಎಂಬಂತಹ ತೊಡರುಗಳು ಉಂಟಾಗುತ್ತವೆ. ಕಾರಣ ಕ್ಷೇತ್ರ ಮಾಹಿತಿಯಿಂದ ಮಾತ್ರ ಈ ಬಗ್ಗೆ ಖಚಿತತೆ ನಿರ್ದಿಷ್ಟತೆ ಬರುತ್ತದೆ. ದೇವರೊಂದಿಗೆ ಸಂಬಂಧ. ಆ ಮೂಲಕ ಕಟ್ಟಿಕೊಂಡ ನಾಡದು ಸಂಸ್ಕೃತಿಯಲ್ಲಿ ಈ ಸ್ಥಳನಾಮಗಳು ವೈಶಿಷ್ಟ್ಯತೆಯನ್ನು ಪಡೆದುಕೊಂಡಿವೆ.

೫.೨(೪) ಪುರಾಣ ಪ್ರಭಾವ ಸ್ಥಳನಾಮದ ನೆಲೆಗಳು:

ಪುರಾಣೋಕ್ತ ಸ್ಥಳನಾಮಗಳ ಅನುಕರಣೆ ಸ್ಥಳಗಳು ನಾಮಕರಣದಲ್ಲಿನ ಮಹತ್ವದ ಅಂಶವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಈ ರೀತಿಯ ಸ್ಥಳನಾಮಗಳನ್ನು ಪುರಾಣ ಪ್ರಭಾವದ ಸ್ಥಳನಾಮಗಳೆಂದು ಇಲ್ಲಿ ಕರೆಯಲಾಗಿದೆ.

ದೇವಲೋಕ ಶಿಲ್ಪಿಯಾದ ವಿಶ್ವ ಕರ್ಮನು ದೇವೇಂದ್ರ ಮತ್ತು ಶಚೀ ದೇವಿಯರಿಗಾಗಿ ಮೇರು ಪರ್ವತದ ಮೇಲೆ ಅಮರಾವತಿಯೆಂಬ ಬಹು ಸುಂದರ ಪಟ್ಟಣವನ್ನು ನಿರ್ಮಿಸಿದರೆಂದು ಅನೇಕ ಪುರಾಣಗಳಲ್ಲಿ ಪ್ರಸ್ತಾಪವಾಗಿದೆ. ಆದ್ದರಿಂದ ನಮ್ಮ ದೇಶದಲ್ಲೆಲ್ಲಾ **"ಅಮರಾವತಿ"**ಯ ಅನುಕರಣೆ ಕಾಣಿಸಿಕೊಂಡಿದೆ. ಇಂಥ ಸ್ಥಳಗಳು ಕೆಲವೊಮ್ಮೆ ರಾಜ, ಮಹಾರಾಜರುಗಳ ರಾಜಧಾನಿಗಳೂ ಆಗಿವೆ. ನಮ್ಮ ಜನಪದ ಕಥೆಗಳಲ್ಲಿಯೂ 'ಅಮರಾವತಿ'ಯ ಪ್ರಸ್ತಾಪ ಬರುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಕೆಳಗಿನ ಮೂರು ಸ್ಥಳನಾಮಗಳಲ್ಲಿ ಇದರ ಅನುಕರಣೆ ಇದೆ.

೧. ಅಮರಾವತಿ

೨. ಅಮರಾಪುರ

೩. ಅಮರದೇವರಗುಡ್ಡ

ಹುಟ್ಟು ಮತ್ತು ಸಾವುಗಳ ಭವ ಚಕ್ರದಲ್ಲಿ ಸಿಲುಕಿದ ಜೀವನಿಗೆ ದೈವ ಕೃಪೆಯಿಂದಾಗಿಯೋ ಇಲ್ಲವೇ ಪುಣ್ಯಕರ್ಮಗಳ ಫಲದಿಂದಾಗಿಯೋ "ಮುಕ್ತಿ" ದೊರೆಯುತ್ತದೆ. ಮೋಕ್ಷ ಸಿಗುತ್ತದೆ ಎಂಬ ನಂಬಿಕೆಯಿಂದ ಕೆಲವೊಂದು ಸ್ಥಳನಾಮಗಳು ಆಸ್ತಿತ್ವಕ್ಕೆ ಬಂದಿರುವುದನ್ನು ಕಾಣಬಹುದಾಗಿದೆ.

೫.೩ ಬೌದ್ಧಧಾರ್ಮಿಕ ಸ್ಥಳನಾಮಗಳು:

ಭಾರತವು ಬೌದ್ಧ ಧರ್ಮದ ತವರೂರು, ಇದು ವಿಶ್ವದ ಪ್ರಾಚೀನ ಧರ್ಮಗಳಲ್ಲೊಂದಾಗಿದೆ. ಈ ಧರ್ಮದ ಅನುಯಾಯಿಗಳು ಭಾರತಕ್ಕಿಂತಲೂ ಚೀನಾ, ಟಿಬೆಟ್, ಥಾಯ್ಲೆಂಡ್, ಜರ್ಮನ್, ಬರ್ಮಾ ದೇಶಗಳಲ್ಲಿ ಮತ್ತು ಮಲಯಾ, ಜಾವಾ, ಸುಮಾತ್ರಾ ಹಾಗೂ ಶ್ರೀಲಂಕಾ ದ್ವೀಪ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುವ ಕೆಲವು ಸ್ಥಳನಾಮಗಳ ಆಧಾರದಿಂದ ಈ ಪ್ರದೇಶದಲ್ಲಿ ವಿರಳವಾಗಿಯಾದರೂ ಬೌದ್ಧ ಮತಾವಲಂಬಿಗಳು ವಾಸಿಸಿದ್ದಿರಬೇಕು.

ಬೌದ್ಧ ಧರ್ಮ ಗ್ರಂಥಗಳು ಸಂಸ್ಕೃತ ಮತ್ತು ಪರಿಭಾಷೆಗಳಲ್ಲಿ ರಚನೆಗೊಂಡಿವೆ. ಜೀವನ ಚಿತ್ರವು ಸಮುತ್ಪಾದದ ರೀತ್ಯಾ ನಡೆಯುತ್ತದೆಂದು ಬುದ್ಧನ ತತ್ವವು ಸಾರುತ್ತದೆ. ದುಕ್ಖಂ ದುಖ್ಖ ಸಮುದಾಯೋ ದುಕ್ಖನಿರೋಧೋ ಪಟಿಪದಾ ಎಂಬವುಗಳ ಆರ್ಯ ಸತ್ಯಗಳು. ಅರಿಯೋ ಅಟ್ಟಾಂಗಿ ಕೋಮಗೋ ಅಪ್ಪಾಂಗದ ಮೂಲಕ ಇವನ್ನು ಗೆಲ್ಲಬಹುದಾಗಿದೆ. 'ಓಂ ಮಣಿ ಪದ್ಮೇ ಓಂ' ಬೌದ್ಧದ ಪಠಣ ಮಂತ್ರವಾಗಿದೆ. ಇವರು

'ಬುದ್ಧ', 'ಧರ್ಮ' ಮತ್ತು ಸಂಘಗಳಿಗೆ ಶರಣಾಗತರು– "ಬುದ್ಧಂ ಶರಣಂ ಗಚ್ಛಾಮಿ, ಧರ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ"

ಮೇಲೆ ಕಾಣಿಸಿದ ಧರ್ಮ. ಸಂಘ ಪದಗಳು ಬಳ್ಳಾರಿ ತಾಲೂಕಿನಲ್ಲಿ ಸ್ಥಳನಾಮಗಳು ದೊರೆಯುತ್ತವೆ.

ದಮ್ಮೂರು<ದಂಪುರ (ಧರ್ಮ+ಅರ (ಸಮಾಣಾರ್ಥಕ ಪದಯುಗಳ)

ಸಂಗನಕಲ್ಲು

ಸಂಕಲಾಪುರ (>ಸಂಗಲಾಪುರ)

೫.೪ ಜೈನಧರ್ಮ:

ಅಹಿಂಸಾ ಪರಮೋ ಧರ್ಮ; ಎಂಬ ಉಕ್ತಿಯಲ್ಲಿ ಪ್ರಬಲವಾದ ನಂಬಿಕೆಯನ್ನು ತಾಳಿರುವ ಜೈನಧರ್ಮದ ಸ್ಥಾಪನೆಯನ್ನು ಶ್ರೀ ವರ್ಧಮಾನ ತೀರ್ಥಂಕರರು ಮಾಡಿದರೆಂದು ಹೇಳಲಾಗುತ್ತದೆ. ಆದರೆ ಜೈನಧರ್ಮದ ಗ್ರಂಥಗಳು ಶ್ರೀ ವರ್ಧಮಾನ ಮಹಾವೀರರಿಗಿಂತ ಮುಂಚೆ ೨೩ ಜಿನ ತೀರ್ಥಂಕರರು ಆಗಿಹೋಗಿದ್ದು ಇವರನ್ನು ೨೪ನೇ ತೀರ್ಥಂಕರರೆಂದು ಹೇಳುತ್ತವೆ. ಹಿಂಸೆ ಸಲ್ಲದು ಎಂದು ಜೈನಧರ್ಮವು ಬೋಧಿಸುತ್ತದೆ ಆತ್ಮದ ಅಮರತ್ವವನ್ನು ಕರ್ಮ ಸಿದ್ಧಾಂತವನ್ನು ಪ್ರತಿಪಾದಿಸುತ್ತದೆ. ದವಳ, ಜಿಯದವಳ, ಮಹಾಧವಳ ಜೈನಧರ್ಮದ ಮೂಲ ಆಕರ ಗ್ರಂಥಗಳಾಗಿವೆ. ಈ ಧರ್ಮವು ಬಹುಬೇಗ ಭಾರತದಲೆಲ್ಲಾ ಹರಡಿ ಪ್ರಜಾಧರ್ಮವಾಯಿತು. ಮದ್ಯೆ ಪ್ರದೇಶದ 'ಅನಂತಿ' ರಾಜ್ಯದ ರಾಜಧಾನಿ 'ಉಜ್ಜೈನಿ'ಯಾಗಿತ್ತು. ಉಜ್ಜೈನಿಯು ಜೈನಧರ್ಮದ ಕೇಂದ್ರ ಸ್ಥಾನವಾಗಿ ಮೆರೆದಿರುವ ಕಾರಣದಿಂದ ಜೈನ ಧಾರ್ಮಿಕತೆಗಳು ಉಜ್ಜೈನಿಯೊಂದಿಗೆ ಸಂಬಂಧಪಟ್ಟಿವೆ. ಬಳ್ಳಾರಿ ಜಿಲ್ಲೆಯ ಕೋಗಳಿ. ಬಾಗಳಿ, ಕುಡುತಿನಿ, ಜೈನಧರ್ಮದ ಕೇಂದ್ರಗಳಾಗಿದ್ದುವೆಂದು ಶಾಸನಗಳಿಂದ ತಿಳಿದುಬರುತ್ತದೆ. ಕೋಗಳಿ ಮತ್ತು ಕುಡುತಿನಿಗಳು ವಿಶೇಷ ಮಾನ್ಯತೆ ಪಡೆದ ಜೈನರ ನೆಲೆ ಬೀಡುಗಳಾಗಿದ್ದವು. ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಜೈನ ಬಸದಿಗೆ ಬಿಟ್ಟದಾನ, ಜೈನ ಪಾಠಶಾಲೆಗಳಿಗೆ ಬಿಟ್ಟದಾನ ಎಂಬ ಉಲ್ಲೆಖಗಳಿವೆ. ಚಾಲುಕ್ಯ ದೊರೆ ಜಗದೇಕ ಮಲ್ಲದೇವನ ಆಡಳಿತದಲ್ಲಿ ಕುಡುತಿನಿಯ ಕ್ರಿ.ಶ. ೧೧೪೮ರ ಒಂದು ಶಾಸನದಲ್ಲಿ ಕುಡುತಿನಿ (ಕೊಟ್ಟೆಪೆಣೆ)ಯನ್ನು ಶತಕೋಟಿ ತೀರ್ಥ ಎಂದು ಕರೆಯಲಾಗಿದೆ. ಮೇಲಿನ ಸಂಗತಿಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ಜೈನಧರ್ಮವು ವ್ಯಾಪಕ ಪ್ರಸಾರವನ್ನು ಪಡೆದಿತ್ತಲ್ಲದೆ ಈ ಧರ್ಮದ ಅಸಂಖ್ಯಾತ ಅನುಯಾಯಿಗಳಿದ್ದರೆಂಬುದು ತಿಳಿದುಬರುತ್ತದೆ. ಜೈನರು ಮೂಲತಃ ವ್ಯಾಪಾರಿ ವೃತ್ತಿಯ ಜನಕರಾಗಿದ್ದಾರೆ. ಇತಿಹಾಸ

ಕಾಲದಲ್ಲಿ ಇವರು ಕರ್ನಾಟಕದೊಂದಿಗೆ ವ್ಯಾಪಾರೀ ಸಂಬಂಧ ಪಡೆದಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ ೧೦ನೇಯ ಶತಮಾನ ಪೂರ್ವಾರ್ಧದಲ್ಲಿಯೇ ಜೈನ ಧರ್ಮವು ಒಂದು ಪ್ರಬಲ ಧರ್ಮವಾಗಿ ಬೆಳೆದಿದ್ದಿತು. ೧೨ನೇ ಶತಮಾನದಲ್ಲಿ ವೀರಶೈವ ಕ್ರಾಂತಿಯ ಘಟಿಸಿದ ಮೇಲೆ ಬಳ್ಳಾರಿ ಜಿಲ್ಲೆಯ ಜೈನ ಪಂಥೀಯರು ವೀರಶೈವರಾಗಿ ಪರಿವರ್ತಿತರಾಗಿರಬೇಕು. ಇಂದು ಜಿಲ್ಲೆಯಲ್ಲಿ ಈ ಭಾಗದ ಅತಿಹೆಚ್ಚಿನ ಸಂಖ್ಯೆಯಲ್ಲಿರುವ ವೀರಶೈವರು (ಬಣಜಿಗರು) ಒಂದು ಕಾಲದ ಜೈನರೆ ಎಂದು ಹೇಳಬಹುದು.

ಉದಾ: ಬೊಮ್ಮನಹಳ್ಳಿ, ಕುಡುತಿನಿ

೫.೫ ಶೈವ ಧಾರ್ಮಿಕ ಸ್ಥಳನಾಮಗಳು:

ಶೈವಧರ್ಮವು ಭಾರತದ ಪ್ರಾಚೀನ ಧರ್ಮಗಳಲ್ಲೊಂದಾಗಿದೆ. ಶೈವ ಪಂಥಗಳೆಲ್ಲ ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದ್ದರೆಂದು ಹೇಳಬಹುದು. ಪುರಾಣದಲ್ಲಿ ರಾವಣನು ಈಶ್ವರನ ಪ್ರಾಣಲಿಂಗವನ್ನು ತಂದು ಕರ್ನಾಟಕದ ಗೋಕರ್ಣದಲ್ಲಿ ಸ್ಥಾಪಿಸಿದನೆಂದು ಹೇಳಲಾಗಿದೆ. ಶಿವನು ಪುರಾಣ ಯುಗದಲ್ಲಿ ತುಂಬಾ ಪ್ರತಿಷ್ಠಿತ ದೇವತೆಯಾಗಿದ್ದಾನೆ. ರಾಮಾಯಣದಲ್ಲಿ ಬರುವ ಲಿಂಗ ಸ್ಥಾಪನೆಯ ಎರಡು ಸಂದರ್ಭಗಳಲ್ಲಿ (ರಾಮನು, ರಾಮೇಶ್ವರದಲ್ಲಿ ಸ್ಥಾಪಿಸಿದ ಮರುಳಲಿಂಗ ಇನ್ನೊಂದು) ಗೋಕರ್ಣದಲ್ಲಿ ಈ ಜ್ಯೋತಿರ್ಲಿಂಗವೇ ಹಿಂದಿನದು ಮತ್ತು ಮಹತ್ವದ್ದು ಇದು ಕರ್ನಾಟಕಕ್ಕೆ ಶೈವಮತಕ್ಕೆ ಇರುವ ಸಂಬಂಧವನ್ನು ಪ್ರಾಚೀನತೆಯನ್ನು ಮಾಡುತ್ತವೆ.[೧] ಈಶ್ವರನು ಗಜಚರ್ಮಾಂಬರಿ ಬೂದಿಬಿಡುಕ, ಬ್ರಹ್ಮಕಪಾಲ ಹಿಡಿದು ಅಲೆದಾಡುವ ಸಾಮಾನ್ಯ ಜೀವನ ವ್ಯವಹಾರಗಳ ಪ್ರತಿನಿಧಿ. ಸಮುದ್ರ ಮಂಥನದಲ್ಲಿ ಉದ್ಭವಗೊಂಡ ವಿಷ ಕುಡಿದ ನೀಲಕಂಠನೂ ತ್ರಿಪುರಗಳನ್ನು ಸುಟ್ಟುಹಾಕಿದ ತ್ರಿಪುರ ಸಂಹಾರಿಯೂ, ಕಾಮನನ್ನು ಬೂದಿಗೈದ ಮದನಾಂತರನೂ ಆಗಿರುವನು. ಅಷ್ಟ ಭೈರವ ರೂಪ ತಾಳುವುದರಿಂದ ಅಷ್ಟು ಮಾಲೆಯೂ ಆಗಿದ್ದಾನೆ.[೨] ಮೈಲಾರದಲ್ಲಿ ನೆಲೆಸಿ, ಮೈಲಾರಲಿಂಗನಾಗಿ ಶ್ರೀಶೈಲದಲ್ಲಿ ನೆಲೆಸಿ ಮಲ್ಲಿಕಾರ್ಜುನನಾಗಿ ಹೇಮಕೂಟದಲ್ಲಿ ಶ್ರೀ ವಿರೂಪಾಕ್ಷನಾಗಿ ಬೆಟ್ಟದ ಜಂಬುನಾಥನಾಗಿ ಪ್ರಕಟವಾಗಿದ್ದಾನೆ. ಇವನ ವಾಹನ ನಂದೀಶ್ವರ ಇವರ ಹೆಂಡತಿ ಗೌರಿ, ಗಣೇಶ ಮತ್ತು ಕಾರ್ತಿಕೇಯ ಮಕ್ಕಳು, ನಾಗ ಇವನ ಆಭರಣ, ಇವನ ವಾಸಸ್ಥಾನ ಕೈಲಾಸ. ಇವನು ಪ್ರಳಯ ರುದ್ರನೂ ಆಗಿದ್ದಾನೆ.

ಬಳ್ಳಾರಿ ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಶೈವಧರ್ಮವು ಪ್ರಬಲವಾಗಿರುವಂತೆ ತೋರಿಬರುತ್ತದೆ. ಹಂಪೆಯಲ್ಲಿ ವಾಸಿಸಿದ ಕ್ರಾಂತಿಕಾರಿ ಕವಿಗಳಾದ ಹರಹರ ಮತ್ತು ರಾಘವಾಂಕನು ನಿಷ್ಠಾವಂತ ಶೈವಧರ್ಮಿಯರಾಗಿದ್ದಾರೆ.

ವಿರೂಪಾಕ್ಷನೇ ಅವರ ಆರಾಧ್ಯ ದೈವವಾಗಿದ್ದಾನೆ. ಬಳ್ಳಾರಿ ಜಿಲ್ಲೆಯ ಶಾಸನಗಳಲ್ಲಿ ಹಲವು ಕಡೆಗಳಲ್ಲಿ ಪಶುಪತಿ, ಕಾಳಾಮುಖ ಗುರುಗಳ ಉಲ್ಲೇಖಗಳಿವೆ. ಕುರುಗೋಡು, ಉಜ್ಜನಿ ಕುರುವತ್ತಿಗಳಲ್ಲಿ ಬೃಹದಾಕಾರದ ಏಕಶಿಲಾ ನಂದಿಯ ವಿಗ್ರಹಗಳು ಗಮನ ಸೆಳೆಯುವಂಥವುಗಳಾಗಿವೆ. ಈ ಎಲ್ಲಾ ಸಂಗತಿಗಳಿಂದ ಬಳ್ಳಾರಿ ಜಿಲ್ಲೆಯಲ್ಲಿ ಶೈವಧರ್ಮವು ಹಿಂದೆ ಪ್ರಬಲವಾಗಿದ್ದ ಇಲ್ಲಿಯ ಅನೇಕ ಸ್ಥಳನಾಮಗಳ ನೆಲೆ ಪ್ರಭಾವ ಉಂಟಾಗಿರುವುದು ಸಹಜವಾಗಿದೆ. ಶೈವಧರ್ಮಕ್ಕೆ ಸಂಬಂಧಪಟ್ಟ ತಾಲೂಕಿನ ಕೆಲವು ಸ್ಥಳನಾಮಗಳು ಹೀಗಿದೆ.

ಉದಾ:

ಭೈರದೇವನಹಳ್ಳಿ

ಮಲವನಗುಡಿ

ಶಂಕರಬಂಡೆ

ಸೋಮಸಮುದ್ರ

ಲಿಂಗದೇವನಹಳ್ಳಿ

ಹಾವಿನಹಾಳು

ನಾಗೇನಹಳ್ಳಿ

ದಾಸರ ನಾಗೇನಹಳ್ಳಿ.

೫.೬ ವೀರಶೈವ ಧಾರ್ಮಿಕ ಸ್ಥಳನಾಮಗಳು:

ವೀರಶೈವ ಧರ್ಮವೂ ಭಾರತದ ಪ್ರಾಚೀನ ಧರ್ಮಗಳಲ್ಲೊಂದಾಗಿದೆ. ಈ ಧರ್ಮದ ಪಂಚಾರ್ಯರುಗಳು ಭಾರತದ ಉದ್ದಗಲಕ್ಕೆ ಧರ್ಮ ಪೀಠಗಳನ್ನು ಪ್ರಮುಖ ಸ್ಥಳಗಳಲ್ಲಿ ಸ್ಥಾಪಿಸಿ ವೀರಶೈವ ಧರ್ಮವನ್ನು ಪ್ರಚುರಗೊಳಿಸಿದ್ದಾರೆ. ಕಾಶಿ, ಕೇದಾರ, ಶ್ರೀಶೈಲ, ಬಾಳೆಹೊನ್ನೂರು ಮತ್ತು ಬಳ್ಳಾರಿ ಜಿಲ್ಲೆಯ ಉಜ್ಜನಿಗಳಲ್ಲಿ ಈ ಧರ್ಮಾಚಾರ್ಯ ಸಂಸ್ಥಾನ ಮಠಗಳಿವೆ. "ಸಿದ್ಧಾಂತ ಶಿಖಾಮಣಿ ಎಂಬ ಸಂಸ್ಕೃತ ಗ್ರಂಥವು ವೀರಶೈವ ಧರ್ಮದ ಆಚಾರ ವಿಚಾರತತ್ತ್ವ ಬೋಧೆಗಳನ್ನು ಒಳಗೊಂಡ ಮಹಾನ್ ಪವಿತ್ರ ಗ್ರಂಥವಾಗಿದೆ. ಬಳ್ಳಾರಿ ತಾಲೂಕಿನಲ್ಲಿ ವೀರಶೈವ ಮಠ ಮಾನ್ಯಗಳು ಈ ಧರ್ಮದ ಉನ್ನತಿಗಾಗಿ ಕಾರ್ಯಗೈದವು ಹಳ್ಳಿ ಹಳ್ಳಿಗಳಲ್ಲೂ ವೀರಶೈವ ಮಠಗಳಿದ್ದು ವೀರಶೈವ ಸಂಸ್ಥೆಯು ಹೇರಳ ಪ್ರಮಾಣದಲ್ಲಿ ಕಂಡುಬರುತ್ತವೆ. ಬಳ್ಳಾರಿ ತಾಲೂಕಿನಲ್ಲಿ ಬರುವ ವೀರಶೈವ ಧರ್ಮಕ್ಕೆ ಸಂಬಂಧಿಸಿದ ಕೆಲವು ಸ್ಥಳನಾಮಗಳು ಕೆಳಗಿನಂತಿವೆ.

ಉದಾ: ಲಿಂಗದೇವನಹಳ್ಳಿ ಸಿದ್ದರಗಡ್ಡೆ

೫.೭ ಇಸ್ಲಾಂ ಧಾರ್ಮಿಕ ಸ್ಥಳನಾಮಗಳು:

ಪುರಾತನ ಕಾಲದಿಂದಲೂ ಅರಬರು ದಕ್ಷಿಣ ಭಾರತಕ್ಕೆ ವ್ಯಾಪಾರಕ್ಕಾಗಿ ಬರುತ್ತಿದ್ದರು. ಜಲಮಾರ್ಗದಿಂದ ಬರುತ್ತಿದ್ದ ಈ ವ್ಯಾಪಾರಿಗಳ ಕೇಂದ್ರ ಮಲಬಾರ್ ಅಥವಾ ಇಂದಿನ ಕೇರಳವಾಗಿತ್ತು. ಅರಬ್ ದೇಶದ ಮೊಕ್ಕಾದಲ್ಲಿ ಕುರೈಶ್ ವಂಶದ ಅಬ್ದುಲ್ಲಾಹ್ ಮತ್ತು ಅಮೀನಾರಿಗೆ ಕ್ರಿ.ಶ. ೬೭೦ರಲ್ಲಿ ಪ್ರವಾದಿ ಮಹಮ್ಮದ್ ಅವರ ಜನನವಾಯಿತು. ಇವರ ಮೊದಲ ಹೆಸರು ಸಲಲ್ಲಾಹು ಅಬ್ದುಲ್ಲಾ ಸಲಾಮ್ ಇವನು ಬೆಳೆದು ದೊಡ್ಡವನಾದ ಮೇಲೆ ದೇವಲೋಕದಲ್ಲಿನ ಕುರಅನ್ ಇವನೆಡೆಗೆ ಬಂದಿತು. ಇವನ ಜನನದ ನಲವತ್ತು ವರ್ಷಗಳ ಅನಂತರ ಭಗವಂತನು ಅವರನ್ನು ತನ್ನ ಅಂತಿಮ ಪೈಗಂಬರರನ್ನಾಗಿ ಆಯ್ಕೆ ಮಾಡಿಕೊಂಡು ಅವರ ಮೇಲೆ ದಿವ್ಯ ಕುರಾನನ್ನು ಅವತೀರ್ಣಗೊಳಿಸಿದನು. ಅಂದಿನಿಂದ ಇಸ್ಲಾಂ ಧರ್ಮ ಜಗತ್ತಿನಲ್ಲಿ ಪ್ರಸಾರಗೊಂಡಿತು. ಇಸ್ಲಾಂ ಎಂದರೆ ಸರ್ವಸ್ವನ್ನು ದೇವನಿಗೆ ಸಮರ್ಪಿಸಿಕೊಳ್ಳುವುದು. ಇಸ್ಲಾಂ ಧರ್ಮದ ರೀತ್ಯಾ ದೇವನು ಬೆಳಕಿನ ಸ್ವರೂಪದಲ್ಲಿರುತ್ತಾನೆ. ಇವನಿಗೆ ೯೯ ಹೆಸರುಗಳಿವೆ. ನೂರನೆಯ ಹೆಸರು ನಾಮಾತೀತವಾಗಿದೆ. ಭಕ್ತರ ಉದ್ಧಾರಕ್ಕಾಗಿ ಬೆಳಕಿನ ರೂಪದಲ್ಲಿ ಇಳಿದು ಬರುತ್ತೇನೆ. ಕ್ರಿ.ಶ. ೧೬೩೧ರ ನಂತರದಲ್ಲಿ ಬಳ್ಳಾರಿ ಪ್ರದೇಶವು ಮುಸ್ಲಿಂರ ಅಧೀನಕ್ಕೆ ಒಳಪಟ್ಟಿದ್ದಿತು. ಆದರೆ ಇದು ಅಲ್ಪ ಕಾಲಾವಧಿಯಾಗಿದ್ದಿತು. ಅನಂತರ ಮತ್ತೊಮ್ಮೆ ಈ ಪ್ರದೇಶ ಔರಂಗಜೇಬನ ಅಧೀನಕ್ಕೊಳಗಾಯಿತು. ಕ್ರಿ.ಶ. ೧೭೬೪ರಲ್ಲಿ ದಖನ್ನಿನ ಸುಬೇರರನಾಗಿದ್ದ ಸಲಾಬತೇಜಂಗನ ಸಹೋದರ ಬಸಾಲತೇಜಂಗನಿಗೆ ಜಹಗೀರಿಯಾಗಿ ಬಿಟ್ಟಿದ್ದ ಅದವಾನಿ ಸಂಸ್ಥಾನಕ್ಕೆ ಅಧೀನ ಸಂಸ್ಥಾನವಾಯಿತು. ಬಳ್ಳಾರಿ ಜಿಲ್ಲೆಯಲ್ಲಿ ಶೇ. ೯.೫ರಷ್ಟು ಜನ ಮುಸ್ಲಿಂ ಜನಾಂಗವಿದೆ. ಮುಸ್ಲಿಂ ಧರ್ಮಕ್ಕೆ ಸಂಬಂಧಿಸಿದ ಬಳ್ಳಾರಿ ತಾಲೂಕಿನ ಸ್ಥಳನಾಮಗಳು ಹೀಗಿವೆ.

ಉದಾ: ಇಬ್ರಾಹಾಂಪುರ

೫.೩ ಪ್ರಾಕೃತಿಕ ನೆಲೆ

ಸ್ಥಳನಾಮಶಾಸ್ತ್ರದ ಮುಖ್ಯ ಉದ್ದೇಶವೆಂದರೆ ಸ್ಥಳನಾಮಗಳನ್ನು ಐತಿಹಾಸಿಕ, ಭಾಷಾ ವೈಜ್ಞಾನಿಕ ಅಲ್ಲದೆ ಜಾನಪದ ಪರಂಪರೆಯ ವಿವಿಧ ಆಧಾರಗಳ ಮೂಲಕ ಅಭ್ಯಾಸ ಮಾಡಿ ಅವುಗಳ ಮೂಲ ರೂಪ ಮತ್ತು ಕೋಶಾರ್ಥಗಳನ್ನು ನಿರ್ಧರಿಸುವುದೇ ಆಗಿದೆ. ಹೀಗೆ ನಿರ್ಧರಿತವಾದ ಸ್ಥಳನಾಮಗಳನ್ನು ಅವುಗಳ ಕೋಶಾರ್ಥಗಳನ್ನು ಅನುಸರಿಸಿ ಪ್ರಾಕೃತಿಕ ಸ್ಥಳನಾಮಗಳು ಮತ್ತು ಸಾಂಸ್ಕೃತಿಕ ಸ್ಥಳನಾಮಗಳು ಎಂದು ಎರಡು ದೊಡ್ಡ ಗುಂಪುಗಳಾಗಿ ವಿಂಗಡಿಸಿಕೊಳ್ಳಲಾಗುವುದು. ಸ್ಥಳನಾಮ ಶಾಸ್ತ್ರಜ್ಞರು ಸಾಂಸ್ಕೃತಿಕ ಸ್ಥಳನಾಮಗಳಿಂತ ಪ್ರಾಕೃತಿಕ ಸ್ಥಳನಾಮಗಳು ಹೆಚ್ಚು ಪ್ರಾಚೀನವಾದವುಗಳು ಎಂಬ ಧೋರಣೆ ಹೋಂದಿದ್ದಾರೆ. ಪ್ರಾಚೀನ ಮಾನವನು ತನ್ನ ಸುತ್ತಲಿನ ಸ್ಥಳನಾಮಗಳನ್ನು ಅಲ್ಲಲ್ಲಿಯ ಪ್ರಾಕೃತಿಕ ಪರಿಸರ ಅಂಶಗಳಿಂದ ಅಂಕಿತಗೊಳಿಸಿರುವುದು ಅವರ ಈ ಧೋರಣೆಗೆ ಬಹು ಮುಖ್ಯ ಕಾರಣವಾಗಿದೆ. ಈ ಕಾರಣದಿಂದಾಗಿ ಪ್ರಾಕೃತಿಕ ಸ್ಥಳನಾಮಗಳು ಐತಿಹಾಸಿಕ ಹಾಗೂ ಭಾಷಾವೈಜ್ಞಾನಿಕ ದೃಷ್ಟಿಯಿದ ತುಂಬಾ ಮಹತ್ವಪೂರ್ಣವಾದವುಗಳಾಗಿವೆ.

ಬಹು ಪ್ರಾಚೀನ ಕಾಲದ ಜನರು ಬಹುಮಟ್ಟಿನ ನಿಸರ್ಗ ಅವಲಂಬಿಗಳಾಗಿ ಪ್ರಾಣಿಗಳನ್ನು ಬೇಟೆಯಾಡಿಕೊಂಡು ಅಲೆಮಾರಿಯಾಗಿ ಜೀವನ ಸಾಗಿಸುತ್ತಿದ್ದರು. ಈ ರೀತಿ ಸಾವಿರಾರು ವರ್ಷಗಳು ಕಳೆದ ಮೇಲೆ ಅವರು ವ್ಯವಸಾಯ ಮತ್ತು ಪಶುಪಾಲನೆ ಮೂಲಕ ಅಹಾರ ಉತ್ಪಾದನೆಯಲ್ಲಿ ತೊಡಗಿ ಗ್ರಾಮಗಳನ್ನು ಸ್ಥಾಪಿಸಿಕೊಂಡು ಓಂದೆಡೆ ನೆಲೆ ನಿಲ್ಲುವಂತಾಯಿತು. ಇಲ್ಲಿಂದ ಅವನ ಸಾಂಸ್ಕೃತಿಕ ವಿಕಸನ ಆರಂಭವಾಗುತ್ತದೆ. ಬರವಣಿಗೆಯ ಕಲೆಯ ಆವಿಷ್ಕಾರ ಸಾಂಸ್ಕೃತಿಕ ವಿಕಸನ ಪ್ರಮುಖ ಘಟ್ಟವಾಗಿದೆ. ಯಾವುದೇ ದೇಶದ ಇತಿಹಾಸದಲ್ಲಿ ಸುಮಾರು ಆ ಘಟ್ಟದಾರಭ್ಯ ಐತಿಹಾಸಿಕ ಆಗು ಹೋಗುಗಳನ್ನರಿಯಲು ಲಿಖಿತ ದಾಖಲೆಗಳು ದೊರೆಯಲಾರಂಬಿಸುತ್ತವೆ. ಯಾವ ಕಾಲದಿಂದ ಈ ರೀತಿಯ ದಾಖಲೆಗಳು ದೊರೆಯಲಾರಂಬಿಸಿತ್ತವೆಯೋ ಅಂದಿನಿಂದೀಚಿನ ಕಾಲವನ್ನು ಐತಿಹಾಸಿಕ ಯುಗವೆಂದೂ ಅದಕ್ಕೆ ಹಿಂದಿನ ಕಾಲವನ್ನು ಪ್ರಾಗೈತಿಹಾಸಿಕ ಯುಗವೆಂದೂ ವಿಂಗಡಿಸಿಕೊಳ್ಳುವುದು ರೂಡಿ. ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ, ಸಂಗನಕಲ್ಲು, ಕಪ್ಪಗಲ್ಲು, ನಿಟ್ಟೂರು, ಕುಡುತಿನಿ, ರಾಯಚೂರು ಜಿಲ್ಲೆಯ ಮಸ್ಕಿ, ಪಿಕ್ಲಿಹಾಳ, ವಿಜಾಪುರ ಜಿಲ್ಲೆಯ ಅನಗವಾಡಿ, ಆಸಂಗಿ ಯಲಿಗೂರು ಕೋವಳ್ಳಿ, ಸಾಲಗಂಡಿ, ಗುಲ್ಬರ್ಗ ಜಿಲ್ಲೆಯ ಹುಣಸಗಿ, ಜವಳಿ, ಶಾಖಾಪುರ ಇಕ್ಕಳ್ಳಿ, ಹಗರಟಗಿ, ವಿಭೂತಿ ಹಳ್ಳಿ, ಚಿಕ್ಕನಹಳ್ಳಿ, ಮೈಸೂರು ಜಿಲ್ಲೆಯ, ಟಿ.ನರಸೀಪುರ, ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಭಾರತದ ವಿವಿಧ ಭಾಗಗಳಲ್ಲಿ ಇಲ್ಲಿಯತನಕ

ನಡೆದ ಸ್ಥಳನಾಮ ಅದ್ಯಾನದಿಂದ ಆರ್ಯರು ದ್ರಾವಿಡದಿಂದ ಪ್ರಾಕೃತಿಕ ಸ್ಥಳನಾಮಗಳನ್ನು, ದ್ರಾವಿಡರು ಆರ್ಯರಿಂದ ಸಾಂಸ್ಕೃತಿಕ ಸ್ಥಳನಾಮಗಳನ್ನು ಸ್ವೀಕರಿಸಿರುವುದು ಸ್ಥಿರಗೊಂಡಿದೆ. ಬಳ್ಳಾರಿ ಜಿಲ್ಲೆಯ ಸ್ಥಳನಾಮ ಅಧ್ಯಯನದಿಂದಲೂ ಈ ಅಭಿಪ್ರಾಯ ಇನ್ನಷ್ಟೂ ಗಟ್ಟಿಗೊಳ್ಳುತ್ತದೆ. ಕನ್ನಡದಲ್ಲಿ ಬರೆಯಲ್ಪಟ್ಟ ಸದ್ಯ ನಮಗೆ ಉಪಲಬ್ದವಿರುವ ಪ್ರಾಚೀನತಮ ದಾಖಲೆ ಕ್ರಿಶ ೪೫೦ರ ಹಲ್ಮಿಡಿ ಶಾಸನವಾಗಿದೆ,[೧] ಕ್ರಿ.ಶ.೧-೨ನೆಯ ಶತಮಾನದ ಶಾತವಾಹನ ಅರಸ ಹಾಲರಾಜನ ಗಥಾಸಪ್ತಸಾತಿ ಮತ್ತು ಅದಕ್ಕಿಂತಲೂ ಪೂರ್ವದಲ್ಲಿ ಅಕ್ಸಿರಿಂಕಸ್‌ದಲ್ಲಿ ದೊರೆತ ಗ್ರೀಕ್ ಪೈರಸ್ ಪ್ರಹಸನದಲ್ಲೂ ಅನೇಕ ಕನ್ನಡ ಶಬ್ದಗಳ ಪ್ರಯೊಗಗಳನ್ನು ಕ್ರಿ.ಪೂ. ೫ನೇ ಶತಮಾನದ ವಾಣಿನಿಯ ಕರ್ನಾಟಕ ಜನಾಂಗವನ್ನು ಉಲ್ಲೇಖಿಸಿರುವ ವಿಷಯಗಳನ್ನು ವಿದ್ವಾಂಸರು ಗುರುತಿಸಿದ್ದಾರೆ.[೨] ಪ್ರಾಚೀನ ಮಾನವನ ಭಾಷೆಯ ಸ್ವರೂಪವನ್ನು ಅರಿಯಲು ನಮಗೆ ಸಾಧ್ಯವಾಗಿಲ್ಲ. ಪ್ರಾಕೃತಿಕ ಸ್ಥಳನಾಮಗಳು ಕನ್ನಡ ಭಾಷೆಯ ಅತೀ ಪ್ರಾಚೀನ ರೂಪವನ್ನು ಅರಿಯಲು ನಮಗೆ ತುಂಬಾ ಸಹಾಯಕವಾಗುತ್ತದೆ. ಆ ಮುಖೇನ ಯುಗದಾಚೆಯ ಅಜ್ಞಾತ ಕಾಲಾವಧಿಯ ವಿವರಗಳನ್ನು ಪ್ರಾಕೃತಿಕ ಸ್ಥಳನಾಮಗಳಿಂದ ಅರಿಯಬಹುದಾಗಿದೆ. ಅದ್ದರಿಂದ ಸ್ಥಳನಾಮ ಶಾಸ್ತ್ರಜ್ಞರು ಇವುಗಳ ಕುಲಂಕುಶವಾದ ಅಧ್ಯಯನ ಮತ್ತು ಅವುಗಳ ಸೂಕ್ತವಾದ ಪರಿಷ್ಕಾರಗಳ ಬಗ್ಗೆ ಅತೀವ ಅಸ್ಥೆಯನ್ನು ತೊರಿಸುತ್ತಿದ್ದಾರೆ. ವಿಶ್ವ ಸಂಸ್ಥೆಯ ಸಹ ಪ್ರಾಕೃತಿಕ ಸ್ಥಳನಾಮಗಳ ಅಧ್ಯಯನ ಮತ್ತು ಸ್ಪಷ್ಟೀಕರಣಕ್ಕೆ ಸಂಬಂದಪಟ್ಟಂತೆ ತನ್ನ ಸದಸ್ಯ ರಾಷ್ಟ್ರಗಳಿಗೆ ಆದೇಶವನ್ನು ನೀಡಿದೆ. ಭಾರತ ಸಕಾರವೂ ಈ ನಿಟ್ಟಿನಲ್ಲಿ ವಿವಿಧ ಬಗೆಯಿಂದ ಕಾರ್ಯಪ್ರವೃತ್ತವಾಗಿದೆ.[೩] ಕೇರಳದಲ್ಲಿ ಇತ್ತೀಚಿಗೆ ೧೯೮೮ರಲ್ಲಿ (ಕೇರಳ ಪ್ಲೇಸ್ ನೇಮ್ಸ್ ಗ್ಲಾಸರಿ) ಎಂಬ ಪ್ರಥಮ ಸಂಪುಟವನ್ನು ಪ್ರಕಟಪಡಿಸಿದೆ. ಕೇಂದ್ರ ಸರ್ಕಾರದ ಪ್ರಯತ್ನವು ಸಫಲಗೊಳ್ಳಬೇಕಾದರೆ ನಮ್ಮಲ್ಲೂ ಮೊದಲು ಜಿಲ್ಲಾವಾರು ಪ್ರಾಕೃತಿಕ ಸ್ಥಳನಾಮಗಳನ್ನು ಗುರುತಿಸುವ ಕಾರ್ಯ ನಡೆಯಬೇಕಾದದು ಅವಶ್ಯವಾಗಿದೆ. ಕೋಶಾರ್ಥದ ಸಹಾಯದಿಂದ ಬಳ್ಳಾರಿ ಜಿಲ್ಲೆಯ ಪ್ರಾಕೃತಿಕ ಸ್ಥಳನಮಗಳನ್ನು ವಿಂಗಡಿಸಲು ಸಾಧ್ಯವಾಗುತ್ತದೆ. ಹೀಗೆ ವಿಂಗಡಣೆಗೊಂಡ ಸ್ಥಳನಾಮಗಳನ್ನು ಶುದ್ಧ ಪ್ರಾಕೃತಿಕ ಎಂದು ಹೇಳಲಾಗದು. ಏಕೆಂದರೆ ಈ ಭಾಗದ ಜನರ ಆಚರಣೆ, ನಂಬಿಕೆ, ಜೀವನಧರ್ಮ, ಮತ. ಶಾಸ್ತ್ರ, ಕಲೆ ಮೊದಲಾವುಗಳು ಪ್ರಾಣಿ ಪಕ್ಷಿ, ಜಲ ತರುಮಾರಾದಿಗಳೊಂದಿಗೆ ಸಂಬಂಧ ಪಡೆದಿರುವುದರಿಂದ ಶಾಸ್ತ್ರದ ವಿಧಿ ವಿಧಾನಗಳ ರೀತ್ಯಾ ಅವುಗಳನ್ನು ವಿಂಗಡಿಸಿದರೂ ಅವುಗಳ ಹಿನ್ನೆಲೆಯಲ್ಲಿನ ಸಾಂಸ್ಕೃತಿಕ ಅಂಶಗಳನ್ನು ಸಹ ಅವಲೊಕಿಸುವುದು ವಿಹಿತವಾಗುತ್ತದೆ. ಈ ಕಾರಣದಿಂದಾಗಿ ಬಳ್ಳಾರಿ ಜಿಲ್ಲೆಯ ಪ್ರಾಕೃತಿಕ ಸ್ಥಳನಾಮಗಳನ್ನು ಆರು ಬಗೆಯಾಗಿ ಉಪ ವಿಭಾಗಿಸಬೇಕಾಗುತ್ತದೆ.

೧. ಭೂ ಸ್ಥಿತಿವಾಚಕ

೨. ಶಿಲಾವಾಚಕ

೩. ಭೂವರ್ಣವಾಚಕ

೪. ಜಲವಾಚಕ

೫. ಸಸ್ಯವಾಚಕ

೬. ಪಶು, ಪಕ್ಷಿ, ಪ್ರಾಣಿವಾಚಕ

೫.೪ ಭೂಸ್ಥಿ ವಾಚಕ ಸ್ಥಳನಾಮಗಳು (Topographical Names)

ಪ್ರಾಚೀನ ಮಾನವನು ತಾನು ಜೀವಿಸಲು ನೆಲೆ ನಿಂತ ತನ್ನ ಸುತ್ತಮುತ್ತಲಿನ ಪ್ರದೇಶವನ್ನು ಅಲ್ಲಿನ ಭೌಗೋಳಿಕ ವೈಶಿಷ್ಯಗಳಾದ ಗುಡ್ಡ, ಬೆಟ್ಟ, ತಿಟ್ಟು, ತಗ್ಗು, ಇಳಿಜಾರು ಮುಂತಾದವುಗಳಿಂದ ಗುರುತಿವನು. ಅದ್ದರಿಂದ ಈ ತೆರನಾದ ಭೂಸ್ಥಿತಿಯನ್ನು ಹೊಂದಿದ ಭೂಸ್ಥತಿವಾಚಕ ಸ್ಥಳನಾಮಗಳು ಅವನು ವಾಸ ಮಾಡುತ್ತಿದ್ದ ಪ್ರಪಂಚದಲ್ಲೆಡೆಗಳಲ್ಲೂ ಕಂಡು ಬರುತ್ತಿವೆ. ಕರ್ನಾಟಕದಲ್ಲಿ ಬಳ್ಳಾರಿ ಜಿಲ್ಲೆಯ ಬಯಲು ಸೀಮೆ, ಬೆಂಗಾಡು ಎಂದು ಸಾಮಾನ್ಯವಾಗಿ ಜನಜನಿತವಾಗಿದ್ದರೂ ಇದರಲ್ಲಿ ಸಂಪೂರ್ಣ ಸತ್ಯವಿಲ್ಲ. ಈ ಜಿಲ್ಲೆಯ ತುಂಬ ವಿಶಿಷ್ಟವಾದ ಭೂಸ್ಥಿತಿಯನ್ನು ಪಡೆದುದಾಗಿದೆ. ಜಿಲ್ಲೆಯಲ್ಲಿ ಅಲ್ಲಲ್ಲಿ ಗುಡ್ಡ, ಬೆಟ್ಟ, ಕಣಿವೆ, ತಗ್ಗು, ತಿಟ್ಟುಗಳನ್ನು ಕಾಣಬಹುದಾಗಿದೆ. ಇಂಥ ಯಾವ ವೈಶಿಷ್ಟ್ಯಗಳು ಇಲ್ಲದಿರುವ ಯಾವ ಒಂದು ಪ್ರದೇಶದಲ್ಲಿ ಅಲ್ಲಿನ ಮಾನವನು ತನ್ನ ಸ್ಥಳವು ಸುತ್ತಲಿನ ಪರಿಸರದಿಂದ ಬೇರೆಯಾಗಿ ಗುರುತಿಸುವಷ್ಟು ಕಿಂಚಿತ್ ವ್ಯಾತ್ಯಸವನ್ನು ಹೊಂದಿದ್ದರೂ ಅಯಾ ಲಕ್ಷಣದಿಂದಲೆ ತನ್ನ ಪ್ರದೇಶಕ್ಕೆ(ಸ್ಥಳಕ್ಕೆ) ಅಂಕಿತವನ್ನು ನೀಡಿದ್ದಾನೆ. ಈ ಕಾರಣದಿಂದಾಗಿ ಇಲ್ಲಿಯೂ ಕೂಡಾ ಭೂಸ್ಥಿತಿಯನ್ನನುಸರಿಸಿ ಅನೇಕ ಸ್ಥಳನಾಮಗಳು ಕಂಡು ಬರುತ್ತವೆ. ಗುಡ್ಡ, ಬೆಟ್ಟ, ತಗ್ಗು, ದಿನ್ನೆ, ಇವುಗಳು ಸಾವಿರಾರು ವರ್ಷಗಳೇ ಸಂದರೂ ನಶಿಸದೆ ಉಳಿದುಕೊಂಡು ಬರುವುದರಿಂದಾಗಿ ಆಯಾ ಭೂಸ್ಥಿತಿವಾಚಕ ಘಟಕ ಹಾಗೂ ಅಲ್ಲಿನ ಪರಿಸರಗಳು ಪರಸ್ಪರ ಪ್ರಮಾಣಗಳಾಗಿ ಇಂದಿಗೂ ಉಳುದು ಬಂದಿವೆ.

೫.೪(೧) ಉನ್ನತ ವಾಚಕ:

ಬಳ್ಳಾರಿ ಜಿಲ್ಲೆಯ ಭೂಸ್ಥಿತಿವಾಚಕ ಸ್ಥಳನಾಮಗಲ್ಲಿ ದ್ರಾವಿಡ ವರ್ಗಕ್ಕೆ ಸೇರಿದ ಉನ್ನತ ಪ್ರದೇಶ ವಾಚಕವಾದ ಗುಡ್ಡ, ಕೋಡು, ಕುಂದ, ಮರಡಿ, ಮಿಟ್ಟೆ, ತಗ್ಗು, ದಿನ್ನೆ, ಮಲೆ, ಗುತ್ತಿ ಎಂಬ ಘಟಕಗಳು ಅಲ್ಲದೆ ಆಯಾವರ್ಗಕ್ಕೆ ಸೇರಿದ ಘಟ್ಟ, ಕೋಟೆ, ದುರ್ಗ ಎಂಬ ಘಟಕಗಳು ಪ್ರಯೋಗಗೊಂಡಿವೆ.

೫.೪(೨) ಗುಡ್ಡ–ಕೋಡು:

ಗುಡ್ಡ ಎಂಬ ಪದಕ್ಕೆ ಕೋಶಾರ್ಥವು ಶಿಷ್ಯ, ಭಕ್ತ, ಹುಡುಗ, ಚಿಕ್ಕ ಬೆಟ್ಟ ಎಂಬುದಾಗಿದೆ. ಆದರೆ, ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ಇದು ಸುಸ್ಪಷ್ಟವಾಗಿ "ಚಿಕ್ಕ ಬೆಟ್ಟ" ಎಂಬ ಅರ್ಥವನ್ನು ಸೂಚಿಸುತ್ತದೆ. ಕೋಡು ಎಂಬ ಪದದ ಅರ್ಥ ಬೆದರು, ಉಡುಗು, ಭಯ, ಅಂಜಿಕೆ, ಶಿಖರ, ಬೆಟ್ಟದ ತುದಿ ಎಂದಿದೆ. ಸ್ಥಳಗಳ ಪರೀವಿಕ್ಷಣೆಯಿಂದ ಜಿಲ್ಲೆಯ ಸ್ಥಳನಾಮಗಳಲ್ಲಿ ಇದು ಸ್ಪಷ್ಟವಾಗಿ ಶಿಖರ, ಬೆಟ್ಟದ ತುದಿ ಎಂಬ ಅರ್ಥವನ್ನು ಸೂಚಿಸುತ್ತದೆನ್ನುವುದು ದೃಡವಾಗಿದೆ. ಗುಡ್ಡ ಮತ್ತು ಕೋಡುಗಳಿಗೆ ಸಂಬಂದಿಸಿ ಕೆಲವು ಸ್ಥಳನಾಮಗಳು ಈ ಕೆಳ ಕಂಡಂತಿವೆ,

ಗುಡ್ಡ	**ಕೋಡು**	**ಕುಂಚ**
ಅಮರದೇವರಗುಡ್ಡ	ಬಸರಕೋಡು	
ಗುಡ್ಡದೂರು	ಕುರುಗೋಡು	
		ಕುಂಚೂರು
ಸಿದ್ಧರಗೂಡು	ಬೆಳಗೋಡು	
ಕೆಂಚನಗುಡ್ಡ	ವಂಟಿಗೋಡು	

"ಕುಂಚ" ಎಂಬ ಪದವು ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ಎಡೆಪಡೆದಿದೆ. ಶಿಲಾ ಸಂಬಂದಿವಾಚಕ ಈ ಪದವು ಕುಂಜ ಎಂದೂ, ಮೂಲ ದ್ರಾವಿಡ"ಕುನ್ರ" ಎಂಬ ಪದದಿಂದ ಮೂಡಿದಾಗಿದೆ. ಇದು ಕುಂಡ, ಗುಂಡ, ಗುಂಜ, ಗುಂಜಿ ಎಂಬಿತ್ಯಾದಿ ರೂಪಗಳಲ್ಲಿಯೂ ಕಂಡು ಬರುತ್ತದೆ. ಕುಂಜ ಎಂಬ ಪದದ ಅರ್ಥ (an up land hill and hillwek with trees and groves) ಎಂದು ಶ್ರೀ, ರಘುಪತಿ ಕಮ್ಮೂರರ (ಏ ಗ್ಲಾಸರಿ ಆಫ್ ಪ್ಲೇಸ್ ನೇಮ್ಸ್ ಎಲಿಮೇಂಟ್ಸ್ ಇನ್ ತುಳು ಅಂಡ್ ಕನ್ನಡ) ದಲ್ಲಿ ಹೇಳುತ್ತಾರೆ. ಸಂಸ್ಕೃತದ ಕುಂಜಿಹ, ಕುಂಜುಹ, ಕುಂಜನವ್, ಕುಂಜರ ಎಂಬ ರೂಪಗಳಿಗೆ ಕುಂಚ, ಕುಂಜವೇ ಮೂಲವಾಗಿರಬೇಕು. ಕುಂಚ ಎಂಬ ಘಟಕದ ಜಿಲ್ಲೆಯ ಸ್ಥಳನಾಮವು ಬೆಟ್ಟ ಗುಡ್ಡ ಎಂಬರ್ಥವನ್ನು ಸೂಚಿಸು ತ್ತದೆಂಬುದು ಸ್ಥಳ ಪರೀವಿಕ್ಷಣೆಯಿಂದ ದೃಡಪಟ್ಟಿದೆ.

೫.೪(೩) ಕುಂದ–ಮರಡಿ–ಮಿಟ್ಟೆ:

"ಕುಂದ" ಎಂಬ ಪದಕ್ಕೆ ಕಿಟ್ಟೆಲ್‌ರವರು "a piller of bricks" ಇಟ್ಟಿಗೆಗಳ ಸ್ತಂಭ ಎಂಬ ಅರ್ಥವನ್ನು ಸೂಚಿಸಿದ್ದಾರೆ.(೪) ಕನ್ನಡದ ಕುಂದವು ಸ್ಥಳನಾಮಗಲ್ಲಿ ಬೆಟ್ಟ ಎಂಬ ಅರ್ಥವನ್ನು ಹೊಂದಿದೆ. ಕುಂಜ, ತೆಲಗಿನ "ಕೊಂಡ" ಗಳು ಇದರ ಜಾತಿ ಪದಗಳಾಗಿವೆ.

ಇವೂ ಸಹ ಅದೇ ಅರ್ಥವನ್ನು ಹೊಂದಿದವುಗಳಾಗಿವೆ. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ಕುಂದವು ಸ್ಪಷ್ಟವಾಗಿ ಬೆಟ್ಟ ಎಂಬ ಅರ್ಥವನ್ನು ಸೂಚಿಸುವುದನ್ನು ಸ್ಥಳ ಪರಿವೀಕ್ಷಣೆಯಿಂದ ಖಚಿತಗೊಳಿಸಿಕೋಳ್ಳಲಾಗಿದೆ. ಅಂತೆಯೇ ಮರಡಿ ಮೊರಡಿ ಎಂಬ ಪದಕ್ಕೆ ಕಲ್ಲುಗುಡ್ಡ ಎಂತಲೂ ಮಿಟ್ಟೆ ಎಂಬುದಕ್ಕೆ ದಿಣ್ಣ, ಏರಿ , ಉನ್ನತವಾದದು ಎಂಬ ಕೋಶಾರ್ಥಗಳಿವೆ.(೫) ಕುಂದ, ಮರಡಿ, ಮಿಟ್ಟೆ, ಇವುಗಳಿಗೆ ಸಂಬಂದಿಸಿದ ಕೆಲವು ಸ್ಥಳನಮಗಳು ಈ ಕೆಳಗಿನಂತೆವೆ:

ಕುಂದ	**ಮರಡಿ**	**ಮಿಟ್ಟೆ**
ನೀಲಗುಂದ	ಚಿಕ್ಕ ಮರಡಿ	ಮಿಟ್ಟೆ ಸೂಗೂರು
ಬಲಕುಂದ		
ಬೈಲಕುಂದ(ದಿ)	ತಿಮ್ಮನಮರಡಿ	
ಮಾಕುಂದ		
ಹಲಕುಂದ(ದಿ)		

೫.೪(೪) ತಗ್ಗು-ದಿನ್ನೆ-ಮಲೆ-ಗುತ್ತಿ:

ಕನ್ನಡದಲ್ಲೂ ತಗ್ಗು ಎಂಬ ಪದಕ್ಕೆ ಕಿಟ್ಟೆಲ್‌ರವರು (become low) ತಗ್ಗಿನ ನೆಲ ಎಂಬ ಅರ್ಥವನ್ನು ಸೂಚಿಸುತ್ತದೆ. ಹಳ್ಳ, ಕುಳಿ ಎಂಬ ಕೋಶಾರ್ಥವೂ ಇದೆ. ದಿನ್ನೆ ಎಂಬ ಪದದ ಅರ್ಥ ದಿಬ್ಬ, ದಿಣ್ಣೆ, ಎತ್ತರದ ಪ್ರದೇಶ ಎಂಬರ್ಥವಾಗುತ್ತದೆ.

ಮಲೆ ಎಂಬುದಕ್ಕೆ ಬೆಟ್ಟ ಎಂಬ ಕೋಶಾರ್ಥ ಉಂಟು ಇನ್ನು ಗುತ್ತಿ ಎಂಬ ಪದಕ್ಕೆ ಗಡ್ಡೆ, ದಿಬ್ಬ, ಎತ್ತರವಾದ ಭೂಮಿ ಎಂಬ ಕೋಶಾರ್ಥ ಲಭ್ಯವಾಗುತ್ತದೆ. ಬಳ್ಳಾರಿಯ ಸ್ಥಳನಾಮಗಳನ್ನು ಪರಿವೀಕ್ಷಿಸಿದಾಗ ಕೋಶಾರ್ಥವು ಅವುಗಳ ಸಮಂಜಿಸವಾಗಿರುವುದು ವ್ಯಕ್ತವಾಗುತ್ತದೆ. ತಗ್ಗು, ದಿನ್ನೆ, ಮಲೆ ಮತ್ತು ಗುತ್ತಿ ಎಂಬ ಘಟಕಗಳಿಂದ ಕೂಡಿದ ಸ್ಥಳನಾಮಗಳ ವಿವರ ಹೀಗಿದೆ.

ತಗ್ಗು	**ಗುತ್ತಿ**
ತಗ್ಗಿನ	ಎತ್ತಿನ
ಬೂದಿಹಾಳ	ಬೂದಿಹಾಳಾ ಗುತ್ತಿಗನೂರು

೫.೪(೫) ಕಣಿವೆ ಕೋಟೆ:

ಬಳ್ಳಾರಿ ಜಿಲ್ಲೆಯ ಕೆಲವು ಸ್ಥಳನಾಮಗಳಲ್ಲಿ ಕಣಿವೆ ಎಂಬ ಪದದ ಪ್ರಯೋಗವಿದೆ.

ಈ ಪದಕ್ಕೆ ಎರಡು ಬೆಟ್ಟಗಳ ನರುವಿನ ಇಕ್ಕಟ್ಟಾದ ಪ್ರದೇಶ ಎಂಬ ಕೋಶಾರ್ಥವಿದೆ. ಬಳ್ಳಾರಿಯ ಕೆಲ ಭೂ ಪ್ರದೇಶಗಳಲ್ಲಿ ಒತ್ತೊತ್ತಾಗಿ ಬೆಟ್ಟಗಳ ಎಡೆಗಳಿರುವುದರಿಂದ ಆ ಪರಿಸರದಲ್ಲಿ ಸ್ಥಾಪಿತಗೊಂಡ ಸ್ಥಳನಾಮಗಳಲ್ಲಿ ಕೂಡಿವೆ ಎಂಬ ಘಟಕವು ಕಂಡುಬರುತ್ತದೆ. ಅಂತೆಯೇ ಘಟ್ಟ ಎಂದರೆ ಕಟ್ಟಲ್‌ರವರು a landing place. a quary ಎಂಬ ಅರ್ಥವನ್ನು ಸೂಚಿಸಿದ್ದಾರೆ. ಬೆಟ್ಟಗಳ ಸಾಲು ಎಂಬ ಕೋಶಾರ್ಥವು ಲಭ್ಯವಿದೆ. ಕೋಟೆ ಮತ್ತು ದುರ್ಗ ಇವು ಸಮಾನಾರ್ಥಕ ಶಬ್ದಗಳಾಗಿವೆ. ಕೋಟ ಎಂಬ ಪದಕ್ಕೆ ಕೋಟೆ ಎಂಬ ಕೋಶಾರ್ಥವಿದೆ ದುರ್ಗ ಎಂಬ ಪದ ಸಂಸ್ಕೃತ ಮೂಲವಾದುದು. ಕನ್ನಡದಲ್ಲಿ ದುಗ್ಗ ಎಂಬುದು ತದ್ಭವ ರೂಪವಿದೆ. ದುರ್ಗ ಶಬ್ದಕ್ಕೆ ಕಿಟ್ಟಲ್‌ರವರು diffeicult of attainment. a fort ಎಂಬ ಅರ್ಥವನ್ನು ಸೂಚಿಸಿರುವರು. ಬಳ್ಳಾರಿ ಜಿಲ್ಲೆಯ ಸ್ಥಳ ನಾಮಗಳಲ್ಲಿನ ದುರ್ಗ ಎಂಬ ಅಕ್ಷರವು Fort (ಕೋಟೆ) ಎಂಬ ಅರ್ಥವನ್ನು ಸೂಚಿಸುವಂಥಾದಾಗಿದೆ.

ದುರ್ಗ ಎಂಬ ಪದದ ಅರ್ಥವನ್ನೇ ಸೂಚಿಸುವ ಗಡ ಎಂಬ ಸ್ಥಳನಾಮ ಘಟಕದ ಒಂದು ಸ್ಥಳವೂ ಬಳ್ಳಾರಿ ಜಿಲ್ಲೆಯಲ್ಲಿ ಕಂಡು ಬರುತ್ತದೆ. ಉದಾ: ರಾಮಗಡ, ಗಡ ಎಂಬ ಶಬ್ದ ಮರಾಠಿ ಮೂಲದಿಂದ ಬಂದುದಾಗಿದೆ. ಕಿಟ್ಟಲ್‌ರವರು ಈ ಪದಕ್ಕೆ (small fort) ಎಂಬರ್ಥವನ್ನು ನೀಡಿ (especially ahill fort) ಎಂದು ಸೂಚಿಸಿದ್ದಾರೆ. ಈ ಸ್ಥಳನಾಮವನ್ನು ಪರಿವೀಕ್ಷಿಸಿದಾಗ ಮರಾಠಿ ವಂಶಸ್ಥ ಅರಸರು ಆ ಭಾಗದಲ್ಲಿ ಅಧಿಪತ್ಯ ನಡೆಸಿರುವುದು ಮತ್ತು ಚಿಕ್ಕ ಗುಡ್ಡದ ಮೇಲೆ ಕೋಟೆ ಇರುವುದು ಕಂಡು ಬರುತ್ತದೆ. ಅದ್ದರಿಂದ ಕೋಶಾರ್ಥವು ಸ್ಥಳನಾಮ ಘಟಕದೊಂದಿಗೆ ಯುಕ್ತವಾದುದಾಗಿದೆ.

೫.೬ ಶಿಲಾವಾಚಕ ಸ್ಥಳನಾಮಗಳು:

ಪ್ರಾಚೀನ ಮಾನವನ ಕಾಲದಿಂದಲೂ ಅವನಿಗೆ ಶಿಲೆ(ಕಲ್ಲು) ನೊಡನೆ ಅತ್ಯಂತ ನಿಕಟ ಒಡನಾಟವಿದೆ. ಪುರಾತನ ಮಾನವನು ಇನ್ನೂ ಅಲೆಮಾರಿಯಾಗಿ ಕಾಡು ಮೇಡುಗಳಲ್ಲಿ ಕಾಲ ಸವೆಸುತ್ತಿರುವಾಗ ಉದರಂಬರಕ್ಕೆ ಕಾಡು ಪ್ರಾಣಿಗಳನ್ನು ಬೇಟೆಯಾಡಿ ಬೇಯಿಸದ ಹಸಿ ಮಾಂಸವನ್ನೇ ತಿನ್ನುತ್ತದ್ದ. ಪ್ರಾಣಿಗಳ ಬೇಟೆಯಾಡಲು ಕಲ್ಲುಗಳೇ ಅವನಿಗೆ ಆಯುಧಗಳಾಗಿದ್ದವು. ಅವನ ಆ ಕಾಲವನ್ನು ನಾವು ಶಿಲಾಯುಗ, ಪುರಾತನಯುಗ, ನೂತನ ಶಿಲಾಯುಗ ಎಂದು ಕರೆಯುತ್ತೆವೆ. ಅವನು ಬಳಸುತ್ತಿದ್ದ ಕಲ್ಲಿನ ಆಯುಧಗಳು ನುಣುಪು, ನಯಗಾರಿಗೆ, ಮಾದರಿ ಇವುಗಳನ್ನು ಆಧಾರವಾಗಿರಿಸಿಕೊಂಡು ಅವನ ಸಂಸ್ಕೃತಿ ಮತ್ತು ನಾಗರೀಕತೆಗಳನ್ನು ಪುರಾತತ್ವಜ್ಞರು ನಿರ್ಧರಿಸುತ್ತಾರೆ. ಹೀಗೆ ತಾನು ವಾಸಿಸುವ

ಪರಿಸರದ ಕಲ್ಲು, ಮಣ್ಣು ಅವನ ಜೀವನಾವಶ್ಯಕ ಮೂಲ ಸಾಮಾಗ್ರಿಯಾಗಿದ್ದವು. ತನ್ನ ಜೀವನಾಧಾರವಾದ ಮತ್ತು ಆಯುಧ ನಿರ್ಮಾಣದ ಮೂಲ ವಸ್ತುವಾದ, ಕಣ್ಣು ಹಾಯಿಸಿದೆಡೆ ಕಾಣ ಸಿಗುವ ಶಿಲೆಗಳು, ಹೆಬ್ಬಂಡೆಗಳು ಅವನ ವಾಸದ ನೆಲೆಗಳೇ ಆಗಿದ್ದವು. ಬಳ್ಳಾರಿ ಜಿಲ್ಲೆಯ ಬಹು ಭಾಗ ಅತ್ಯಂತ ಪ್ರಾಚೀನವಾದ ಶಿಲೆಗಳಿಂದ ಅವೃತ್ತವಾಗಿವೆ. ಬಯಲು ಸೀಮೆಯೆಂದು ಕರೆಯಲ್ಪಡುವ ಇಲ್ಲಿ ಅಲ್ಲಲ್ಲಿ ಬೋರಲಾಗಿಟ್ಟ ಬಟ್ಟಲುಗಳಂತೆ ಕಲ್ಲುಗುಂಡುಗಳಿಂದ ನಿಬಿಡವಾಗಿ ಎದ್ದು ನಿಂತ ಗುಡ್ಡದ ಸಾಲುಗಳನ್ನು ಕಾಣಬಹುದಾಗಿದೆ. ಹಂಪೆಯ ಸುತ್ತಮುತ್ತಲಿನ ಬೆಟ್ಟದ ಸಾಲುಗಳನ್ನು ನೋಡಿದಾಗ ನಮಗೆ ಮನವರಿಕೆಯಾಗುತ್ತದೆ. ಈ ಭಾಗದಲ್ಲಿ ಎಲ್ಲಿ ನೋಡಿದರೂ ವಿವಿಧ ಬಗೆಯ ಆಕಾರಗಳಿಂದ ತೋರಿ ಬರುವ ಗುಡ್ಡದ ಸಾಲುಗಳು ತಮ್ಮದೇ ಆದ ಒಂದು ನಿಸರ್ಗ ರಮಣೀಯತೆಯನ್ನು ಪಡೆದುಕೊಂಡಿವೆ.

ಅಲೆಮಾರಿ ಜೀವನವನ್ನು ಕಳೆದು ಅವನು ವ್ಯವಸಾಯ ಮಾಡುವುದನ್ನು ಕಲಿತು ಒಂದೆಡೆ ನೆಲೆ ನಿಂತಾದ ಮೇಲೆ ತನ್ನ ನೆಲೆಯ ಗುರುತನ್ನು ಅರಿಯಲು ಅಲ್ಲಿ ಅವರಿಸಿದ ವೈಶಿಷ್ಟತೆಯನ್ನು ಸ್ಥಳನಾಮಗಳಲ್ಲಿ ಚಿರಸ್ಥಾಯಿಯಾಗಿಸಿದ್ದಾನೆ.

ಶಿಲೆ ಎಂಬ ಪದಕ್ಕೆ ಕೋಶಾರ್ಥವು "ಕಲ್ಲು" (a stone) ಎಂಬುದಾಗಿದೆ. ಕಲ್ಲು ಎಂಬ ಘಟಕವನ್ನೊಳಗೊಂಡ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು ಈ ಕೆಳಗಿನಂತಿವೆ.

೫.೬(೧) ಕಲ್ಲು:

೧. ಕಪ್ಪಗಲ್ಲು

೨. ಕಲ್ಲುಕುಟ್ಟಿಗನಹಳ್ಳಿ

೩. ಕಲ್ಲಹಳ್ಳಿ

೪. ಕರೆಕಲ್ಲು

೫. ಕರೆಕಲ್ಲು ವೀರಾಪುರ

೬. ಕಲ್ಲುಕಂಬ

೭. ಕಲ್ಲುಕುಟ್ಟಿಗನ ಹಾಳು

೮. ಬೆಣ್ಣೆಕಲ್ಲು

೯. ಸಂಗನಕಲ್ಲು

೧೦. ಕೋಳಗಲ್ಲು

೧೧. ತೋರಣಗಲ್ಲು

೧೨. ಕಗ್ಗಲ್ಲು

೧೩. ಬೆಣಕಲ್ಲು

೧೪. ಬೆಳಗಲ್ಲು

೧೫. ಶಂಕರ ಬಂಡೆ

೧೬. ಹದ್ದಿನಗುಂಡು

೧೭. ಕೆಂಚನಗುಡ್ಡ

೧೮. ಗುಡದೂರು

೫.೭ ಭೂವರ್ಣವಾಚಕ ಸ್ಥಳನಾಮಗಳು:

ಬಳ್ಳಾರಿ ಜಿಲ್ಲೆಯು ಮಾನವನ ಮೂಲ ಕಸುಬಾದ ವ್ಯವಸಾಯಕ್ಕೆ ಅನುಕೂಲವಾದ ಫಲವತ್ತಾದ ಸಮೃದ್ಧ ಕಪ್ಪು ಭೂಮಿಯಿಂದ ಕೂಡಿದ ಪ್ರದೇಶವಾಗಿದ್ದು ಅಲ್ಲಲ್ಲಿ ಚದುರಿದಂತೆ ಕೆಂಪು ಮಣ್ಣಿನ ಭೂಪ್ರದೇಶವನ್ನು ಕಾಣಬಹುದಾಗಿದೆ. ಇಂಥ ವಿಶಾಲ ಪ್ರದೇಶದಲ್ಲಿ ಕೆಲವಡೆ ನಿಬೀಡವಾಗಿ ಮತ್ತೆ ಕೆಲವಡೆ ವಿರಳವಾಗಿಯೂ ಕಲ್ಲು ಬಂಡೆಗಳು, ಶಿಲಾ ಬೆಟ್ಟಗಳು ಅವೃತವಾಗಿವೆ. ಜಿಲ್ಲೆಯ ಕೆಲವು ಸ್ಥಳಗಳು ಅಯಾ ಭೂಪ್ರದೇಶಗಳಿಗೆ ಅವುಗಳ ಬಣ್ಣಗಳ ಕಾರಣವಾಗಿ ಗ್ರಾಮಗಳಿಗೆ ಹೆಸರುಗಳನ್ನು ನೀಡಲಾಗಿದೆ. ಸ್ಥಳನಾಮಗಳಲ್ಲಿ ಕಪ್ಪು (ಕರಿ) ಕೆಂಪು (ಹೊನ್ನು-ಸೋನ್ನು) ತಾಮ್ರ, ಎಂಬ ಘಟಕಗಳು ಬಳಕೆಯಾಗಿರುವದನ್ನು ಕಾಣಬಹುದಾಗಿದೆ.ಪ್ರಾಕೃತ ರೂಪವಾದ ಸೊನ್ನ ಎಂಬ ಪದವು ಸ್ಥಳನಾಮದಲ್ಲಿ ಕಂಡು ಬಂದಿದ್ದು ಕೆಲ ಸ್ಥಳನಾಮಗಳಲ್ಲಿ ಇದರ ಸಮಾನಾರ್ಥಕ ಪದವಾದ "ಹೊನ್" ಕನಕ ಎಂಬ ಪದ ಬಳಕೆಯಾಗಿದೆ. ಕಪ್ಪು, ಕರಿ, ಹೊನ್ನು, ತಾಮ್ರ ಘಟಕಗಳನೋಳಗೊಂಡ ಸ್ಥಳನಾಮಗಲ್ಲದೇ ಬಿಳಿ ಬಣ್ಣವನ್ನು ಸೂಚಿಸುವ ಸ್ಥಳನಾಮ ಘಟಕಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಕರಿ(ಕಪ್ಪು)	**ಸೊನ್ನ,ಹೊನ್, ಕನಕ**	**ಬಿಳಿ**	**ತಾಮ್ರ**
ಕರಿಚೇಡು	ತಾಮ್ರಹಳ್ಳಿ		
ಕರೇಕಲ್ಲು		ಬೆಳಗಲ್ಲು	

ಕಪ್ಪಗಲ್ಲು ಹೊನ್ನಳ್ಳಿ

ಕರೇಕಲ್ಲು ವೀರಾಪುರ ಲಕ್ಷ್ಮೀಪುರ ಬೆಣ್ಣಿಕಲ್ಲು

೫.೭(೧) ಚಂದ, ಚಾಂದ್ರ ಬೆಣ್ಣೆ:

ಚಂದ ಎಂಬ ಪದದ ಅರ್ಥವನ್ನು ಬಿಳಿ ಎಂದು ಭಾವಿಸಬೇಕಾದುದು, ಸಂಸ್ಕೃತದಲ್ಲಿ ಚಾಂದ್ರ ಎಂಬ ಪದದ ಅರ್ಥ ಬೆಳ್ಳಿ ಎಂದಾಗುತ್ತದೆ. ಬೆಳ್ಳಿಯು ಬಿಳಿ ಬಣ್ಣವನ್ನು ಹೊಂದಿದ ಬೆಲೆ ಬಾಳುವ ಒಂದು ಲೋಹ. ಈ ಕಾರಣವಾಗಿ ಬಿಳಿ ಬಣ್ಣವನ್ನು ಹೊಂದಿದ ಭೂಪ್ರದೇಶದಲ್ಲಿ ಸ್ಥಾಪಿತವಾದ ಗ್ರಾಮಕ್ಕೆ ಚಂದ ಎಂಬ ಪದದಿಂದ ಹೆಸರನ್ನು ನೀಡಲಾಗಿದೆ. ಇನ್ನೂ ಕನ್ನಡದಲ್ಲಿ ಬೆಳ್ ಎಂಬ ಬಿಳುಪನ್ನು ಸೂಚಿಸುವ ವರ್ಣವಾಚಕದಿಂದ ಬೆಳ್ಳಿ ಎಂಬ ಪದ ನಿಷ್ಪನ್ನವಾಗಿದೆ. ಕೆಲ ಸ್ಥಳನಾಮಗಳಲ್ಲಿ ಇದು ಬೆಣ್ಣೆಯಷ್ಟು ಬಿಳಿಪು ಎಂಬರ್ಥದಿಂದಲೋ ಎಂಬಂತೆ ಬೆಣ್ಣೆ ಎಂಬ ಪದದಿಂದಲೂ ಹೆಸರುಗಳನ್ನು ನೀಡಲಾಗಿದೆ. ಬೆಣ್ಣಿ ಮತ್ತು ಬೆಳ್ ಅಲ್ಲದೆ ಕರಿ ಘಟಕವುಳ್ಳ ಸ್ಥಳನಾಮಗಳನ್ನು ಆಲಂಕಾರಿಕ ಸ್ಥಳನಾಮಗಳಂತೆಯೂ ವಿವರಿಸಲು ಸಾಧ್ಯವುಂಟು.

ಚಂದು ಬೆಣ್ಣೆ ಚಾಂದ್ರ

ಚಂದೂರು ಬೆಣ್ಣಿಕಲ್ಲು

ಬೆಣಕಲ್ಲು ಬೆಳಗಲ್ಲು

ಮೇಲ್ಕಾಣಿಸಿದ ಭೂವರ್ಣವಾಚಕ ಸ್ಥಳನಾಮಗಳು ಭೂಪ್ರದೇಶಗಳ ವರ್ಣಗಳನ್ನೂ ಅಲ್ಲದೆ ಆ ಪ್ರದೇಶಗಳಲ್ಲಿ ಅವೃತಗೊಂಡ ವೈಶಿಷ್ಟ್ಯ ಪ್ರತಿಬಿಂಬಕ ಶಿಲಾ ವರ್ಣಗಳನ್ನೂ ಕುರಿತು ಹೇಳುತ್ತಿರುವಂತೆ ತೋರಿಬರುತ್ತವೆ.

೫.೮ ಜಲವಾಚಕ ಸ್ಥಳನಾಮಗಳು (Hydronyms)

ನೀರು ಮಾನವನಿಗೆ ಅತ್ಯಾವಶ್ಯಕವಾದುದು. ಅದಿಲ್ಲದೆ ಅವನು ಬದುಕುವುದೇ ದುಸ್ತರ. ಜೀವಿಗಳು ಮೊದಲು ನೀರಿನಲ್ಲೇ ಉಗಮಗೊಂಡಿವೆ ಎಂಬುದು ಜೀವಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ನೀರು ಮಾನವನ ಜೀವನವಾಗಿದೆ. ಮಾನವನ ವಸತಿ ಇದ್ದ ಕಡೆಗಳಲ್ಲೆಲ್ಲ ನೀರು ಇರಬೇಕು. ನೀರಿದ್ದಡೆ ಮಾನವ ವಸತಿಗಳಿರುತ್ತವೆ. ಈ ಕಾರಣದಿಂದಾಗಿ ಕೆಲವು ಗ್ರಾಮ ನಾಮಗಳು ಅಲ್ಲಿಯ ಜಲ ಸಂಪನ್ಮೂಲದ ಹಿನ್ನೆಲೆಯಿಂದ ಬಂದವುಗಳಾಗಿವೆ. ಈ ಬಗೆಯ ಸ್ಥಳಮಾಮಗಳನ್ನು ಜಲವಾಚಕ ಸ್ಥಳನಾಮಗಳೆಂದು ಕರೆಯಲಾಗುವುದು. ಜಲವಾಚಕ ಸ್ಥಳನಾಮಗಳನ್ನು ಭಾರತೀಯ ಸಂಸ್ಕೃತಿಯಲ್ಲಿ ಎರಡು ಬಗೆಯಿಂದ ವಿಂಗಡಿಸಬಹುದು.

೧. ಸಹಜ ಜಲಸಂಪನ್ಮೂಲವಾಚಕ

೨. ಧಾರ್ಮಿಕ ಜಲ ಸಂಪನ್ಮೂಲ ವಾಚಕ

೫.೯ ಸಹಜ ಜಲ ಸಂಪನ್ಮೂಲ ವಾಚಕ:

ಕುಡಿಯಲು ನೀರಿನ ಅವಶ್ಯಕತೆ ಇದ್ದುದರಿಂದ ಹಳೆಯ ಹಾಗೂ ಹೊಸ ಶಿಲಾಯುಗದಲ್ಲಿನ ಮಾನವರು ನೈಸರ್ಗಿಕ ಜಲ ಸಂಪನ್ಮೂಲಗಳಾದ ನದಿ, ಕೆರೆ ಮುಂತಾದ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಈ ಯುಗಗಳಿಗೆ ಸಂಬಂದಪಟ್ಟ ಮಾನವನ ಅವಶೇಷಗಳು ಬಳ್ಳಾರಿ ಜಿಲ್ಲೆಯ ತುಂಗಬದ್ರಾ ನದಿಯ ದಡಗಳ ಪ್ರದೇಶಗಳಲ್ಲಿ ದೊರಕಿವೆ. ಈ ನದಿಯ ದಂಡೆಗಳಲ್ಲಿಯೇ ಹುಲ್ಲುಗಾವಲು ಮತ್ತು ನಾಗರೀಕತೆಯ ಕಾಲಾವಧಿಯಲ್ಲಿ ತನ್ನ ಮತ್ತು ತನ್ನ ಪ್ರಾಣಿಗಳ ಸುರಕ್ಷಣೆಯ ದೃಷ್ಟಿಯಿಂದ ಗುಡ್ಡ, ಬೆಟ್ಟ,ಕಣಿವೆ ಗುಹೆಗಳ ಭೂಪ್ರದೇಶಗಳನ್ನು ಆಯ್ದುಕೊಂಡರಲ್ಲದೆ ನೀರಿನ ಸೌಲಭ್ಯಕ್ಕಾಗಿ ಕೆರೆ, ಕಟ್ಟೆ, ಬಾವಿ ಮುಂತಾದ ಕೃತಕ ಜಲ ಸಂಪನ್ಮೂಲಗಳನ್ನು ರಚಿಸಿಕೊಂಡಿರುವುದು ಬಳ್ಳಾರಿ ಜಿಲ್ಲೆಯ ಹಲವು ಸ್ಥಳನಾಮಗಳಿಂದ ವೇದ್ಯವಾಗುತ್ತದೆ. ತನ್ನ ಮತ್ತು ತಾನು ಸಾಕಿದ ಪ್ರಾಣಿಗಳ ಕುಡಿಯುವ ನೀರಿನ ಸೌಲಭ್ಯಕ್ಕಾಗಿ ಅಲ್ಲದೆ ಬೇಸಾಯದ ಉಪಯೋಗಗಳಿಗಾಗಿ ಬಳಸಿಕೋಂಡಿರುವ ಜಲ ಸಂಪನ್ಮೂಲ ಹಿನ್ನೇಲೆಯಿಂದ ಬಂದ ಸ್ಥಳನಮಗಳನ್ನು ಸಹಜ ಜಲ ಸಂಪನ್ಮೂಲ ವಾಚಕ ಸ್ಥಳನಾಮಗಳೆಂದು ಕರೆಯಲಾಗಿದೆ. ಇಂಥ ಜಲ ಸಂಬಂದಿ ಘಟಕಗಳನ್ನೊಳಗೊಂಡಿರುವ ಅನೇಕ ಸ್ಥಳನಾಮಗಳು ಬಳ್ಳಾರಿ ತಾಲೂಕಿನಲ್ಲವೆ.

೫.೯(೧) ಆಲ್–ಅಪ್ಪು–ನೀರು:

“ಆಲ್” ಎಂಬ ಪದಕ್ಕೆ ಮೂಲ ದ್ರಾವಿಡದಲ್ಲಿ ನೀರು ಎಂಬ ಅರ್ಥವಿರುವುದೆಂದು ವಿದ್ವಾಂಸರ ಅಭಿಮತವಾಗಿದೆ* “ಅಪ್ಪು” ಎಂಬ ಪದ ಸಂಸ್ಕೃತದಿಂದ ಸ್ವೀಕೃತವಾದಾಗಿದೆ. “ನೀರ” ಎಂಬುದು ದ್ರಾವಿಡ ಮೂಲ ಪದವಾಗಿದೆ. ಇಲ್ಲನ ಮೂರೂ ಪದಗಳು ಕೆರೆ ಮತ್ತು ಹಳ್ಳಕ್ಕೆ ಬಂದು ಸೇರುವ ನೀರಿಗೆ ಸಂಬಂಧಪಟ್ಟವುಗಳಾಗಿವೆ.

ಆಲ್	**ಅಪ್ಪು**	**ನೀರ್.**
ಅಲ್ಲೀಪುರ		
ಅಲ್ಲೀಪುರ(ಆ)	ಅಪ್ಪೇನಹಳ್ಳಿ	ನೀರ್ಗುಂದ>ನೀಲಗುಂದ
ಅರಬನೂರು	ಅಪ್ಪಲಪುರ	ನೀರ್ಗುಂದಿ> ನೀಲಗುಂದಿ

* ಆಲಿ– Rain drops, ಆಲಿಕಲ್ಲು

ಮರಾಠಿ–ಆಲಿ, ಅಪ್ಪರಮ್–hail

at=water (kannada) hail stone

DED-Nm327

೫.೯(೨) ಕೆರೆ–ಏರಿ–ಕಟ್ಟೆ–ಕೋಡಿ:

ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ಕೆರೆ ಏರಿ ಎಂಬ ಎರಡು ರೀತಿಯ ಪದ ಪ್ರಯೋಗಗಳಿದ್ದು ಅವು ನೈಸರ್ಗಿಕ ಮತ್ತು ಕೃತಕವೆಂಬ ಎರಡು ಬಗೆಯ ಕೆರೆಗಳನ್ನು ಸೂಚಿಸುತ್ತದೆ. ಕೆರೆ ಮೂಲ ದ್ರಾವಿಡ ಪದವಾಗಿದೆ. ತಮಿಳು ತುಳು ಕೋತ ತೋದ ಮೊದಲಾದ ದ್ರಾವಿಡ ವರ್ಗದ ಭಾಷೆಗಳಲ್ಲಿ ಇದಕ್ಕೆ ಸಮಾನ ಪದಗಳಿವೆ. ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿಯೂ ತತ್ಸಬಂದ ಪದಗಳಿರುವುದನ್ನು ಇಮ್ಯಾನೂ ಮತ್ತು ಬರೋ ವಿದ್ವಾಂಸರು ಗುರುತಿಸಿದ್ದಾರೆ.(೭) ಬಳ್ಳಾರಿ ಜಿಲ್ಲೆಯ ಗುಡ್ಡ, ಬೆಟ್ಟಗಳಿಂದಾವೃತವಾದ ಉಷ್ಣ ಹವಮಾನವುಳ್ಳ ಪ್ರದೇಶ. ಈ ಪ್ರದೇಶದ ಮಾನವನು ತನ್ನ ನೀರಿನ ಅನುಕೂಲತೆಗಾಗಿ ಅಲ್ಲಲ್ಲಿ ವಿಶೇಷವಾಗಿ ಕೆರೆಗಳನ್ನು ಕಟ್ಟಿಕೊಂಡಿರುವಂತೆ ಕಾಣುತ್ತದೆ. ಒಂದು ಅಂದಾಜಿನ ಪ್ರಕಾರ ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು ೫೦೦ ಕೆರಗಳಿವೆಯೆಂದು ತಿಳಿಯಲಾಗಿದೆ. ಕಟ್ಟೆ ಎಂಬ ಪದವು ಕೆರೆಯನ್ನು ನಿರ್ಮಿಸಲು ಹಾಕಿರುವ ವಡ್ಡು ಎಂಬರ್ಥವನ್ನು ನೀಡುತ್ತದೆ. ಇದಕ್ಕೆ ಏರಿ ಎಂತಲೂ ಕರೆಯುವದುಂಟು. ವಡ್ಡು ಮತ್ತು ಏರಿ ಎಂಬ ಘಟಕಗಳುಳ್ಳ ಸ್ಥಳನಾಮಗಳೂ ಬಳ್ಳಾರಿ ತಾಲೂಕಿನಲ್ಲಿ ದೊರಕುತ್ತವೆ. ಏರಿ ಎಂದರೆ ಕೆರೆ ಎಂಬ ಅರ್ಥವಿದೆಯೆಂದು ಇಮ್ಯಾನ್ಯೂ ಮತ್ತು ಬರೋ ರವರು ಸೂಚಿಸಿದ್ದಾರೆ.(೮) ಕೋಡಿ ಎಂಬ ಪದದ ಅರ್ಥ ಕೆರೆ, ಕಟ್ಟೆಗಳು ನೀರು ಹರಿವ ದಾರಿ ಎಂದೂ ಅಲ್ಲದೆ, ಹೊನಲು ಎಂಬಾರ್ಥವನ್ನು ಪಡೆದಿವೆ.

ಕೆರೆ	ಏರಿ(ಕೇರಿ)
ಕೆರೆಕೇರಿ	ಸಿರಿಗೇರಿ
ಕುಪ್ಪಿನಕೆರೆ	ಸಿಂದಗೇರಿ
ವಡ್ಡು	ನಾಗರಕಟ್ಟೆ
ಕೆರೆಯಾಗಿನಹಳ್ಳಿ	ಬೆಳ್ಳಿಕಟ್ಟೆ
ಕಂಚೀಗೇರಿ	ಕೊಂಚಗೇರಿ

ಕೆರೆ ಏರಿ(ಕೇರಿ) ಕಟ್ಟ ಮತ್ತು ಕೋಡಿ ಎಂಬ ಘಟಕಗಳುಳ್ಳ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳನ್ನು ಮೇಲಿನಂತೆ ಕಾಣಿಸಲಾಗಿದೆ. ದವಸಧಾನ್ಯಗಳನ್ನು ಬೆಳೆಯಲು ತನ್ನ

ಸಾಕು ಪ್ರಾಣಿಗಳು ಮತ್ತು ತನಗೆ ಸೌಲಭ್ಯಗಳನ್ನು ಪಡೆದುಕೊಳ್ಳಲು ಇಂಥ ಕೃತಕ ಜಲ ಮೂಲಗಳನ್ನು ಇಲ್ಲಿಯ ಮಾನವನು ರೂಪಸಿಕೊಂಡಿದ್ದಾನೆ.

೫.೯(೩) ವಡ್ಡು-ಚೆಡು-ಹೊಳೆ-ಹಳ್ಳ:-

ಕೆರಗಳ ನಿರ್ಮಾಣಕ್ಕಾಗಿ ಹಾಕಿದ ವಡ್ಡು ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ಕೆರೆ ಎಂಬ ಅರ್ಥವನ್ನು ನೀಡುತ್ತವೆ. ಚೆಡು ಎಂಬುದಕ್ಕೆ "ಚೆಮಿ" ಎಂಬುದರ ಇನ್ನೊಂದು ರೂಪವಾಗಿದೆ. ದ್ರಾವಿಡ ಭಾಷೆಯಲ್ಲಿ ನಡೆದಿರೂ ಕ' ಚ" ವ್ಯತ್ಯಯಗಳಿಂದ ತೆಲುಗು ಭಾಷೆಯಲ್ಲಿ ಚೆಮಿ ಎಂಬ ರೂಪವನ್ನು ಕಾಣಬಹುದಾಗಿದೆ. ಬಳ್ಳಾರಿ ಜಿಲ್ಲೆಯ ಉಪ ಬಾಷೆಯ ಮೇಲೆ ತೆಲುಗಿನ ಪ್ರಭಾವ ಉಂಟಾಗಿರುವುದರಿಂದ ಸ್ಥಳನಾಮಗಳಲ್ಲೂ ತೆಲುಗು ಶಬ್ದಗಳು ಪ್ರಯೋಗಗೊಂಡಿವೆ. ಚೆಡು>ಚೆಮಿ ಎಂದರೆ ಕರೆ ಎಂಬ ಅರ್ಥದ ಪದವೇ ಅಗಿದೆ. "ಹೊಳೆ" ಮತ್ತು "ಹಳ್ಳ" ಗಳು ಹರಿಯುವ ನೀರಿನ ಮೂಲಗಳಾಗಿವೆ. ವಡ್ಡು, ಬೆಡು, ಹೊಳೆ ಮತ್ತು ಹಳ್ಳ ಘಟಕಗಳುಳ್ಳ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು ಈ ಕೆಳಗಿನಂತವೆ.

ವಡ್ಡು	**ಚೇಡು**	**ಹಳ್ಳ**
ವಡ್ಡು	ಕಮ್ಮರಚೇಡು	ಹಳಕುಂದಿ
ವಡ್ಡರಹಟ್ಟೆ	ಕರಿಚೇಡು	

೫.೯(೪) ಕುಂಟ-ಗುಂಡಿ-ಹಗರಿ:

'ಕುಂಟೆ' ಎಂದರೆ ಕನ್ನಡದಲ್ಲಿ ನೀರು ನಿಲ್ಲುವ ಕುಳಿ, ಕಟ್ಟೆ ಎಂಬರ್ಥಗಳಿವೆ ಆಂಧ್ರ ಪ್ರದೇಶದ ಗಡಿಗೆ ಹೊಂದಿಕೊಂಡಿರುವಂತಿರುವ ಕರ್ನಾಟಕ ಪ್ರದೇಶಗಳಲ್ಲಿ ಇದು 'ಸಣ್ಣಕೆರೆ' ಎಂಬರ್ಥದಲ್ಲಿ ಪ್ರಚಲಿತದಲ್ಲಿದೆ. 'ಕುಂಟೆ'ಯು ತೆಲುಗಿನಿಂದ ಕನ್ನಡಕ್ಕೆ ಬಂದ ಪದವಾಗಿದೆ. ಸಂಸ್ಕೃತದಲ್ಲಿ 'ಕುಂಡ' ಎಂಬ ಶಬ್ದದ ಪ್ರಯೋಗವಿದೆ. ಅಲ್ಲಿ ಅದರರ್ಥ ಹೋಮ ಕಾರ್ಯಕ್ಕಾಗಿ ನೆಲದಲ್ಲಿ ಮಾಡಿದ ಕುಣಿ ಮತ್ತು ಜಲಾಶಯ ಎಂಬರ್ಥವಿದೆ. ಬಳ್ಳಾರಿ ತಾಲೂಕಿನ ವ್ಯಾವಹಾರಿಕ ಕನ್ನಡದಲ್ಲಿ 'ಗುಂಡಿ' ಎಂದರೆ ಬೆಳ್ಳಿ ಕೊಳ. ತಗ್ಗು ಎಂಬರ್ಥಗಳಿವೆ. ಸಂಸ್ಕೃತದ 'ಕುಂಡ'ದಿಂದ ಈ ಶಬ್ದ ನಿಷ್ಪನ್ನವಾಗಿದೆ. ಹಗರಿ ಎಂಬುದು ಜಿಲ್ಲೆಯ ವ್ಯಾವಹಾರಿಕ ಕನ್ನಡದಲ್ಲಿ ನೀರಿನ ಚಿಕ್ಕ ತೊರೆ ಎಂಬರ್ಥದಲ್ಲಿ ಬಳಕೆಯಾಗುತ್ತಿದೆ.

ಕುಂಟೆ	**ಗುಂಡಿ**	**ಬಾವಿ**	**ಹಳ್ಳ**
ಜಾನೆಕುಂಟೆ	ಕೊರ್ಲಗುಂದಿ	ಓರುವಾಯಿ	ಹಗರಿ
ಬೊಬ್ಬಕುಂಟ	ಹಲಕುಂದಿ		
ಬೊಟ್ಟಕುಂಟ	ಕೆಸರಕೊಂಡಿ		

೫.೫(೯) ಬೆಂಚೆ-ಕೊಳ-ಕೊಂಡ-ದರ:

ಕನ್ನಡದಲ್ಲಿ "ಬೆಂಚೆ" ಎಂಬ ಪದಕ್ಕೆ ಚಿಕ್ಕ ಹೊಂಡ, ಕುಂಟೆ ಎಂಬ ಕೋಶಾರ್ಥಗಳಿವೆ. ಇದು ಅಚ್ಚಕನ್ನಡದ ಪದವಾಗಿದೆ. ಕೊಳ. ಕೊಂಡ ಮತ್ತು ದರ ಎಂಬ ರೂಪಗಳು ಕೆರೆ, ಹೊಂಡ, ಹಳ್ಳ, ನೀರು ನಿಲ್ಲುವ ಕುಳಿ ಎಂಬರ್ಥಗಳನ್ನು ಪಡೆದವುಗಳಾಗಿವೆ. ಈ ಘಟಕಗಳು ಬಳಕೆಯಾಗಿರುವ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳನ್ನು ಈ ಕೆಳಗಿನಂತಿವೆ:

ಬೆಂಚೆ	**ಕೊಳ**
ಜಾಲಿಬೆಂಚೆ	ಕೊಳಗಲ್ಲು

೫.೯(೧) ಸಾಗರ-ಸಮುದ್ರ-ಕುದುರು-ಕುರು:

ಕನ್ನಡದಲ್ಲಿ ಸಾಗರ ಎಂಬ ಪದದ ಕೋಶಾರ್ಥ ಕಡಲು, ಸಮುದ್ರ ಎಂದಿರುವುದಾದರೂ ಜಲಾಶಯ ಎಂಬರ್ಥವೂ ಇದೆ. ಸಮುದ್ರ ಎಂಬ ಪದವು ಇದೇ ಅರ್ಥವನ್ನು ನೀಡುತ್ತದೆ. ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ಬಳಸಲ್ಪಟ್ಟಿರುವ ಈ ಶಬ್ದಗಳು ಕೆರೆ, ಕಟ್ಟೆ ಎಂಬ ಅರ್ಥವನ್ನೇ ನಿರ್ದೇಶಿಸುತ್ತವೆ. ಕದುರು ಎಂಬ ಶಬ್ದವೂ ಜಲ ಸಂಬಂದವಾಚಿಯಾಗಿದೆ. ತುಳು ಭಾಷೆಯಲ್ಲಿ ಈ ಪದದ ಅರ್ಥ (a small or long mound surrounded by water) ನೀರಿನಿಂದಾವೃತ್ತವಾದ ಪ್ರದೇಶ ಎಂದಿದೆ (೧೧) ಕನ್ನಡದಲ್ಲಿ ಕುದುರು ಎಂಬ ರೂಪವು (low ground, bed of strem) ಎಂಬಾರ್ಥವನ್ನು ಪಡೆದುದಾಗಿದೆ,ಎಂದು ಇಮ್ಯಾನೂ ಮತ್ತು ಬರೋ ವಿದ್ವಾಂಸರು ಸೂಚಿಸಿದ್ದಾರೆ(೧೨) ಕುರುವ ಪದವೂ ಸಹ ಕುದುರು ಪದದ ಅರ್ಥವನ್ನೇ ನೀಡುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಘಟಕಗಳು ಬಳಕೆಗೊಂಡಿರುವ ಸ್ಥಳನಾಮಗಳು ಈ ಕೆಳಕಂಡಂತಿವೆ.

ಸಾಗರ	**ಸಮುದ್ರ**	**ಕುರು(ವ)**
ಸೋಮಸಮುದ್ರ	ಕುಡದಹಾಳ	ಕುದುರು
		ಕುರುವಳ್ಳಿ

೫.೯(೧೧) ಮುಡು-ಬಾಣ:

"ಮಡು" ಎಂದರೆ ನದಿ, ಹೊಳೆ ಮುಂತಾದವುಗಳ ಆಳವಾದ ನೀರಿರುವ ಪ್ರದೇಶ ಎಂದು ಕೋಶಾರ್ಥಗಳಿವೆ(೧೩). ತಾಲೂಕಿನ ಸ್ಥಳನಾಮಗಳಲ್ಲಿ ಆಳವಾದ ನೀರಿನ ಗುಂಡಿ ಅಥವಾ ಕೊಳದಂತಹ ಪ್ರದೇಶಕ್ಕೆ ಸಂಕುಚಿತಾರ್ಥದಲ್ಲಿ ಈ ಪದಗಳು ಬಳಕೆಗೊಂಡಿವೆ. ಬಾಣ ಎಂದರೆ (sky, cloud, rain) ಎಂಬರ್ಥವನ್ನು ಎಮ್ಯಾನ್ಯೂ ಮತ್ತು ಬರೋ

ರವರು ಸೂಚಿಸಿದ್ದಾರೆ. (Ded-4410) ಜಿಲ್ಲೆಯ ಸ್ಥಳನಾಮಕ್ಕೆ ಸಂಬಧಿಸಿದಂತೆ ಮಳೆ ಬಿದ್ದು ಹೆಚ್ಚು ನೀರು ಶೇಖರಣೆಗೊಳ್ಳುವ ಪ್ರದೇಶ ಎಂಬ ಅರ್ಥವನ್ನು ಇಟ್ಟುಕೊಳ್ಳುವುದು ಸರಿಯೆನಿಸುತ್ತದೆ. ಈ ಘಟಕಗಳು ಪ್ರಯೋಗೊಂಡಿರುವ ಸ್ಥಳನಾಮಗಳು ಇಂತಿವೆ.

ಮಡು	**ಬಾಣ**
ಮನ್ನೇರ ಮಸಲಮುಡು	ಬಾಣಾಪುರ

೬ ಸಸ್ಯವಾಚಕ ಸ್ಥಳನಾಮಗಳು:

ಪ್ರಾಚೀನ ಕಾಲದಿಂದಲೂ ಮಾನವನು ತರು, ಮರಮ ಲತಾದಿಗಳ ಬಗ್ಗೆ ಒಂದು ರೀತಿಯ ಆರಾಧನಾ ಮನೊಭಾವ ಮತ್ತು ಪೂಜಿಸುವ, ಪ್ರಾರ್ಥಿಸುವ ಪದ್ಧತಿಯನ್ನು ಬೆಳೆಸಿಕೊಂಡು ಬಂದಿದ್ದಾನೆ. ಮಾನವನು ಅಲೆಮಾರಿಯಾಗಿ ಕಾಡು ಮೇಡುಗಳನ್ನು ಅಲೆದು ಪ್ರಾಣಿ ಮಾಂಸವನ್ನು ಭಕ್ಷಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದವನು. ಅನಂತರ ಗುಹೆಗಳಲ್ಲಿ ಒಂದೆಡೆ ವಾಸಿಸಿ ಅರೆ ಅಲೆಮಾರಿಯಾಗಿ ಜೀವನವನ್ನು ಆರಂಭಿಸಿದ ಮೇಲೆ ಹಟ್ಟಿಗಳನ್ನು ನಿರ್ಮಿಸಿಕೊಂಡು ನೆಲೆ ನಿಲ್ಲಲು ತೊಡಗಿದನು. ಭಾರತದಲ್ಲಿ ಹೀಗೆ ದ್ರಾವಿಡ ಜನವರ್ಗವೇ ಮೊದಲು ನೆಲೆಗಳನ್ನು ನಿರ್ಮಿಸಿಕೊಂಡು ವಾಸಿಸತೊಡಗಿದರೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಮೊಟ್ಟ ಮೊದಲು ಈ ಜನರು ತಮ್ಮ ವಾಸದ ನೆಲೆಗಳನ್ನು ಗಿಡ, ಮರಗಳ ಆಸು ಪಾಸಿನಲ್ಲಿ ಕಟ್ಟಿಕೊಂಡರು ಏಕೆಂದರೆ ಗಿಡ ಮರಗಳು ದೈವಿಕ ನೆಲೆಗಳೆಂಬ ಭಾವನೆ ಅವರಲ್ಲಿತ್ತು. ಇಂಥ ಒಂದು ಪದ್ಧತಿಯನ್ನು ಆರ್ಯ ಜನಾಂಗಗಳಲ್ಲೂ ಕಾಣಬಹುದಾಗಿದೆ. ವಿಶೇಷವೆಂದರೆ, ಇಡೀ ಸಸ್ಯ ವರ್ಗಗಳೆಲ್ಲಾ ಧಾರ್ಮಿಕ ಹಿನ್ನೆಲೆಯಿಂದ ವನ ದೇವತೆ ಎಂದು ಅವನಿಂದ ಭಾವಿಸಲ್ಪಟ್ಟಿದ್ದವು. ಒಂದೊಂದು ಜನಾಂಗದ ಮೂಲ ಪುರುಷನು ಒಂದೊಂದು ಮರದಲ್ಲು ಹುಟ್ಟು ಬಂದವನೆಂಬ ಭಾವನೆ ಇತಿಹಾಸ ಕಾಲದಲ್ಲಿ ಇದ್ದುದರಿಂದಾಗಿ ಆಯಾ ಜನಾಂಗಗಳು ತತ್ಸಂಬಂಧಿ ವೃಕ್ಷಗಳ ಅರಾಧನೆ ಮಾಡತೊಡಗಿದರು. ಹೀಗಾಗಿ ತಮ್ಮ ವಾಸದ ನೆಲೆಗಳಿಗೆ ಇಂತಹ ವೃಕ್ಷಗಳಿಂದ ಆರಾಧನೆ ಮಾಡತೊಡಗಿದರು. ಹೀಗಾಗಿ ತಮ್ಮ ವಾಸದ ನೆಲೆಗಳಿಗೂ ಇಂತಹ ವೃಕ್ಷಗಳಿಂದ ಹೆಸರುಗಳನ್ನು ನೀಡಿರಬಹುದಾದ ಸಾಧ್ಯತೆಗಳಿವೆ. ಅದ್ದರಿಂದ, ವೃಕ್ಷವಾಚಕ ಸ್ಥಳನಾಮಗಳು ವೈಲಕ್ಷ್ಯಣ್ಯ ಮಾತ್ರವಲ್ಲದೆ ಸಾಂಸ್ಕೃತಿಕ ಜೀವನ ಪದ್ಧತಿಯನ್ನು ಬಿಂಬಿಸುವಂತಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಗೆ ಸೂಚಿತವಾದ ಕೆಲವು ವೃಕ್ಷಗಳು ದೈವಿಕ ನೆಲೆ ಎಂದು ಭಾವಿಸಲಾಗಿದ್ದು, ಅವುಗಳ ಹೆಸರುಗಳಲ್ಲಿ ಕೆಲವು ಸ್ಥಳನಾಮಗಳು ತೋರಿ ಬಂದಿವೆ.

೬(೧) ಆಲ-ಅರಳಿ-ರಾವಿ-ಅತ್ತಿ:

"ಆಲ" ಎಂಬ ಪದವು ಮೂಲ ದ್ರಾವಿಡ ಸಂಬಂದಿ ಪದವಾಗಿದೆ. ತಮಿಳು, ಮಲಯಾಳಂ, ಕೊಲಾಮಿ, ಕನ್ನಡ. ಕೊಡಗು, ಮೊದಲಾದ ಸೋದರ ಭಾಷೆಗಳಲ್ಲಿ ಅಲ್, ಅಯಿಲ್, ಮುಂತಾದ ಜ್ಞಾತಿ ಪದಗಳಿದ್ದು ಆಲ (Ficus bengalensis) ಎಂಬ ಅರ್ಥವನ್ನು ಹೊಂದಿದ್ದರೂ ಪರ್ಜಿ,ಗೊಂಡಿ ಮೊದಲಾದ ಭಾಷೆಗಳಲ್ಲಿ ಇವರ ಜ್ಞಾತಿ ಪದಗಳು ಅರಳಿ (Religious Linn) ಎಂಬ ಅರ್ಥವನ್ನು ಪಡೆದಿವೆ(೧೪). ಅದ್ದರಿಂದ ಆಲವು ಅರಂಭದಲ್ಲಿ ಆಲ ಮತ್ತು ಅರಳಿ ಎರಡಕ್ಕೂ ಸಂಬಂದಪಟ್ಟ ಪದವಾಗಿರಬೇಕು. ದ್ರಾವಿಡ ಜನಾಂಗದವರಿಗೆ ಆಲ ಹಾಗೂ ಅರಳಿ ವೃಕ್ಷಗಳು ದೈವಿಕ ನೆಲೆಗಳು ಎಂಬ ಭಾವನೆ ಇದ್ದುದರಿಂದ ಇವುಗಳ ಆಸುಪಾಸಿನಲ್ಲಿ ತಮ್ಮ ನೆಲೆಗಳನ್ನು ಕಟ್ಟಿಕೊಂಡಿದ್ದರು. ಆದ್ದರಿಂದ ಈ ಭಾಷಾವರ್ಗದ ಜನ ವಸತಿ ಪ್ರದೇಶಗಳಳೆಲ್ಲಲ್ಲಾ ಆಲಕ್ಕೆ ಸಂಬಂದಿಸಿದ ಸ್ಥಳನಾಮಗಳು ಕಾಣಿಸುತ್ತವೆ. ತೆಲುಗು ಭಾಷೆಯಲ್ಲಿ ಆಲ, ಅರಳಿ ಗಳಿಗೆ "ರಾವಿ" ಎಂಬ ಪದದ ಬಳಕೆ ಉಂಟು ತಮಿಳು, ಮಲೆಯಾಳಂ ಭಾಷೆಗಳಲ್ಲಿ ಅರಕ, ಅರಕು, ಅರಯಾಲ್ ಎಂಬ ಪ್ರಯೋಗಳುಂಟು[೧೫] ಬಳ್ಳಾರಿ ಜಿಲ್ಲೆಯ ತೆಲುಗು ಸೀಮಾ ಪ್ರದೇಶದಲ್ಲಿನ ಸ್ಥಳನಾಮಗಳಲ್ಲಿ "ರಾವಿ" ಪದವೂ ಕಾಣಿಸಿಕೊಳ್ಳುತ್ತವೆ. ತೆಲುಗು ಭಾಷಾ ಪ್ರಭಾವ ಈ ಭಾಗದ ಜನರ ಭಾಷೆಯ ಮೇಲೆ ಆಗಿರುವುದನ್ನು ಇದು ತೋರಿಸುತ್ತದೆ. ಅತ್ತಿ ಎಂಬ ಪದದ ಅರ್ಥ ಆಲದ ಜಾತಿಯ ಒಂದು ಮರ ಎಂದು ಕೆಲವು ಸ್ಥಳನಾಮಗಳು ಕೆಳಗಿನಂತಿವೆ.

ಆಲ	ಅತ್ತಿ
ಆಲದಹಳ್ಳಿ	ಕುರುವತ್ತಿ

೬.೨ ಬೇವು-ಬನ್ನಿ:

ಪ್ರಾಚೀನ ಕಾಲದಿಂದಲೂ ಮಾನವನು ಬೇವಿನ ಮತ್ತು ಬನ್ನಿಯ ಮರವನ್ನು ಆರಾಧನಾ ಭಾವದಿಮದ ಪೂಜಿಸುತ್ತಾ ಬಂದಿದ್ದಾನೆ. ಇವುಗಳ ಬಗ್ಗೆ ಅವನಿಗೆ ದೈವಿಕ ಭಾವನೆ ನೆಲೆಸಿದ್ದರಿಂದ ಈ ವೃಕ್ಷಗಳ ಎಡೆಗಳಲ್ಲಿಯೇ ತನ್ನ ವಾಸದ ನೆಲೆಗಳನ್ನು ಅವನು ಸ್ಥಾಪಿಸಿಕೊಂಡಿದ್ದಾನೆ. ಬೇವು ಮತ್ತು ಬನ್ನಿಯ ಮರಗಳು ಆಯುರ್ವೇದ ಔಷಧಿ ಗುಣಗಳನ್ನು ಕೂಡಾ ಪಡೆದಿರುವುದರಿಂದ ಅವುಗಳ ಮಹತ್ವತೆಯನ್ನು ಅರಿತು ಪೋಷಣೆಯನ್ನು ಮಾಡುತ್ತಾ ಬಂದಿರುವುದು ಕಾಣುತ್ತೇವೆ. ಬೇವಿನ ಮರವನ್ನು ದುರ್ಗಮ್ಮ, ದುರ್ಗಾಮಾತೆ ಎಂತಲೂ ಬನ್ನಿ ಮರವನ್ನು ಬನ್ನಿ ಮಾಂಕಾಳಮ್ಮ ಎಂತಲೂ ಬಳ್ಳಾರಿ ತಾಲೂಕಿನ ಜನಗಳು ಪೂಜಿಸುವುದು ಇಂದಿಗೂ ವಾಡಿಕೆಯಲ್ಲಿದೆ. ಇವುಗಳ ಮರ ಮಟ್ಟುಗಳು ವಾಸದ ನೆಲೆಗಳಿಗೆ

ಉಪಯೋಗ ಮಾಡಲು ಬರುವ ಲೌಖಿಕದೃಷ್ಟಯಿಂದಲೂ ಬೇವು ಮತ್ತು ಬನ್ನಿ ಮರಗಳಿಗೆ ಅವನು ಪ್ರಾಮುಖ್ಯತೆಯನ್ನು ನೀಡಿರುವ ಸಾಧ್ಯತೆಗಳಿವೆ. ತಾಲೂಕಿನ ಬಹುತೇಕ ಗ್ರಾಮಗಳಲ್ಲಿ ಬೇವಿನ ಇಲ್ಲವೇ ಬನ್ನಿಯ ವೃಕ್ಷಗಳು ಮಾರಮ್ಮನ(ದುರ್ಗಮ್ಮ) ದೇವಸ್ಥಾನಗಳ ಮುಂಭಾಗದಲ್ಲಿ ಬೆಳೆಸಿರುವುದನ್ನು ಕಾಣಬಹುದಾಗಿದೆ. ಇಲ್ಲಿ ಬೇವು ವೃಕ್ಷವಾಚಕ ಪದವಾಗಿಯೂ ಬಳಕೆಗೊಂಡಿದೆ. ಬೇವು ಮತ್ತು ಬನ್ನಿ ಘಟಕಗಳನ್ನೊಳಗೊಂಡ ಜಿಲ್ಲೆಯ ಕೆಲವು ಸ್ಥಳನಾಮಗಳು ಇಲ್ಲವೆ.

ಬೇವು

ಕಕ್ಕಬೇವಿನಹಳ್ಳಿ

ಬೇವಿನಹಳ್ಳಿ

ಬೇವಿನ ಮರದ ಸೂಗುರು

೬.೩ ಮಾವು-ಮತ್ತಿ-ಜಾಲ:

ಬಳ್ಳಾರಿ ಜಿಲ್ಲೆಯಲ್ಲಿ ಮಳೆ ಬೀಳುವಿಕೆಯ ಪ್ರಮಾಣವು ಕಡಿಮೆ ಇದ್ದು ವರ್ಷದಲ್ಲಿ ಆರು ತಿಂಗಳುಗಳಿಗಿಂತಲೂ ಹೆಚ್ಚು ಕಾಲ ಒಣ ಹವೆ ಇರುತ್ತದೆ. ಇಂಥ ಕಡೆಗಳಲ್ಲಿ ಕಳ್ಳಿ, ಕುರುಚಲು ಗಿಡಗಳು ಮಾವು, ಮತ್ತಿ, ಜಾಲ ಮುಂತಾದ ಮರಗಳು ಬೆಳೆದ ಒಣ ಕಾಡುಗಳನ್ನು ಕಾಣಬಹುದು. ಇಲ್ಲಿನ ಮಾನವನು ತಾನು ವಾಸಿಸುವ ಸ್ಥಳಗಳಿಗೆ ಹೇರಳವಾಗಿ ಕಂಡು ಬರುವ ಈ ರೀತಿಯ ಗಿಡಿಮರಗಳ ಹೆಸರುಗಳನ್ನು ನೀಡಿದ್ದಾನೆ. ಇವುಗಳ ಅವನ ವಾಸದ ನೆಲೆಗಳ ವೈಲಕ್ಷಣಗಳನ್ನು ಬಿಂಬಿಸುತ್ತವೆ. ಮಾವು ಮತ್ತು ಮತ್ತಿ ಮತ್ತು ಜಾಲಿ ಪದ ಘಟಕಗಳುಳ್ಳ ಬಳ್ಳಾರಿ ತಾಲೂಕಿನ ಸ್ಥಳನಾಗಳು ಕೆಳಗಿನಂತೆ ಇವೆ.

ಮಾವು	**ಮತ್ತಿ**	**ಜಾಲಿ**
ಮಾವಿನಹಳ್ಳಿ	ಮತ್ತಿಹಳ್ಳಿ	ಜಾಲಿಬೆಂಚೆ
ಮಾಂಗೊಳ>ಮಾಗಳ	ಜಾಲಿಹಾಳ	

೬.೪ ಬ್ಯಾಲ-ಹುಣಸಿ-ಚಿಂತ:-

ಪ್ರಾಚೀನ ಮಾನವನು ತನ್ನ ನೆಲೆಗಳನ್ನು ಗುರುತಿಸಲು ಅಲ್ಲಿಯ ಪರಿಸರದ ವೈಶಿಷ್ಟ್ಯ ಬಿಂಬಕವಾದ ಬೇಲ, ಹುಣಸಿ ಮೊದಲಾದ ಮರಗಳ ಹೆಸರುಗಳನ್ನೇ ಸ್ಥಳನಾಮಗಳಲ್ಲಿ ಸ್ಥಾಯಿಯಾಗಿಸಿದ್ದಾನೆ. ಅಂಥ ಒಂದೆರಡು ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಬ್ಯಾಲ ಎಂಬುದು ಬೇಲ ಎಂಬುದರ ಧ್ವನಿ ಬದಲಾವಣೆ ರೂಪ. ಬೇಲಕ್ಕೆ ಕನ್ನಡದಲ್ಲಿ ಬೆಳವಲ, ಬೆಳಲ, ಬೆಳವಲ್ ಎಂಬಾರ್ಥಗಳನ್ನು ವಿದ್ವಾಂಸರು ಸೂಚಿಸಿದ್ದಾರೆ.(೧೬) ಸೋದರ

ಸಂಬಂದಿ ಭಾಷೆಗಳಲ್ಲಿ ಇದಕ್ಕೆ ವೆಳ್ಳಿಲ್, ವಿಳಾ, ವೆಳಗ ಎಂಬ ರೂಪಗಳುಂಟು. (Feronia elephantum) ವೃಕ್ಷ ಜಾತಿಯ ಈ ಬೇಲಕ್ಕೆ ಸಂಸ್ಕೃತದ "ಬಿಲ್ವ"ವೇ ಮೂಲವಾದದು ಎಂದು ವಿದ್ವಾಂಸರು ಅಭಿಮತವಾಗಿದೆ. ಹುಣಸಿ ಬಳ್ಳಾರಿ ಜಿಲ್ಲೆಯಲ್ಲಿ ವಿಶೇಷವಾಗಿ ಎಲ್ಲಾ ಕಡೆಗಳಲ್ಲಿಯೂ ಹೇರಳವಾಗಿಯೂ ಕಾಣಸಿಗಿವ ವೃಕ್ಷ. ಇದು ಮಾನವನಿಗೆ ನಿತ್ಯೋಪಯೋಗಿ ಹಣ್ಣನ್ನು ನೀಡುವ ವೃಕ್ಷವಾಗಿದೆ. ಹಲವಾರು ಕಡೆಗಳಲ್ಲಿ ಈಗಲೂ ಹುಣಸೆಯ ತೋಟಗಳನ್ನು ನೋಡಬಹುದಾಗಿದೆ. ಹುಣಸೆಗೆ ಸೋದರ ಭಾಷೆಗಳಲ್ಲಿ ಪುಳಿಪ್ಪ್, ಪುಳಿ, ಪುಲುಪು, ಪುಲ್ಲೆ ಎಂಬ ಜ್ಞಾತಿಪದ್ದತಿಗಳಿವೆ. ಕನ್ನಡದಲ್ಲಿ ಪುಣಸಿ, ಹುಣಸಿ ಎಂಬ ಪದಗಳು ಬಳಕೆಯಲ್ಲಿವೆ. ಆಂಧ್ರ ಪ್ರದೇಶದ ಗಡಿ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ವಾಸಿಸುವ ಜನಗಳ ಮೇಲೆ ತೆಲುಗು ಭಾಷೆಯ ಪ್ರಭಾವ ಉಂಟಾಗಿರುವುದರಿಂದ ಅವರ ಭಾಷೆಯಲ್ಲಿ ಹುಣಸೆ ಎಂಬ ಪದಕ್ಕೆ ಬದಲಿಯಾಗಿ "ಚಿಂತ" ಎಂಬ ಪದ ಪ್ರಯೋಗವನ್ನು ಕಾಣಬಹುದು.ಚಿಂತ ಎಂಬುದು ತೆಲುಗಿನಿಂದ ಎರವಲು ಪಡೆದ ಶಬ್ದವಗಿದೆ. ತೆಲುಗಿನಲ್ಲಿ ಚಿಂತ ಎಂದರೆ ಹುಣಸೆ ಎಂದು ಅರ್ಥವಿದೆ.(೧೭) ಬಳ್ಳಾರಿ ಜಿಲ್ಲೆಯ ಸ್ಥಳನಾಗಳಲ್ಲಿ ಬ್ಯಾಲ, ಹುಣಸೆ ಮತ್ತು ಚಿಂತ ಘಟಕಗಳುಳ್ಳ ಒಂದೆರಡು ಸ್ಥಳನಾಮಗಳು ಕೆಳಗಿನಂತೆವೆ.

ಬ್ಯಾಲ	**ಹುಣಸಿ**	**ಚಿಂತ**
ಬ್ಯಾಲ ಹುಣಸಿ	ಹುಣಸಿಕಟ್ಟೆ	ಬ್ಯಾಲಚಿಂತ
ಬ್ಯಾಲಚಿಂತ	ಬ್ಯಾಲ ಹುಣಸಿ	ಕೊಟ್ಟಾಲ ಚಿಂತ
		ಚಿಂತಪಲ್ಲಿ

೬.೫ ಜೋಳ-ನೆಲ್ಲು-ತೊಗರಿ:

ಜೋಳ, ನೆಲ್ಲು ಮತ್ತು ತೊಗರಿ ಎಂಬ ಪದಗಳು ಪ್ರಯೋಗಗೊಂಡಿರುವ ಕೆಲವು ಸ್ಥಳನಾಮಗಳು ಬಳ್ಳಾರಿ ತಾಲೂಕಿನಲ್ಲಿವೆ. ಈ ಪ್ರದೇಶದಲ್ಲಿ ಈ ಬೆಳೆಗಳು ವಿಶೇಷವಾಗಿರಬೇಕು. ಎಂತಲೇ ಅಲ್ಲಿಯ ವೈಶಿಷ್ಯಗಳುನ್ನು ಅಂದಿನ ಮಾನವನು ಸ್ಥಳಗಳಿಗೆ ಹೆಸರು ನೀಡುವುದರ ಮೂಲಕ ಸ್ಥಾಯಿಗೊಳಿಸಿದ್ದಾನೆ. ಅಂತಹ ಕೆಲವು ಸ್ಥಳನಾಮಗಳು ಪಟ್ಟಿ ಮಾಡಿದೆ. ನೆಲ್ಲು ಎಂದರೆ ಭತ್ತ ಎಂಬ ಅರ್ಥವಿದೆ. ತಮಿಳು, ಮಲೆಯಾಳಂನಲ್ಲಿ ನೆಲ್, ಕೊಡಗು ಭಾಷೆಯಲ್ಲಿ "ನೆಲ್ಲಿ" ಎಂಬ ಸಮಾನಾರ್ಥಕ ಪದಗಳಿವೆ.(೧೮)

ಜೋಳ	**ನೆಲ್ಲು**
ಜೋಳದರಾಶಿ	ನೆಲ್ಲುಡಿ
	ನೆಲ್ಲು ಕುದರಿ

೬.೬ ರಾಗಿ–ಬದನೆ:

ರಾಗಿಯು ಸಾಮಾನ್ಯ ಜನರ ಆಹಾರ ಧಾನ್ಯವಾಗಿದೆ. ಅಂತೆಯೇ ಬದನೆಯೂ ಕೂಡಾ ಸಾಮಾನ್ಯರ ತರಕಾರಿ. ಬಳ್ಳಾರಿ ಜಿಲ್ಲೆಯಲ್ಲಿ ರಾಗಿ ಮತ್ತು ಬದನೆ ಘಟಕಗಳುಳ್ಳ ಒಂದೆರಡು ಸ್ಥಳನಾಮಗಳಿದ್ದು ಅವು ವೈಲಕ್ಷಣ್ಯ ಸೂಚಕಗಳಾಗಿ ಬಳಕೆಗೊಂಡಿವೆ. ಬದನೆ ಎಂಬ ಪದಕ್ಕೆ "ಗಜ್ಜಿ" ಎಂಬ ಪದವು ತೆಲುಗಿನಲ್ಲಿ ಬಳಕೆಯಾಗಿದ್ದಿರಬೇಕು. ಈ ಗಜ್ಜಿ ಪ್ರಯೋಗಗೊಂಡಿರುವ ಸ್ಥಳನಾಮವೊಂದು ಬಳ್ಳಾರಿ ಜಿಲ್ಲೆಯಲ್ಲಿ ಲಭ್ಯವಿದೆ. ತೆಲುಗು ಭಾಷೆಯ ಪ್ರಭಾವದಿಂದಾಗಿ ಗಜ್ಜಿ ಪದ ಪ್ರಯೋಗಗೊಂಡಿರುವ ಸಾದ್ಯತೆಯಿದೆ. ಕಿಟ್ಟೆಲ್‌ರವರು ಗಜ್ಜಿ ಎಂಬ ಪದಕ್ಕೆ "ಬದನೆ" ಎಂಬರ್ಥವನ್ನು ಸೂಚಿಸಿದ್ದಾರೆ.(೧೯) ರಾಗಿ ಮತ್ತು ಬದನೆ ಘಟಕಗಳುಳ್ಳ ಬಳ್ಳಾರಿ ಜಿಲ್ಲೆಯ ಒಂದೆರಡು ಸ್ಥಳನಾಮಗಳು ಕೆಗಿನಂತವೆ.

ರಾಗಿ	**ಬದನೆ**
ರಾಗಿ ಮುಸಲ್ವಾಡ	ಗಜ್ಜಿಗನಹಾಳು
	ಬದನ ಹಟ್ಟಿ

೭ ಪ್ರಾಣಿವಾಚಕ ಸ್ಥಳನಾಮಗಳು:

ಪ್ರಾಚೀನ ಮಾನವನು ಬೆಳವಣಿಗೆಯ ಅಂಶವನ್ನು ಕುರುತು ವಿವೇಚಿಸುವಾಗ ಅವನು ಪ್ರಾಣಿ, ಪಶು, ಪಕ್ಷಿಗಳ ಒಡನಾಟದಲ್ಲಿಯೇ ಬೆಳೆದು ಬಂದಿರುವುದು ವೇದ್ಯವಾಗುತ್ತದೆ. ಈ ಪ್ರಾಣಿಗಳು ಎಂದಿನಿಂದಲೂ ಅವನ ಸಹಚರ ಜೀವಿಗಳಾಗಿವೆ. ಎತ್ತು, ಹಸು, ಎಮ್ಮೆ ಕೋಣ, ಕೋಳಿ, ಗಿಳಿ, ಗುಬ್ಬಿ, ಬೆಕ್ಕು, ನವಿಲು ಇಂಥ ಜೀವಿಗಳೊಂದಿಗೆ ಬದುಕು ಸಾಗಿ ಬಂದಿದೆ. ಆನೆ, ಜಿಂಕೆ, ಮಂಗ, ಹಾವು, ಮೀನು ಮೂಸಳೆ, ಹುಲಿ, ಕರಡಿ, ಹಂದಿಗಳೂ ಅವನ ಸುದೀರ್ಘ ಬದುಕಿನ ಸತತ ಹೋರಾಟದಲ್ಲಿ ಕಾಣಿಸಕೊಂಡಿವೆ. ಹಸು, ಎಮ್ಮೆ, ಎತ್ತು, ಕೋಣ, ಕೋಳಿ, ಹಂದಿ ಮೋದಲಾದ ಸಾಕು ಪ್ರಾಣಿಗಳಂತೂ ಅವನ ಬದುಕಿಗೆ ಅನಿವಾರ್ಯವೆನಿಸಿ ಆಹಾರವನ್ನೊದಗಿಸುತ್ತ ಬಂದಿವೆ. ಕೆಲವು ಪ್ರಾಣಿಗಳಲ್ಲಿ ದೈವಿಕ ಅಂಶಗಳನ್ನು ಪರಿಭಾವಿಸಿಕೊಂಡಿರುವದರಿಂದ ಅವುಗಳು ಮಾನವನಿಗೆ ದೈವದ ಪ್ರತೀಕಗಳಾಗಿ ಉಳಿದು ಬಂದಿವೆ. ಹಾವು, ಹುಲಿ ಚಿರತೆಯಂತ ಜೀವಗಳು ಪ್ರಾಚೀನ ಮಾನವನ ಜೀವ ಭಯವನ್ನು ಹುಟ್ಟಿಸಿ ಅವನ ದೈವಿಕ ಭಾವನೆಗೆ ಕಾರಣವಾದರೆ, ಹಸು, ಎತ್ತು, ಕರಡಿ, ಹಂದಿ ಕೋಣಗಳಂತಹ ಜೀವಿಗಳು ಪೌರಾಣಿಕ ಪ್ರಸಂಗಗಳೊಂದಿಗೆ ದೈವಿಕ ರೂಪದಲ್ಲಿ ಬೆರೆತು ದೇವತೆಗಳೆನಿಸಿವೆ. ಹಸು ಗೋಮಾತೆಯಾಗಿ, ಎತ್ತು ನಂದೀಶ್ವರನಾಗಿ ಕರಡಿ ಜಾಂಬವಂತನಾಗಿ ಮತ್ತು ಹಂದಿಯು ವಿಷ್ಣು–ವರಾಹಿಯಾಗಿದ್ದಾನೆ. ಕೆಲವು ಪ್ರಾಣಿ ಪಕ್ಷಿಗಳು

ಜನರಿಗೆ ಶುಭ ಲಕ್ಷಣಗಳನ್ನು ಸೂಚಿಸುವ ಜೀವಿಗಳಾಗಿವೆ. ಸಾಮಾನ್ಯವಾಗಿ ಭಾರತೀಯ ಸ್ಥಳನಾಮ ಅಧ್ಯಯನದಲ್ಲಿ ಪ್ರಾಣಿವಾಚಕ ಸ್ಥಳನಾಮಗಳನ್ನು ವೈಲಕ್ಷಣ್ಯವಾಚಕ ಸ್ಥಳನಾಮಗಳೆಂದೇ ಅಭ್ಯಾಸಿಸಲಾಗುತ್ತಿದೆ. ಎಲ್ಲಾ ಖಗಮೃಗಗಳೂ ಮೊದಲಲ್ಲಿ ವೈಲಕ್ಷಣ್ಯವಾಚಕಗಳೇ ಆಗಿವೆ. ಆನಂತರದಲ್ಲಿ ಮಾನವನ ಬದುಕು ಸಾಂಸ್ಕೃತಿಕವಾಗಿ ವಿಕಸನ ಹೊಂದಿದಂತೆಲ್ಲಾ ಅರ್ಥ ವ್ಯಾಪ್ತಿ ಹಿಗ್ಗುತ್ತ ಬಂದಿವೆ. ಬಳ್ಳಾರಿ ಜಿಲ್ಲೆಯಲ್ಲಿ ವೈಲಕ್ಷಣ್ಯ ಸೂಚಕ ಹಾಗೂ ಧರ್ಮಬಳಿ ಸೂಚಕವಾದ ಕೆಲವು ಪ್ರಾಣಿ, ಪಶು, ಪಕ್ಷಿಗಳ ಹೆಸರಿನಲ್ಲಿ ಸ್ಥಳನಾಮಗಳು ಕಂಡು ಬರುತ್ತವೆ.

೭.೧ ನಂದಿ–ಬಸವ–ಗಜ:

ಮಾನವನು ಆರಂಭದಲ್ಲಿ ಅಲೆಮಾರಿಯಾಗಿದ್ದುಕೊಂಡು ಕಾಡುಮೇಡುಗಳಲ್ಲಿ ಗಡ್ಡೆ, ಗೆಣಸು, ಪ್ರಾಣಿಗಳ ಹಸಿ ಮಾಂಸವನ್ನು ತಿಂದುಕೊಂಡು ಕಾಲ ಕಳೆದು ಆನಂತರ ಗುಡ್ಡ ಗವಿಗಳಲ್ಲಿ ವಾಸಿಸಲು ಆರಂಭಿಸಿ ಅರೆ ಅಲೆಮಾರಿಯಾಗಿ ಜೀವಿಯಾದ ಮೇಲೆ ಭೂಮಿಯಲ್ಲಿ ದವಸ ಧಾನ್ಯಗಳನ್ನು ಬಿತ್ತಿ ಬೆಳೆವ ಕಲೆಯನ್ನು ಕಲಿತನು. ಈ ಹಂತದಲ್ಲಿ ಅವನಿಗೆ ತನ್ನ ಸಾಕು ಪ್ರಾಣೀಗಳು ಸಹಾಯಕವಾದವು. ಅವನ ಕಾಯಕದ ಅನಿವಾರ್ಯ ಅಂಗಗಳಾದ ಪ್ರಾಣಿಗಳನ್ನು ಅವನು ಅತೀವ ಕಾಳಜಿ ಮತ್ತು ಭಕ್ತಿ ಶ್ರದ್ದೆಗಳಿಂದ ಆರಾಧಿಸಲು ತೊಡಗಿದನು. ಆನಂತರ ಅವನ ಸಾಂಸ್ಕೃತಿಕ ಜೀವನ ವಿಕಾಸನವಾದಂತೆ ಅವುಗಳನ್ನು ದೈವದ ಪ್ರತೀಕವಾಗಿ ಕಾಣತೊಡಗಿದನು. ಕಾಲ ಕ್ರಮೇಣ "ಎತ್ತು" ಅವನಿಗೆ ನಂದಿಯಾಗಿ, ನಂದೀಶ್ವರನಾಗಿ, ಬಸವ, ಬಸವಣ್ಣನಾಗೀ ಆರಾದನಾ ಮೂರ್ತಿಯಾಯಿತು. ಎತ್ತು, ನಂದಿ, ಬಸವ, ಎಂಬ ಘಟಕಗಳುಳ್ಳ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿ ಕಾಣಸಿಗುತ್ತವೆ. ನವ ಶಿಲಾಯುಗದಿಂದ ನಂದಿಯು ಅವನ ಸಹಚರ ಪ್ರಾಣಿಯಾಗಿರುವುದು ಶೃತಪಟ್ಟಿದೆ. "ಗಜ" ಎಂದರೆ ಆನೆ. ಆನೆಯು ಅವನಿಗೆ ಗಣಪತಿಯ ಅವತಾರವಾಗಿ ಕಂಡಿದೆ. ಬಳ್ಳಾರಿ ಜಿಲ್ಲೆಯ ಕಾಡುಗಳಲ್ಲಿ ಆನೆಗಳು ಕಾಣ ಸಿಗುವುದು ಅಪರೂಪ. ಆದರೂ ಆಗಾಗಲೋಮ್ಮೆ ಕಂಡ ಆನೆಯೇ ಅವನು ಅದರ ಹೆಸರನ್ನು ತನ್ನ ನೆಲೆಗಳಿಗೆ ಕೊಟ್ಟಿರುವ ಸಾಧ್ಯತೆಗಳಿವೆ. ಆನೆಯ ಹಿರಿದಾದ ಗಾತ್ರ, ಗಂಭೀರ ನಡಿಗೆ ಪ್ರಸನ್ನ ವದನವೇ ಅದರ ಬಗ್ಗೆ ಭಕ್ತಿ, ಗೌರವಾದರ ಭಾವನೆಗಳನ್ನು ಹುಟ್ಟಿಸಿರಬೇಕು. ಬಳ್ಳಾರಿ ಜಿಲ್ಲೆಯ ನಂದಿ, ಬಸವ,ಗಜ, ಎಂಬ ಘಟಕಗಳುಳ್ಳ ಸ್ಥಳನಾಮಗಳು ಕೆಳಗಿನಂತೆವೆ.

ನಂದಿ	ಬಸವ	ಗಜ
ನಂದಿಹಳ್ಳಿ	ಬಸಾಪುರ(ಹ)	ಗಜಪುರ

ನಂದಿಬೇವೂರು	ನಾಗತಿಬಸಾಪುರ	ಗಜಾಪುರ
ಬಂದಿಬಂಡು	ಬಸಾಪುರ(ಹೊ)	
ಎತ್ತಿನಟ್ಟಿ	ಬಸಾಪುರ(ಸೊಂ)	

೭.೨ ನಾಗ–ಮೀನ–ಎಣ:

ಕನ್ನಡದಲ್ಲಿ 'ನಾಗ' ಎಂಬ ಪದದ ಅರ್ಥ ನಾಗರಹಾವು ಎಂಬುದಾಗಿದೆ. ಇದನ್ನು ೮ ಮಹಾ ಸರ್ಪಗಳಲ್ಲಿ ಒಂದೆಂಬುದಾಗಿ ಪರಿಗಣಿಸಲಾಗಿದೆ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಪರಶಿವನು ಇದನ್ನು ಧರಿಸಿ ನಾಗಭರಣ, ಸರ್ಪಭೂಷಣ ಎಂದು ಕರೆಸಿಕೊಂಡಿದ್ದಾನೆ. ಆದ್ದರಿಂದ ಪ್ರಾಚೀನ ಕಾಲದಿಂದಲೂ ಮಾನವನು ನಾಗನನ್ನು ಶಿವನಿಗೆ ಸಮಾನಾದ ಭಕ್ತಿ ಗೌರವಗಳಿಂದ ಕಂಡಿದ್ದಾನೆ. ತಾಲೂಕಿನ ಬಹುತೇಕ ಕಡೆಗಳಲ್ಲಿ ಬನ್ನಿ, ಬಿಲ್ವಪತ್ರೆ, ಮರಗಳಡಿಯಲ್ಲಿ ಜೋಡಿ ನಾಗರ, ಮರಿನಾಗ, ಏಳು ಎಡೆಯ ಸರ್ಪ, ನಾಗಿಣಿ ಮುಂತಾಗಿ ಕಂಡು ಎಬ್ಬು ಶಿಲ್ಪದ ಶಿಲಾ ಮೂರ್ತಿಯನ್ನು ಇಂದಿಗೂ ಕಾಣಬಹುದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿನ ನವ ಶಿಲಾಯುಗದ ಮಾನವನ ಕಾಲದಲ್ಲಿ ಹಾವಿನ ಚಿತ್ರಗಳುಳ್ಳ ಮಣ್ಣಿನ ಮಡಕೆಗಳು ಲಭ್ಯವಾಗಿರುವುದರಿಂದ 'ನಾಗ' ಅಂದಿನಿಂದ ಇಂದಿನವರೆಗೆ ಇಲ್ಲಿನ ಜನಗಳನ್ನು ಒಂದಿಲ್ಲೊಂದು ಕಾರಣಗಳಿಂದಾಗಿ ಮಾನಸಿಕವಾಗಿ ಕಾಡುತ್ತ ಬಂದಿದ್ದೆನೆಂಬುದು ವೇದ್ಯವಾಗುತ್ತದೆ. ಶಿಲಾಯುಗ ನವಶಿಲಾಯುಗ, ಐತಿಹಾಸಿಕ ಯುಗಗಳಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ನಾಗಾರಾಧನೆ ನಡೆಯುತ್ತಿದ್ದ ಬಗ್ಗೆ ನಿದರ್ಶನಗಳಿವೆ. ಬಳ್ಳಾರಿ ತಾಲೂಕಿನ ಪ್ರತಿಯೊಂದು ಹಳ್ಳಿಗಳಲ್ಲೂ ಕೆರೆ, ಹಳ್ಳ, ಹೊಂಡ, ಕೊಳ ಮುಂತಾದ ಜಲಸಂಪನ್ಮೂಲಗಳು ಕಂಡುಬರುತ್ತಿವೆ. ಬಳ್ಳಾರಿ ತಾಲೂಕಿನ ಸ್ಥಳನಾಮಗಳಲ್ಲಿ ಪ್ರಯೋಗಗೊಂಡಿರುವ 'ಮೀನು' ಎಂಬ ಪದ ವೈಲಕ್ಷಣ್ಯವಾಗಿರಲು ಸಾಧ್ಯ. ಏಣಿ ಎಂಬ ಪದಕ್ಕೆ 'ಗಂಡು ಜಿಂಕೆ' ಎಂಬುದು ಕೋಶಾರ್ಥ ಇಲ್ಲಿಯ ಮಾನವನು ತಾನು ವಾಸಿಸುವ ನೆಲೆಯ ವಿಲಕ್ಷಣ ಅಂಶವನ್ನು 'ಏಣ' ವಾಚಕ ಸ್ಥಳನಾಮಗಳಲ್ಲಿ ಬೆರಗುಗೊಳಿಸಿದ್ದಾನೆಂದು ಹೇಳಬಹುದು. ನಾಗ, ಮೀನು ಮತ್ತು ಏಣ ಪದ ಪ್ರಯೋಗಗಳಾಗಿರುವ ಸ್ಥಳನಾಮಗಳ ವಿವರ.

ನಾಗ	**ಮೀನ**	**ಎಣ**
ನಾಗೇನಹಳ್ಳಿ	ಮಿನಳ್ಳಿ	ಎಣಗಿ ಬಸಾಪುರ
ಗೊಲ್ಲನಾಗೇನಹಳ್ಳಿ		

೭.೩. ಹುಲಿ–ಹಂದಿ:

'ಹುಲಿ' ಪದ ಪ್ರಯೋಗವುಳ್ಳ ಹಲವು ಸ್ಥಳನಾಮಗಳನ್ನು ಬಳ್ಳಾರಿ ತಾಲೂಕಿನಲ್ಲಿ ಕಾಣಬಹುದಾಗಿದೆ. ಜಿಲ್ಲೆಯ ದಟ್ಟವಾದ ಕಾನನದ ಬೆಟ್ಟ ಪ್ರದೇಶದಲ್ಲಿ ಹುಲಿಗಳು

ಇತ್ತೀಚಿನವರೆಗೆ ಕಾಣಿಸಿದ್ದು ಉಂಟು. ಆದ್ದರಿಂದ ಮಾನವನು ತನ್ನ ವಾಧ್ಯ ನೆಲೆಗಳ ಆಸುಪಾಸಿನಲ್ಲಿ ಕಾಣುತ್ತಿದ್ದ ಹಿಂಸೆ ಪ್ರಾಣಿ ಹುಲಿಗಳ ಬಗ್ಗೆ ಭೀತಿಯನ್ನು ತಾಳಿದ್ದು, ಭಯದ ಕಾರಣವಾಗಿ ದೈವಿಕ ಭಾವನೆ ತಿಳಿದೋರು ಅದರ ಹಿನ್ನಲೆಯಲ್ಲಿ ಹುಲಿ, ಹಂದಿ ಹೆಸರಿನ ಸ್ಥಳನಾಮಗಳು ಹೀಗಿವೆ.

ಹುಲಿ	**ಹಂದಿ**	**ಹದ್ದು**
	ಹಂದಿಹಾಳು	ಹದ್ದಿನಗಂಡು
	ಹಂದ್ರಾಳು	

೮ ತಾಲೂಕಿನ ಪ್ರಾಕೃತಿಕ ಸ್ಥಳನಾಮಗಳು:

೧. ಜಲವಾಚಿ ಸ್ಥಳನಾಮಗಳು

೧) ಸೋಮ ಸಮುದ್ರ

೨) ಹರಗಿನ ಡೋಣಿ

೨. ಶಿಲಾವಾಚಿ ಸ್ಥಳನಾಮಗಳು

ಕಪ್ಪುಗಲ್ಲು

ಕರೆಕಲ್ಲು ವೀರಾಪುರ

ಕಲ್ಲು ಕುಟಿಗನಹಾಳು

ಕಗ್ಗಲ್ಲು

ಕೊಳಗಲ್ಲು

ಬೆಣ್ಣೆಕಲ್ಲು

ಬೆಳಗಲ್ಲು

ಯಾಳವಿ ಕಗ್ಗಲ್ಲು

ಶಂಕರ ಬಂಡೆ

ಸಂಗನಕಲ್ಲು

ಹದ್ದಿನಗುಂಡು

೩. ಪರ್ವತ/ಕುಂದ/ಗುಡ್ಡ/ಬಯಲು/ಕೋಟೆ ಸೂಚಿಸುವ ಪದಗಳು

ಕುರುಗೋಡು

ಕೊರ್ಲಗುಂದಿ

ಬಸರಕೋಡು

ಮಿಂಚೇರಿ

ಮುಸ್ತಗಟ್ಟ

ಹಲಕುಂದಿ

೪. ಸಸ್ಯ/ಹೂ/ಗಿಡ/ಮರ/ಬಳ್ಳಿ ಮುಂತಾದುವನ್ನು ಸೂಚಿಸುವ ನಾಮಗಳು

ಬೇವಿನಹಳ್ಳಿ

ಕಕ್ಕ ಬೇವಿನಹಳ್ಳಿ

ಜಾಲಿ ಬೆಂಚೆ

ಜಾಲಿಹಾಳ್

ಜೋಳದ ರಾಶಿ

ಬಾದನಹಟ್ಟಿ

ಬಸರಕೋಡು

೫ ಕ್ಷೇತ್ರ ವಾಚಕಗಳು

೧. ಸಿದ್ದರ ಗುಡ್ಡ

೨. ಕಾರ್ಕಲ ತೋಟ

೬. ಲೋಹ/ಸಂಪತ್ತನ್ನು ಸೂಚಿಸುವ ನಾಮಗಳು

೧. ತಾಂಬ್ರಹಳ್ಳಿ

೨. ಹೊನ್ನಳ್ಳಿ

೭. ಮಾರ್ಗಸೂಚಕಗಳು

೧. ಕಪ್ಪಗಲ್ಲು

೨. ಕರೇಕಲ್ಲು

೩. ಕರೆಕಲ್ಲು ವೀರಾಪುರ

೪. ಬೆಳಗಲ್ಲು

೫. ಯರ್ರಗುಡಿ

೯ ಸ್ಥಳನಾಮಗಳ ಭೌಗೋಳಿಕ ಅಂತರ್ ಸಂಬಂಧ: ಭೌಗೋಳಿಕ ಪ್ರಸಾರ:

ಅಲೆಮಾರಿ ಜೀವನದಿಂದ ನಾಗರಿಕ ಜೀವನದವರೆಗಿನ ಮಾನವನ ವಿಕಾಸದ ಹಂತಗಳಲ್ಲಿ ಸ್ಥಳ ನೆಲೆಯ ವಿವಿಧ ಘಟ್ಟಗಳು ಬಂದುಹೋಗಿವೆ. ಆರಂಭದಿಂದ ಹೆಸರನ್ನು ಕೊಡುವ ಪದ್ಧತಿಯೂ ಇಲ್ಲದಿದ್ದರೂ, ಕಾಲಾಂತರದಲ್ಲಿ ಜನಸಂಖ್ಯೆಯ ಹೆಚ್ಚಳ ಮುಂತಾದ ಕಾರಣಗಳಿಂದ ನಮ್ಮ ವಾಸತಿಗೆ ನೆಲೆಗಳಿಗೆ ನಾಮಕರಣ ಮಾಡಿದ್ದು ಪ್ರಥಮಹಂತ. ಒಂದೊಂದು ವೃತ್ತಿಯವರು ಒಬ್ಬೊಬ್ಬರನ್ನು ಅವಲಂಬಿಸುವಂತಾಯಿತು. ಅಂತೆಯೇ ಆಯಾ ವೃತ್ತಿಪರರು ಸಮುದಾಯ ಒಂದೊಂದು ಕಡೆ ಗುಂಪುಗುಂಪಾಗಿ ನೆಲೆನಿಂತರು. ತಾವು ಇದ್ದ ನೆಲೆಗಳಿಗೆ ತಮ್ಮ ಸಮುದಾಯದ ಹೆಸರನ್ನೆ ನೀಡಿಕೊಂಡರು. ಸಾಮಾನ್ಯವಾಗಿ ಇದು ಎಲ್ಲ ಭೌಗೋಳಿಕ ಪರಿಸರದಲ್ಲಿಯೂ ನಡೆಯಿತು. ಒಂದು ನಿರ್ದಿಷ್ಟ ಪ್ರದೇಶದಲ್ಲಿ ಅನೇಕ ವೃತ್ತಿ, ಜಾತಿಪದ ಸಮುದಾಯಗಳು ಒಬ್ಬರಿಗೊಬ್ಬರು ಸಹಾಯಕವಾಗುವಂತೆ ಅಕ್ಕಪಕ್ಕದಲ್ಲಿಯೇ ಊರುಗಳನ್ನು ಕಟ್ಟಿಕೊಂಡಿರುವುದು. ಆಶ್ಚರ್ಯದ ಸಂಗತಿಯೇ ಸರಿ. ಬಳ್ಳಾರಿ ತಾಲೂಕಿನಲ್ಲಿಯೂ ಒಂದು ನಿರ್ದಿಷ್ಟ ಭೌಗೋಳಿಕ ವಲಯದಲ್ಲಿ ವೃತ್ತಿ ಜಾತಿಯನ್ನವಲಂಬಿಸಿದ ಸ್ಥಳನಾಮಗಳು ಹಂಚಿಕೆಯಾಗಿವೆ.

ಈ ನಕ್ಷೆಯಲ್ಲಿ ಮುಖ್ಯವಾಗಿ ಜಾತಿ, ವೃತ್ತಿಯನ್ನು ಅವಲಂಬಿಸಿದ ಸ್ಥಳನಾಮಗಳು ಒಂದಕ್ಕೊಂದು ಭೌಗೋಳಿಕವಾಗಿ ಅಂಟಿಕೊಂಡಿವೆ.

ಜಂಗಮರಹೊಸಳ್ಳಿ	–	ಲಿಂಗಾಯಿತರ ನೆಲೆ, ಕೃಷಿ, ವ್ಯಾಪಾರವರ್ಗ
ಕಮ್ಮರಚೇಡು	–	ಲೋಹದ ಕೆಲಸದವರ ನೆಲೆ, ಕೃಷಿಗೆ ಪೂರಕ ಸಾಮಾನು ಒದಗಿಸುವದು
ಕುರುವಳ್ಳಿ	–	ಕುರುಬರ ನೆಲೆ, ಕುರಿಸಾಗಾಣಿಕೆ ವೃತ್ತಿ
ಗೊಲ್ಲನಾಗೇನಹಳ್ಳಿ	–	ಗೊಲ್ಲರ ದನಗಾಹಿಗಳ ನೆಲೆ
ವಡ್ಡಟ್ಟೆ – ಕಲ್ಲುಕುಟಿಗನಹಳ್ಳಿ ಶಿಲ್ಪಿಗಳು	–	ಮನೆ, ದೇವಾಲಯ ಇತ್ಯಾಧಿ ನಿರ್ಮಿಸುವವರು, ಇಲ್ಲಿ ಕೆಲಸ ಮಾಡುತ್ತಾರೆ.
ತಾಂಡ	–	ಲಂಬಾಣಿಗಳ ನೆಲೆ, ಸುಣ್ಣ ಸುಡುವುದು, ಕಟ್ಟಿಗೆ ಮಾರುವುದು
ಹೊಸಳ್ಳಿ, ಬೂದಿಹಾಳು	–	ಪುರಾತತ್ವ ಪ್ರಾಚೀನ ನೆಲೆಗಳು, ಗಣಿಗಾರಿಕೆ

ಇಬ್ರಾಹಿಂಪುರ – ಇಸ್ಲಾಂ ಧರ್ಮದವರ ನೆಲೆ

ಮುಂಡರಗಿ – ವಿಶೇಷ ಜನಾಂಗಗಳು ವಾಸಿಸುವ ನೆಲೆಗಳು

೧೦ ವಿಶೇಷಣಗಳು–ಸ್ಥಳನಾಮಗಳು

ಯಾವುದೇ ಸ್ಥಳನಾಮಗಳಿಗೆ ವಿಶೇಷಣವಿದ್ದರೆ ಅದು ಹೆಸರಿಡುವವರ ಮನೋಧರ್ಮವನ್ನು ತಿಳಿಸುತ್ತದೆ. ಅಂದರೆ ಒಂದು ಸ್ಥಳಕ್ಕೆ ಗ್ರಾಮಕ್ಕೆ ನಾಮ ನಿರ್ದೇಶನ ಮಾಡುವಾಗ ಅವುಗಳ ಪೂರ್ವಪದಕ್ಕೆ ಯಾವುದೋ ವಿಶೇಷಣವಿರುತ್ತದೆ. ಭೂಮಿಯ ವಿವರಣೆ, ವಸ್ತುವಿನ ವ್ಯಕ್ತಿಯ ಗುಣ, ಗಾತ್ರ, ಅವುಗಳ ಬಣ್ಣ, ಇತ್ಯಾದಿ ಹೇಳಿರುತ್ತದೆ. ವಿಶೇಷಣಗಳು ಸಾಮಾನ್ಯವಾಗಿ ಪೂರ್ವಪದದಲ್ಲಿ ಮಾತ್ರ ಸಿಗುತ್ತವೆ. ವಾರ್ಗಿಕದಲ್ಲಿ ಘಟಿಸಲಾರದು. ಸ್ಥಳನಾಮಗಳಲ್ಲಿ ನಿರ್ದಿಷ್ಟ ಪದವು ವಾರ್ಗಿಕ ಪದವನ್ನು ವರ್ಣಿಸುತ್ತಿರುತ್ತದೆ. ಅಂತಹ ಕೆಲವು ರಚನೆಗಳು ಇಲ್ಲಿವೆ.

೧೦.೧ ಪ್ರಮಾಣ ಸೂಚಿಸುವ ವಿಶೇಷಣಗಳು

ಚಿಕ್ಕ ಬಳ್ಳಾರಿ

ಹಿರೆ ಹದಳಗಿ

೧೦.೨ ಭೌಗೋಳಿಕ ಲಕ್ಷಣಗಳನ್ನು ಹೇಳುವ ವಿಶೇಷಣಗಳು

ತೆಗ್ಗಿನ ಬೂದಿಹಾಳು

ಮಿಟ್ಟೆ ಸೂಗೂರು.

೧೦.೩ ಬಣ್ಣವನ್ನು ಸೂಚಿಸುವ ವಿಶೇಷಣಗಳು

ಕರೇಕಲ್ಲು

ಕಪ್ಪಗಲ್ಲು

ಕರಿಚೇಡು

ಬೆಳಗಲ್ಲು

ಯರ್ರಂಗಳಿಗೆ

ಯರ್ರಗುಡಿ

ಹೊನ್ನಹಳ್ಳಿ

೧೦.೪ ಪುರಾತತ್ತ್ವ ಪರಿಸರ-ಸ್ಥಳನಾಮಗಳು

ಎತ್ತಿನ ಬೂದಿಹಾಳ

ಕಮ್ಮಾರಚೇಡು

ತಗ್ಗಿನ ಬೂದಿಹಾಳ

ಪಾತ್ರೆ ಬೂದಿಹಾಳ

ಹೊನ್ನಳ್ಳಿ

೫.೪ ಸಾಮಾಜಿಕ ನೆಲೆ

ಸ್ಥಳನಾಮಗಳು ಸಂಸ್ಕೃತಿಯ ನಿರ್ವಚನಕ್ಕೆ ಮಹತ್ವದ ಸಂಗತಿಯನ್ನು ನೀಡುತ್ತದೆ. ಸಂಸ್ಕೃತಿಯ ನಿರ್ವಚನೆಯ ಸಂದರ್ಭದಲ್ಲಿ ಇವರೆಗೆ ಸ್ಥಳನಾಮಗಳನ್ನು ಮುಖ್ಯ ಅಕರಗಳೆಂದು ವ್ಯಾಪಕವಾಗಿ ಭಾವಿಸಿದಂತಿಲ್ಲ. ಇವುಗಳ ಉಪಯೋಗವನ್ನು ಕನ್ನಡದಲ್ಲಿ ಶಂಬಾ ಜೋಷಿಯವರು ತೋರಿಸಿಕೊಟ್ಟರೆನ್ನಬಹುದು. ಕನ್ನಡ ಸಂಸ್ಕೃತಿ ಹಾಗೂ ಭೌಗೋಳಿಕ ಹಾಗೂ ಸಾಂಸ್ಕೃತಿಕ ಎಲ್ಲೇಗಳ ಹುಡುಕಾಟದಲ್ಲಿ ಗ್ರಾಮನಾಮಗಳ್ನು ಶಂಭಾ ಜೋಷಿಯವರು ಆಧರಿಸಿದ್ದರು. ಈ ಮೂಲಕ ಕನ್ನಡ ಸಂಸ್ಕೃತಿಯನ್ನು ಭಾರತದ್ಯಾಂತ ಗುರುತಿಸುವ ಪ್ರಯತ್ನವನ್ನು ಮಾಡಿದರು. ಎಡೆಗಳು ಹೇಳುವ ಕಂನಾಡ ಕಥೆ, ಕನ್ನಡ ಸಂಸ್ಕೃತಿಯ ಹುಟ್ಟು, ಕುಂನುಡಿಯ ಜೀವಾಳ ಇವೆಲ್ಲಾ ಕೃತಿಗಳಲ್ಲಿ ಸ್ಥಳನಾಮಗಳನ್ನು ಸಂಸ್ಕೃತಿಯ ಚಹರೆಗಳನ್ನಾಗಿ ಶಂಬಾ ಗುರುತಿಸಿದರು. ಶಂಬಾ ಅವರ ತರುವಾಯ ಸ್ಥಳನಾಮಗಳನ್ನು ಸಾವಾಜಿಕ ಆಂಯಾವುದೆಡೆಗೆ ಬಿಂಬಿಸುವ ಪ್ರಂಯತ್ನವನ್ನು ವ್ಯಾಪಾಕವಾಗಿ ಮಾಡಲಾಗಲಿಲ್ಲವಾದರೂ ಕೆಲವೇ ಹೆಸರುಗಳ ಮೂಲಕ ಅಂತಹ ಆಯಾಮಕ್ಕೆ ಬೇಕಾದ ಪ್ರಾಸಂಗೀಕ ಚರ್ಚೆಯನ್ನು ಮಡಿದರೂ ಇಡಿಯಾಗಿ ಸ್ಥಳನಾಮಗಳನ್ನು ಸಾಮಾಜಿಕ ಸಂಗತಿಗಳೆಂದು ಸ್ವೀಕರಿಸಲಿಲ್ಲ. ಶಂಬಾ ಜೋಷಿಯವರ ನಂತರ ಮೂರು ದಶಕಗಳವರೆಗೆ ಈ ಕುರಿತು ಅಷ್ಟಾಗಿ ಚರ್ಚೆಯನ್ನು ಮಾಡಲಿಲ್ಲವೆನ್ನಬಹುದು.

ಎಂಬತ್ತರ ದಶಕದಲ್ಲಿ ವಿ.ಗೋಪಾಕೃಷ್ಣ ಅವರು " ಕೋಲಾರ ಜಿಲ್ಲೆಯ ಸ್ಥಳನಾಮಗಳ ಭಾಷಿಕ, ಸಾಮಾಜಿಕ ಅಧ್ಯಯನ" ಎಂಬ ಪಿಎಚ್.ಡಿ ನಿಬಂಧದಲ್ಲಿ ಅಲ್ಲಲ್ಲಿ ಕೆಲವು ಸಾಮಾಜಿಕ ಅಂಶಗಳನ್ನು ಭಾಷೆಯ ಮುಖೇನ ಗಮನಿಸಿದ್ದಾರೆ. ಆದರೆ, ಹೆಸರುಗಳನ್ನು ಭಾಷಿಕ ಘಟಕಗಳಿಂದ ದೂರವಿರಿಸಿ, ಜನ ಜೀವನದ ಕಡೆಗೆ ಅವರ ಸಂಸ್ಕೃತಿಯ ಕಡೆಗೆ ತರುವ ಕೆಲಸ ಬಹುಶ: ಮಾಡಲಿಲ್ಲ. ಇಲಿ ಸಾಮಾಜಿಕ ಸಂಗತಿಗಳನ್ನು ಔಪಚಾರಿಕವಾಗಿ ನೋಡುವ ಕ್ರಮವೇ ಮುಂದುವರೆಸುತ್ತಾ ಬಂದಿತು.

ಬಹಳ ಮುಖ್ಯವಾಗಿ ಬಳ್ಳಾರಿ ತಾಲೂಕು ಗಡಿ ಪ್ರದೇಶವನ್ನು ಹೊಂದಿದ್ದು ಅಲ್ಲಿ ವಾಸಿಸುವ ಬಹುತೇಕ ಜನರು ದ್ವಿಭಾಷಿಕರಾಗಿದ್ದು ಈ ಸಮುದಾಯಗಳಲ್ಲಿ ಕೆಳವರ್ಗ ಮತ್ತು ಮೆಲ್ವರ್ಗ ಎಂಬ ಮೇಲ್ನೋಟದ ಗ್ರಹಿಕೆಯೊಂದಿಗೆ ಈ ಎರೆಡು ವರ್ಗಗಳಲ್ಲಿರುವ ಅಕ್ಷರಸ್ಥ ಸಮುದಾಯ ಮತ್ತು ಅವರ ಉಚ್ಚಾರಣೆ ನಿಯಮಗಳು, ಅನಕ್ಷರಸ್ಥ ಸಮುದಾಯ ಮತ್ತು ಅವರ ಉಚ್ಚಾರಣೆ ನಿಯಮಗಳು ತಮ್ಮ ವಾಸದ ನೆಲೆಗಳಿಗೆ ಎರಡು ವರ್ಗಗಳು ಕರೆದುಕೊಳ್ಳುವ ಹೆಸರು. ಅಧಿಕೃತವಾಗಿ ಇರುವ ಹೆಸರು, ತಮ್ಮ ಹಟ್ಟಿಗಳಿಗೆ ಗೌಪ್ಯವಾಗಿ

ಕರೆದುಕೊಳ್ಳುವ ಹೆಸರುಗಳು ಮಹತ್ವಾಗಿದೆ. ಅದರಂತೆ ಮೇಲ್ವರ್ಗ ಮತ್ತು ಕೆಳವರ್ಗಗಳೆರಡು ಬಳಸುವ ಸ್ಥಳನಾಮಗಳ ಬರಹ ಮತ್ತು ಔಪಚಾರಿಕ ಬರಹ, ದಾಖಲೆ ಹಾಗೂ ಉಚ್ಚಾರನೆಯಲ್ಲಾದ ಬದಲವಾಣೆಯಂತಹ ಸಾಮಜಿಕ ಅಯಾಮಗಳನ್ನು ಗಮನಿಸಸುವುದ ಅಗತ್ಯವಾಗಿದೆ.

ಆಧುನಿಕ ಸಾಮಾಜಿಕ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿದೆ. ಅಂತೆಯೇ ಸ್ಥಳನಾಮಗಳ ಮೇಲೆ ತನ್ನ ಪ್ರಭಾವವನ್ನು ಬೀರಿದೆ. ಆಧುನಿಕತೆಯ ಒತ್ತಡದಿಂದ ಹೆಸರುಗಳು ಸ್ಥಿತ್ಯಾಂತರಗೊಂಡಿರುವುದು ತಿಳಿಯುತ್ತದೆ. ಇಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ಗಮನಿಸಬಹುದು. ಈ ಮುಂಚೆ ಇದ್ದ ಪ್ರಾಚೀನ ಸ್ಥಳನಾಮಗಳ ಮೇಲೆ ಉರ್ದು ಮತ್ತು ಆಂಗ್ಲ ಆಢಳಿತದ ಪ್ರಭಾವ ಆದದ್ದು ಒಂದು ಅಂಶ. ಈ ಪ್ರಭಾವದಿಂದ ಕನ್ನಡ ಭಾಷೆ ಮತ್ತು ಹೆಸರುಗಳ ಮೇಲಾದ ಪರಿಣಾಮ ಸಾಮಾಜಿಕ, ಭಾಷಿಕ ವ್ಯಾತ್ಯಾಸಗಳ ಇಲ್ಲಿ ಒಳಗೊಂಡಿವೆ. ಎರಡನೆಯದಾಗಿ, ತಾಂತ್ರಿಕ ಜಗತ್ತಿನ ಆವಿಷ್ಕಾರ, ಇಲ್ಲಿ ಕೈಗಾರಿಕರಣ, ಜಾಗತೀಕರಣ, ಸಮಕಾಲೀನ ರಾಜಕಾರಣದಿಂದ ಪ್ರೇರಿತಗೊಂಡ ಸ್ಥಳನಮಗಳು ಎಡೆಪಡೆಯುತ್ತವೆ. ಸ್ಥಳನಾಮ ಒಂದು ಕಾಲದಲ್ಲಿ ನಿರಕುಂಶ ಪ್ರಭುತ್ವ ಆಡಳಿತದ ದಬ್ಬಾಳಿಕೆ ಹಾಗೂ ಅದರ ಆರೋಗ್ಯಯುತ ಕಾಳಜಿಗಳೆರಡರಿಂದಲೂ ಪ್ರತಿನಾಮಕರಣ, ಸಂಸ್ಕೃತಾನುಕರಣಗೊಂಡಿರುವುದುಂಟು. ಅದರ ಮುಂದುವರೆಕೆಯ ರೂಪದಂತೆ ಪ್ರಕೃತ ಸಮಕಾಲೀನ ರಾಜಕಾರಣವೂ ಪ್ರಜಾಸತ್ತೆಯ ಒಪ್ಪಿಗೆ ಹಾಗೂ ಒಪ್ಪಿಗೆಯಿಲ್ಲದೆಯೂ ಸ್ಥಳನಾಮಕರಣಗೊಳಿಸಿದ ಉದಾಹರಣೆಗಳಿವೆ. ಒಂದರ್ಥದಲ್ಲಿ ನಿರಂಕುಶಾಧಿಕಾರಿಗಳು ತಮ್ಮ ಆಧಿಪತ್ಯವನ್ನು ಸ್ಥಳನಾಮಕರಣದಿಂದ ಮಾಡಲು ಯತ್ನಿಸಿದರು. ಅದರಂತೆ ಸಮಕಾಲೀನ ಸಂದರ್ಭ ಮುಂದುವರೆಯುತ್ತಿರುವುದು ತಿಳಿಯುತ್ತದೆ. ಇದರಿಂದಾಗಿ ಪಾರಂಪರಿಕವಾಗಿ ಬೆಳೆದು ಬಂದ ಸಂಸ್ಕೃತಿವಾಹಕಗಳಾದ ಸ್ಥಳನಾಮಗಳು ತಮ್ಮ ಮೂಲ ಗುಣದಿಂದ ವಿಮುಖಗೊಳ್ಳುತ್ತಿರುವುದು ಕಂಡು ಬರುತ್ತದೆ.

ಗಡಿಪ್ರದೇಶದಲ್ಲಿ ವಾಸಿಸುವ ಜನತೆಯು ಪರಸ್ಪರ ಕೊಡುಕೊಳ್ಳುವಿಕೆಯಿಂದಾಗಿ ಸಾಂಸ್ಕೃತಿಕವಾಗಿ ಪ್ರೇರಣೆಗೊಂಡಿರುವುದು ಸಹಜವೆ ಸರಿ. ಆಚರಣಾ ನೆಲೆಯಲ್ಲಿ, ಜೀವನ ಶೈಲಿಯ ನೆಲೆಯಲ್ಲಿ, ವಾಸ್ತು, ವ್ಯವಾಹಾರ, ಭಾಷೆ ಮುಂತಾದ ವಲಯಗಲ್ಲಿ ಎರಡೂ ಗಡಿಗಳಲ್ಲಿ ಬಹತೇಕ ಗಾಢವಾದ ಸಂಬಂಧವೇ ಇದೆ. ಸ್ಥಳನಾಮಗಳ ಮೂಲಕ ಸಾಮಾಜಿಕವಾಗಿ ಉಂಟಾಗುವ ಸಾಂಸ್ಕೃತಿಕ ಪ್ರಕ್ರಯೆಗಳನ್ನು ತಿಳಿಸಲು ಸಾಧ್ಯವಿದೆ. ಸಮಾಜದಲ್ಲಿನ ವಿಭಿನ್ನ ರೀತಿಯ ಸಂಸ್ಕೃತಿಯ ಚಹರೆಗಳನ್ನು ಸ್ಥಳನಾಮಗಳು ಹೇಗೆ

ಗುರುತಿಸಿ, ಮಾರ್ಗವನ್ನು ನಿರ್ಮಿಸುತ್ತಾ, ಪ್ರತಿನಿಧಿಯಾಗಿ, ಮೂಲಧಾರಗಳಾಗಿ ನಿಲ್ಲುತ್ತವೆಂಬುದನ್ನು ವಿವಿಧ ಆಯಾಮಗಳಿಂದ ಸ್ಥೂಲವಾಗಿ ಚರ್ಚಿಸಬಹುದಾಗಿದೆ.

ಬಳ್ಳಾರಿ ತಾಲೂಕಿನಲ್ಲಿ ಪ್ರಸ್ತುತ ಸಮಾಜದಲ್ಲಿ ಸಾಮಾನ್ಯವಾಗಿ ಕಂಡುಬರುವ ಎಲ್ಲಾ ಜಾತಿ, ವರ್ಗ ಮತ್ತು ಕಾಯಕವನ್ನು ಅವಲಂಬಿಸಿ ಜೀವಿಸುವ ಜನಗಳ ನೆಲೆಗಳು ಕಂಡುಬರುತ್ತವೆ. ಗ್ರಾಮ, ಹಾಳು-ಹಳ್ಳಿ ಮೊದಲಾದ ಸ್ಥಳನಾಮಗಳ ವರ್ಗೀಕರಣ ಆಯಾ ಸ್ಥಳದಲ್ಲಿ ನೆಲೆನಿಂತು ವ್ಯವಸಾಯ ನಿರತರಾದ ಬೇಸಾಯಿಗರನ್ನು ಮನೆಗಳನ್ನು ನಿರ್ದೇಶಿಸುತ್ತೇವೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಜಿಲ್ಲೆಯಲ್ಲಿ ಕೆರೆ, ಕಟ್ಟೆ ಬಾವಿಗಳನ್ನು ನಿರ್ಮಿಸಿಕೊಂಡು, ನೀರಾವರಿಯನ್ನು ಮಾಡುತ್ತಿದ್ದಾರೆಂಬುದು ಇಲ್ಲಿನ ಸ್ಥಳನಾಮಗಳಿಂದ ತಿಳಿದುಬರುತ್ತದೆ.

ಗ್ರಾಮಗಳಲ್ಲಿ ಅಗಸ, ಕಮ್ಮಾರ, ಕಂಚುಗಾರ ಮೊದಲಾದ ಹದಿನೆಂಟು ವರ್ಣಗಳ ಜನರು ವಾಸಿಸುವ ನೆಲೆಗಳಾಗಿದ್ದವು. ಆಯಾ ಗ್ರಾಮದ ರೈತರಿಗೆ ಒಕ್ಕಲುತನಕ್ಕೆ ಬೇಕಾಗುವ ಸಾಮಗ್ರಿಗಳನ್ನು ಉಪಕರಣಗಳನ್ನು, ಪಾತ್ರಗಳನ್ನು ಬಟ್ಟೆಬರೆಗಳನ್ನು ಒದಗಿಸುವ ಕಾಯಕದಲ್ಲಿ ಇವರೆಲ್ಲ ನಿರತರಾಗಿ ಅಲ್ಲಿಯೇ ವಾಸಿಸುತ್ತಿದ್ದರು. ಬಳ್ಳಾರಿ ಜಿಲ್ಲೆಯಲ್ಲಿ ಕಮ್ಮಾರ, ಅಗಸ ಮತ್ತು ಕಂಚಗಾರ, ವಡ್ಡ, ವಾರ್ಗಿಕಗಳುಳ್ಳ ಸ್ಥಳನಾಮಗಳಿವೆ. ಉದಾ: ಕಮ್ಮರಚೇಡು, ಕಂಚಗಾರ ಬೆಳಗಲ್ಲು, ಅಗಸನೂರು, ಉಪ್ಪಾರ ಹೊಸಹಳ್ಳಿ ವೃತ್ತಿಯಾಧಾರಿತ ಜನರ ಸ್ಥಳನಾಮಗಳನ್ನು ತಿಳಿಸುವಂತಹ ಹಲವಾರು ಊರುಗಳ ಹೆಸರುಗಳಿವೆ.

ಇವುಗಳು ವೃತ್ತಿವಾಚಕ ಸ್ಥಳನಾಮಗಳಾಗಿವೆ. ಅಲ್ಲದೆ ಜಿಲ್ಲೆಯಲ್ಲಿ ಕಲ್ಲು ಕುಟಿಗರು, ದಾಸರು, ವಡ್ಡರು, ಗೊಲ್ಲರು, ಮುಂತಾದ ವೃತ್ತಿಯವರು ವಾಸಿಸುವ ನೆಲೆಗಳನ್ನು ಸೂಚಿಸುವ ಸ್ಥಳನಾಮಗಳನ್ನು ಕಾಣಬಹುದಾಗಿದೆ.

ಉದಾ: ಕಲ್ಲು ಕುಟ್ಟಿಗನ ಹಾಳು
ದಾಸರಹಳ್ಳಿ
ದಾಸರ ನಾಗೇನಹಳ್ಳಿ
ವಡ್ಡರಹಟ್ಟಿ
ಗೊಲ್ಲರ ನಾಗೇನಹಳ್ಳಿ
ತಾಂಬುಹಳ್ಳಿ
ಅಗಸನೂರು

ಇಂದಿಗೂ ಬಳ್ಳಾರಿ ಜಿಲ್ಲೆಯ ಬಳ್ಳಾರಿಯ ತಾಲೂಕಿನಲ್ಲಿ ಈ ಪ್ರದೇಶಗಳಲ್ಲಿ ಈ ವರ್ಗದ ಜನಗಳು ಹೆಚ್ಚಾಗಿ ನೆಲೆಸಿರುವುದು ಕಂಡುಬರುತ್ತದೆ. ಈ ಪ್ರದೇಶದಲ್ಲಿ ಶಿಲಾ ಬೆಟ್ಟಗಳು ಹೆಚ್ಚಿನ ಪ್ರಮಾಣದಲ್ಲಿದ್ದು ಕಲ್ಲುಕುಟ್ಟಿಗರ ಜೀವನ ಮಾರ್ಗಕ್ಕೆ ಅನುಕೂಲ ಪರಿಸರ ಒದಗಿದೆ. ಗೊಲ್ಲರು ಗೋಪಾಲನೆಯನ್ನು ಮಾರಿಕೊಂಡು ನೆಲೆಸುವುದನ್ನು 'ಗೊಲ್ಲ'ರ ಎಂಬ ಸ್ಥಳನಾಮ ವಾರ್ಗಿಕವು ಸೂಚಿಸುತ್ತದೆ. 'ಭಟ್ಟ' ಎಂಬ ವಾರ್ಗಿಕವುಳ್ಳ ಭಟ್ಟರಹಳ್ಳಿ ಎಂಬ ಸ್ಥಳನಾಮದಿಂದ ಇದು ಭಟ್ಟೋಪಾಧ್ಯಾಯರಿಗೆ ಸಂಧಿಸಿದ್ದೆಂದು ಹೇಳಬಹುದಾಗಿದೆ. ಅಗ್ರಹಾರಗಳು ಬ್ರಾಹ್ಮಣರು ನೆಲೆಸುತ್ತಿದ್ದ ನೆಲೆಗಳು 'ಅಯ್ಯನಹಳ್ಳಿ' ಎಂಬುದು ವೀರಶೈವ ಜಂಗಮರು ವಾಸಿಸುವ ನೆಲೆಗಳನ್ನು ಸೂಚಿಸುತ್ತದೆ.

೫.೪(೧) ಸ್ಥಳನಾಮಗಳ ಸಾಮಾಜಿಕ ನೆಲೆಗಳು/ಆಯಮಗಳು

ಸ್ಥಳನಾಮಗಳ ಮೂಲಕ ಸಾಮಾಜಿಕವಾಗಿ ಉಂಟಾಗುವ ಸಾಂಸ್ಕೃತಿಕ ಸಕ್ರಿಯಗಳನ್ನು ತಿಳಿಯಲು ಸಾಧ್ಯವಿದೆ. ಸಮಾಜದಲ್ಲಿನ ವಿಭಿನ್ನ ರೀತಿಯ ಸಂಸ್ಕೃತಿಯ ಚಹರೆಗಳನ್ನು ಸ್ಥಳನಾಮ ಹೇಗೆ ಗುರುತಿಸಿ ಮಾರ್ಗವನ್ನು ನಿರ್ಮಿಸುತ್ತಾ ಪ್ರತಿನಿಧಿಯಾಗಿ, ಮೂಲಾಧಾರಗಳಾಗಿ ನಿಲ್ಲುತ್ತವೆಂಬುದನ್ನು ವಿವಿಧ ಸಾಮಾಜಿಕ ಆಯಾಮ ಮತ್ತು ನೆಲೆಗಳಿಂದ ಸ್ಥೂಲವಾಗಿ ಚರ್ಚಿಸಲಾಗಿದೆ.

೫.೫ ಜಾತಿಯಾಧಾರಿತ ಸ್ಥಳನಾಮಗಳು:

ಭಾಷೆಯ ರಚನೆಯಲ್ಲಿ ಧ್ವನಿ, ಪದ, ವಾಕ್ಯ, ಅರ್ಥ ಮುಂತಾದ ಅಂಶಗಳಿರುವಂತೆ ಸಾಮಾಜಿಕ ರಚನೆಯಲ್ಲಿ ಮಾನವನಿಗೆ ಲಿಂಗ, ವರ್ಗ, ಜಾತಿ, ಮುಂತಾದ ಅಂಶಗಳಿವೆ. ಈ ಮೂಲಕ ನಾಮಾಧ್ಯಯನ ಪ್ರಸ್ತುತತೆಯನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಮುಖ್ಯವಾಗಿ " ಲಿಖಿತ ಆಧಾರಗಳ ಕೊರತೆಯಿದ್ದಲ್ಲಿ ಒಂದು ಜನಾಂಗವು ನೆಲೆಸಿದ್ದ ಒಂದು ಪ್ರದೇಶದ ಸ್ಥಳನಾಮಗಳಲ್ಲಿನ ಸಮಾನರೂಪಗಳನ್ನು ಪರಿಶೀಲಿಸಬೇಕು.(೧) ಇದರಿಂದ ಆಯಾ ನಾಡಿನ ಹಲವಾರು ಸಾಂಸ್ಕೃತಿಕ ಸ್ತರಗಳ ನಾನಾ ಜನಾಂಗಗಳ ಅಸ್ತಿತ್ವವು ಸ್ಥಳನಾಮಗಳಲ್ಲಿ ಅಭಿವ್ಯಕ್ತಿಗೊಂಡಿರುವುದನ್ನು ಕಾಣಬಹುದಾಗಿದೆ(೨) ಇಂತಹ ನಾಮಗಳು ನೇರವಾಗಿ ಅಲ್ಲದಿದ್ದರೂ, "ಸಂಸ್ಕೃತಿಯ ಪಳಯುಳಿಕೆಗಳಂತಹ ಅವಶೇಷಗಳಾಗಿರುವುದರಿಂದ ಅವು ಪರೋಕ್ಷವಾಗಿಯಾದರೂ ಜನತೆ ಮತ್ತು ನಿರ್ದಿಷ್ಟ ಕಾಲದ ಸಮಾಜದ ಕುರಿತು ಅತ್ಯಂತ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಕಾರಣ ಈ ಬಗೆಯ ಸಾಮಾಜಿಕ ಅಧ್ಯಯನದಿಂದ " ಒಂದು ಸಮಾಜದಲ್ಲಿನ ವರ್ಣವ್ಯವಸ್ಥೆ, ನಾಗರಿಕತೆ, ಸಂಸ್ಕೃತಿಯನ್ನು ತಿಳಿಯಲು ಸಾಧ್ಯವಾಗುತ್ತದೆ.(೪)

ಸ್ಥಳನಾಮ ನಿರ್ದೇಶನವು ಜಾತಿ, ವರ್ಗದ ಪ್ರತಿನಿಧಿಯಾಗಿ ಕಾಣಿಸಿಕೊಂಡಿದ್ದು ಎರಡನೇ ಘಟ್ಟದಲ್ಲಿ. ಇದಕ್ಕಿಂತ ಮುಂಚೆ ನಿಸರ್ಗದೊಂದಿಗೆ ಸರಳವಾದ ಜೀವನವನ್ನು ಸಾಗಿಸುತ್ತ, ತನ್ನ ಕುಟುಂಬ ಅಥವಾ ಗುಂಪಿನೊಂದಿಗೆ ಅಲೆಯುತ್ತಿದ್ದ ಮನುಷ್ಯ ಕೃಷಿಯನ್ನು ಕಂಡುಕೊಂಡು, ಅದರ ರಕ್ಷಣೆ ಮತ್ತು ಉಪಯೋಗಕ್ಕಾಗಿ ಒಂದೆಡೆ ನೆಲೆ ನಿಲ್ಲುವಲ್ಲಿ ಗ್ರಾಮ ಪರಿಕಲ್ಪನೆ ಉಗಮವಾಯಿತೆನ್ನಬಹುದು. ಈ ಸಂದರ್ಭದಲ್ಲಿ ಮನುಷ್ಯರು ನಿಸರ್ಗದತ್ತ ವಾದಂತಹ ಕಲ್ಲ, ಗುಡ್ಡ, ದಿಣ್ಣೆ, ಬೆಟ್ಟ, ಪೊಟರೆ ಮುಂತಾದವುಗಳೊಂದಿಗೆ ತಮ್ಮ ವಾಸದ ನೆಲೆಯನ್ನು ಗುರುತಿಸಿಕೊಂಡರು. ಆದುದರಿಂದ ಗ್ರಾಮನಾಮಗಳ ಇತಿಹಾಸದಲ್ಲಿ ನಿಸರ್ಗವಾಚಿ ಸ್ಥಳನಾಮಗಳು ಮೊದಲು ಉಗಮಗೊಂಡವು. ಇದು ಗ್ರಾಮ ಅಥವಾ ಸ್ಥಳನಾಮದ ಪ್ರಥಮ ಘಟ್ಟವೆಂದು ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ. " ಜನಾಂಗ ನಿಷ್ಠೆ ಗಟ್ಟಿಗೊಂಡ ಈ ಎರಡನೇ ಘಟ್ಟದಲ್ಲಿ ನಿಸರ್ಗವಾಚಿಗೆ ಬದಲು ಕ್ರಮೇಣ ಜನಾಂಗವಾಚಿ ಗ್ರಾಮನಾಮಗಳು ತಲೆದೋರಲಾರಂಭಿಸಿದವು."(೫) ಹೀಗಾಗಿ ಜನಾಂಗ ಅಥವಾ ಜಾತಿಯ ನೆಲೆಯಲ್ಲಿ ನಿರ್ದೇಶನಗೊಂಡಿರುವ ಸ್ಥಳನಾಮಗಳನ್ನು ಆಯಾ ಸಮುದಾಯಗಳ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನವನ್ನು ವಿವರವಾಗಿ ಚರ್ಚಿಸಲಾಗಿದೆ.

೫.೫(೧) ಬ್ರಾಹ್ಮಣರು:

ಸಾಮಾಜಿಕವಾಗಿ ಬಲಿಷ್ಠವಾದಂತಹ ಸಮುದಾಯವಾಗಿದ್ದು, ಪ್ರಾಚೀನ ಸಾಮಾಜಿಕ ಜೀವನದಲ್ಲಿ ತನ್ನ ಸ್ಥಾನಮಾನವನ್ನು ಗರಿಷ್ಠವೆಂಬಂತೆ ಗುರುತಿಸಿಕೊಂಡು ತನ್ನದೇ ಆದಂತಹ ಅಸ್ತಿತ್ವವನ್ನು ಸ್ಥಳನಾಮಗಳ ಮೇಲೂ ಸ್ಥಾಪಿಸಿಕೊಂಡಿರುವುದು ತಿಳಿಯುತ್ತದೆ. ಪ್ರತ್ಯೇಕ ಗುಂಪುಗಳಲ್ಲಿ ವಾಸಿಸುತ್ತಿದ್ದ ವೈದಿಕರು, ತಮ್ಮ ಕೆಲವು ನೆಲೆಗಳಿಗೆ ವೈಷ್ಣವ ಸಂಬಂಧಿ ಹೆಸರುಗಳನ್ನು ನಿರ್ದೇಸಿಸಿಕೊಂಡಿದ್ದಾರೆ. ಕ್ಷತ್ರೀಯರು ಬ್ರಾಹ್ಮಣರಿಗೆಂದೆ ಅಗ್ರಹಾರಗಳನ್ನು ನಿರ್ಮಿಸಿಕೊಟ್ಟಿದ್ದು ಇತಿಹಾಸದಿಂದ ತಿಳಿಯುತ್ತದೆ. ಶಾಸನಗಳೂ ಅಗ್ರಹಾರಗಳ ಉಲ್ಲೇಖವನ್ನು ನೀಡುತ್ತವೆ. ರಾಜರು, ಮಂತ್ರಿಗಳು, ಅಧಿಕಾರಿಗಳು ನೀಡಿದ ಕೊಡುಗೆಗಳು ಇವಾಗಿರುತ್ತಿದ್ದವು. ಬ್ರಾಹ್ಮಣೇತರರು ಅಗ್ರಹಾರಗಳಲ್ಲಿ ವಾಸಿಸುವಂತಿರಲಿಲ್ಲವೆಂಬುದು ಈಗಾಗಲೇ ತಿಳಿದ ವಿಚಾರವಾಗಿದೆ.

ಅಗ್ರಹಾರಗಳಲ್ಲದೇ-ಬ್ರಾಹ್ಮಣ ಎಂಬ ಹೆಸರಿನಿಂದಲೂ -ಹರವ,-ಪಾರವ, ಬೊಮ್ಮ ಮುಂತಾದ ಹೆಸರುಗಳಿಂದಲೂ ಆರಂಭವಾಗುವ ಸ್ಥಳನಾಮಗಳು ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳೆರಡರಲ್ಲೂ ದೊರಕುತ್ತವೆ. ಬ್ರಹ್ಮವು ಸಂಸ್ಕೃತದಿಂದ ತದ್ಭವಗೊಂಡು-ಬೊಮ್ಮ ಆಗಿರಬೇಕು. ಮುಂದೆ ಕನ್ನಡ ನಾಡಿನದ್ಯಾಂತ ಇಂಥ ಬೊಮ್ಮ ಸಂಬಂಧಿ

ಗ್ರಾಮರಚನೆಯಾಗಿರಬಹುದು. ಇದಕ್ಕೆ ಕರಣ ಆಳರಸರು ಬ್ರಾಹ್ಮಣರಿಗೆ ನೀಡಿದ ದತ್ತಿ ದಾನ ಮತ್ತು ಪುರೋಹಿತವರ್ಗವು ಕಂಡುಕೊಂಡ ಅಸ್ತಿತ್ವವೂ ಆಗಿರಬೇಕು. ಅದರಂತೆ ಭಟ್ಟ- ಎಂಬ ಪದವು ಬ್ರಾಹ್ಮಣರ ವಾಸ್ತವ್ಯದ ಹೆಸರನ್ನು ಪ್ರತಿನಿಧಿಸುತ್ತದೆ. bhatta meant a scholar, a Brahamana and the name of Bhattarhalli proboboly derives its name from Brahamana".(6) ಭಟ್ಟರಿಗೆ ಸಂಬಂಧಸಿದ ಹೆಸರಿನ ಊರುಗಳು ದೊರಕುತ್ತವೆ. ಭಟ್ಟ ಎಂಬ ಪದ ಒಂದು ವೃತ್ತಿಯನ್ನು ಸೂಚಿಸುವ ಪದವಾಗಿದೆ. ಭಾರತದ್ಯಾಂತ ಅಡುಗೆ ಮುಂತಾದ ಕೆಲಸವನ್ನು ಮಾಡುವವರಿಗೆ ಈ ಪದವು ಬಳಕೆಯಾಗುತ್ತದೆ. ಆದರೂ ಕರ್ನಾಟಕ ಮಟ್ಟಿಗೆ ನಿರ್ದಿಷ್ಟ ಜನರ ವ್ಯಕ್ತಿನಾಮದ ವಾರ್ಗಿಕವಾಗಿ, ಅಧಿಕೃತವಾಗಿ ಹೇಳುವುದರಿಂದ ಅಗ್ರಹಾರಗಳಿಗೆ ಒಂದು ಕಾಲದವರೆಗೆ ಅದ ಹೆಸರಿನಿಂದ ಕರೆದು, ನಂತರದ ಅವಧಿಯಲ್ಲಿ ಈ ಬಗೆಯ -ಭಟ್ಟ, ಕೆಲವು ವ್ಯಕ್ತಿಗಳ ಹೆಸರುಗಳು ಅಗ್ರಹಾರಗಳಿಗೆ ನಿದೇಶಿಸಿದ್ದು ತಿಳಿಯುತ್ತದೆ. ರಾಜ, ಮಂತ್ರಿ, ಸಾಮಂತಾದಿ ಅಧಿಕಾರಿಗಳು ದಾನವಾಗಿ ನೀಡಿದಂತಹ ಊರುಗಳಿಗೆ ಆಯಾ ರಾಜ, ಮಂತ್ರಿ, ಸಾಮಂತರ ಹೆಸರುಗಳೊಂದಿಗೆ ಅಗ್ರಹಾರಗಳು ಉಲ್ಲೇಖಗೊಂಡಿವೆ. ಉದಾ: ಸೋಮೇಶ್ವರ ಅಗ್ರಹಾರ, ಅದರಂತೆ ಅಗ್ರಹಾರದಲ್ಲಿ ವಾಸಿಸುವ ಬ್ರಾಹ್ಮಣ ಸಮುದಾಯದ ಹಿರಿಯ ಪಂಡಿತ, ನಾಯಕನಾದವನ ಹೆಸರಿನಲ್ಲಿಯೂ ಚಾಲ್ತಿಗೆ ಬಂದಿವೆ. ಉದಾ: ಪುಜಾರಹಳ್ಳಿ, ಭಟ್ಟರಹಳ್ಳಿ, ಅಯ್ಯನಹಳ್ಳಿ, ಅಯ್ಯನೂರು, ಬೋಮ್ಮನಹಾಳ್ ಮುಂತಾದವುಗಳಿವೆ.

ಇವು ಎಷ್ಟರಮಟ್ಟಿಗೆ ಬ್ರಾಹ್ಮಣ ಸಮುದಾಯವನ್ನು ಸೂಚಿಸುತ್ತವೆಂಬುದು ಕುತೂಹಲಕರ ಸಂಗತಿ. ಬ್ರಾಹ್ಮಣರನ್ನು ಅಯ್ಯ, ಭಟ್ಟ, ಸ್ವಾಮಿ ಎಂತಲೂ ಕರೆಯುವ ರೂಢಿಯಲ್ಲಿದೆ. ಅಯ್ಯ ಎಂಬ ಪದಕ್ಕೆ ಶಿಕ್ಷಕ ಉಪಾಧ್ಯಾಯ ಎಂಬ ಅರ್ಥವು ಗಡಿ ಭಾಗದಲ್ಲಿದೆ. ಜಂಗಮರಿಗೂ ಅಯ್ಯ ಎಂತಲು ಕರೆಯುತ್ತದೆ. ಇದು ಮಠ ಮಾನ್ಯಗಳನ್ನು ಆರಂಭಿಸಿ ಶಿಕ್ಷಣವನ್ನು ನೀಡಿದರು. ಇದರಿಂದಾಗಿ ಅಯ್ಯನವರು ಎಂಬ ಪದದಿಂದ ವೀರಶೈವ ಸಮುದಾಯವನ್ನು ಕರೆಯಲಾಗುತ್ತದೆ.

ಬ್ರಾಹ್ಮಣ ಸಮುದಾಯಕ್ಕೆ ಸಂಬಂಧಿಸಿದ ಸ್ಥಳ, ಗ್ರಾಮನಾಮಗಳು ಬಳ್ಳಾರಿ ಜಿಲ್ಲೆಯಲ್ಲಿ ವಿರಳವಾಗಿವೆ. ಅಲ್ಲದೇ ಅಗ್ರಹಾರ ಮತ್ತು ಬ್ರಾಹ್ಮಣ ಸಂಬಂಧಿ ವ್ಯಕಿನಾಮಗಳಿಂದ ನಿರ್ದೇಶನಗೊಂಡ ಊರುಗಳು ಇಲ್ಲಿ ದೊರಕುತ್ತವೆ. ಬ್ರಾಹ್ಮಣ ಪದಕ್ಕೆ ಸಮಾನವಾದದು ತೆಲುಗು ಭಾಷೆಯಲ್ಲಿ -ಬಾಪುಲ ಎಂಬ ಪದ, ಗಡಿಭಾಗದಲ್ಲಿ ಈ ಬಗೆ ಗ್ರಾಮನಾಮಗಳಿವೆ.

ಬ್ರಾಹ್ಮಣರಿಗೆ ದಾನಾವಾಗಿ ನೀಡಿದ ಊರುಗಳು ಅಗ್ರಹಾರಗಳು- ಇದೇ ಹೆಸರಿನ ಮೇಲೆ ಇಂದಿಗೂ ಗಡಿಭಾಗದಲ್ಲಿ ಕೆಲವು ಗ್ರಾಮಗಳಿವೆ.

ಬೊಮ್ಮ: ನಿರ್ದಿಷ್ಟವನ್ನು ಹೊಂದಿದ ವಾಸ್ತವ್ಯಗಳು

೧. ಬೊಮ್ಮಲಾಪುರ : ಸಿರಿಗುಪ್ಪ

೨. ಬೊಮ್ಮನಹಾಳ್ : ಬಳ್ಳಾರಿ

೩. ಬೊಮ್ಮಪಲ್ಲಿ : ಅಧೋನೊ

೪. ಹಗರಿ ಬೊಮ್ಮನಹಳ್ಳಿ : ಬಳ್ಳಾರಿ

ಹಾರುವ ಮುಂತಾದ ನಿರ್ದಿಷ್ಟ, ವಾರ್ಗಿಕಗಳನ್ನು ಹೊಂದಿದ ಸ್ಥಳನಾಮಗಳಿವೆ. ಶಾಸನಗಳಲ್ಲಿಯೂ ಅಗ್ರಹಾರಗಳ ಕುರಿತಗಿ ಉಲ್ಲೇಖಗಳಿವೆ. ಚಾಲುಕ್ಯ ರಾಷ್ಟ್ರಕೂಟ ಹಾಗೂ ವಿಜಯನಗರದ ಅರಸರ ಆಡಳಿತದ ದಟ್ಟವಾದ ಪ್ರಭಾವವಿರುವ ಈ ಭಗದಲ್ಲಿ ಕನ್ನಡ ತೆಲುಗು, ಶಾಸನಗಲ್ಲಿ ಅಗ್ರಹಾರಗಳನ್ನು ಹೆಸರಿಸಲಾಗಿದೆ.

ಉದಾ: ಕುಡುತುಣಿ ಅಗ್ರಹಾರ

ಕುರಂಗೋಡು ಸರ್ವಮಾನ್ಯದಗ್ರಹಾರ

ಸೋಮಸಮುದ್ರವೆಂಬ ಸರ್ವಮಾನ್ಯದಗ್ರಹಾರ

ಸೋಮಸಮುದ್ರ, ಕುಡುತುಣಿ, ಕುರುಂಗೋಡು ಇಂಥ ಅನೇಕ ಗ್ರಾಮಗಳು ಹಿಂದೆ ಅಗ್ರಹಾರಗಳಾಗಿದ್ದವು. ಶಾಸನೋಕ್ತ ಅಗ್ರಹಾರಗಳೆಲ್ಲ ಇಂದು ಅದೇ "ಅಗ್ರಹಾರ" ಎಂಬ ಹೆಸರಿನಿಂದ ಕರೆಯಲ್ಪಡುತ್ತಿಲ್ಲ. ಕಾಲಾಂತರದಲ್ಲಿ ಅವು ಖಿಲಗೊಂಡಿದುದು ತಿಳಿಯುತ್ತದೆ. ಇಂದಿನ ಆಧುನಿಕ ವಿದ್ಯಾಮಾನದಲ್ಲಿಯೂ ಕೆಲವು ನಗರಗಳಲ್ಲಿ ಬ್ರಾಹ್ಮಣ ಸಮುದಾಯ ಪ್ರತ್ಯೇಕವಾಗಿ ವಾಸಿಸುತ್ತಿರುವುದು ಕಂಡು ಬರುತ್ತದೆ. ಅವರು ತಮ್ಮ ವಾಸ್ತವ್ಯಗಳಿಗೆ ವೈಷ್ಣವ ಸಂಬಂದೀ ದೈವ ಮೂಲದ ಹೆಸರುಗಳನ್ನು ನಿರ್ದೇಶಿಸಿಕೊಂಡಿರುವುದು ಕಂಡು ಬರುತ್ತದೆ.

ಉದಾ: ರಾಘವೇಂದ್ರ ಕಾಲೋನಿ

ವೆಂಕಟೇಶ್ವರನಗರ

ಸತ್ಯನಾರಾಯಣಪೇಟೆ

ವೈದಿಕರು, ವೈಷ್ಣವ ಸಂಬಂಧೀ ಹೆಸರುಗಳನ್ನು ಗ್ರಾಮಗಳಿಗೂ ಇಟ್ಟಿದ್ದಾರೆ. ಅದರಂತೆ ಕೆಲವು ದೇಶದಲ್ಲಿ ಶೈವ ಸಂಬಂಧೀ ಬ್ರಾಹ್ಮಣರು ಅಗ್ರಹಾರಗಳಲ್ಲಿದ್ದು, ಶಿವನಿಗೆ ಸಂಬಂಧಿಸಿದ ಹೆಸರುಗಳನ್ನು ತಮ್ಮ ವಾಸ್ತವ್ಯಗಳಿಗೆ ಕರೆದಿದ್ದಾರೆ. ಬೊಮ್ಮ: ಎಂಬ ನಿರ್ದಿಷ್ಟದಿಂದ ಆರಂಭವಾಗುವ ಸ್ಥಳನಾಮಗಳನ್ನು ಬ್ರಾಹ್ಮಣರ ನೆಲೆಗಳೆಂದು ಗುರುತಿಸುವಲ್ಲಿ ನೆರವು ಗೊಂದಲಗಳಿವೆ. ಆಂಧ್ರ ಕರ್ನಾಟಕ ಗಡಿಭಾಗದಲ್ಲಿ ಈ ಪದದಿಂದ ಆರಂಭವಾಗುವ ಸ್ಥಳನಾಮಗಳು ಕೆಲವು ಮಾದರಿಗಳು ಹೀಗಿವೆ.

ಪುರುಷ ಸಂಬಂಧವಾಚಿ ಪದ-ನ ವ್ಯಕ್ತಿನಾಮ ಸಂಬಂಧಿ ಊರುಗಳೆಂಬಂತೆ ತೋರುವ ಗ್ರಾಮನಮಗಳಿವೆ.

ಉದಾ: ಬೊಮ್ಮನಹಾಳ್ : ಬಳ್ಳಾರಿ
ಹಗರಿಬೊಮ್ಮನಹಳ್ಳಿ : ಬಳ್ಳಾರಿ

ಸಾಮಾನ್ಯವಾಗಿ ಕರ್ನಾಟಕದಲ್ಲಿ ಕಂಡು ಬರುವ 'ಬೊಮ್ಮ' ಸಂಬಂಧಿ ಹೆಸರುಗಳು ಬ್ರಾಹ್ಮಣರ ನೆಲೆಗಳೆಂದು ಗುರುತಿಸಬಹುದಾದರೂ, ಕೆಲವು ದ್ವಂದ್ವಗಳು ಮೇಲಿನ ಉದಾಹರಣೆಯಲ್ಲಿವೆ.- ಬೊಮ್ಮಲಾ' ಎಂಬುದಾಗಿ ಸ್ಥಳನಾಮ ಆರಂಭವಾದಗ ಅದರಲ್ಲಿನ -ಲಾ' ಸ್ತ್ರೀವಾಚಿಪದವಾಗುತ್ತದೆ. ಕರ್ನಾಟಕದಲ್ಲಿ ಕಂಡುಬರುವ ನಾಗಲಾ-ಶಾಂತಲಾ-ಶಕುಂತಲಾ ಮುಂತಾದ ವ್ಯಕ್ತಿನಾಮಗಳಲ್ಲಿ 'ಲಾ'ಪದವು ಕೊನೆಯಲ್ಲಿದೆ. ಇದರಿಂದಾಗಿ ಬ್ರಾಹ್ಮಣರ ನೆಲೆಯೆಂದು ಹೇಳಲು ಹಲವು ಸಂದೇಹಗಳು ಬರಬಹುದು.

೫.೫(೨) ವೈಶ್ಯರು:

ವೈಶ್ಯರು ವ್ಯಾಪಾರಿಗಳು, ಗ್ರಾಮಗಳು ವ್ಯಾಪಾರದ ದೃಷ್ಟಿಯಿಂದ ನಗರೀಕರಣಕ್ಕೆ ಒಳಗಾಗುವುದಕ್ಕೆ ಇವರ ಕೊಡುಗೆಯಿದೆ. ವ್ಯಾಪಾರ ಮಾಡುವುದರಿಂದ ಈ ಸಮುದಾಯವನ್ನು ಶೆಟ್ಟಿ ಎಂಬ ಪದದಿಂದ ಗರುತಿಸಲಾಗಿದೆ. ಇವರು ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ ಭಾರತದ್ಯಾಂತ ವಾಸಿಸುತ್ತಿದ್ದಾರೆ. ಪ್ರಾಚೀನ ಕರ್ನಾಟಕದಲ್ಲಿ ವ್ಯಾಪಾರಿಗಳ ಸಂಘವಿದ್ದು, ಈ ವಣಿಕರ ಕುರಿತಗಿ ಮತ್ತು ಪಟ್ಟಣಶೆಟ್ಟಿಗಲ ಕುರಿತಾಗಿ ಕೆಲವು ಶಾಸನಗಳು ಉಲ್ಲೇಖಗೊಂಡಿವೆ. ಶೆಟ್ಟಿಗಳು ವ್ಯಾಪಾರ ಕೈಗೊಂಡದ್ದರಿಂದ ಅವರನ್ನು "ಪಟ್ಟಣಶೆಟ್ಟಿ" ಗಳೆಂದು ಗುರುತಿಸಲಾಗಿದೆ. ವ್ಯಾಪಾರ ಮಾಡಿಕೊಂಡು ಶ್ರೀಮಂತರಾದ ಶೆಟ್ಟರು ಗ್ರಾಮಗಳನ್ನು ನಿರ್ಮಿಸಿದ ಉದಾಹರಣೆಗಳನ್ನು ಶಾಸನಗಳು ವ್ಯಕ್ತಪಡಿಸಿವೆ. ನಿರ್ಮಿಸಿದ ಗ್ರಾಮಗಳಿಗೆ ತಮ್ಮ ಹೆಸರನ್ನು ನೀಡಿದ ಬಗ್ಗೆ ಮಾಹಿತಿಗಳಿವೆ. -ಶೆಟ್ಟಿ' ಪೂರ್ವಪದಕ್ಕೆ ಹಳ್ಳಿ, ಕೆರೆ, ಕುಂಟೆ, ಬೀಡು, ಕೊಪ್ಪ, ಪಲ್ಲಿಗಳು ಉತ್ತರಪದವಾಗಿ ಬಂದಂತಹ ಸ್ಥಳನಾಮಗಳು ಕನ್ನಡ ನಾಡಿನಲ್ಲಿವೆ.

ಪೊಳಲ್ ಶೆಟ್ಟಿಹಳ್ಳಿ : ಕೋಲಾರ ಜಿಲ್ಲೆ
ಶಂಕರಶೆಟ್ಟಿಹಳ್ಳಿ : ಮೈಸೂರು ಜಿಲ್ಲೆ
ಸೋಮಶೆಟ್ಟಿಹಳ್ಳಿ : ಕೋಲರ ಜಿಲ್ಲೆ

೫.೫(೩) ಲಿಂಗಾಯತರು: (ಶೈವ)

ಲಿಂಗಾಯಿತರ ಊರುಗಳನ್ನು ಮುಖ್ಯವಾಗಿ ಎರಡು ರೀತಿಯಲ್ಲಿ

ಗುರುತಿಸಬಹುದಾಗಿದೆ. ಹನ್ನೇರಡನೇಯ ಶತಮಾನದಲ್ಲಿ ಆರಂಭವಾದ ವೀರಶೈವ ಧರ್ಮದಿಂದ ಉಂಟಾದ ಸ್ಥಳನಾಮಗಳು ಹಾಗೂ ಈ ಧರ್ಮಕ್ಕಿಂತ ಮುಂಚೆ ಇದ್ದ ಶೈಎವ ಪಂಥದಿಂದ ನಿರ್ದೇಶಿಸಲ್ಪಟ್ಟ ಸ್ಥಳನಾಮಗಳು. ಶೈವ ಪಂಥದ ದೈವಗಳಾದ ವೀರಭದ್ರ, ಶಿವ, ಪರಮೇಶ್ವರ, ಲಿಂಗ, ನಂದಿ ಮುಂತಾದ ಹೆಸರುಗಳಿಂದ ಶೈವ ಸ್ಥಳನಾಮಗಳಿವೆ. ವೀರಶೈವ ಪಂಥದ ಪ್ರಬಾವದಿಂದ ಗ್ರಾಮನಾಮಗಳಲ್ಲಿ ಅಯ್ಯ, ಜಂಗಮ, ಒಡೆಯ, ಮಠ, ಬಸವ, ಸಿದ್ದರಾಮ ಮುಂತಾದ ಪದಗಳಿವೆ. ಅಂತಹ ಕೆಲವು ಉದಾಹರಣೆ ಇಲ್ಲಿವೆ.

೫.೫(೪) ಶೈವ ಸಂಬಂಧಿ ಸ್ಥಳನಾಮ:

೧. ಪರಮದೇವನಹಳ್ಳಿ : ಬಳ್ಳಾರಿ

೨. ಬೈರದೇನಹಳ್ಳಿ : ಬಳ್ಳಾರಿ

೩. ಸಿದ್ದರಗಡ್ಡ

೪. ಶಂಕರಬಂಡೆ

ಲಿಂಗಾಯತರ ಸಂಬಂದಿಸಿದ ಸ್ಥಳನಾಮಗಳನ್ನು ಹೇಳುವಾಗ ಶ್ರೀ ಎಚ್.ಎಸ್. ಬ್ರಹ್ಮಾನಂದ ಅವರು ಈ ರೀತಿ ಅಭಿಪ್ರಾಯಪಡುತ್ತಾರೆ. "ಇವರು ಕೇವಲ ಲಿಂಗಾರಾಧಕರು ಲಿಂಗವನ್ನು ಪೂಜಿಸುತ್ತಾರೆ. ಈ ಕಾರಣದಿಮದಾಗಿ ಲಿಂಗದ ಅರಾಧಾನಾ ಸಂಬಂಧಿಯಾಗಿ ಬರುವ ಸ್ಥಳನಾಮಗಳು ಇವರಿಗೆ ಸಂಬಂಧಿಸಿವೆ. ಲಿಂಗದಹಳ್ಳಿ-(ರಾಯದುರ್ಗಂ-ತಾಲೂಕು) ಯನ್ನು ಹೆಸರಿಸಿದ್ದಾರೆ. ಬ್ರಾಹ್ಮಣರಿಗೆ ನೀಡಿದ ಊರುಗಳನ್ನು ಅಗ್ರಹಾರಗಳೆಂದು ಕರೆದರೆ, ಶೈವರಿಗೆ ನೀಡಿದ ಉರುಗಳನ್ನು " ಶಿವಪುರ" ಎಂದು ಕರೆಯುತ್ತಿದ್ದರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಶಿವಪುರಗಳನ್ನು ಶೈವರಿಗೆ ದಾನಕೊಟ್ಟಂತಹ ಉಲ್ಲೇಖಗಳು ಶಾಸನಗಳಲ್ಲಾಗಲೀ, ಇತರೆ ದಾಖಲೆಗಳಲ್ಲಾಗಲೀ ಮಹಿತಿ ದೊರೆಯುವುದಿಲ್ಲ. ಬದಲಾಗಿ ಈಶ್ವರಪುರ, ಸೋಮಸಮುದ್ರ ಎಂಬಂತಹ ಸ್ಥಳನಾಮಗಳು ಉಲ್ಲೇಖವಾಗಿವೆ. ಆದರೂ ಇವು ಶೈವರಿಗೆ ನೀಡಿದಂತಹ ಕೊಡುಗೆಗಳಲ್ಲವೆಂಬುದು ಸ್ಪಷ್ಟವಾಗುತ್ತದೆ.

೫.೫(೫) ಕುರುಬರು:

ಕಾಡು ಕುರುಬರು ಮತ್ತು ಜೇನು ಕುರುಬರು ಕರ್ನಾಟಕ ಬುಡಕಟ್ಟುಗಳು. ಕುರುಬ' ಎಂಬ ಪದವು "ಕುರು" ಎಂಬ ಪದದಿಂದ ನಿಷ್ಪನ್ನವಾಗಿದೆ. "ಕುರು ಪದವು ಕುರಿ' ಎಂಬ ಪ್ರಾಣಿಯನ್ನು" ತಿಳಿಸುತ್ತದೆ. ಈ ಕಾರಣದಿಂದಾಗಿ ಇವರು ವಾಸಿಸುವ ನೆಲೆಗಳಿಗೆ ಅದೇ

ಹೆಸರಿನಿಂದ ಕರೆದುಕೊಂಡಿರುವುದು ವಿಶೇಷವಾಗಿ ಕಂಡುಬರುತ್ತದೆ. ಉತ್ತರ ಮುಬಾರಿನ ಕುರುಂನಾಡು.(೧೧) ಎಂಬ ಹೆಸರಿನ ತಾಲೂಕು ಜನಾಂಗವನ್ನು ಪ್ರತಿನಿಧಿಸುವಲ್ಲಿ ಸಾಕ್ಷಿಯಾಗಿದೆ. ಹೀಗೆ ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಸಮುದಾಯಕ್ಕೆ ಸಂಭಂದಿಸಿದ ಕೆಲವು ಗ್ರಾಮಗಳಿವೆ. " ಕಾಡು ಕುರುಬರು ಮತ್ತು ಜೇನು ,ಕುರುಬರು ವಾಸಿಸುವ ಪ್ರದೇಶಗಳನ್ನು "ಹಾಡಿ" ಗಳೆಂದು ಕರೆಯುವ ರೂಢಿಯಿದೆ.(೧೨) ಹಟ್ಟಿಕಾರರು, ಕುರುಬರು, ಈ ನಾಡಿನ ಮೂಲ ನಿವಾಸಿಗಳು, ಇವರು ಹಟ್ಟಿ ಮತ್ತು ಹಾಡಿಗಳಲ್ಲಿ ವಾಸಿಸುತ್ತಾರೆ ಎಂದು ಶಂಬಾ ಅವರು ಗುರುತಿಸಿದ್ದಾರೆ. ಅದ್ದರಿಂದ ಹಟ್ಟಿ, ಹಾಡಿ ಎಂಬ ವಾರ್ಗಿಕಗಳು ಪ್ರಾಚೀನವಾದವುಗಳು ಎಂದು ತಿಳಿಯುತ್ತದೆ. ಗಡಿಭಾಗದ ಕುರುಬರ ನೆಲೆಗಳೆಂದು ಗುರುತಿಸಬಹುದಾದ ಉದಾಹರಣೆಗಳು ಹೀಗಿವೆ.

೧.	ಕುರುವಳ್ಳಿ	:	ಸಿರುಗುಪ್ಪ
೨.	ಕುರೆಕುಪ್ಪೆ	:	ಬಳ್ಳಾರಿ
೩.	ಕುರುಗೋಡು	:	ಬಳ್ಳಾರಿ
೪.	ಕೂರಿಗನೂರು	:	ಸಿರುಗುಪ್ಪ
೫.	ಕುರುಳೆಹಳ್ಳಿ	:	ಆಲೂರು

ಎಂಬ ಸ್ಥಳನಾಮಗಳಲ್ಲಿ–ಕುರು' ಎಂಬ ಪೂರ್ವಪದವು ಆರಂಭದಲ್ಲಿ ಚರ್ಚಿಸಿದಂತೆ "ಕುರುಬ' ಪದವನ್ನು ವಿವರಿಸುತ್ತದೆ. 'ಕುರು' ಪದವು ಕುರಿ' ಎಂಬ ಪ್ರಾಣಿಯನ್ನು ಹೇಳುತ್ತದೆ. ಹೆಚ್ಚಾಗಿ ಕುರುಬರು ಆರಂಭದಲ್ಲಿ ಗುಡ್ಡಗಾಡುಗಳಲ್ಲಿ, ಬೆಟ್ಟಗಳ ಬದಿಯಲ್ಲಿ ಹಾಡಿ ಹಟ್ಟಿಗಳನ್ನು ನಿರ್ಮಿಸಿಕೊಂಡು ಕುರಿಗಳನ್ನು ಸಾಕುತ್ತಿದ್ದ ಬಗ್ಗೆ ಶಂಬಾ ಅವರು ವಿವರ ನೀಡುತ್ತಾರೆ. ಈ ದೃಷ್ಟಿಯಿಂದ ಗಡಿಭಾಗದಲ್ಲಿರುವ ಮೇಲಿನ ಗ್ರಾಮನಾಮಗಳು ಬೆಟ್ಟಗಳಿಂದ ಕೂಡಿದ್ದು, ಇಲ್ಲಿ ಕುರುಬರು ವಾಸಿಸುತ್ತಿದ್ದ ಬಗೆಗೆ ಸ್ಥಳೀಯ ಮಾಹಿತಿ ದೊರೆಯುವುದರಿಂದ ಕುರುಬರಿಗೆ ಸಂಬಂಧಿಸಿದ ವಾಸ್ತವ್ಯಗಳೆಂದು ಗರುತಿಸಬಹುದು. ಕುರು ಎಂಬ ಪದವು ಗುರುತು, ಕುರುಹು ಎಂಬಾರ್ಥಗಳನ್ನು ನೀಡುತ್ತದೆ. ಅಲ್ಲದೆ ಕೆಲವು ಐತಿಹ್ಯಗಳು ಸಮುದಾಯವನ್ನು ಬಿಂಬಿಸದೇ ಬೇರೆ ರೀತಿಯಲ್ಲಿ ವಿವರಿಸುತ್ತವೆ. ಅಂತಹ ಆಧಾರಗಳಿಂದ ಮೇಲಿನ ಹೆಸರುಗಳು ಕುರುಬರ ನೆಲೆಗಳಾಗಿದ್ದವೆಂದು ಗುರುತಿಸಬಹುದು.

೫.೫(೬) ಗೊಲ್ಲರು:

ವೈದಿಕ ಕಾಲದ ಗ್ರಾಮ ಸಮುದಾಯಗಳ ಸಾಮಾಜಿಕ ವ್ಯವಸ್ಥೆಯ ಬಗ್ಗೆ ವಿಪುಲ ಮಾಹಿತಿಯು ಅಂದಿನ ಬರೆಹಗಳಲ್ಲಿ ದೊರೆಯುತ್ತವೆ. ವಾಲ್ಮೀಕಿ ರಾಮಾಯಾಣದಲ್ಲಿ ಘೋಷ್ ಮತ್ತು ಗ್ರಾಮ ಎಂಬ ಎರಡು ಘಟಕಗಳ ಉಲ್ಲೇಖವಿದೆ. ಒಂದನೆಯದು, (ಘೋಷ್) ಸಣ್ಣ ಗಾತ್ರದ್ದಾದರೆ, ಎರಡನೆಯದು, (ಗ್ರಾಮ) ದೊಡ್ಡದು. ಈ ಗ್ರಾಮಗಳು ಅರಣ್ಯಕ್ಕೆ ಸಮೀಪದಲ್ಲಿರುತ್ತವೆಂದು ಹೇಳಲಾಗಿದೆ. ಅದ್ದರಿಂದ ಇಲ್ಲಿ ಒಂದು ಸಮುದಾಯ ವಾಸಿಸುತ್ತದೆ. ಗೊಲ್ಲರಲ್ಲಿ ಕಾಡು ಗೊಲ್ಲರೆಂಬ ಪ್ರತ್ಯೇಕ ಸಮುದಾಯವಿದೆ. ಚಿಕ್ಕ ಗ್ರಾಮ ನಿವಾಸಿಗಳನ್ನು- ಗೋಪರು' ಎಂದು ಕರೆಯಲಾಗುತ್ತದೆ. ಇವರ ಮುಖ್ಯ ವೃತ್ತಿ ಪಶೂ ಸಂಗೋಪನೆ ಮತ್ತು ಹೈನುಗಾರಿಕೆಯಾಗಿತ್ತು. ದನಗಾರಿಕೆ ಗೊಲ್ಲ ಜನಾಂಗದ ಪಾರಂಪರಿಕ ವೃತ್ತಿ. ಈ ದನಗಾರರ ಬಗ್ಗೆ ಶಂಬಾ ಜೋಷಿಯವರು ಹಾಲು ಮತ ದರ್ಶನ ಕೃತಿಯಲ್ಲಿ ಚರ್ಚಿಸುತ್ತಾರೆ. ಕುಂಟೆ>ಕುಡಿ>ಕುಡ>ಕುಳ>ಹಟ್ಟಿಕಿಪಾಡಿ>ಹಾಡಿ ಇವುಗಳೆಲ್ಲವು ಗೋವಳಿನಗರ ವಸತಿಗಳೆಂದು ಅವರು ವಾದಿಸುತ್ತಾರೆ. ಪಟ್ಟೆಯು ಈ ನಾಡವರ ತೀರ ಆರಂಭಕಾಲದ ದನಗಾರಿಕೆಯ ಮಟ್ಟದ ಬಿಡಾರವೆಂದು ಶಂಬಾ ಅವರು ತೀರ್ಮಾನಿಸಿರುವರು" (೧೩) ಮುಂದುವರೆದು ಗೌಡರೆಂದರೆ ಗೌಳರು, ಗೋಳ್ವರೆಂಬಲ್ಲಿ ಸಂದೇಹವಿಲ್ಲ" (೧೪) ಎನ್ನುತ್ತಾರೆ. ಆದರೆ ಈ ಬಗೆಗೆ ಅವರಿಗೂ ಗೊಂದಲಗಳಿದ್ದಂತೆ ತೋರುತ್ತದೆ.

ಹಟ್ಟಿ, ಪಲ್ಲಿ, ಬೀಡು, ಗದ್ದೆ ಮುಂತಾದ ವಾರ್ಗಿಕಗಳು- ಗೊಲ್ಲ ಎಂಬ ಜಾತಿವಾಚಿ ನಿರ್ದಿಷ್ಟಕ್ಕೆ ಸರಿ ಹೊಂದುತ್ತವೆ. ಈ ಸಮುದಾಯ ನೆಲೆಸಿದಲ್ಲಿ ಜನಸಂಖ್ಯೆಯ ಬಾಹುಳ್ಯದಿಂದ ತಮ್ಮ ಜನಾಂಗದ ಹೆಸರನ್ನೇ ಇಟ್ಟುಕೊಂಡಿರುವುದು ತಿಳಿಯುತ್ತದೆ.

೫.೫(೭) ವಡ್ಡರು:

ಕಲ್ಲು ಒಡೆಯುವುದು, ಮನೆಯನ್ನು ಕಟ್ಟುವುದು ಇವರ ಪಾರಂಪರಿಕ ವೃತ್ತಿ. ಈ ಸಮುದಯದ ಹೆಸರಿನಿಂದಲೂ ಸ್ಥಳನಾಮಗಳಿವೆ.

೧. ಕಲ್ಲುಕುಟ್ಟಿಹನಹಾಳ್ : ಬಳ್ಳಾರಿ

೨. ವಡ್ಡರಬಂಡೆ : ಬಳ್ಳಾರಿ

೩. ವಡ್ಡಟ್ಟಿ/ವಡ್ಡರಹಟ್ಟಿ : ಬಳ್ಳಾರಿ

ಇಲ್ಲಿರುವ "ಕಲ್ಲುಕುಟಿಗ" ಎಂಬುದು ಆಚಾರರಿಗೂ (ಶಿಲ್ಪಿ) ಸಂಬಂಧಿಸುತ್ತದೆ. ವಡ್ಡತ್ತಿಗೂ ಸಂಬಂಧಿಸುತ್ತದೆ. ವೃತ್ತಿಯಿಂದ ವಡ್ಡರ ಸಮುದಾಯವನ್ನು ಹೇಳುವ ಸ್ಥಳನಾಮ ಕರ್ನಾಟಕದಲ್ಲಿ ಕೇವಲ ಒಂದೇ ಒಂದು ಇದೆ. ಕ್ರಿ.ಶ. ೧೦೫೪ರ ಒಂದು ಶಾಸನ ಕಲ್ಕುಟಿಗನನ್ನು ಹೆಸರಿಸಿದೆ.(೧೩) ಶಿಲ್ಪಿ ಎಂದು ಕರೆಯಲ್ಪಡುವ ಸಮುದಾಯವು ವಿಶ್ವಬ್ರಾಹ್ಮಣರೆಂದು, ಅವರು ಸೂಕ್ಷ್ಮ ಕೆತ್ತನೆಯ ಕೆಲಸವನ್ನು ಮಾಡುತ್ತಾರೆ. ವಡ್ಡರೊಂದಿಗೆ ಅವರು ಗುರುತಿಸಿಕೊಳ್ಳುವುದಿಲ್ಲ.

೫.೫(೮) ಅಗಸರು:

ಬಟ್ಟೆ ತೊಳೆಯುವ ಪ್ರಾಚೀನ ವೃತ್ತಿ ಇವರದು. ಕಾವ್ಯ, ಶಾಸನಾದಿಗಳಲ್ಲಿ ಈ ಸಮುದಯದ ಉಲ್ಲೇಖವಿದೆ. ಮಡಿವಾಳ ಎಂಬ ಪದ ಈ ಸಮುದಾಯಕ್ಕೆ ಬಳಕೆಯಾಗುತ್ತದೆ. ಇವರಿಗೆ ಸಂಬಂಧಿಸಿದ ಸ್ಥಳನಾಮಗಳು ಬಳ್ಳಾರಿಯ ಗಡಿ ಭಾಗದಲ್ಲಿವೆ.

ಅಗಸೂರು

೫.೫(೯) ಲಂಬಾಣಿಗಳು:

ಲಂಬಾಣಿ ಸಮುದಾಯ ವಾಸಿಸುವ ಪ್ರದೇಶಕ್ಕೆ ಸಾಮಾನ್ಯವಾಗಿ 'ತಾಂಡಾ', ತಾಂಡೆ ಎಂದು ಕರೆಯುತ್ತಾರೆ. ಲಂಬಾಣಿಗರು ಇದನ್ನು-ತಾಂಡೋ ಎಂದು ಕರೆಯುತ್ತಾರೆ. ಇದು ಲಂಬಾಣಿಗರಿಗೆ ಸಂಕೇತ ಸೂಚಕವಾಗಿರುವ ಒಂದು ವಿಶಿಷ್ಟ ಪದ. ಬುಡಕಟ್ಟು ಜನಗಳಾದ ಇವರು ಸಾಮಾನ್ಯವಾಗಿ ಕಾಡು, ಕಣಿವೆ, ಬೆಟ್ಟ, ಗುಡ್ಡಗಳಿರುವ ಕಡೆಗಳಲ್ಲಿ ವಾಸಿಸುತ್ತಾರೆ. ಪೂರ್ವದಲ್ಲಿ ಅಲೆಮಾರಿಗಳಾಗಿದ್ದ ಇವರು ವ್ಯಾಪಾರ ನಿಮಿತ್ತ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಗುಂಪುಗಳಲ್ಲಿ ಸಂಚರಿಸುತ್ತಿದ್ದರು. ಕಾಲಾಂತರದಲ್ಲಿ ಅವರು ತಮ್ಮ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯೊಂದಿಗೆ ಊರುಗಳಿಂದ ದೂರದಲ್ಲಿ ಪ್ರತ್ಯೇಕ ತಾಂಡಗಳನ್ನು ನಿರ್ಮಿಸಿಕೊಂಡು ನೆಲೆಸಿದರು. ನಗರ, ಗ್ರಾಮ, ಸಂಸ್ಕೃತಿಉ ರಕ್ಷನೆಗೆಮದು ದೂರ ಉಳಿದಿರಬಹುದು. ಲಂಬಾಣಿಗರು ತಮ್ಮ-ತಾಂಡೋಗಳಿಗೆ ತಮ್ಮದೇ ಆದ ಅಧಿಕೃತ ಹೆಸರುಗಳನ್ನು ಇಟ್ಟುಕೊಂಡಿರುವುದು ಅವರ ಸಂಸ್ಕೃತಿ, ಪರಂಪರೆ ಬಗೆಗೆ ಅವರಿಗಿರುವ ಅಭಿಮಾನ ವ್ಯಕ್ತವಾಗುತ್ತದೆ. ಇದು ಆ ಸಮಾಜದ ಆಂತರಿಕ ವ್ಯವಸ್ಥೆಯಾಗಿದ್ದು ಲಂಬಾಣಿಗರು ಮಾತ್ರ ಈ ವ್ಯವಸ್ಥೆಯನ್ನು ಅರಿತವರಾಗಿದ್ದಾರೆ. " ಲಂಬಾಣಿಗರು ತಮ್ಮನ್ನು ತಾವು

ಅಭಿಮನದಿಂದ "ಗೋರಮಾಟಿ" ಗಲೆಂದು ಕರೆದುಕೊಳ್ಳುವ ಹಾಗೆ ತಮ್ಮ ತಾಂಡಗಳಿಗೆ ತಮ್ಮದೇ ಅದ ಅಧಿಕೃತ ಹೆಸರುಗಳಿಂದ ಕರೆಯುತ್ತಾರೆ. ಅವರ ತಾಂಡಗಳಿಗೆ ಕೆಲವು ಸ್ವತಂತ್ರವಾದಂತಹ ಹೆಸರುಗಳೂ ಇವೆ.

"ಲಂಬಾಣಿಗರು ತಮ್ಮ ಆಂತರಿಕ ವ್ಯವಾಹಾರಕ್ಕಾಗಿ ತಾಂಡಗಳಿಗೆ-ನಾಯಕ್-ಭಗತ್‌ರ ಹೆಸರುಗಳನ್ನೂ ಸಂಕೇತವಾಗಿಟ್ಟುಕೊಳ್ಳುತ್ತಾರೆ(೨೯). ಹೀಗಾಗಿ ತಾಂಡೆಗಳಿಗೆ ಒಂದೊಂದಕ್ಕೆ ಎರೆಡೆರಡು ಹೆಸರುಗಳಿರುವುದು ತಿಳಿಯುತ್ತದೆ.

೫.೫(೧೦) ಉಪ್ಪಾರರು:

ಉಪ್ಪು ತಯಾರಿಸುವುದು ಮತ್ತು ಗೋಡೆ ಕಟ್ಟುವುದು ಇವರ ವೃತ್ತಿ. ಉಪ್ಪು ತೆರಿಗೆ (ಉಪ್ಪುದೆರೆ) ಪ್ರಾಚೀನ ಕರ್ನಾಟಕದಲ್ಲಿ ಇವರ ವೃತ್ತಿಗೆ ಇತ್ತು ೧೬ನೇ ಶತಮಾನದ ಶಾಸನ-ಉಪ್ಪಾರ ಎಂಬುದು ಒಂದು ಜಾತಿ ಎಂಬುದು ತಿಳಿಸುತ್ತದೆ" ಈ ಸಮುದಾಯಕ್ಕೆ ಸಂಬಂಧಿಸಿದ ಸ್ಥಳನಾಮಗಳು ಹೀಗಿವೆ.

ಉದಾ: ಉಪ್ಪಾರ ಹೊಸಳ್ಳಿ

೫.೫(೧೧) ಮುಂಡ/ವೆಂಡರು:

ಮೊಂಡ ಸಮುದಾಯವು ಮೂಲತಃ ಆಂಧ್ರದವರೂ ಇವರಿಗೆ ಸಂಬಂಧಿಸಿದ ಗಡಿ ಭಾಗದಲ್ಲಿ ಎರಡು ಗಾದೆಗಳಿವೆ.

೧. ಏರೂರು ಎಲ್ಲಿಟೋ ಮೊಂಡಿ ವೆಲಸಿನಟ್ಲು

(ಏರೂರು ಸೀಮೆಯಲ್ಲಿ ಮೊಂಡನು ಪ್ರಕಾಶಿಸಿದಂತೆ)

೨. ಎರುಕಲಮ್ಮ ಏರೂರಿಕಿ ಚುಟ್ಟಮಾ

(ಎರುಕಲಮ್ಮ ಏರೂರಿಗೆ ನೆಂಟಳೆ)

ಈ ಗಾದೆಯಿಂದ ವೊಂಡರು ಸ್ಥಳೀಂಯುವಾಗಿಂಯೋ ಅಥವಾ ಗಡಿ ರಕ್ಷಕರಾಗಿದ್ದುದ್ದರಿಂದಲೋ ಪ್ರಚಾರಕ್ಕೆ ಬಂದಿರುವಂತಿದೆ. ಆಲೂರು (ಆಂಧ್ರದ ಪ್ರದೇಶದಲ್ಲಿ) ಸುತ್ತುಮುತ್ತಲು ಮೊಂಡರು ವಾಸ ಮಾಡುತ್ತಿದ್ದಾರೆ. ಅಂತೂ ಊರ ಹೊರಗಿನ ಗಡಿಯನ್ನು ಸೂಚಿಸುವುದರಿಂದ ಭಿಕ್ಷುಕರಾಗಿ ಅಲೆಮಾರಿ ಜೀವನ ನಡೆಸುತ್ತಿದ್ದ ಮೊಂಡ ಸಮುದಾಯ ಗಡಿಯಲ್ಲಿ ಅಸ್ತ್ರಗಳನ್ನು ಎದುರಿಸಿ ಪ್ರಕಾಶಿಸುವಂತಹ ಹೊಲಿಕೆ ಇವರ ಧೈರ್ಯಕ್ಕೆ ಸಂಕೇತವಾಗಬಹುದು. ಮುಂಡರಿಗೆ ಸಂಬಂಧಿಸಿದ ಸ್ಥಳನಾಮ ಹೀಗಿದೆ.

ಉದಾ: ಮುಂಡರಗಿ

೫.೫(೧೨) ನಟುವರು:

ನಟವರ ವಸತಿ ವ್ಯವಸ್ಥೆಯ ಅಧ್ಯಯನ ಕೃತಿಯಿಂದ ಊರಿನವರೆಗೆ ನಡೆದುಬಂದುದು ತಿಳಿಯುತ್ತದೆ. ಆರಂಭದಲ್ಲಿ ನಾಟ್ಯ ಸಂಗೀತ, ಅಲಿಯುತ್ತ ಅಲೆಮಾರಿಗಳಾಗಿ ಇವರಿಗೆ ನಟುವರು ಹೆಂಗಸರ ಚೆಲುವು, ಸೌಂದರ್ಯ, ನಾಟ್ಯವನ್ನು ಕಂಡು ರಾಜರು ಆಶ್ರಯ ನೀಡಿದರು. ಈ ವೇಳೆಯಲ್ಲಿ ನಟುವರು ಊರುಗಳಲ್ಲಿ ವಾಸಿಸಲು ಆರಂಭಿಸಿದರು. “ಕೆಲವು ಸಲ ಇಡೀ ಊರೆ ನಟವರದಾಗಿರುತ್ತಿತ್ತು. ನಾಟ್ಯ ಮಾಡುವವರು ಮತ್ತು ಸಂಗೀತ ನುಡಿಸುವವರು ಬೇರೆ ಬೇರೆ ಊರುಗಳಲ್ಲಿ ವಾಸಿಸುತ್ತಿದ್ದರು. ಪ್ರಾಚೀನ ಕಾಲದಲ್ಲಿ ಸೂಳೆಯರು ದೇವದಾಸಿಂಯರು ಗಣಿಕೆಂಯುವರು ಎಂಬ ಮೂರು ಪಂಗಡಗಳು ನಟವರ ನಾಟ್ಯಪ್ರಿಯರಾಗಿದ್ದರು. ಸ್ಥಳನಾಮ ಅಧ್ಯಯನ ಸಂದರ್ಭದಲ್ಲಿ ಸೂಳೆ ಮತ್ತು ಗಣಿಕೆಯರಿಗೆ ಕಾಣಿಸಿ ಕೆಲವು ಗ್ರಾಮಗಳು ಬಹುಮುಖ್ಯವೆನಿಸಿದೆ. ಪ್ರಾಚೀನ ಕಾಲದಲ್ಲಿ ಸೂಳೆಯರಿಗಾಗಿಯೇ ಪ್ರತ್ಯೇಕ ಕೇರಿಗಳಿದ್ದು ಬಗೆಗೆ ಕುರುಗೋಡಿನ ಒಂದು ಶಾಸ ‘ಸೂಳೆಗೇರಿ’ಯನ್ನು ಉಲ್ಲೇಖಿಸುತ್ತದೆ. ರಾಜರು ಇವರಿಗೆ ಪ್ರತ್ಯೇಕ ಊರುಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಇದರಿಂದ ನಟುವ ಹೆಣ್ಣು ಮಕ್ಕಳು ಆ ಊರಿಗೆ ಕೆರೆ, ಬಾವಿ, ಕುಂಟೆ ಮುಂತಾದವುಗಳನ್ನು ಕಟ್ಟಿಸುತ್ತಿದ್ದರು. ಅಲ್ಲದೆ ಅನೇಕ ದೇವಸ್ಥಾನಗಳಿಗೆ ದಾನವನ್ನು ನೀಡಿದ್ದಾರೆ. ಅಲ್ಲದೇ ಕೆಲವು ಸೂಳೆಯರು ಗ್ರಾಮಗಳನ್ನು ನಿರ್ಮಿಸಿದ್ದಾರೆ.

“ಸೂಳೆಕೆರೆಗಳನ್ನು ಸಾಮಾನ್ಯವಾಗಿ ಜೈನ ವ್ಯಾಪಾರಿಗಳು ಕಟ್ಟಿಸಿದ ಕೆರೆಗಳಿರಬೇಕು. ಸೂಳೆ ಬಸದಿ>ಲೋಕಜಿನಾಲಯ’ ಎಂಬುದು ಶ್ರೀ ವಿಜಯ ಸೇನಾನಿ ಕಟ್ಟಿಸಿದ್ದಾನೆ. ಶೈವರು ಈ ಪದವನ್ನು ದೇವಸ್ಥಾನಗಳಿಗೆ ಬಳಸಿಲ್ಲ. ಶೈವೇತರರು ಬಳಸಿದ್ದಾರೆ. ಶೈವೇತರ ವ್ಯಾಪರಿಗಳಿಗೆ ಸೂಳೆ ಎಂಬ ಅಡ್ಡ ಹೆಸರು ಇತ್ತೆ? ಎಂದು ವಿದ್ವಾಂಸರು ಸಂದೇಹ ವ್ಯಕ್ತಪಡಿಸುತ್ತಾರೆ.

ಉದಾ: ಗೇಣಿಕೆಹಾಳ್

೫.೬ ಅಲೆಮಾರಿ (ತಾತ್ಕಾಲಿಕ) ಸಮುದಾಯಗಳ ಸ್ಥಳನಾಮಗಳು:

“ಭಾರತದಲ್ಲಿ ಅನೇಕ ಬುಡಕಟ್ಟು ಜನ ಸಮುದಾಯಗಳಿವೆ. ಈ ಬುಡಕಟ್ಟು ಜನಾಂಗಗಳಲ್ಲಿ ಕೆಲವು ಅಲೆಮಾರಿ ಜನಾಂಗಗಳಿವೆ. ಇಂತಹ ಕೆಲವು ಆದಿವಾಸಿ ಹಾಗೂ ಅಲೆಮಾರಿ ಜನಾಂಗಗಳು ತಾತ್ಕಾಲಿಕವಾಗಿ ಮಾತ್ರ ಒಂದೆಡೆ ನೆಲೆಸುತ್ತವೆ. ಈ ತಾತ್ಕಾಲಿಕವಾದ ನೆಲೆಯೂ ಕೂಡ ಗ್ರಾಮದ ಸ್ವರೂಪ ಪಡೆಯುತ್ತವೆ.” ಈ ರೀತಿಯ ಅಸ್ತಿತ್ವವನ್ನು ಪಡೆದ ನೆಲೆಸುವಿಕೆಗೂ ಒಂದೊಂದು ಹೆಸರು ನಿರ್ದೇಶಿತವಾಗಿರುತ್ತದೆ. ಮುಖ್ಯವಾಗಿ ಈ ಬಗೆ

ನೆಲೆಸುವಿಕೆಯೂ ಕೆಲವೇ ಮತ ಪಂಥದ ಜನರಿಗೆ ಇರುತ್ತದೆ. ಈ ಮೂಲಕ ಇವರು ನೆಲೆಸಿದ ಸ್ಥಳದ ಗುರುತಿಸುವಿಕೆಯನ್ನು ಶಾಶ್ವತವಾಗಿ ಅಲ್ಲಿ ನೆಲೆಸಿದ ಸಮುದಾಯಗಳು ಅವರು (ಅಲೆಮಾರಿ) ಹೆಸರಿನೊಂದಿಗೆ, ಇಲ್ಲವೇ ಅವರ ವೃತ್ತಿಯೊಂದಿಗೆ ಒಂದು ಹೆಸರನ್ನು ನೀಡಿಕೊಂಡು ಬಳಸುತ್ತಾರೆ. ಇವು ಶಾಶ್ವತವಾಗಿ ಹಾಗೆಯೇ ಕರೆಯಲ್ಪಡುತ್ತವೆ. ಅಲೆಮಾರಿ ಜನಾಂಗವು ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಕೆಲವೇ ಸಮಯ ವಾಸಿಸಿದರೂ, ಅಲ್ಲಿನ ಹೆಸರು ಮಾತ್ರ ಗಟ್ಟಿಯಾಗಿರುತ್ತದೆ. ಎಷ್ಟೋ ಹಳ್ಳಿಗಳಲ್ಲಿ ಅಲೆಮಾರಿ ಸಮುದಾಯವು ಶಾಶ್ವತವಾಗಿಯೂ ಉಳಿದುಕೊಂಡು ತಮ್ಮ ಸಮುದಾಯದ ಹೆಸರಿನ ಸ್ಥಳವನ್ನು ಉಳಿಸಿಕೊಂಡಿರುವುದು ಕಂಡು ಬರುತ್ತದೆ. ಅಲೆಮಾರಿ ಗ್ರಾಮ ಸಮುದಾಯವು ಗಡಿ ಪ್ರದೇಶದ ಗುಂಟ ವಾಸಿಸುತ್ತಿರುವುದು ತಿಳಿಯುತ್ತದೆ. ಅವರು ತಾವಿದ್ದಷ್ಟು ಕಾಲ "ಬಿಡಾರ" ಹೂಡುತ್ತಾರೆ. ನಂತರ ಮತ್ತೊಂದು ಕಡೆ ಹೋಗುತ್ತಾರೆ. ಅದಕ್ಕೆ ಅಲ್ಲಿನ ಸ್ಥಳೀಯರು ಅಂತಹ ಸಮುದಾಯದ ಹೆಸರುಗಳಿಂದಲೇ ಆ ಸ್ಥಳನಾಮವನ್ನು ಗುರುತಿಸುತ್ತಾರೆ.

ಜೋಗ್ಯಾರು ಬಯಲು

ಹಗಲೇಸಗಾರರ ಹಳ್ಳಿ/ ಬಯಲು

೫.೬(೧) ಡೊಂಬರು (ದೊಂಬರು):

ದೊಂಬಗ ನೆಲಿ ಇಲ್ಲ ಡಾಟಿಗೆ ಬೇಲಿ ಇಲ್ಲ ಇದು ಡೊಂಭರಿಗೆ ಸಂಬಂಧಿಸಿದ ಈ ಗಾದೆಯು ಡೊಂರಿಗೆ ಯಾವುದೇ ನಿರ್ದಿಷ್ಟ ವಸ್ತುವು ಇಲ್ಲ ಎಂಬುದನ್ನು ವಿವರಿಸುತ್ತದೆ. ಈ ಸಮುದಾಯ ಯಾವುದೇ ಪ್ರದೇಶದಲ್ಲಿ ಸ್ಥಿರವಾಗಿ ನಿಲ್ಲದೇ ಅಲೆಮಾರಿಗಳಾಗಿ ಬದುಕುತ್ತ ಬಂದು ಭೂ ಪ್ರದೇಶದ ವಿವಿಧ ಭೌಗೋಳಿಕ ಪರಿಸರದಲ್ಲಿ ಕಾಣಿಸಿಕೊಳ್ಳುತ್ತಾರೆ. ಅನುಕೂಲವಾತಾವರಣ, ಪ್ರದೇಶವನ್ನು ನೋಡಿ ನೆಲೆನಿಂತು ಗುಡಿಸಲುಗಳನ್ನು ಕಟ್ಟಿಕೊಂಡು ಹಟ್ಟಿ, ಕೆರೆ ಕಟ್ಟೆಗಳನ್ನು ಅಲೆಮಾರಿಯಾಗಿಯೇ ಉಳಿಯಿತು. ಹೋದೆಡೆಯೆಲ್ಲ ಸಂಚಾರ ಗುಡಿಸಲುಗಳನ್ನು ನಿರ್ಮಿಸಿಕೊಂಡರು ಸ್ಥಳೀಕೃತ ಗುಂಪುಗಳಲ್ಲಿ ಬಹುಪಾಲು ಬುಡಕಟ್ಟಿನವರೇ"

೫.೬(೨) ಹೆಳವರು:

ಹೆಳವರು ಅಲೆಮಾರಿ ಗುಂಪಾಗಿದ್ದು, ನಮ್ಮ ವೃತ್ತಿಯ ಕಾರಣದಿಂದಾಗಿ ವರ್ಷದುದ್ದಕ್ಕೂ ಅಲೆಯುತ್ತಾರೆ. ಚಕ್ಕಡಿಯೊಂದಿಗೆ ಹೋಗಿ, ಊರು ಅಂಚಿನಲ್ಲಿ ತಮ್ಮ ಚಕ್ಕಡಿಗಳನ್ನು ನಿಲ್ಲಿಸಿ ಕೆಲವು ದಿಗಳ ಕಾಲ ಇದ್ದು ಮುಂದೆ ಸಾಗುತ್ತಾರೆ. ಇವರು ದ್ವಿಭಾಷಿಗಳು. ಇವರು ವಾಸಿಸುವ ಸ್ಥಳಗಳನ್ನು 'ಹಟ್ಟಿ' ಹುಂಡಿ, ಪಾಳ್ಯಗಳೆಂದು ಕರೆಯುತ್ತಾರೆ. ಸಾಮಾನ್ಯವಾಗಿ ಈ ವಾರ್ಗಿಕಗಳು ದಕ್ಷಿಣ ಕರ್ನಾಟಕದ ಹೆಳವರು ವಾಸಿಸುವ ಸ್ಥಳಗಳಿಗೆ ಅನ್ವಯಿಸುತ್ತವೆ.

೫.೬(೩) ಸುಡಾಗಾಡ ಸಿದ್ದರು:

ಆಂದ್ರ ಮೂಲದ ಇವರು ಅಲೆಮಾರಿಗಳಾಗಿ ಕರ್ನಾಟಕದ ಕೆಲವು ಪ್ರದೇಶಗಳಲ್ಲಿಯೂ ವಾಸಿಸುತ್ತಿದ್ದಾರೆ. ಸಾಮಾನ್ಯವಾಗಿ ಊರಿನ ಹೊರಗೆ ತಮ್ಮದೇ ಆದ ಜನ ಸಮುದಾಯದಲ್ಲಿ ಇವರು ವಾಸಿಸುತ್ತಾರೆ. "ಸುಡಾಗಾಡು ಸಿದ್ದರ ಯಾವುದೇ ಹಟ್ಟಿಗೂ ಪ್ರತ್ಯೇಕವಾದ ಹೆಸರುಗಳು ಇರುವುದು ಕಾಣಿಸದು.(೩೮) ಸಾಮಾನ್ಯವಾಗಿ ಆಯಾ ಊರುಗಳ ಪಕ್ಕದಲ್ಲಿಯೇ ಬೀಡು ಬಿಟ್ಟಿರುವುದರಿಂದಾಗಿ ಊರುಗಳಿಗೆ ಇರುವ ಹೆಸರುಗಳಿಂದಲೇ ಅವರು ಪರಿಗಣಿಸಲ್ಪಡುತ್ತಾರೆ. ಆಂದ್ರದ ಗಡಿಯಲ್ಲಿರುವ " ಸಿದ್ದಾಪುರ-ಆಲೂರು ಸುಡಗಾಡು ಸಿದ್ದರ ಒಬ್ಬ ನಾಯಕನ ಹೆಸರಿನಿಂದ ಕರೆಯಲ್ಪಡುತ್ತದೆ. " ಸಿದ್ಧ" ಎಂಬ ಒಬ್ಬ ಕಾಡು ಪಾಪದವನು ಸುಡಗಾಡು ಕಾಯ್ದು ವೇಷಹಾಕಿ ಜೀವನ ಮಾಡುತ್ತಿದ್ದ, ತನ್ನ ಅಲ್ಪ ಮಾಟ ವಿದ್ಯೆಯಿಂದ ಜನರ ರೋಗ ರುಜಿಯನ್ನು ಕಳೆಯುತ್ತಿದ್ದ, ಇದರಿಂದ ಇವನು ವಾಸಿದ್ದ ಸ್ಥಳ ಸಿದ್ದಾಪುರ ಎಂದು ಹೆಸರಾಯಿತು.(೩೯) ಎಂಬೂದೊಂದು ಕಥೆಯಿದೆ. ಸಿದ್ಧ ಎಂಬ ಪದಾರಂಭವಾಗುವ ಅನೇಕ ಸ್ಥಳನಾಮಗಳಿವೆ. ಬಹುಶ: ಇವೆಲ್ಲವೂ ಈ ಸಮುದಾಯದ ಕುರುಹುಗಳೆಂದು ಹೇಳಲಾಗದು.

೫.೬(೪) ಹಗಲುವೇಷದವರು:

ಇವರು ತೆಲುಗು ಮೂಲದವರ. ಬಹುಪಾಲು ಅಲೆಮಾರಿಗಳಾದರೂ ವರ್ಷದ ಒಂದೆರೆಡು ತಿಂಗಳು ಒಂದು ಊರಿನಲ್ಲಿ ನೆಲೆ ನಿಲ್ಲೂವವರೂ ಆಗಿದ್ದಾರೆ.(೪೦) ಹೀಗೆ ಅವರು ನೆಲೆ ನಿಲ್ಲುವುದು ಪ್ರತಿವರ್ಷವೂ ಒಂದೇ ಊರಿನಲ್ಲಿ, ಇಂತಹ ಊರನ್ನು ಅವರು ತಮ್ಮ ಸ್ವಂತ ಊರೆಂದು ಕರೆದುಕೊಳ್ಳುತ್ತಾರೆ. ಉಳಿದ ತಿಂಗಳುಗಳಲ್ಲಿ ಅಲೆಮಾರಿಗಳು ಇವರು ವಾಸಿಸಲು 'ಗುಡಾರ' ಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಇವರು ವಾಸಿಸುವ ಗುಡಿಸಲುಗಳನ್ನು "ವಂಕರಗುಡುಸಿ" ಎಂದು ಕರೆಯುತ್ತಾರೆ.(೪೧) ಈ ಹೆಸರಿನಿಂದ ಇವರ ಸಂಸ್ಕೃತಿಯನ್ನು ಅರಿಯಬಹುದು. "ಆಂದ್ರ ಪ್ರದೇಶದಲ್ಲಿ ಇವರನ್ನು "ಬುಡ್ಗಜಂಗಾಲು" ಎಂದು ಕರೆಯುತ್ತಾರೆ.(೪೨)

೫.೭ ಅರೆಶಾಶ್ವತ ಸ್ಥಳನಾಮಗಳು:

ಇಂತಹ ನೆಲೆಸುವಿಕೆಯಲ್ಲಿ ಸಾಮಾನ್ಯವಾಗಿ ಐದು-ಹತ್ತು ವರ್ಷಗಳ ಕಾಲ ಒಂದು ಗುಂಪಿನ ಜನರು ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿ, ಕೃಷಿಗೊಂಡು ಆನಂತರ ಆ ಸ್ಥಳವನ್ನು ಬಿಟ್ಟು ಬೆರೆ ಪ್ರದೇಶಕ್ಕೆ ಹೋಗಿ ತಮ್ಮ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಾರೆ. " ಇಂತಹ ನೆಲೆಸುವಿಕೆಯೂ ಸಹ ಭಾರತದಲ್ಲಿ ಆದಿವಾಸಿ ಸಮುದಾಯದಲ್ಲಿ

ಕಂಡು ಬರುತ್ತದೆ. (೪೩) ಆಧುನಿಕವಾಗಿಯು ಈ ಬಗೆಯ ವಲಸೆ ಮತ್ತು ನೆಲೆಸುವಿಕೆಯೂ ಪ್ರಾದೇಶಿಕ ಮಟ್ಟದಲ್ಲಿ ಆಯಾ ಭೌಗೋಳಿಕ ಸನ್ನಿವೇಶದ ವಾತಾವರಣದಿಂದ ನಡೆಯುತ್ತದೆ. ಮುಖ್ಯವಾಗಿ ಆಂದ್ರಪ್ರದೇಶದ ಗುಂಟೂರು ಜಿಲ್ಲೆ ಹಾಗೂ ಬಹುತೇಕ ತೆಲಂಗಾಣ ಪ್ರದೇಶ ಪ್ರಾಕೃತಿಕವಾಗಿ ಪ್ರತಿಕೂಲ ವಾತಾವರಣದಿಂದ ಕೂಡಿರುತ್ತದೆ. ಅಲ್ಲಿನ ಜನತೆಯ ಕರ್ನಾಟಕ ಗಡಿ ಭಾಗಗಳಿಗೆ ವಲಸೆ ಬರುತ್ತಾರೆ. ಈ ವಲಸೆಯು ಶಾಶ್ವತವಾಗಿರದೇ ಅನುಕೂಲ ವಾತಾವರಣ ಅವರ ಪ್ರದೇಶದಲ್ಲಿ ಬರುವವರೆಗೆ ಇರುತ್ತದೆ. ಆ ಇರುವಿಕೆಯ ಅವಧಿಯಲ್ಲಿ ಅವರು ತಾವು ವಾಸ್ತವ್ಯ ಹೊಡಿದ ಸ್ಥಳಕ್ಕೆ ಕೆಲವು ಹೆಸರುಗಳನ್ನು ನೀಡಿರುತ್ತಾರೆ. ಬಳ್ಳಾರಿ-ರಾಯಚುರು-ಸಿಂಧನೂರು-ಸಿರುಗುಪ್ಪ ತಾಲುಕುಗಳ ಗಡಿಭಾಗಗಳಲ್ಲಿ ಈ ಬಗೆ ಅರೆ ಶಾಶ್ವತ ಗ್ರಾಮಗಳು ಬಹಳಿಷ್ಟಿವೆ.

ಕಂಪ್ಲಿ ಕೊಟ್ಟಾಲ

ಮಂಗಮ್ಮ ಕ್ಯಾಂಪು

ದೇವಿನಗರ ಕ್ಯಾಂಪು

ರೆಡ್ಡಿ ಕ್ಯಾಂಪು

ಶ್ರೀನಿವಾಸ ಕ್ಯಾಂಪು

ಬೆಳಗಲ್ಲು ಕ್ಯಾಂಪು

ನರಸಮ್ಮ ಕ್ಯಾಂಪು

ಗೂಂಟೂರು ಕ್ಯಾಂಪು

ಸುಬ್ಬಾರಾವು ಕ್ಯಾಮಪು

ಈ ಬಗೆಯ ಕ್ಯಾಂಪುಗಳಲ್ಲಿ ಕೆಲವು ಶಾಸ್ವತವಾಗಿಯೂ ಉಳಿದು, ರೆವಿನ್ಯೂ ದಾಖಲೆ ಆದದ್ದಿದೆ. ಇಂತಹ ಸಹಜ ಅನಿವಾರ್ಯತೆಯಿಂದ ರಚನೆಯಾದ ಗ್ರಾಮಗಳು ವಲಸೆ ಸಮುದಾಯದ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುತ್ತದೆ.

೧. ಕಾಕರ್ಲತೋಟ: ಬಳ್ಳಾರಿ ತಾಲೂಕಿನ ಒಂದು ಗ್ರಾಮ ನಾಮ. ಕಾಕರು ಎಂಬ ಜನಾಂಗದಿಂದ ಬಂದಿರಬೇಕು.

೨. ಗುಗ್ಗರಹಟ್ಟಿ: ಬಳ್ಳಾರಿ ತಾಲೂಕಿನ ಒಂದು ಗ್ರಾಮ ನಾಮ.- ಗುಗ್ಗರು ಅಥವಾ ಗೊಗ್ಗರು ಎಂಬ ಜನಾಂಗದಿಂದ ಬಂದರಬೇಕು.

೩. ಮುಂಡ್ರಗಿ: ಬಳ್ಳಾರಿ ತಾಲೂಕಿನ ಒಂದು ಗ್ರಾಮ ನಾಮ.-ಮುಂಡರು' ಎಂಬ ಜನಾಂಗದಿಂದ ಬಂದಿರಬೇಕು.

೪. ಹಂದ್ರಾಳು: ಬಳ್ಳಾರಿ ತಾಲೂಕಿನ ಒಂದು ಗ್ರಾಮ ನಾಮ. "ಸಾಮಾನ್ಯವಾಗಿ ಗ್ರಾಮಗಳ ಮಧ್ಯೆ ಬರುವ-ರ'(-ಆರ್) ಎಂಬುದು ಇಂತಹ ಜನಾಂಗಗಳನ್ನು ಸೂಚಿಸುತ್ತದೆ.(೪೫) ಹಂದ್ರಾಳು ಎಂಬುದು-ಹಂದರು' ಎಂಬ ಜನಾಂಗದಿಂದ ಬಂದಿರಬೇಕೆಂದು ಡಾ. ಎಂ. ಎಂ. ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ. ಈ ಬಗೆಯ ಜನಾಂಗಿಕ ಸ್ಥಳನಾಮಗಳನ್ನು ಗುರುತಿಸುವಾಗ ಕೆಲವು ಗೊಂದಲಗಳಿವೆ. ಮುಂಡರು, ಕಾಕರು, ಹಂದರು, ಗುಗ್ಗರು, ಕಾತರು ಎಂಬ ಜನಾಂಗಗಳು ಇದ್ದವೆ? ಎಂಬ ಅನುಮಾನಗಳು ಬರುತ್ತವೆ. 'ಕಾಕರ್ಲ ತೋಟ' ಎಂಬ ಗ್ರಾಮದಲ್ಲಿ ಹಾಗಲಕಾಯಿ ಹೆಚ್ಚು ಬೆಳೆಯುತ್ತಿದ್ದ ತೋಟವಿದ್ದರಿಂದ ಈ ಊರಿಗೆ ಹೆಸರು ಬಂದಿರಬಹುದು. ಕಾಕರ್ಲ (ತೆಲುಗು) ಹಾಗಲಕಾಯಿ"(೪೬)

೫.೮ ಇಸ್ಲಾಂ:

ಗಡಿಭಾಗವಾದ ಬಳ್ಳಾರಿ ತಾಲೂಕಿನಲ್ಲಿ ಇಸ್ಲಾಂ ಸಮುದಾಯಗಳು ಕಡಿಮೆ, ಗುಲ್ಬರ್ಗಾ, ಬೀದರ್ ಗಡಿ ಭಾಗದಲ್ಲಿ ಈ ಧರ್ಮದ ಪ್ರಭಾವ ಹೆಚ್ಚಾಗಿರುವುದರಿಮದ ಅಲ್ಲಿಯ ಸ್ಥಳನಾಮಗಳಲ್ಲಿ ಉರ್ದು ಪ್ರಭಾವ ಸ್ಥಳನಾಮಗಳ ಪೂರ್ವ ಹಾಗು ಉತ್ತರ ಪದಗಳಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಬಳ್ಳಾರಿ ತಾಲೂಕಿನಲ್ಲಿ ಮುಸ್ಲಿಂ ವ್ಯಕ್ತಿನಾಮದೊಂದಿಗೆ ನಿರ್ದೇಶನಗೊಂಡಿದೆ.

ಉದಾ: ಇಬ್ರಾಹಿಂಪುರ

೫.೯ ವೃತ್ತಿ ಆಧಾರಿತ ಸ್ಥಳನಾಮಗಳು:

ಗ್ರಾಮನಾಮಗಳ ಅಧ್ಯಯನ ಪ್ರಸಂಗದಲ್ಲಿ ಅದರ ನಿಷ್ಪತ್ತಿ ನಿರ್ಣಯ ಮತ್ತು ಪ್ರಮುಖ ಅಂಶವಾಗಿವೆ. ಇದನ್ನು ಸರಿಯಾಗಿ ಗುರುತಿಸದೆ ಮಾಡುವ ಅಧ್ಯಯನಗಳೆಲ್ಲ ವ್ಯರ್ಥವೆಂದು ಡಾ:ಕಲ್ಬುರ್ಗಿಯವರು ಅಭಿಪ್ರಾಯಪಡುತ್ತಾರೆ. ಆದರೆ 'ನಿಷ್ಪತ್ತಿ-ನಿರ್ಣಯ ಅಷ್ಟು ಸುಲಭವಾದದು ಅಲ್ಲ. ಸಾಮನ್ಯವಾಗಿ ಯಾವುದೇ ಗ್ರಾಮದ ಹೆಸರಿನ ಬಗೆಗೆ ಮೂರು ನಿಷ್ಪತ್ತಿಗಳು ಕೇಳಿ ಬರುತ್ತವೆ.

೧. ಪಾಮರ ನಿಷ್ಪತ್ತಿ (ಇದನ್ನು ಜನಪದ ನಿಷ್ಪತ್ತಿ ಎಂದು ಕರೆಯುತ್ತಾರೆ.)

೨. ಪಂಡಿತ ನಿಷ್ಪತ್ತಿ

3. ನಿಜ ನಿಷ್ಪತ್ತಿ

ಇದರಲ್ಲಿ ಮೊದಲಿನದು ಎರಡು ಕಲ್ಪಕತೆ. ಮೂರನೆಯದು ಸತ್ಯ. ಯಾವುದೇ ಗ್ರಾಮದ ಹೆಸರಿನ ಬಗೆಗೆ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ಕಲ್ಪಕತೆಗಳು ಕೇಳಿ ಬರಬಹುದು. ನಿಜ ನಿಷ್ಪತ್ತಿ ಮಾತ್ರ ಒಂದು ಇರುತ್ತದೆ. ವೃತ್ತಿಯು ಬೆಳೆದು ಜಾತಿಯಾಗಿ ಮಾರ್ಪಡಿಸಿ, ಜಾತಿ ಮತ್ತು ವೃತ್ತಿಗಳು ಒಂದೆ ಬಿಂದುವಿನಲ್ಲಿ ಬರುತ್ತವೆ. ಆದರೂ ಅಧ್ಯಯನದ ದೃಷ್ಟಿಯಿಂದ ವೃತ್ತಿಯಾಧಾರಿತ ಸ್ಥಳನಾಮಗಳನ್ನು ಬಿಡಿಯಾಗಿ ಚರ್ಚೆ ಮಾಡಲಾಗುತ್ತಿದೆ. ಸಮುದಾಯಗಳು ಜೀವನಕ್ಕಾಗಿ ಬೇಟೆ, ಕೃಷಿ ಮುಂತಾದ ಮಾರ್ಗಗಳನ್ನು ಕಂಡುಕೊಂಡಂತೆ ಕೈಗಾರಿಕೆಯನ್ನು ಕಂಡುಕೊಂಡರು, ಅಲ್ಲದೆ ಕೃಷಿ ಸಂಬಂಧೀ ಕೈಗಾರಿಕಾ ಸಂಬಂಧೀ ವಸ್ತುಗಳ ಉತ್ಪಾದನೆಯ ಗುಡಿ ಕೈಗಾರಿಕೆಗಳೂ ಆರಂಭವದವೆನ್ನಬಹುದು. ವೃತ್ತಿಪರ ಜನತೆಯು ಆಯಾ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕೆಯನ್ನು ಆರಂಭ ಮಾಡಿದರು. ಮುಂದೆ ನೆಲೆಗಳಿಗೆ ತಮ್ಮ ವೃತ್ತಿಯ ಹೆಸರುಗಳನ್ನೇ ನೀಡಿದರು. ಬಹುತೇಕ ಈ ಬಗೆಯ ಪಾರಂಪರಿಕ ವೃತ್ತಿಯನ್ನು ನಂಬಲಾಗುತ್ತದೆ. ಇಂದಿಗೂ ಅನೇಕ ಕಡೆಗಳಲ್ಲಿ ಕೈಗಾರಿಕಾ ನೆಲೆಗಳ ಗುರುತು ದೊರೆಯುತ್ತವೆ. ಈ ದೃಷ್ಟಿಯಿಂದ ಇಂತಹ ಅಧ್ಯಯನಗಳು ಅವಶ್ಯವೆಂದು ತಿಳಿಯಬಹುದು.

೧. ಕಮ್ಮರಚೇಡು

೨. ತಾಂಬ್ರಹಳ್ಳಿ

೩. ಹೊನ್ನೂರು

೫.೯(೧) ಕಮ್ಮರಚೇಡು:

ಕಬ್ಬಿಣದ ಕೈಗಾರಿಕೆಯಲ್ಲಿ ತೊಡಗಿದ್ದ ಕಮ್ಮಾರರು ರಾಜಕೀಯ ಇತಿಹಾಸದಲ್ಲಿ ಯುದ್ಧೋಪಕರಣ ತಾಯಾರಿಸುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದ್ದರು. ಅಲ್ಲದೇ ಕೃಷಿಗೆ ಉಪಯುಕ್ತವಾದ ಉಪಕರಣಗಳನ್ನು ತಯ್ಯಾರಿಸುತ್ತಿದ್ದರು. ಈ ಕಮ್ಮಾರರನ್ನು ಗ್ರಾಮಸ್ಥರು ಆಯಾಗಾರರಲ್ಲಿ ಒಬ್ಬರೆಂದು ಪರಿಗಣಿಸಿ ವಾರ್ಷಿಕ 'ಆಯ'ವನ್ನು ಕೊಟ್ಟ ಉಲ್ಲೇಖಗಳು ಶಾಸನಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತವೆ. ಕಮ್ಮಾರಿಕೊಧ್ಯಮದ ಮೂಲಕ ಕೃಷಿಗೆ ಸಹಾಯಕವಾಗಿದ್ದು ದುಡಿದ ಮೂವರು ಕಮ್ಮಾರರನ್ನು ಶಾಸನವು ಅಪರೂಪಕ್ಕೆ ಉಲ್ಲೇಖಿಸುತ್ತದೆ(೫೪) ಕಮ್ಮಾರರು ಗುಡಿ ಕೈಗಾರಿಕ ರೂಪದಲ್ಲಿ ಕೆಲವು ಗ್ರಾಮಗಳಲ್ಲಿ ನೆಲೆಸಿ ಯುದೊಪಕರಣ ಮಾಡುವಲ್ಲಿ ನಿರತರಾಗಿರಬೇಕು. ಈ ಕಾರಣದಿಂದಾಗಿ ಅವರು ತಮ್ಮ ನೆಲೆಗಳಿಗೆ ಕಮ್ಮಾರಸಾಲೆ' ಎಂದು ಕರೆದುಕೊಂಡರು. ವಿಜಯನಗರ ಸಾಮ್ರಾಜ್ಯ ಮತ್ತು ಇದಕ್ಕಿಂತ ಮುಂಚಿನ ಚಾಲುಕ್ಯ ಮನೆತನದಿಂದ ಕುರುಗೋಡಿನ ಸಿಂಧರವರೆಗೆ ಒಂದಲ್ಲ ಒಂದು ರೀತಿಯಲ್ಲಿ ಆಯಾ ರಾಜವಂಶಜರ ಕಣ್ಣಿಗೆ ಬಿದ್ದ ಬಳ್ಳಾರಿ ಪ್ರದೇಶ ಅವರ ಆಡಳಿತಕ್ಕೆ ಒಳಪಟ್ಟಿದೆ.

ಕಮ್ಮಾರ ಮತ್ತು ಕಮ್ಮಾರ ಎಂಬ ಎರಡು ಪದಗಳಲ್ಲಿ ಅಷಾಗಿ ಅರ್ಥವ್ಯಾತ್ಯಾಸವಿಲ್ಲ. ಇ ಪದದಗಳ ಬಗ್ಗೆ ಕೆಲವು ಕಾವ್ಯೋಲ್ಲೇಖಗಳಿವೆ.

"ಕಮ್ಮಾರನಂಬು ಕಮ್ಮರಂಗೆ"

"ಕಮ್ಮರರಿಲ್ಲದೆ ಖಡ್ಗಾದಿ ಶಸ್ತ್ರಂಗಳಾಗವು"

................................ಕಮ್ಮರು

ಯವಜಂ ಬಿಲ್ಲೊವಜನೆಂಬುದಂ ಮಾಡುವನೇ"

ಇದರಿಂದ ಕಮ್ಮಾರಿಕೆ ವೃತ್ತಿಯು ಅತ್ಯಂತ ಅವಶ್ಯಕವಾಗಿದ್ದತೆಮದು ತಿಳಿಯುತ್ತದೆ. ಇದರಿಂದಾಗಿಯೇ ಅವರು ಅಲ್ಲಲ್ಲಿ ನೆಲೆಸಿ ಕೈಗಾರಿಕೆಗಳನ್ನು ಆರಂಭಿಸಿದರೆಂದು ತಿಳಿಯಬಹುದು.

"ಕಮ್ಮರಚೇಡು" ಹೆಸರಿನ ಉತ್ತರಪದದಲ್ಲಿರುವ-ಚೇಡು ಪದವು ಕನ್ನಡದ-ಸೇಡು ಪದಕ್ಕೆ ಸಮಾನವಾದದು. ಇದು ತೆಲುಗು ಮುಲ ಪದ. ಚೇಡು (Shrinking-Bending, Contraction) (ಬಗ್ಗಿಸು-ಸಡಿಲಿಸು) ಎಂಬ ಅರ್ಥಗಳನ್ನು ಕಿಟ್ಟಲ್ ಕೋಶ ನೀಡುತ್ತದೆ. ಕೆಲವು ಕಡೆ ಚೇಡು ಪದವು 'ಸಾಲೆ' ಎಂದೂ ಆಗಿದೆ. "ಬಾಣ ಕತ್ತಿ ಮುಂತಾದವುಗಳನ್ನು ತಯ್ಯಾರು ಮಾಡಲು ಒಂದು ಜನಾಂಗಕ್ಕೆ ಪ್ರತ್ಯೇಕ ಕಾಯ್ಗಾರಗಲಿರುತ್ತಿದ್ದವು. ಈ ಬಾಣ ಆಯುಧ ಮೊದಲಾದವುಗಳನ್ನು ತಯ್ಯಾರಿಸುವ ಕಾರ್ಯಗಾರವನ್ನು 'ಕಮ್ಮಟ'ಗಳೆಂದು "ಕಮ್ಮಾರಸಾಲೆ" (ಶಿಲ) ಎಂದು ಕರೆದಿದ್ದಾರೆ. ಅದರಂತೆ ಕುಂದಾಪುರ ತಾಲೂಕಿನ ಒಂದು ಕಮ್ಮಾರಸಾಲೆ' ಇದೆ. ಇದೂ ಕೂಡು ಕಮ್ಮಾರಸಾಲೆ ಇದ್ದ ನೆನಪಿನಲ್ಲೆ ಹುಟ್ಟಿಕೊಂಡಿದೆ ಎಂದು ಆರ್ಕೆ ಮಣಿಪಾಲ ಹೇಳುತ್ತಾರೆ. ಆಲೂರು ತಾಲೂಕಿನ ಕಮ್ಮರಚೇಡು ಗ್ರಾಮದ ಕ್ಷೇತ್ರ ಮಾಹಿತಿಯಂತೆ ಆದು 'ಕಮ್ಮಲಚೆರವು' ಛೆಡು ಮತ್ತು ಚೆರವು ಹತ್ತಿರದ ಪದಗಳಾದರೂ ಅರ್ಥವ್ಯಾತ್ಯಾಸವಿದೆ.

ಈ ಸ್ಥಳನಾಮಗಳು ಮೇಲುನೋಟಕ್ಕೆ ವ್ಯಕ್ತಿ ನಾಮವಾಗಿ, ವೃತ್ತಿ, ಲೋಹಮೂಲ ಹೆಸರುಗಳಾಗಿ ತೋರಿಬರುತ್ತವೆ. ಆದರೂ ನಮ್ಮ ಪ್ರಾಚೀನ ಕೂಲಕರ್ಮಿಗಳ ಚೂರಿ ಕೈಯನ್ನು ಇವು ಹೇಳುತ್ತವೆ. ತಾಮ್ರ, ಹಿತ್ತಾಳೆ. ಕಂಚು ಎಂಬ ಮೂರು ಲೋಹಗಳಲ್ಲಿ ಕೆಲಸ ಮಾಡುವವರನ್ನು ಕನ್ನಡದಲ್ಲಿ ಕಂಚಗಾರ ಎಂದು ಕರೆಯಲಾಗಿದೆ. 'ಕಾಂಡಿಗ' ಎಂಬ ಪದವನ್ನು ಕೆಲವು ಕಡೆ ಈ ಅರ್ಥದಲ್ಲಿ ಬಳಸಿರುವಂತೆ ಕಾಣುತ್ತದೆ. "ಕಂಚುಗಾರು ತಿಳಿಗೆ (ಕಂಚಿನ) ಕನ್ನಡಿ, ನಿಪ್ಪು, ಸಟ್ಟುಗಳನ್ನು ಮಾಡುತ್ತಿದ್ದರು. ತಾಂಬ್ರಹಳ್ಳಿಗೂ ತಮ್ಮಾರಹಳ್ಳಿ (ಅಣ್ಣ-ತಮ್ಮಂದಿರಿಗೆ ಸಂಬಂಧಿಸಿದ) ಎಂಬ ಕಥೆಗಳಿವೆ. ಲೋಹಮೂಲ ಗ್ರಾಮ ನಾಮವೆಂದು

ನಿರ್ಧರಿಸಲು ಅನೇಕ ಅರ್ಥಗಳಿವೆ. ಇವು ಕಂಚು, ತಾಮ್ರ ಮುಂತಾದ ಲೋಹಕಾರರ ಅಥವಾ ಲೋಹ ದೊರೆಯುವ ನೆಲೆವೀಡುಗಳೆಂದು ತಿಳಿಯಬಹುದು.

೫.೯(೨) ಹೊನ್ನೂರು:

ಕನ್ನಡನಾಡಿನಲ್ಲಿ ಇಂದು ಕಂಡು ಬರುವ ಹೊನ್ನೂರು, ಹೊನ್ನುಕುಂಟೆ ಮುಂತಾದ ಸ್ಥಳನಾಮಗಳು ಕೂಡ ಕನಕ (ಬಂಗಾರ) ವನ್ನು ತಯ್ಯಾರು ಮಾಡುವ ನೆಲೆಗಳೇ ಆಗಿದ್ದವೆನ್ನಲು ಇತಿಹಾಸದಲ್ಲಿ ಆಧಾರಗಳಿವೆ. ಖಂಡಿತ ಇವು ಪುರಾತತ್ವ ನೆಲೆಗಳಾಗಿದ್ದು ಪ್ರಾಚೀನ ಕಾಲದ ಕೈಗಾರಿಕೋದ್ಯಮ ಹಾಗೂ ಕುಶಲಕರ್ಮಿಗಳ ಜೀವನ ಪದ್ದತಿಯನ್ನು ಹೇಳುತ್ತವೆ.(೬೪)

ಮೇಲಿನ ಸ್ಥಳನಾಮಗಳಿಂದ ಪ್ರಾಚೀನ-ಅರ್ವಾಚೀನ ಕಾಲದ ಕೈಗಾರಿಕೋದ್ಯಮ ಮತ್ತು ವೃತ್ತಿಯನ್ನವಲಂಬಿಸಿದ ಲೋಹಕಾರರ ಜೀವನವನ್ನು ತಿಳಿಯಲು ಸಹಕಾರಿಯಾಗುತ್ತವೆ.

೫.೯(೧೦) ವ್ಯಕ್ತಿನಾಮಗಳು:

ಸಮಾಜ-ಸಂಸ್ಕೃತಿಗಳ ಸೂಕ್ತ ಅಭ್ಯಾಸಕ್ಕೆ ಬಳಸಲಾಗಿರುವ ಅನೇಕ ವಿಧಾನಗಳಲ್ಲಿ ನಾಮಗಳ ಅಭ್ಯಾಸವೂ ಒಂದು. ಈ ನಾಮಗಳನ್ನು ಸ್ಥಳನಾಮಗಳು ಮತ್ತು ವ್ಯಕ್ತಿನಾಮಗಳೆಂದು ಎಂದು ಎರಡು ನಾಗ ಮಾಡಬಹುದು. ಸ್ಥಳನಾಮಗಳ ಅಬ್ಯಾಸ ನಗರ, ಹಳ್ಳಿ,ಗುಡ್ಡ, ನದಿ, ಬೀದಿ, ಹೀಗೆ ಸ್ಥಳಗಳಿಗೆ ಸಂಬಂದಿಸಿದ್ದು ಈ ತಾಣ ಎಲ್ಲದೆ. ಹೇಗಿದೆ, ಯಾರು ಈ ಹೆಸರು ನೀಡಿದರು. ಅದರ ಅರ್ಥವೇನು ಮುಂತಾಗಿ ಅಭ್ಯಾಸ ಮಾಡುವುದೇ ಇದರ ಗುರಿ.

ಕಾಲದೇಶ ಪರಿಸರಕ್ಕೆ ತಕ್ಕಂತೆ ಮಾನವನ ಆಲೋಚನಾ ವಿಧಾನ ಜೀವನ ಶೈಲಿಯು ಅನೇಕ ಸ್ಥಿತ್ಯಾಂತರ ಪ್ರಕೃತಿಗೆ ಒಳಪಡುತ್ತಲೇ ಇರುತ್ತದೆ. ಈ ಎಲ್ಲ ಸ್ಥಿತ್ಯಾಂತರ ಪ್ರಕ್ರಿಯೆಗೆ ಒಳಪಡುತ್ತಲೆ ಇರುತ್ತದೆ. ಈ ಎಲ್ಲ ಸ್ಥಿತ್ಯಂತರಗಳು ಜೀವನ ವಿಧಾನದ ಜೊತೆ ಜೊತೆಗೆ ಆಯಾ ಭೌಗೋಳಿಕ ಪರಿಸರದ ಮೇಲೆ ವಿಶೇಷವಾಗಿ ಪ್ರಭಾವ ಬೀರುತ್ತದೆನ್ನಬಹುದು. ಸಾಂಸ್ಕೃತಿಕ ಪರಿಚಲನೆಯಲ್ಲಿ ಈ ರೀತಿಯ ಬದಲಾವಣೆ ಅನಿವಾರ್ಯ. ಸ್ಥಳನಾಮ ನಿರ್ದೇಶನದ ಆರಂಭಿಕ ಹಂತ ನೈಸರ್ಗಿಕ ವಾತಾವರಣವನ್ನು ಅವಲಂಬಿಸಿತ್ತು. ಮುಂದೆ ಸಂಸ್ಕೃತಿಯ ವಿಕಸನದ ಹಾದಿಯಲ್ಲಿ ಜನಾಂಗಿಕ ನಿಷ್ಠೆಗೆ ಈ ಪ್ರವೃತ್ತಿಯಾಗಿ ಸಾಗಿಬಂತು. ಇದರೊಂದಿಗೆ ಅಂದಂದಿನ ಸಮಾಜದಲ್ಲಿ ಯಾವುದೇ ಕಾರಕ್ಕೆ ವಿಶೇಷವಾದ ಘಟನೆಯಿಂದ, ಹೆಸರಾದ ವ್ಯಕ್ತಿಯನ್ನು ಒಂದೊಂದು ಗ್ರಾಮಕ್ಕೆ ಕರೆದರು. ಮುಂದೆ ಸ್ತ್ರೀ ಮತ್ತು ಪುರುಷರಾದಿಯಾಗಿ ಐತಿಹಾಸಿಕ, ಸಾಮಾಜಿಕ, ರಾಜಕೀಯ ಇತ್ಯಾದಿ ಕಾರಣಗಳಿಂದ

ಸ್ಥಳನಾಮಗಳಿಗೆ ಹೆಸರಾಗಿ ನಿಂತುಕೊಳ್ಳಲಾರಂಭಿಸಿದರು. ಪರಂಪರೆಯ ನೆನಪಿಗಾಗಿ ಈ ಬಗೆಯ ನಾಮ ನಿರ್ದೇಶನ ನಡೆಯಿತು. ಆಧುನಿಕವಾಗಿ ವ್ಯಕ್ತಿಯನ್ನಾಧರಿಸಿದ ಸ್ಥಳನಾಮಗಳು ವೈವಿಧ್ಯ ನೆಲೆಯಲ್ಲಿ ಸ್ಥಾನವನ್ನು ಪಡೆದಿದೆ.

ಒಟ್ಟು ಭೌಗೋಳಿಕ ಪರಿಸರವನ್ನು ಗಮನಿಸಿದಾಗ ವ್ಯಕ್ತಂಶವುಳ್ಳ ಸ್ಥಳನಾಮಗಳು ಕಡಿಮೆಯೆಂದು ಹೇಳಬಹುದು. ಅಲ್ಲದೇ ಕಾಲದ ದೃಷ್ಟಿಯಿಂದ ಈಚಿನವು ಇತ್ತೀಚೆಗೆ ಜನರ ಮನೋಧರ್ಮ ಬದಲಾಗಿ ವ್ಯಕ್ತಿ ಪೂಜೆಯ ಅಂಶ ಅವರ ಜೀವನದಲ್ಲಿ ಬೆರೆಂತೆ ಕಂಡರೂ, ದೊಡ್ಡ ಊರಿಗೆ ಒಬ್ಬ ವ್ಯಕ್ತಿಯ ಹೆಸರು ಕೊಡದೆ, ಕೇರಿಗೆ ಅಥವಾ ಒಂದು ಮನೆಯಡಿಗೆ ಗುರುತಿಸಲಿಕ್ಕಾಗಿ ಹೆಸರನ್ನಿಟ್ಟಿರುವುದು ಸಹ ಜನರ ಜೀವನ ದೃಷ್ಟಿಯನ್ನು ಬಿಂಬಿಸಬಲ್ಲದು. ಆದರೂ ಇಂದು ಅನೇಕ ನಗರ–ಪಟ್ಟಣಗಳಿಗೂ ವ್ಯಕ್ತಿಯ ಹೆಸರನ್ನು ಇಡುವುದು ಕಂಡುಬರುತ್ತಿದೆ. ಇದು ಆಧುನಿಕ ಸಮಾಜ ನಾಮಗಳಿಗೆ ಆಕರಗಳಾಗಿ ಸ್ವೀಕರಿಸಿದ ಒಂದು ಬಗೆಯೆನ್ನಬಹುದು.

ಭೌಗೋಳಿಕ ಪರಿಸರಕ್ಕನುಗುಣವಾಗಿ ವ್ಯಕ್ತಿಯಾಧಾರಿತ ಸ್ಥಳನಾಮಗಳು ಒದಗುತ್ತ ಹೇಳುತ್ತೇವೆ. ನೈಸರ್ಗಿಕ ಕಾಡು–ಬೆಟ್ಟಗಳಿಂದ ತುಂಬಿದ ದಕ್ಷಿಣ ಕನ್ನಡದಲ್ಲಿ ಕಡಿಮೆಯೂ, ಎತ್ತರದಲ್ಲಿ ಬಯಲು ನಾಡಾದ್ದರಿಂದ ಒಟ್ಟಾಗಿಯೂ ತಿಳಿಯುತ್ತದೆ. ಅಲ್ಲದೆ ದೈವವನ್ನೇ ನಂಬಿರುವ ನಮ್ಮ ಸಂಪ್ರದಾಯದ ಸಮಾಜದಲ್ಲಿ ದೈವಕ್ಕೆ ಸಂಬಂಧಿಸಿದ ಸ್ಥಳನಾಮಗಳೇ ಬಹುತೇಕ ಕಂಡುಬರುತ್ತದೆ.

ಬಳ್ಳಾರಿ ತಾಲೂಕಿನಲ್ಲಿ ಕಂಡುಬರುವ ವ್ಯಕ್ತಿನಾಮ ಆಧಾರಿತ ಸ್ಥಳನಾಮಗಳ ಪಟ್ಟಿ ಹೀಗಿದೆ.

೧. ಅಮರಾಪುರ

೨. ಇಬ್ರಾಹಿಂಪುರ

೩. ಕಕ್ಕ ಬೇವಿನಹಳ್ಳಿ

೪. ಕುಂತನಹಳ್ಳಿ

೫. ಗೊಲ್ಲ ನಾಗೇನಹಳ್ಳಿ

೬. ಬೆಟೆಗನಹಾಳ್

೭. ಜಾನಿಕುಂಟ

---

*೬. ಶ್ರೀ. ಗುರುಮೂರ್ತಿ ಪೆಂಡೂಕರ್‌ರವರ ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು– ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು–೧೮ ಇವರ ಪ್ರಕಟಿತ–೨೦೦೬.

೮. ತಿಮಲಾಪುರ

೯. ದಾಸರ ನಾಗೇನಹಳ್ಳಿ

೧೦. ಪರಮದೇವನಹಳ್ಳಿ

೧೧. ಬುರ‍್ರನಾಯಕನಹಳ್ಳಿ

೧೨. ಬೈರದೇವನಹಳ್ಳಿ

೧೩. ಮಲ್ಲಾಪುರಂ. ಎಸ್.

೧೪. ಯಮ್ಮಿಗನೂರು

೧೫. ರಾಯಪುರಂ

೧೬. ವೀರಾಪುರಂ

೧೭. ವೇಣಿವೇರಾಪುರ

೧೮. ಶಂಕರಬಂಡ

೧೯. ಸಂಗನಕಲ್ಲು

೨೦. ಸರಾಜೀವರಾಯನ ಕೋಟೆ

೨೧. ಸಿದ್ದಮನಹಳ್ಳಿ

೨೨. ನಡಗಿನಮಾಲು

೨೩. ಸಿದ್ಧರಗಡ್ಡ

೨೪. ಸಿಂಗದೇವನಹಳ್ಳಿ

೨೫. ಸೋಮಲಾಪುರ

೨೬. ಸೋಮಸಮುದ್ರ

ಬಳ್ಳಾರಿ ತಾಲೂಕಿನಲ್ಲಿ ಒಟ್ಟು ೧೦೭ ಸ್ಥಳನಾಮಗಳಿದ್ದು ಆ ಪೈಕಿ ೨೬ ವ್ಯಕ್ತಿಯಾಧಾರಿತ ಸ್ಥಳನಾಮಗಳು.

೫.೯(೧೧) ಜನ ಸಂಚಾರ ಹಾಗೂ ಸ್ಥಳನಾಮಾಭಿವ್ಯಕ್ತಿಗಳು:

ಬಳ್ಳಾರಿ ಜಿಲ್ಲೆಯಲ್ಲಿ ಕುರುಬರು, ಗೊಲ್ಲರು, ವಡ್ಡರು, ಕಲ್ಲುಕುಟಿಗರು, ಕಂಚುಗಾರರು, ದಾಸರು, ಉಪ್ಪಾರರು, ದೊಂಬರು, ಕಮ್ಮಾರರು, ಅಗಸರು, ತೆಲ್ಲಿಗಾರು ಮುಂತಾದ ಹಲವು ಜಾತಿ ಜನಾಂಗ ಕುಲ ಕಸುಬಿನ ಜನರು ವಾಸವಾಗಿದ್ದು ಇವರಿಗೆ ಸಂಬಂಧಿಸಿದ ವೃತ್ತಿ ವಾಚಕ ಸ್ಥಳನಾಮಗಳು ಇಲ್ಲಿ ಕಂಡುಬರುತ್ತವೆ. ಅಲೆಮಾರಿಯಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುತ್ತಿದ್ದ ಪ್ರಾಚೀನ ಮಾನವನು ಕ್ರಮೇಣ ಕಾಲ ಗತಿಸಿದಂತೆ

ಒಂದೆಡೆಯಲ್ಲಿ ನೆಲೆಸಿ ಒಂದೊಂದು ವೃತ್ತಿಯನ್ನು ಕಂಡುಕೊಂಡು ಜೀವಿಸಲಾರಂಭಿಸಿದುದನ್ನು ಈ ಸ್ಥಳನಾಮಗಳು ತಿಳಿಸುತ್ತವೆ. ಈ ವರ್ಗದ ಜನರು ಕರ್ನಾಟಕ ಬೇರೆಡೆಗಳಲ್ಲೂ, ಕರ್ನಾಟಕ ಹೊರ ಭಾಗಗಳಲ್ಲೂ ಕಂಡುಬರುತ್ತಾರೆ. ದ್ರಾವಿಡ ಜನಾಂಗದ ಕುರುಂಬನ್ ವರ್ಗವು ನೀಲಗಿರಿ ಬೆಟ್ಟಗಳಲ್ಲಿ ಮತ್ತು ಕಡೊಗು ಜಿಲ್ಲೆಗಳಲ್ಲಿ ಕಂಡುಬರುವುದು. ಇವರದು ಪ್ರಮುಖವಾಗಿ ಹುಲ್ಲುಗಾವಲುಗಳಲ್ಲಿ ಜೀವನ, ಇವರಲ್ಲಿ ಕೆಲವರು ತಮ್ಮ ಮೂಲ ನೆಲೆಗಳಿಂದ ಕರ್ನಾಟಕದೊಳಕ್ಕೆ ಒಳಪ್ರವೇಶ ಮಾಡಿದರು. ಕರ್ನಾಟಕದಲ್ಲಿ ಇವರನ್ನು ಕುರುಬರು ಎಂದು ಕರೆಯುತ್ತಾರೆ. ಇದೇ ಕುರುಬರ ಒಂದು ಗುಂಪು ಆಂದ್ರ ಮತ್ತು ಕರ್ನಾಟಕದ ಗಡಿ ಭಾಗಗಳಲ್ಲಿ ಪರಿಚರಿಸುತ್ತಿದ್ದ ಬಳ್ಳಾರಿ ಜಿಲ್ಲೆಯನ್ನು ಪ್ರವೇಶ ಮಾಡಿದೆ. ಇಂದಿಗೂ ಬಳ್ಳಾರಿಯ ಅನೇಕ ಗ್ರಾಮಗಳಲ್ಲಿ ಕುರುಬರ ಸಂಖ್ಯೆಯು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತದೆ. ಇವರ ಮೂಲ ವೃತ್ತಿ ಕುರಿಗಳನ್ನು ಸಾಕುವುದಾಗಿದ್ದರೂ ಕನಕರುಗಳ ಸಾಕಾಣೆಯನ್ನು, ಬೇಸಾಯ ವೃತ್ತಿಯನ್ನು ಅವಲಂಬಿಸಿದ್ದಾರೆ. ಈ ಜನರ ಸಂಚಾರ ಮಾರ್ಗವನ್ನು ನಿರ್ದೇಶಿಸುವ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿ ಉಪಲಬ್ದವಿಲ್ಲ. ಗೊಲ್ಲನಾಗೇನಹಳ್ಳಿ, ಗೊಲ್ಲರಹಟ್ಟಿ ಎಂಬ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿವೆ. ಈ ಸ್ಥಳನಾಮಗಳು ಗೊಲ್ಲರ, ಕಾಡು ಗೊಲ್ಲರ ಮೂಲ ನೆಲೆಗಳನ್ನು ಕುರಿತು ನಿರ್ದೇಶಿಸುತ್ತವೆ. ಜಿಲ್ಲೆಯಲ್ಲಿನ ಈ ಜನಗಳ ಪ್ರಮುಖ ವೃತ್ತಿ ದನಕರುಗಳ ಸಾಕಾಣಿಕೆ, ಈ ಜನರಲ್ಲಿ ಬಹು ಪಾಲಿನವರು ತೆಲುಗು ಭಾಷಿಕರಾಗಿರುವದೊಂದು ವಿಶೇಷ. ಇವರು ಆಂದ್ರ ಪ್ರದೇಶದ ಭಾಗದಿಂದ ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿದ್ದಾರೆ. ಇವರ ದೈವ ಗೋಪಾಲಕನಾದ ಗೊಲ್ಲಕೃಷ್ಣ, ಉತ್ತರ ಭಾರತದ ಕಡೆಯಿಂದ ಸಂಚರಿಸುತ್ತ ಒರಿಸ್ಸ, ಆಂದ್ರ ಭಾಗಕ್ಕೆ ಬಂದ ಇವರು ಕರ್ನಾಟಕದ ವಿವಿಧ ಭಾಗಗಳಲ್ಲಿ ಪ್ರವೇಶ ಪಡೆದಿದ್ದಾರೆ.

ಕಲ್ಲುಕುಟಿಗರು, ವಡ್ಡರು, ಉಪ್ಪಾರರು ಬಳ್ಳಾರಿ ಜಿಲ್ಲೆಯಲ್ಲಿದ್ದು ಅವರಿಗೆ ತಮ್ಮ ತಮ್ಮದೇ ಆದ ಪ್ರತ್ಯೇಕ ನೆಲೆಗಳಿವೆ. ಇವರ ವೃತ್ತಿವಾಚಕ ಶಬ್ದಗಳಿಂದಲೇ ಇವರ ನೆಲೆಗಳು ಸ್ಥಾಪಿತವಾಗಿವೆ. ಕಲ್ಲುಕುಟಿಗರು ಮತ್ತು ವಡ್ಡರು ಶೇಕಡಾ ೯೯ರಷ್ಟು ತೆಲುಗು ಭಾಷೆಯಾಗಿದೆ. ಇವರು ಆಂದ್ರ ಪ್ರದೇಶದತ್ತಣದಿಂದ ಬಳ್ಳಾರಿ ಜಿಲ್ಲೆಗೆ ಬಂದವರಾಗಿದ್ದಾರೆ. ಇಲ್ಲಿನ ಜನರು ಇಂದು ಕೂಡಾ ಇವರನ್ನು ಆಂದ್ರ (ಕಡಪ) ವಡ್ಡರು ಎಂತಲೇ ಕರೆಯುತ್ತಾರೆ. ಇದು ಪರಂಪರಾಗತವಾಗಿ ಶತಮಾನಗಳಿಂದಲೂ ನಡೆದುಕೊಂಡು ಬಂದಿರುವ ಸಾಮಾಜಿಕ ವ್ಯವಹಾರಿಕವಾಗಿ ಇಲ್ಲಿ ಕಂಡುಬರುತ್ತದೆ. ಕಮ್ಮಾರರಲ್ಲಿ ಕನ್ನಡದ ಮೂಲದವರು ಮತ್ತು ಆಂದ್ರ ಮೂಲದವರೆಂದು ಎರಡು ಬಗೆಗಳನ್ನು ಕಾಣಬಹುದು. ಉಪ್ಪಾರ ಜನಾಂಗವು ಕೂಡಾ ಆಂದ್ರದ ಕರಾವಳಿ ಪ್ರದೇಶದಿಂದ ಜಿಲ್ಲೆಯೊಳಗೆ ಪ್ರವೇಶ ಪಡೆದಿರಬೇಕೆಂದು

ತೋರುತ್ತದೆ. ಬಹುಶಃ ಉಪ್ಪಾರರಿಗೇ ವಿಶಿಷ್ಟವಾದ ಪ್ರತ್ಯೇಕ ವಾಸದ ನೆಲೆಗಳು ಕರ್ನಾಟದಕಲ್ಲಿ ಕಂಡುಬರುವುದು ಅಪರೂಪವಾಗಿದೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಉಪ್ಪಾರ ವೃತ್ತಿವಾಚಕ ಸ್ಥಳನಾಮವು ಕಂಡುಬರುತ್ತದೆ. ಇವರ ಮುಖ್ಯ ಉದ್ಯೋಗ ಒಮ್ಮೆ ಉಪ್ಪನ್ನು ತಯಾರಿಸುವುದಾಗಿದ್ದರೂ ಈಗ ಇವರು ಉಳಿದವರಂತೆ ಸಾಮಾನ್ಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೆಚ್ಚಾಗಿ ವ್ಯವಸಾಯದ ಮೇಲೆ ಅವಲಂಬಿತರಾಗಿದ್ದಾರೆ.

ಪುರಾಣಗಳ ರೀತ್ಯ ಮೊದಲು ವಿಂಧ್ಯಪರ್ವತವನ್ನು ಅತಿಕ್ರಮಿಸಿ ದಕ್ಷಿಣದ ಕಡೆಗೆ ಆರ್ಯವ್ಯಕ್ತಿಯಾದ ಅಗಸ್ತ್ಯಮಹರ್ಷಿಯು ಪ್ರವೇಶಿಸಿದನೆಂದು ಭಾವಿಸಲಾಗಿದೆ. ಈತನು ತನ್ನ ಅಸಂಖ್ಯ ಶಿಷ್ಯರ ಸಮೂಹದೊಂದಿಗೆ ಇತ್ತ ಬಂದು ನೆಲೆಸಿದನೆಂದು ಹೇಳಲಾಗುತ್ತದೆ. ಅಗಸ್ತ್ಯ ಮುನಿಗೆ ಸಂಬಂಧಿಸಿದಂತೆ ಸ್ಥಳಗಳು ತಮಿಳುನಾಡು ಮತ್ತಿತರೆಡೆಗಳಲ್ಲಿ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ತುಂಗಭದ್ರ ನದೀ ತೀರದ ನಿಟ್ಟೂರು ಮುಂತಾದ ಪ್ರದೇಶಗಳಲ್ಲಿನ ಪ್ರಾಚ್ಯವಸ್ತು ಸಂಶೋಧನಾ ಕಾರ್ಯದಲ್ಲಿ ಕಂಡುಬಂದಿರುವ ಯಜ್ಞಕುಂಡ, ಹವಿಸ್ಸಿನ ಪಾತ್ರೆ ಮುಂತಾದವುಗಳಿಂದ ಆರ್ಯರು ಉತ್ತರದಿಂದ ದಕ್ಷಿಣದ ಈ ಪ್ರದೇಶಕ್ಕೆ ಬಂದು ನೆಲೆಸಿರಬಹುದೆಂದು ಬಾವಿಸಲು ಸಾಧ್ಯವಿದೆ. ಅನಂತರದಲ್ಲಿ ಸಂಸ್ಕೃತ–ಪ್ರಾಕೃತ ಭಾಷೆಯನ್ನು ಬಳಸುತ್ತಿದ್ದ ಬೌದ್ಧರು ಪ್ರಾಯಶಃ ಆಂದ್ರ ಪ್ರದೇಶದ ಕಡೆಯಿಂದ ಇಲ್ಲಿಗೆ ಬಂದಿರಬಹುದೆಂದು ತೋರುತ್ತದೆ. ಕೊನೆಯ ಹಂತವಾಗಿ ಪ್ರಕೃತ ಭಾಷಿಕ ಜನರಾದ ಜೈನರು ಉಜ್ಜೈನಿಯಿಂದ ಶ್ರವಣಬೆಳಗೊಳ, ಮೂಡಬಿದರೆ, ಕೋಗಳಿ(ಬಳ್ಳಾರಿ) ಮೊದಿಗೆರೆ(ಬಳ್ಳಾರಿ) ಉಜ್ಜನಿಯ (ಬಳ್ಳಾರಿ) ಕಡೆಗೆ ಬಂದು ನೆಲೆಸಿರಬಹುದೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಬೌದ್ಧರಿಗೆ ಸಂಬಂಧಿಸಿದಂತೆ ಕೆವಗಳಿ>ಕೋಗಳಿ, ಉಜ್ಜನಿ ಎಂಬ ಸ್ಥಳನಾಮಗಳು ಬಳ್ಳಾರಿ ಜಿಲ್ಲೆಯಲ್ಲಿ ಕಾಣಬರುತ್ತವೆ.

ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸಿದ ಜನಾಂಗಗಳಲ್ಲಿ ಲಮ್ಮಾಣಿಗಳು ಪ್ರಮುಖವಾಗಿ ಕಾಣುತ್ತಾರೆ. ಗುಜರಾತಿನ ಕಡೆಯಿಂದ ಯಾವುದೋ ಕಾರಣದಿಂದಾಗಿ ಭಿನ್ನ ಭಿನ್ನ ದಿಕ್ಕುಗಳಿಗೆ ವಲಸೆ ಹೋಗಿ ಭಾರತದ ೨೩ ರಾಜ್ಯಗಳಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ರಾಜ್ಯಗಳು ಸೇರಿದಂತೆ ಕೇಂದ್ರ ಶಾಸಿತ ಪ್ರದೇಶದ ತ್ರಿಪುರದಲ್ಲೂ ಕಂಡುಬರುತ್ತಾರೆ. ಭಾರತದಲ್ಲಿ ಒಟ್ಟು ಲಮಾಣಿಗಳ ಸಂಖ್ಯೆ ೧೫ ಮಿಲಿಯನ್ ಎಂಬ ಅಂದಾಜಿದೆ. ಇವರಲ್ಲಿ ೨೩ ಉಪ ಗುಂಪುಗಳಿವೆ. ಅದರಲ್ಲಿ ಪ್ರಮುಖವಾದುದು ಎಂದರೆ ಬಂಜಾರ, ಲಂಬಾಡ, ಮತ್ತು ಸುಗಾಲಿ. ಇವರು ಆಂದ್ರ ಪ್ರದೇಶ, ಕೇರಳ ಕರ್ನಾಟಕ ಮತ್ತು ತಮಿಳುನಾಡಿನ ಎಲ್ಲೆಡೆಗಳಲ್ಲಿ ಕಂಡುಬರುತ್ತಾರೆ. ಇವರು ತಮ್ಮನ್ನು "ಗೋರ" ಎಂದೂ ಲಮಾಣೇತರರನ್ನು "ಕೋರ"

ಎಂದು ಕರೆಯುತ್ತಾರೆ. ಲಮಾಣಿ ಗಂಡಸರು "ಗೋರಮಾಟಿ" ಮತ್ತು ಹೆಂಗಸರನ್ನು "ತಾಂಡ್ರಿ" ಎಂದು ಕರೆಯುತ್ತಾರೆ. ಇವರ ಭಾಷೆ 'ಗೋರಬಾಲಿ' ಆಗಿದೆ. ಇವರು ಲಮ್ಮಾಣೇತರರಾದ ಕೋರರೊಂದಿಗೆ ವಾಸವಾಗಿರಲೂ ಬಯಸದೆ ಬೆಟ್ಟ ಗುಡ್ಡಗಳಿಂದ ಎತ್ತರವಾದ ಗಿಡ ಮರಗಳಿಂದ ಸುತ್ತುವರೆದ ಅರಣ್ಯದಂಥ ಪ್ರದೇಶದಲ್ಲಿ ಪ್ರತ್ಯೇಕ ತಾಂಡೆಗಳನ್ನು ಕಟ್ಟಿಕೊಂಡಿರುತ್ತಾರೆ. ತಾಂಡೆ ಎನ್ನುವುದು ಇಂಡೋ ಯೂರೋಪಿಯನ್ನ ಗುಂಪಿಗೆ ಸಂಬಂಧಿಸಿದ ಶಬ್ದವಾಗಿರಬೇಕೆಂದು ಎಚ್.ಎಸ್. ಬ್ರಹ್ಮಾನಂದ ಅವರ ಅಭಿಪ್ರಾಯವಾಗಿದೆ.

೫.೩ ಜಾನಪದೀಯ ನೆಲೆ

ನಾಮಶಾಸ್ತ್ರ ಭಾಷಾಶಾಸ್ತ್ರದ ಒಂದು ಘಟಕ (ಅಂಗ). ಇದು ಜಾನಪದದ ಅಧ್ಯಯನಕ್ಕೆ ಪೂರಕವಾಗಿ ನಿಲ್ಲುತ್ತದೆಂದರೆ ತಪ್ಪಾಗಲಾರದು. ಅನೇಕ ಸಮಾಜ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು, ಭಾಷಾ ಶಾಸ್ತ್ರದಲ್ಲಿ ಅಧ್ಯಯನ ಕೈಗೊಂಡು ಹೆಸರು ಮಾಡಿದ್ದಾರೆ. ಜಾನಪದ ಮತ್ತು ಭಾಷಾಶಾಸ್ತ್ರ ಹಲವಾರು ವಿಷಯಗಳಲ್ಲಿ ಸಮಾನ ಆಸಕ್ತಿಯನ್ನು ಹೊಂದಿವೆ. ಆಡುನುಡಿಯ ಬಗೆಗೆ ಎರಡಕ್ಕು ವಿಶೇಷ ಒಲವು. ಕ್ಷೇತ್ರ ಮಾಹಿತಿಯಿಲ್ಲದೆ ಇವೆರಡರ ವಿಶ್ಲೇಷಣೆಗೆ ಬೆಲೆ ಬರುವುದಿಲ್ಲ. ಜೊತೆಗೆ ಒಂದರ ವಿಶ್ಲೇಷಣಾ ವಿಧಾನಗಳು ಇನ್ನೊಂದರ ತಿಳಿವಿಗೆ ಅವಕಾಶ ಕಲ್ಪಿಸಿವೆ. ಹೀಗಾಗಿ ಇವೆರಡೂ ಅಂತರ್ ಶಿಸ್ತಿನ ಅಧ್ಯಾಯಕ್ಕೆ ಹೆಸರಾಂತ ನಿದರ್ಶನಗಳಿವೆ. ನಾಮಶಾಸ್ತ್ರವೂ ಕೂಡ ಭಾಷಾಶಾಸ್ತ್ರದ ಘಟಕವಾಗಿರುವುದರಿಂದ ಜನಪದ ಸಾಮಗ್ರಿಯಲ್ಲಿ ಇದನ್ನು ಅಧ್ಯಯನಕ್ಕೆ ಒಳಪಡಿಸುವ ಅಗತ್ಯವಿದೆ. ಕಾರಣ ಸ್ಥಳನಾಮಗಳನ್ನು ಕೇವಲ ಶಿಷ್ಟ ಭಾಷಿಕ ಘಟಕಗಳೆಂದು ಅಧ್ಯಯನ ಮಾಡದೆ ಮೌಖಿಕ ಘಟಕಗಳಾಗಿ ವಿಂಗಡಿಸಿಕೊಂಡು ಮತ್ತೊಂದು ದೃಷ್ಟಿಕೋನದಿಂದ ಅಧ್ಯಯನ ಮಾಡುವ ಅವಶ್ಯಕತೆ ಇದೆ. ಆ ಮೂಲಕ ನಾಮಶಾಸ್ತ್ರ ಮತ್ತು ಜಾನಪದಗಳೆರಡರಿಂದ ಉತ್ಪನ್ನಗೊಳ್ಳುವ ಹೊಸ ಅಯಾಮಗಳನ್ನು ಪ್ರತ್ಯೇಕ ಅಧ್ಯಯನಕ್ಕೆ ಒಳಪಡಿಸುವುದು ಉಚಿತವೆನಿಸುತ್ತದೆ.

ಸ್ಥಳನಾಮ ಅಧ್ಯಯನದಲ್ಲಿ ಮೌಖಿಕ ಪರಂಪರೆಯೂ ತುಂಬಾ ಮಹತ್ವದ ಪಾತ್ರವಹಿಸುತ್ತದೆ. ಅತ್ಯಂತ ಎಚ್ಚರಿಕೆಯಿಂದ ಮೂಲ ಭಾಷೆ ಮುಕ್ತವಾಗದಂತೆ ದಾಖಲಿಸಿಕೊಂಡು ಅಧ್ಯಯನಗಳಿವೆ. ತುಂಬಾ ನೆರವಾಗುತ್ತದೆ. ಜೀವಂತವಾದ ಆಡುಮಾತಿನ ಭಾಷೆಗೆ ಇಷ್ಟವಾದ ಪ್ರಯೋಗಗಳೂ, ಅದರಲ್ಲೂ ಅವರಿಟ್ಟುಕೊಂಡಿರುವ ಸ್ಥಳನಾಮಗಳಲ್ಲಿ ಹೇರಳವಾಗಿ ಹುದುಗಿವೆ. ಕಥೆ, ಐತಿಹ್ಯ ಪುರಾಣ, ಗಾದೆ, ಒಗಟು, ಒಡವು ಮುಂತಾದ ಮೌಖಿಕ ದಾಖಲೆಗಳಲ್ಲಿ ವಿವಿಧ ಪ್ರದೇಶದ ಶಬ್ದಗಳ ದೊಡ್ಡ ಭಂಡಾರವೇ ಲಭ್ಯವಾಗುತ್ತದೆ. ಮುಖ್ಯವಾಗಿ ಐತಿಹ್ಯ ಪುರಾಣ, ಗಾದೆ, ಹಾಡುಗಳು ಮುಂತಾದ ಮೌಖಿಕ ಪರಂಪರೆಯಲ್ಲಿ ದಾಖಲಾದ ಮಾಹಿತಿಗಳಿಂದ ಸ್ಥಳನಾಮಗಳ ಸಾಮಾಜಿಕ ಭಾಷಾವಿಜ್ಞಾನ ಸಂಶೋದನೆಯಲ್ಲಿ ಜಾನಪದ ಭಾಷಾಶಾಸ್ತ್ರ ಕೂಡ ಒಂದಾಗಿದೆ. (ವಿಲಿಯಂ ಬ್ರೈಟ್ ಅವರ ಮಾತು) ಇದರಿಂದ ಈ ರೀತಿಯ ಅಧ್ಯಯನ ಅಗತ್ಯ ಮತ್ತು ಅನಿವಾರ್ಯವಾಗಿವೆ. ಜನಪದ ಮತ್ತು ಸ್ಥಳನಾಮ ಶಾಸ್ತ್ರಗಳೆರಡೂ ಕ್ಷೇತ್ರ ಮಾಹಿತಿಯನ್ನು ಬಯಸುವುದರಿಂದ ಅಧ್ಯಯನ ಹೆಚ್ಚು ಗಟ್ಟಿಯಾಗುತ್ತದೆ.

ಜನಪದ ವಾಸ್ತು ಭೌತಿಕ ಜಾನಪದದ ಪ್ರಧಾನ ಅಂಗವಾಗಿದೆ. ಜನಪದರು ವಾಸಿಸುವ ಭೌಗೋಳಿಕ ಅಂಗವಾಗಿದೆ. ಜನಪದರು ವಾಸಿಸುವ ಭೌಗೋಳಿಕ ಪರಿಸರ, ಪ್ರಾದೇಶಿಕತೆ.

[illegible]

ಅಲ್ಲಿನ ಸಸ್ಯವರ್ಗ, ಪ್ರಾಣಿವರ್ಗ ಜನರ ಜೀವನಾವರ್ತನ ಮತ್ತು ವಾರ್ಷಿಕಾವರ್ತನ, ಆಚರಣೆಗಳು, ಉತ್ಪಾದನಾ ವಿಧಾನಗಳು ಕಸುಬುಗಳು ಮತ್ತು ಆಯಾ ಸಮಾಜದ ಸಮುದಾಯದ ಲೋಕದೃಷ್ಟಿಯನ್ನು ಆಧರಿಸಿಕೊಂಡು ಜಾನಪದರು ತಮ್ಮದೇ ವಾಸ್ತು ಶೈಲಿಯನ್ನು ಬಳಸಿಕೊಂಡಿದ್ದಾರೆ. ಮನೆಯು ಮೂಲತಃ ಸ್ವತಂತ್ರವಾದ ಕಾರಣವೇನೂ ಅಲ್ಲ. ಅದರ ಸುತ್ತಲಿನ ದನಗಳ ಹಟ್ಟಿ, ಕೊಟ್ಟಿಗೆ, ಬಾವಿ, ಅಂಗಳ ಮುಂತಾದವೆಲ್ಲ ಅವರ ಜೊತೆಗೆ ಸೇರಿಕೊಂಡು ಜೊತೆಗೆ ಸೇರಿಕೊಂಡು ಅದೊಂದು ದಕ್ಷಿಣ ಘಟಕ ಆಗುತ್ತದೆ. ಇಂಥಾ ಮನೆಗಳ ಸಮೂಹವೇ ಊರು. ಗ್ರಾಮಗಳಾಗುತ್ತವೆ. ಇಂಥಾ ಗ್ರಾಮಗಳಿಗೆ ಅದರದೇ ಆದ ವಾಸ್ತು ಇರುತ್ತದೆ. ಈ ಊರುಗಳಿಗೆ ಹೆಸರಿಡುವಾಗ ಜಾನಪದರು ವಿಶೇಷವಾದ ಆಚರಣೆಗಳಲ್ಲಿ ಅವುಗಳೆಲ್ಲವುಗಳ ನಡುವಣ ಬಾಂಧವ್ಯವು ನವೀಕರಿಸಿ, ಜಾತಿ, ವೃತ್ತಿ, ಪ್ರದೇಶ, ರಾಜಕೀಯ ಮತ್ತಿತರ ಅಂಶಗಳನ್ನು ವಾಸ್ತುವಿನ ಮೇಲೆ ಅಳವಡಿಸಿಕೊಂಡು ಗ್ರಾಮಗಳಿಗೆ ನಾಮನಿರ್ದೇಶನ ಮಾಡುವುದಿದೆ. "ಜನತೆಯ ಮನೋಧರ್ಮವನ್ನು ಅವರ ಬುದ್ಧಿ ಸಾಮರ್ಥ್ಯವನ್ನು ಅರಿಯುವ ಕಾರಣಕ್ಕಾಗಿಯೂ ಅದಕ್ಕೆ ಬೆಲೆಯಿದೆ. ಹಲವಾರು ಗ್ರಾಮಗಳಿಗೆ ಅಥವಾ ಸ್ಥಳಗಳಿಗೆ ಹೆಸರು ಕೊಟ್ಟವರು ಗ್ರಾಮೀಣರೆಂಬುದನ್ನು ಮರೆಯಲಾಗದು" ಬಹುತೇಕ ಸ್ಥಳನಾಮಗಳು ಸ್ಥಳೀಯ ಭಾಷಿಕ ಪದಗಳಿಂದಲೇ ರೂಪುಗೊಂಡಿವೆ. ಅವು ಹೆಚ್ಚಾಗಿ ಪ್ರಕೃತಿ ಅಥವಾ ನಿರ್ದಿಷ್ಟ ಸ್ಥಳ ಅಥವಾ ಒಂದು ಘಟನೆಯನ್ನು ವಿವರಿಸುವ ಸ್ವರೂಪದ್ದಾಗಿದೆ. ಈ ಪದಗಳು ದಿನ ಬಳಕೆಯಿಂದ ತಪ್ಪಿ ಹೋದಾಗ ಜನ ತಮ್ಮ ಕುತೂಹಲದಿಂದ ಅವುಗಳನ್ನು ತಮ್ಮದೆ ಆದ ರೀತಿಯಲ್ಲಿ ವ್ಯುಪ್ಪತ್ತೀಕರಿಸುವ ಮೂಲಕ ಅರ್ಥಪೂರ್ಣವಾಗಿರುತ್ತದೆ. ಇದನ್ನು 'ಜನಪದ ನಿರುಕ್ತಿ' ಎಂದು ಕರೆಯಬಹುದು. ಹೆಸರಿಡುವ ಪ್ರಕ್ರಿಯೆಗೆ ಹೇಗೆ ನಿರಂತರವೂ, ಸಾರ್ವತ್ರಿಕವೂ ಆಗಿದೆಯೋ ಹಾಗೆಯೇ ಈ ವ್ಯುತ್ಪತ್ತೀಕರಿಸುವ ಪ್ರಕ್ರಿಯೆಯನ್ನು ಸ್ಥಳನಾಮಗಳ ಚರಿತ್ರೆಯ ದೃಷ್ಠಿಯಿಂದ ನಿರಂತರ ಮತ್ತು ಸಾರ್ವತ್ರಿಕವೆಂದೇ ತೆಗೆದುಕೋಳ್ಳಬೇಕಾಗಿದೆ. "ಭೂಮಿಯ ಸೃಷ್ಟಿ, ಅದರ ಇಂದಿನ ಸ್ಥಿತಿ, ಮಾನವನು ಅಸ್ತಿತ್ವ, ಗಾಳಿ, ನೀರು ಮುಂತಾದ ಸ್ಥಳನಾಮಗಳಲ್ಲಿ ಐತಿಹ್ಯ ಹಾಗೂ ಪುರಾಣ ಕಲ್ಪನೆಗಳನ್ನೊಳಗೊಂಡ ಘಟನೆಗಳ ಮೇಲೆ ನಿರ್ಮಿತವಾಗಿರುತ್ತದೆ.[೨] ಒಂದು ನಿರ್ದಿಷ್ಟ ಸ್ಥಳಕ್ಕೆ ಅಂಟಿಕೊಂಡಿರುವ ವಿಶಿಷ್ಟ ಸ್ವರೂಪದ ಕಥಾನಕವೇ ಐತಿಹ್ಯ. ಕೇವಲ "ಸ್ಥಳಕ್ಕಷ್ಟೇ ಅಲ್ಲ ವ್ಯಕ್ತಿ, ಅಥವಾ ಘಟನೆಯೊಂದನ್ನು ಕುರಿತಂತೆ ಸಂಪ್ರದಾಯವು ಮೂಲವಸ್ತುಗಳೊಡನೆ ನಿಜಾಂಶವೊಂದರ ಮೇಲೆ ಆಧಾರಿತವಾಗಿದೆಂದು ಭಾವಿಸುವ ಕಥೆಯೇ ಆಗಿದೆ. ಐತಿಹ್ಯಗಳು ಬೆಟ್ಟ, ಗುಡ್ಡ ಮುಂತಾದ ಸ್ಥಳಗಳಿಗೆ ವಿಶೇಷವಾಗಿ ಅನೇಕ ಪ್ರಸಿದ್ಧ ವ್ಯಕ್ತಿಗಳ ಹೆಸರಿನಲ್ಲಿಯೂ ಐತಿಹ್ಯಗಳು ಆರೋಪಿತವಾಗಿರುತ್ತದೆ. ಅವು ನಿಜವಾಗಿ

[illegible]

ನಡೆದ ವಿಷಯಗಳು ಎಂಬಂತೆ ಸಂಪ್ರದಾಯಿಕ ವಿಷಯಗಳನ್ನೊಳಗೊಂಡು ರೂಪಿತವಾಗಿ ನಿರೂಪಿಸಲ್ಪಡುತ್ತದೆ. ಹಾಗೆಂದು ಇವು ಪೂರ್ಣವಾಗಿ ಕಲ್ಪಿತವಾದವುಗಳೂ ಅಲ್ಲ, ಕೆಲವು ಚಾರಿತ್ರಿಕ ಅಂಶಗಳಿಗೆ ಮಹತ್ವದ ನೆರವನ್ನು ನೀಡುತ್ತಿದೆ. ಐತಿಹ್ಯಗಳು ಸಾಮಾನ್ಯವಾಗಿ ಎಲ್ಲಾ ಭೌಗೋಳಿಕ ಪ್ರದೇಶಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ಏಕರೂಪತೆಯನ್ನು ಪಡೆದುಕೊಂಡಿರುತ್ತದೆ. ಐತಿಹ್ಯಗಳನ್ನು ಸ್ಥಳೀಯ ಮತ್ತು ಸರ್ಕಾರಿ ಐತಿಹ್ಯಗಳೆಂದು ವಿಂಗಡಿಸಲಾಗಿದೆ.

ಸ್ಥಳನಾಮಗಳಿಗೆ ಸಂಬಂಧಿಸಿದ ಸ್ಥಳೀಯ ಐತಿಹ್ಯಗಳಿವೆ. ಸ್ಥಳದ ಹೆಸರೊಂದಕ್ಕೆ ನಿಜವಾದ ನಿಷ್ಪತ್ತಿ ತಿಳಿಯದಿದ್ದಾಗ, ತಪ್ಪು ವ್ಯಾಖ್ಯಾನ ಮಾಡುವುದೇ ಇದು. ಈ ತಪ್ಪು ನಿಷ್ಪತ್ತಿ ಅಪರಿಚಿತ ಹೆಸರಿಗೆ ವಿವರಣೆ ಕೊಡಲು ಕಾರ್ಯಕಾರಣ ಕಥೆಯೊಂದನ್ನು ಸೃಜಿಸುತ್ತದೆ ಎಂದು ಕನ್ನಡ ವಿಶ್ವಕೋಶ ತಿಳಿಸುತ್ತದೆ.

ಐತಿಹ್ಯಗಳು ಒಂದು ನಿರ್ದಿಷ್ಟ ಸ್ಥಳಕ್ಕೆ ಬದ್ಧವಾಗಿರಬೇಕಾಗುತ್ತದೆ. ಗಾಢವಾದ ಸ್ಥಳೀಕರಣ ಗುಣವನ್ನು ಹೊಂದಿದ ಐತಿಹ್ಯಗಳು ಆ ಸ್ಥಳದ ಕಾಲ ಮತ್ತು ವ್ಯಕ್ತಿಗಳೊಂದಿಗೆ ಒಂದು ಸೂಕ್ಷ್ಮ ಸಂಬಂಧವನ್ನು ಹೊಂದಿರುತ್ತದೆ. ಇದರಿಂದಾಗಿ ಪ್ರತಿ ಐತಿಹ್ಯಗಳಿಗೆ ಸ್ಥಳೀಯದೆ ಆದ ಒಂದು ಶೈಲಿಯೂ ಲಭ್ಯವಾಗುತ್ತದೆ. ಸ್ಥಳದ ಬದಲಾವಣೆಯೊಂದಿಗೆ ಐತಿಹ್ಯದ ಸ್ವರೂಪವೂ ಬದಲಾಗಬಹುದು. ಆದರೆ ಐತಿಹ್ಯದ ಸ್ವರೂಪವೂ ಬದಲಾಗಬಹುದು. ಆದರೆ ಐತಿಹ್ಯದ ನಿರೂಪಕ ಕೊಡುವ ಭೌತಿಕ ಆಧಾರವು ಕಣ್ಣೆದುರಲ್ಲಿ ಇರುತ್ತದೆ. ಆ ಆಧಾರಕ್ಕೂ ನಿರೂಪಣೆಗಳಿಗೂ ಎಷ್ಟೋ ಬಾರಿ ವೈಜ್ಞಾನಿಕ ಸಂಬಂಧವೇ ಇರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ಅಕ್ಷರಸ್ಥ ಅಥವಾ ಶಿಷ್ಟ ಸಮುದಾಯವೂ ಈ ಬಗೆಯ ವೈರುಧ್ಯದಲ್ಲಿರುತ್ತವೆ. ಶಿಷ್ಟ ಸಮೂಹ ಈ ಬಗೆಯ ವೈರುಧ್ಯದಲ್ಲಿರುತ್ತವೆ. ಶಿಷ್ಟ ಸಮುದಾಯವೂ ಈ ಬಗೆಯ ವೈರುಧ್ಯದಲ್ಲಿರುತ್ತವೆ. ಶಿಷ್ಟ ಸಮೂಹ ಐತಿಹ್ಯಗಳಂತಹ ಕಥೆಗಳಿಂದ ದೂರವೇನೂ ಉಳಿದಿರುವುದಿಲ್ಲ. ಐತಿಹ್ಯಗಳನ್ನು ಸೃಜಿಸುವಂತಹ ಮೌಖಿಕ ಸಮುದಾಯ ಅನಕ್ಷರಸ್ಥರಾದರೂ ತಮ್ಮ ಆಡುಮಾತಿನ ಪ್ರತಿಭಾ ಸಂಪನ್ನತೆಯಿಂದ ಕಲಾತ್ಮಕ ನಿರೂಪಣೆಯನ್ನು ಮಾಡಬಲ್ಲವರಾಗಿರುತ್ತಾರೆ. ಅದುವೇ ಮೌಖಿಕ ಪರಂಪರೆಯ ವಿಶಿಷ್ಟ ಶಕ್ತಿಯಾಗಿದೆ.

"ಸ್ಥಳನಾಮಗಳಿಗೆ ಸಂಬಂಧಿಸಿದ ಐತಿಹ್ಯಗಳು ಕರ್ನಾಟಕ ಸಂದರ್ಭದಲ್ಲಿ ಮಾತ್ರ ಸತ್ಯವನ್ನು ಕಂಡುಕೊಳ್ಳುವಲ್ಲಿ ಒಂದಿಷ್ಟು ಆಧಾರವಾಗಿವೆ ಎನ್ನುವಂತಿಲ್ಲ. ನಮ್ಮಲ್ಲಿ ಹುಟ್ಟಿಕೊಂಡಂತೆ "ಸ್ಥಳನಾಮ ಐತಿಹ್ಯಗಳು ಜಗತ್ತಿನಲ್ಲೆಲ್ಲಾ ವ್ಯಾಪಕವಾಗಿ ಹರಡಿವೆ. ಅವು ಯಥಾರ್ಥವಾಗಿರಬಹುದು ಇಲ್ಲವೇ ಕಾಲ್ಪನಿಕವಾಗಿರಬಹುದು."[೫]

ನಮ್ಮ ಗ್ರಾಮೀಣ ಸಮುದಾಯಕ್ಕೆ ಒಂದೊಂದು ವಸ್ತು ಒಂದೊಂದು ತೆರನಾಗಿ ಕಂಡುಬರುತ್ತದೆ. ಕಾರಣ ಬಹುತೇಕ ಸ್ತಳನಾಮಕ್ಕೆ ಸಂಬಂಧಿಸಿದ ಐತಿಹ್ಯಗಳು ಒಂದೇ ಮಾದರಿಯಲ್ಲಿರುತ್ತವೆ. ಅಂತಹ ಕೆಲವು ಸಾಮಾನ್ಯ ನಿಯಮಗಳನ್ನು ಈ ರೀತಿ ವಿಂಗಡಿಸಬಹುದು.

೧. ನಿಸರ್ಗದ ಚಹರೆಯನ್ನು ಗುರುತಿಸಲು ಇಟ್ಟುಕೊಂಡ ಹೆಸರುಗಳು.

೨. ನಿಸರ್ಗದ ಚಹರೆಗೆ ಪುರಾಣಪುರುಷರ, ದೇವತೆಗಳು ಹೆಸರಾಗಿ ಆರೋಪಗೊಂಡಿರುವುದು.

೩. ಭೂತ, ದೆವ್ವ ಮುಂತಾದ ಭಯಾನಕ ಸ್ಥಿತಿಯನ್ನು ವಿವರಿಸುವಂತಹುದು.

೪. ಸಾಮಾನ್ಯ ಜನರನ್ನು ಸ್ಥಳದೊಂದಿಗೆ ನವೀಕರಿಸಿ ವರ್ಣಿಸುವುದು.

೫. ಚರಿತ್ರೆಯ ಸಂಗತಿಗಳಿಂದ ನಿರೂಪಿತವಾಗಿರುವುದು.

ಬಹುತೇಕ ಈ ಸಾಮಾನ್ಯ ನಿಯಮಗಳು ಸಾರ್ವತ್ರಿಕವಾಗಿ ವಿವಿಧ ನೆಲೆಯಲ್ಲಿ ಚಿತ್ರಿತವಾಗಿರುವುದನ್ನು ತಿಳಿಯುವುದಾಗಿದೆ.

ಎರಡು-ಕಲ್ಲುಗಳು ಜೋಡಿಯಾಗಿ ನಿಂತಿದ್ದರೆ ಬಹುಮಟ್ಟಿಗೆ ಅವು ಅಕ್ಕ-ತಂಗಿ-ಅಣ್ಣ-ತಮ್ಮ ಮುಂತಾಗಿ ಕಂಡುಬರುವುದು ಸಹಜ.

ಉದಾ: ಅಕ್ಕ-ತಂಗಿಯ ಗುಂಡು

ಅಕ್ಕ ತಂಗಿಯ ಹಾಳ

ಯಾವುದಾದರೂ ಬಂಡೆಯ ಮೇಲೆ ಪ್ರಕೃತಿ ಸಹಜವಾದ ಕೊಳ. ನೀರಿನ ದೋಣಿ ಇದ್ದರೆ ಇಲ್ಲವೇ ಬಂಡೆಯ ಮೇಲೆ ಪದರ ಗುರುತುಗಳಿದ್ದರೆ ಅವು ಮೌಖಿಕರ ಕಲ್ಪನೆಯಲ್ಲಿ, ಶಿವ, ರಾಮ, ಭೀಮಾ ಮುಂತಾದ ಪುರುಷರ ನಿರ್ಮಾಣವೇ ಆಗಿರುತ್ತದೆ.

ಉದಾ: ಶಂಕರಬಂಡ

ಯಾವುದಾದರೂ ವಸ್ತು ಪ್ರಕೃತಿಯಲ್ಲಿ ಬಿಳಿ ವರ್ಣದಲ್ಲಿ ಕಂಡು ಬಂದರೆ ಅದು ಸಾಮಾನ್ಯವಾಗಿ ಹತ್ತಿ, ಬೆಣ್ಣೆ, ಬೆಳ್ಳಿ ಶಿವನು ರೂಪಿಸಿದ್ದ ವಿಭೂತಿ ಮುಂತಾಗಿ ತೋರಿಬರುತ್ತವೆ.

ಉದಾ: ಬೆಳಗಲ್ಲು

ಬೆಣ್ಣೆಕಲ್ಲ

ಕುರುವತ್ತಿ

ಬಳ್ಳಾರಿಯನ್ನು ಕುರಿತು ಒಂದು ಐತಿಹ್ಯ ಹೀಗಿದೆ: It says that at Kollur which is the proximity of the District Head Quarters. There was a Shiva Bhaktha (Devote) by name "Ballesha Mallaiah" who would have him food only after was shipping the linga. He great desirve was to see the vission of Mallesha (Shiva) to fullfill the desire of his devote. Lord Shiva it is sad revialed himself in a balla a grain measull in and arround the ballary. The place where Mallesha Manitested himself in the balla was called Ballary. There is an old Shiva Temple of Malleswara in the Fort.(6)

೫.೫(೧) ಪುರಾಣ ಮತ್ತು ಸ್ಥಳನಾಮ:

'ಪುರಾಣ ಎನ್ನುವುದು ಚರಿತ್ರೆಯ ಮಾತೃಕೆ' ಐತಿಹ್ಯ ತನ್ನ ಸುತ್ತಲಿನ ಜನಸಾಮಾನ್ಯರನ್ನು ವಿಶೇಷ ವ್ಯಕ್ತಿಗಳನ್ನು ಒಳಗೊಂಡು ಹೆಣೆದುಕೊಂಡಿದ್ದಾರೆ. ಪುರಾಣ ದೈವೀಪುರುಷರನ್ನು ಹೆಣೆದುಕೊಂಡಿರುತ್ತದೆ. "ಚರಿತ್ರೆಯ ಅಂಶ ಐತಿಹ್ಯಕ್ಕೆ ಆಧಾರವಾದರೆ, ಐತಿಹ್ಯ ಪುರಾಣಕ್ಕೆ ಆಧಾರ."[೭] ಇವೆರಡರ ನಡುವೆ ಎಳೆಯಷ್ಟು ಭಿನ್ನತೆ ಇದೆ ಅಷ್ಟ. ಇದರಿಂದ ಪೌರಾಣಿಕ ಸ್ಥಳನಾಮಗಳ ಅಧ್ಯಯನ ಕುತೂಹಲಕಾರಿಯಾಗುತ್ತದೆ.

ಮಹಾಭಾರತದಿಂದ ಪ್ರಸಿದ್ಧವಾಗಿರುವ ಕ್ಷೇತ್ರ ಕುರುಕ್ಷೇತ್ರ ಬಹಳ ಹಿಂದೆ ಕುರುಕ್ಷೇತ್ರಕ್ಕೆ 'ಶಮಂತ ಪಂಚಕ'ವೆಂಬ ಹೆಸರಿತ್ತು. ಮುಂದೆ 'ಕುರು' ಇಲ್ಲಿ ತಪ್ಪಸ್ಸು ಮಾಡಿ ಪವಿತ್ರಗೊಳಿಸಿದ್ದರಿಂದ ಈ ಸ್ಥಳಕ್ಕೆ 'ಕುರುಕ್ಷೇತ್ರ'ವೆಂದು ಹೆಸರಾಯಿತು.[೮]

ಆಯಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೆಲವು ಪೌರಾಣಿಕ ಸ್ಥಳನಾಮಗಳ ಸಂಕ್ಷಿಪ್ತ ಪಟ್ಟಿ ನೀಡಲಾಗಿದೆ.

೧) **ಅಮರಾಪುರ:** ಪೂರ್ವಕಾಲದಲ್ಲಿ ದೇವಾನುದೇವತೆಗಳ ಒಡೆಯನಾದ ದೇವೇಂದ್ರನು ಅಮರಾವತಿಯೆಂಬ ತನ್ನ ಪಟ್ಟಣದಿಂದ, ಭೂಮಿಗೆ ಬಂದಿಳಿದು ಅಮರಾವತಿಯಿಂದ ತೆರವಾಗಿ ಇಲ್ಲೊಂದು ಪಟ್ಟಣ ನಿರ್ಮಿಸಿಹೋದನು. ಇದರಿಂದಾಗಿ ಇದು ಅಮರಾಪುರ ಎಂದು ಹೆಸರು ಪಡೆಯಿತು.

ಬಾಣಾಪುರ: ೧) ಪ್ರಾಚೀನ ಕಾಲದಲ್ಲಿ ಬಾಣ ಮಹಾರಾಜನು ಅಪ್ರತಿಮ ಶಿವಭಕ್ತನಾಗಿದ್ದವನು. ಈ ಊರಿನಲ್ಲಿ ಬಂದು ಕೆಲವು ದಿವಸ ಇದ್ದುದ್ದರಿಂದಾಗಿ ಬಾಣಾಪುರ ಎಂದು ಹೆಸರು ಪ್ರಾಪ್ತವಾಯಿತು.

೨) ಮಹಾಭಾರತದ ಯುದ್ಧಕ್ಕೆ ಈ ಊರಿನಲ್ಲಿ ಸೈನಿಕರು ಉಳಿದುಕೊಂಡು ಬಾಣಗಳನ್ನು ತಯಾರು ಮಾಡುತ್ತಿದ್ದರು. ಇದರಿಂದಾಗಿ ಬಾಣಾಪುರ ಎಂದು ಹೆಸರು ಬಂತೆಂಬ ಕಥೆ ಇದೆ.

೩) **ಶಂಕರಬಂಡೆ:** ಈ ಊರಿನಲ್ಲಿ ಒಂದು ದೊಡ್ಡ ಕಲ್ಲು ಬಂಡೆಯ ಮೇಲೆ ಪ್ರಾಚೀನ ಕಾಲದಲ್ಲಿ ಶಿವನು ಒಂದು ಹುಣ್ಣಿಮೆಯ ದಿನ ತಾಂಡವ ಮಾಡುತ್ತಿದ್ದ, ಆದ್ದರಿಂದ ಶಿವನ ನಾಮಧೇಯರಾದ ಶಂಕರ ಎಂಬುದನ್ನು ಈ ಗ್ರಾಮಕ್ಕೆ ನಾಮಾಂಕಿತ ಗೊಳಿಸಲಾಯಿತೆಂದು ಎಂಬ ಐತಿಹ್ಯವು ಚಾಲ್ತಿಯಲ್ಲಿದೆ.

೫.೬ ಗಾದೆ ಮತ್ತು ಸ್ಥಳನಾಮ:

ಸಾರ್ವತ್ರಿಕತೆ ಜಾನಪದ ಲಕ್ಷಣಗಳಲ್ಲಿ ಒಂದು ಈ ಕಾರಣದಿಂದ ಸಾಂಸ್ಕೃತಿಕ, ಸಾಮಾಜಿಕ, ಐತಿಹಾಸಿಕ ಅಧ್ಯಯನಗಳಿಗೆ ಗಾದೆಗಳೂ ಮೂಲ ಸಾಮಗ್ರಿಯಾಗಿ ನೆರವಾಗುತ್ತದೆ. ಗಾದೆಯ ಹಿನ್ನೆಲೆ, ಮೂಲಗಳನ್ನು ಶೋಧಿಸಹೊರಟರೆ ಹಲವಾರು ಹೊಸ ಸಂಗತಿಗಳು ತಿಳಿಯುತ್ತವೆ. ನಾಡಿನ ತುಂಬಾ ದೊರೆಯುವ ಗಾದೆಗಳಲ್ಲಿ ಏನೆಲ್ಲಾ ಸಂಗತಿಗಳು ಅಡಗಿವೆ. ಅಂತೆಯೇ ನಮ್ಮ ನಾಡಿನಲ್ಲಿ ಪ್ರಚಲಿತವಿರುವ ಅನೇಕ ಗಾದೆ ಅನೇಕ ಸ್ಥಳನಾಮಗಳನ್ನು ಒಳಗೊಂಡಿದೆ. ಒಂದೊಂದು ಗಾದೆಯು ಒಂದೊಂದು ಸಂಸ್ಕೃತಿಯನ್ನು ನಮ್ಮ ಜನರ ವಾಸದ ನೆಲೆಗಳನ್ನು ವಿಶದಪಡಿಸಬಲ್ಲವು.

ಸಾಮಾನ್ಯವಾಗಿ ಗಾದೆಗಳು ಗ್ರಾಮನಾಮಗಳು ಅಥವಾ ಸ್ಥಳನಾಮಗಳ ವಾರ್ಗಿಕಗಳನ್ನು ಬಹುತೇಕ ಒಳಗು ಮಾಡಿಕೊಂಡಿವೆ.

೧. ಊರು ಸೇರಿದ ಮೇಲೆ ದಾರಿ ತೀರಿತು

೨. ಒಳ್ಳೆಯವರ ಮಾನ ಹಳ್ಳೀಲಿ ಹೋಯ್ತು

೩. ಊರಿಗೆ ಹದಿನಾರು ದಾರಿ

೪. ಗ್ರಾಮದ ಶಾಂತಿಗೆ ತಳವಾರ ತಲೆ ಬೋಳಿಸಿಕೊಂಡ

೫. ಊರು ಕೊಳ್ಳೆ ಹೊಡೆದ ಮೇಲೆ ದಿಡ್ಡಿ ಬಾಗಿಲು ಹಾಕಿದಂತೆ

ಎಂಬ ಗಾದೆಗಳಲ್ಲಿ ಊರು, ನಾಡು, ಹಳ್ಳಿ, ಕೋಟೆ, ಪಹರೆ, ಗ್ರಾಮ ಹೀಗೆ ಅನೇಕ ವಾರ್ಗಿಕಗಳು ದೊರೆಯುತ್ತವೆ. ಗಾದೆಗಳ ಹುಟ್ಟು ಇತ್ತೀಚಿನದಲ್ಲ. ಅತೀ ಪ್ರಾಚೀನತೆವೆಂದು ನಂಬಿರುವ ಈ ಗಾದೆಗಳಲ್ಲಿ ವಾರ್ಗಿಕಗಳ ಪ್ರಾಚೀನತೆಯೂ ಅಷ್ಟೇ ಹಿಂದಕ್ಕೆ ಹೋಗುತ್ತದೆ. ಇದರಿಂದಾಗಿ ಒಂದು ಸ್ಥಳಕ್ಕೆ ಹೆಸರು ಕರೆಯುವುದು ಕೂಡ ಇಂದು ನಿನ್ನೆಯದಲ್ಲವೆಂಬುದು ತಿಳಿಯುತ್ತದೆ.

ಉದಾ: ೧) ಬಳ್ಳಾರಿ ಸುತ್ತಮುತ್ತ ಬಾಳೆಕಾಯೋಟು ಬರಕುರುಗೋಡು ಸುತ್ತಮುತ್ತ ಕುಂಬಳಕಾಯೋಟು ಬರ.

೨) ಬಳ್ಳಾರಿಗೆ ಹೆಣ್ಣು ಕೊಡಬಾರದು ಆದವಾನಿಗೆ ಕತ್ತೆ ಕೊಡಬಾರದು.

೩) ತಾಳೂರಿಗೆ ತಿಳಿದವನೇ ಗೌಡ, ಊಳೂರಿಗೆ ಉಳಿದವನೇ ಗೌಡ.

೫.೭ ಜಾನಪದ ಕಥೆ ಮತ್ತು ಸ್ಥಳನಾಮ:

ಕಥೆಗಳು ಊರ ಹೆಸರಿನ ಮೇಲೆ ಅತ್ಯಂತ ಪ್ರಭಾವ ಬಿರುವ ಅಂಶಗಳಾಗಿವೆ. ಇವು ಹೆಚ್ಚಿನಂಶ ವಸ್ತುಸ್ಥಿತಿಯನ್ನು ಕುರಿತವುಗಳಾಗಿದ್ದು ವ್ಯಕ್ತಿಗತ, ಭೌಗೋಳಿಕ ಪರಿಸರ ಮತ್ತು ಘಟನಾತ್ಮಕ ವಿಶಿಷ್ಟತೆಯನ್ನು ಪಡೆದುಕೊಂಡಿರುತ್ತವೆ. ಈ ಕಥೆಗಳು ಒಂದು ಜನಾಂಗದ ನಡೆವಳಿಕೆ, ನಂಬಿಕೆಗಳನ್ನು ಪ್ರತಿನಿಧಿಸುತ್ತಿದ್ದು ಪುನರಾವರ್ತನೆಯ ಮೂಲಕ ಪರಂಪರೆಯ ಉಳಿವಿಗೆ, ನೆನಕೆಗೆ ಕಾರಣವಾಗುತ್ತದೆ. "ಹಳ್ಳಿಗಳ ಹೆಸರುಗಳ ಬಗ್ಗೆ ಸ್ಥಳಪುರಾಣ, ಕಟ್ಟು ಕಥೆಗಳು ನಿರ್ಮಾಣವಾಗಿರುತ್ತವೆ ಮತ್ತು ಹಳ್ಳಿಯ ಜನ ಅವನ್ನು ಹೇಳಲು ಬಹಳ ಉತ್ಸುಕರಾಗಿರುತ್ತಾರೆ. ಕಟ್ಟು ಕಥೆಗಳು ಊರಿನ ಹೆಸರನ್ನು ವಿವರಿಸಲು ಪ್ರಯತ್ನಿಸುತ್ತವೆ ನಿಜ. ಊರಿನ ಹೆಸರಿನ ಬಗ್ಗೆ ಜನ ತೋರಿದ ಸಹಜ ಕುತೂಹಲ, ಕಂಡುಕೊಂಡ ಉತ್ತರಕ್ಕೆ ಸಂಕೇತವೇ ಅವಾಗಿರುತ್ತವೆ."[೯] ಇದೊಂದು ರೀತಿಯಲ್ಲಿ ಐತಿಹ್ಯ, ಸ್ಥಳಪುರಾಣಕ್ಕೆ ಸಮೀಪವರ್ತಿ ಎನಿಸಿದರೂ, ಇವುಗಳ ಸ್ವರೂಪವೇ ಬೇರೆ. ಕಥೆ ಹೇಳುವ ಜನರು ಈ ಕಥೆಗಳಲ್ಲಿ ಘಟನೆಗಳನ್ನು ವಿವರಿಸುತ್ತ, ಅನೇಕ ಸ್ಥಳನಾಮಗಳನ್ನು ಹೇಳುತ್ತಾರೆ. ಅವುಗಳು ಪ್ರಸಿದ್ಧ ಊರುಗಳೇ ಆಗಿರುತ್ತವೆ. ಅಲ್ಲಿ ರಾಜನೇ ಆಳುತ್ತಿರುತ್ತಾನೆಂಬುದು ಗಮನಾರ್ಹ.

ಮೌಖಿಕ ಕಥಾ ಪರಂಪರೆಯಲ್ಲಿ ಯಾವುದೇ ಕಥೆಯು 'ಒಂದು ಊರಾಗ' ಎಂಬ ವಾಸದ ನೆಲೆ ಉಲ್ಲೇಖದಿಂದಲೇ ಆರಂಭವಾಗುತ್ತದೆ. ಆಯಾ ಹಳ್ಳಿ, ಪಟ್ಟಣ, ನಗರ, ಗ್ರಾಮ, ಊರು ಮುಂತಾಗಿ ಹೆಸರುಗಳು ಇಲ್ಲಿ ಬರುತ್ತವೆ. ಮುಖ್ಯವಾಗಿ ಸ್ಥಳಗಳ ಹೆಸರಿನಿಂದಲೇ ಆರಂಬವಾಗುವ ಕಥೆಗಳಿವೆ. "ಒಂದಾನೊಂದು ಕಾಲದಾಗ ಹಂಪೆಯೆಂಬೋ ಪಟ್ಟಣದಾಗ... ಎಂದು ಸ್ಥಳದ ಹೆಸರಿನಿಂದ ಆರಂಭವಾಗುತ್ತದೆ. ಹೀಗೆ ಜಾನಪದ ಕಥೆಗಳಲ್ಲಿಯೂ ಪ್ರಾದೇಶಿಕವಾಗಿ ಅನೇಕ ಸ್ಥಳನಾಮಗಳು ದಾಖಲುಗೊಂಡಿರುವುದನ್ನು ಗುರುತಿಸಬಹುದು. ಮೂಲ ನಿಷ್ಪತ್ತಿಯೂ ಇಂತಹ ಕಥೋಲ್ಲೇಖಿತ ಹೆಸರುಗಳಲ್ಲಿ ಉಳಿದುಕೊಂಡಿರುತ್ತವೆ. ಈ ದೃಷ್ಟಿಯಿಂದ ನಾಮಾಧ್ಯಯನದಲ್ಲಿ ಜನಪದ ಕಥೆಗಳಿಗೆ ಮಹತ್ವವಿದೆ.

೫.೮ ಜಾನಪದ ಹಾಡು (ಪದ) ಮತ್ತು ಸ್ಥಳನಾಮ:

ನಮ್ಮ ನಾಡಿನ ಅನೇಕ ದೇವರುಗಳ ಬಗ್ಗೆ ಕಟ್ಟಿದ ಹಾಡುಗಳಲ್ಲಿಯೂ ಸ್ಥಳ ಚರಿತ್ರೆ, ಸ್ಥಳ ವಿಶೇಷ ಐತಿಹ್ಯ ಮುಂತಾದ ವಿಷಯಗಳು ಹೇಳಲ್ಪಟ್ಟಿವೆ. ಕೇವಲ ವಸತಿಯನ್ನು ಹೊಂದಿದ ಸ್ಥಳನಾಮಗಳಲ್ಲದೇ, ನಿರ್ವಸತಿ ಸ್ಥಳನಾಮಗಳೂ ವಿಶೇಷವಾಗಿರುವುದನ್ನು ಗಮನಿಸಬೇಕಾಗಿದೆ.

ಕರ್ನಾಟಕ ಮೌಖಿಕ ಪರಂಪರೆಯ ಸಂಪತ್ತಿನಲ್ಲಿ ಹಾಡಿನ ಪ್ರಕಾರ ಒಂದು ಅತಿ ಮುಖ್ಯವಾದದ್ದು. ಎಲ್ಲೆಡೆ ಜನಾಪದರಲ್ಲಿ ಅಡಗಿ ಕುಳಿತ ಲಾವಣಿ. ತ್ರಿಪದಿ–ಕೋಲಾಟದ ಪದಗಳು ಶಿಶುಪ್ರಾಸ ಹಂತಿಯಹಾಡು. ಗರತಿಯ ಹಾಡು ಮುಂತಾದ ಹಾಡುಗಳಲ್ಲಿ 'ಸ್ಥಳನಾಮ, ಗ್ರಾಮ ನಾಮಗಳು ಹಾಸುಹೊಕ್ಕಾಗಿವೆಯೆಂಬುದು' ಗಮನಾರ್ಹ. ಬಹುತೇಕ ಹಾಡುಗಳಲ್ಲಿ ಅದರಲ್ಲಿಯೂ ಕೋಲಾಟ ಮತ್ತು ಲಾವಣಿಗಳಲ್ಲಿ ಸ್ಥಳನಾಮ ತಪ್ಪದೇ ಬರುತ್ತವೆ. ಲಾವಣಿ ಪ್ರಕಾರದಲ್ಲಿ ಲಾವಣಿ ಹಾಡಿದವನ ಹೆಸರು ಊರು ಮತ್ತು ಲಾವಣಿಯ ರಚನೆಯ ಚಿತ್ರದಲ್ಲಿ ಅನೇಕ ಗ್ರಾಮಗಳು ಅಡಗಿವೆ. ಕೋಲಾಟದ ಪದಗಳಲ್ಲಿಯೂ ಆಯಾ ಪ್ರಾವೇಶಿಕ ಭೌಗೋಳಿಕ ಪರಿಸರದಲ್ಲಿ ನಡೆಯುವ ಸಾಮಾಜಿಕ, ಸಾಂಸ್ಕೃತಿಕ ಜೀವನ ಚಿತ್ರಣ ನೀಡುವ ಮೂಲಕ ಸ್ಥಳನಾಮಗಳೂ ನಿರೂಪಿಸಲ್ಪಟ್ಟಿವೆ.

೫.೯ ಬಯಲಾಟ ಮುದ್ರಿಕೆಗಳಲ್ಲಿ ಸ್ಥಳನಾಮ:

ಕರ್ನಾಟಕದ ಜನಪದ ರಂಗಕಲೆಯ ಹಲವು ಪ್ರಕಾರಗಳಲ್ಲಿ ದೊಡ್ಡಾಟ ಮತ್ತು ಸಣ್ಣಾಟ. ಯಕ್ಷಗಾನ ಇವು ಪ್ರಮುಖವಾದವುಗಳು. ಬಯಲಾಟ ಅಥವಾ ಮಾಡಲಪಾಯ ಎಂಬ ಜನಪದ ರಂಗ ಪ್ರಕಾರ ಬಳ್ಳಾರಿ ಜಿಲ್ಲೆ ಸೇರಿದಂತೆ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿವೆ.

ಬಯಲಾಟ ಒಂದು ಪ್ರದರ್ಶನ ಕಲೆ. ಜಾನಪದರು ತಮ್ಮ ಮನೋಶ್ರಮವನ್ನು ಬಯಲು ಮಾಡಿಕೊಳ್ಳಲು ಇಂಥಾ ಕಲೆಗಳನ್ನು ಸೃಷ್ಟಿಸಿಕೊಂಡರು. ಬಯಲಾಟವು ಮೊದ ಮೊದಲು ವಾಚಿಕ (ಮೌಖಿಕ) ಸಾಂಪ್ರದಾಯದ ಹಾಡುಗಾರಿಕೆಯ ಮೂಲಕ ಪ್ರಯೋಗವಾಗುತ್ತಿತ್ತು. ಈ ಕಾರಣದಿಂದಾಗಿ ಇದನ್ನು ಜಾನಪದ ರಂಗಭೂಮಿ ಎಂದು ಕರೆಯಲಾಗುತ್ತದೆ. ಮುಂದುವರೆದು ಅಕ್ಷರಸ್ಥ ಜನರು ಅಕ್ಷರರೂಪ ನೀಡುವ ಹಿನ್ನೆಲೆಯಲ್ಲಿ ಲಿಪಿಕಾರರು ನಮ್ಮ ಪ್ರದೇಶ ಊರುಗಳನ್ನು ಹೆಸರುಗಳನ್ನು ವಿಳಾಸಗಳನ್ನು ಬರೆಯುವುದು ಮರೆಯುತ್ತಿರಲಿಲ್ಲ. ಇದರಿಂದಾಗಿ ಅಲ್ಲಿಯ ಬಯಲಾಟದ ಕಥೆಗಳಲ್ಲಿ ಪ್ರಾದೇಶಿಕ ಸಂಸ್ಕೃತಿ ಉಳಿದುಬಂದಿದೆ. ಇಂಥ ಮುದ್ರಿಕೆಗಳಲ್ಲಿ ಸಮುದಾದ ಸ್ಥಳದ ಹೆಸರುಗಳ ಅಧ್ಯಯನ ತುಂಬಾ ವಿಶೇಷವಾದುದು ಮತ್ತು ಕುತೂಹಲಕಾರಿಯಾದುದು.

ಬಳ್ಳಾರಿ ತಾಲ್ಲೂಕಿನ ಬಯಲಾಟದ ಕವಿಗಳೂ ಸಹ ಇದೇ ಪಾರಂಪರಿಕ ಧೋರಣೆಯುಳ್ಳವರು. ಇಲ್ಲಿ ಕವಿಗಳ ಜೀವನ ವಿವರಗಳು ಏನೂ ಗೊತ್ತಾಗದಿದ್ದರೂ ಅವರ ಹೆಸರುಗಳು ತಿಳಿಯುತ್ತವೆ. ಮುದ್ರಿಕೆಗಳಲ್ಲಿ ಒಂದಷ್ಟು ಚಾರಿತ್ರಿಕ ಅಂಶಗಳೂ ದೊರೆಯುತ್ತವೆ. ಮುದ್ರಿಕೆಗಳ ರಚನೆಯಲ್ಲಿ ಪೂರ್ವಭಾಗದಲ್ಲಿ ಸ್ಥಳನಾಮ ಘಟಕವನ್ನು ಹಾಗೂ ಪರದಲ್ಲಿ ಸ್ಥಳದೈವ ಘಟಕಗಳನ್ನು ಸಂಯೋಜಿತಗೊಳಿಸುತ್ತಾರೆ. ಇವರು ನಮ್ಮ ಹಸರಿನೊಡನೆ ತಮ್ಮ ಗ್ರಾಮಗಳನ್ನು ಹೆಸರಿಸಿ ಸ್ತುತಿ ಪದ್ಯದ ಮೂರನೆಯ ನುಡಿಯನ್ನು ಕೂಡಿಸಿ ಹಾಡುತ್ತಾರೆ. ಅಂದರೆ ಮೊದಲು ಗಣಸ್ತುತಿಯಾಗುವುದು ಅದರಲ್ಲಿ ೩ ನುಡಿಗಳಿರುತ್ತವೆ. ಮೂರನೆಯ ನುಡಿಯಲ್ಲಿ ಆಯಾ ಗ್ರಾಮಗಳು ಉಲ್ಲೇಖಗೊಂಡಿರುವುದು ತಿಳಿಯುತ್ತದೆ. ಬಹುತೇಕ ಬಯಲಾಟ ಸ್ತುತಿ ಪದ್ಯಗಳಲ್ಲಿ ಇರುವ ಮಾದರಿ ಹೀಗಿದೆ.

"ಪೊಡವಿಯೊಳ್ ಕುಡುವೆನಿಯಂ
ಒಡೆಯಾ ಭೀಮೇಶನ್ನ.....
....
ಪೊಡವಿಯೊಳ್ ಗರುಡಪುರದೊಡೆಯನೆ ಚರಣದಾಣೆ"೧೦

ಎಂಬಲ್ಲಿ ಸ್ಥಳನಾಮ ಉಲ್ಲೇಖಗಳಿರುವುದನು ಗುರುತಿಸಬಹುದು. ಕುಡುತಿನಿಯು ಕೆಲವು ಸ್ತುತಿ ಪದ್ಯಗಳಲ್ಲಿ 'ಕುಡುತಣಿ' ಎಂದು ಉಲ್ಲೇಖವಾಗಿದೆ. ಶಾಸನೋಕ್ತ 'ಕೊಟ್ಟೆತೊಣೆ' ಎಂಬ ರೂಪಕ್ಕೆ ಇದು ಹತ್ತಿರವಾದದು. ಇಂಥ ಉಲ್ಲೇಖಗಳಿಂದ ಗ್ರಾಮ ನಾಮಗಳ ಮೂಲ ರೂಪವನ್ನು ಶೋಧಿಸಬಹುದು. ಅಲ್ಲದೇ ಭಾಷಿಕವಾಗಿ ಕಾಲಾನುಕ್ರಮದಲ್ಲಿ ಉಂಟಾಗಿರಬಹುದಾದ ಧ್ವನಿವ್ಯತ್ಯಾಸ ರೂಪ ವ್ಯತ್ಯಾಸಗಳನ್ನು ಅಕ್ಷರಾತ್ಮಕ ಬೇಧವನ್ನು ತಿಳಿಯಲು ಸಾಧ್ಯ. ಅಂತೆಯೇ 'ಪೊಡವಿ' ಎಂಬಲ್ಲಿ 'ಪ'ಕಾರ (ಅಡವಿಗೆ) ಬಳಕೆಯಲ್ಲಿದೆ. ಇದು ಕನ್ನಡ ಭಾಷೆಯ ಅವಸ್ಥಾಬೇಧಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

ಕೆಲವು ಬಯಲಾಟ ಕೃತಿಗಳಲ್ಲಿ ಬಳ್ಳಾರಿ ತಾಲ್ಲೂಕಿನ ಊರ ಹೆಸರುಗಳನ್ನು ಪಟ್ಟಿ ಮಾಡಲಾಗಿದೆ. ಬಯಲಾಟ ಕವಿಗಳ ಸಂಸ್ಕೃತ ನಿಷ್ಠತೆಯನ್ನು ಇದರಿಂದ ಗುರುತಿಸಬಹುದು.

ಮೂಲಹೆಸರುಗಳು	**ಮುದ್ರಿಕೆಗಳಲ್ಲಿ ಸಂಸ್ಕೃತಾನುಕರಣಗೊಂಡ ಹೆಸರುಗಳು**
ಎತ್ತಿನ ಬೂದಿಹಾಳು	ಗೋರಕ್ಷಪುರ
ತಾಳೂರು	ಮಾಂಗಲ್ಯಪುರ
ಬೆಳಗಲ್ಲು	ಸಿತಸಿಲ, ಶ್ವೇತಶಿಲ
ಸಿಂದವಾಳ	ಸಿಂಧೂಪುರ

೫.೧೦ ಜಾನಪದರಲ್ಲಿ ಸ್ಥಳನಾಮಗಳು:

ಸ್ಥಳನಾಮಗಳನ್ನು ಶಾಸ್ತ್ರ ಮತ್ತು ಇತಿಹಾಸಗಳ ದೃಷ್ಟಿಯಿಂದ ಅಭ್ಯಾಸಿಸಬೇಕಾದದು ಔಚಿತ್ಯಪೂರ್ಣವೆನಿಸಿದರೂ ಅವುಗಳನ್ನು ಕೇವಲ ಶಾಸ್ತ್ರೀಯವಾಗಿ ನೋಡದೆ ಜಾನಪದ ದೃಷ್ಟಿಯಿಂದಲೂ ಅಭ್ಯಸಿಸಬೇಕಾಗುತ್ತದೆ. ಏಕೆಂದರೆ ಗ್ರಾಮಗಳನ್ನು ಕಟ್ಟಿದವರು ಮತ್ತು ಅವುಗಳಿಗೆ ಹೆಸರುಗಳನ್ನು ನೀಡಿ ತಲತಲಾಂತರಗಳಿಂದ ನೆನಪಿನಲ್ಲಿ ಜೀವಂತವಾಗಿರಿಸಿಕೊಂಡು ಬಂದವರು ನಮ್ಮ ಜನಪದರೇ ಆಗಿದ್ದಾರೆ. ಸ್ಥಳನಾಮಗಳ ಅಧ್ಯಯನದಲ್ಲಿ ಅವುಗಳ ಮೂಲ ಸ್ವರೂಪ ಹಾಗೂ ಬೆಳವಣಿಗೆಯನ್ನು ಶೋಧಿಸುವುದಲ್ಲದೆ ಅವುಗಳ ಸಾಂಸ್ಕೃತಿಕ ಮಹತ್ವವನ್ನು ಗುರುತಿಸುವ ಕಾರ್ಯ ನಡೆಯಬೇಕಾಗುತ್ತದೆ. ಅಲ್ಲಲ್ಲಿಯ ಜನ ಜೀವನವನವನ್ನನುಸರಿಸಿ ಸಾಂಸ್ಕೃತಿಕ ಮಹತ್ವವು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಿನ್ನವಾಗಿರಬಹುದು. ಯಾವುದೇ ಒಂದು ಭೌಗೋಳಿಕ ಪರಿಸರದಲ್ಲಿ ನೆಲೆ ನಿಂತ ಜನಾಂಗಕ್ಕೆ ತನ್ನದೇ ಆದ ಒಂದು ಸಂಸ್ಕೃತಿ ಇರುತ್ತದೆ. ಇಂಥ ಸಂಸ್ಕೃತಿಯನ್ನು ಆ ಜನಪದರ ಅಹಾರ- ವಿಹಾರ, ವೇಷ- ಭೂಷಣ, ಅಚಾರ- ನಂಬಿಕೆ, ಮತ-ಧರ್ಮ, ಭಾಷೆ-ವಿದ್ಯೆ, ಇವುಗಳ ಅಭಿವ್ಯಕ್ತಿಯಲ್ಲಿ ಗುರುತಿಸಬಹುದಾಗಿದೆ. ಸ್ಥಳನಾಮಗಳು ಅನೇಕ ತಲೆಮಾರುಗಳಿಂದ ಮೌಖಿಕ ಅಥವಾ ದಾಖಲೆಗಳ ಮೂಲಕವಾಗಿ ಸಾಗಿ ಬಂದಿರುವ ಭಾಷಾಭಿವ್ಯಕ್ತಗಳಾಗಿರುವುದರಿಂದ ಅಯಾ ಜನಾಂಗದ ಸಂಸ್ಕೃತಿಯ ಮಹತ್ವದ ಅಂಶಗಳೇ ಆಗಿವೆ. ಈ ಕಾರಣಗಳಿಂದಾಗಿ ಸ್ಥಳನಾಮಗಳನ್ನು ಪ್ರಾದೇಶಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ಅವಲೋಕಿಸಬೇಕಾಗಿರುತ್ತದೆ. ನಮ್ಮ ಗ್ರಾಮೀಣ ಜನಪದರು ಸ್ಥಳನಾಮಗಳ ಬಗೆಗೆ ಎಲ್ಲಾ ತಿಳಿದವರೆಂದೇನು ಭಾವಿಸಬೇಕಾಗಿಲ್ಲ. ಸ್ಥಳನಾಮಗಳಲ್ಲಿ ಅವರಿಗೆ ತಿಳಿಯದೆ ಹಲವು ಅಂಶಗಳಿವೆ. ಸ್ಥಳನಾಮಗಳ ಅಧ್ಯಯನ ಕೇವಲ ಸಮಾಜಶಾಸ್ತ್ರೀಯ ಅಧ್ಯಯನ ಮಾತ್ರವಾಗಿರದೆ ಅದು ಒಂದು ಶಾಸ್ತ್ರೀಯ ಅಧ್ಯಯನವಾಗಿದೆ. ತನ್ನದೇ ಆದ ಸಿದ್ಧಾಂತ ಮತ್ತು ನಿಯಮಗಳುಳ್ಳ ಪ್ರತ್ಯೇಕ ಶಾಸ್ತ್ರವಾಗಿದೆ. ಜಾನಪದೀಯ ಅಧ್ಯಯನ ಅದಕ್ಕೆ ಪೂರಕ ಸಾಮಾಗ್ರಿಯನ್ನೊದಗಿಸುವುದಷ್ಟೇ. ಆಯಾ ಕ್ಷೇತ್ರದ ಜನಗಳ ಗ್ರಾಮ ನಿರ್ಮಾಣ, ಸ್ಥಳನಾಮಗಳ ಬಗ್ಗೆ ಅವರು ತಾಳಿರುವ ಭಾವನೆಗಳು, ಅವರ ಜೀವನದಲ್ಲಿಯ ಸ್ಥಳನಾಮಗಳ ಬಳಕೆ ಇವು ಸ್ಥಳನಾಮಾಧ್ಯಯನಕ್ಕೆ ಪೂರಕವಾಗಬಹುದಾದ ಜನಪದ ಪರಂಪರೆಯಲ್ಲಿನ ಪೂರಕ ಸಾಮಾಗ್ರಿಗಳು. ತಮ್ಮ ಜೀವನದ ಅಕಸ್ಮಿಕಗಳಿಗೆ, ಆಗು ಹೋಗುಗಳಿಗೆ ಮತ್ತು ಘಟನಾವಳಿಗಳಿಗೆ

---

೧. ಕೆ.ಎಂ.ವೀರಭದ್ರಶರ್ಮ - ಬಳ್ಳಾರಿ ಜಿಲ್ಲೆಯ ಕನ್ನಡ ಕರ್ನಾಟಕ ಭಾರತಿ - ರಜತ ಮಹೋತ್ಸವ ವರ್ಷದ ಪ್ರಕಟಣೆ.

ದೇವರು ಮತ್ತು ದೈವವೇ ಕಾರಣವೆಂದು ಭಾವಿಸುತ್ತಿದ್ದ ನಮ್ಮ ಜನಪದರು ದೈವವನ್ನುವಲಂಬಿಸಿ ಬದುಕಿದವರು. ಅಲ್ಲದೆ ಎಲ್ಲವನ್ನೂ ದೈವತ್ವಕ್ಕೆ ಅರೋಪಿಸಿದವರಾಗಿದ್ದಾರೆ.

ತಾವು ವಾಸಿಸುವ ನೆಲೆಗಳನ್ನು ದೈವದ ಹೆಸರುಗಳಲ್ಲಿ ಕರೆದರೆ ತಮಗೆ ಮತ್ತು ತಾವು ವಾಸಿಸುವ ಸ್ಥಳಕ್ಕೆ ಯಾವುದೇ ತೊಂದರೆ ಮತ್ತು ಪೀಡೆಗಳೊದಗಲಾರವು ಎಂದು ನಂಬಿದ್ದರು. ಈ ಕಾರಣಕ್ಕಾಗಿಯೇ ಇಂದು ನಮಗೆ ದೈವದ, ದೇವರ ಹೆಸರಿನ ಗ್ರಾಮನಾಮಗಳು ಕಾಣ ಸಿಗುತ್ತವೆ. ಬಳ್ಳಾರಿ ಜಿಲ್ಲೆಯಲ್ಲಿ ಇಂಥ ಕೆಲವು ಸ್ಥಳನಾಮಗಳು ಉಪಲಬ್ದವಿದೆ.

ಸ್ಥಳನಾಮಗಳ ಬಗ್ಗೆ ಜನರು ತಾಳಿರುವ ಭಾವನೆ ಮತ್ತು ಅವರ ಜೀವನದಲ್ಲಿ ಸ್ಥಳನಾಮಗಳು ಹೊಂದಿದ ಪಾತ್ರ ಎಂತಹುದೆಂಬುದನ್ನು ಬಳ್ಳಾರಿ ಜಿಲ್ಲೆಯ ಕೆಲವು ಸ್ಥಳನಾಮಗಳು ಬಗೆಗಿರುವ ಜನಪದ ನಂಬಿಕೆ ಮತ್ತು ಕಥೆಗಳಿಂದ ಅರಿಯಬಹುದಾಗಿದೆ.

೫.೧೦(೧) ಬಳ್ಳಾರಿ:

೧೯೦೪ರಲ್ಲಿ ಪ್ರಕಟವಾದ ಬಳ್ಳಾರಿ ಜಿಲ್ಲೆಯ ಗೆಜೆಟಿಯರ್‌ನಲ್ಲಿ "ಬಳ್ಳಾರಿ" ಎಂಬ ಹೆಸರಿನ ಬಗ್ಗೆ ಉಲ್ಲೇಖವೊಂದಿದೆ. ಆ ಪ್ರಕಾರವಾಗಿ ರಕ್ಕಸರ ಅರಸನಾದ ಬಲ ಎಂಬುವವನು ದೇವಕನ್ನಿಕೆಯರಿಗೆ ಉಪಟಳ ನೀಡುತ್ತಿರುವಾಗ ಇಂದ್ರನು ಅವನೊಂದಿಗೆ ಕಾಳಗ ನಡೆಸಿ ಅವನನ್ನು ಸಾಯಿಸಿದನಂತೆ "ಬಲ" ಎಂಬುವವನು 'ಅರಿ'ಯ ಕೈಯ್ಯಲ್ಲಿ ಸೋತು ಸತ್ತಿದಕ್ಕೆ ಬಲಾರಿ, ಬಳ್ಳಾರಿಯಾಯಿತೆಂದು ತಿಳಿದುಬರುತ್ತದೆ. ಶಾಸನಗಳಲ್ಲಿ(೧) "ಭಳಾರಿ" ಎಂಬ ರೂಪ ಕಂಡುಬರುವುದರಿಂದ (ಭಟ+ಅರಿ=ರಕ್ಕಸರ ವೈರಿ) ಈ ಸಂಗತಿ ಬಳ್ಳಾರಿ ಸ್ಥಳನಾಮದೊಂದಿಗೆ ಹೊಂದಿಕೆಯಾಗಬಹುದೆಂದು ಭಾವಿಸಲಾಗಿದೆ.

ಕನ್ನಡ ಕಾವ್ಯಗಳಲ್ಲಿ ಉಗ್ರ ಹೆಣ್ಣು ದೇವತೆ 'ಬಳರಿ' ಅಥವಾ 'ಬಳಾರಿ'ಯ ಬಗೆಗೆ ಕೆಲವು ಸಂಗತಿಗಳು ದೊರೆಯುತ್ತವೆ. ಉದಾ:

ಬಳರಿಯ ಸೋಂಪಿಗೆ ಬೀದಿಗೆ
ಮುಳಿವರ ಮನೆಗಳ್ಗೆ ಮದ್ಯಪಿಗಳಲ್ಲಿಗೆ ಕೋ
ಮಳೆಯಂ ಪೋಗಲರ್ತ್ತಡ
ಬಳರಿಗೆ ಪುಯ್ಯಲ್ಚಬಂದ ಕುರಿಯಂತಕ್ಕುಂ(೨)

ಕೋಮಲ ಸ್ತ್ರೀಯರನ್ನು ಬಳರಿಯ ಸೋಂಪಿಗೂ ಕೂಡ ಹೋಗಲು ಬಿಡಬಾರದು ಎಂದು ಈ ಪದ್ಯವು ಹೇಳುವ ಸಾರಾಂಶ. ಅಂದರೆ ಅಷ್ಟು ಉಗ್ರವಾಗಿ ಮತ್ತು ಭೀಕರವಾಗಿ

ಬಳರಿಯ ಸೋಂಪಿ ಇರುತ್ತಿತ್ತುದೆಂದೂ ಅಲ್ಲದೆ ಬಳರಿಗೆ ಕುರಿಯನ್ನು ಬಲಿ ಕೊಡುವ ಪದ್ಧತಿ ಇರುವುದನ್ನು ತಿಳಿಯಬಹುದಾಗಿದೆ.

ಕ್ರಿ.ಶ. ಸುಮಾರು ೧೧೦೦ರ ಬ್ರಹ್ಮ ಶಿವನ **"ಸಮಯ ಪರೀಕ್ಷೆ"**ಯಲ್ಲಿ **'ಬಳರಿ'** ಯ ಬಗೆಗೆ ಅನೇಕ ಸಂಗತಿಗಳು ತಿಳಿದು ಬರುತ್ತವೆ. ಒಟ್ಟು ಹನ್ನೊಂದು ಕಡೆ 'ಬಳರಿ' ಯೆಂದೂ ಮೂರು ಕಡೆ 'ಬಳಾರಿ'ಯ ಉಲ್ಲೇಖಗೊಂಡಿರುವ ಈ ಉಗ್ರ ದೇವತೆ ಒಂದೇ ಕಾವ್ಯದಲ್ಲಿ ಅತ್ಯಂತ ಹೆಚ್ಚಿಗೆ ವರ್ಣಿಸಲ್ಪಟ್ಟಿದ್ದು ಇಲ್ಲಿಯೇ. ಇಷ್ಟೇ ಅಲ್ಲ. ಇತರ ಮೇಲು ಕೀಳು ದೇವತೆಗಳಿಗಿಂತ 'ಬಳರಿ' ಉಲ್ಲೇಖಗಳೇ ಸಮಯ ಪರೀಕ್ಷೆಯಲ್ಲಿ ಹೆಚ್ಚಿದಂತೆ ತೋರುತ್ತದೆ(೩). ಬ್ರಹ್ಮ ಶಿವನ ಕಾಲದಲ್ಲಿ ಈ ದೇವತೆಯು ಅತ್ಯಂತ ಪ್ರಭಾವಶಾಲಿಯಾಗಿರಬೇಕೆಂದು ತೋರಿ ಬರುತ್ತದೆ. ಬ್ರಹ್ಮಶಿವನು ತನ್ನ ಕಾವ್ಯದಲ್ಲಿ ಅನೇಕ ಹಿಂದೂ ದೇವತೆಗಳು ಜೈನರವು ಎಂದು ಸಾಧಿಸುತ್ತಾ 'ಬಳರಿ' ಯನ್ನೂ ಜೈನಿಕರಿಸುತ್ತಾನೆ. ವಿಶೇಷಣವಾಗಿ ಬಳಸಲ್ಪಟ್ಟಿರುವ **'ಬಳರಿತನ'** ಎಂಬ ಶಬ್ದವು ಅನಿಷ್ಟ ಮತ್ತು ಕ್ರೂರ ಸಂಪ್ರದಾಯ ಮತ್ತು ಆಚರಣೆಗಳನ್ನು ಕುರಿತು ಹೇಳುವಂತಿದೆ.

ಕ್ರಿ.ಶ. ಸುಮಾರು ೧೨೩೦ ರ **"ಯಶೋಧರ ಚರಿತೆ"** ಯಲ್ಲಿ ರಾಜಪುರ ಪಟ್ಟಣದ

............................ತೆಂಕವಂಕದೊ

ಳಾಪೊತ್ತುಮನೇಕ ಜೀವಹತಿ ತನಗೆ ಸುಖೊ

ದ್ದಿಪನಮೆನಿಸುವ ಪಾಪಕ

ಳಾಪಂಡಿತೆ ಚಂಡಮಾರಿ ದೇವತೆಯಿರ್ಪಳ್(೪)

ಎಂಬ ಪದ್ಯದಲ್ಲಿ ಜೀವಹತಿಯಿಂದ ಸಖಿಸುವ ಪಾಪಕಳಾಪಂಡಿತೆಯಾದ **"ಚಂಡಮಾರಿ ದೇವತೆ"**ಯ ಪ್ರಸ್ತಾಪವಿದೆ. ಇವಳು ಅಶ್ವಯುಜ, ಚೈತ್ರಮಾಸದಲ್ಲಿ ಜಾತ್ರೆ ನಡೆಯದಿದ್ದರೆ ಊರ ಜನರನ್ನು ನಾಶಗೈಯುತ್ತಿದ್ದಳು. **"ಪೂಜೆಯೊಂ ಎಂದಿನ ಪರಿ ತಪ್ಪೆ ದೇವಿ ತಪ್ಪದೆ ಮಾಣಳ್"** ಎಂಬ ಸಾಲು ವಿಷಯವನ್ನು ದೃಡೀಕರಿಸುತ್ತದೆ.

ಚಂಡ ಕರ್ಮನೆಂಬ ತಳಾರನು ಅರಸ ಮಾರಿದತ್ತನ ಅಣತೆಯಂತೆ ಶುಭಲಕ್ಷಣದ ಮಾನವ ಜೋಡಿಯನ್ನು ಬಲಿಗೆಂದು ತರಲು ಹೊರಟ ಎಂಬ ಪದ್ಯ:-

"ಕಿರುವರೆಯದ ಶುಭಲಕ್ಷಣ

ದರಿಕೆಯ ಸತ್ಕಲದ ಮರ್ತ್ಯಯುಗಲಕಮಂ ತಾ

ನರಸಲ್ ಬಳರಿಯ ಬನದಿಂ

ಪೊರಮಟ್ಟಂ ಚಂಡಕರ್ಮನೆಂಬ ತಳಾರಂ

[illegible]

ಇಲ್ಲಿಯ ಬನದ ಬಳರಿಯು ಚಂಡಮಾರಿ ದೇವತೆಯೇ ಆಗಿರುವಳೆಂದು ತಿಳಿಯಲು ಸಾಧ್ಯವಿದೆ. ಯಶೋಧರ ಚರಿತೆಯ ಮೂಲ ವಾದಿರಾಜನ ಸಂಸ್ಕೃತ ಕಾವ್ಯ "ಚಂಡಮಾರಿಯ ಬಗ್ಗೆ ಸುದೀರ್ಘವಾಗಿ ವರ್ಣಿಸುತ್ತದೆ. ಕರ್ನಾಟಕ ಅತಿ ಪ್ರತಿಷ್ಠೆಯ ಪ್ರಬಲ ಉಗ್ರ ದೇವತೆ 'ಬಳರಿ' ಚಂಡಮಾರಿಯನ್ನು ಹೋಲುವುದರಿಂದ ಜನ್ನನು ಈ ಪ್ರಸಂಗದಲ್ಲಿ 'ಬಳ್ರಿ' ಅನ್ನು ಹೆಸರಿಸಿದ್ದಾನೆಂತಲೂ ಹೇಳಬಹುದಾಗಿದೆ.

ಬಳ್ಳಾರಿ ನಗರದ ಗಾಂಧೀನಗರ ಪ್ರದೇಶದಲ್ಲಿ ಉಗ್ರ ಹೆಣ್ಣು ದೇವತೆ ಬಳರಿ (ದುರ್ಗಮ್ಮ) ಯ ದೇವಸ್ಥಾನವಿದ್ದು ಉಗ್ರಳಾದ ಅವಳ ಮುಖ ಕಂಡರೆ ಎಂಥಹವರು ಬೆಚ್ಚುತ್ತಾರೆಂಬ ಕಾರಣದಿಂದ ಮುಖವನ್ನು ತಿರುಗಿಸಿ ಬೆನ್ನು ಕಾಣುವಂತೆ ಮಾಡಿ ಪೂಜಿಸುತ್ತಾರೆ ಎಂದು ಹೇಳುತ್ತಾರೆ. ಏನೇ ಇರಲಿ ಉಗ್ರ ಹೆಣ್ಣು ದೇವತೆ 'ಬಳರಿ'ಯ ಕಾರಣವಾಗಿ ನಗರಕ್ಕೆ ಬಳರಿ > ಬಳ್ಳಾರಿ ಎಂಬ ಹೆಸರು ಬಂದಿದೆ ಎಂದು ಭಾವಿಸಲು ಅಡ್ಡಿಯಿಲ್ಲ. ಜನ್ನನು ಯಶೋಧರ ಚರಿತೆಯಲ್ಲಿನ ದೇವಿಯ ಪ್ರಜೆಯ ಬಹುತೇಕ ಸಂಪ್ರದಾಯಗಳು ಬಳ್ಳಾರಿ ಈ ದುರ್ಗಮ್ಮನ ಪೂಜೆ ಹಾಗೂ ಜಾತ್ರೆಯಲ್ಲಿ ಇತ್ತೀಚಿನವರೆಗೆ ನಡೆಯುತ್ತಿದ್ದದು ಎಲ್ಲರ ನೆನಪಿನಲ್ಲಿದೆ.

ಕ್ರಿ.ಶ ೧೩೬೯ರ ಭೀಮಕವಿಯ **'ಬಸವಪುರಾಣ'** ದಲ್ಲಿ **'ಬಹರಿ ಮಾರಿ'** ಎಂಬ ಮಾತು ಬರುತ್ತದೆ. ಬರಿಯನ್ನೆ ಕವಿಯು ಬಹಳರಿ ಎಂದು ಕರೆದಿರಬಹುದು. ರೆವರೆಂಡ್ ಎಪ್ ಕಿಟ್ಟಲ್‌ರವರು ಬಳರಿ ಮತ್ತು ಬಳಹರಿ ಒಂದೇ ಎಂದು ಅಭಿಪ್ರಾಯಿಸುತ್ತಾರೆ. ಬಳಾರಿ ಎಂದರೆ The demon balari or mahakalli ಎಂಬುದು ಅವರು ನೀಡಿರುವ ಅರ್ಥ. ಪಾಲ್ಕುರಿಕೆ ಸೋಮನಾಥನ ತೆಲುಗೆ "ಬಸವಪುರಾಣ" ದಲ್ಲಿ ಕಾಣಸಿಗದ 'ಬಳರಿ' ಯನ್ನು ಕನ್ನಡನಾಡಿನ ಪ್ರಸಿದ್ಧ ದೇವತೆ ಎಂಬುದರಿಂದ ಉಲ್ಲೇಖಿಸಿರಬಹುದು.

ದೇವತೆಗಳ ಹೆಸರಿನಿಂದ ಊರುಗಳಿಗೆ ಹೆಸರು ಬಂದಿರುವುದು ಸಾಮಾನ್ಯ ಸಂಗತಿ.

ಅತ್ಯಂತ ಪ್ರಸಿದ್ದಲಾದ 'ಬಳರಿ' ಯ ಹೆಸರಿನಿಂದ 'ಬಳ್ಳಾರಿ' ಊರ ಹೆಸರಾಗಿರಬೇಕೆಂದು ನಿರ್ಣಯಿಸಬಹುದಾಗಿದೆ. ಹೋಸಪೇಟೆಯ ವಾಲ್ಮಿಕಿ ಜನಾಂಗವಿರುವ ಪ್ರದೇಶದಲ್ಲಿಯ ದುರ್ಗಮ್ಮ ಗುಡಿಗೆ **"ಬಳ್ಳಾರಿ ದುರ್ಗಮ್ಮ"** ಎನ್ನುತ್ತಾರೆ. (೫)

ಅತ್ಯಂತ ವಿವಾದಕ್ಕೆ ಗುರಿಯಾಗಿರುವ ಹೆಸರೆಂದರೆ ಬಳ್ಳಾರಿಯದು. ಬಳ್ಳಾರಿ ಜಿಲ್ಲೆಯ

---

1. Karnataka Gezetter, Bellary District - published 1971
2. F.T. Wain Wright - Page 84.

ಮುಖ್ಯಪಟ್ಟಣ. **ಸರ್ ಥಾಮಸ್ ಮುನ್ರೋ,** ಈಸ್ಟ್ ಇಂಡಿಯಾ ಕಂಪನಿಯ ಕಲೆಕ್ಟರಾಗಿದ್ದಾಗ ಆಂದ್ರಪ್ರದೇಶ ಮತ್ತು ತಮಿಳುನಾಡು-ಕರ್ನಾಟಕ ಇಪ್ಪತೇಳು ಜಿಲ್ಲೆಗಳಿಗೆ ಬಳ್ಳಾರಿ ರಾಜಧಾನಿಯಾಗಿತ್ತು. ಅವಿಭಾಜ್ಯ ಮದ್ರಾಸ್ ಪ್ರಾಂತ್ಯದ ರಾಯಲಸೀಮೆ ವಿಭಾಗಕ್ಕೆ ಆಡಳಿತ ಕೇಂದ್ರವಾಗಿತ್ತು ಬರುಬರುತ್ತಾ ಬಳ್ಳಾರಿ ಜಿಲ್ಲೆಯ ವಿಸ್ತಾರ ಕುಗ್ಗುತ್ತಾ ಈಗ ಕೇವಲ ಏಳು ತಾಲೂಕಿಗೆ ಮಿತಿಗೊಂಡಿದೆ.

ಪ್ರಚಲಿತವಿರುವ ಐತಿಹ್ಯದ ಪ್ರಕಾರ ಬಳ್ಳಾರಿಯ ಸುತ್ತಲಿನ ಗುಡ್ಡದಲ್ಲಿ ವಾಸವಾಗಿದ್ದು ಪ್ರಜಾಪೀಡಕನಾಗಿದ್ದ **ಬಳರಿ** ಎಂಬ ರಾಕ್ಷಸನನ್ನು ದೇವಿಯೇ ಸಂಹಾರ ಮಾಡಿದ ಕಾರಣ ಈ ಸ್ಥಳವು ಬಳರಿ>ಬಳ್ಳಾರಿ ಎಂದಾಯಿತು ಎನ್ನಲಾಗಿದೆ. ವಿದ್ವಾಂಸರ ಪ್ರಕಾರ ಬಳರಿ ಎಂಬುದೇ ಕರ್ನಾಟಕದ ಪ್ರಾಚೀನ ಸ್ತ್ರೀ ದೇವತೆಗಳಲ್ಲಿ ಒಂದು ಹೆಸರು. ಬಳರಿ> ಬಟರಿ >ಬಳಾರಿ ಇರಬಹುದು. ಭಟ್ಟಾರಿಕಾ> ಬಟರಿ>ಬಳರಿ >ಬಳ್ಳಾರಿ ಆಗಿರಬಹುದು. ಇಲ್ಲಿ ಪ್ರಮುಖ ಆಧಾರವೆಂದರೆ ಬಳ್ಳಾರಿಯಲ್ಲಿ ನೆಲೆಸಿರುವ ಪ್ರಾಚೀನ ದುರುಗಮ್ಮ ಕೂಡಾ ಬಳ್ಳಾರಿಗೆ ವಲಸೆ ಬಂದ ಆಂದ್ರದ ಯಾಜಮಾನ್ಯದಲ್ಲಿ ಕನಕ ದುರ್ಗಮ್ಮ ಆಗಿದ್ದಾಳೆ. ನಿಘಂಟಿನ ಪ್ರಕಾರ ಬಳರಿ ಎಂದರೆ ಮಹಾಕಾಳಿ. ಮಾಂಸ ತಿನ್ನುವ ಸೆರೆ ಕುಡಿಯುವ ಬನದಲ್ಲಿ ವಾಸಮಾಡುವ ಉಗ್ರದೇವತೆ.

ಡಾ: ಕಲಬುರ್ಗಿ ಅವರ ಪ್ರಕಾರ ಕೊಲ್ಲೂರ ಮೂಕಾಂಬಿಕೆ, ಕೊಲ್ಲಾಪುರದ ಲಕ್ಷ್ಮೀ. ಕಂಚಿಯ ಕಾಮಕೋಟಿ ಎಕ್ಕಲದೇವಿ, ಮಸಣಿ ಮಾರಬ್ಬೆ, ಮಾಳಚಿ ಚಂಡಿಕೆ, ಲಕ್ಕಮ್ಮ ನಂತಹ ಕ್ರೂರ ದೇವತೆಗಳ ಸಾಲಿನ ದೇವಿ ಬಳರಿ. ಡಾ: ಎಸ್.ಎಸ್. ಹಿರೇಮಠ ಅವರ ಪ್ರಕಾರ ಪ್ರಾಚೀನ ಬುಡಕಟ್ಟೊಂದರ ಬಳರಿ ಕುಲದ ಸ್ತ್ರೀ ದೈವವೇ ಬಳರಿ. ಆ ಕಾಲದಲ್ಲಿ ಬಳರಿ ಕುಲವೇ ವ್ಯಾಪಕವಾಗಿತ್ತೆಂದು, ಚಂಡಮಾರಿ ದೇವತೆಯ ಅಷ್ಟೋತ್ತರ ಶತನಾಮವಾಳಿಯಲ್ಲಿ ಬಳರಿ ಎಂಬ ಹೆಸರು ಸೇರಿವೆ. ಬಳ್ಳಾರಿಯು ಒಲಿದವರಿಗೆ ನಾರಿ. ಮುನಿದವರಿಗೆ ಮಾರಿ. ಬಹುಜನರ ಅಭಿಪ್ರಾಯವೆಂದರೆ ಬಳರಿ ಎಂಬ ದುರ್ಗಮ್ಮನಿಂದಲೇ ಬಳ್ಳಾರಿಗೆ ಆ ಹೆಸರು ಬಂದಿದೆ.

ಕ್ರಿ.ಶ ೧೧೩೧ರಲ್ಲಿ ಬೈಲೂರಲ್ಲಿ ದೊರೆತ ಶಾಸನವು **"ಬಲ್ಲಾರಿ"** ಎಂದು ಹೇಳುತ್ತದೆ. ಸಿಂದಗೆರೆ, ಕೋಳೂರು ಮತ್ತು ಕುರುಗೋಡಿನ ಶಾಸನಗಳಲ್ಲಿ "ಬಲ್ಲಾರಿ"ಯನ್ನು ಕಾಣಬಹುದು. ಹೊಯ್ಸಳ ವಿಷ್ಣುವರ್ಧನನ ಅನೇಕ ಶಾಸನಗಳಲ್ಲಿ "ಬಳ್ಳಾರಿ" ಉಲ್ಲೇಖವಿದೆ. ಬಳ್ಳಾರಿ ಕೋಟೆಯಲ್ಲಿರುವ ದೇವಾಲಯದಲ್ಲಿರುವ ದೇವರು ಬಳ್ಳ (ಅಳತೆಯ ಸೇರು)ದ ಆಕಾರದಲ್ಲಿರುವ ಮಲ್ಲಾರ್ಯನೆಂಬ ಭಕ್ತನು ಪ್ರತಿಷ್ಠಾಪಿಸಿದ ಶಿವಲಿಂಗ, ಬಳ್ಳಾರಿಯ ತೇರೆಂದರೆ ಈ ಮಲ್ಲೇಶನ ತೇರು ಇಲ್ಲಿ ಅನೇಕ ಶಿವಶರಣರು ಬಾಳಿದ ಕಾರಣ ಬಳ್ಳಾರಿ ಪುಣ್ಯಕ್ಷೇತ್ರವೆನಿಸಿದೆ.

೧. South Indian Inscriptions Vol.1x, part-1, No, 74, 981, A.D- Ed. R.Shama Sastry &N.Lakshiminarayan Rao, 1939

೨. ಮನದ ತಿಕರಿ; ಸಂ: ಆರ್.ಎಸ್ ಪಂಚಮುಖಿ

ಬಳರಿ(ಬಳಾರಿ) 'ಉಗ್ರ ಹೆಣ್ಣು ದೇವತೆ: ಎಸ್.ಎಸ್. ಹಿರೇಮಠ- ಸಾಧನೆ: ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು, ಸಂ೭, ಸಂಚಿಕೆ-೨, ೧೯೭೮

೩. ಯಶೋಧರ ಚರಿತೆ- ಸಂ, ಬೊಮ್ಮರಸ ಪಚಿಡಿತರು

೪. ಬಳರಿ(ಬಳಾರಿ)-ಉಗ್ರ ಹೆಣ್ಣು ದೇವತೆ- ಎಸ್.ಎಸ್. ಹಿರೇಮಠ-ಸಾಧನೆ- ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು, ಸಂಪುಟ-೭, ಸಂಚಿಕೆ-೨, ೧೯೭೮

ಜಗತ್ತಿನ ಎಲ್ಲಾ ದೇಶಗಳಂತೆ ನಮ್ಮ ಪೂರ್ವಿಕರು ಕೂಡಾ ನದಿಗಳಿಗೆ, ಹಳ್ಳಗಳಿಗೆ, ಕೆರೆಗಳಿಗೆ ಬೆಟ್ಟಗುಡ್ಡಗಳಿಗೆ ಮತ್ತು ಜನವಸತಿಗಳಿಗೆ ಗುರುತಿಗಾಗಿ ಹೆಸರು ಇಟ್ಟರು. ಬಳ್ಳಾರಿ ಜಿಲ್ಲೆಯಲ್ಲಿ ಶಿಲಾಯುಗದಿಂದಲೂ ಜನರು ವಾಸ ಮಾಡಿದ ಗುರುತುಗಳಿವೆ. ಸಾಮಾನ್ಯವಾಗಿ ಜನರು ಆ ಕಾಲದಲ್ಲಿ ಭೋರ್ಗರೆದು ಹರಿಯುತ್ತಿದ್ದ ತುಂಗಭದ್ರಾ ತೀರದಲ್ಲಿ ನೆಲೆಸಿದರು. ಅವರಿಗೆ ಬಳಾರಿಯ ಪಕ್ಕದಲ್ಲಿ ವಿಶಾಲವಾಗಿ ಪ್ರವಹಿಸುವ ನದಿಯ ಹಳ್ಳದಂತೆ ಕಂಡಿತು. ಅದನ್ನವರು "ಹಗರಿ" ಎಂದರು. ಅದಕ್ಕಿಂತ ಕೊಂಚ ಕಿರಿದಾದ ಮತ್ತೊಂದು ಪ್ರಾವಹವನ್ನು ಚಿಕ್ಕ ಹಗರಿ ಎಂದರು. ಚಿಕ್ಕ ಹಗರಿಯು ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಹರಿಯುತ್ತದೆ. ಈ ಜಿಲ್ಲೆಯಲ್ಲಿ ಹರಡಿರುವ ಸಾವಿರಾರು ಶಿಲಾಶಾಸನಗಳು ಅಲ್ಲಲ್ಲಿಯ ಸ್ಥಳಗಳ ಬಗ್ಗೆ ಹಾಡಿ ಹೊಗಳುತ್ತವೆ. ರಾಷ್ಟ್ರಕೂಟ, ಕದಂಬ, ಚಾಲುಕ್ಯ, ಕಲ್ಯಾಣಿ ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರದ ಅರಸರು ಸ್ಥಾಪಿಸಿದ ನಾನಾ ಶಾಸನಗಳು ಇತಿಹಾಸ ಕಥನ ಮಾಡುತ್ತವೆ.

೫.೧೦(೨) ಅಲಿಪುರ(ಅರಿಪುರ):

ಬಳ್ಳಾರಿಗೆ ಹೊಂದಿಕೊಂಡು ಸದ್ಯ ಬಳ್ಳಾರಿ ನಗರದ ಭಾಗವಾಗಿರುವ ಅಲಿಪುರ ಮೊದಲು ಅರಿಪುರವಾಗಿತ್ತೆಂದು ಬಲ್ಲವರ ಅಭಿಮತ. ಬಳ್ಳ+ಅರಿಪುರಗಳು ಸೇರಿ ಬಳ್ಳಾರಿ ಪುರವಾಯಿತೆಂದು ಕೆಲವರ ವಾದ. ಭೋಜನೆಂಬ ಸಂಸ್ಕೃತ ಕವಿಯು ಅಲಿಪುರ ಸ್ಕಂದವಾರಂ ಎಂದು ಹೇಳಿದ್ದಾನೆ. ಮೇಲುನೋಟಕ್ಕೆ ಮುಸಲ್ಮಾನ್ ಹೆಸರಿನಂತೆ ಕಾಣುವ ಅಲ್ಲಿಪುರ ಗುಪ್ತರ ಕಾಲದಲ್ಲಿ ತುಂಬಾ ಪ್ರಾಖ್ಯಾತವಾದ ಸ್ಥಳ. ಪುರಾಣ ಕಾಲದ ಬಾಣಾಸುರನ ಅರಿಪುರವೇ ಇದೆಂದು ಮತ್ತೊಂದು ವಾದ. ಕ್ರಿ.ಶ. ೩೮೮ರಲ್ಲಿ ಶಕರಿಗೂ ಗುಪ್ತವಂಶದ ರಾಜನಾದ ರಾಮಗುಪ್ತನಿಗೂ ನಡೆದ ಒಂದು ಪ್ರಸಂಗ ತಾಣವೇ ಅಲ್ಲಿಪುರ. ಬಹು

ಹಿಂದೆ ಅದು ಹರಿಪುರ ಆಗಿರಬಹುದೆ? ಅನಂತರ ಅರಿಪುರವಾಗಿರಬಹುದೆ? 'ಹ' ಕಾರಕ್ಕೆ ಬದಲಾಗಿ 'ಅ' ಕಾರ ಬರುವುದು ವಿಶೇಷವೇನಲ್ಲ.

೫.೧೦(೩) ಎಮ್ಮಿಗನೂರು:

ಬಳ್ಳಾರಿ ತಾಲೂಕಿನ ಕಂಪ್ಲಿ ಹತ್ತಿರದ ಎಮ್ಮಿಗನೂರಿಗೆ ಸುಲಭವಾಗಿ ಗುರುತಿಸಲು "ಕಂಪ್ಲಿ ಎಮ್ಮಿಗನೂರು" ಎನ್ನುತ್ತಾರೆ. ಮತ್ತೊಂದು ಎಮ್ಮಿಗನೂರು ಮಂತ್ರಾಲಯದ ಹತ್ತಿರ ಇದೆ. ಅದನ್ನು ಆದವಾನಿ ಎಮ್ಮಿಗನೂರು ಎಂದು ಕರೆಯುತ್ತಾರೆ. ಇದು ಶ್ರೀ ಜಡೆಸಿದ್ದ ಶಿವಯೋಗಿಗಳಿಂದ ಪ್ರಸಿದ್ಧಿ ಹೊಂದಿದೆ. ಇವರು ಗುಳ್ಳೆದ ಗಾದಿಲಿಂಗಪ್ಪನವರ ಶಿಷ್ಯರಾಗಿ ಸಾಧನೆ ಮಾಡಿ, ಶ್ರೀಶೈಲಕ್ಕೆ ಹೋಗಿ ಉಗ್ರ ತಪಸ್ಸು ಮಾಡಿ ಪವಾಡ ಪುರುಷರೆನಿಸಿದ್ದಾರೆ. ಎಮ್ಮಿಗನೂರು ಇದು ವ್ಯಕ್ತಿವಾಚಿ ಗ್ರಾಮನಾಮ. ಎಮ್ಮಿಗನೆಂಬುವನ ಊರಾಗಿದೆ.

೫.೧೦(೪) ಒರುವಾಯಿ:

ಓರುವಾಯಿ ಬಳ್ಳಾರಿ ತಾಲೂಕಿನ ಕುರುಗೋಡಿಗೆ ಹತ್ತಿರದ ಪುಟ್ಟ ಗ್ರಾಮ. ಸಾವಿರಾರು ವರ್ಷಗಳಾದರೂ ಅಪಭ್ರಂಶವಾಗದೇ, ಮೂಲರೂಪದಲ್ಲಿರುವ ಶಾಸನೋಕ್ತ ಗ್ರಾಮವೆಂದರೆ ಓರುವಾಯಿ. ಪುರ ಎಂಬುದು–ಪುರವಾಗಿ, ವರವಾಗಿ, ವಾರವಾಗಿರಬಹುದು. ಆದರೆ, ವುರ ಎಂಬುದು ಪುರಕ್ಕಿಂತ ಹಳೆಯ ರೂಪವಾಗಿದೆ. ಕೆಲ ವಿದ್ವಾಂಸರ ಅಭಿಪ್ರಾಯದಂತೆ ಜಾರುಬಾವಿ ಅಂದರೆ ಇಳಿಯುವ ಬಾವಿ. ಕಾಲಾಂತರದಲ್ಲಿ ಜಾರು–ಓರಾಗಿ, ಬಾವಿ–ಬಾಯಿಯಾಗಿ ಓರುವಾಯಿ ಎಂದಾಗಿರಬೇಕೆಂದು ವಾದ. ಇಲ್ಲರುವ ೧೦೩೬, ೧೧೪೮ರ ಶಾಸನಗಳು ಒರ್ವಾಯ, ಓರುವಾಯಿ, ಯೋರುವಾಯಿ ಎಂದು ಹೇಳುತ್ತವೆ. ತುಂಬ ಕುತೂಹಲಕರವಾದ ಊರು ಹೆಸರಾಗಿದೆ. ಓರೆ+ಬಾವಿ= ಓರುಬಾವಿ–ಓರುವಾಯಿ–ಒರ್ವಾಯ ಓರುವಾಯಿ ಆಗಿರಬಹುದೆ?

೫.೧೦(೫) ಕಪ್ಪಗಲ್ಲು:

ಬಳ್ಳಾರಿ ನಗರದಿಂದ ೧೨ ಕಿಲೋ ಮೀಟರ್ ದೂರದಲ್ಲಿರುವ ಪುಟ್ಟಹಳ್ಳಿ. ಹಳ್ಳಿಯ ಪಕ್ಕದಲ್ಲಿ ದೊಡ್ಡ ಬಂಡೆಯಿದೆ. ಆ ಕಾಲದಲ್ಲಿ ಅಲ್ಲಿ ತುಂಬಾ ನವಿಲುಗಳು ವಾಸವಾಗಿದ್ದವಂತೆ ಇದು ಆದಿ ಮಾನವನ(ಶಿಲಾಯುಗ) ವಾಸಸ್ಥಳವಾಗಿತ್ತದೆಂದೂ, ಸುತ್ತ ಮುತ್ತ ಹಲವಾರು ಬೂದಿಗುಡ್ಡಳಿವೆಯೆಂದೂ ವಿದ್ವಾಂಸರ ಅಭಿಮತ. ಈ ಬಂಡೆಯು ದಟ್ಟ ಕಪ್ಪು ಬಣ್ಣದ ಶಿಲೆಯಾಗಿರುವುದರಿಂದ ಜನರು ಕಪ್ಪುಗಲ್ಲು>ಕಪ್ಪಗಲ್ಲು ಎಂದು ಕರೆಯುತ್ತಾರೆ. ಈ ಕಪ್ಪಗಲ್ಲಿನ ಪಕ್ಕದ ಹಳ್ಳಿಯೇ ಕಪ್ಪಗಲ್ಲು. ಈ ಬಂಡೆಯನ್ನು ನವಿಲುಬಂಡೆ ಎಂದು ಕರೆಯುತ್ತಾರೆ.

೫.೧೦(೬) ಕುಡಿತಿನಿ:

ಬಳ್ಳಾರಿ ತಾಲೂಕಿನ ಪಟ್ಟಣ ಕುಡಿತಿನಿ. ರಾಷ್ಟ್ರಕೂಟ ಯುವರಾಜ ಕತ್ತಿಗನ ಹೆಸರಲ್ಲಿ ನಿರ್ಮಾಣವಾಯಿತು. ಹೊಸ ಊರು ಕತ್ತಿಗೆತೇನಿ ಕಾಲ ನಂತರ ಕುಡುತಿನಿ ಆಗಿರಬೇಕೆಂದು ಬಲ್ಲವರ ಅಭಿಮತ. ಈ ಊರಿನಲ್ಲಿ ಅನೇಕ ದೇವಾಲಯಗಳಿವೆ. ಇಲ್ಲಿಯ ಶಿಲಾಶಾಸನಗಳಲ್ಲಿ ರಾಷ್ಟ್ರಕೂಟ ಅರಸರ ಕಾಲದಲ್ಲಿ ಇಲ್ಲಿದ್ದ ಕೆಲವು ಶಾಸನಗಳು ಈ ಗ್ರಾಮವನ್ನು ಶತಕೋಟಿತೀರ್ಥವೆಂದು ಬಣ್ಣಿಸಿವೆ. ಟಂಕಸಾಲೆಯ ಬಗ್ಗೆಯೂ ಸ್ಥಳ ಪ್ರಾಮುಖ್ಯತೆಯ ಬಗ್ಗೆ ಉಲ್ಲೇಖಗಳಿವೆ. ಕುಡಿತಿನಿ ಮೂಡಲಪಾಯದ ಯಕ್ಷಗಾನ ಮತ್ತು ಬಯಲಾಟಗಳಿಗೆ ಪ್ರಸಿದ್ದವಾದ ಊರು. ಕೆಲ ಶಾಸನಗಳಲ್ಲಿ ಈ ಊರನ್ನು **"ಕೊಟ್ಟತೊಣೆ"** ಎಂದು ಕರೆಯಲಾಗಿದೆ.

೫.೧೦(೭) ಕುರುಗೋಡು:

ಕುರುಗೋಡು ಪ್ರಾಚೀನ ಕರ್ನಾಟಕದ ಕೆಲವೇ ಪ್ರಸಿದ್ದ ಕೋಟೆಗಳಲ್ಲಿ ಒಂದಾಗಿದೆ. ಬಲ್ಲಕುಂದೆ ನಾಡಿನ ರಾಜಧಾನಿಯಾಗಿ, ಪ್ರಸಿದ್ಧ ಸಿಂದ ಅರಸರ ನೆಲೆಯಾಗಿ ಕುರುಗೋಡು ಇತಿಹಾಸ ತುಂಬಿದ ಸ್ಥಳ. ಬಳ್ಳಾರಿ ತಾಲೂಕಿನ ದೊಡ್ಡ ಊರು. ಈ ಭಾಗದ ಕಥೆ ಹೇಳುವ ಅನೇಕ ಶಾಸನಗಳು ಇಲ್ಲಿವೆ. ಈ ಗ್ರಾಮದಲ್ಲಿ ಅನೇಕ ದೇವಾಲಯಗಳಿವೆ. ಶರಣ ಚಳುವಳಿಯಲ್ಲಿ ಕುರುಗೋಡು ಮಹತ್ತರ ಪಾತ್ರ ವಹಿಸಿದ್ದು ಕನ್ನಡ ಸಾಹಿತ್ಯದಲ್ಲಿ ಉಲ್ಲೇಖವಾಗಿದೆ. ಪುರೋಹಿತ ವರ್ಗಕ್ಕೂ ವೀರಶೈವರಿಗೂ ನಡೆದ ಅನೇಕ ಘರ್ಷಣೆಗಳಿಗೆ ಈ ಊರು ಸಾಕ್ಷಿಯಾಗಿದೆ. ಆ ಕಾಲದಲ್ಲಿ ಮೂರು ನೂರು ಗ್ರಾಮಗಳನ್ನೊಳಗೊಂಡ ಬಲ್ಲಕುಂದೆ-೩೦೦ ನಾಡಿನ ರಾಜಧಾನಿ ಕುರುಗೋಡು.

ಕೋಡು ಎಂಬುದು **ಕೋಟೆ** ಎಂದರೆ **ಶಿಖರ ಅಥವಾ ಬೆಟ್ಟದ** ತುದಿ ಆಗಿರಬಹುದು. ಕೋಡು ಎಂದರೆ ಹಳ್ಳವೂ ಆದೀತು. ೧೨ನೇ ಶತಮಾನದ ಶಾಸನಗಳಲ್ಲಿ ಕುರಗಾಡು, ಕುರುಗಾಡ, ಕುರುಗೋಡ ಎಂದು ನಮೂದಿತವಾಗಿವೆ. ಅನೇಕರು ಕುರುಹಾಗಿರುವ ಶಿಖರ, ಎತ್ತರದ ದಿನ್ನೆ ಎಂಬ ಅರ್ಥಮಾಡಿದ್ದಾರೆ.

ಕುರುಗೋಡು ಬಾದಾಮಿ ಚಾಲುಕ್ಯರ ಕೈಯಿಂದ ಕಲ್ಯಾಣ ಚಾಲುಕ್ಯರ ಕೈಸೇರಿ ಬಲ್ಲಕುಂದೆ-೩೦೦ರ ರಾಜಧಾನಿ ಎನಿಸಿತು. ಕ್ರಿ.ಶ.೧೧೯೧ರಲ್ಲಿ ಹೊಯ್ಸಳ ಎರಡನೇ ಬಲ್ಲಾಳನ ವಶವಾಗಿ ಅದರ ಪ್ರಭಾವ ಸೀಮಿತವಾಯಿತು. ಅನಂತರ ಅದು ಬಳ್ಳಾರಿಯ ಪಾಳೇಗಾರ ಬಾಲದ ಹನುಮಂತಪ್ಪನಾಯಕನ ಅದೀನವಾಗಿ ಚಿಕ್ಕ ಪಾಳೆಯವಾಯಿತು.

ಕ್ರಿ.ಶ. ೧೭೦೧-೦೨ರಲ್ಲಿ ರೇವಪ್ಪನಾಯಕನು ಕುರುಗೋಡು ಕೋಟೆಯನ್ನು ಕಟ್ಟಿದನು. ಕ್ರಿ.ಶ.೧೭೭೫ರಲ್ಲಿ ಇದು ಟಿಪ್ಪುಸುಲ್ತಾನನ ವಶವಾಯಿತು. ಇಲ್ಲಿ ಅನೇಕ ದೇವಾಲಯಗಳೂ ಜೈನ ಬಸದಿಗಳು ಮತ್ತು ಮಠಗಳೂ ಇವೆ.

ಇಲ್ಲಿಯ ಪ್ರಸಿದ್ಧ ಬಸವೇಶ್ವರ ವಿಗ್ರಹವು ಸ್ವಯಂಭೂ ಎಂದು ಭಾವಿಸಲಾಗಿದೆ. ಅವನ **ಕೋಡು-ಕುರುಹಿನ+ಕೋಡು** ಎನಿಸಿ ಕುರುಗೋಡು ಎಂಬ ಹೆಸರು ಬಂದಿರಬಹುದೆಂದು ಜನಪದರ ನಂಬಿಕೆ.

೫.೧೦(೮) ಚಳ್ಳಗುರ್ಕಿ:

ಬಳ್ಳಾರಿಯಿಂದ ಆಂಧ್ರಪ್ರದೇಶದ ಅನಂತಪುರಕ್ಕೆ ಹೋಗುವ ದಾರಿಯಲ್ಲಿ ಚಳಗುರ್ಕಿ ಗ್ರಾಮವಿದೆ. ಒಂದು ಮಣ್ಣಿನ ಗುಡ್ಡದ ಮೇಲೆ ಕಟ್ಟಲ್ಪಟ್ಟಿರುವ ಗ್ರಾಮ. ಗುಡ್ಡದ ತುಂಬಾ ಮುಳ್ಳು ಕಂಟಿ ಮೊದಲಾದ ಪೊದೆಗಳು. ಈ ಪೊದೆಗಳಲ್ಲಿ ಕಪ್ಪು ಮತ್ತು ಕೆಂಪು ಚೇಳುಗಳ ಸಂಸಾರ. **ಗುರ್ಕಿ-ಕುರ್ಕಿ** ಎಂದರೆ ಪೊದೆಗಳೆಂದು ಅರ್ಥ ಚೇಳುಗಳು ತುಂಬಿದ ಪೊದೆಗಳಿರುವ ತಾಣವಾದ್ದರಿಂದ- ಚಳಗುರ್ಕಿ ಎಂಬ ಹೆಸರಾಯಿತು.

ಅವಧೂತ ಸಂಪ್ರದಾಯದ ಯೋಗಿಯಾದ ವೆರ್ರಿತಾತ ಅಥವಾ ಎರ್ರಿತಾತ ೧೮೬೭ರಲ್ಲಿ ಮೈಸೂರಿನ ಪ್ರಾಂತದಿಂದ ಇಲ್ಲಿ ಬಂದು ನೆಲೆಸಿದರು. ತಾತನು ಕಾಲು ಶತಮಾನ ಪರ್ಯಾಂತ ಈ ಭಾಗದ ಆರಾಧ್ಯ ಧೈವವಾಗಿ ಪವಾಡ ಪುರುಷನಾಗಿ ಬದುಕಿ ೧೯೨೨ರಲ್ಲಿ ಜೀವ ಸಮಾಧಿ ಹೊಂದಿದನು. ಈಗಲೂ ತಾತನ ಸಮಾಧಿಗೆ ಆರಾಧಿಸಲು ಹುಣ್ಣಿಮೆಗೆ ಬರುತ್ತಾರೆ. ವರ್ಷಕ್ಕೊಮ್ಮೆ ತಾತನ ತೇರು-ಜಾತ್ರೆ ನಡೆಯುತ್ತದೆ. ತಾತನು ಸದಾ ನಗುತ್ತಿದ್ದರಿಂದ ಲೋಕವು ಆತನನ್ನು ಹುಚ್ಚ(ವೆರ್ರಿ) ಎಂದು ಕರೆಯಿತು.

೫.೧೦(೯) ತೋರಣಗಲ್ಲು:

ಇಂದಿನ ತೋರಣಗಲ್ಲು ಜಿಂದಾಲ್ ಉದ್ಯಮದ ಅವತಾರದಿಂದ ವಿದ್ಯಾನಗರವಾಗಿದೆ. ಆದರೆ ಜನರ ವಾಡಿಕೆಯಂತೆ ನಂಬಿರುವದೆಂದರೆ ಇದು ವಿಜಯನಗರ ಮಹಾಪಟ್ಟಣಕ್ಕೆ ಪೂರ್ವ ದಿಕ್ಕಿನ ಮಹಾದ್ವಾರವೆನಿಸಿತ್ತು. ದಸರಾ ಮುಂತಾದ ಉತ್ಸವಗಳಲ್ಲಿ ತೋರಣ ಕಟ್ಟಲು ಇಲ್ಲಿ ವಿಶೇಷ ವ್ಯವಸ್ಥೆ ಇತ್ತು. ಓರುಗಲ್ಲಿನ ಶಿಲಾ ತೋರಣವನ್ನು ನೆನಪಿಸಿಕೊಂಡರೆ ಶಿಥಿಲ ವಿಜಯನಗರದ ಹೆದ್ದಾರೆಯಲ್ಲಿ ವೈಭವೋಪೆತ ತೋರಣಗೋಪುರವಿದ್ದಿರಬೇಕು ಎನಿಸುತ್ತದೆ. ಮೂಡಲ ದಿಕ್ಕಿಗೆ ತಿರುಪತಿಯಿಂದ ಆರಂಭಗೊಂಡ ಅನೇಕ ಪ್ರಮುಖ ಸ್ಥಳಗಳಲ್ಲಿ ಇರುವ ಕಾರಣ ಈ ಅನಿಸಿಕೆ ಸಮರ್ಪಕವೆನಿಸುತ್ತದೆ.

೫.೯(೧೧) ನೆಲ್ಲುಡಿ–ಹಳೇನೆಲ್ಲುಡಿ:

ಬಳ್ಳಾರಿ ತಾಲೂಕಿನ ಕಂಪ್ಲಿಗೆ ೧೦ ಕಿ.ಮಿ. ದೂರದಲ್ಲಿರುವ ನಾರೀಹಳ್ಳದ ಒಂದು ದಂಡೆಯಲ್ಲಿ ನೆಲ್ಲುಡಿ ಮತ್ತು ಇನ್ನೊಂದು ದಂಡೆಯಲ್ಲಿ ಹಳೇನೆಲ್ಲುಡಿ ಗ್ರಾಮಗಳಿವೆ. ನಾರಿಹಳ್ಳವು ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ಪ್ಲೇಗ್ ಮಾರಿ ಬಂದಾಗ ಜನರು ಹಳೇನೆಲ್ಲುಡಿ ಬಿಟ್ಟು ನೆಲ್ಲುಡಿಯನ್ನು ಕಟ್ಟಿದರು. ಇಲ್ಲಿ ಸುಮಾರು ೨೦೦ ಕುಟುಂಬಗಳಿವೆ. ಇವರಲ್ಲಿ ಚಲುವಾದಿಗಳು ಮತ್ತು ಕುರುಬರು ಅಲ್ಲದೇ ಪಿಂಜರರೂ ಇದ್ದಾರೆ. ಈ ಗ್ರಾಮಕ್ಕೆ ನೊಳಂಬ – ಪಲ್ಲವರ ಚಾರಿತ್ರಿಕ ಹಿನ್ನೆಲೆ ಇದೆ. ಎಮ್ಮಿಗನೂರಿನ ಜಡೆತಾತ ಶರಣ ಚಲುವಾದಿ ಹನುಮಪ್ಪ ಮುಂತಾದ ಲೀಲಾಕ್ಷೇತ್ರವಾಗಿವೆ. ನೊಳಂಬ–ಪಲ್ಲವರ ಕಾಲದಲ್ಲಿ ಇದ್ದಿರಬಹುದಾದ ಸಿದ್ದೇಶ್ವರ ದೇವಾಲಯವಿದೆ. ಕ್ರಿ.ಶ.೧೧ ನೇ ಶತಮಾನದ ಪಲ್ಲವ ಪೆರ್ಮಾನಡಿ ದೇವನ ಶಾಸನದಲ್ಲಿ "ನೆರುಣ್ಣಗಲ್ಲು" ಎಂದು ಊರ ಹೆಸರು. "ನೆರುಡ್ಡ" ಎಂಬುದೇ ನೆಲ್ಲುಡಿಯ ಮೂಲ ರೂಪವಾಗಿರಬಹುದು. ಈ ಊರಿನಲ್ಲಿ ಇರುವ ಒಂದು ನಿಲುವುಗಲ್ಲು ಎಂದರೆ ಧ್ವಜಸ್ಥಂಭದಂತೆ ಎದ್ದುನಿಂತ ಕಲ್ಲು– ನೆಲ್ಣುಡು ಆಗಿರಬಹುದು ಈ ನಿಲುಮುಗಲ್ಲ್ ಸ್ಮಾರಕಶಿಲೆ ಎಂದು ಡಾ:ತೆಲಗಾವಿ ಅವರ ಅಭಿಮತ. ಈ ಕಲ್ಲನ್ನು ಕುರುಬರು ಪೂಜಿಸುತ್ತಾರೆ.

ಹಳೇನೆಲ್ಲುಡಿಯ ಉತ್ತರಕ್ಕೆ ಬೂದಿದಿಬ್ಬವೊಂದು ಶೋಧಿಸಲ್ಪಟ್ಟಿದೆ. ಇಲ್ಲಿ ಇಂತಹ ಅನೇಕ ಬೂದಿದಿಬ್ಬಗಳೂ, **"ಗರಸಿನ ಸೆಟ್ಟು"** ಗಳೂ ಕಂಡುಬರುತ್ತವೆ. ಶಾಸನಗಳಲ್ಲಿ **"ನಲ್ಪಿಡಿ"** ಎಂದು ಕರೆದಿರುವುದು ನೆಲ್ಲುಡಿಯನ್ನೇ ಓರುವಾಯಿಯೂ ನಲ್ಪಿಡಿ–೧೨ರಲ್ಲಿ ಸೇರಿತ್ತು.

೫.೯(೧೨) ಯಾಲ್ಪಿ:

ಬಳ್ಳಾರಿ ತಾಲೂಕಿನ ಒಂದು ಉಪಗ್ರಾಮ ಯಾಲ್ಪಿ. ಅದರ ಮೊದಲ ಹೆಸರು ಯಲಪ ಅಥವಾ ಯಳಪಿ. ಯಲಪಿ ಎಂಬುದು ವ್ಯಕ್ತಿನಾಮವೋ ಏನೋ ಗೊತ್ತಾಗಿಲ್ಲ. ಆದರೆ ವಿಜಯನಗರದಲ್ಲಿ ಸದಾಶಿವರಾಯರು ಆಳುತ್ತಿದ್ದಾಗ ಸಿಕ್ಕ ಒಂದು ಶಾಸನದಿಂದ ಯಾಲ್ಪಿ ಪ್ರಸಿದ್ಧಿಯಾಗಿದೆ. ಈ ಶಾಸನದ ಮೂಲಕ ರಾಯರು ಕ್ಷೌರಿಕರ ಮೇಲೆ ವಿಧಿಸಲಾಗಿದ್ದ ಸಿದ್ದಾಯ, ಬಿರಾಡ ಮತ್ತು ಬಿಟ್ಟಿ ತೆರಿಗೆಗಳನ್ನು ರದ್ದು ಮಾಡಿದರು. ಈ ರೀತಿ ಯಾಲ್ಪಿ ಪ್ರಸಿದ್ದವಾಗಿದೆ.

೫.೯(೧೩) ಸಿಂಧವಾಳ:

ಬಳ್ಳಾರಿ ತಾಲೂಕಿನ ಕುರುಗೋಡು ಗ್ರಾಮದ ಹತ್ತಿರ ಸಿಂಧವಾಳವಿದೆ. ಕ್ರಿ.ಶ.೧೧೩೦ರಲ್ಲಿ ಚಾಲುಕ್ಯರ ಭೂಲೋಕಮಲ್ಲ ದೇವನು ಕಲ್ಯಾಣದಿಂದ ಆಳುತ್ತಿದ್ದಾಗ ಅವನ ಸೇನಾಪತಿ

ಅನಂತಪಾಲಯ್ಯನೆಂಬುವವನು ಇಲ್ಲಿನ ಸೋಮೇಶ್ವರದೇವರಿಗೆ ಭೂದಾನ ಮಾಡಿದ ಶಾಸನವಿದೆ. ಅನಂತಪಾಲಯ್ಯನ ಆಜ್ಞೆಯ ಮೇರೆಗೆ ಪೆರ್ಗಡೆ ಚಾಕಯ್ಯ, ಕೇತಗಾವುಂಡ, ಮಾಚಗಾವುಂಡ ಮತ್ತು ಸಿಂಧವಾಳದ ಖೋಸಿಸೆಟ್ಟುಗಳ ಸಮಕ್ಷಮದಲ್ಲಿ ಗಾಣದಮನೆ ಮುಂತಾದ ಭೂದಾನ ಮಾಡಿದ ವಿವರಗಳು ಶಾಸನದಲ್ಲಿವೆ. ಸಿಂದವಾಡಿ>ಸಿಂಧವಾಳ>ಸಿಂಧವಾಳವಾಗಿರಬೇಕೆಂದು ಭಾವಿಸಲಾಗಿದೆ.

೫.೯(೧೪) ಹದ್ದಿನಗುಂಡು:

ಗುಂಡಿನ ಮೇಲೆ ಹದ್ದು ಕೂತಿರುವುದರಿಂದ ಈ ಹೆಸರು ಬಂದಿದೆ ಎಂದು ಊರವರ ನಂಬಿಕೆ. ವಿಷ್ಣುವಾಹನನಾದ ಗರುಡನ ಚಿತ್ರವನ್ನು ಬಂಡೆಯ ಮೇಲೆ ಕೆತ್ತಿದ ಕಾರಣ ಈ ಹೆಸರೆಂದು ಕೆಲವರ ವಾದ. ಹದ್ದು ಎಂದರೆ ಸರಹದ್ದು>ಊರಗಡಿ ಎಂದು ಅರ್ಥೈಸಿ ಊರ ಗಡಿಯಲ್ಲಿ ಗುಂಡುಗಳಿರುವುದರಿಂದ ಊರ ಹೆಸರು ಹದ್ದಿನಗುಂಡು ಎಂಬುದು ಮತ್ತೊಂದು ವಾದ.(೬)

೫.೯(೧೫) ಸ್ಥಳನಾಮಗಳಲ್ಲಿ ಜನಪದ ನಿರುಕ್ತಿಗಳು:

'ಜನಪದ ನಿರುಕ್ತಿ' ಎಂಬ ಪದವು ಇಂಗ್ಲೀಷಿನ ಎಂಬುದಕ್ಕೆ ಸಂವಾದಿಯಾದದು. ಇದರ ಕಲ್ಪನೆಯನ್ನು ಮೊತ್ತಮೊದಲು ಹೊಂದಿದ್ದರು. ಇ.ಎಂ. ಫಯರ್‌ಸ್ಟೇಮನ್, ಆದರೆ, ಇದನ್ನು ಜನಪ್ರಿಯಗೊಳಿಸಿದವರು ಎ.ಎಸ್.ಪಾಮರ್ ಡಾ. ಕೇತು ವಿಶ್ವನಾಥರೆಡ್ಡರವರು ತಮ್ಮ 'ಕಡಪ ಉರ್ಲ ಪೇರ್ಲು' ಎಂಬ ಪಿಎಚ್‌ಡಿ ಪ್ರಬಂಧದಲ್ಲಿ 'ಲೋಕನಿರುಕ್ತಿ' ಎಂಬ ರೂಪವನ್ನು ಇಂಗ್ಲೀಷಿನ ಸಂವಾದಿಯಾಗಿ ಬಳಸಿದ್ದಾರೆ. ಇದನ್ನೇ ನಾವು 'ಜನಪದ ನಿರುಕ್ತಿ' ಎಂದು ಕರೆಯಲಾಗಿದೆ.

ಜನಪದ ನಿರುಕ್ತಿಗೆ ವಿದ್ವಾಂಸರು ನೀಡಿರುವ ನಿರ್ವಚನ ಹೀಗಿದೆ: In its smplest opreation, folk-etymology merely association together words which resemible each other in sound and show a real or fancied simililarly in meaning but which are not at all realeted in their origin"

ಪ್ರಯೋಗಿಕವಾಗಿ ಇಂಥ ನಿರುಕ್ತಿಗಳು ಎರಡು ಬಗೆಯಾಗಿರುತ್ತವೆ. ಒಂದು: ಜನ ಸಾಮಾನ್ಯರಿಂದ ರಚಿತವಾದವುಗಳು ಎರಡು: ಪಂಡಿತರಿಂದ ನಿರ್ಮಾಣವಾದವುಗಳು. ಇವುಗಳನ್ನು ಕ್ರಮವಾಗಿ ಜನಪದ ನಿರುಕ್ತಿ ಹಾಗೂ 'ದ್ವಜನ ನಿರುಕ್ತಿ ಎಂದು ವಿಭಾಗಿಸಲಾಗಿದೆ. ಏನಿದ್ದರೂ ಈ ಎರಡು ಸಂದರ್ಭಗಳಲ್ಲಿ ಸ್ಥಳನಾಮ ರೂಪವು ಕೆಡುವುದು ನಿಶ್ಚಯವಾಗಿದೆ.

ಈ ಜನಪದ ನಿರುಕ್ತಯ ಉದ್ದೇಶವಾದರೂ ಒಂದು ನಿರ್ದಿಷ್ಟ ಕಾಲದ ದೃಷ್ಟಿಯಿಂದ:

೧. ಅರ್ಥಹೀನವಾಗಿರುವ ಪದಗಳನ್ನು ಅರ್ಥಪೂರ್ಣವಾಗುವಂತೆ ಮಾಡುವುದು.

೨. ಅಪ್ರಚಲಿತ ಅಥವಾ ಖಿಲ (obsolete)ವಾಗಿರುವ ಪದಗಲ ಸ್ಥಾನದಲ್ಲಿ ಪ್ರಚಲಿತ ಪೆಗಳನ್ನು ಪ್ರತಿನಿಧಾನ (substitute) ಮಾಡುವುದು. ಹಾಗೂ

೩. ಅಸಂಸ್ಕೃತ ಅಥವಾ ಅಶ್ಲೀಲಾರ್ಥಕವೆನಿಸುವ ಪದಗಳೆಡೆಯಲ್ಲಿ ಸುಸಂಸ್ಕೃತವೂ ಅದೇ ಧಾಟಿಯಲ್ಲಿ ಜನಪ್ರಿಯವೂ ಆಗಬಲ್ಲ ಪದಗಳನ್ನಿಡುವುದು.

ಹೀಗೆ ನಿರುಕ್ತಿ ನಿಡುವ ಯತ್ನದಲ್ಲಿ ಎರಡು ಮುಖ್ಯ ಬದಲಾವಣೆಗಳು ನಡೆಯುವುದು ಸಹಜವಾದ ಪ್ರಕ್ರಿಯೇಯಗುತ್ತದೆ.

೧. ಶಬ್ದ ರೂಪಕ್ಕೆ ಸಂಬಂಧಿಸಿದ್ದು (morphological change)

೨. ಶಬ್ದಾರ್ಥಕ್ಕೆ ಸಂಬಂಧಿದುದು (ssemantic changes)

ಸಂಪ್ರಾದಾಯಿಕ ನಿರುಕ್ತಿಗಳ ಪ್ರಕಾರ ಸ್ಥಳಗಳ ಹೆಸರು, ದೇವರು ಅಥವಾ ದೇವತೆಗಳ ಸಂಬಂದದಲ್ಲಿ ನಡೆದ ವಿಶಿಷ್ಠ ಘಟನೆಗಳಿಂದ ನಿಷ್ಪನ್ನವಾಗಿರುತ್ತದೆ. ಇಂಥ ಸನ್ನಿವೇಶಗಳಲ್ಲಿ, ದೇವಸ್ಥಾನದೊಂದಿಗೆ ಹೊಕ್ಕು ಬಳಕೆಯಗಿರುವ ಪಂಡಿತ ವರ್ಗವನ್ನೇ ಹೆಚ್ಚಾಗಿ ಅನುಸರಿಸಿ ಸಾಮನ್ಯ ಜನತೆ ಪೌರಾಣಿಕ ದೃಷ್ಟಿಯಿಂದ ಸ್ಥಳನಾಮಗಳನ್ನು ವಿವರಿಸಲು ಮೌಲ್ಯಮಾಪನ ಮಾಡಲು ತೊಡಗಿತು. ಉದಾಹರಣೆಗೆ 'ಉಡುಪಿ' ಎಂಬುದು 'ಉಡು–ಪ' (ಚಂದ್ರ) ನಿಂದ 'ಮಂಗಳೂರು' ಎಂಬುದು 'ಮಂಗಲಾದೇವಿ' ಯಿಂದ ಹಾಗೂ ಕುಕ್ಕೆ ಎಂಬುದು ಕುಕ್ಕೆ' (ಬುಟ್ಟಿ) ಯಿಂದ ಅಥವಾ 'ಕುಕ್ಕ' (ಮಗು–ಮಗ=ಕುಮರ ಸುಬ್ರಮಣ್ಯ) ನಿಂದ ನಿಷ್ಪನ್ನವಾಯಿತೆಂಬುದು ಈ ಪ್ರಕಾರದ ನಿರುಕ್ತಿ. ಇದೆಲ್ಲಾ ಹೇಗೆ ಅಸಂಗತವಾದುವು ಎಂಬುದನ್ನು ಸ್ಥಳನಾಮದ ಉಗಮ ಹಾಗೂ ಸ್ವರೂಪದ ಕಲ್ಪನೆ ಉಳ್ಳವರಿಗೆ ತಿಳಿದ ವಿಷಯವಾಗಿದೆ.

ಪ್ರಸ್ತುತ: ಜನಪದ ಸಂಸ್ಕೃತಿಯ ಅಂಗವಾಗಿರುವ ಐತಿಹ್ಯ ಅಥವಾ ಸ್ಥಳಪುರಾಣಗಳು ಒಂದಿಲೊಂದು ಬಗೆಯಲ್ಲಿ ಊರ ಹೆಸರಿಗೆ ಕಾರಣವಾಗಿರುವ, ಸಾಮಾನ್ಯವಾಗಿ ನಿಮ್ನ ಜಾತಿ–ವರ್ಗಗಳ ನಿವಾಸಿಗಳ ಹೆಸರನ್ನ ಉಲ್ಲೇಖಿಸುವುದು ಸ್ವಾರಸ್ಯದ ಸಂಗತಿಯಾಗಿದೆ. ಈ ಸಂಪ್ರದಾಯಗಳ ಪ್ರಕಾರ ಈ ವರ್ಗದ ಜನ ಗದ್ದೆಯಲ್ಲಿ ಉಳುವಾಗ ಅಥವಾ ಕಟ್ಟಿಗೆಯನ್ನು ತರಗಲೆಯನ್ನೋ ಕಾಡಿನಲ್ಲಿ ಸಂಗ್ರಹಿಸುತ್ತಿರುವಾಗ ಇವರಿಂದ ಅಕಸ್ಮಿಕವಾಗಿ ಲಿಂಗಗಳು ಕಂಡು ಹುಡುಕಲ್ಪಡುತ್ತವೆ. ಅವರ ಹರಿತವಾದ ಆಯುಧಗಳು ಇಂಥ ಕಲ್ಲುಗಳಿಗೆ ತಾಕಿ, ಕಲ್ಲು ರಕ್ತ ಕಾರಿದ್ದನ್ನು ನೋಡಿದ ಇಂಥ ಮುಗ್ದ ಜನ ಚೀರಿ ಮೂರ್ಛೇ ಹೊಂದಿರುತ್ತಾರೆ. ಸಾಮಾನ್ಯವಾಗಿ ಹೆಂಗಸರಾಗಿದ್ದರೆ, ಲಿಂಗದಿಂದ ಒಸರುವ ರಕ್ತವನ್ನು ತಮ್ಮ ಮಕ್ಕಳ ರಕ್ತವೆಂದು

ಭ್ರಮಿಸಿ ಅವರ ಹೆಸರೆತ್ತಿ ಕೂಗುತ್ತಾರೆ: ಈ ಹೆಸರೆ ಮುಂದಿನ ಊರಿನ ಹೆಸರಾಗುತ್ತದೆ. ‘ಮದರು’ ಎಂಬ ಹೊಲಿತಿಗೆ ಲಿಂಗ ಸಿಕ್ಕಿದುದರಿಂದ ಊರಿಗೆ ‘ಮಧೂರ’ ಎಂಬ ಹೆಸರಾಯಿತು ಎನ್ನಲಾಗಿದೆ. ಇನ್ನು, ‘ಎಲ್ಲೂರು’ (<ಎಲೋ’ ಎಂದು ಮಗನನ್ನು ಕೂಗಿರುವುದರಿಂದ).

ಇಂಥ ಬಹುಪಾಲು ಜನಪದ ನಿರುಕ್ತಿಗಳು ದೇವಸ್ಥಾನ ಅಥವಾ ದೇವಸ್ಥಾನದ ಭೂಮಿ ಮತ್ತಿತರ ವಸ್ತುಗಳ ಸಂಬಂಧ ಹೊಂದಿರುವುದನ್ನು ಗುರುತಿಸಬೇಕು. ಉದಾ: ‘ಪುತ್ತೂರು’ ಇಲ್ಲಿಯ ಮಹಲಿಂಗೇಶ್ವರ ದೇವಾಲಯದ ಹಿಂದಿರುವ ಕೆರೆಯಲ್ಲಿ ಮುತ್ತು ಬೆಳೆಯುತ್ತದೆ ಎಂಬ ಕಾರಣಕ್ಕಾಗಿ ‘ಪುತ್ತೂರು’ ಎಂಬುದು ‘ಮುತ್ತೂರಿನ’ ನಿಷ್ಪನ್ನ ಎಂದು ಭ್ರಮಿಸಲಾಗಿದೆ. ನಾವು ವಿಚಾರ ಮಾಡುವುದನ್ನು ಬಿಟ್ಟಾಗ ಇಂಥ ಅಬದ್ದ ಕಲ್ಪನೆಗಳು ನಮಗೆ ರಂಜನೆಯನ್ನು ಆಹ್ಲಾದವನ್ನು ನೀಡುತ್ತವೆ. ನಿಜ, ಆದರೆ, ತುಂಬ ದುರಂತವೆನಿಸುವ ಸಂಗತಿಯೆಂದರೆ, ಇಂಥ ಕಲ್ಪನಾ ಪಟುಗಳು ತಮ್ಮ ಕಲ್ಪನೆಯ ಅದ್ಭುತಲಾಸ್ಯದಲ್ಲಿ ಪುತ್ತೂರಿನ ಸಂಪದ ‘ಕಲ್ಲೆಗೆ’ ಕಾರ್ಜಾಲ, ಬೆರಿಪದವು, ಬೀದಿಮಜಲು, ಕೊಂಬೆಟ್ಟು ಎಂಬೀ ಹೆಸರುಗಳನ್ನೂ ಸಮಾವೇಶಗೊಳಿಸಿರುವುದು.

ಅಧ್ಯಾಯ – ೬

ಸಮಾರೋಪ

ಅಧ್ಯಾಯ ೬

ಸಮಾರೋಪ

ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನಗಳ ಮೂಲಕ ರೂಪಿಸಿಕೊಂಡ ತಾತ್ತ್ವಿಕ ವಿಧಾನಗಳನ್ನು ಈ ಅಧ್ಯಾಯದಲ್ಲಿ ಕಲಿತವಾಗಿ ಕ್ರೋಢೀಕರಿಸಲಾಗಿದೆ. ಸ್ಥಳನಾಮಗಳ ಭಾಷಿಕ ನೆಲೆ, ಚಾರಿತ್ರಿಕ ನೆಲೆ, ಜಾನಪದೀಯ ನೆಲೆ, ಪ್ರಾಕೃತಿಕ ನೆಲೆ, ಸಾಂಸ್ಕೃತಿಕ ನೆಲೆ ಮತ್ತು ಸಾಮಾಜಿಕ ನೆಲೆಗಳ ಹಿನ್ನೆಲೆಯಲ್ಲಿ ಅಧ್ಯಯನವನ್ನು ಮಾಡಲಾಗಿದೆ. ಇದು ಈವರೆಗೂ ನಡೆದ ಸ್ಥಳನಾಮ ಅಧ್ಯಯನಗಳಿಗಿಂತ ಭಿನ್ನವಾಗಿದೆ ಎಂಬ ಅಂಶವನ್ನು ದೊರಕಿರುವ ಸಾಮಗ್ರಿಗಳ ಮೂಲಕ ವಿಶ್ಲೇಷಿಸಿ ವ್ಯಾಖ್ಯಾನಿಸಲಾಗಿದೆ. ಈ ಮಹಾಪ್ರಬಂಧದ ಮೂಲಕ ಸ್ಥಳನಾಮಗಳನ್ನು ಕುರಿತು ಅಧ್ಯಯನದ ಹೊಸ ಪರಿಕ್ರಮಗಳನ್ನು ರೂಪಿಸಲಾಗಿದೆ.

ಕರ್ನಾಟಕದಲ್ಲಿ ಬೇರೆಬೇರೆಯ ಹಿನ್ನೆಲೆಗಳನ್ನು ನಡೆದಿರುವ ಸ್ಥಳನಾಮ ಅಧ್ಯಯನದ ಹಿಂದಿರುವ ತಾತ್ತ್ವಿಕ ಮತ್ತು ತಾಂತ್ರಿಕ ಕೊರತೆಗಳನ್ನು ಪ್ರಸ್ತುತ ನಿಬಂಧದ ಮೂಲಕ ತಿಳಿದು ಪರಿಶೀಲಿಸಲಾಗಿದೆ. ಹೊಸ ಅಧ್ಯಯನಕ್ಕೆ ಬೇಕಾಗುವ ಶಿಸ್ತಿನ ಉಪಕ್ರಮಗಳನ್ನು ಗ್ರಹಿಸಲಾಗಿದೆ. ಈ ಅಧ್ಯಯನವು ಒಂದು ಕಡೆ ಆನ್ವಯಿಕ ಸ್ವರೂಪವನ್ನು ಪಡೆದಿರುವಂತೆಯೇ ಮತ್ತೊಂದು ಕಡೆ ಸೈದ್ಧಾಂತಿಕ ಸ್ವರೂಪವನ್ನು ಪಡೆದಿರುವ ಕ್ರಮಗಳನ್ನು ಸೂಚಿಸಲಾಗಿದೆ. ಇದು ಈ ನಿಬಂಧದ ಮುಖ್ಯ ಸಂಶೋಧನ ಪರಿಕ್ರಮಗಳಲ್ಲಿ ಹೊಸ ರೀತಿಯೆಂದು ಹೇಳಬಹುದಾಗಿದೆ.

ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳ ವೈಶಿಷ್ಟ್ಯಗಳು ಹಾಗೂ ಕೊಡುಗೆ:-

೬.೧ ಭಾಷಿಕ ವೈಶಿಷ್ಟ್ಯಗಳು:

ಬಳ್ಳಾರಿ ಜಿಲ್ಲೆಯಲ್ಲಿ ಇಂದು ಕಂಡುಬರುವ ಕನ್ನಡವು ಅರದ ಸ್ವರಭಾರ, ಒತ್ತು, ಅಂತರ, ಸ್ವರವಿಧಾನ ಇವುಗಳ ಸ್ಪಷ್ಟವಾದ ಭಿನ್ನತೆಯೊಂದಿಗೆ ಉಪಭಾಷೆಯ ಎಲ್ಲ ಲಕ್ಷಣಗಳನ್ನು ಮೈತುಂಬಿಕೊಂಡು ವೈಶಿಷ್ಟ್ಯಪೂರ್ಣವಾಗಿ ಕಂಡು ಬರುತ್ತದೆ. ಭಾಷಾ ಶಾಸ್ತ್ರಜ್ಞರು ಇಲ್ಲಿನ ಉಪಭಾಷೆಯನ್ನು ಧಾರವಾಡ, ಗುಲ್ಬರ್ಗ, ಮಂಗಳೂರು ಮತ್ತು ಬಿಜಾಪುರ ಕನ್ನಡ ಉಪಭಾಷೆಗಳಂತೆ ಭಾಷಾ ವೈಜ್ಞಾನಿಕ ದೃಷ್ಟಿಯಿಂದ

[illegible]

ವರ್ಣನಾತ್ಮಕವಾಗಿ ಅಭ್ಯಾಸಿಸುವ ಕಾರ್ಯವನ್ನು ಮಾಡಬೇಕಾಗಿದೆ. ದ್ವಿಭಾಷಿಕತೆಯುಳ್ಳ ಪ್ರದೇಶವಾಗಿರುವ ಬಳ್ಳಾರಿ ಜಿಲ್ಲೆ/ತಾಲ್ಲೂಕು ಕನ್ನಡದ ಮೇಲೆ ನೆರೆಯ ಪ್ರಾಂತೀಯ ಭಾಷೆ ತೆಲುಗಿನ ಪ್ರಭಾವವು ಧ್ವನಿ ಮತ್ತು ಆಕೃತಿಮಗಳ ಘಟ್ಟದಲ್ಲಿ ಸಾಕಷ್ಟು ಉಂಟಾಗಿರುವುದು ಕಂಡು ಬರುತ್ತದೆ. ಜಿಲ್ಲೆಯ ಸ್ಥಳನಾಮಗಳಲ್ಲಿ ಇದರ ಸ್ಪಷ್ಟವಾದ ನೆರಳನ್ನು ಗಮನಿಸಬಹುದಾಗಿದೆ. ಕೆಲವು ಸ್ಥಳನಾಮಗಳಲ್ಲಿ ವಾರ್ಗಿಕಗಳು ತೆಲುಗು ಭಾಷೆಯ ಪದಗಳಾಗಿದ್ದರೆ ಇನ್ನು ಕೆಲವು ಸ್ಥಳನಾಮಗಳಲ್ಲಿ ವಿಶಿಷ್ಟ ಘಟಕವು ತೆಲುಗು ಪದಗಳಾಗಿರುವುದು ಕಂಡು ಬರುತ್ತದೆ. ಉದಾ: ಕಮ್ಮಾರಚೇಡು, ಕರಿಚೇಡು, ಬ್ಯಾಲಚಿಂತ, ಬೊಬ್ಬಕುಂಟ, ಯರ್ರಗುಡಿ, ರಾರಾವಿ, ಚೆಳ್ಳಗುರ್ಕಿ, ಜಾನಿಕುಂಟೆ ಮೊದಲಾದ ಸ್ಥಳನಾಮಗಳನ್ನು ಹೆಸರಿಸಬಹುದು. ದ್ರಾವಿಡ ಭಾಷಾ ವರ್ಗದ ಅನೇಕ ಸ್ಥಳನಾಮ ಘಟಕಗಳು ಜಿಲ್ಲೆಯ ಸ್ಥಳನಾಮಗಳಲ್ಲಿ ನೋಡಲು ದೊರೆಯುತ್ತವೆ. ಇಂತಹ ಹಲವು ಘಟಕಗಳ ಅರ್ಥ ಸ್ಪಷ್ಟತೆಗೆ ದ್ರಾವಿಡ ಮೂಲದ ಶಬ್ದಗಳ ಜಾಡನ್ನು ಹಿಡಿದು ಸಾಗಬೇಕಾಗುತ್ತದೆ. ಉದಾ: ಪೊಳಲ್, ಮಟ್ಟಿ, ಹಾಳ, ಕೋಡು, ಅಬ್ಬಿ, ಅಂಬಲ, ಅಲ್, ಮಯಿಲ್ ಇತ್ಯಾದಿ.

೨) ಸಂಸ್ಕೃತ ಮತ್ತು ಪ್ರಾಕೃತ ಭಾಷೆಯ ಪದಗಳನ್ನು ಇಲ್ಲಿಯ ಸ್ಥಳನಾಮಗಳಲ್ಲಿ ನೋಡಬಹುದು. ಪೂರ್ವದಲ್ಲಿ ಸಂಸ್ಕೃತ ಭಾಷೆಯ ಘಟಕವಿದ್ದು ನಂತರ ಯಾವುದೇ ಒಂದು ಕಾಲಕ್ಕೆ ಅದನ್ನು ಕನ್ನಡೀಕರಣಗೊಳಿಸಿದ ಮತ್ತು ಪ್ರಾಕೃತ ಮೂಲದ ಒಂದು ಘಟಕವನ್ನು ಸಂಸ್ಕೃತ ರೂಪಕ್ಕೆ ತಂದಂತಹ ಯಾವುದೇ ನಿದರ್ಶನಗಳು ಇಲ್ಲಿ ಕಾಣುವುದಿಲ್ಲ. ಉದಾ: ಮಕರಬ್ಬಿ, ರಾಮದುರ್ಗ, ವರದಾಪುರ, ವ್ಯಾಸಪುರ, ಮುಸಲವಾಡ, ದಮ್ಮರ>ದಮ್ಮೂರು, ಮೋರಗೇರಿ, ಬೊಮ್ಮನಹಾಳು ಇತ್ಯಾದಿ.

೩) ಬಳ್ಳಾರಿ ಜಿಲ್ಲೆಯ ಸ್ಥಳನಾಮ ಘಟಕಗಳಲ್ಲಿ ಕೆಲವು ದ್ವಿರುಕ್ತಿ ಪದಗಳು ಹಾದು ಬಂದಿರುವುದನ್ನು ಗಮನಿಸಲಾಗಿದೆ. ಸ್ಥಳನಾಮದ ವಾರ್ಗಿಕ ಘಟಕ ಮತ್ತು ವಿಶಿಷ್ಟ ಘಟಕಗಳೆರಡೂ ಸಮಾನ ಅರ್ಥವನ್ನು ನೀಡುತ್ತವೆ.

ಉದಾ: ೧. ದಮ್ಮೂರು<ದಮ್ಮರ, ದಮ್ಮ+ಅರ, ದಮ್ಮ=ಧರ್ಮ

೨. ಕ್ಯಾಸನಕೆರೆ–ಕಾಸಾರ, ಕೆರೆ

ಕಾಸಾರ=ಕೆರೆ, ಕೆರೆ=ಕೆರೆ

೩. ವತ್ತುಮುರವಣಿ–ವಟ್ಟ–ವೃತ್ತಾಕಾರವಾದ, ದುಂಡಾದ

ಮುರುಹು–ದುಂಡಾದ, ಸುತ್ತುಗೊಂಡ

೪) ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳಲ್ಲಿ ಸಂಸ್ಕೃತ ಭಾಷೆಯ ಪದಗಳ ಸಂಖ್ಯೆ ಹೆಚ್ಚಾಗಿ ಕಂಡು ಬರುವುದಿಲ್ಲ. ಹೀಗಾಗಿ ಮಹಾಪ್ರಾಣಗಳ ಸಂಖ್ಯೆಯೂ ಅತ್ಯಲ್ಪವಾಗಿದೆ.

೫) ಬೌದ್ಧಧರ್ಮವು ಜಿಲ್ಲೆಯಲ್ಲಿ ಪ್ರಚಲಿತವಿರುವ ಕಾಲದಲ್ಲಿನ ಕೆಲವು ಸ್ಥಳನಾಮಗಳು ಮತ್ತು ಜೈನಧರ್ಮವು ಪ್ರಚಲಿತವಿದ್ದಾಗಿನ ಕಾಲದ ಕೆಲವು ಸ್ಥಳನಾಮಗಳು ಹೆಚ್ಚಾಗಿ ಪ್ರಾಕೃತ ರೂಪದಲ್ಲಿ ಉಳಿದಿಕೊಂಡಿದೆ. ಸಂಸ್ಕೃತ ರೂಪಗಳು ಅತಿ ಕಡಿಮೆ.

ಉದಾ:	ಬುಧನೂರು>ಬೂದನೂರು	ಇಟ್ಟಗಿ<ವಿಟ್ಟಿಗ
	ದಮ್ಮರು> ದಮ್ಮೂರು	ಕೊಟ್ಟಿಗ್ಯಾಳ< ಕೊಟ್ಟಿಗ
	ಕೆವಳಗಿ>ಕೋಗಳಿ	ಉಜ್ಜೆನ>ಉಜ್ಜಿನಿ

೬) ತುಳು ಭಾಷೆ ಮತ್ತು ತಮಿಳು ಭಾಷೆಯ ಪದಘಟಕಗಳು ಸ್ಥಳ ನಾಮಗಳಲ್ಲಿವೆ.

೧. ನೆಲ್ಲುಕುದುರು　　೨. ಕುರುಗೋಡು

೩. ಕುರುವ(ಳ್ಳಿ)　　೪. ಮಯಿಲ್+ಊರು

೫. ಮೈಲಾಪುರ　　೬. ನೀಲಗುಂದ ಇತ್ಯಾದಿ.

೭) ಬಳ್ಳಾರಿ ಜಿಲ್ಲೆಯಲ್ಲಿ ಬಿಜಾಪುರದ ಆದಿಲ್‌ಷಾಹಿಯ ಒಡೆತನದ ಆಳ್ವಿಕೆ ಮತ್ತು ಹೈದರಾಲಿ, ಟಿಪ್ಪುಸುಲ್ತಾನರ ಆಳ್ವಿಕೆಯು ಕೆಲ ಕಾಲದವರೆಗೆ ಇದ್ದಿತ್ತಾದರೂ ಇಲ್ಲಿನ ಸ್ಥಳನಾಮಗಳಲ್ಲಿ ಉರ್ದು ಇಲ್ಲವೆ ಅರೇಬಿ ಭಾಷೆಯ ಅಂಶಗಳು ಹೆಚ್ಚಾಗಿ ಕಂಡು ಬಂದಿರುವುದು ವಿಶೇಷ ಅಂಶವಾಗಿದೆ.

೮) ಜಿಲ್ಲೆಯ ಸ್ಥಳನಾಮಗಳ ಭಾಷಿಕತೆಯನ್ನು ಗಮನಿಸಿದಾಗ ಇಲ್ಲಿನ ಜನರು ವಿವಿಧ ಮತ, ಧರ್ಮ ಜನಾಂಗದ ಆಳರಸರ ಅವಧಿಗಳಲ್ಲಿ ಕಾಲಧರ್ಮಕ್ಕೆ ಹೊಂದಿಕೊಂಡು ಜೀವಿಸಿದರೂ, ಆಳರಸರ ಪ್ರತಿಷ್ಠಿತ ಬದುಕನ್ನು ಅಂದಂದಿಗೆ ರೂಢಿಸಿಕೊಂಡಿದ್ದರೂ ಭಾಷೆಯ ಮಟ್ಟದಲ್ಲಿ ತಮ್ಮತನವನ್ನು ಉಳಿಸಿಕೊಂಡು ವೈಶಿಷ್ಟತೆಯನ್ನು ಮೆರೆದಿರುವರೆಂದು ಹೇಳಬಹುದಾಗಿದೆ. ಬಹುತೇಕ

ಸ್ಥಳನಾಮಗಳು ಪ್ರಾಚೀನ ಅಚ್ಚಗನ್ನಡ ರೂಪದಲ್ಲಿ ಕಾಣಿಸಿಕೊಂಡಿವೆ. ಉದಾ: ಅಯ್ಯನಹಳ್ಳಿ, ಅಡವಿಮಲ್ಲನಕೆರೆ, ಅರಳಿಗನೂರು, ಬಸಾಪುರ ಇತ್ಯಾದಿ.

೬.೨ ಸಾಂಸ್ಕೃತಿಕ ವೈಶಿಷ್ಟ್ಯತೆಗಳು:

ಭಾಷಾದೃಷ್ಟಿಯಿಂದ ಮಾತ್ರವಲ್ಲದೆ, ಸಾಂಸ್ಕೃತಿಕ ದೃಷ್ಟಿಯಿಂದಲೂ ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳು ಕೆಲವು ವೈಶಿಷ್ಟ್ಯಗಳನ್ನು ಹೊಂದಿವೆ. ಇಲ್ಲಿಯ ಸ್ಥಳನಾಮಗಳಲ್ಲಿ ತಾಲ್ಲೂಕಿನ ವಿವಿಧ ಸಂಸ್ಕೃತಿಗಳ ಪರಸ್ಪರ ಪ್ರಭಾವ, ಹೊಂದಾಣಿಕೆ, ಉಗಮ ಮತ್ತು ವಿಕಾಸ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ವೈಶಿಷ್ಟ್ಯಗಳು ವ್ಯಕ್ತಗೊಂಡಿವೆ.

೧) ಇಲ್ಲಿಯ ಸ್ಥಳನಾಮಗಳಿಂದ ಪ್ರಾಚೀನ ಮಾನವನು ತನ್ನ ಸುತ್ತಲಿನ ತಾನು ವಾಸಗೈದ ಪ್ರದೇಶವನ್ನು ಅಲ್ಲಲ್ಲಿಯ ಭೂವಿವರ,ಭೂವರ್ಣ, ಪಶೂ ಪಕ್ಷಿ, ಪ್ರಾಣಿ, ಶಿಲೆ, ಸಸ್ಯ, ತರು, ಮರ ಮುಂತಾದುವುಗಳ ಮೂಲಕ ಗುರುತಿಸಿದ್ದು, ಅವುಗಳ ಮೂಲಕ ತನ್ನ ಸ್ಥಳಗಳಿಗೆ ಹೆಸರು ನೀಡಿದ ಸಂಗತಿ ತಿಳಿದು ಬರುತ್ತದೆ.

೨) ಆಲ, ಬೇಲ, ಅರಳಿ, ಹುಣಸೆ ಮೊದಲಾದ ವೃಕ್ಷಗಳ ಬಗೆಗೆ ಮಾತ್ರವಲ್ಲದೆ ನಾಗ, ನವಿಲು, ಆನೆ,ಹುಲಿ ಗುಬ್ಬಿ, ಹದ್ದು ಮೊದಲಾದ ಪಶು ಪಕ್ಷಿಗಳ ಬಗೆಗೂ ಶುಭಾಶುಭ ಕಲ್ಪನೆ ಮತ್ತು ದೇವಿಕ ಭಾವನೆಗಳನ್ನು ತಾಳಿರುವುದು ಕಂಡು ಬರುತ್ತದೆ.

೩) ಇಲ್ಲಿನ ಪ್ರದೇಶದಲ್ಲಿ ವಾಸವಾಗಿದ್ದ ಪ್ರಾಚೀನ ಮಾನವನು ನೈಸರ್ಗಿಕ ಜಲಮೂಲ ಪ್ರದೇಶಗಳಾದ ನದಿ ಹೊಳೆ ಮುಂತಾದುವುಗಳಿಂದ ಕ್ರಮೇಣ ಗುಡ್ಡ ಬೆಟ್ಟಗಳಡಿಗೆ ಸಾಗಿ ಗವಿಗಳಲ್ಲಿ ವಾಸಿಸಿ ಹಟ್ಟಿಗಳನ್ನು ಕಟ್ಟಿಕೊಂಡು ಮುಂದುವರೆದಂತೆ ವ್ಯವಸಾಯ ಮುಂತಾದ ವೃತ್ತಿಗಳನ್ನವಲಂಬಿಸಿ ಕೆರೆ ಕಟ್ಟೆ ಬಾವಿ ಮೊದಲಾದ ಕೃತಕ ಜಲಸಂಪನ್ಮೂಲಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿದ್ದುದು ಬಳ್ಳಾರಿ ಜಿಲ್ಲೆ ಹಾಗೂ ತಾಲ್ಲೂಕುಗಳ ಸ್ಥಳನಾಮಗಳಿಂದ ಅರಿಯಬಹುದಾಗಿದೆ.

೪) ದ್ರಾವಿಡರ ಪ್ರಾಕೃತಿಕ ಸ್ಥಳನಾಮ ಪದ್ಧತಿಯನ್ನು ಆರ್ಯರು, ಆರ್ಯರ ಸಾಂಸ್ಕೃತಿಕ ಸ್ಥಳನಾಮ ಪದ್ಧತಿಯನ್ನು ದ್ರಾವಿಡರು ಅನುಸರಿಸಿದ ಸಂಗತಿಯನ್ನು ಇಲ್ಲಿನ ಸ್ಥಳನಾಮಗಳಿಂದ ತಿಳಿಯಬಹುದಾಗಿದೆ.

೫) ಇಲ್ಲಿನ ಜನರು, ರಾಜರು, ರಾಜಪ್ರಮುಖರು ಇವರ ಬಗ್ಗೆ ಹೊಂದಿದ್ದ ಗೌರವ ವಿಧೇಯತೆ, ಧಾರ್ಮಿಕ ವ್ಯಕ್ತಿಗಳ ಬಗೆಗಿನ ಇವರ ಭಕ್ತಿ, ಪ್ರೇಮಾದರ್ಶಗಳು ಇಲ್ಲಿನ ಸ್ಥಳನಾಮಗಳಲ್ಲಿ ವ್ಯಕ್ತಗೊಂಡಿವೆ.

೬) ಇಲ್ಲಿನ ಜನರು ರಾಮಾಯಣ, ಮಹಾಭಾರತ, ಭಗವದ್ಗೀತೆ, ಸ್ಕಂದಪುರಾಣ, ಬ್ರಹ್ಮಾಂಡ ಪುರಾಣ ಮೊದಲಾದ ಕಾವ್ಯ ಪುರಾಣಾದಿಗಳಲ್ಲಿ ನಂಬಿಕೆಯನ್ನು, ಜೈನ ಬೌದ್ಧ ಶಾಕ್ತ ವೈಷ್ಣವ ಶೈವ ಮತ್ತು ವೀರಶೈವ ಮೊದಲಾದ ಧರ್ಮಗಳಲ್ಲಿ ನಿಷ್ಠೆ ಹೊಂದಿರುವುದು ಸ್ಥಳನಾಮಗಳಿಂದ ತಿಳಿದು ಬರುತ್ತದೆ.

೭) ಇಲ್ಲಿನ ಸ್ಥಳನಾಮಗಳು ಭಿನ್ನ ವಿಭಿನ್ನ ಜನಾಂಗಗಳು ಪರಸ್ಪರ ಭಾಷೆ ಹಾಗೂ ಸಂಸ್ಕೃತಿಗಳನ್ನನುಸರಿಸಿಕೊಂಡು, ಹೊಂದಿಕೊಂಡು ಸಾಮರಸತೆಯಿಂದ ಬಾಳಿ ಬದುಕಿದ ಸಂಗತಗಳು ಅಲ್ಲದೆ ಕಾಲಕಾಲಕ್ಕೆ ಇಲ್ಲಿ ನಡೆದಿರುವ ರಾಜಕೀಯ ಹಾಗೂ ಧಾರ್ಮಿ ಕ್ರಾಮತಿ ಮೊದಲಾದುವನ್ನು ತಾಲ್ಲೂಕಿನ ಸ್ಥಳನಾಮಗಳು ಅರುಹುತ್ತವೆ.

೮) ಭೂವರ್ಣವಾಚಕ, ಗ್ರಾಮ ಸಂಪತ್ತು, ಸೌಂದರ್ಯ, ಶೌರ್ಯ, ಸಾಹಸ ಮೊದಲಾದುವುಗಳನ್ನು ಆಲಂಕಾರಿಕವಾಗಿ ತಿಳಿಸುವ ಸ್ಥಳನಾಮ ಪದ್ಧತಿಯು ವಿಶೇಷವಾಗಿ ಬಳ್ಳಾರಿ ಜಿಲ್ಲೆಯಲ್ಲಿ ಕಂಡುಬರುತ್ತದೆ.

೬.೩ ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳ ಕೊಡುಗೆ:

೧) ಬಳ್ಳಾರಿ ತಾಲ್ಲೂಕು ಸ್ಥಳನಾಮಗಳಿಂದ ತಾಲ್ಲೂಕಿನ ಈ ಪ್ರದೇಶವು ಸಾತವಾಹನ, ಮೌರ್ಯ, ಗಂಗಾ, ಕದಂಬ, ಬಾದಾಮಿ, ಚಾಲುಕ್ಯ, ರಾಷ್ಟ್ರಕೂಟ ಚೋಳ, ಕಲ್ಯಾಣ ಚಾಲುಕ್ಯ, ಪಲ್ಲವ, ಹೊಯ್ಸಳ; ವಿಜಯನಗರ ಮೊದಲಾದ ಸಾಮ್ರಾಜ್ಯಗಳಿಗೆ ಸೇರಿದ್ದಿತೆಂಬ ಸಂಗತಿಯು ಸ್ಪಷ್ಟವಾಗಿದೆ.

೨) ಜೈನ ಬೌದ್ಧ ಶಾಕ್ತ ವೈಷ್ಣವ ಶೈವ ಮತ್ತು ವೀರಶೈವ ಮುಂತಾದ ಮತಧರ್ಮಗಳು ಇಲ್ಲಿ ಪ್ರಚಲಿತದಲ್ಲಿದ್ದವು ಎಂಬ ಸಂಗತಿ ಇಲ್ಲಿನ ಸ್ಥಳನಾಮಗಳಿಂದ ತಿಳಿದು ಬರುವುದರಿಂದ ಆ ಧರ್ಮಗಳ ಪ್ರಸಾರ ಮಾರ್ಗ ಹಾಗೂ ಪ್ರಾಚೀನ ಕಾಲದ ಜನಸಂಚಾರ ಮೊದಲಾದುವುಗಳನ್ನು ತಿಳಿಯಲು ಹೆಚ್ಚು ಸಹಕಾರಿಯಾಗುತ್ತದೆ.

೩) ಕಾಲಕಾಲಕ್ಕೆ ಈ ಭಾಗದ ಮುಖಾಂತರ ಸಂಚಾರ ಮಾಡಿದ ಕುರುಬರು,

ಜೈನರು, ಲಂಬಾಣಿಗಳು ಮುಂತಾದವರ ಸಂಚಾರ ಮಾರ್ಗ ಇಲ್ಲಿನ ಸ್ಥಳನಾಮಗಳಿಂದ ತಿಳಿದುಬರುತ್ತದೆ.

೪) ಆರ್ಯರ ಆಲಂಕಾರಿಕ ಸ್ಥಳನಾಮಗಳಂತೆ ಇಲ್ಲಿನ ಜನರು ತಮ್ಮ ನೆಲೆಗಳನ್ನು ಸೊನ್ನ ಹೊನ್ನ ಹಳ್ಳಿ ಬೆಳಗಲ್ಲು ತಾಮ್ರಹಳ್ಳಿ ಮುಂತಾಗಿ ಕರೆದುಕೊಂಡಿದ್ದು ಇದು ದಕ್ಷಿಣ ಭಾರತದ ಅನೇಕ ಸ್ಥಳನಾಮಗಳ ಹಿನ್ನೆಲೆ ಅರ್ಥೈಸಿಕೊಳ್ಳಲು ಸಹಕಾರಿಯಾಗುತದೆ.

೫) ತೆಲುಗು ತುಳು ಕನ್ನಡ ಪ್ರಕೃತ ಮುಂತಾದ ಭಾಷೆಗಳ ಅತಿ ಪ್ರಾಚೀನ ಭಾಷಾ ಸ್ವರೂಪವನ್ನರಿಯಲು ಇಲ್ಲಿನ ಸ್ಥಳನಾಮಗಳು ಸಹಾಯಕವಾಗುತ್ತವೆ.

೬) ಬಳ್ಳಾರಿ ಜಿಲ್ಲೆಯ ಮೈಲಾರ, ಕೊಟ್ಟೂರು, ಉಜ್ಜನಿ, ಹಂಪೆ, ಉಚ್ಚಂಗಿದುರ್ಗ ಮುಂತಾದ ಪುಣ್ಯ ಕ್ಷೇತ್ರಗಳು ವ್ಯಕ್ತಿನಾಮಗಳಾಗಿಯೂ ಅಸ್ತಿತ್ವ ಪಡೆದಿವೆ. ಆದ್ದರಿಂದ ಈ ಪ್ರದೇಶದ ವ್ಯಕ್ತಿನಾಮಗಳ ಅಧ್ಯಯನಕ್ಕೆ ಬಳ್ಳಾರಿ ಜಿಲ್ಲೆಯ ಸ್ಥಳನಾಮಾಧ್ಯಯನ ಸಹಾಯಕವಾಗಿ ಪರಿಣಮಿಸುತ್ತದೆ. ಇಲ್ಲಿನ ಸ್ಥಳನಾಮಗಳ ಸೂಕ್ಷ್ಮ ಅಧ್ಯಯನದಿಂದ ಒಟ್ಟಾಗಿ ಭಾರತೀಯ ಸ್ಥಳನಾಮಾಧ್ಯಯನಕ್ಕೆ ಇನ್ನೂ ಹಿರಿದಾದ ಭಾಷಿಕ ಮತ್ತು ಸಾಂಸ್ಕೃತಿಕ ಕೊಡುಗೆಯನ್ನು ನೀಡಬಹುದಾಗಿದೆ. ನಮ್ಮ ಅಧ್ಯಯನದ ಆಳ, ಅನುಭವದ ವಿಸ್ತಾರ ಮತ್ತು ವೈವಿಧ್ಯತೆಗಳಿಂದ ಒರೆಹಚ್ಚಿ ಪರಾಮರ್ಶಿಸಿದರೆ ಅದರಿಂದ ವಿವಿಧ ಜ್ಞಾನ ಶಾಖೆಗಳು ಬಲಗೊಂಡು ಸಮೃದ್ಧಿಯನ್ನು ಸೂಸುತ್ತ ನಾಡಿನ ಮತ್ತು ಜನಪದದ ಸಾಂಸ್ಕೃತಿಕ ಪ್ರಾಚೀನ ಬದುಕನ್ನು ವಾಸ್ತವಕ್ಕೆ ಹಿಡಿದು ತೋರಿಸಲು ಎಲ್ಲ ಬಗೆಯಿಂದಲೂ ಸಹಕಾರಿಯಾಗಬಲ್ಲುದು.

೬.೪ ಸಂಶೋಧನೆಯ ಒಟ್ಟು ಫಲಿತ

ನಾಡಿನಲ್ಲಿ ದೊರೆಯುವ ಮೌಖಿಕ ಸಾಹಿತ್ಯ ಸಂಸ್ಕೃತಿಯ ಅನನ್ಯತೆಯನ್ನು ಸಾರುತ್ತದೆ. ಈ ನೆಲದ ಸಮುದಾಯಗಳ ಚರಿತ್ರೆಯನ್ನು ಎಳೆ ಎಳೆಯಗಿ ತೆರೆದುಕೊಡುತ್ತದೆ. ದೇಸಿಯ ಸತ್ವವನ್ನು ಗ್ರಾಮ ಸಮಾಜ ಒಳಗೊಂಡಿರುತ್ತದೆ. ಈ ಗ್ರಾಮ ಸಮಾಜದೊಳಗೆ ಬದಕುವ ಸಮುದಾಯಗಳು ಹೇಳುವ ಕತೆ, ಹಾಡು, ಗಾದೆ, ಒಗಟು, ಒಡಪು, ಒಡಬುಗಳಲ್ಲಿ ಒಂದೊಂದಿ ಪ್ರಾದೇಶಿಕ ಸಂಸ್ಕೃತಿಯೇ ಅಡಗಿದೆ. ಸಾಂಧಭಿಕವಾಗಿವೆಂಬತೆ ಈ ಜನಪದ

ಪ್ರಕಾರಗಳಲ್ಲಿ ಬಹಳಷ್ಟು ಸ್ಥಳನಾಮಗಳು ಉಲ್ಲೇಖಗೊಂಡಿವೆ. ನಮ್ಮ ರಾಜ್ಯ ಹಾಗೂ ದೇಶದ್ಯಂತ ಕಂಡು ಬರುವ ಎಷ್ಟೋ ಸ್ಥಳನಾಮಗಳ ಹಿಂದೆ ಜನಪದರ ನಂಬಿಕೆ ಹಾಗೂ ಕಥೆಗಳಿವೆ. ಗ್ರಾಮದ ಒಳಿತಿಗಾಗಿ ತ್ಯಾಗ ಬಲಿದಾನ ಮಾಡಿವರು, ತಾವು ನಂಬಿದ ದೈವಗಳ ಚಾರಿತ್ರಿಕ ವ್ಯಕ್ತಿಗಳ ಬಗೆಗೆ ಅವರಿಗೆ ಅಪಾರವಾದ ಗೌರವ. ಈ ಕಾರಣಕ್ಕಾಗಿ ಅವರು ಒಂದೊಂದು ಸ್ಥಲರ್ಖಖೇ ಆಮಥೌಾಯ ದು ಸ್ಥಳಕ್ಕೆ ಅಂತವರ ಹೆಸರುಗಳನ್ನು ನಿಡುತ್ತಾರೆ. ಕಥೆ ಹೇಳುತ್ತಾರೆ. ಸಂಸ್ಕೃತಯು ಅಧ್ಯಯನದಲ್ಲಿ ಈ ಬಗೆಯ ಮೂಲಾಧಾರಗಳು ಇಂದು ಬಹು ಮುಖ್ಯವೆನಿಸಿವೆ.

ವ್ಯಕ್ತಿ ಕುಟುಂಬದ ಅತಿ ಮುಖ್ಯ ಘಟಕ. ಇಂತಹ ವ್ಯಕ್ತಿ ಕೇಂದ್ರೀತ ಕುಟುಂಬಗಳು ಸೇರಿ ಒಂದು ಊರಾಗುತ್ತದೆ. ವಿಶೇಷವಾದ ನಡೆ-ನುಡಿ, ವ್ಯಕ್ತಿತ್ವವನ್ನು ಹೊಂದಿರುವವರ ಹೆಸರುಗಳನ್ನು ಸ್ಥಳನಾಮಗಳಿಗೆ ನೀಡಲಾಗಿರುತ್ತದೆ. ಅಲ್ಲದೇ ಊರಿಗೆ ಬಂದ ಆಪತ್ತನ್ನು ಕಳೆಯಲು ಮುಂದಾದ ಕಾರಣಕ್ಕಾಗಿ ಆ ವ್ಯಕ್ತಿಯ ಹೆಸರನ್ನು ತಮ್ಮ ನೆಲೆಗಳಿಗೆ ಇಟ್ಟುಕೊಂಡಿದ್ದು ತಿಳಿಯುತ್ತದೆ. ಅದರಂತೆ ಹಳ್ಳಿಗಳ ದೇವರು, ಧರ್ಮವನ್ನು ತಮ್ಮ ಅವಿಭಾಜ್ಯ ಅಂಗವೆಂದು ನಂಬಿವೆ. ಭಕ್ತಿ ಮತ್ತು ಭಯದ ನೆಲೆಯಲ್ಲಿ ತಮ್ಮ ವಾಸಸ್ಥಳಗಳಿಗೆ ದೈವಗಳ ಹೆಸರನ್ನು ಇಟ್ಟುಕೊಂಡ ಬಗೆಗೆ ಮಾಹಿತಿ ಲಭ್ಯವಾಗುತ್ತದೆ. ಇದರಿಂದಾಗಿ ಅವರಿಗೆ ಒಳ್ಳೆಯದಾಗುತ್ತದೆಂಬ ಬಲವಾದ ನಂಬಿಕೆಯನ್ನು ಸಮುದಾಯಗಳು ಹೊಂದಿರುತ್ತವೆ.

ವೈಜ್ಞಾನಿಕ ಹಾಗೂ ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕಾದ ವಿಷಯಗಳಲ್ಲಿ ಸಳನಾಮಾಧ್ಯಯನವು ಮುಖ್ಯವಾದುದು. ಸ್ಥಳನಾಮಗಳಂತಹ ಸಾಂಸ್ಕೃತಿಕ ಪಳಯುಳಿಕೆಗಳು ಬಂದು ಭೌಗೋಳಿಕ ಪರಿಸರದ ಸಂಸ್ಕೃತಿಯ ನಿರ್ವಚನದಲ್ಲಿ ಅಗತ್ಯವಾಗಿ ಬಳಸಿಕೊಳ್ಳಬೇಕಾದ ಸಾಮಗ್ರಿಗಳೆಂಬುದನ್ನು ಇಲ್ಲಿಯವರೆಗಿನ ಅಧ್ಯಯನಗಳಿಂದ ಎತ್ತಿ ತೋರಿಸಲಾಗಿದೆ. ಒಟ್ಟು ಸ್ಥಳನಾಮಗಳ ಪ್ರಾದೇಶಿಕವಾರು ಅಧ್ಯಯನದಿಂದ ಭೂಗೋಳಶಾಸ್ತ್ರದ ಕೆಲವು ಪ್ರಶ್ನೆಗಳಿಗೆ ಉತ್ತರ ದೊರೆಯುವ ಸಾಧ್ಯತೆ ಗಳಿವೆ. ಭೂಗೋಳ ಶಾಸ್ತ್ರಜ್ಞರು ಸ್ಥಳನಾಮಗಳಂತಹ ಅಂಶಗಳನ್ನು ತಮ್ಮ ಅಧ್ಯಯನಗಳಿಗೆ ಪೂರಕ ಸಾಮಗ್ರಿಯಾಗಿ ತೆಗೆದುಕೊಂಡು ವಿಶ್ಲೇಷಿಸುವ ಅಗತ್ಯವಿದೆಯೆನ್ನಬಹುದು. ಕೇವಲ ಹೆಸರುಗಳ ರೂಪದಿಂದಲೇ ಒಂದು ಪ್ರದೇಶದ ಭೌಗೋಳಿಕ ವಿವರಗಳನ್ನು ನೀಡಬಹುದು. ಕಾರಣ ಭೌಗೋಳಿಕ ಇತಿಹಾಸದ ಅಧ್ಯಯನಕ್ಕೆ ಗ್ರಾಮನಾಮಗಳ ಪಾತ್ರವೂ ಮಹತ್ವದ್ದಾಗಬಹುದು.

ಒಂದು ಸಂಸ್ಕೃತಿಯಲ್ಲಿ ವ್ಯಕ್ತಿ, ದೈವ, ಜಾತಿ, ವೃತ್ತಿ, ಪಟ್ಟಣ, ನಗರ, ಗ್ರಾಮ, ಪ್ರದೇಶ, ದೇವಾಲಯಗಳು ಮೊದಲಾದುವು ಮುಖ್ಯವಾಗುತ್ತವೆ. ಎಲ್ಲಾ ಸಂಗತಿಗಳಿಂದ ಚಲಿಸುವ ಸಾಮಾಜಿಕ ಓಘವೇ ಸಂಸ್ಕೃತಿ. ಸ್ಥಳನಾಮಗಳು ಆರಂಭದ ಭೌಗೋಳಿಕತೆಯ ಪ್ರೇರಣೆಯಿಂದ ನಾಗರಿಕತೆ ಬೆಳೆದಂತೆ ಸಂಸ್ಕೃತೀಮುಖಿಯಾಗಿ ನಿರ್ದೇಶನಕ್ಕೊಳಪಟ್ಟವು. ಮಾರ್ಗಕ್ರಮ ಪದ್ಧತಿಯ ನಂತೆ ಕಸುಬಿನ ಹಿನ್ನೆಲೆಯಲ್ಲಿ ಜಾತಿ ಪದ್ಧತಿ ಹುಟ್ಟಿಕೊಂಡಿತು. ಆದರೂ ಅದು ಮುಂದುವರೆದು ಕಸುಬನ್ನು ಮೀರಿ ತಮ್ಮ ಬೆಳವಣಿಗೆಯನ್ನು ಕಂಡುಕೊಂಡಿತು. ಅಂದರೆ ಕುಂಬಾರರು, ಕಂಬಾರರು, ಮಾದಿಗರು, ಚಮ್ಮಾರರು, ಉಪ್ಪಾರರು, ಬಡಿಗೇರರು, ಮ್ಯಾದರರು, ಜಂಗಮರು, ಗೌಡ, ಪುರೋಹಿತು ಹೀಗೆ ಮುಂತಾದ ವೃತ್ತಿಗಳು ಕ್ರಮೇಣ ಜಾತಿಗಳಾಗಿ ಮಾರ್ಪಾಡಾದವು. ಅವರಿಗೆ ಕುಂಬಾರಹಳ್ಳೀ, ಕಮ್ಮರಚೇಡು, ಉಪ್ಪಾರಳ್ಳಿ, ಜಂಗಮರಳ್ಲ;ಈ, ಒಡ್ಡರಟ್ಟಿ ಹೀಗೆ ಸ್ಥಳನಾಮಗಳು ಇವೆ. ವೃತ್ತಿಯಿಂದ ನೆಗೆದು ಜಾತಿಯ ನೆಲಯಲ್ಲಿ ಸಮುದಾಯಗಳು ತಮ್ಮ ನೆಲೆಗಳನ್ನು ಕಟ್ಟಿಕೊಂಡು ಹೆಸರು ನೀಡಿದರು. ಆದರೂ ಪರಸ್ಪರ ಪೂರಕವಾದ ಜೀವನ ಮಾತ್ರ ಮುಂದುವರೆಯಿತು.

ಕುಟುಂಬ ಕೇಂದ್ರೀಕೃತ ಸಮುದಾಯಗಳು ತಮ್ಮೊಂದಿಗೆ ಜೀವಿಸುವ ಪಕ್ಷಿ-ಪ್ರಾಣಿಗಳನ್ನು ತಮ್ಮ ಜೀವನದ ಭಾಗವನ್ನಾಗಿ ತೆಗೆದಯುಕಂಡಿದ್ದಾರೆ. ಈ ಕಾರಣದಿಂದಾಗಿಯೇ ತಮಗೆ ಮುಖ್ಯವೆನಿಸಿದ ಕೋತಿ, ಹದ್ದು, ಚಿರತೆ, ಹಂದಿ, ಹಾವು ಮೊದಲಾದವು ಅವರ ನೆಲೆಗಳುಇಗೆ ಹೆಸರುಗಳಾಗಿ ಬಂದಿರುವುದನ್ನು ಗಮನಿಸಿಬಹುದಯು. ಹಂದಿಯಂತಹ ಪ್ರಾಣಿ ಅವರಿಗೆ ಕೀಳಾಗಿ ಕಾಣದೆ ವರಾಹರೂಪವಾದ ದೈವವಾಗಿ ಕಾಣುತ್ತದೆ. ಇಂತಹ ಅನೇಖ ಭಯ ಭಕ್ತಿ ನಂಬಿಕೆಯ ಹಿನ್ನೆಲೆಯಲ್ಲಿ ಈ ಬಗೆಯ ಗ್ರಾಮನಾಮಗಳು ಜನಿಸಿವೆಯೆನ್ನಬಹುದು. ಸ್ಥಳನಾಮಗಳನ್ನು ಭಾಷಿಕ ಘಟಕಳೆಂದು ಅಧ್ಯಯನ ಮಾಡುವುದು ಮುಖ್ಯವಾಗಿದೆ. ಸ್ಥಳನಾಮಗಳು ಅನೇಕ ಭಾಷಿಕ ಚಹರೆಗಳ ತಿಳಿಯುತ್ತವೆ. ಭಾಷೆ ಒಂದು ಸಂಸ್ಕೃತಿಯ ಮಹತ್ವದ ವಾಹಕ. ಇಂತಹ ಅಂಶಗಳಿಂದ ಸಮಾಜನ ಅಧ್ಯಯನವನ್ನು, ಭೌಗೋಳೀಕ ಅಧ್ಯಯನವನ್ನು ಮಾಡಲು ಸಾಧ್ಯ. ಶಂಭಾಜೋಶಿಯವರು ಸ್ಥಳನಾಮಗಳ ಭಾಷಿಕ ಅಂಶಗಳಿಂದಲೇ ಕನ್ನಡನಾಡಿನ ಭೌಗೋಳೀಕ ಮೇರೆಗಳನ್ನು ಭಾರಥಾದ್ಯಂತ ಅನ್ವೇಷಿಸುತ್ತಾರೆ. ಆಮೂಲಕ ಕನ್ನಡ ಸಂಸ್ಕೃತಿಯ ಹುಡುಕಾಟವನ್ನು ಎಡೆಗಳ ಮುಖಾಂತರ ವಿವರಿಸುತ್ತಾರೆ. ಕನ್ನಡ ಸ್ಥಳನಾಮಗಳ ಮೇಲೆ ಮುಸ್ಲಿಂ ಮತ್ತು ಇಂಗ್ಲೀಷ್ ಆಡಳಿತ ಪ್ರಭಾವಗಳಾಗಿವೆ. ಮುಸ್ಲಿಂ ಅರಸರು ರಾಜ್ಯಭಾರ ವಹಿಸಿಕೊಂಡ ಅವಧಿಯಲ್ಲಿ ನಮ್ಮ

ದೇಶದಲ್ಲಿನ ಗ್ರಾಂಗಳು ತಮ್ಮ ಸ್ವಾತಂತ್ರ್ಯ ಹಾಗೂ ಸ್ವಯತ್ತತೆಯನ್ನು ಹೆಸರಿನ ಮೂಲಕ ಉಳಿಸಿಕೊಂಡಿದ್ದವು. ಇವರ ಆಕ್ರಮಣಗಳಿಂದ ಸ್ಥಳನಾಮಗಳ ಮೇಲಾದ ಪ್ರಭಾವ ತೀರಾ ಕಡಿಮೆಯೆನ್ನಬಹುದು. ಅದರಲ್ಲಿ ಹಳ್ಳಿಗಳ ಮೇಲಾದದ್ದು ಅತ್ಯಲ್ಪ. ಮುಸ್ಲಿಂ ರಾಜ್ಯ ಸಿಂಹಾಸನ ಮತ್ತು ರಾಜಧಾನಿಗಳ ಮೇಲೆ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದ್ದರಿಂದ ನಗರ ಪಟ್ಟಣಗಳಲ್ಲಿ ಹೆಚ್ಚಿಗಿ ಹೆಸರಿನ ಬದಲಾವಣೆಗಳು ನಡೆದಿವೆ. ಅದರಂತೆ ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಗ್ರಾಮ ಸಮುದಾಯಗಳ ಜನಜೀವನದಲ್ಲಿ ಅನೇಕ ಬದಲಾವಣೆಗಳು ಕಂಡುಬಂದವು. ಬ್ರಿಟೀಷರು ಭಾರತದ ಹಳ್ಳಿಗಳ ವಿಶಿಷ್ಟ ಗುಣಗಳಾದ ಸ್ಥಿತಿಸ್ಥಾಪಕತ್ವವನ್ನು ತಮ್ಮ ಭಾಷಾಮಾಧ್ಯಮದಿಂದ ಪ್ರಭಾವಿತಗೊಳಿಸಿದರು.ಆ ಮೂಲಕ ಭಾರತೀಯ ಸಮಾಜ ಆ ಭಾಷೆಯ ಮುಲಾಜಿಗೆ ಒಳಗಾಯಿತು. ಜೀವನ ಕ್ರಮದಲ್ಲಿ ಹೀಗೆ ಬದಲಾವಣೆಯು ನಡೆಯಿತು. ಸ್ಥಳನಾಮಗಳ ಮೇಲೆಯೂ ದಟ್ಟವಾದ ಪ್ರಭಾವವು ಉಂಟಾಯಿತು.

೬.೫ ಅಧ್ಯಯನದ ಮುಖ್ಯ ತಿರುಳು:

೧) ಕನ್ನಡದ ಸ್ಥಳನಾಮ ಅಧ್ಯಯನದಲ್ಲಿ ಇದುವರೆಗೆ ನಡೆದಿರುವ (ಲಭ್ಯವಿರುವ) ಅಧ್ಯಯನಗಳನ್ನು ಸಮೀಕ್ಷಿಸಲಾಗಿದೆ. ಇವುಗಳ ಅಧ್ಯಯನದಿಂದ ನನ್ನ ನಿಬಂಧಕ್ಕೆ ಅಳವಡಿಸಲಬಹುದಾದ ಮಾದರಿಯನ್ನು ಕಂಡುಕೊಳ್ಳಲಾಗಿದೆ. ಈ ಹಿಂದಿನ ಅನೇಕ ಅಧ್ಯಯನಗಳು ಭಾಷಾ ಶಾಸ್ತ್ರದ ನೆಲೆಯಲ್ಲಿ, ವರ್ಣನಾತ್ಮಕ ಮಾದರಿಯಲ್ಲಿ ಸಿದ್ದಗೊಂಡು ಪರಂಪರೆಯಂತೆ ಮುಂದುವರೆದವು. ಇದನ್ನು ಗಮನದಲ್ಲಿಟ್ಟುಕೊಂಡು ಕೆಲವು ಹೊಸ ನೆಲೆಗಳಲ್ಲಿ ಪ್ರಸ್ತುತ ನಿಬಂಧಕ್ಕೆ ಅಳವಡಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ.

ಉದಾ: ಸಾಂಸ್ಕೃತಿಕ, ಸಾಮಾಜಿಕ, ಜಾನಪದೀಯ ನೆಲೆಗಳು.

೨) ಸ್ಥಳನಾಮಗಳನ್ನು ವರ್ಗೀಕರಿಸುವ ಮೂಲಕ ಬಳ್ಳಾರಿ ತಾಲ್ಲೂಕಿನ ಭೌಗೋಳಿಕ ಪರಿಸರದ ಚಹರೆಯನ್ನು ಮತ್ತು ಅಲ್ಲಿನ ಭಾಷಿಕ ಸ್ವರೂಪ, ಸಾಂಸ್ಕೃತಿಕ ಸ್ವರೂಪ, ಗ್ರಾಮಗಳ ವಾಸ್ತು ಸ್ವರೂಪವನ್ನು ಗುರುತಿಸಲಾಗಿದೆ. ತಾಲ್ಲುಕಿನ ಜಲವಾಚಿ, ಕ್ಷೇತ್ರವಾಚಿ, ಸಸ್ಯವಾಚಿ, ಲೋಹವಾಚಿ ಮುಂತಾದ ಪ್ರಾಕೃತಿಕ ಸ್ಥನಾಮಗಳೊಂದಿಗೆ ಜಾತಿ–ವರ್ಗ, ವೃತ್ತಿ–ದೈವ, ವ್ಯಕ್ತಿ–ಪ್ರಾಣಿ, ಪಕ್ಷಿ ಮುಂತಾದ ಸಾಂಸ್ಕೃತಿಕ ಅಂಶಗಳನ್ನು ಪ್ರತಿನಿಧಿಸುವ ಸ್ಥಳನಾಮಗಳಿರುವುದನ್ನು ಗುರುತಿಸಲಾಗಿದೆ.

೩) ಬಳ್ಳಾರಿ ತಾಲ್ಲೂಕಿನ ಸ್ಥಳನಾಮಗಳ ಮೇಲೆ ನೆರೆ ಆಂಧ್ರ ಪ್ರದೇಶದಿಂದ ತೆಲುಗಿನ ಪ್ರಭಾವ ಗ್ರಾಮಗಳ ಮೇಲೆ ಆಗಿಲ್ಲ ಎಂಬುದನ್ನು ಗುರುತಿಸಲಾಗಿದೆ. ಆದರೆ ಒಂದೇ ಸ್ಥಳನಾಮವನ್ನು ತೆಲುಗು, ಕನ್ನಡ ಮಾತೃಭಾಷಿತರು ತಮ್ಮ ತಮ್ಮ ಭಾಷೆಯಲ್ಲಿ ಪ್ರತ್ಯೇಕವಾಗಿ ಗುರುತಿಸುತ್ತಾರೆ ಎಂಬುದು ಅತ್ಯಂಯ ಮುಖ್ಯ ಸಂಗತಿ.

೪) ಸ್ಥಳನಾಮಗಳನ್ನು ವಿಶಿಷ್ಟ ಐತಿಹಾಸಿಕ ಆಕರಗಳೆಂದು ಪರಿಗಣಿಸಲಾಗಿದೆ. ಈ ಚಾರಿತ್ರಿಕ ಸಂಗತಿಗಳಿಂದ ಹೆಸರುಗಳ ವಿವಿಧ ಆಯಾಮಗಳು ತಿಳಿದುಬಂದಿವೆ. ಶಾಸನೋಕ್ತ ಸ್ಥಳನಾಮಗಳ ಮೂಲಕ ಭಾಷೆಯ ಚಾರಿತ್ರಿ ಬೆಳವಣಿಗೆಯನ್ನು ಕಂಡುಕೊಳ್ಳಲಾಗಿದೆ. ಕೈಫಿಯತ್ತುಗಳಲ್ಲಿ ದಾಖಲಾದ ಸ್ಥಳನಾಮದೊಂದಿಗೆ ಭಾಷಿಕ ಅಂಶಗಳನ್ನು ಕಂಡುಕೊಳ್ಳಲಾಗಿದೆ. ಅಲ್ಲದೆ ಸಂಸ್ಕೃತೀಕರಣ, ಐತಿಹ್ಯ, ಪುರಾಣ, ಸ್ಥಳಗಳೊಂದಿಗೆ ಬೆಸೆದದ್ದು ಕಂಡು ಬಂದಿದೆ. ಚರಿತ್ರೆ ಮತ್ತು ಸ್ಥಳನಾಮಗಳ ಮೂಲಕ ಸಂಸ್ಕೃತಿ, ಭಾಷೆಯ ಚಾರಿತ್ರಿಕ ಬೆಳವಣಿಗೆಯನ್ನು ತೋರಿಸುವ ಹೊಸ ಅಧ್ಯಯನ ಮಾದರಿಯನ್ನು ನಿರೂಪಿಸಲಾಗಿದೆ.

೫) ಬಳ್ಳಾರಿ ತಾಲ್ಲೂಕಿನ ಅನೇಕ ಹಳ್ಳಿಗಳು ಆಂಧ್ರದ ಗಡಿಭಾಗದಲ್ಲಿದ್ದು ತೆಲುಗು ಮತ್ತು ಕನ್ನಡ ಮಿಶ್ರಿತ ಸಾಂಸ್ಕೃತಿಕ ಜೀವನವೆಂಬುದನ್ನು ಗಮನಿಸಲಾಗಿದೆ. ಇಲ್ಲಿ ವಾಸಿಸುವ ಜನರು ಎರಡು ಭಾಷೆಗಳನ್ನು ಬಲ್ಲವರಾಗಿದ್ದು, ಸ್ಥಳನಾಮ ಉಚ್ಚರಿಸುವ ಬಗೆಯನ್ನು ಕಂಡುಕೊಳ್ಳಲಾಗಿದೆ. ಮುಖ್ಯವಾಗಿ ಆಂಧ್ರದಿಂದ ವಲಸೆ ಬಂದಂತಹ ಸಮುದಾಯಗಳು ಕರ್ನಾಟಕದ ಅನೇಖ ಭಾಗಗಳಲ್ಲಿ ಕ್ಯಾಂಪ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ಕ್ಯಾಂಪ್‌ಗಳಿಗೆ ತೆಲುಗು ಮೂಲದ ಹೆಸರುಗಳನ್ನು ಕರೆದುಕೊಂಡಿದ್ದಾರೆ. ಅಲ್ಲದೆ ಕನ್ನಡ ಸ್ಥಳನಾಮಗಳನ್ನು ತೆಲುಗು ಪದರಚನೆಯ ನಿಯಮದಂತೆ ಉಚ್ಚರಿಸುತ್ತಾರೆಂಬುದು ತಿಳಿದುಬಂದಿದೆ. ಆಧುನಿಕತೆಯ ಪ್ರಭಾವದಿಂದ ಸ್ಥಳಗಳಿಗೆ ಇಡುವ ಹೆಸರುಗಳು ಇತ್ತೀಚೆಗೆ ಬದಲಾಗುತ್ತಿವೆ. ಕೈಗಾರಿಕೀಕರಣ, ಜಾಗತೀಕರಣ, ಸಮಕಾಲೀನ ರಾಜಕಾರಣದ ಪ್ರಭಾವ ಈ ಬದಲಾವಣೆಗೆ ಪ್ರೇರಣೆಯಾಗಿರುವುದನ್ನು ಗಮನಿಸಲಾಗಿದೆ. ಇವು ಈ ಅಧ್ಯಯನದ ಮುಖ್ಯವಾದ ಫಲಿತಗಳು.

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಅನುಬಂಧಗಳು

ಬಳ್ಳಾರಿ ಜಿಲ್ಲೆಯ (ತಾಲೂಕುವಾರು) ಸ್ಥಳನಾಮಗಳ ಪಟ್ಟಿಗಳು

ಬಳ್ಳಾರಿ ತಾಲ್ಲೂಕು:

೧) ಅಮರಾಪುರ
೨) ಅಲ್ಲಿಪುರ
೩) ಅಸುಂಡಿ
೪) ಅಂದ್ರಾಳು
೫) ಇಬ್ರಾಹಿಂಪುರ
೬) ಏಳುಬೆಂಚಿ
೭) ಓರುವಾಯಿ
೮) ಕಕ್ಕಬೇವಿನಹಳ್ಳಿ
೯) ಕಪ್ಪಗಲ್ಲು
೧೦) ಕಮ್ಮರಚೇಡು
೧೧) ಕರಿಚೇಡು
೧೨) ಕರೇಕಲ್ಲು
೧೩) ಕರೇಕಲ್ಲು ವೀರಾಪುರ
೧೪) ಕಲ್ಲುಕಂಬ
೧೫) ಕಲ್ಲುಕುಟ್ಟಿಗನಹಾಳ್
೧೬) ಕಾರ್ಕಲ್ಕತೋಟ
೧೭) ಕ್ಯಾದಗಿಹಾಳು
೧೮) ಕುಡುತಿನಿ
೧೯) ಕುಂತನಹಳ್ಳಿ
೨೦) ಕುರುಗೋಡು
೨೧) ಕೆರಕೇರಿ
೨೨) ಕೊರ್ಲಗುಂದಿ
೨೩) ಕೋಳೂರು
೨೪) ಕೊಳಗಲ್ಲು
೨೫) ಗುತ್ತಿಗನೂರು
೨೬) ಗುಡದೂರು
೨೭) ಗುಗ್ಗರಹಟ್ಟಿ
೨೮) ಗೆಣಕಿಹಾಳು
೨೯) ಗೋಟೂರು
೩೦) ಗೊಲ್ಲನಾಗೇನಹಳ್ಳಿ
೩೧) ಗೋಡೆಹಾಳು
೩೨) ಚಾಗನೂರು
೩೩) ಚಾನಾಳು
೩೪) ಚಳ್ಳಗುರ್ಕಿ
೩೫) ಚಂದೂರು
೩೬) ಜಾನೇಕುಂಟ
೩೭) ಚಿಟಿಗನಹಾಳು
೩೮) ಜಾಲಿಹಾಳು
೩೯) ಜಾಲಿಬೆಂಚಿ
೪೦) ಜೋಳದರಾಶಿ
೪೧) ತಂಬ್ರಹಳ್ಳಿ
೪೨) ತಿಮಲಾಪುರ
೪೩) ತೆಗ್ಗಿನಬೂದಿಹಾಳ
೪೪) ತೋಲಮಾಮಡಿ
೪೫) ದಮ್ಮೂರು
೪೬) ದಮ್ಮೂರುಕಗ್ಗಲ್ಲು

೪೭) ದಾಸರನಾಗೇನಹಳ್ಳಿ

೪೮) ನೆಲ್ಲುಡಿ

೪೯) ಪಟ್ಟಣಸೆರಗು

೫೦) ಪತ್ರಬೂದಿಹಾಳು

೫೧) ಪರಮದೇವನಹಳ್ಳಿ

೫೨) ಬದನಹಟ್ಟಿ

೫೩) ಬಸರಕೋಡು

೫೪) ಬಳ್ಳಾರಿ

೫೫) ಬಳ್ಳಾರಿಗೋನಾಳು

೫೬) ಬಾಣಾಪುರ

೫೭) ಬಿಸಲಳ್ಳಿ

೫೮) ಬುರ್ರನಾಯಕನಹಳ್ಳಿ

೫೯) ಬೆಣ್ಣೆಕಲ್ಲು

೬೦) ಬೆಳಗಲ್ಲು

೬೧) ಬೇವಿನಹಳ್ಳಿ

೬೨) ಬೊಮ್ಮನಹಾಳ

೬೩) ಬೊಮ್ಮಕುಂಟ

೬೪) ಬ್ಯಾಲಚಿಂತ

೬೫) ಬೈಲೂರು

೬೬) ಬೈರದೇವನಹಳ್ಳಿ

೬೭) ಮಲ್ಲಾಪುರ.ಎಸ್.

೬೮) ಮುಸ್ತಗಟ್ಟ

೬೯) ಮುಸುಡಿಪುರ

೭೦) ಮಿಂಚೇರಿ

೭೧) ಮೀನಳ್ಳಿ

೭೨) ಮುಂಡರಗಿ

೭೩) ಮೋಕ

೭೪) ಮೋಕಾಗೋನಾಳು

೭೫) ಯರ್ರಂಗಳಿಗಿ

೭೬) ಯಾಳಪಿ

೭೭) ಯಾಳಪಿಕಗ್ಗಲ್ಲು

೭೮) ಯಮ್ಮಿಗನೂರು

೭೯) ಯತ್ತಿನಬೂದಿಹಾಳ

೮೦) ಯರ್ರಗುಡಿ

೮೧) ರಾಯಾಪುರಂ

೮೨) ರೂಪನಗುಡಿ

೮೩) ಲಕ್ಷ್ಮಿಪುರ

೮೪) ಲಿಂಗದೇವನಹಳ್ಳಿ

೮೫) ಒಡ್ಡರಹಟ್ಟಿ

೮೬) ವೀರಾಪುರ.ಎಚ್.

೮೭) ವಣೆನೂರು

೮೮) ವೇಣಿವೀರಾಪುರ

೮೯) ಶ್ರೀವಾರ (ಸಿರಿವಾರ)

೯೦) ಶಂಕರಬಂಡ

೯೧) ಸಂಗನಕಲ್ಲು

೯೨) ಸಂಜೀವರಾಯನಕೋಟೆ

೯೩) ಸಿದ್ದಮ್ಮನಹಳ್ಳಿ

೯೪) ಸಿರಿಗಿನಮೊಳ

೯೫) ಸಿದ್ದರಗುಡ್ಡ

೯೬) ಸಿಂಗದೇವನಹಳ್ಳಿ

೯೭) ಸಿಂದಗೇರಿ

೯೮) ಸಿಂದವಾಳ

೯೯) ಸೋಮಲಾಪುರ
೧೦೦)ಸೋಮಸಮುದ್ರ
೧೦೧)ಹದ್ದಿನಗುಂಡು
೧೦೨)ಹರಗಿನದೋಣಿ
೧೦೩)ಹಳಕುಂದಿ
೧೦೪)ಹಂದಿಹಾಳ
೧೦೫)ಹಿರೇಹಡಲಗಿ
೧೦೬)ಹೊನ್ನಹಳ್ಳಿ

ಸಿರಗುಪ್ಪ ತಾಲ್ಲೂಕಿನ ಸ್ಥಳನಾಮಗಳು:

೧) ಅಕ್ಕತಂಗಿಯರಹಾಳ (ಎ.ಕೆ.ಹಳ್ಳಿ)
೨) ಅಗಸನೂರು
೩) ಅರಳಿಗನೂರು
೪) ಅಲಬನೂರು
೫) ಇಟ್ಟಿಗಿಹಾಳ
೬) ಇಬ್ರಾಂಹಿಂಪುರ
೭) ಉತ್ತನಪುರ
೮) ಉದೇಗೋಳ(ಊದಾಗೋಳ)
೯) ಉಪ್ಪರಹೊಸಹಳ್ಳಿ
೧೦) ಊಳೂರು
೧೧) ಕಲ್ಲುಕುಟ್ಟಿಗನಹಳ್ಳಿ
೧೨) ಕರ್ಚಿಗನೂರು
೧೩) ಕರೂರು
೧೪) ಕುಡುದರಹಾಳ
೧೫) ಕುರುವಳ್ಳಿ
೧೬) ಕುರಿಗನೂರು
೧೭) ಕೆಸರಕೊಂಡಿ
೧೮) ಕಂಚಗಾರಬೆಳಗಲ್ಲು (ಕೆ.ಬೆಳಗಲ್ಲು)
೧೯) ಕೆಂಚನಗುಡ್ಡ
೨೦) ಕೊಟ್ಟಾಲಚಿಂತ
೨೧) ಕೋಟಹಾಳು
೨೨) ಕೋಟಿಹಾಳಸೂಗೂರು
೨೩) ಕೊಂಚಗೇರಿ
೨೪) ಗಜ್ಜಿನಗನಹಾಳು
೨೫) ಗುಂಡಿಗನೂರು
೨೬) ಗುಬ್ಬಿಹಾಳು
೨೭) ಗೋಸಬಾಳು
೨೮) ಚಿಕ್ಕಬಳ್ಳಾರಿ
೨೯) ಚಣಕನೂರು
೩೦) ತಸಲಕೂಡ್ಲೂರು
೩೧) ತಾಳೂರು
೩೨) ತೆಕ್ಕಲಕೋಟೆ
೩೩) ತೊಂಡೇಹಾಳೂ
೩೪) ದರೂರು
೩೫) ದಾಸಪುರ
೩೬) ದೇವಲಾಪುರ
೩೭) ದೇಸಾನೂರು
೩೮) ನಡುವಿ

೩೯) ನಾಗರಹಾಳು
೪೦) ನಾಗಲಾಪುರ
೪೧) ನಾಡಂಗ
೪೨) ನಿಟ್ಟೂರು
೪೩) ಪೊಪ್ಪನಹಾಳು
೪೪) ಬಸರಳ್ಳಿ
೪೫) ಬಲಕುಂದಿ
೪೬) ಬಂದ್ರಾಹಾಳು
೪೭) ಬಾಗವಾಡಿ
೪೮) ಬ್ಯಾಗರಾಮದಿಣ್ಣೆ
೪೯) ಬೀರಳ್ಳಿ
೫೦) ಬೂದಿಗುಪ್ಪ
೫೧) ಬೇವಿನಮರದಸೂಗೂರು
೫೨) ಬೊಗ್ಗೂರು
೫೩) ಬೈರಾಪುರ
೫೪) ಬೊಮ್ಮಲಾಪುರ
೫೫) ಮಂಜನಹಾಳು
೫೬) ಮಾಟೂರು
೫೭) ಮಾನೂರು
೫೮) ಮಾನೂರು ಸೂಗೂರು
೫೯) ಮಾಲಾಪುರ
೬೦) ಮಿಟ್ಟಸೂಗೂರು
೬೧) ಮುದನೂರು
೬೨) ಮೈಲಾಪುರ
೬೩) ಮೋಟಾರುದಿಣ್ಣೆ
೬೪) ರಾವ್ಯಾಳು
೬೫) ರಾಮಪುರ.ಟಿ.
೬೬) ರಾರಾವಿ
೬೭) ವತ್ತುಮುರವಣಿ
೬೮) ವೆಂಕಟಾಪುರ
೬೯) ಶಾನವಾಸಪುರ
೭೦) ಸಾಲಿಗನೂರು
೭೧) ಸಿದ್ದರಗದ್ದೆ
೭೨) ಸಿರಗುಪ್ಪ
೭೩) ಸಿರಿಗೇರಿ
೭೪) ಹಾಗಲೂರು
೭೫) ಹಚ್ಚೊಳ್ಳಿ
೭೬) ಹಳೇತೋಟ (ತೆ.ಹೋ)
೭೭) ಹಳೇತೋಟ (ಸಿ.ಹೋ)
೭೮) ಹಾಗಲೂರುಹೊಸಳ್ಳಿ
೭೯) ಹಾವಿನಹಾಳು
೮೦) ಹಾಳುಮುರವಳ್ಳಿ
೮೧) ಹಿರೇಹಾಳು
೮೨) ಕುಡುತನೂರು
೮೩) ಹಿರೇಕಲ್ಲು
೮೪) ಹೊನ್ನಾರಹಳ್ಳಿ

ಸಂಡೂರು ತಾಲ್ಲೂಕಿನ ಸ್ಥಳನಾಮಗಳು:

೧) ಅಗ್ರಹಾರ
೨) ಅನಂತಪುರ
೩) ಅಪ್ಪಲಪುರ
೪) ಅಯ್ಯನಳ್ಳಿ
೫) ಅಂಕಮನಳ್ಳಿ
೬) ಹಾವಿನಮಡುಗು
೭) ಹುಬ್ಬಳಗುಂಡಿ
೮) ಓಬಳಾಪುರ ಎಸ್.
೯) ಎಮ್ಮಿಹಟ್ಟಿ
೧೦) ಕನಕಪುರ
೧೧) ಕಲ್ಲಹಳ್ಳಿ
೧೨) ಕಲಿಂಗೇರಿ
೧೩) ಕೃಷ್ಣಾನಗರ
೧೪) ಕಾರ್ತಿಕೇಶ್ವರ
೧೫) ಕುರಿಕುಪ್ಪೆ
೧೬) ಕೋಡಾಳ
೧೭) ಗಂಗಲಾಪುರ ಎಸ್.
೧೮) ಗುಂಡ್ಲಹಳ್ಳಿ
೧೯) ಗೊಲ್ಲರಹಳ್ಳಿ
೨೦) ಗೊಲ್ಲಲಿಂಗಮ್ಮನಹಳ್ಳಿ
೨೧) ಗೌರೀಪುರ(ತೋ.ಹೋಬಳಿ)
೨೨) ಗೌರೀಪುರ(ಸೋ.ಹೋಬಳಿ)
೨೩) ಚಿಕ್ಕನಂತಪುರ
೨೪) ಚಿಕ್ಕಕೆರಿಯಾಗಿನಹಳ್ಳಿ
೨೫) ಚೋರನೂರು
೨೬) ಜಿನಗಳ್ಳಿ
೨೭) ಜೋಗ
೨೮) ಜೋಡಿಕರಿನಾಯಕನಹಳ್ಳಿ
೨೯) ಜೋಡಿಬೊಮ್ಮನಹಳ್ಳಿ
೩೦) ತಾರಾನಗರ
೩೧) ತಾಳೂರು
೩೨) ತಿಪ್ಪನಮರಡಿ
೩೩) ತಿಮ್ಮಪ್ಪನಹಳ್ಳಿ
೩೪) ತಿಮಮ್ಲಾಪುರ
೩೫) ತುಮತಿ
೩೬) ತುಣಸೀಗೆರೆ
೩೭) ತೋರಣಗಲ್ಲು
೩೮) ತೈದಿಗೆಹಾಳ
೩೯) ದರೋಜಿ
೪೦) ದೇವಗಿರಿ
೪೧) ದೇವರಬೂದೇನಹಳ್ಳಿ
೪೨) ದೇವರಮಲ್ಲಾಪುರ
೪೩) ದೋಣಿಮಲೆ
೪೪) ದೌಲತಾಪುರ
೪೫) ಧರ್ಮಪುರ
೪೬) ನರಸಿಂಗಪುರ
೪೭) ನಾಗಲಾಪುರ
೪೮) ನಿಡುಗುರ್ತಿ
೪೯) ಬನ್ನಿಹಟ್ಟಿ
೫೦) ಬಸಾಪುರ
೫೧) ಬಸಾಪುರ.ಎಸ್.
೫೨) ಬಂಡ್ರಿ

೫೩) ಭುಜಂಗನಗರ
೫೪) ಬೊಮ್ಮಗಟ್ಟ
೫೫) ಮರುತಲ
೫೬) ಮಲ್ಲಾಪುರ
೫೭) ಮಾಲಾಪುರ
೫೮) ಮುರಾರಿಪುರ
೫೯) ಮುಸನಾಯಕನಹಳ್ಳಿ
೬೦) ಮೆಟ್ರಿಕಿ
೬೧) ಎರಬನಹಳ್ಳಿ
೬೨) ಎರ್ರಯ್ಯನಹಳ್ಳಿ
೬೩) ಯಶವಂತಪುರ
೬೪) ರಣಜಿತಪುರ
೬೫) ರಾಜಾಪುರ
೬೬) ರಾಧಾನಗರ
೬೭) ರಾಮಗಢ
೬೮) ರಾಮನಮಲೆ
೬೯) ರಾಮಾಪುರ
೭೦) ರಾಮಸಾಗರ
೭೧) ಲಕ್ಕಲಹಳ್ಳಿ
೭೨) ಲಕ್ಷ್ಮೀಪುರ
೭೩) ಲಿಂಗದಹಳ್ಳಿ
೭೪) ವಡ್ಡು
೭೫) ವಿಠಲಾಪುರ
೭೬) ಶಂಕರಪುರ
೭೭) ಸಾಲಿಯಪ್ಪನಹಳ್ಳಿ
೭೮) ಸ್ವಾಮಿಮಲೆ
೭೯) ಸಿದ್ದಾಪುರ
೮೦) ಜಯಸಿಂಗಪುರ
೮೧) ಸುಶೀಲನಗರ
೮೨) ಸೊಂಡೂರು
೮೩) ಸೋಮಲಾಪುರ
೮೪) ಸೋವೇನಹಳ್ಳಿ
೮೫) ಹನುಮನಳ್ಳಿ
೮೬) ಹಿರೇಕೆರೆಮಾಗಿನಹಳ್ಳಿ
೮೭) ಹುಲಿಕುಂಟೆ(ಚೋ.ಹೋಬಳಿ)
88) ಹುಲಿಕುಂಟೆ(ಸೋ.ಹೋಬಳಿ)

ಹಡಗಲಿ ತಾಲ್ಲೂಕಿನ ಸ್ಥಳನಾಮಗಳು :

೧) ಅಡವಿಮಲ್ಲನಕೆರೆ
೨) ಅಯ್ಯನಹಳ್ಳಿ.ಕೆ
೩) ಇಟಗಿ
೪) ಉತ್ತಂಗಿ
೫) ಕಣಹಲ್ಲಿ
೬) ಕತ್ತೆಬೆನ್ನೂರು
೭) ಕಳವಿ
೮) ಕುರುವತ್ತಿ
೯) ಕೋಮನೇರಗಟ್ಟೆ
೧೦) ಕೋಗಳಿ
೧೧) ಕೋತಿಹಾಳು
೧೨) ತಮ್ಮಲಾಪುರ
೧೩) ತುಂಬಿನಕೆರೆ
೧೪) ದಾಸನಹಳ್ಳಿ

೧೫) ದಾಸರಹಳ್ಳಿ
೧೬) ದೇವಗೊಂಡನಹಳ್ಳಿ
೧೭) ದೊಂಬರಹಳ್ಳಿ
೧೮) ನಂದಿಹಳ್ಳಿ
೧೯) ಸಾಗತಿಬಸಾಪುರ
೨೦) ಸೋವರಿ
೨೧) ಮೋತಲಗಟ್ಟ
೨೨) ಬ್ಯಾಲಹುಣಸಿ
೨೩) ಬೀರಬ್ಬಿ
೨೪) ಬೂದನೂರ
೨೫) ಮಣಿಹಳ್ಳಿ
೨೬) ಮುನ್ನೇರಮೊಸಲವಾಡ
೨೭) ಮಹಾಜನಹಳ್ಳಿ
೨೮) ಮಕರಬ್ಬಿ
೨೯) ಮಾಗಳ
೩೦) ಮುದೇನೂರು
೩೧) ಮುಸುಗಿಕಲ್ಲಳ್ಳಿ
೩೨) ಮೈಲಾರ
೩೩) ರಂಗಾಪುರ
೩೪) ವರಕನಹಳ್ಳಿ
೩೫) ವ್ಯಾಸವಲ್ಲಾಪುರ
೩೬) ವೀರಾಪುರ
೩೭) ಶಿವಲಿಂಗನಹಳ್ಳಿ
೩೮) ಸೋಗಿ
೩೯) ಸೋವಿನಹಳ್ಳಿ
೪೦) ಹಕ್ಕುಂಡಿ
೪೧) ಹಗನೂರು
೪೨) ಹಗಲೂರು
೪೩) ಹಡಗಲಿ
೪೪) ಹರವಿ
೪೫) ಹರವಿಬಸಾಪುರ
೪೬) ಹ್ಯಾರಡ
೪೭) ಹಿರೇಕೊಳಚಿ
೪೮) ಹಿರೇಬನ್ನಿಮಟ್ಟ
೪೯) ಹಿರೇಹಡಗಲಿ
೫೦) ಹೊಳಗುಂದಿ
೫೧) ಹೊಳಲು
೫೨) ಪುರ

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಸ್ಥಳನಾಮಗಳು :

೧) ಅಲಬೂರು
೨) ಅಂಕಸಮುದ್ರ
೩) ಅಂಬಳಿ
೪) ಆನಂದದೇವನಹಳ್ಳಿ
೫) ಅನೇಕಲ್
೬) ಉಪ್ಪಾರಗಟ್ಟ
೭) ಉಳುವತ್ತಿ
೮) ಓಬಳಾಪುರ
೯) ಏಣಗಿ
೧೦) ಏಣಗಿಬಸಾಪುರ

೧೧) ಕಡ್ಲಬಾಳ
೧೨) ಕಣ್ಣಿಹಳ್ಳಿ
೧೩) ಕಲ್ಲಳ್ಳಿ
೧೪) ಕಿತ್ತನೂರು
೧೫) ಕುಡುತಿನಿಮಗ್ಗಿ
೧೬) ಕೆಂಚನಬಂಡಿ
೧೭) ಕೋಗಳಿ
೧೮) ಕೋಡಿಹಾಳ.ಕೆ
೧೯) ಕೋರೆ ಎಸ್.ಡಿ.
೨೦) ಗದ್ದಿಕೇರಿ
೨೧) ಗದ್ದಿಕೆರೆಕೋಡಿಹಳ್ಳಿ
೨೨) ಗುಳೇದಹಾಳ
೨೩) ಚಿಕ್ಕಸೋಬತಿ
೨೪) ಚಿಂತ್ರಪಲ್ಲಿ
೨೫) ತಂಬ್ರಹಳ್ಳಿ
೨೬) ದಸ್ಮಾಪುರ
೨೭) ನೆಲ್ಲುಕುದುರಿ
೨೮) ಪಿಂಜಾರಹೆಗಡಾಳ
೨೯) ಬನ್ನಿಕಲ್ಲು
೩೦) ಬನ್ನಿಗೊಳ
೩೧) ಬಸರಕೋಡು
೩೨) ಬಂಕಾಪುರ
೩೩) ಬಾಚುಕೊಂಡನಹಳ್ಳಿ
೩೪) ಬೆಣಕಲ್ಲು
೩೫) ಬೈಲಹನ್ಸಿ
೩೬) ಬೈಸಿಗದೇರಿ
೩೭) ಮಾದೂರು
೩೮) ಮಾನವಿ
೩೯) ಮುದಕೂರು
೪೦) ಮುದ್ಲಾಪುರ
೪೧) ಮರಿಬಿಹಾಳ
೪೨) ಮೋರಗೇರಿ
೪೩) ರಾಮೇಶ್ವರಬಂಡಿ
೪೪) ಲಡಕನಬಾವಿ
೪೫) ವರದಾಪುರ
೪೬) ವರಲಳ್ಳಿ
೪೭) ವ್ಯಾಸಪುರ
೪೮) ಸೀಗೇಹಳ್ಳಿ
೪೯) ಸೊನ್ನ
೫೦) ಕ್ಯಾದಗಿಹಳ್ಳಿ
೫೧) ಬೊಮ್ಮನಹಳ್ಳಿ
೫೨) ಹಗರಿಬೊಮ್ಮನಹಳ್ಳಿ
೫೩) ಹನ್ಸಿ
೫೪) ಹನುಮಗೊಂಡನಹಳ್ಳಿ
೫೫) ಹಲಗಾಪುರ
೫೬) ಹಂಪಸಾಗರ
೫೭) ಹಂಪಾಪಟ್ಟಣ
೫೮) ಹಿರೇಗೊಂಡನಹಳ್ಳಿ
೫೯) ಹಸಕೇರಿ

ಹೊಸಪೇಟೆ ತಾಲ್ಲೂಕಿನ ಸ್ಥಳನಾಮಗಳು:

೧) ಅನಂತಶಯನಗುಡಿ
೨) ಅಮರಾವತಿ
೩) ಅಯ್ಯನಹಳ್ಳಿ
೪) ಇಟಗಿ
೫) ಅರಳೇಹಳ್ಳಿ
೬) ಇಂಗಳಗಿ
೭) ಉಪ್ಪಾರಹಳ್ಳಿ
೮) ಕಡ್ಡೀರಾಮಪುರ
೯) ಕಣವೇತಿಮ್ಮಾಪುರ
೧೦) ಕಾಮಲಾಪುರ
೧೧) ಕಲ್ಲಗಟ್ಟ
೧೨) ಕಲ್ಲಳ್ಳಿ
೧೩) ಕೃಷ್ಣಾಪುರ
೧೪) ಕಂಪ್ಲಿ
೧೫) ಕಾರಿಗನೂರು
೧೬) ಕೋಟಗಿಹಾಳು
೧೭) ಕೊಂಡನಾಯಕನಹಳ್ಳಿ
೧೮) ಗರ್ಗ
೧೯) ಗಾದಿಗನೂರು
೨೦) ಗುಡಿಓಬಳಾಪುರ
೨೧) ಗುಂಡ್ಲವಡ್ಡಗೀರಿ
೨೨) ಗೋನಹಾಳು
೨೩) ಗೊಲ್ಲರಳ್ಳಿ
೨೪) ಚಿಕ್ಕಜಯಗಾನೂರು
೨೫) ಚಿತ್ತವಾಡಗಿ
೨೬) ಚಿಲಕನಹಳ್ಳಿ
೨೭) ಜಂಬುನಾಥನಹಳ್ಳಿ
೨೮) ಜೀರಿಗನೂರು
೨೯) ಜೌಕು
೩೦) ತಿಮ್ಮಲಾಪುರ
೩೧) ತೆಲುಗುಬಾಳು
೩೨) ಡಣಾಯಕನಕೆರೆ
೩೩) ಡಣಾಪುರ
೩೪) ದಾನಾಪುರ
೩೫) ದೇವಲಾಪುರ
೩೬) ದೇವಸಮುದ್ರ
೩೭) ಧರ್ಮಸಾಗರ
೩೮) ನಂದೀಬಂಡು
೩೯) ನಾಗಲಾಪುರ
೪೦) ನಾಗೇನಹಳ್ಳಿ
೪೧) ನಿಂಬಾಪುರ
೪೨) ಪಾಪೀನಾಯಕನಹಳ್ಳಿ
೪೩) ಬಸವನದುರ್ಗ
೪೪) ಬಸಾಪುರ
೪೫) ಬುಕ್ಕಸಾಗರ
೪೬) ಬೆಳಗೋಡು
೪೭) ಬೆಳಗೋಡುಹಾಳು
೪೮) ಬೇವಿನವಡ್ಡಿಗೆರೆ

೪೯) ಬೇವಿನಹಳ್ಳಿ
೫೦) ಬೈಲಕುಂದಿ
೫೧) ಮರಿಯಮ್ಮನಹಳ್ಳಿ
೫೨) ಮಲಪನಕುಡಿ
೫೩) ಮಾವಿನಹಳ್ಳಿ
೫೪) ಮುದ್ದಾಪುರ–೧
೫೫) ಮುದ್ದಾಪುರ–೨
೫೬) ಮುದ್ದಲಾಪುರ
೫೭) ಮೆಟ್ರಿ
೫೮) ರಾಜಾಪುರ
೫೯) ರಾಮಸಾಗರ
೬೦) ವಡ್ಡರಹಳ್ಳಿ
೬೧) ವಂಟಿಗೋಡು
೬೨) ವೆಂಕಟಾಪುರ (ಕ.ಹೋಬಳಿ)
೬೩) ವೆಂಕಟಾಪುರ(ಮ.ಹೋಬಳಿ)
೬೪) ಸಣ್ಣಾಪುರ
೬೫) ಸಂಕಲಾಪುರ(ಕಂ.ಹೋಬಳಿ)
೬೬) ಸಂಕಲಾಪುರ(ಹೊ.ಹೋಬಳಿ)
೬೭) ಸಿಂಗನಾಥನಹಳ್ಳಿ
೬೮) ಸುಗ್ಗಿನಹಳ್ಳಿ
೬೯) ಸೋಮಲಾಪುರ
೭೦) ಹರಪನಹಳ್ಳಿ
೭೧) ಹಂಪದೇವನಹಳ್ಳಿ
೭೨) ಹಂಪಿ
೭೩) ಹಿರೇಜಾಯಗನೂರು
೭೪) ಹೊನ್ನಹಳ್ಳಿ
೭೫) ಹೊಸಪೇಟೆ
೭೬) ಹೊಸೂರು

ಗ್ರಂಥಸೂಚಿ

೧. ಡಾ:ಗೋಪಾಲಕೃಷ್ಣ ವಿ. **ಸ್ಥಳನಾಮದ ಅಧ್ಯಯನಗಳು**, ವಿದ್ಯಾಗಿರಿ ಪ್ರಕಸನ, ಕೋಲರ ೧೯೮೭

೨. ಗೋಪಾಲಕೃಷ್ಣ ವಿ. **ಕೋಲಾರ ಜಿಲ್ಲೆಯ ಸ್ಥಳನಾಮಗಳ ಸಾಮಾಜೋ, ಭಾಷಿಕ ಅಧ್ಯಯನ** ಪಿಎಚ್.ಡಿ, ಬೆಂಗಳೂರು ವಿಶ್ವವಿದ್ಯಾಲಯ, ೧೯೮೯ ಅ.ಪ್ರ

೩. ಚಿದಾನಂದಮೂರ್ತಿ ಎಂ. **ಹೊಸತು, ಹೊಸತು** ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩

೪. ಚಿದಾನಂದಮೂರ್ತಿ ಎಂ. **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪ್ರಸಾರಂಗ, ಮೈಸೂರು ವಿಶ್ವವಿದ್ಯಾಲಯ, ೧೯೯೬

೫. ಚಿದಾನಂದಮೂರ್ತಿ ಎಂ. **ವಾಗರ್ಥ**, ಬಾಪ್ಕೊ ಪ್ರಕಾಸನ, ಬೆಂಗಳೂರು ೧೯೮೧

೬. ಚಿದಾನಂದಮೂರ್ತಿ ಎಂ. **ಸಂಶೋಧನಾ ತರಂಗ–೨**, ಬೆಂಗಳೂರು ವಿಶ್ವವಿದ್ಯಾಲಯ, ೧೯೭೦

೭. ಕರ್ನಾಟಕದ **ಗ್ರಾಮಸೂಚಿ**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೫

೮. ಕೃಷ್ಣಭಟ್ಟ ಸೇಡಿಯಾಪು, **ಕೆಲವು ದೇಶನಾಮಗಳು**, ಸಾಹಿತ್ಯ ಸಂಘ ಮಣಿಪಾ, ೧೯೭೫

೯. ಕಾಂತರಾಜ, **ಅರಸಿಕೆರೆ ತಾಲೂಕಿನ ಸ್ಥಳನಾಮಗಳು** ಪಿಎಚ್.ಡಿ ಅ.ಪ್ರ

೧೦. ಖಂಡೋಬ ಪಿ.ಕೆ. **ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ**, ಪಿಎಚ್.ಡಿ ತೇಜಸಿಂಗ್ ರಾಠೋಡ್ ಮೋಮೊರಿಯಲ್ ಟ್ರಸ್ಟ್, ಗುಲ್ಬರ್ಗ, ೧೯೯೧

೧೧. ಗಂಗಾಧರಯ್ಯ ಎಸ್.ಎಂ. **ಶಂಬಾ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ**, ಪಿಎಚ್.ಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೦

೧೨. ಜವರೇಗೌಡ ದೇ. **ಬೆರಕೆಸೊಪ್ಪು**, ಸುರುಚಿ ಪ್ರಕಾಸನ, ಮೈಸೂರು ೧೯೭೧

೧೩. ಜಗದೀಶ ಮಠದ ಕೈಪಿಯತ್ತುಗಳಲ್ಲಿ ನಿರೂಪಿತವಾದ **ಸ್ಥಳನಾಮಗಳು**, (ಎಂಫಿಲ್) ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫ ಅ.ಪ್ರ

೧೪. ಜವರೇಗೌಡ ದೇ. **ಸ್ಥಳನಾಮ ವ್ಯಾಸಂಗ**, ಸಹ್ಯಾದ್ರಿ ಪ್ರಕಾಶನ, ಮೈಸೂರು ೧೯೯೦

೧೫. ಜಾರ್ಜ ಕೆ.ಎಂ. **ಬೀದರ್ ಜಿಲ್ಲೆಯ ಸ್ಥಳನಾಮಗಳು** ಪಿಎಚ್.ಡಿ ಅ.ಪ್ರ

೧೬. ದುರ್ಗದಾಸ ಕೆ.ಅರ್. **ಬಳ್ಳಾರಿ ಜಿಲ್ಲೆಯ ಬಯಲಾಟಗಳು,** ಸಮತಾ ಪ್ರಕಾಶನ, ಬೆಳಗಾವಿ ೧೯೬೬

೧೭. ನಂಜಯ್ಯ ಎಂ. **ಚಾಮರಾಜನಗರ ತಾಲೂಕಿನ ಸ್ಥಳನಾಮಗಳು,** ಪಿಎಚ್.ಡಿ ಮೈಸೂರು ವಿಶ್ವವಿದ್ಯಾಲಯ ೨೦೦೦ ಅ.ಪ್ರ

೧೮. ನಾಗಯ್ಯ ಜೆ.ಎಂ. **ಬಳ್ಳಾರಿ ಜಿಲ್ಲೆಯ ಶಾಸನಗಳು,** ಗುಲ್ಬರ್ಗ ವಿಶ್ವವಿದ್ಯಲಯ ೧೯೯೨

೧೯. ನಾಗರಾಜಯ್ಯ ಹಂಪ. **ಚಂದ್ರಕೊಡೆ,** ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೭

೨೦. ನಾರಾಯಣ ಕೆ.ವಿ. **ದ್ವಿಭಾಷಿಕತೆ** ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯

೨೧. ನೇಗಿನಹಾಳ ಎಂ.ಬಿ. **ನೇಗಿನಹಾಳ ಪ್ರಬಂಧಗಳು,** ಕನ್ನಡ ವಿಶ್ವವಿದ್ಯಾಲ, ಹಂಪಿ ೧೯೯೯

೨೨. ಪಾಂಡುರಂಗಬಾಬು ಡಿ. **ಆದಿಜಾಂಬವ ಕನ್ನಡ,** ಪಿಎಚ್.ಡಿ ಮೈಸೂರು ವಿಶ್ವವಿದ್ಯಾಲಯ, ೧೯೯೫ ಅ.ಪ್ರ

೨೩. ಪುರುಷೊತ್ತಮ ಬಿಳಿಮಲೆ, **ಕೊರಗರ ಸಂಸ್ಕೃತಿ,** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೨೪. ಪುರುಷೋತ್ತಮ ಬಿಳಿಮಲೆ, **ಮೆಕೆಂಜಿ ಕೈಫಿಯತ್ತುಗಳು,** ಮಂಗಳೂರು ವಿಶ್ವವಿದ್ಯಾಲಯ ೧೯೮೫

೨೪. ಬಸವರಾಜ ಮಲಶೆಟ್ಟಿ, **ಬಳ್ಳಾರಿ ಜಿಲ್ಲೆಯ ಜನಪದ ಕಥೆಗಳು,** ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೫

೨೫. ಬೊಮ್ಮೇಗೌಡ, **ಚನ್ನಪಟ್ಟಣ ತಾಲೂಕಿನ ಸ್ಥಳನಾಮಗಳು,** ಎಂ.ಫಿಲ್, ಬೆಂಗಳೂರು ವಿಶ್ವವಿದ್ಯಾಲಯ ೧೯೯೮

೨೬. ಭಾಗ್ಯಲಕ್ಷ್ಮಿ ಎಂ. **ಬಳ್ಳಾರಿ ಪರಿಸರದ ಕನ್ನಡ-ತೆಲುಗು ದ್ವಿಭಾಷಿಕತೆ-ಸಮಾಜೋ ಭಾಷಿಕ ಅಧ್ಯಯನ** ಪಿಎಚ್.ಡಿ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೧ ಅ.ಪ್ರ

೨೭. ಮಹದೇವಯ್ಯ ಪಿ. **ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ,** ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೯

೨೮. ಮಲ್ಲೇಪುರಂ ಜಿ. ವೆಂಕಟೇಶ (ಸಂ) **ಶಂಬಾಕೃತಿ ಸಮೀಕ್ಷೆ** ಬಿ.ಎಂ.ಶ್ರೀ ಸ್ಮರಕ ಪ್ರತಿಷ್ಠಾನ ಬೆಂಗಳೂರು ೧೯೯೨.

೨೯. ಮಲ್ಲೇಪುರಂ ಜಿ.ವೆಂಕಟೇಶ **ಶಂಬಾಜೋಷಿ,** ಭಾರತೀಯ ಸಾಹಿತ್ಯ ಅಕಾಡೆಮಿ ೨೦೦೧

೩೦. ರಘುಪತಿಭಟ್ಟ ಕೆಮ್ತೂರು, **ತುಳುನಾಡಿನ ಸ್ಥಳನಾಮಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೧

೩೧. ರಘುಪತಿಭಟ್ಟ ಕೆಮ್ತೂರು, **ಹೆಸರಲ್ಲೇನಿದೆ**, ಚೇತನಾ ಪ್ರಿಂಟರ್ಸ್ ಬೆಂಗಳೂರು ೧೯೮೯

೩೨. ರಮೇಶ ಬೆ.ಗೋ. **ಜನಪ್ರಿಯ ಮುನ್ನೂರು ಸ್ಥಳನಾಮಗಳು**, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು ೧೯೯೫

೩೩. ರಹಮತ್ ತರಿಕೇರೆ, **ಬಹುಭಾಷಿಕತೆ**, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೯

೩೪. ರಾಜಣ್ಣ ಬಿ.ವಿ. **ಕನ್ನಡ ಸಂಸ್ಕೃತಿ: ಶಂಬಾ ಅವರ ಆಲೋಚನೆಗಳು** ಎಂ.ಫಿಲ್ ಕನ್ನಡ ವಿಶ್ವವಿದ್ಯಲಯ ಹಂಪಿ ೧೯೯೭ ಅ.ಪ್ರ

೩೫. ಲಕ್ಕಪ್ಪಗೌಡ ಎಚ್.ಜೆ. **ಮಲೆನಾಡ ಜಾನಪದ** ಮೈಸೂರು ವಿಶ್ವವಿದ್ಯಾಲಯ ೧೯೮೩

೩೬. ಲಕ್ಷ್ಮಣ ತೆಲಗಾವಿ (ಸಂ) **ಸಂಶೋಧನೆ**, ಚಿ.ಮೂ. ಗೌರವ ಸಂಪುಟ. ಬೆಂಗಳೂರು ೧೯೯೧

೩೭. ಲಲಿತ ಎ.ಸಿ. **ಕಾಡು ಕುರುಬರ ಮತ್ತು ಜೇನು ಕುರುಬರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೩

೩೮. ವಿಶ್ವನಾಥ, **ಸಕಲೇಶ್ವರ ಪರಿಸರದ ಸ್ಥಳನಾಮಗಳು**, ದೇವಿ ಪ್ರಕಾಶನ, ಮೈಸೂರು ೧೯೯೬

೩೯. ವಿಶ್ವನಾಥ, **ಸ್ಥಳನಾಮಗಳು**, ಸಂವಹನ ಪ್ರಕಾಶನ ಮೈಸೂರು ೧೯೯೫

೪೦. ವಿಶ್ವನಾಥ, **ಗ್ರಾಮನಾಮಗಳ ಸಾಂಸ್ಕೃತಿಕ ಪರಿವೇಷ**, ದೇವಿ ಪ್ರಕಾಶನ ಮೈಸೂರು ೨೦೦೦

೪೧. ವಿನಾಯಕ ಜೋಶಿ, **ಗುಲ್ಬರ್ಗ ಜಿಲ್ಲೆಯ ಸ್ಥಳನಾಮಗಳು**, ಪಿಎಚ್.ಡಿ ಮುಂಬೈವಿಶ್ವವಿದ್ಯಾಲಯ

೪೨. ವೀರಭದ್ರಶರ್ಮ ಕೆ.ಎಂ. **ಬಳ್ಳಾರಿ ಜಿಲ್ಲೆಯ ಸ್ಥಳನಾಮಗಳು**. ಪಿಎಚ್.ಡಿ ಗುಲ್ಬರ್ಗ ವಿಶ್ವವಿದ್ಯಾಲಯ, ೧೯೯೬ ಅ.ಪ್ರ

೪೩. ವೈಜನಾಥ ಭಂಡೆ, **ಬೀದರ್ ಜಿಲ್ಲೆಯ ಸ್ಥಳನಾಮಗಳು**, ಪಿಎಚ್,ಡಿ ಗುಲ್ಬರ್ಗ ವಿಶ್ವವಿದ್ಯಾಲಯ ೧೯೯೦ ಅ.ಪ್ರ

೪೪. ಶಂಕರ್‌ಜೋಗನ್, **ಗ್ರಾಮಸಮಾಜ**, ಜೀವ ಪ್ರಕಾಶನ ಮೈಸೂರು ೧೯೫೫

೪೫. ಶಂಬಾಜೋಶಿ **ಕಣ್ಮರೆಯಾದ ಕನ್ನಡ**, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ ೧೯೩೩

೪೬. ಶಂಬಾಜೋಶಿ, **ಎಡೆಗಳು ಹೇಳುವ ಕಂನಡ ಕಥೆ**, ಮಾಧವ ಬಲ್ಲಾಳ ಬಂದುಗಳು, ಧಾರವಾಡ ೧೯೪೭

೪೭. ಶಂಬಾಜೋಶಿ, **ಕಂನುಡಿಯ ಜೀವಳ, ಸಮಾಜ ಪುಸ್ತಕಾಲಯ**, ಧಾರವಾಡ ೧೯೭೩

೪೮. ಶಂಕರ್ ಚಕ್ಕೆರೆ, **ಗೊರವರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಮಗಳೂರು ೧೯೯೩

೪೯. ಶೇಷಾದ್ರಿ ಬಿ. (ಸಂ) **ಬಳ್ಳಾರಿ ಜಿಲ್ಲೆಯ ಸ್ವತಂತ್ರ್ಯ ಹೋರಾಟ**, ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೮

೫೦. ಶೇಷಶಾಸ್ತ್ರಿ ಆರ್. **ಕರ್ನಾಟಕದ ವೀರಗಲ್ಲು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೮೨

೫೧. ಸೋಮಶೇಖರ ಇಮ್ರಾಪುರ, **ಜನಪದ ಒಗಟುಗಳು**, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೯

೫೨. ಸೋಮಶೇಖರ ಗೌಡ, **ಭಾಷೆ ರಚನೆ ಮತ್ತು ಬಳಕೆ**, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಲೆ, ಮೈಸೂರು ೨೦೦೦

೫೩. ಹರಿಲಾಲ್ ಕೆ, ಪವಾರ, **ಹೆಳವರ ಸಂಸ್ಕೃತಿ**, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೯೩

೫೪. ಹೆರಂಜೆ ಗೋಪಾಲಕೃಷ್ಣ (ಸಂ) **ಗೋವಿಂದ ಪೈ ಸಂಶೋಧನ ಸಂಪುಟ**, ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ ೧೯೯೫

ನಿಘಂಟುಗಳು

ಕನ್ನಡ ಕನ್ನಡ ಇಂಗ್ಲೀಷ್ ನಿಘಂಟು

ಕನ್ನಡ ರತ್ನಕೋಶ

ಕನ್ನಡ ಕನ್ನಡ ಕೋಶ

ಕನ್ನಡ ನಿಘಂಟುಗಳು- ಎಂಟು ಸಂಪುಟಗಳು

ಸಂಕ್ಷಿಪ್ತ ಕನ್ನಡ ನಿಘಂಟು

ಸಿರಗನ್ನಡ ಅರ್ಥಕೋಶ

Dravidian etymological dectionary

ಶಾಸನ ಸಂಪುಟಗಳು

ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ

Epigraphia India ಎಲ್ಲ ಸಂಪುಟಗಳು

Epigraphia carnatic ಎಲ್ಲ ಸಂಪುಟಗಳು

Indian antiquari, Vol xix

South Indian inscriptions, Ix, part 11

ಪತ್ರಿಕೆಗಳು

ಇತಿಹಾಸ ದರ್ಶನ–ವಾರ್ಷಿಕ

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಬೆಂಗಳೂರು

ಕರ್ನಾಟಕ ಭಾರತಿ, ಕನ್ನಡ ತ್ರೈಮಾಸಿಕ, ಧಾರವಾಡ

ಕಲಾದರ್ಶನ, ಮಾಸಿಕ ಮಂಗಳೂರು

ಕಲಾಗಂಗ (ಗುಲ್ಬರ್ಗ)

ಜಾನಪದ ಜಗತ್ತು

ಜೀವನ

ನಮ್ಮ ಕನ್ನಡ (ಹಂಪಿ)

ಪ್ರಭಾತ

ಬಸವಪಥ

ಮಾನವಿಕ ಕರ್ನಾಟಕ, ಕನ್ನಡ ಮಾಸಿಕ, ಧಾರವಾಡ

ರುಜುವಾತು ಮಾಸಿಕ

ಶೂದ್ರ ಮಾಸಿಕ, ಬೆಂಗಳೂರು

ಸತ್ಯಶುದ್ದ ಕಾಯಕ

ಸಾಧನೆ, ಕನ್ನಡ ತ್ರೈಮಾಸಿಕ, ಬೆಂಗಳೂರು

ಸಹಾಯಕ ಗ್ರಂಥ ಹಾಗೂ ಲೇಖನಗಳು

೧. ಸ್ಥಳನಾಮ ವ್ಯಾಸಾಂಗ– ದೇಜಗೌ ೧೯೯೦

೨. ಮಹಾಭಾರತ– ಆದಿಪರ್ವ

೩. ಅಮರಕೋಶ– ಎನ್. ಬಾಲಸುಬ್ರಹ್ಮಣ್ಯ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೧

೪. ಬಳ್ಳಾರಿ ಜಿಲ್ಲೆಯ ಕನ್ನಡ–ಕೆ.ಎಂ.ವೀರಭದ್ರಶರ್ಮ ಕರ್ನಾಟಕ ಭಾರತಿ

೫. ಬಳರಿ (ಬಳಾರಿ) ಉಗ್ರ ಹೆಣ್ಣು ದೇವತೆ– ಎಸ್.ಎಸ್.. ಹಿರೇಮಠ "ಸಾಧನೆ" ಬೆಂಗಳೂರು ವಿಶ್ವವಿದ್ಯಾಲಯ , ಬೆಂಗಳೂರು ಸಂಪುಟ ೭ ಸಂಚಿಕೆ ೨ ೧೯೭೮

೬. ಬಳ್ಳಾರಿ ಜಿಲ್ಲಾ ಸಾಂಸ್ಕೃತಿಕ ದರ್ಶನ– ಕುಂಬಾಸಿ ಮಾಲತೇಶ ಪ್ರಕಾಶನ–ಕುಂಚೂರು, ತ: ಹರಪನಹಳ್ಳಿ ೧೯೯೦

೭. ಅವಲೋಕನ– ಸಂ ಎಚ್‌ಎಸ್‌ಕೆ–ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ೧೯೮೫

ಪ್ರಶ್ನಾವಳಿ

ಮಾಹಿತಿದಾರರ ವಿವರ :

೧. ಹೆಸರು

೨. ವಯಸ್ಸು

೩. ಕೆಲಸ

೪. ಸಧ್ಯ ವಾಸವಿರುವ ಸ್ಥಳ

೫. ಹುಟ್ಟೂರು

೬. ಹುಟ್ಟೂರಿನಲ್ಲಿ ಕಳೆದ ಅವಧಿ

೭. ಸಂಪರ್ಕ ವಿಳಾಸ

ಊರಿನ ಮಾಹಿತಿ :

೧. ಊರಿನ ಹೆಸರು

೨. ತಾಲ್ಲೂಕು/ಜಿಲ್ಲೆಯ ಹೆಸರು

೩. ಊರಿನ ಅಧಿಕೃತ ಹೆಸರು

೪. ಇತರ ರೂಪಗಳು

೫. ಹ್ರಸ್ವ ರೂಪಗಳು(ಇದ್ದರೆ)

೬. ಹಳೆಯ ಹೆಸರುಗಳು

೭. ಗ್ರಾಮ ದೇವತೆ

೮. ಪ್ರಾಕೃತಿಕ ಪರಿಸರ

೯. ಊರಿನ ಮುಖ್ಯ ಹಬ್ಬಗಳು

೧೦. ಊರಿಗೆ ಆಹೆಸರು ಬಂದಿದ್ದಕ್ಕೆ ಇರುವ ಕಥೆ

೧೧. ಊರಿನ ಇತಿಹಾಸ

೧೨. ಊರಿನ ಹೆಸರಿನೊಡನೆ ಬೆರೆತ ಗಾದೆ, ನುಡಿಗಟ್ಟುಗಳು, ಒಗಟು, ಒಡಪು, ಇತ್ಯಾದಿ

ಸೂಚನೆಗಳು:

೧. ಅಧಿಕೃತ ರೂಪ ಎಂದರೆ ಕಛೇರಿ, ಶಾಲೆ, ಬ್ಯಾಂಕ್‌ಗಳಲ್ಲಿ ಬಳಕೆಯಾಗುವ ರೂಪ

೨. ಇತರ ರೂಪಗಳು: ಉಚ್ಚಾರಣೆಯಲ್ಲಿರುವ ಇತರ ರೂಪಗಳು ಉದಾ: ದಾವಣಗೆರೆ,ಡಾವಣಗೆರೆ ಮತ್ತು ದಾವಣಗೇರಿ, ಗುಲ್ಬರ್ಗ, ಕಲ್ಬುರ್ಗಿ, ಕಲಬುರ್ಗಿ

೩. ಹಳೆಯ ಹೆಸರು: ಶಾಂತಿನಗರ ಎಂದು ಈಗ ಹೆಸರಿರುವ ಊರಿನ ಹಳೆಯ ಹೆಸರು ಸೂಳೆಕೆರೆ. ನ್ಯಾಮತಿಯ ಹಳೆಯ ಹೆಸರು ನೆಲವತ್ತಿ

೪. ಪ್ರಾಕೃತಿಕ ಪರಿಸರ: ಊರಿನ ಸುತ್ತ ಇರುವ ನದಿ, ಕೆರೆ, ದೇವಸ್ಥಾನ, ಕೋಟೆ, ಕಣಿವೆ, ಮುಖ್ಯ ಬೆಳೆ ಇವುಗಳ ವಿವರ.

೫. ನಿಮ್ಮ ಊರು ಯಾವುದಕ್ಕೆ ಪ್ರಸಿದ್ಧಿಯಾಗಿದೆ.

೬. ನಿಮ್ಮ ಊರಿನಲ್ಲಿ ವಿಶಿಷ್ಟ ಮಹತ್ವ ಪಡೆದ ಕೋಟೆ, ಕಛೇರಿ, ಆಸ್ಪತ್ರೆ, ನ್ಯಾಯಾಲಯ ಅಥವಾ ಇನ್ನಾವುದೇ ಸಂಸ್ಥೆಗಳಿದ್ದಲ್ಲಿ ವಿವರ.